ಹಣ ಪ್ರಪಂಚ

ಪ್ರೊ. ಸಾ.ಕೃ. ರಾಮಚಂದ್ರರಾವ್

ಹಣಪ್ರಪಂಚ

ಪ್ರೊ. ಸಾ. ಕೃ. ರಾಮಚಂದ್ರರಾವ್

ವಸಂತ ಪ್ರಕಾಶನ
ನಂ. 10, ತುಳಸಿವನಂ, ಬೆಂಗಳೂರು–560 053

HANAPRAPANCHA : A Collection of 185 Essays by Prof. S. K. Ramachandra Rao, Published by Vasantha Prakashana, No. 10, Tulasivanam, Bangalore–560 053

© Author

ಮೊದಲ ಮುದ್ರಣ : 2004

Pages : viii + 256

ಬೆಲೆ : ರೂ. 150/–

Price Rs. 150/–

ಮುಖಪುಟ ವಿನ್ಯಾಸ : ವಿ. ಟಿ. ಸುರೇಶ್

ಮುದ್ರಣ :
ನೇತ್ರಾ ಪ್ರಿಂಟರ್ಸ್
ಬೆಂಗಳೂರು–560 018

ಮೊದಲ ಮಾತು

ಹಣದ್ದೇ ಒಂದು ಪ್ರಪಂಚ. ಪ್ರಪಂಚವೆನ್ನುವ ಮಾತಿನ ಮೂಲಾರ್ಥ ಚೆನ್ನಾಗಿ ಹರಡಿಕೊಳ್ಳುವುದು ಎಂದು. ಒಂದು ಹತ್ತಾಗುವುದು, ಹತ್ತು ಹಲವಾಗುವುದು, ಸುತ್ತಮುತ್ತ ಎಲ್ಲೆಲ್ಲೂ ಎಡೆಬಿಡದೆ ಹರಡಿಕೊಳ್ಳುವುದು, ಬಗೆಬಗೆಯಾಗಿ ತೋರಿಕೊಳ್ಳುವುದು, ಎಲ್ಲವನ್ನೂ ಎಲ್ಲರನ್ನೂ ವಶಮಾಡಿಕೊಳ್ಳುವುದು, ಬೆಳೆಯುತ್ತಲೇ ಹೋಗುವುದು. ಇದು ಹಣದ ಲಕ್ಷಣವೇ ತಾನೆ? ಹಣಕ್ಕೆ ಎಲ್ಲರೂ ದಾಸರು, ಹಣ ಯಾರಿಗೂ ದಾಸನಲ್ಲ. ಹಣದ ಕಲ್ಪನೆಯನ್ನು ಮೂಡಿಸಿಕೊಂಡವನು ಮನುಷ್ಯನೇ; ಮೂಡಿಸಿಕೊಂಡಮೇಲೆ ತನ್ನ ಊಳಿಗಕ್ಕೆ ಹಣವಲ್ಲ, ಹಣದ ಗಳಿಕೆಗೆ ತಾನು ಎಂದಾಗಿಬಿಟ್ಟಿತು. ಹಳೆಯ ಕತೆಯಲ್ಲಿನ ಭೂತ ತನ್ನ ಒಡೆಯನನ್ನೇ ದುಡಿಸಿಕೊಂಡ ಹಾಗೆ. ಮನುಷ್ಯನ ಕಾರುಬಾರಿನಲ್ಲಿ ಹಣಕ್ಕೆ ಎಲ್ಲಿಲ್ಲದ ಆದರ, ಯಾರೂ ಕಾಣದ ಆಕರ್ಷಣೆ. ಮನುಷ್ಯನು ತನಗಾಗಿ ಹಣ ಎಂಬುದನ್ನು ಮರೆತು ಹಣಕ್ಕಾಗಿ ತಾನು ಎಂದು ಹೆಣಗಾಡತೊಡಗಿದಮೇಲೆ ಹಣದ ಪ್ರಪಂಚ ಬೇರೂರಿತು, ಗರಿಕೆದರಿತು, ಬಾನಡರಿತು.

ಮನುಷ್ಯನ ಕಿಸೆಯಲ್ಲೋ ಕೈಯಲ್ಲೋ ಇರಬೇಕಾದ ಹಣ ಅವನ ಎದೆಯಲ್ಲೋ ತಲೆಯಲ್ಲೋ ತುಂಬಿಕೊಂಡು, ಊರುಗೋಲಾಗಿರಬೇಕಾದುದು ಒರೆಗಲ್ಲಾಯಿತು. ದಿಟವಾಗಿ ಜಡವಾದುದಕ್ಕೆ ಮನುಷ್ಯನ ಗೀಳಿನಿಂದಾಗಿ ಜೀವ ಬಂದಿತು, ತಾನೇ ಬೆಳೆಯತೊಡಗಿತು, ಬಾಳನ್ನೇ ಆಳತೊಡಗಿತು. ಬದುಕಿನ ಒಂದು ವಿವರವಾಗಿದ್ದುದು ಇಡೀ ಬದುಕನ್ನೇ ಆವರಿಸಿಕೊಂಡು ನಿಂತಿತು. ಅದೊಂದು ಮಾಯೆ. ಮಾಯೆಗೊಂದು ವಿಚಿತ್ರ ಶಕ್ತಿಯಿದೆ. ಇದರಲ್ಲಿ ಆವರಣ, ವಿಕ್ಷೇಪ ಎಂದೆರಡು ಬಗೆ. ಬದುಕಿನ ಇತರ ಸಹಜ ಮೌಲ್ಯಗಳನ್ನೆಲ್ಲ ಮರೆಮಾಚಿ ಹೊರದೂಡುವುದು ಆವರಣ; ಸಲ್ಲದ ಮೌಲ್ಯಗಳನ್ನು ಮೇಲೆತ್ತಿ ಕಣ್ಣು ಕುಕ್ಕುವಂತೆ ಮುಂದಿರಿಸುವುದು ವಿಕ್ಷೇಪ. ಹಣಕ್ಕೆ ಇವೆರಡೂ ಶಕ್ತಿಗಳಿವೆ.

ಹಣ ಇದ್ದವರ ಎಣಿಕೆ ಒಂದು ತೆರನಾದರೆ ಹಣ ಇಲ್ಲದವರ ಎಣಿಕೆ ಇನ್ನೊಂದು ತೆರ. ಇಬ್ಬರಿಗೂ ಹಣದ ಹಂಬಲವೇನೋ ಸಮನಾದುದೇ. ಇಲ್ಲದಿದ್ದವರಿಗೆ ಅದು ಬಂದೊದಗಬೇಕು; ಇದ್ದವರಿಗೆ ಅದು ಬೆಳೆಯಬೇಕು. ಬಂದೊದಗುವುದು ಕಷ್ಟ, ಬೆಳೆಯುವುದು ಸುಲಭ ಎಂದೂ ಇದೆ. ಹಣ ಇದ್ದಲ್ಲಿ ಹಣ ಸೇರುತ್ತದೆ ಎಂದು ವಿವರಣೆ. ಅದು ಹೇಗಾದರೂ ಇರಲಿ, ಹಣದ ಗುಣ, ಅವಗುಣ, ಅದರಿಂದೊದಗುವ

ಮಾನವ ಗುಣ, ಅವಗುಣ ಇವನ್ನು ಕುರಿತು ವಿಚಾರಮಾಡುವ ಅಗತ್ಯವಿದೆ. ಹುರುಳಿಲ್ಲದಿದ್ದರೆ ಹಂಬಲವೇಕಿರುತ್ತದೆ? ಹುರುಳಿದ್ದೆಡೆ ಹುಳು ಹಿಡಿಯುವುದಿಲ್ಲವೆ?

ಇದು ಈಗಿನ ಕತೆಯಲ್ಲ; ಎಷ್ಟೋ ಹಿಂದಿನಿಂದ ಬಂದಿರುವ ಕತೆ. ಹಣದ ಅಬ್ಬರ-ಉಬ್ಬರಗಳನ್ನು ಕುರಿತು, ಕಾಟ-ಕೆಡುಕುಗಳನ್ನು ಕುರಿತು ಪುರಾತನರ ಅನಿಸಿಕೆಗಳು ಅನೇಕ ಇವೆ. ಹಣವನ್ನು ನಿಂದಿಸಿರುವವರು ಕೂಡ ಅದರ ಆಕರ್ಷಣೆಯನ್ನು ಅಲ್ಲಗಳೆಯಲಾಗಲಿಲ್ಲ. ಅದರ ನೆರಳಿನಲ್ಲೇ ಕುಳಿತು ಅದನ್ನೇ ಹೀಗಳೆಯುವುದು ಏನು ಚೆನ್ನು? ಹಣ ಕೆಡಿಸುತ್ತದೆ ದಿಟ, ಆದರೆ ಹಣವಿಲ್ಲದೆ ಬದುಕಬಲ್ಲವರು ಯಾರು? ಯಾರೆಷ್ಟು ನಿಂದಿಸಿದರೂ ಅದರ ಅಗತ್ಯ ಬೆಳೆಯುತ್ತಲೇ ಹೋಯಿತು, ಅದರ ಮುಖಗಳು ಹೆಚ್ಚುತ್ತಲೇ ಹೋದುವು. ಆ ಕಾಲಕ್ಕಿಂತ ಈ ಕಾಲದಲ್ಲಿ ಅದರ ದೊರೆತನ ಎಣೆಯಿಲ್ಲದಂತೆ ಮೆರೆಯುತ್ತಲಿದೆ. ಹಣವನ್ನು ಬಯಸುವವರು ಯಾವ ಹಣ, ಎಂಥ ಹಣ, ಏತರ ಹಣ, ಎಷ್ಟು ಹಣ, ಏಕೆ ಬೇಕು, ಹೇಗೆ ಬರಬೇಕು ಎಂದೆಲ್ಲ ಯೋಚನೆ ಮಾಡುವುದಿಲ್ಲ; ಬಹುಮಂದಿಗೆ ಯೋಚನೆ ಮಾಡುವ ಶಕ್ತಿಯೂ ಇರದೆನ್ನಿ. ಶಕ್ತಿಯಿದ್ದರೂ ಅವಕಾಶವಿರುವುದಿಲ್ಲ, ಅವಕಾಶವಿದ್ದರೂ ಉತ್ಸಾಹವಿರಲಾರದು. ಕೆದಕಿ ನೋಡಿದರೆ ಪೆಡಂಭೂತ ಅಬ್ಬರಿಸುತ್ತ ಹೊರಬಂದರೆ ಮಾಡುವುದೇನು? ಮಲಗಿರುವ ನಾಯಿ ಮಲಗಿಯೇ ಇದ್ದರೆ ಲೇಸಲ್ಲವೆ? ಅದೇನು ಕಚ್ಚುವ ನಾಯಿಯೋ ಬೊಗಳುವ ನಾಯಿಯೋ ಹಸಿದ ನಾಯಿಯೋ ಹುಚ್ಚು ನಾಯಿಯೋ ಯಾರು ಬಲ್ಲರು?

ಈ ಪುಸ್ತಕದೊಳಗೆ ಹಣದ ಹತ್ತು ಹಲವು ಮುಖಗಳನ್ನು ಎತ್ತಿ ತೋರಿಸುವ ಹವಣಿಕೆ ಹುದುಗಿದೆ. ಬಹು ವರ್ಷಗಳ ಹಿಂದೆ 'ಪ್ರಜಾವಾಣಿ' ಪತ್ರಿಕೆಯ ಪುರವಣಿಯಲ್ಲಿ ಅಂಕಣ ಚೌಕಟ್ಟಿನಲ್ಲಿ ಬರೆದ ತುಣುಕುಗಳು ಇವು. ಪ್ರಕಾಶಕರೊಬ್ಬರು ಸಂಗ್ರಹಿಸಿಕೊಂಡಿದ್ದಷ್ಟನ್ನು ಮಾನ್ಯರಾದ ಶ್ರೀ ಶ್ರೀನಿವಾಸನ್ ಹಾಗೂ ಅವರ ಸುಪುತ್ರ ಶ್ರೀ ಮುರಳೀ ಅವರು ನನ್ನಲ್ಲಿ ವಿಶ್ವಾಸವಿಟ್ಟು ಹೀಗೆ ಸಂಕಲಿಸಿ ಪ್ರಕಟಿಸುತ್ತಿದ್ದಾರೆ. ಇವರಿಗೂ, ಇದರಲ್ಲಿ ನನಗೆ ನೆರವಾಗಿರುವ ಮಾನ್ಯಮಿತ್ರರಾದ ಶ್ರೀ ಎಂ. ವಿ. ವೆಂಕಟೇಶಮೂರ್ತಿಯವರಿಗೂ ನಾನು ಋಣಿಯಾಗಿದ್ದೇನೆ.

ಸಾ. ಕೃ. ರಾಮಚಂದ್ರರಾವ್

ಪ್ರಕಾಶಕರ ಮಾತು

ಕರ್ನಾಟಕದ ಖ್ಯಾತ ವಿದ್ವಾಂಸರೂ ಚಿಂತಕರೂ ಸಾಹಿತ್ಯ-ಸಂಗೀತ-ಶಿಲ್ಪ ಇತ್ಯಾದಿ ವಿವಿಧ ಕಲಾಪರಿಣತರೂ ಶ್ರೇಷ್ಠ ವಾಗ್ಮಿಗಳೂ ಆದ ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾವ್ ಅವರ 185 ಚಿಂತನಲೇಖನಗಳ ಸಂಕಲನ 'ಹಣಪ್ರಪಂಚ'ವನ್ನು ಪ್ರಕಟಿಸುವುದು ನಮಗೆ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಇಂಥ ಸದವಕಾಶವನ್ನು ದೊರಕಿಸಿಕೊಟ್ಟುದಕ್ಕಾಗಿ ಪ್ರೊ. ರಾವ್ ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಹಣದ ಸ್ವರೂಪ, ಗುಣಾವಗುಣ, ಮೌಲ್ಯ, ಮಹತ್ವ, ಮನುಷ್ಯನ ಬದುಕಿನಲ್ಲಿ ಅದರ ಪಾತ್ರ, ಮಾನವೀಯ ಮೌಲ್ಯ ಕುರಿತಂತೆ ಅದರ ಸಂಬಂಧ ಇತ್ಯಾದಿ ಹತ್ತು ಹಲವು ಮುಖಗಳನ್ನು ಎತ್ತಿ ಕಾಣಿಸುವುದರ ಮೂಲಕ ಹಣದ ವಿಶ್ವರೂಪದರ್ಶನವನ್ನೇ ಕಣ್ಣ ಮುಂದೆ ಕಾಣಿಸುವಂಥ ಅಪರೂಪದ ಇಂಥ ಮಹತ್ವಪೂರ್ಣ ಕೃತಿಯನ್ನು ಓದುಗರು ಆದರದಿಂದ ಸ್ವಾಗತಿಸುವರೆಂದು ನಂಬಿದ್ದೇವೆ.

ಈ ಲೇಖನಗಳನ್ನು ನಮಗೆ ದೊರಕಿಸಿಕೊಟ್ಟವರು ಶ್ರೀಮತಿ ತಾರಾ ನಾಗರಾಜರಾವ್ ಅವರು. ಅವರನ್ನು ಕೃತಜ್ಞತೆಯಿಂದ ಇಲ್ಲಿ ಸ್ಮರಿಸುತ್ತೇವೆ. ಇದರ ಪ್ರಕಟನೆಯಲ್ಲಿ ನಮಗೆ ನೆರವಾಗಿ ನಿಂತು, ಕೃತಿಯ ಕರಡನ್ನು ತಿದ್ದಿಕೊಟ್ಟು ಉಪಕರಿಸಿದ ಶ್ರೀ ಎಂ. ವಿ. ವೆಂಕಟೇಶಮೂರ್ತಿ ಅವರಿಗೆ ನಾವು ಆಭಾರಿಯಾಗಿದ್ದೇವೆ. ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿರುವ ನೇತ್ರಾ ಪ್ರಿಂಟರ್ಸ್‌ನ ಮಿತ್ರರಿಗೆ, ಆಕರ್ಷಕ ಮುಖಪುಟ ವಿನ್ಯಾಸವನ್ನು ರಚಿಸಿಕೊಟ್ಟ ಕಲಾವಿದ ಶ್ರೀ ವಿ. ಟಿ. ಸುರೇಶ್‌ರಿಗೆ ನಮ್ಮ ವಂದನೆಗಳು.

ಕೆ. ವಿ. ಶ್ರೀನಿವಾಸನ್
ಕೆ. ಎಸ್. ಮುರಳಿ
ವಸಂತ ಪ್ರಕಾಶನ, ಬೆಂಗಳೂರು-53

ಪರಿವಿಡಿ

1. ವಾಣಿಜ್ಯ–ಹಣ
2. ಹಣದ ಬಯಕೆ
3. ಹಣದ ನೆಲೆ
4. ಧನಪಿಶಾಚಿ
5. ಹಣದಿಂದ ಹಣ
6. ಸಿರಿ ಬರಲು
7. ಹಣ – ಉಳಿವು, ಅಳಿವು
8. ಮೂರು ದಾರಿ
9. ಸುತ್ತಿಗೆಯ ಸಮಾಚಾರ
10. ಲಂಚ–ಪ್ರಪಂಚ
11. ಅರ್ಥ–ಅನರ್ಥ
12. ಸಾಲ–ಸೋಲ
13. ಅನ್ಯಾಯದ ಹಣ
14. ಹೋಳಿಗೆ–ಹೆಗ್ಗಣ
15. ಯೋಗ್ಯರು–ಅಯೋಗ್ಯರು
16. ಸಂಪಾದನೆ–ಶೋಷಣೆ
17. ಸಾಲ–ಕೋಳ
18. ಅಂತೆಗೆ ತಕ್ಕ ಬೊಂತೆ
19. ಸಾಧನೆ–ಸಿದ್ಧಿ
20. ಕೃಷಿಗೆ ಪೇಟೆಂಟ್
21. ಆರ್ಥಿಕ ಶೋಷಣೆ
22. ಹಣ–ಗುರಿ–ದಾರಿ
23. ಕೊಳಗದ ವಿಚಾರ
24. ಸರ್ವಜ್ಞನ ಕಿವಿಮಾತು
25. ಸಾಲದ ಸಂಸ್ಕೃತಿ
26. ಉದ್ಯಮದ ನೀತಿ
27. ಪರದೇಶಿಯಾದ ಸ್ವದೇಶಿ
28. ಸುಂಕ–ಬಿಂಕ
29. ಹಣದ ದಾರಿ
30. ಆರ್ಥಿಕ ಆಕ್ರಮಣ
31. ಲಾಭ–ನಷ್ಟ
32. ನ್ಯಾಯಾನ್ಯಾಯ
33. ಬಡವ ಮಡಗಿದಂತೆ
34. ವ್ಯಾಪಾರ–ನೀತಿಸಂಹಿತೆ
35. ಬದುಕು–ಅರ್ಥ
36. ಕುರುಡು ಕಾಂಚಾಣ
37. ಹಣ – ಐಶ್ವರ್ಯ
38. ಹಣದಾಸೆಯ ಅಪಾಯ
39. ಹಣದ ಹಿಡಿತ
40. ನೀತಿಯ ಅತಂತ್ರ
41. ಸಂಪತ್ತು–ಸೆಗಣಿ
42. ದುಡ್ಡು ಮತ್ತು ಮಾರ್ಕ್ಸ
43. ಕೆರೆ–ಕೋಡಿ
44. ರತ್ನ–ಕಲ್ಲು
45. ಕಮ್ಮಾರನ ತಿದಿ
46. ದಾನಿ–ದೀನ
47. ದುರಾಸೆಯ ಫಲ
48. ಕೆರದ ಅಳತೆಗೆ ಕಾಲು
49. ಗ್ರಾಮರಾಜ್ಯ
50. ಕಾಡು–ನೀರು–ಬದುಕು
51. ದುಡ್ಡಿಲ್ಲದೆ ಅಡ್ಡಬಿದ್ದರೆ?
52. ಪ್ರಗತಿ–ವಿಕೃತಿ
53. ಅಂತರಾಳದ ಅಳಲು
54. ಹಣಕ್ಕೆ ದಾಸರು
55. ಅಂತರದ ಆತಂಕ
56. ಅರಿವಿಲ್ಲದ ಔದಾರ್ಯ
57. ಅರ್ಥ–ಕಾಮ
58. ಭ್ರಷ್ಟಾಚಾರ
59. ಧನಮದ
60. ಕಾಗೆ–ಕೋಗಿಲೆ

61. ಸ್ವಾಭಿಮಾನದ ಹಣ
62. ಸುಖೀರಾಜ್ಯದಲ್ಲಿ ಹಣ
63. ಬಡತನದ ನೆಲೆಯೇನು?
64. ನಗದು ಹಣ-ಅದ್ಭುತದೀಪ
65. ಗುರಿಗೊಂದು ಅಂಬು
66. ಸಂಪನ್ಮೂಲ
67. ಪ್ರಗತಿ
68. ಹಣದ ಸಂಸ್ಕೃತಿ
69. ಉದ್ಯಮ-ಉಪದ್ರವ
70. ಸೂಪರ್ ಮಾರ್ಕೆಟ್
71. ಉಪ್ಪು ಹಗರಣ-ಹಣ
72. ತೆರೆದ ಬಾಗಿಲು
73. ಬೆಳೆದ ಬಂಗಾರ
74. ಹಣ-ಹೊಟ್ಟೆ
75. ದೇಶೀಯ ಆರ್ಥಿಕ ವ್ಯವಸ್ಥೆ
76. ಹೊಟ್ಟೆಬಾಕರು
77. ಹರಿಯುವ ಹಣ
78. ಮಾರುಕಟ್ಟೆಯ ಏರ್ಪಾಟು
79. ಬಯಕೆ-ಪೂರೈಕೆ
80. ತನಗೇ ಬುದ್ಧಿಯಿರದಿದ್ದರೆ?
81. ಹಣ ಹಿಂದೆ, ಬಯಕೆ ಮುಂದೆ
82. ಹಣದ ಹತ್ತು ಹಾದಿ
83. ನೀತಿಯ ನೆಲೆ
84. ಕುಬೇರನ ರಾಜ್ಯದಲ್ಲಿ ಭಿಕಾರಿ
85. ಗಳಿಗೆಯಲ್ಲಿ ಸಂಪತ್ತು
86. ಮುಂದಿನ ಪಾಡೇನು?
87. ಊರೇ ಕೆಟ್ಟು ಹೋದರೆ...
88. ತೂಕಡಿಸುವವರು
89. ಉದ್ಯಮದಲ್ಲಿ ಆಚಾರ
90. ಧನಬಲ
91. ದುಡ್ಡಿದೆ, ನೀತಿಯಿದೆಯೆ?
92. ದಾರಿಯೋ, ಗುರಿಯೋ?
93. ಸುಖವೋ ಕಷ್ಟವೋ?
94. ಹಣದಿಂದ ಸೊಕ್ಕಿದವರು
95. ಸೊಡರಿನ ಸಡಗರ
96. ಸಿದ್ಧಸಾಮಗ್ರಿಯ ಯುಗ
97. ಬೇಲಿಯ ಕೆಲಸ
98. ಹಣ-ತೃಪ್ತಿಗಳ ಹಗರಣ
99. ಹಣದ ಹಸಿವು
100. ಭಂಡಾರದ ಲೂಟಿ
101. ದಾನಿ-ಲೋಭಿ
102. ಸ್ವಾವಲಂಬನೆಯ ಅಗತ್ಯ
103. ನಂಬಿ ಕೆಡುವುದು
104. ಸಿರಿಯ ಅಲಂಕಾರ
105. ಧರ್ಮಕ್ಕೆ ದಾನ
106. ಬಯಕೆ-ಬಡತನ
107. ದಡ್ಡರ ದುಡ್ಡು
108. ಆಯುಧವೋ ಆಭರಣವೋ?
109. ಕಾಸು-ಮನಸ್ಸು
110. ಹಣ-ಸುಖ
111. ಹಣವಿದ್ದರೇನು?
112. ದಾನದಲ್ಲಿ ವಿವೇಕ
113. ಶೋಷಣೆಯ ಮೂಲ
114. ಪ್ರಭಾವಶಾಲಿ ಉದ್ಯಮ
115. ಸಂಬಳ ಏರಿತು!
116. ಅನ್ಯಾಯಕ್ಕೆ ಅಸಹಕಾರ
117. ಸಾರ್ವಜನಿಕ ಸೊತ್ತು
118. ಕನಸಿನ ಹೊನ್ನು
119. ದೇವರು ಕೊಡುವ ವರ
120. ಹಣದ ಆಳ್ವಿಕೆ
121. ಹಣ-ಶೋಷಣೆ
122. ಬಡತನಕ್ಕೆ ಮದ್ದು
123. ಅರ್ಥದ ಸಾರ್ಥಕತೆ
124. ಮೋಜಿನ ತೊಡರು

125. ಹಣದಾಸೆ-ಪರಿಸರ
126. ತಾನು, ತನ್ನದು
127. ಸಿರಿಯ ಸುರೆ
128. 'ಸಿಕ್ಕಿದರೆ ಸೀರುಂಡೆ'
129. ಯಾರ ಅವಲಂಬನೆ?
130. ದಾನದಿಂದ ಲಾಭ
131. ಆಡಳಿತದ ಆತಂಕಗಳು
132. ಹಣದ ಹಂಬಲ
133. ಉದ್ಯಮ-ಉದ್ಯೋಗ
134. ಧನರೇಖೆ
135. ಆಹಾರ ನಗದು
136. ಮನಸ್ಸಿನ ಗೆಲುವು
137. ನವಿಲು-ಕೆಂಬೂತ
138. ಮದ್ದಳೆಯ ಸಾಮತಿ
139. ಸಾಮಾಜಿಕ ವ್ಯಾಪಾರ
140. ದುಡ್ಡಿಗೆ ಬಾಯೊಡ್ಡುವುದು
141. ಪರದೇಶಿಗಳು
142. ದುಡಿಮೆ-ದುಡ್ಡು
143. ಸರ್ಕಾರದ ಹಣ
144. ಕಾಂಚನದಾಸೆ
145. ಹೆಂಡದ ಮಡಕೆ
146. ಪ್ರವಾಸಿಗಳ ಪಾಡು
147. ಕಳ್ಳ-ಠಕ್ಕ
148. ಧನ-ದಯೆ
149. ಉಪ್ಪು-ಹಣ
150. ಸುಖವೆಂದರೆ ಏನು?
151. ಪರಾವಲಂಬನೆ
152. ಕಿವುಡು-ಮರುಳು
153. ನಿಂತ ನೀರು
154. ಉದ್ಯಮ-ಲಾಭ
155. ವಿದ್ಯೆಯೋ ವಾಣಿಜ್ಯವೋ?
156. ಅರ್ಥದ ಅನರ್ಥ
157. ಹಣವಿಲ್ಲದೆ ಅರ್ಥರೋಗ
158. ಅಪಮೌಲ್ಯ
159. ಹಣದ ಶಕ್ತಿ
160. ವಿತ್ತಕ್ಲೇಶ
161. ದುಡ್ಡು-ದುಡಿಮೆ
162. ಹಣದ ಅಂಟು
163. ಹಣದ ಗುಣ
164. ಸಾಲದ ಸಮೃದ್ಧಿ
165. ಹಾಳಾಗುವ ಹಣ
166. ಧನ-ಸರ್ವಸಮಾನ
167. ಹಣದ ಹಣೆಯಬರಹ
168. ಧನಸಂಹಿತೆ
169. ಹಣದಾಸೆಯ ನಾಯಕರು
170. ಹಣದ ಸ್ವಭಾವ
171. ಚರ-ಸ್ಥಿರ
172. ಸಂಪತ್ತು-ವಿಪತ್ತು
173. ಸ್ವಾರ್ಥಚಕ್ರ
174. ಮಿತಿಯ ಅಗತ್ಯ
175. ಜೀವವಿರುವ ಹಣ
176. ಹಣದ ಹಸಿವೆ
177. ಕುಬೇರನಿಗೆ ವಿವೇಕವಿದೆಯೆ?
178. ಸ್ವದೇಶಿ
179. ಉದ್ಯಮದ ಆದ್ಯತೆ
180. ರೊಕ್ಕದ ಮಹಿಮೆ
181. ದುಡ್ಡಿನ ಜಾತಿ
182. ಗಳಿಕೆಯ ಗೀಳು
183. ದಾತ-ಅನುಮಂತ
184. ಆಕ್ರಮಣ ಮನೋಭಾವ
185. ಆರ್ಥಿಕ ದುರಾಚಾರ

1. ವಾಣಿಜ್ಯ – ಹಣ

ವಾಣಿಜ್ಯವೆಂಬ ಮಾತಿಗೆ ವಣಿಗ್ ಜನರ ವೃತ್ತಿ, ವ್ಯವಹಾರ ಎಂದರ್ಥ.

ವಣಿಗ್ ಜನರೆಂದರೆ ವರ್ತಕರು, ವ್ಯಾಪಾರಿಗಳು. ವಣಿಜರೇ ವಣಿಯರಾಗಿ ಮುಂದೆ ಬನಿಯರೆಂದಾದರು.

ಇವರನ್ನು ಪಣ್ಯಾಜವಕರೆಂದೂ ಕರೆಯುವುದುಂಟು. ಪಣ್ಯವೇ ಬದುಕುವ ದಾರಿಯಾಗಿ ಉಳ್ಳವರೆಂದರ್ಥ.

ಪಣ್ಯವೆಂಬ ಮಾತಿನ ಮೂಲ ಪಣ. ಮೂಲಾರ್ಥದಲ್ಲಿ ಪಣವೆಂದರೆ ವ್ಯವಹಾರ (ಪಣ ವ್ಯವಹಾರೇ). ವ್ಯವಹಾರವೆಂದರೆ ಕೊಳ್ಳುವುದು, ಕೊಡುವುದು, ಮಾರಾಟ. ಇದರ ಮುಖ್ಯಸಾಧನ ಹಣವಾದುದರಿಂದ ಪಣ್ಯವೆಂದರೆ ಹಣದ ಗಳಿಕೆ, ಉಳಿಕೆ ಮೊದಲಾದುವು.

ವಣಿಗ್ ಜನರ ವ್ಯವಹಾರವೆಲ್ಲ ಹಣದ ಸುತ್ತಮುತ್ತಲೇ. ಹಣವನ್ನು ಗಳಿಸುವ ಕೂಡಿಡುವ, ಬೆಳೆಯಿಸುವ ಬಗೆಗಳನ್ನೆಲ್ಲ ಬಲ್ಲವರು ಅವರು.

ಈ ವ್ಯವಹಾರವೇ ಒಂದು ಶಾಸ್ತ್ರ; ಅವರದ್ದೇ ಒಂದು ಪ್ರಪಂಚ.

ಅರ್ಥಶಾಸ್ತ್ರವಷ್ಟೇ ಅದರ ಚೌಕಟ್ಟು ಎನ್ನುವಂತಿಲ್ಲ. ಹಣದ ಹರವನ್ನೂ ಒಳಗೊಂಡಂತೆ ಬದುಕಿನ ಎಲ್ಲ ಮುಖಗಳನ್ನೂ ಇದು ವ್ಯಾಪಿಸಿದೆ. ಬರುಬರುತ್ತ ಇದರ ಪ್ರಭಾವ ಹೆಚ್ಚುತ್ತಲೂ ಇದೆ.

ಜಟಾಧರ ನಿಘಂಟುವಿನಲ್ಲಿ ವಾಣಿಜ್ಯವೆಂಬ ಮಾತಿಗೆ 'ಸತ್ಯಾನೃತಂ' ಎಂಬ ಪರ್ಯಾಯ ಪದವನ್ನು ಕಾಣಿಸಿದೆ. ದಿಟವೂ ಸಟೆಯೂ ಕೂಡಿಕೊಂಡದ್ದು ಎಂದು ಇದರ ಅರ್ಥ.

ವಾಣಿಜ್ಯ ಪ್ರಪಂಚದಲ್ಲಿ ನೀತಿ ಸಂಹಿತೆಯೊಂದು ಇರಬೇಕೆಂದು ಬಹುಕಾಲದಿಂದ ಆಗ್ರಹವಿದೆ; ವಣಿಗ್ ಜನರದ್ದಲ್ಲ, ಇತರರದ್ದು!

ಜನರ ಕಣ್ಣಿಗೆ ತಟ್ಟನೆ, ಸ್ಪಷ್ಟವಾಗಿ ತೋರಿಕೊಳ್ಳುವುದು ಅವರ 'ಅನೃತವೇ'.

ಅಗ್ಗದಲ್ಲಿ ಕೊಂಡು ದುಬಾರಿಯಾಗಿ ಮಾರುವುದು, ಅಳತೆಯಲ್ಲಿ ಉಳಿಸಿಕೊಳ್ಳುವುದು, ಮಾಲಿನಲ್ಲಿ ಮೋಸ ಮಾಡುವುದು, ತನ್ನಲ್ಲಿರುವುದನ್ನು ಕೇಳುವವರು ಮೈಮರೆಯುವಂತೆ ಹಾಡಿ ಹೊಗಳುವುದು ಇವನ್ನೆಲ್ಲ ಯಾರರಿಯರು?

ಹಣದ ಹಾವಳಿಯನ್ನಂತೂ ಕವಿಗಳು ಧಾರಾಳವಾಗಿ ಬಣ್ಣಿಸಿಬಿಟ್ಟಿದ್ದಾರೆ. ಹಣವನ್ನು ಕುರಿತಂತೆ ಬಳಕೆಯಲ್ಲಿರುವ ಗಾದೆಗಳಿಗೆ ಲೆಕ್ಕವಿದೆಯೇ? ಜಿಪುಣರನ್ನು, ಲೋಭಿಗಳನ್ನು, ಕುಟಿಲರನ್ನು ಲೋಕವೇ ಮೂದಲಿಸುತ್ತದೆ. ಹಣದ ಗೀಳಿರುವ ಬನಿಯನೆಂದರೆ ಅಪಹಾಸ್ಯಕ್ಕೆ ಕಾರಣನಾದವನೇ.

ಆದರೆ ಹಣವಿಲ್ಲದೆ ಬದುಕು ನಡೆದೀತೆ? ಹಣವೆಂದರೆ ಅವಗುಣಗಳೇ ಮೇಲೆದ್ದು ಕಾಣಿಸಿಕೊಳ್ಳಬೇಕೆ? ಇನ್ನೊಂದು ಮುಖವೇ ಅದಕ್ಕಿರದೆ?

ವಾಣಿಜ್ಯ ಪ್ರಪಂಚದಲ್ಲಿ ಅನೃತವಿರುವಂತೆ ಸತ್ಯವೂ ಇದೆಯೆಂದು ನಿಘಂಟುಕಾರನೇ ಹೇಳುತ್ತಾನಲ್ಲ? ಜಿಪುಣನಿಗೆ ಮಾತ್ರ ಹಣವೇ? ಉದಾರಿಗೆ ಬೇಡವೆ?

ಹೋಗಲಿ, ವಣಿಗ್ ಜನರನ್ನು ಬಿಡಲು ಸಾಧ್ಯವೋ? ನಮ್ಮ ಬದುಕಿನ ಅಗತ್ಯಗಳನ್ನು ತೀರಿಸುವವರು ಬಹುಮಟ್ಟಿಗೆ ಅವರೇ. ಅವರು ಮಾರುವ ವಸ್ತು ನಮಗೆ ಬೇಕು; ನಮ್ಮಲ್ಲಿರುವ ಹಣ ಅವರಿಗೆ ಬೇಕು. ಬೇಕಾದುದು ದೊರಕಿತೆಂದು ನಮ್ಮ ಸಂತೋಷ; ಹಣವನ್ನು ಗಿಟ್ಟಿಸಿಕೊಂಡೆವೆಂದು ಅವರ ಸಂತೋಷ!

ಇನ್ನು ತಕರಾರು ಎಲ್ಲಿಯದು? ಮಾರುವವರು ಬಯಸುವ, ಕೊಳ್ಳುವವರು ನೀಡುವ ಹಣದ ವಿನಿಯೋಗ ಇನ್ನೇನು?

2. ಹಣದ ಬಯಕೆ

ಕನ್ನಡದ ಹಣ ಸಂಸ್ಕೃತದ ಪಣದಿಂದಲೇ ಬಂದದ್ದು. ಪಣವೆಂದರೆ ಮಾರುವವರು ಬಯಸುವ, ಕೊಳ್ಳುವವರು ನೀಡುವ ಹಣ (ವಿಕ್ರೇಯದ್ರವ್ಯ).

ಒಂದು ಕಾಲಕ್ಕೆ ಹಣವೆಂಬುದೊಂದು ನಿರ್ದಿಷ್ಟ ನಾಣ್ಯವೂ ಆಗಿದ್ದಿತು (ನಾಲ್ಕಾಣೆ, ಎಂಟುಕಾಸು), ದುಡ್ಡಿನಂತೆ. ಆದರೆ ಬರುಬರುತ್ತ ವಾಡಿಕೆಯಲ್ಲಿ ಧನವೆಂದಷ್ಟೆ ಅರ್ಥ ಉಳಿಯಿತು, ದುಡ್ಡು ಎಂಬಂತೆಯೇ. ಹಣವಂತ, ದುಡ್ಡಿದ್ದವರು ಎಂದರೆ ಧನಿಕನಲ್ಲವೆ?

ಹಣ ಯಾರಿಗೆ ಬೇಡ? 'ಹಣವೆಂದರೆ ಹೆಣವೂ ಬಾಯಿ ತೆರೆದೀತು' ಎಂದು ಗಾದೆ. ಆದರೆ ಬಯಸಿದವರಿಗೆಲ್ಲ ಹಣ ಬಂದೊದಗುವುದಿಲ್ಲವಲ್ಲ?

ಹಣವನ್ನು ಗಳಿಸಲು ಬಯಕೆಯೊಂದೆ ಸಾಲದು. ಪ್ರಯತ್ನವೂ ಬೇಕು. ದುಡಿಯದೆ ದುಡ್ಡು ಬಂದೀತೆ?

ಬಯಕೆ, ದುಡಿಮೆ ಎರಡಿದ್ದರೆ ಹಣ ಬರುವುದು ನಿಶ್ಚಯವೋ? ಬಯಕೆಯಂತೂ ಇದ್ದದ್ದೇ ಎನ್ನೋಣ; ಆದರೆ ದುಡಿದವರೂ ಹಣ ಗಳಿಸದೆ ಹೋಗುವುದನ್ನು ಕಂಡಿಲ್ಲವೆ? ಹಣಕ್ಕೆ ಹೆಣಗಾಡಿ ಕಂಗಾಲಾದವರು ಎಷ್ಟೋ ಮಂದಿ!

ಹಣವನ್ನು ಬರಮಾಡಿಕೊಳ್ಳಲು ಮುಖ್ಯವಾಗಿ ಅದೃಷ್ಟ ಇರಬೇಕು ಎನ್ನುವುದುಂಟು.

ಆದರೆ ಅದೃಷ್ಟ ಯಾರಿಗೆ ಬರುತ್ತದೆ, ಯಾವಾಗ ಬರುತ್ತದೆ, ಯಾವ ರೂಪದಲ್ಲಿ ಬರುತ್ತದೆ, ಎಷ್ಟು ಕಾಲ ಇರುತ್ತದೆ ಎಂದೆಲ್ಲ ಹೇಳಬಲ್ಲವರು ಯಾರು?

ಹಣದ ಮೇಲೆ ಕಣ್ಣಿರುವವರೇನೋ ಅದೃಷ್ಟವನ್ನರಸಿ ಜೋಯಿಸರ ಬಳಿ ಓಡುತ್ತಾರೆ. ಗುಡಿಗಳಿಗೆ ಮುತ್ತಿಗೆ ಹಾಕುತ್ತಾರೆ, ಮಂತ್ರ-ತಂತ್ರ ಮಾಡುತ್ತಾರೆ, ಹೋಮ-ಹವನ ಮಾಡಿಸುತ್ತಾರೆ.

ಜೋಯಿಸರು ದೊಡ್ಡ ಕುಳವಾದಾರು; ಗುಡಿಗಳು ಸಿರಿತನವನ್ನು ಕಾಣಬಹುದು; ಮಾಂತ್ರಿಕರು, ತಾಂತ್ರಿಕರು ಹಣವಂತರಾದಾರು; ಹೋಮ-ಹವನವನ್ನು ಮಾಡುವವರಿಗೆ ಅದೃಷ್ಟದ ಬಾಗಿಲು ತೆರೆದೀತು.

ಇವರು ಮಟ್ಟಿಗೆ ಅದೃಷ್ಟದಿಂದ ದೂರವೆ ಇರುತ್ತಾರೆ! ಇವರಿಂದ ಬೇರೆಯವರಿಗೆ ಅದೃಷ್ಟ ಅಷ್ಟೆ. ಅದೃಷ್ಟದ ಕದವನ್ನು ಇವರು ತಟ್ಟಿದರೂ ಮುಚ್ಚಿಯೇ ಇರುತ್ತದೆ, ಏನು ಮಾಡುವುದು?

ಅದೃಷ್ಟದ ಪಾಡಿಗೆ ಅದೃಷ್ಟವನ್ನು ಬಿಟ್ಟು ನಮ್ಮ ಕೈಲಾದುದನ್ನು ಮಾಡೋಣ ಎನ್ನುವುದು ಬುದ್ಧಿವಂತರ ಹವಣಿಕೆ.

ನಮ್ಮ ಕೈಲಾದುದನ್ನು ಮಾಡುವಾಗಲೂ ಸಂದರ್ಭದ ಒತ್ತಾಸೆ ಇರಬೇಡವೆ? ಅದಿರದಿದ್ದರೆ ನಾವು ಮಾಡಿದುದೆಲ್ಲ ವ್ಯರ್ಥವೇ ತಾನೆ?

ಕೊಳ್ಳುವವರಿಲ್ಲದೆ ಮಾರುವವರು ಏನು ಮಾಡಿಯಾರು? ಬಳಸುವವರಿಲ್ಲದೆ ಪದಾರ್ಥವನ್ನು ತಯಾರಿಸಿ ಮಾಡುವುದೇನು? ಓದುವವರಿಲ್ಲದೆ ಪುಸ್ತಕವನ್ನು ಪ್ರಕಟಿಸಿ ಏನು ಫಲ?

ಮಾರಬೇಕೆನ್ನುವವರು ಮಾರುಕಟ್ಟೆಯನ್ನೂ ನಿರ್ಮಿಸಬೇಕು. ತಯಾರಿಸುವವರು ಬಳಸುವವರನ್ನೂ ಒಲಿಸಿಕೊಳ್ಳಬೇಕು. ಪ್ರಕಾಶಕರು ಓದುಗರನ್ನು ಸೃಷ್ಟಿ ಮಾಡಬೇಕು.

ಆಗ ಸಂದರ್ಭದ ಒತ್ತಾಸೆಯೆನ್ನಬಹುದು. ಆದರೆ ಇದಕ್ಕೆ ಹಣ ಬೇಡವೆ? ಹಣವನ್ನು ಸಂಪಾದಿಸಲು ಹಣವನ್ನೆ ವೆಚ್ಚ ಮಾಡಬೇಕಲ್ಲ? ಹೆಚ್ಚು ಹಣ ಬೇಕಾದರೆ ಇರುವ ಹಣವನ್ನು ವೆಚ್ಚ ಮಾಡಬೇಕು.

ಹಣ ಇದ್ದಲ್ಲಿ ಹಣ ಸೇರುವುದು ಹೀಗೆಯೆ ಎನ್ನಿ.

3. ಹಣದ ನೆಲೆ

'ಪಣಮೆಮಗೊಂದೆ ಮುಖ್ಯಂ' ಎಂದು ಕವಿಯೊಬ್ಬನ ಮಾತು. ಭರ್ತೃಹರಿಯದು; ಬಸವಪ್ಪ ಶಾಸ್ತ್ರಿಗಳ ಅನುವಾದದಲ್ಲಿದೆ.

ಇದು ಕವಿಯದೇ ಅಭಿಪ್ರಾಯವಿರಲಾರದು. ಆ ಅಭಿಪ್ರಾಯವಿದ್ದವರು ಕವಿಗಳಾಗುವುದು ಕಷ್ಟವೇ! ಹಣವಂತರಾಗಿರುವ ಕವಿಗಳೂ ವಿರಳವೇ ತಾನೆ?

ವಾಡಿಕೆಯಲ್ಲಿರುವ ಅನಿಸಿಕೆಯನ್ನು ಕವಿ ಇಲ್ಲಿ ಹೇಳುತ್ತಿದ್ದಾನೆಯೆನ್ನೋಣ. ಅದರಲ್ಲಿ ಸ್ವಲ್ಪಮಟ್ಟಿಗೆ ಅಣಕವೂ ಇದೆಯೆನ್ನಿ.

ಹಣವೊಂದೇ ಬದುಕಿನಲ್ಲಿ ಮುಖ್ಯವಾಗಿರುವವರು ಬಹುಮಂದಿ. ನಮ್ಮ ಸುತ್ತಮುತ್ತ ಅಂಥವರನ್ನು ಕಾಣುತ್ತಲೇ ಇರುತ್ತೇವೆ.

ಆದರೆ ಅವರು 'ಹಣವೊಂದೇ ನಮಗೆ ಮುಖ್ಯ' ಎಂದು ಕವಿ ಹೇಳಿದಂತೆ ಹೇಳಿಕೊಳ್ಳಲಾರರು. ಹಾಗೆ ಹೇಳಿಕೊಳ್ಳಲು ಕೊಂಚ ನಾಚುತ್ತಾರೆ; ಅಂಜುವವರೂ ಉಂಟು. ಹಲವರಿಗೆ ಇದು ತಿಳಿದೇ ಇರುವುದಿಲ್ಲವೆನ್ನುವುದೂ ದಿಟವೇ.

ಹಣವೇ ಮುಖ್ಯವೆಂದು ಕೆಲಸ ಮಾಡುತ್ತಲೇ ಇರುತ್ತಾರೆ; ಆದರೆ ಇದು ಸಹಜವಾಗಿಯೇ ಎಂಬಂತೆ. ಅದರ ವಿಚಾರ ಅವರು ಆಲೋಚಿಸಿಯೇ ಇರುವುದಿಲ್ಲ.

ಹೇಗಾದರೂ ಹಣ ಮುಖ್ಯವೇ ತಾನೆ? ಅದಕ್ಕೆ ನಾಚುವುದೇಕೆ? ಅಂಜುವುದೇಕೆ?

ಜನರ ದಿನನಿತ್ಯದ ವ್ಯವಹಾರದಲ್ಲಿ ಹಣಕ್ಕೆ ಹಿರಿಯ ಪಟ್ಟವೇ, ದಿಟ. ಆದರೂ ಸಭ್ಯವೆನಿಸಿಕೊಳ್ಳುವ ಸಂಸ್ಕೃತಿಯಲ್ಲಿ ಹಣವೆಂದರೆ ಸ್ವಲ್ಪ ಕಡೆಗಣ್ಣಿನ ನೋಟವಿದೆ.

ಹಣದ ಗೀಳಿರುವ ಮನುಷ್ಯ ಅಷ್ಟಾಗಿ ಸುಸಂಸ್ಕೃತನಲ್ಲ ಎಂಬ ಭಾವನೆ ಅದು ಹೇಗೋ ನಿಂತುಬಿಟ್ಟಿದೆ! ಅದು ಸರಿಯೋ ತಪ್ಪೋ, ಹಣದ ಗೀಳಿದ್ದವರೂ ಅದನ್ನು ಸ್ಪಷ್ಟವಾಗಿ ತೋರಿಸಲಾರರು.

ಸಂಸ್ಕೃತಿಯ ನೆಲೆಯಲ್ಲಿ ತೋರುಗಾಣಿಕೆಯ ಪಾತ್ರವೂ ಹೆಚ್ಚೆಷ್ಟೆ. ನಾವು ಹೇಗಿದ್ದೇವೆ ಎಂಬುದಕ್ಕಿಂತ ಇತರರಿಗೆ ನಾವು ಹೇಗೆ ಕಾಣಿಸಿಕೊಳ್ಳಬೇಕು ಎಂಬುದು ಮುಖ್ಯ. ಒಳಗಿನ ಬಯಕೆಗಳಿಗಿಂತ ಮೇಲಿನ ವೇಷಕ್ಕೇ ಜನ ಮಾರು ಹೋಗುವುದು.

ಹಣವೊಂದೇ ಮುಖ್ಯವೆಂದು ಬಗೆದವರು ಕೂಡ ಹಣದ ಬಗ್ಗೆ ತಾವು ಉದಾಸೀನರು ಎಂದು ತೋರಿಸಿಕೊಳ್ಳಲು ಹವಣಿಸುತ್ತಾರೆ.

ಹಣವನ್ನು ಕೈಬಿಡಲು ಅಂಜುವ ಜಿಪುಣರಿಗೂ ಕೂಡ ತಾವು ನಿಃಸ್ಪೃಹರು, ಕೊಡುಗೈ ದೊರೆಗಳು ಎಂದು ತೋರಿಸಿಕೊಳ್ಳುವ ಕಾತರವಿರುತ್ತದೆ.

ಸಭ್ಯಸಮಾಜದಲ್ಲಿ ಹೀಗೆ ಹಣಕ್ಕೊಂದು ಅಪಖ್ಯಾತಿ ಒದಗಿ ಬಂದಿದೆ. ಹಣದ ಬಯಕೆಯನ್ನು ಗುಟ್ಟಾಗಿಯೇ ಇರಿಸಿಕೊಳ್ಳಬೇಕೆಂಬುದು ಸುಸಂಸ್ಕೃತರ ಕಲ್ಪನೆಯಿದ್ದಂತೆ ತೋರುತ್ತದೆ.

ಸಂಸ್ಕೃತದಲ್ಲಿ 'ನಾಸ್ತ್ಯರ್ಥಿನೋ ಗೌರವಂ' ಎಂಬ ಮಾತಿದೆ. ಹಣವನ್ನು ಬಯಸುವವನಿಗೆ ಮರ್ಯಾದೆಯಿರದೆಂದು ಅರ್ಥ. ಇದೇನು ವಿಪರ್ಯಾಸ?

ಹಣವಿಲ್ಲದೆ ಸಂಸ್ಕೃತಿಯಾದರೂ ಉಳಿದೀತೆ? ಸಭ್ಯನಾಗಿ ಬಾಳಲೂ ಹಣವಿರಬೇಡವೆ? ಮತ್ತೆ ಹಣವನ್ನೇ ನಿಂದಿಸುವುದೇತಕ್ಕೆ?

ಕವಿಯ ಮಾತನ್ನು ಸ್ವಲ್ಪ ಪರಾಂಬರಿಸಿ. ಅವನು ವಿಡಂಬನೆ ಮಾಡಿರುವುದು ಹಣವೊಂದೇ ಮುಖ್ಯ ಎನ್ನುವ ಅರಸಿಕರನ್ನು.

ಬದುಕಿನಲ್ಲಿ ಹಣವನ್ನು ಬಿಟ್ಟು ನಮಗೆ ಅಗತ್ಯವಾದುದು ಬೇರೇನೂ ಇರದೆ? ಮೇಲಾಗಿ ಹಣವೊಂದು ದಾರಿಯಷ್ಟೆ; ಅದೇ ಗುರಿಯಾಗಿಬಿಟ್ಟರೆ ಹೇಗೆ?

4. ಧನಪಿಶಾಚಿ

ಹಣಕ್ಕೆ ಪಿಶಾಚಿಯೊಂದು ಅಂಟಿಕೊಳ್ಳದೆ ಬಿಡುವುದಿಲ್ಲವೆಂದು ಹೇಳುವುದುಂಟು.

'ನಾಸ್ತ್ಯಪಿಶಾಚಮೈಶ್ವರ್ಯಂ'

ಪಿಶಾಚಿ ತಗುಲಿಕೊಂಡರೆ ಸುಮ್ಮನೆ ಬಿಡುತ್ತದೆಯೆ? ಬಗೆಬಗೆಯಾಗಿ ಆಡಿಸುತ್ತದೆ; ಕಾಟ ಕೊಡುತ್ತದೆ. ಪಿಶಾಚಿ ಮೆಟ್ಟಿಕೊಂಡವನು ಹುಚ್ಚೆದ್ದು ಕುಣಿಯುತ್ತಾನೆ; ಅವನನ್ನು ಹಿಡಿಯುವುದೇ ಕಷ್ಟವಾಗುತ್ತದೆ.

ಹಣಕ್ಕೆ ಹಿಡಿಯುವ ಪಿಶಾಚಿಯೆಂಥದು?

ದುರಾಶೆ. ಇಷ್ಟಿದ್ದರೆ ಅಷ್ಟು ಬೇಕೆಂಬಾಸೆ. ಅಷ್ಟು ದೊರೆತರೆ ಮತ್ತಷ್ಟು ಬೇಕೆಂಬ ದುರಾಸೆ! ಆಸೆಯನ್ನು ಪೂರೈಸಿದಷ್ಟೂ ಏರುತ್ತಲೇ ಹೋಗುವುದು ಅದರ ಜಾಯಮಾನ.

ಉರಿಯುವ ಬೆಂಕಿಗೆ ಕಟ್ಟಿಗೆ ಒಡ್ಡಿದಂತೆ. ಒಡ್ಡಿದಷ್ಟು ಉರಿಯು ಹೆಚ್ಚುತ್ತಲೇ ಹೋಗುವುದಿಲ್ಲವೆ? ಇನ್ನು ಸಾಕೆನಿಸುವುದುಂಟೆ?

ಆದರೆ ಒಂದು ವ್ಯತ್ಯಾಸವಿದೆ. ಕಟ್ಟಿಗೆ ಮುಗಿದಮೇಲೆ ಉರಿ ಆರಿಹೋಗುತ್ತದೆ. ಆಸೆಗಾದರೆ ಹಾಗಲ್ಲ. ಅದರಲ್ಲಿ ಕಟ್ಟಿಗೆಯಿರಲಿ, ಬಿಡಲಿ, ಉರಿಯಂತೂ ಇದ್ದೇ ಇರುತ್ತದೆ. ಆಸೆಯನ್ನು ಪೂರೈಸದೆ ಬಿಟ್ಟ ಮಾತ್ರಕ್ಕೆ ಆಸೆ ಮರೆಯಾಗುತ್ತದೆ ಎನ್ನುವಂತಿಲ್ಲ!

ಹಣದೊಂದಿಗೆ ಆಸೆ ಸೇರಿಕೊಳ್ಳುವುದು ಪಿಶಾಚಿಗೆ ಆಮಂತ್ರಣ ನೀಡಿದಂತೆ. ಹಣಕ್ಕೆ ತನ್ನದೇ ಆದ ಆಕರ್ಷಣೆಯೇನಿರದು; ಬೇಕೆನಿಸಿಕೊಳ್ಳುವ ಹಣ ಸ್ವಂತದ್ದಲ್ಲ. ನಾವು ಅದರ ಮೇಲೆ ಹೇರುವ ಗುಣ ಅದು.

ನಮಗೆ ಬಯಕೆಯಿದ್ದರೆ ಅದರ ಆಕರ್ಷಣೆ. ಬೇಡವೆನ್ನುವವನನ್ನು ಅದೇನು ಬೆನ್ನತ್ತಿ ಕಾಡುವುದಿಲ್ಲವಷ್ಟೆ? ಆಸೆಯಿದ್ದವನನ್ನು ಅದು ಹಿಡಿಯುತ್ತದೆ, ವಿವೇಕವಿಲ್ಲದವನನ್ನು ಮೆಟ್ಟಿಕೊಳ್ಳುತ್ತದೆ. ಕೀಲುಗೊಂಬೆಯಂತೆ ಆಡಿಸುತ್ತದೆ.

ಹಣಕ್ಕೆ ಆಸೆಪಟ್ಟು ಅದರ ಹಿಂದೆ ಓಡುವವನ ಕೈಗೆ ಅದು ಆಗಾಗ ಸಿಗುತ್ತದೆ. ಆದರೆ ಸಿಕ್ಕಿತೆಂದು ಅವನು ಕುಣಿದಾಡುವಷ್ಟರಲ್ಲಿ ಅದಕ್ಕೆ ಅವನು ಅಡಿಯಾಳಾಗಿ ಬಿಟ್ಟಿರುತ್ತಾನೆ! ಹಣ ನಮ್ಮದೆಂದು ಹೇಳಿಕೊಳ್ಳುತ್ತೇವೆ; ದಿಟವಾಗಿ ಹಣದವರು ನಾವು. ಅದು ನಮ್ಮನ್ನು ಸೇರುವುದಿಲ್ಲ; ನಾವು ಅದನ್ನು ಸೇರಿಬಿಡುತ್ತೇವೆ. ಅದು ಬೀಸುವ ಬಲೆಯಲ್ಲಿ ಸಿಕ್ಕ ಮೀನುಗಳು ನಾವು.

ನಮ್ಮ ಸುಖಕ್ಕಾಗಿ ಹಣ ಎಂಬುದು ಮಾಯವಾಗಿ, ಹಣಕ್ಕಾಗಿ ನಾವು ಎಂಬ ಭಾವನೆ ಬೇರೂರಿಕೊಳ್ಳುತ್ತದೆ. ಹಣಕ್ಕೇ ಸ್ವತಂತ್ರವಾದ ಒಂದು ಮೌಲ್ಯವುಂಟು ಎಂಬ ಭ್ರಮೆ ತೋರಿಕೊಳ್ಳುತ್ತದೆ. ಪ್ರಾಣಕ್ಕಿಂತ ಹಣ ಹೆಚ್ಚು ಪ್ರಿಯವಾಗುವುದೂ ಉಂಟು, ಸುಖವನ್ನು ಬದಿಗಿರಿಸಿ ಹಣಕ್ಕಾಗಿ ಶ್ರಮಪಡುವರು.

ಇದನ್ನೇ ಪಿಶಾಚಿಯೆಂದು ಕರೆದಿರುವುದು. ತನಗೆ ದಿಟವಾಗಿ ಮೈಯೇ ಇಲ್ಲದುದು ಇಷ್ಟೆಲ್ಲ ಗೊಂದಲಕ್ಕೆ ಕಾರಣವಾಗುವುದು ಭೂತಚೇಷ್ಟೆಯಲ್ಲವೆ? ಹಣಕ್ಕೆ ತನ್ನದೇ ಬೆಲೆಯೇನಿದೆ? ನಾವು ಕೊಟ್ಟರೇ ಬೆಲೆ; ಕೊಟ್ಟದ್ದೇ ಬೆಲೆ. ಕೊಟ್ಟವರಿಗುಂಟು, ಕೊಡದಿದ್ದವರಿಗಿಲ್ಲ, ಮನಸ್ಸಿನಲ್ಲಷ್ಟೆ ಅದರ ಇರವು.

ಆದರೂ ಅದನ್ನು ಪಡೆದುಕೊಳ್ಳಲೆಂದು ಎಷ್ಟು ಮಂದಿ ಹೆಣಗಾಡುತ್ತಾರೆ!

ಅದು ಬಾರದಿದ್ದರೆ ಎಷ್ಟು ಮಂದಿ ಕೊರಗುತ್ತಾರೆ! ಬಂದರೆ ಹೇಗೆ ಉಬ್ಬುತ್ತಾರೆ! ಅದು ಬರುವಾಗ ಜೊತೆಗೇ ದುರಾಸೆಯನ್ನೂ ತರುತ್ತದೆ ಎಂಬುದನ್ನು ಅರಿತುಕೊಳ್ಳುವವರು ವಿರಳ.

ಅದು ಬಾರದೇ ಇದ್ದಾಗ ಕೊಡುವ ಕಷ್ಟಕ್ಕಿಂತ ಬಂದ ಮೇಲೆ ಕೊಡುವ ಕಷ್ಟವೇ ಹೆಚ್ಚಿನದು.

5. ಹಣದಿಂದ ಹಣ

ಹಣ ಇದ್ದಲ್ಲಿಯೇ ಹಣ ಸೇರುವುದು ವಾಡಿಕೆ.

ಹೆಚ್ಚು ಹಣ ಪಡೆಯಲು ಮೊದಲು ಸ್ವಲ್ಪವಾದರೂ ಹಣ ಇರಬೇಕು.

ಕಾಡಾನೆಯನ್ನು ಹಿಡಿಯಲು ಊರಾನೆಯನ್ನು ಬಳಸುವುದಿಲ್ಲವೆ, ಹಾಗೆ. ಆನೆಯಿದ್ದರೇ ಆನೆ ದಕ್ಕುವುದು; ಒಂದು ಆನೆಯೂ ತನ್ನದೆಂದು ಇರದಿದ್ದರೆ ಬೇರೆ ಆನೆಗಳನ್ನು ಹಿಡಿಯುವುದು ಹೇಗೆ?

ಕಾಡಾನೆ ಹತ್ತಿರ ಬರುವುದೂ ಊರಾನೆಯನ್ನು ನೋಡಿಯೇ. ನಮ್ಮ ಮುಖ ನೋಡಿ ಆನೆ ಬರುವುದಿದೆಯೆ? ಆನೆಯಿಂದಲೇ ಆನೆಯನ್ನು ಹಿಡಿಯಬೇಕು.

ಬುದ್ಧಿ, ಯುಕ್ತಿ, ಸಾಹಸ, ಶೌರ್ಯ ಇವೆಲ್ಲವೂ ನೆರವಿಗೆ ಬಂದಾವು ದಿಟ; ಆದರೆ ಬಂಡವಾಳ ಹಣದ್ದೇ. ಧನವೇ ಮೂಲಧನ! ಹಣವಿಲ್ಲದೆ ಎಷ್ಟು ಹಾರಾಡಿದರೂ ಹಣ ದೊರೆಯಲಾರದು.

ಕಡಮೆ ಹಣವಿದ್ದವನು ಹೆಚ್ಚು ಪ್ರಯತ್ನಪಡಬೇಕು; ಹೆಚ್ಚು ಹಣವಿದ್ದವನು ಕಡಮೆ ಪ್ರಯತ್ನಪಟ್ಟರೂ ಸಾಕು; ಹೆಚ್ಚು ಹೆಚ್ಚು ಹಣ ಬಂದಿಳಿಯಲು ದಾರಿಯಾಗುತ್ತದೆ.

ಆದರೆ ಪ್ರಯತ್ನದಲ್ಲಿ ವಿವೇಕವಿರಬೇಕು. ಅದಿಲ್ಲದಿದ್ದರೆ ಇದ್ದ ಹಣವೂ ಕರಗಿ ಹೋಗುತ್ತದೆ. ವೆಚ್ಚ ಮಾಡಿದ್ದೆಲ್ಲ ಹುಚ್ಚುತನವೇ ಆದೀತು!

ಹಣಕ್ಕೆ ಬೆಲೆಯಿರುವುದೇ ಅದರ ವಿನಿಯೋಗದಲ್ಲಿ. ಹಣ ಹತ್ತಿರ ಇರುವುದು ಮುಖ್ಯವಲ್ಲ; ಅದನ್ನು ಹೇಗೆ ಬಳಸಿಕೊಳ್ಳುವುದು ಎಂಬುದು ಮುಖ್ಯ.

ಅರ್ಥಶಾಸ್ತ್ರದಲ್ಲಿ, ಆದಾಯವೂ ಸೇರುತ್ತದೆ; ವ್ಯಯವೂ ಸೇರುತ್ತದೆ. ಇಲ್ಲದ ಹಣವನ್ನು ಹೇಗೆ ಬರಮಾಡಿಕೊಳ್ಳುವುದು ಎಂಬ ತಿಳಿವಳಿಕೆಗಿಂತ, ಇರುವ ಹಣವನ್ನು ಹೇಗೆ ಉಳಿಸಿಕೊಳ್ಳುವುದು ಎಂಬ ಅರಿವು ಅಗತ್ಯವಲ್ಲವೆ?

ಹೆಚ್ಚು ಹಣವೆಂಬ ಕಡೆ ಗುರಿಯಿಡುವಾಗ, ಹಾಲಿ ಇರುವ ಹಣವೇ ಬಾಣ. ಅದನ್ನು ಹೆಡ್ಡತನದಿಂದ ಅಡ್ಡಾದಿಡ್ಡಿಯಾಗಿ ಎಸೆದುಬಿಟ್ಟರೆ ಗುರಿಯು ದೂರವೇ!

ಹೆಚ್ಚಾಗಿ ಹಣವೇ ಇದೆಯೆನ್ನಿ. ಅದನ್ನು ಓರಣವಾಗಿ ಕಾಪಿಟ್ಟುಕೊಳ್ಳಲು ಹಣವನ್ನು ವೆಚ್ಚ ಮಾಡಬೇಡವೆ? ಹಾಗೆ ವೆಚ್ಚ ಮಾಡಬೇಕಾದ ಹಣವೂ ಹೆಚ್ಚಾಗಿಬಿಟ್ಟರೆ, ಹೆಚ್ಚು ಹಣ ಇದ್ದೇನು ಲಾಭ? 'ಬಹ್ವರ್ಥಸಂರಕ್ಷಣಾಯ ಅಲ್ಪಾರ್ಥವ್ಯಯಃ' ಎಂಬುದು ಅರ್ಥಶಾಸ್ತ್ರದ್ದೊಂದು ಸುಭಾಷಿತ.

ಹಣಕ್ಕೆ ಹಣ ಸೇರಿದರೆ ಹೆಚ್ಚು ಹಣ ಎಂಬುದೇನೋ ದಿಟ. ಆದರೆ ಅದು ಎರಡಕ್ಕೆ ಎರಡು ಸೇರಿದರೆ ನಾಲ್ಕು ಎಂಬಂತಲ್ಲ. ಅರ್ಥಶಾಸ್ತ್ರದ ಗಣಿತದಲ್ಲಿ ಹಣಕ್ಕೆ

ಹಣ ಸೇರುವಾಗ ನಡುವೆ ಬುದ್ಧಿವಂತಿಕೆಯೆಂಬ ಮೂರನೆಯ ಘಟಕವೂ ಸೇರಿಕೊಳ್ಳುತ್ತದೆ.

ಮೊದಲನೆಯ ಹಣ ಎರಡನೆಯ ಹಣವನ್ನು ಸೆಳೆದುಕೊಳ್ಳುವಂತಿರಬೇಕು; ಎರಡನೆಯದು ಮೊದಲನೆಯದಕ್ಕೆ ಸೇರಿಕೊಳ್ಳುವಂತಿರಬೇಕು. ಇದನ್ನು ಆಗಮಾಡುವುದು ಬುದ್ಧಿವಂತಿಕೆ.

ಇದ್ದ ಹಣವನ್ನು ಹಳ್ಳವಾಗಿ ಮಾಡಿ, ಬರುವ ಹಣವನ್ನು ಹರಿಯುವ ನೀರಾಗಿ ಮಾಡಿದರೆ ಹಣಕ್ಕೆ ಹಣ ಸೇರುತ್ತದೆ. ಇದು ಹೇಳುವಷ್ಟು ಸುಲಭವಲ್ಲವೆಂದು ಮಾಡಿದವರು ಬಲ್ಲರು!

ಆದರೆ ಹಣವನ್ನು ಬಯಸುವ ಬುದ್ಧಿವಂತರೆಲ್ಲರೂ ಮಾಡುವುದು ಇದನ್ನೇ. ಇದಕ್ಕೆ ಬೇರೆ ಬೇರೆ ರೂಪಗಳಿವೆಯೆನ್ನಿ.

ಇರುವ ಹಣವನ್ನೇ ಪಣವಾಗಿಟ್ಟು ಹೆಚ್ಚಿಸಿಕೊಳ್ಳುವುದೊಂದು ದಾರಿ. ಎಚ್ಚರ ತಪ್ಪಬಾರದಷ್ಟೆ! ಎಡವದೆ, ದುಡುಕದೆ, ಬಿಡದೆ ನಡೆಯುವವರು ಗುರಿಯನ್ನು ತಲುಪಬಹುದು.

6. ಸಿರಿ ಬರಲು

ಸಾಮಾನ್ಯ ಜನರಿಗೆ ಹಣವಂತರೆಂದರೆ ದಿಟವಾಗಿ ಆಗದು.

ಹಣವಂತರ ಠೀವಿ, ಠೇಂಕಾರ, ನಡೆ, ನುಡಿ, ರೀತಿ, ನೀತಿಗಳನ್ನು ಕಂಡು ಜನ ಬೇಸರಪಡುವುದು ಸಹಜ. ಇದಕ್ಕೆ ಅಸೂಯೆ ಕಾರಣವಲ್ಲ. ಹಣವಂತರ ಚರ್ಯೆಯಲ್ಲೇ ಇರುವ ಅವಗುಣವೇ ಕಾರಣ.

ಜ್ಞಾನೇಶ್ವರ ಪಂಡಿತನ 'ನೀತಿಸಾರ'ದಲ್ಲೊಂದು ಸ್ವಾರಸ್ಯವಾದ ಒಕ್ಕಣೆಯಿದೆ. ಬಡವನಿಗೆ ಇದ್ದಕ್ಕಿದ್ದಂತೆ ಐಶ್ವರ್ಯ ಬಂದರೆ ಅವನು ಮೊದಲಿನಂತಿರುವುದು ಅಪರೂಪ. ಇದನ್ನು ಕವಿ ಹೀಗೆ ಬಣ್ಣಿಸಿದ್ದಾನೆ–

'ಸಿರಿ ಬರಲು ಡೊಂಕಿ ನಡೆವರು
ಸಿರಿಗರ ಸೊಂಕಿದೊಡೆ ನರರು ಮೂಡೊಂಕಪ್ಪರು
ಕರೆದೊಡೆ ಕೇಳರು ಕಾಣರು
ಸಿರಿ ಹರಿಯಲೊಡನೆ ಸರಸವಹರು ಚೂಡಾರತ್ನಾ

ಹಣ ಕೈಸೇರಿ ದೊಡ್ಡಕುಳವೆಂದಾದರೆ ಒಡನೆಯೇ ಅವರ ನಡಗೆಯಲ್ಲೇ ಮಾರ್ಪಾಟು ಒದಗಿ ಬಿಡುತ್ತದೆ. ನೇರವಾಗಿ ನಡೆಯುತ್ತಿದ್ದವನು ಈಗ ಗತ್ತಿನಿಂದ

ಡೊಂಕು ಡೊಂಕಾಗಿ ಕಾಲಿಡತೊಡಗುತ್ತಾನೆ. ಎಲ್ಲರಂತೆ ನಡೆದರೆ ಇವನದೇನು ಹೆಚ್ಚುಗಾರಿಕೆ?

ತಲೆಯೆತ್ತಿ, ಎದೆಯುಬ್ಬಿಸಿ, ಕೈಬೀಸಿ ನಡೆಯುವಾಗ ಮೈ ಹಿಂದಕ್ಕೆ ಬಾಗುತ್ತದೆ. ಮನಸ್ಸಿನಲ್ಲಿರುವ ಹೆಮ್ಮೆ ಮೈಯನ್ನು ತೋರಿಕೊಳ್ಳದೆ ಉಂಟೆ?

ಮತ್ತೆ, ಸಿರಿಯನ್ನು ಗರವೆಂದು ಕರೆದ ಕವಿ, ಸಿಡಿಲು ಎರಗಿದಾಗ ಒದಗುವ ಬವಣೆಯನ್ನು ಕಂಡಿದ್ದಾನೆ. ಹಣ ಬಂದ ಮೇಲೆ ಇರವು ಒದಗುವ ಬವಣೆಯನ್ನು ಕಂಡಿದ್ದಾನೆ. ಹಣ ಬಂದ ಮೇಲೆ ಇರವು ತ್ರಿಭಂಗಿಯಾಗಿ ಬಿಡುವುದಂತೆ. ಶಿಲ್ಪದಲ್ಲಿ ತ್ರಿಭಂಗಿ (ಮೂಡೊಂಕು) ಗಾಂಭೀರ್ಯದ, ಒನಪು-ಒಯ್ಯಾರಗಳ, ನೃತ್ಯದ ಸಂಕೇತ; ತುಂಬ ಚೆಲುವಾದ ಭಂಗಿ; ಹೆಂಗಳೆಯರಿಗಂತೂ ಎತ್ತಿದ್ದು. ಹಣವಂತನೇನು ಕಡಮೆ?

ಇನ್ನು ಬೇರೆಯವರು ಕರೆದರೆ ಇವನು ಓಗೊಟ್ಟಾನೆಯೆ? ಕರೆದವರನ್ನು ಕಣ್ಣೆತ್ತಿಯಾದರೂ ನೋಡಿಯಾನೆ? ಅವನು ಹಣದ ಹೆಚ್ಚುಗಾರಿಕೆಯ ಅಮಲಿನಲ್ಲಿರುವಾಗ ಇತರರ ಕಡೆ ಗಮನ ಹರಿಸುವುದಾದರೂ ಹೇಗೆ?

ಹಣ ಅವನನ್ನು ಮೇಲೆತ್ತಿ ಅವನಿಗೊಂದು ವಿಶಿಷ್ಟ ಲೋಕವನ್ನು ಸೃಷ್ಟಿಮಾಡಿಕೊಡುತ್ತದೆ. ಅಲ್ಲಿ ಅವನೇ ಇಂದ್ರ. ಹುಲುಮನುಜರ ಪಾಡು ಅವನಿಗೇತಕ್ಕೆ? ಹಣ ಇಲ್ಲದವರು ಅವನ ದೃಷ್ಟಿಯಲ್ಲಿ ಮನುಷ್ಯರೇ ಅಲ್ಲ!

ಆದರೆ ಸಿರಿತನವೆನ್ನುವುದು ಶಾಶ್ವತವೇನಲ್ಲವಷ್ಟೆ? ಬಹುಕಾಲ ನಿಲ್ಲುವುದೂ ಅಲ್ಲ. ಲಕ್ಷ್ಮಿಯನ್ನು ಚಂಚಲೆಯೆಂದೇ ಕರೆಯುವುದಿಲ್ಲವೇ? ಹಣದ ಸ್ವಭಾವವೇ ಕೈಯಿಂದ ಕೈಗೆ ಸಾಗುವುದು.

ಹಣವಂತನ ಹಿಡಿತದಿಂದ ಹಣ ಜಾರಿ ಹೋಗುವುದು ಆಶ್ಚರ್ಯವೇನಲ್ಲ. ಅವನಿಗೆ ಅರಿವಿಲ್ಲದೆಯೇ ಕಣ್ಮರೆಯಾಗಿ ಬಿಡುತ್ತದೆ. ಅವನ ಅರಿವಿದ್ದರೂ ಹೋಗುವ ಹಣವನ್ನು ಹಿಡಿದುಕೊಳ್ಳುವುದಾದೀತೆ?

ಹಾಗೆ ಹಣ ಹೊರಟು ಹೋದ ಮೇಲೆ ಮೊದಲು ಹಣವಂತನಾಗಿದ್ದವನ ಗತಿಯೇನು? ಮತ್ತೆ ಮೊದಲು ಹೇಗಿದ್ದನೋ ಹಾಗೆ, 'ಬಡವ, ಮಡಗಿದಂತಿರು' ಎಂದಿರುತ್ತಾನೆ. ಠೀವಿ, ಠೇಂಕಾರ, ಗತ್ತು ಎಲ್ಲವೂ ಕರಗಿ ಹೋಗುತ್ತವೆ. ಮತ್ತೆ ಎಲ್ಲರಿಗೂ ಸುಲಭನಾಗುತ್ತಾನೆ.

ಈಗವನು ಮುಗಿಲಿನಿಂದ ಭುವಿಗೆ ಬಂದಿಳಿಯದಿದ್ದರೆ ಹೇಗೆ? ಹಣ ಹೋಯಿತೆಂಬ ಕೊರಗಿದ್ದೀತು, ಬಡತನ ಬಂದಡರಿತೆಂಬ ದುಗುಡವಿದ್ದೀತು; ಆದರೆ ಸದ್ಯ, ಹಣದ ಅಮಲಿನಿಂದ ಪಾರಾದನಲ್ಲ ಎಂದು ಅವನ ಹಿತಚಿಂತಕರು ನಿಟ್ಟುಸಿರುಬಿಟ್ಟಾರು.

7. ಹಣ - ಉಳಿವು, ಅಳಿವು

ಹಣ ಮಾಡಿಕೊಳ್ಳುವುದೇ ಬದುಕಿನ ಮುಖ್ಯೋದ್ದೇಶವೆಂದು ಭಾವಿಸುವ ಜನರಿದ್ದಾರೆ, ಹಣವನ್ನು ಹಿಂದೆ ಮುಂದೆ ನೋಡದೆ ವೆಚ್ಚ ಮಾಡುವವರೂ ಇದ್ದಾರೆ. ಜಿಪುಣರಿದ್ದಾರೆ, ಉದಾರಿಗಳಿದ್ದಾರೆ. ನೀತಿಪರರಿದ್ದಾರೆ, ಅನ್ಯಾಯಶೀಲರಿದ್ದಾರೆ. ಹಣಪ್ರಪಂಚದಲ್ಲಿ ಬೇರೆ ಬೇರೆ ಪಾತ್ರವಹಿಸುವವರಿದ್ದಾರೆ.

ಇವರೆಲ್ಲರ ವಿಶಿಷ್ಟ ಗುಣಗಳನ್ನು ಪಟ್ಟಿ ಮಾಡಿದ ಕವಿಗಳೂ, ಬರಹಗಾರರೂ ಇದ್ದಾರೆ. ಸಂಸ್ಕೃತ ಗ್ರಂಥಗಳಲ್ಲಿ ಕೆಲವು ಬಗೆಯ ಹಣವಂತರನ್ನು ಹೆಸರಿಸಿ ಬಣ್ಣಿಸಲಾಗಿದೆ. ನಿದರ್ಶನಕ್ಕೆ ಮೂಲಹರ, ಕದರ್ಯ, ತಾದಾತ್ವಿಕ ಎಂಬ ಮೂರು ಬಗೆಗಳನ್ನು ನೋಡಿ.

ಹಿರಿಯರು ಕಷ್ಟಪಟ್ಟು ಕೂಡಿಟ್ಟು ತನಗೆ ಬಿಟ್ಟು ಹೋದ ಆಸ್ತಿಯನ್ನು ಕೆಟ್ಟಚಾಳಿಗಳಿಗೆ ಪಕ್ಕಾಗಿ ಕರಗಿಸುವವನು ಮೂಲಹರ. ಬಂಡವಾಳವನ್ನು ಕಳೆದುಕೊಳ್ಳುವವನು ಅವನು. ಹಣದ ಬಗ್ಗೆ ಆದರವಾಗಲಿ, ಹಿರಿಯರ ಬಗ್ಗೆ ಅಭಿಮಾನವಾಗಲಿ ಇಲ್ಲದವನು. ಹಣದ ಬೆಲೆ ಅವನಿಗೆ ತಿಳಿಯುವುದು ಹಣ ಕೈಬಿಟ್ಟ ಮೇಲೆಯೇ!

ಕದರ್ಯನೆಂಬುವನು ಬೇರೆಯುವರ ಕಣ್ಣು ತಪ್ಪಿಸಿ ಹಣವನ್ನು ಕೂಡಿಸಿಕೊಳ್ಳುವನು. ಮೋಸ ಮಾಡಲು ಹಿಂಜರಿಯದೆ, ಎಲ್ಲರನ್ನೂ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವವನು. ತನ್ನ ಬಳಿ ಕೆಲಸ ಮಾಡುವವರನ್ನು ಪೀಡಿಸಿ, ದುಡಿಸಿ, ದಂಡಿಸಿ ಹಣವಂತನಾದವನು. ಅವನು ಲೋಭಿ ಮಾತ್ರವಲ್ಲ, ನಿಷ್ಕರುಣಿ. ಅವನ ಗುರಿಯೆಲ್ಲ ಹಣವನ್ನು ಗಳಿಸಿಕೊಳ್ಳುವುದರಲ್ಲೇ.

ಮೂರನೆಯ ತಾದಾತ್ವಿಕ ಏನನ್ನೂ ಕೂಡಿಡದೆ ಗಳಿಸಿದ್ದನ್ನೆಲ್ಲ ವೆಚ್ಚ ಮಾಡುವ ಅವಿವೇಕಿ. ಆ ಹೊತ್ತಿಗೆ ಸಂತೋಷಪಟ್ಟರೆ ಆಯಿತು ಎಂಬುದು ಅವನ ದಾರಿ. ಮುಂದಿನದು ಅವನ ಕಣ್ಣ ಮುಂದೆ ನಿಲ್ಲಲಾರದು; ಮುಂದೇನು ಎಂಬ ಚಿಂತೆ ಅವನನ್ನು ಕಾಡದು. ಇದ್ದಾಗ ಅನುಭವಿಸುವುದರಲ್ಲಿ ಅವನಿಗೇನೂ ಸಂಕೋಚವಿರದು.

ಮೂಲಹರನಾಗಲಿ, ತಾದಾತ್ವಿಕನಾಗಲಿ ಹಣವನ್ನು ಕಳೆದುಕೊಂಡು ಬಡತನವನ್ನು ಕಟ್ಟಿಕೊಳ್ಳುವುದು ಕಟ್ಟಿಟ್ಟದ್ದು. ಕೂತು ತಿನ್ನುವವನಿಗೆ ಕುಡಿಕೆ ಹಣ ಸಾಲುವುದೆ? ದುಡಿಮೆಯ ಬೆಲೆಯನ್ನೇ ಅರಿಯದಿದ್ದವನ ಬಳಿ ಹಣ ನಿಲ್ಲುವುದಾದರೂ ಹೇಗೆ?

ಹಣವನ್ನು ವೆಚ್ಚ ಮಾಡಲು ಸಿದ್ಧನಾಗಿರುವವನಿಗೆ ನೂರು ದಾರಿಗಳು ತೋರಿಕೊಳ್ಳುತ್ತವೆ; ಹತ್ತು ಗೆಳೆಯರು ನೆರವಾಗುತ್ತಾರೆ. ಹಣವನ್ನು ಪೋಲು

ಮಾಡುವುದು ಹಣವನ್ನು ಗಳಿಸುವಷ್ಟೇನು ಕಷ್ಟವಲ್ಲವಷ್ಟೆ? ಹಣ ಬರುವಾಗ ನಿದಾನ ಮಾಡುತ್ತದೆ; ಹೋಗುವಾಗ ವೇಗವಾಗಿಯೇ ಹೋಗಿಬಿಡುತ್ತದೆ! ಬರಮಾಡಿಕೊಳ್ಳಲು ಪ್ರಯತ್ನ ಬೇಕು, ಶ್ರಮ ಪಡಬೇಕು. ಕಳೆದುಕೊಳ್ಳುವುದಕ್ಕೇನು ಕಷ್ಟವಿಲ್ಲ!

ಇನ್ನು ಕದರ್ಯನ ಪಾಡೇನು? ಅವನಂತೂ ಹಣದ ಬೆಲೆಯನ್ನು ಬಲ್ಲವನು. ಕೂಡಿಡುವುದಲ್ಲದೆ, ವೆಚ್ಚ ಮಾಡುವುದು ಅವನ ಸ್ವಭಾವವಲ್ಲ. ತಾನೂ ಸುಖ ಪಡುವುದಿಲ್ಲ; ಬೇರೆಯವರನ್ನೂ ಸುಖವಾಗಿರಲು ಬಿಡುವುದಿಲ್ಲ. ಹಣದ ಮುಂದೆ ಅವನಿಗೆ ಸ್ನೇಹ, ಸ್ವಜನ, ನೀತಿ, ಧರ್ಮ, ಕರುಣೆ ಯಾವುದೂ ನಿಲ್ಲುವುದಿಲ್ಲ.

ಅವನಾಗಲಿ ಗಳಿಸಿದ ಹಣವನ್ನು ಉಳಿಸಿಕೊಂಡಾನೋ?

ಅವನ ಹಣಕ್ಕೆ ಮೂರು ಕುತ್ತುಗಳು ಕಾದಿರುತ್ತವೆಯಂತೆ–ರಾಜ್ಯ, ದಾಯಾದ, ತಸ್ಕರ. ರಾಜನನ್ನು ಈಗ ಸರಕಾರವೆನ್ನೋಣ; ಅವನು ತೆರಬೇಕಾಗುವ ತೆರಿಗೆಗಳು, ಕೊಡಬೇಕಾದ ಕರಗಳು. ದಾಯಾದಿಗಳಂತೂ ಸರಿಯೇ ಸರಿ; ಅವರ ಕಣ್ಣೆಲ್ಲ ಇವನ ಹಣದ ಮೇಲೇ.

ತಸ್ಕರರೆಂದರೆ ಕಳ್ಳರು. ಈ ಗುಂಪಿನಲ್ಲಿ ಇವನ ಹಣಕ್ಕೆ ಆಸೆಪಟ್ಟು ಎರಗುವ ವಂಚಕರೆಲ್ಲರೂ ಸೇರುತ್ತಾರೆ.

8. ಮೂರು ದಾರಿ

ದುಡ್ಡಿನ ದಾರಿಗಳು ಮೂರೆಂದು ಹೇಳುತ್ತಾರೆ–ದಾನ, ಭೋಗ, ನಾಶ. ಬಡವರಿಗೆ, ಬೇಡಿದವರಿಗೆ, ಯೋಗ್ಯರಿಗೆ ಕೈಯೆತ್ತಿ ಒಳ್ಳೆಯ ಮನಸ್ಸಿನಿಂದ ಕೊಡುವುದು ದಾನ. ದಾನದಲ್ಲಿ ಪಾತ್ರ ವಿವೇಚನೆ ಮುಖ್ಯವಾದುದು.

ಕೊಡುವುದೆಲ್ಲ ದಾನವಾಗುವುದಿಲ್ಲ. ತನಗೆ ಬೇಡದುದನ್ನು ಬೇರೆಯವರಿಗೆ ನೀಡಿದಾಗ ಅದೇನು ದಾನವೆನಿಸಿಕೊಳ್ಳುವುದಿಲ್ಲ. ತನಗೆ ಅಗತ್ಯವಾದುದನ್ನೇ ಇತರರೊಂದಿಗೆ ಹಂಚಿಕೊಂಡಾಗ ಅದು ದಾನ. 'ದಾನಂ ಸಂವಿಭಾಗಃ' ಎನ್ನುವ ನಿರೂಪಣೆಯಿದೆ. ಅದೊಂದು ಸಾಮಾಜಿಕ ಕ್ರಿಯೆ. ಅದರಿಂದ ಬರುವ ಪುಣ್ಯ ರಂಜನೆಗಾಗಿ, ಪ್ರೇರಣೆಯಂತೆ ಹೇಳಿದ ಮಾತಷ್ಟೆ. ಪುಣ್ಯದ ಆಸೆಯಿಂದಲಾದರೂ ದಾನ ಮಾಡಲಿ ಎಂದು.

ಭೋಗವಂತೂ ತಿಳಿದದ್ದೇ. ಹಣವಿರುವುದು ಕೋಶದಲ್ಲಿ ಕೂಡಿಡಲೆಂದಲ್ಲ; ಬದುಕಿನಲ್ಲಿ ಬಳಸಿಕೊಳ್ಳಲೆಂದು. ಜಿಪುಣರನ್ನು ಮಹಾದಾನಿಗಳೆಂದು ಹೇಳಬಹುದು; ಏಕೆಂದರೆ ತಮ್ಮ ಹಣವನ್ನು ಕೈಯಿಂದ ಮುಟ್ಟದೆಯೇ (ಸತ್ತ ಮೇಲೆ) ಬೇರೆಯವರಿಗೆ ಒಪ್ಪಿಸಿ ಬಿಡುತ್ತಾರೆ! ತಮ್ಮ ಹಣವನ್ನು ಅನುಭವಿಸಬೇಕು, ಅದರಿಂದ ಸುಖಪಡಬೇಕು

ಎಂಬ ಕಲ್ಪನೆಯೇ ಅವರಿಗಿರುವುದಿಲ್ಲ. ಬಹುಮಂದಿಯೇನೋ ಇರುವ ಹಣದಿಂದ ಭೋಗವನ್ನೇ ಸಾಧಿಸಿಕೊಳ್ಳುತ್ತಾರೆನ್ನಿ.

ಭೋಗದಲ್ಲೂ ವಿತರಣೆ, ವಿವೇಕ ಇರಬೇಕು. ಹಣವಿದೆಯೆಂದು ದುರ್ವ್ಯಸನಗಳಿಗೆ ಪಕ್ಕಾದರೆ ಹಣವೂ ಪೋಲಾಗುತ್ತದೆ, ಆರೋಗ್ಯವೂ ಕೆಡುತ್ತದೆ, ನೆಮ್ಮದಿಯಂತೂ ಉಳಿಯುವುದೇ ಇಲ್ಲ. ದಾನದಲ್ಲಿ ಪಾತ್ರಾಪಾತ್ರ ವಿವೇಕ ಇರಬೇಕಾದಂತೆ ಭೋಗದಲ್ಲಿಯೂ ಯುಕ್ತಾಯುಕ್ತ ವಿವೇಚನೆಯಿರಬೇಕು. 'ಭೋಗೇ ರೋಗಭಯಂ' ಎನ್ನುವ ಸಾಧ್ಯತೆಯಿದೆಯೆನ್ನುವುದನ್ನು ಮರೆಯಬಾರದು.

ದಾನವಾಗಲಿ, ಭೋಗವಾಗಲಿ ಎರಡೂ ಇಲ್ಲದ ಕಡೆ, ಕೂಡಿಟ್ಟ ಹಣದ ಗತಿಯೇನು? ಮೂರನೆಯ ದಾರಿ ಹಿಡಿಯುತ್ತದೆ–ನಾಶ. ಹಣ ಹಾಳಾಗುವುದೆಂದರೆ ಬೇರೆಯವರ ಕೈಸೇರುವುದೊಂದು ಬಗೆ; ಉಪಯೋಗಕ್ಕೆ ಬಾರದೆ ಕೊಳೆಯುವುದಿನ್ನೊಂದು ಬಗೆ; ಹೇಳ ಹೆಸರಿಲ್ಲದೆ ಮರೆಯಾಗುವುದು ಮತ್ತೊಂದು ಬಗೆ.

ದಾನ ಮಾಡಿದಾಗಲೂ ಹಣ ಕೈಬಿಡುತ್ತದೆ; ಭೋಗಿಸಿದಾಗಲೂ ಹಣ ವೆಚ್ಚವಾಗುತ್ತದೆ. ಆದರೆ ಇದನ್ನು ನಾಶವೆನ್ನಲಾಗದು. 'ಕೊಟ್ಟದ್ದು ಕೆಟ್ಟಿತೆನಬೇಡ' ಎಂಬ ಕಿವಿಮಾತೇ ಇದೆಯಲ್ಲ? ಭೋಗಕ್ಕಲ್ಲದೆ ಹಣ ಮತ್ತೇತಕ್ಕೆ? ಹಣದಿಂದ ಸುಖವೆಂದಾದರೆ ಹಣಕ್ಕೆ ಸದ್ವಿನಿಯೋಗವೇ ಆಯಿತಲ್ಲ?

ದಾನ, ಭೋಗ ಎರಡನ್ನೂ ಮನಸಾರೆ, ಎಚ್ಚರಿಂದ ಮಾಡುವಾಗ ಅದರಿಂದ ಹಣ ಹೋಯಿತೆಂಬ ದುಗುಡ ಯಾರಿಗೂ ಒದಗಲಾರದು. ಸಂತೃಪ್ತಿ, ಸಮಾಧಾನ ಮೂಡಿಬಂದರೆ ವೆಚ್ಚ ಮಾಡಿದ ಹಣ ಸಾರ್ಥಕವಾಯಿತು.

ಹಣ ಇದ್ದಾಗ ತಾನೂ ಸುಖ ಪಡದೆ, ಇತರರನ್ನೂ ಸುಖಪಡಿಸದೆ ಹಣವೇ ಪರಮಾರ್ಥವೆಂಬಂತೆ ಅದನ್ನು ಗುಟ್ಟಾಗಿ, ಗಟ್ಟಿಯಾಗಿ ಕಾಪಿಟ್ಟುಕೊಳ್ಳುವ ಹೆಡ್ಡನು ಹಣ ಹಾಳಾಗಿ ಹೋದಾಗ ದುಃಖ ಪಡುವುದಂತೂ ಖಂಡಿತವೇ. ಸತ್ತ ಮೇಲೆ ಹಾಗಾದರೆ ಅದು ಬೇರೆಯ ಮಾತು.

ಹಣವನ್ನು ಗಳಿಸುವ ಶ್ರಮ, ಹಣವನ್ನು ಕಾಪಿಟ್ಟುಕೊಳ್ಳುವ ಕಷ್ಟ, ಹಣವನ್ನು ವೆಚ್ಚ ಮಾಡಲು ದುಃಖ ಇಷ್ಟೆಲ್ಲ ಇದ್ದವನಿಗೆ ಹಣ ಹೋಗಿಯೇ ಬಿಟ್ಟರೆ 'ಕಿಬ್ಬದಿಯ ಕೀಲು ಮುರಿದಂತೆ' ಅಲ್ಲವೆ? ಕೈಯೆತ್ತಿ ಕೊಡಲಿಲ್ಲ, ಸುಖಪಡಲಿಲ್ಲ ಎಂಬ ಮರುಕ ಆಗಲಾದರೂ ಬಂದೀತು.

9. ಸುತ್ತಿಗೆಯ ಸಮಾಚಾರ

ಹಣ ಮಾಡಿಕೊಳ್ಳುವ ಗೀಳಿದ್ದವರಿಗೆ ಯಾವುದೇ ಸಂದರ್ಭವಾಗಲಿ ಈ ಗೀಳಿನ ಚೌಕಟ್ಟೇ ಕಾಣುವುದು.

ಇಂಗ್ಲೀಷಿನಲ್ಲೊಂದು ಗಾದೆಯಿದೆ. ನಿನ್ನ ಕೈಯಲ್ಲಿರುವುದು ಸುತ್ತಿಗೆಯೊಂದೇ ಸಲಕರಣೆಯಾದರೆ ನಿನ್ನ ಎದುರಿಗೆ ಕಾಣುವುದೆಲ್ಲ ಮೊಳೆಗಳೇ, ಎಂದು.

ಎಂದರೆ ಸುತ್ತಿಗೆಯಿಂದ ಬಡಿಯಬಹುದಾದ ವಿವರಗಳೇ ಎದ್ದು ಕಂಡುಕೊಳ್ಳುತ್ತವೆ. ಏನು ಕಂಡರೂ ಅದನ್ನು ಸುತ್ತಿಗೆಯಿಂದ ಬಡಿಯುವ ಕಾತರವೂ ಒದಗಿಬರುತ್ತದೆ.

ಹಲವರಿಗೆ ಹೇಗಾದರೂ ಹಣ ಮಾಡಿಕೊಳ್ಳಬೇಕೆಂಬ ಬಯಕೆಯಿರುತ್ತದೆ. ಅವರಿಗೆ ದೊರಕುವ ಯಾವುದೇ ಸಂದರ್ಭವಾಗಲಿ, ಏನೇ ಪರಿಸ್ಥಿತಿಯಿರಲಿ ಅದರ ಉಳಿದೆಲ್ಲ ವಿವರಗಳನ್ನು ದೂರ ಸರಿಸಿ, ಇದರಲ್ಲಿ ಧನಾರ್ಜನೆಯ ಅವಕಾಶವೆಷ್ಟಿದೆ ಎಂಬುದನ್ನೇ ಅವರು ನೋಡುವರು.

ಸುತ್ತಿಗೆಯ ಜೊತೆಗೆ ಚಾಕು, ಕತ್ತರಿ, ಇಕ್ಕಳ, ಗರಗಸ ಮುಂತಾದ ಇತರ ಹತಾರಿಗಳೂ ಇದ್ದಾಗ ಮೊಳೆಗಳೇ ಎದ್ದು ಕಾಣುವುದಿಲ್ಲವಷ್ಟೆ? ದೃಷ್ಟಿ ಸಂಕುಚಿತವಾಗುವುದಿಲ್ಲ.

ಸಂದರ್ಭದ ಬೇರೆ ಬೇರೆ ವಿವರಗಳೂ ಸ್ವಾರಸ್ಯಗಳೂ ಅರಿವಿಗೆ ಬರುತ್ತವೆ. ಬದುಕಿನಲ್ಲಿ ಹಣವೊಂದೇ ಪುರುಷಾರ್ಥವಲ್ಲ, ಹಣವೇ ಸರ್ವಸ್ವವೆಂದಾಗದು, ಹಣದಿಂದಲೇ ಬದುಕು ಬೆಳಗಲಾರದು ಎಂಬುದು ಮನದಟ್ಟಾಗುತ್ತದೆ.

ನಮ್ಮ ಇಂದಿನ ವಿದ್ಯಾಭ್ಯಾಸವೆಲ್ಲ ವೃತ್ತಿಪರವಾದುದೇ ಅಲ್ಲವೆ? ವಿದ್ಯಾಭ್ಯಾಸ ಮುಗಿಸಿದೊಡನೆ ಉದ್ಯೋಗ ಹಿಡಿಯಬೇಕು. ಉದ್ಯೋಗದ ಕೃತಕೃತ್ಯತೆಯಿರುವುದು ಅದರ ಆರ್ಥಿಕ ಮೌಲ್ಯದಲ್ಲಿ ಅಷ್ಟೆ. ಹೆಚ್ಚು ಹಣ ಬರುವಂತಾದರೇನೆ ಉದ್ಯೋಗದ ಆಕರ್ಷಣೆ!

ಎಂದಮೇಲೆ, ವಿದ್ಯಾಭ್ಯಾಸ ನಮ್ಮ ಕೈಗೆ ನೀಡುವುದು ಸುತ್ತಿಗೆಯೊಂದನ್ನೇ. ಅದನ್ನೇ ಹಿಡಿದು ನಾವು ಮೊಳೆಗಳನ್ನು ಹುಡುಕುತ್ತ ಹೋಗಬೇಕು!

ಹೆಚ್ಚಿನ ವಿದ್ಯಾಭ್ಯಾಸವೆಂದರೆ ಬಲವಾದ ಸುತ್ತಿಗೆ! ಸೂಪರ್ ಸ್ಪೆಷಲಿಸ್ಟ್‌ಗಳು ಹಿಡಿದಿರುವುದು ಯಾವ ಮೊಳೆಯನ್ನಾದರೂ ಎಲ್ಲಿಯಾದರೂ ಹೊಡೆಯಬಲ್ಲ ಸುತ್ತಿಗೆ. ಆ ಸುತ್ತಿಗೆಯ ಗಾತ್ರವನ್ನು ನೋಡಿಯೇ ಮೊಳೆಗಳು ಮರುಳಾಗಬೇಕು.

ಇಂಥ ಸುತ್ತಿಗೆಗಳು ಹಲವಾರು ಇರುತ್ತವೆ. ನಮ್ಮ ವಾಣಿಜ್ಯ ಪ್ರಪಂಚದಲ್ಲಿ ಕಣ್ಣು ಕೋರೈಸುವ, ಬಾಯಲ್ಲಿ ನೀರೂರಿಸುವ, ಅರಿವನ್ನು ಮರೆಸುವ

ಜಾಹಿರಾತುಗಳನ್ನೇ ನೋಡಿ. ಒಂದೊಂದೂ ಹಲವು ಮೊಳೆಗಳನ್ನು ಹುಡುಕುವ ಸುತ್ತಿಗೆಯೇ. ಪೆಟ್ಟು ಬೀಳುವುದು ಮಟ್ಟಿಗೆ ತಟ್ಟನೆ ಕಾಣುವುದಿಲ್ಲ; ಜಾಹೀರಾತಿನ ಜಾಣತನವೇ ಅದು.

ಎಲ್ಲರೂ, ಎಲ್ಲವೂ ಹಣದ ಬೇಟೆಯಲ್ಲಿ ಈಗ ತೊಡಗಿರುವಂತೆ ತೋರುವುದಿಲ್ಲವೆ? ಮೊಳೆಗಳೇ ಇಲ್ಲದೆ ಸುತ್ತಿಗೆಯೊಂದೇ ಪರದಾಡುವ ಕಾಲವೂ ಬಂದೀತು! ಹಣ ಕೊಡುವವರು ಇದ್ದರೆ ತಾನೆ ಹಣ ಮಾಡಿಕೊಳ್ಳುವವರು? ಮೊಳೆಯಿದ್ದರೆ ಸುತ್ತಿಗೆಯ ಕೆಲಸ.

ಒಮ್ಮೊಮ್ಮೆ ಮೊಳೆಯೇ ಸುತ್ತಿಗೆಯಾಗಿ ಮಾರ್ಪಡುವುದೂ ಉಂಟು! ಸುತ್ತಿಗೆಯ ಸ್ವಾರಸ್ಯವನ್ನು ಅರಿತ ಮೊಳೆ ಬರಿಯ ಮೊಳೆಯಾಗಿ ಉಳಿಯಲೇಕೆ? ಸಮಯ ಸಿಕ್ಕರೆ ತಾನೂ ಸುತ್ತಿಗೆಯಾಗಿ ಇತರ ಮೊಳೆಗಳನ್ನು ಅರಸಿಕೊಂಡು ಹೋಗಬಾರದೆ? ನಮ್ಮ ಆರ್ಥಿಕ ಪ್ರಪಂಚದ ಬವಣೆಯಿದು.

10. ಲಂಚ–ಪ್ರಪಂಚ

ಭ್ರಷ್ಟಾಚಾರಗಳಲ್ಲಿ ಲಂಚ ಪ್ರಧಾನವಾದುದು.

ಅದು ಹೀನಾಯವಾದುದು ಹೌದು! ನೀತಿಗೆಟ್ಟದ್ದು ದಿಟ. ಆದರೆ ಎಷ್ಟು ವ್ಯಾಪಕವಾಗಿಬಿಟ್ಟಿದೆಯೆಂದರೆ ಅದೇ ಗೆಲುವಿಗೆ ದಾರಿ ಎಂಬ ನಂಬಿಕೆ ಹರಡಿಕೊಳ್ಳುತ್ತಿದೆ!

ನಮ್ಮ ದೇಶದಲ್ಲಿಯೇ ಅದರ ವೈಭವ ಎಂದು ಹೆಮ್ಮೆ ಪಟ್ಟು ಕೊಳ್ಳುವಂತೆಯೂ ಇಲ್ಲ. ಎಲ್ಲ ದೇಶಗಳಲ್ಲಿಯೂ ಅದರ ಸಮಸ್ಯೆ ತೋರಿಕೊಂಡಿದೆ.

ನೊಬೆಲ್ ಪಾರಿತೋಷಕವನ್ನು ಪಡೆದುಕೊಂಡ ಗ್ಯಾರಿ ಬೆಕರ್ (ಷಿಕಾಗೊ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಅಧ್ಯಕ್ಷರು) ಲಂಚವನ್ನು ಸುಂಕದ ಸೋದರವಾವೆ (Cousin of tax) ಎಂದು ಬಣ್ಣಿಸಿದರು.

ಚೀನಾ ದೇಶದಲ್ಲಿ ಸರಕಾರವೇ ಲಂಚದ ವ್ಯವಸ್ಥೆಯನ್ನು ಏರ್ಪಡಿಸಿ ಅದರ ಮೊನಾಪಲಿಯನ್ನು ತನ್ನದಾಗಿಸಿಕೊಂಡಿದೆಯಂತೆ. ರಷ್ಯಾ ದೇಶದಲ್ಲಿ ಸರಕಾರದ ಅಧಿಕಾರಿಗಳೆಲ್ಲರೂ ಸ್ವತಂತ್ರವಾಗಿ ಲಂಚದ ಲಾಭವನ್ನು ಪಡೆದುಕೊಳ್ಳುವರಂತೆ.

ಏನೇ ವ್ಯವಸ್ಥೆಯಿರಲಿ, ವ್ಯವಹಾರದಲ್ಲಿ ಲಂಚದ ಪಾತ್ರ ಸ್ಪಷ್ಟವಾಗುತ್ತದೆ.

ಲಂಚ ಈಚೆಗೆ ತೋರಿಕೊಂಡ ಪಿಡುಗೂ ಅಲ್ಲ. ತೀರ ಹಳೆಯ ಪದ್ಧತಿಯೇ. ಹಿಬ್ರೂ ಜನರಿಗೆ ಆದ್ಯ ಪ್ರವಾದಿ ಮೋಸಸನೇ ಲಂಚವನ್ನು ನಿಷೇಧಿಸಿದ ನೀತಿ

ಸಂಹಿತೆಯನ್ನು ಒದಗಿಸಿದ್ದನಂತೆ. ಪ್ರಾಚೀನ ಈಜಿಪ್ಟ್ ದೇಶದಲ್ಲಿ ಭಕ್ಷಿಷ್ ಎನ್ನುವ ಮಾತು ಲಂಚವನ್ನೇ ಸೂಚಿಸುತ್ತಿದ್ದಿತು. ಮೆಕ್ಸಿಕೋ ದೇಶದ ಜನರ 'ಮೋರ್ಡಿಡ', ಕೆನ್ಯಾದ 'ದಾಶ್' ಇವೆಲ್ಲ ಲಂಚದ ಪರ್ಯಾಯ ಪದಗಳೇ.

ಕನ್ನಡದಲ್ಲೇ ನೋಡಿ, ಎಷ್ಟೊಂದು ಗಾದೆಗಳು ಲಂಚವನ್ನು ಕುರಿತಿವೆ? ವ್ಯವಹಾರದಲ್ಲಿ ಇಲ್ಲದ್ದು ಭಾಷೆಯಲ್ಲಿ ಬರುತ್ತದೆಯೇ?

'ಲಂಚ ಕೊಟ್ಟರೂ ಸಂಚು ತಿಳಿಯಲಿಲ್ಲ' ಎಂಬುದೊಂದು. 'ಅಂಚೆ ಕಾಗದ ಮುಂಚೆ ಬಂದರೆ ಲಂಚ ಯಾಕೆ?' ಎಂಬುದಿನ್ನೊಂದು.

ಒಳಸಂಚು ಎಷ್ಟಾದರೂ ಗುಟ್ಟಿನದು; ಯಾರೂ ತಿಳಿಯಬಾರದ ವ್ಯವಹಾರ. ಆದರೆ ಅದನ್ನು ತಿಳಿದರೆ ಲಾಭವಿರುವವರಿರುತ್ತಾರೆ. ಅಂಥವರು ಸಂಬಂಧಪಟ್ಟವರ ಕೈ ಬೆಚ್ಚಗೆ ಮಾಡಬೇಕಾಗುತ್ತದೆ. ಹಾಗೆ ಮಾಡಿದರೂ ಗುಟ್ಟು ಗಟ್ಟಿಯಾಗಿರುವ ಸಂದರ್ಭವೂ ಉಂಟೆನ್ನಿ.

ನಮ್ಮ ಕೆಲಸ ಬೇಗನೆ ಕೈಗೂಡಬೇಕು, ಅದಕ್ಕಿರುವ ಅಡೆ-ತಡೆ ತಪ್ಪಬೇಕು ಎಂದು ಬಯಸುವವರು ಹಣ ಬಿಚ್ಚಬೇಕು. ಕೆಲಸವನ್ನು ಮಾಡಿಕೊಡದವರು ಲಂಚದ ಆಸೆಯಿಂದಲೇ ತಡಮಾಡುತ್ತಾರೆ, ಆತಂಕಗಳನ್ನೊಡ್ಡುತ್ತಾರೆ, ಅಲೆದಾಡಿಸುತ್ತಾರೆ, ಬೇಸರಪಡಿಸುತ್ತಾರೆ.

ಲಂಚವಿಲ್ಲದಿದ್ದರೆ ಮೂರು ವರ್ಷ ಹಿಡಿಯುವ ಕೆಲಸ ಲಂಚದಿಂದ ಮೂರೇ ದಿನಗಳಲ್ಲಿ ನಡೆದೀತು!

ಲಂಚಕ್ಕೆ ಈ ಆರ್ಥಿಕ ಕೌಶಲ್ಯ, ವ್ಯವಹಾರ ಸಾಮರ್ಥ್ಯಗಳು ಒದಗಿ ಬಂದದ್ದು ಹೇಗೆ ಎಂಬುದು ಸಮಸ್ಯೆ. ಆಡಳಿತದಲ್ಲಿರುವವರ ಲೋಭ, ಉದ್ಯೋಗಿಗಳ ಬಡತನ, ಅಧಿಕಾರಿಗಳ ದುರಾಸೆ, ವ್ಯವಹಾರದಲ್ಲಿರುವ ಕಟ್ಟುಪಾಡು, ಸರಕಾರದ ಮಿತಿಮೀರಿದ ನಿಯಂತ್ರಣ, ಕಾಳಸಂತೆ ಇತ್ಯಾದಿ ಕಾರಣಗಳನ್ನು ಹೇಳುತ್ತಾರೆ.

ಅದು ಹೇಗಾದರಿರಲಿ. ಲಂಚವೆಂಬುದು ನಾಚಿಕೆಗೆಟ್ಟ ವ್ಯವಹಾರವೆಂಬುದು ಎಲ್ಲರಿಗೂ ಗೊತ್ತು. ಈ ಕಾರಣದಿಂದಲೇ ಅದು ಗುಟ್ಟಾಗಿಯೇ ನಡೆಯುವುದು.

ಲಂಚ ಕೊಟ್ಟವನಾಗಲಿ, ಲಂಚ ತೆಗೆದುಕೊಂಡವನಾಗಲಿ ತಲೆಯೆತ್ತಿ ಬಾಯಿಬಿಟ್ಟು ಲಂಚದ ವಿಚಾರ ಹೇಳಲಾರ.

ಹೀಗಾಗಿ ಲಂಚದ ವಿನಿಮಯ ಒಂದು ಜಟಿಲ ಕಲೆಯಾಗಿ ಪರಿಣಮಿಸಿದೆ.

11. ಅರ್ಥ-ಅನರ್ಥ

ವಿಷ್ಣುಗುಪ್ತನೆಂಬುವನು ಅರ್ಥಶಾಸ್ತ್ರವನ್ನು ರಚಿಸಿದ್ದಾನೆ.

ಮುಖ್ಯವಾಗಿ ಆಳರಸರಿಗೆ ತಮ್ಮ ಸ್ವತ್ತನ್ನು ಉಳಿಸಿಕೊಳ್ಳುವ, ತಮ್ಮ ಜನರನ್ನು ಸರಿಯಾಗಿ ನಡೆಸಿಕೊಳ್ಳುವ, ಪ್ರಜೆಗಳಿಗೆ ಹಿತವನ್ನು ಒದಗಿಸುವ ಮರ್ಮಗಳನ್ನೆಲ್ಲ ಹೇಳುವ ಗ್ರಂಥ ಇದು.

ಇದರಲ್ಲಿ ಹಣದ ವಿಚಾರವೇ ಮುಖ್ಯವಾಗಿ ಬರುವುದರಿಂದ ಇದು ಅರ್ಥಶಾಸ್ತ್ರವೆನಿಸಿಕೊಂಡಿತು. ಆಡಳಿತದಲ್ಲಿ ಹಣವಿಲ್ಲದೆ ಏನು ತಾನೆ ನಡೆದೀತು?

ಅರ್ಥವೆಂದರೆ ಹಣ, ಸುಖದ ಸಾಧನ. ಅದರ ಅರ್ಥ ಅಷ್ಟಕ್ಕೇ ಮುಗಿಯುವುದಿಲ್ಲ. ಉದ್ದೇಶ, ಗುರಿ, ಪ್ರವೃತ್ತಿ, ಪ್ರಯೋಜನ ಎಂಬರ್ಥಗಳೂ ಅರ್ಥವೆಂಬ ಮಾತಿಗಿವೆ.

ಹಾಗೆಂದೇ ಪುರುಷಾರ್ಥವೆಂಬ ಕಲ್ಪನೆ. ಮನುಷ್ಯ ಬದುಕಿನಲ್ಲಿ ಸಾಧಿಸಿಕೊಳ್ಳಬೇಕಾದುದು ಪುರುಷಾರ್ಥ.

ಈ ಪುರುಷಾರ್ಥಗಳಲ್ಲಿ ಅರ್ಥವು ಒಂದು, ಉಳಿದವು ಧರ್ಮ ಮತ್ತು ಕಾಮ. ಈ ಅರ್ಥವನ್ನು 'ಧರ್ಮಮೂಲ'ವೆಂದೂ 'ಕಾಮಫಲ'ವೆಂದೂ ಮೇಲೆ ಹೇಳಿದ ಅರ್ಥಶಾಸ್ತ್ರ ಬಣ್ಣಿಸುತ್ತದೆ.

ಅರ್ಥಕ್ಕೆ ಧರ್ಮವೇ ಆಸರೆಯಾಗಿರಬೇಕು, ಕಾಮವೇ ಪ್ರಯೋಜನವಾಗಿರಬೇಕು. ಇವು ಮೂರೂ ಸೇರಿ 'ತ್ರಿವರ್ಗ'. ಕಾಲಕ್ರಮದಲ್ಲಿ ಸೇರಿಕೊಂಡು ಬಂದದ್ದು ಮೋಕ್ಷ; ಇದು ತ್ರಿವರ್ಗದಿಂದ ಹೊರಗಿದ್ದು 'ಅಪವರ್ಗ'ವೆನಿಸಿಕೊಂಡಿತೆನ್ನಿ.

ಅರ್ಥಶಾಸ್ತ್ರದ ಹರವಿನಲ್ಲಿ ಅರ್ಥವೆಂಬುದು ಪ್ರಧಾನವಾಗಿ, ಅದಕ್ಕೆ ಹೊಂದಿಕೊಂಡು ಬಂದಂತೆ ಧರ್ಮ-ಕಾಮಗಳು ಗೌಣವಾಗಿ, ಆದರೆ ಬಿಡದೆ ಸೇರುತ್ತವೆ.

ಧರ್ಮವನ್ನು ಆಸರೆಯಾಗಿ ಹೊಂದಿರದ ಅರ್ಥ ಕೇವಲ ಅನರ್ಥವೇ. ಕಾಮವನ್ನು ಫಲವಾಗಿ ಹೊಂದಿರದ ಅರ್ಥವೂ ಹಾಗೆಯೇ ಅನರ್ಥ.

ಇನ್ನು ಅರ್ಥಕ್ಕೆ ಕಾರಣವಾಗದ ಧರ್ಮವಾಗಲಿ, ಅರ್ಥದ ಆಸರೆಯನ್ನು ಹೊಂದಿರದ ಕಾಮವಾಗಲಿ ಅನರ್ಥಗಳೇ.

ಅರ್ಥಸಿದ್ಧಿಯೆಂಬುದೊಂದು ಮಾತನ್ನು ವಿಷ್ಣುಗುಪ್ತ ಬಳಸುತ್ತಾನೆ. ಧರ್ಮಾರ್ಥಕಾಮಗಳ ಅನುಬಂಧವೇ ಅರ್ಥಸಿದ್ಧಿಯೆಂದು ಅವನ ಒಕ್ಕಣೆ.

ಅನುಬಂಧವೆಂದರೆ ಹೊಂದಾಣಿಕೆ, ಒಕ್ಕೂಟ. ಅನುಬಂಧದಲ್ಲಿ ಕೊರತೆಯಾದಾಗ ಅನರ್ಥವೇ.

ನಮ್ಮ ವ್ಯವಹಾರದಲ್ಲಿ ಅನುಬಂಧಕ್ಕೆ ಗಮನ ಕೊಡುವುದು ಕಡಮೆಯಾಗಿ ಅರ್ಥಸಾಧನೆಗಾಗಿ ಹೊರಟು ಅನರ್ಥವನ್ನೇ ಕಾಣುತ್ತಿದ್ದೇವೆ. ನಮ್ಮ ರಾಜಕಾರಣ ಧುರೀಣರೂ, ಅರ್ಥಶಾಸ್ತ್ರಜ್ಞರೂ, ಸಮಾಜ ಸುಧಾರಕರೂ ಇದರ ಮರ್ಮವನ್ನರಿಯರು.

ಇನ್ನು ಉದ್ಯಮಿಗಳನ್ನು ಕೇಳುವುದೇ ಬೇಡ. ಅವರು ಬರಿಯ ಅರ್ಥವನ್ನೇ ಅರಸುವವರು. ಧರ್ಮವಾಗಲಿ, ಕಾಮವಾಗಲಿ ಅವರ ಲೆಕ್ಕಕ್ಕೆ ಸಲ್ಲದವು. ಅನುಬಂಧವೆನ್ನುವುದು ಅವರ ಪಾಲಿಗೆ ಮೊಲದ ಕೊಂಬು ಅಷ್ಟೆ.

ನಮ್ಮ ಸಮಾಜದ ಅವ್ಯವಸ್ಥೆಗೆ ಕಾರಣವನ್ನು ಹುಡುಕುವವರು ವಿಷ್ಣುಗುಪ್ತನು ಸೂಚಿಸುವ 'ಅರ್ಥಸಿದ್ಧಿ'ಯ ಸ್ವಾರಸ್ಯವನ್ನು ಅರಿತುಕೊಳ್ಳಬೇಕು.

12. ಸಾಲ-ಸೋಲ

ಸಾಲದ ವಿಚಾರದಲ್ಲಿ ಕೆಲವು ಆರ್ಯೋಕ್ತಿಗಳಿವೆ. ಅವುಗಳಲ್ಲೊಂದು ಸಾಲಗಾರನನ್ನು ಕುರಿತದ್ದು.

ತನ್ನ ವೆಚ್ಚಕ್ಕೆ ಹಣ ಸಾಲದಿದ್ದರೆ ಆತ್ಮಾಭಿಮಾನವೂ ಇರದಿದ್ದರೆ, ಸಾಲ ಮಾಡುತ್ತಾನೆ. ಕೈಯೊಡ್ಡಿ ಬೇಡುತ್ತಾನೆ. ಹೀಗೆ ಹೀನಾಯವಾದ ಅಗತ್ಯ ಕಾಣಿಸಿಕೊಳ್ಳುವುದಾದರೂ ಏತಕ್ಕೆ?

ದುಡಿಯದೆ ಇದ್ದರೆ, ದುಡಿಯಲಾರದೆ ಹೋದರೆ ಹಣ ಬರುವುದು ಹೇಗೆ? ವೆಚ್ಚವಂತೂ ಅಷ್ಟೋ ಇಷ್ಟೋ ಇದ್ದದ್ದೇ. ದುಡಿಮೆಯಿಂದ ಬಂದ ಹಣಕ್ಕೂ ವೆಚ್ಚದ ಅಗತ್ಯಕ್ಕೂ ವಿರಸವಿರುವುದೂ ಉಂಟು.

ಮೇಲೆ ಹೇಳಿದ ಆರ್ಯೋಕ್ತಿ "ಋಣವಾನ್ ಜಾಯತೇ ತ್ರಿಭಿಃ ಕಾಮ ಕ್ರೋಧ ಲೋಭೈಃ" (ಬೃಹಸ್ಪತಿ ಸೂತ್ರ). ಸಾಲಗಾರನಾಗುವುದು ಮೂರರಿಂದ; ಆಸೆ, ಸಿಟ್ಟು, ದುರಾಸೆಗಳಿಂದ.

ಸಂಸ್ಕೃತದಲ್ಲಿ ಕಾಮವೆಂದರೆ ದೈಹಿಕವಾದ ಆಸೆಗಳು. ಇದರಲ್ಲಿ ಸುಖಜೀವನದ ಎಲ್ಲ ವಿವರಗಳೂ ಅಡಗುತ್ತವೆ. ಕ್ರೋಧವೆಂದರೆ ಮುಖ್ಯವಾಗಿ ಅಸಹನೆ. ವಾಣಿಜ್ಯ ಪ್ರಪಂಚದಲ್ಲಿರುವ ಪೈಪೋಟಿ, ಹಗರಣ, ಮೇಲಾಟ, ಸ್ಪರ್ಧೆ ಇವೆಲ್ಲ ಕ್ರೋಧದ ಸೌಮ್ಯ ಮುಖಗಳೇ. ಎದುರಾಳಿಯನ್ನು ಸದೆಬಡಿಯುವ ತವಕ ಹೀಗೆ ಹಲವಾರು ರೀತಿಗಳಲ್ಲಿ ತೋರಿಕೊಳ್ಳುತ್ತವೆ.

ಲೋಭವೆಂದರೆ ದುರಾಸೆ, ಎಷ್ಟು ದೊರೆತರೂ ಮತ್ತಷ್ಟು ಬೇಕೆಂಬಾಸೆ. ಯಾವ ಲಾಭದಿಂದಲೂ ತೃಪ್ತಿ ಸಿಗದೆ, ಸಿಕ್ಕಿದ್ದರಿಂದ ಸಂತೋಷ ಪಡದೆ, ಕೈಗೆಟುಕದುದನ್ನೇ ನೋಡುತ್ತ ಅದಕ್ಕೆ ಕೈಚಾಚುವ ಪ್ರವೃತ್ತಿ.

ಈ ಮೂರೂ ಮನುಷ್ಯನ ಸಂಸ್ಕೃತಿಗೆ ಮಾರಕವಾದವು ಎಂಬ ಕಲ್ಪನೆ ನಮ್ಮ ಸಂಪ್ರದಾಯದ್ದು. ಸಾಲಗಾರನಾಗುವುದನ್ನು ಯಾರೂ ಎದುರು ನೋಡಲಾರರು.

ಆದರೆ ಈಗಿನ ವ್ಯವಹಾರದಲ್ಲಿ ಸಾಲಕ್ಕೊಂದು ಮರ್ಯಾದೆ ಬಂದಿದೆ. ಸರಕಾರವೇ ಸಾಲದ ಮೇಲೆ ನಡೆಯುತ್ತದೆ. ಬ್ಯಾಂಕುಗಳು ಸಾಲಗಾರಿಕೆಯನ್ನು ಪ್ರೋತ್ಸಾಹಿಸುತ್ತವೆ. ಸಾಲದ ಕಂತುಗಳಲ್ಲಿ ಕೊಳ್ಳುವ, ಕೊಡುವ ಬಗೆಗಳು ತೋರಿಕೊಂಡಿವೆ. 'ಕ್ರೆಡಿಟ್ ಕಾರ್ಡ್' ಎನ್ನುವ ಸಾಲದ ಸೌಕರ್ಯವನ್ನೊದಗಿಸುವುದು ಬಳಕೆಗೆ ಬಂದಿದೆ. ಮನೆ ಕಟ್ಟಿಕೊಳ್ಳಲು, ವಾಹನ ಕೊಂಡುಕೊಳ್ಳಲು, ಉದ್ಯಮವನ್ನಾರಂಭಿಸಲು ಸಾಲ ದೊರೆಯುತ್ತದೆ.

ಹೀಗೆ ಸಾಲವೆಂಬುದು ಬದುಕಿನ ಅಂಗವಾಗಿ ಒದಗಿಬರುವ ಸೂಚನೆಗಳು ಸಾಕಷ್ಟಿವೆ. ಸಾಲವೇ ಒಂದು ಸಾಂಸ್ಕೃತಿಕ ನಿಲುವಾಗಿ ಕಾಣಬರುತ್ತಿದೆ.

'ಸಾಲವನ್ನು ಕೊಂಬಾಗ ಪಾಲೋಗರುಂಡಂತೆ' ಎನ್ನುವ ಮಾತಿಗೆ ಈಗೀಗ ಧಾರಾಳವಾಗಿ ನಿದರ್ಶನಗಳು ದೊರೆಯುತ್ತವೆ. ಆದರೆ ಸಾಲವೆಂದ ಮೇಲೆ ತೀರಿಸಲೇಬೇಕಲ್ಲ? ಆಗ 'ಕಿಬ್ಬದಿಯ ಕೀಲು ಮುರಿದಂತೆ' ಆಗುವ ನಿದರ್ಶನಗಳೂ ಇವೆ.

ಸಾಲವನ್ನು ತೀರಿಸಲೇಬೇಕೆಂಬ ನೈತಿಕ ನಿಲುವೂ ಈಗೀಗ ಸಡಿಲವಾಗುತ್ತಿದೆಯೆನ್ನಿ. ಸಾಲವನ್ನು ಮನ್ನಾ ಮಾಡಬೇಕೆಂಬ ಕೂಗು ಅಲ್ಲಲ್ಲಿ ಆಗಾಗ ಕೇಳಿಬರುತ್ತಿಲ್ಲವೆ? ಇಡೀ ಜನಸಮುದಾಯವೊಂದು ಸಾಲಗಾರರಾದಾಗ ಅವರಿಗೆ ಗುಂಪಿನ ಬಲವೂ ಬಂದೊದಗುತ್ತದೆ. ಅವರ ಬೆಂಬಲವನ್ನು ಬಯಸುವ ರಾಜಕೀಯ ಪಕ್ಷಗಳೂ ಅವರ ಕೂಗನ್ನು ಪುರಸ್ಕರಿಸುತ್ತವೆ.

ಸಾಲ ಕಲ್ಪನೆಯೇ ಈಗ ಬದಲಾಗುತ್ತಿದೆ. ಆದರೆ ಅದರ ಹಿನ್ನೆಲೆಯಲ್ಲಿ ಆಸೆ, ಪೈಪೋಟಿ, ದುರಾಸೆಗಳ ಪಾತ್ರವೇನೋ ಉಳಿದುಕೊಂಡಿದೆ.

13. ಅನ್ಯಾಯದ ಹಣ

ಅನ್ಯಾಯದಿಂದ ಹಣ ಮಾಡಿಕೊಳ್ಳುವವರನ್ನು ಕುರಿತು ಭಗವದ್ಗೀತೆಯಲ್ಲಿ ಪ್ರಸ್ತಾಪವೊಂದು ಬಂದಿದೆ. (೧೬, ೧೨).

ನೂರಾರು ಆಸೆಗಳೆಂಬ ಕಟ್ಟುಗಳಿಗೊಳಗಾಗುವುದು ಮೊದಲ ಹೆಜ್ಜೆಯಂತೆ. ಬಯಕೆ, ಮುನಿಸು ಎರಡರಲ್ಲೂ ತೊಡಗುವುದು ಮುಂದಿನ ಹೆಜ್ಜೆ.

ಆಸೆಗಳೆಲ್ಲ ಈಡೇರಬೇಕೆನ್ನುವುದು ಬಯಕೆ. ಇದು ಆಗದಿದ್ದರೆ ಮುನಿಸು; ಅಡ್ಡಿಬಂದವರ ಮೇಲೆ ಸಿಟ್ಟು; ಅವರನ್ನು ಸದೆಬಡಿಯುವ ಸಂಕಲ್ಪ.

ಕೈಗೂಡಲಿಲ್ಲವೆಂದು ಬಯಕೆಯೇನೂ ಇಂಗುವುದಿಲ್ಲ; ಅದರ ಕಾವು ಇನ್ನಷ್ಟು ಏರುತ್ತದೆ. ಕಾವೇರಿ ದುಗುಡದಲ್ಲಿ ದುಮುದುಮುಗುಟ್ಟುತ್ತದೆ. ಗುದ್ದಲು ಕೈ ಮುನ್ನುಗ್ಗುತ್ತದೆ.

ನೆಮ್ಮದಿಯನ್ನು ಹೀಗೆ ಕಳೆದುಕೊಂಡವರು ಹೊರಗಣ ಪದಾರ್ಥಗಳನ್ನೇ ಅವಲಂಬಿಸಿ ಸುಖಪಡಲು ಹೊರಡುವರು. ಆದರೆ ಸುಖದ ನೆಲೆಯೇನೆಂಬುದು ಅವರಿಗೆ ತಿಳಿಯದು.

ಮಿತಿಮೀರಿ, ಹರಡಿ ಹಬ್ಬಿ, ಹುಲುಸಾಗಿ ಬೆಳೆದ ಬಯಕೆಗಳ ಬೆನ್ನಟ್ಟಿ ಹೋಗುವುದೇ ಸುಖವೆಂದು ಬಗೆದು, ಅಂಥ ಸುಖಗಳ ಸಾಲಿಗೆ ಬೇಕಾಗುವ ಹಣವನ್ನು ಪಡೆದುಕೊಳ್ಳುವ ಹವಣಿಕೆ ಅವರದು.

'ಈಹಂತೇ ಕಾಮಭೋಗಾರ್ಥಂ ಅನ್ಯಾಯೇನಾರ್ಥಸಂಚಯಾನ್'. ಇದು ಗೀತೆಯ ಮಾತು.

ಕಾಮಭೋಗವೆಂದರೆ ಬಯಕೆಯ ಪೂರೈಕೆಯೂ ಹೌದು, ಮನಸ್ಸಿಗೆ ಬಂದಂತೆ ಸುಖಪಡುವ ಗೀಳೂ ಹೌದು.

ಇದಿದ್ದರೆ, ಹಣವಿಲ್ಲದಿದ್ದರೆ ಹೇಗೆ?

ಆದರೆ ಹಣವನ್ನು ಪಡೆದುಕೊಳ್ಳಲು ನ್ಯಾಯವಾದ ದಾರಿಯೂ ಉಂಟು. ಅನ್ಯಾಯದ ದಾರಿಯೂ ಉಂಟು. ಇವೆರಡರ ನಡುವೆ ವಿವೇಕವಿರಬೇಕು; ಕಾಮಭೋಗವೇ ಮೇಲೆದ್ದುಕೊಂಡಾಗ ಈ ವಿವೇಕವಿರುವುದಿಲ್ಲ.

ನ್ಯಾಯದ ದಾರಿ ಶ್ರಮಸಾಧ್ಯವಾದದ್ದು; ಸರಳವಾದರೂ ಸುಲಭವಲ್ಲ, ನೇರವಾದರೂ ಮಿತಿಯುಳ್ಳದ್ದು. ಬೇಗನೆ ಕೈಗೂಡುವುದಿಲ್ಲ; ತಾಳ್ಮೆಯಿರಬೇಕು.

ಅನ್ಯಾಯದ ದಾರಿಯಾದರೋ ಹಾರುವ ಕುದುರೆ; ಅದರ ಬೆನ್ನೇರುವುದೊಂದೇ ತಡ, ನಾಗಾಲೋಟ ಕಿತ್ತುತ್ತದೆ. ಸಾಧನೆಗೂ ಸಿದ್ಧಿಗೂ ಅಂತರ ಕಡಮೆ.

ಸಂಸ್ಕಾರ ಊರ್ಜಿತವಾಗಿದ್ದವರು ನ್ಯಾಯದ ದಾರಿಯನ್ನೇ ತುಳಿಯುವರು. ಇನ್ನೊಂದು ಎಷ್ಟು ಆಕರ್ಷಕವಾಗಿದ್ದರೂ ಅದಕ್ಕೆ ಮರುಳಾಗುವುದಿಲ್ಲ. ಅವರಿಗೆ ಸಂಯಮವೂ ಇರುತ್ತದೆ.

ಸಂಸ್ಕಾರದ ಬಲ ಸಾಲದವರು ಚುಟಿಕೆಯಲ್ಲಿ ಚಪ್ಪರ ಹಾಕಲು ಹಾತೊರೆಯುವರು. ಹಿಡಿಯುವ ಹಾದಿ ಹೇಗಾದರಿರಲಿ, ಗುರಿ ಮುಟ್ಟಿದರೆ ಸಾಕು ಎಂದು ಅವರ ಎಣಿಕೆ. ಎಷ್ಟು ಬೇಗ ಕೈಗೂಡಿದರೆ ಅಷ್ಟು ಚೆನ್ನು. ನ್ಯಾಯಾನ್ಯಾಯದ ಅರಿವು ಯಾರಿಗೆ ಬೇಕಾಗಿದೆ? ಭಂಡಧೈರ್ಯವೋ, ಮೋಸಗಾರಿಕೆಯೋ ಅವರಿಗೆ ನೆರವಾಗುತ್ತದೆ.

ಅನ್ಯಾಯ ಗೆಲ್ಲುವಲ್ಲಿ ನ್ಯಾಯ ಸೋಲುವುದು ಸಹಜವೇ.

ಈ ಶಂಕೆಯಿಂದ ನ್ಯಾಯದ ದಾರಿ ಇನ್ನಷ್ಟು ಸೊರಗುತ್ತದೆ. ಮಾಡುವುದೇನು?

14. ಹೋಳಿಗೆ-ಹೆಗ್ಗಣ

ಸಂಸ್ಕೃತದಲ್ಲೊಂದು ಗಾದೆಯಿದೆ– 'ಇಲಿಯ ಬಿಲದ ಬಳಿ ಹೋಳಿಗೆಯನ್ನು ಬಚ್ಚಿಟ್ಟಂತೆ' ಎಂದು (ಮೂಷಿಕಗೃಹೇ ಮೋದಕನ್ಯಾಸಃ).

ಈ ಗಾದೆಯ ಸಂದರ್ಭ, ಧರ್ಮವೆಂದರೆ ಆಗದವನಿಗೆ ದೇಗುಲ ಕಟ್ಟಿಸು, ಪೂಜೆ ಮಾಡಿಸು ಎಂದು ಧನವನ್ನು ದಾನ ಮಾಡುವುದು.

ಧರ್ಮ ಉಳಿಯಬೇಕೆಂಬ, ಜನರ ಧಾರ್ಮಿಕ ಪ್ರವೃತ್ತಿಗೆ ನೆರವಾಗಬೇಕೆಂಬ ಅಪೇಕ್ಷೆ ಇಲ್ಲಿ ದಾನಿಯ ಉದ್ದೇಶವಲ್ಲ; ಧರ್ಮ ಅಳಿದರೇ ಮೇಲೆಂದು ಅವನೆಣಿಕೆ.

ಹೀಗಿರುವಾಗ ದಾನವಾಗಿ ಬಂದ ಧನವನ್ನು ಅವನು ಹೇಗೆ ವಿನಿಯೋಗ ಮಾಡಿಯಾನೆಂಬುದನ್ನು ಊಹಿಸಿಕೊಳ್ಳಬಹುದು. ತಿಳಿಗನ್ನಡದಲ್ಲಿ ಹೇಳುವುದಾದರೆ, ಲಪಟಾಯಿಸುತ್ತಾನೆ.

ರಾಜಕಾರಣಿಗಳ ಮೇಲೆ ಜನ ಇರಿಸುವ ವಿಶ್ವಾಸವೂ ಇಂಥದೇ. ಏನೋ ಒಳ್ಳೆಯದನ್ನು ಮಾಡಿಯಾರೆಂಬ ಆಸೆಯಿಂದ ಅವರಿಗೆ ನಮ್ಮ 'ಮತ' ನೀಡುತ್ತೇವೆ. ನೀಡುವ ಮೊದಲೇನೋ ಅವರಿಗದು 'ಅಮೂಲ್ಯ'ವಾದದ್ದೇ, ನೀಡಿದ ಮೇಲೆ ಅದು ಬೇರೆ ಅರ್ಥದಲ್ಲಿ 'ಅ-ಮೂಲ್ಯ'ವಾಗುತ್ತದೆ; ಬೆಲೆಯಿಲ್ಲದ್ದಾಗುತ್ತದೆ.

ಈ ಪ್ರಸಂಗದಲ್ಲಿ ಇಲಿಯ ಬಿಲವಲ್ಲ; ಹೆಗ್ಗಣದ ಡೊಗರು ಎನ್ನಿ. ನಮ್ಮ 'ಮತ' ಗತಿಸಿತು; ಅವರ ಹಣ ಹೆಚ್ಚಿತು.

ನಾವು ತೆರುವ ನಾನಾ ತೆರನಾದ ತೆರಿಗೆಗಳ ಪಾಡೇನು? ಊರಿನ ಜನರಿಗೆ ಅನುಕೂಲತೆಗಳನ್ನೊದಗಿಸುವುದಲ್ಲವೆ ತೆರಿಗೆಯ ತಾತ್ಪರ್ಯ? ಆಳುವವರಿಗೆ ಹಣದ ಬೆಂಬಲವಿರಬೇಕಾದುದು ಇದಕ್ಕೇ ಅಲ್ಲವೆ?

ಆದರೆ ಆಗುತ್ತಿರುವುದೇನು? 'ಮತ'ವನ್ನು ನೀಡಿ ಆಳರಸರನ್ನು ಆಯ್ಕೆ ಮಾಡಿದ ಮೇಲೆ ಮತದಾರರನ್ನು ಕೇಳುವವರು ಯಾರು? ತೆರಿಗೆಯನ್ನು ತೆತ್ತನಂತರ ತೆರಿಗೆದಾರರ ಪರಿಸ್ಥಿತಿಯೂ ಇದೇ.

'ಕೊಟ್ಟವನು ಕೋಡಗ; ಈಸಿಕೊಂಡವನು ಈರಭದ್ರ'.

ಧರ್ಮಗಳು, ದಾನಗಳು, ದತ್ತಿಗಳು ಇವೆಲ್ಲ ಒಳ್ಳೆಯ ಸಂಕಲ್ಪದಿಂದಲೇ ಮೈದಳೆಯುವುವು. ಮೊದಲಿಗೆ ಉದ್ದೇಶ ಸಾಧನೆಗೇ ಶ್ರಮಿಸುತ್ತಾರೆನ್ನಿ. ಆದರೆ ಬರಬರುತ್ತ ಹಿಂದಿನ ಸಂಕಲ್ಪಶುದ್ಧಿ ಮರೆಯಾಗುತ್ತದೆ; ಸ್ವಾರ್ಥಸಾಧನೆ ಮೂಡಿಕೊಳ್ಳುತ್ತದೆ.

ಯಾವುದೇ ಸಮಾಜವಾಗಲಿ, ಹೋಳಿಗೆ ಮಾಡುವವರೂ ಇರುತ್ತಾರೆ. ಮಾಡಿದವರಿಗಾಗಲಿ, ಮಾಡಿಸಿದವರಿಗಾಗಲಿ ದಕ್ಕದಂತೆ ಕಬಳಿಸುವ ಹೆಗ್ಗಣಗಳೂ ಇರುತ್ತವೆ.

ಬಹುವೇಳೆ, ಮಾಡಿಸಿದ, ಮಾಡಿದ ಜಾಣರು ಮಾಡಿದ್ದನ್ನು ಜೋಪಾನವಾಗಿಡಲು ಹೆಗ್ಗಣಗಳಿಗೇ ಒಪ್ಪಿಸುತ್ತಾರೆ! ಹೋಳಿಗೆಯನ್ನಾಗಲಿ ಹೆಗ್ಗಣವನ್ನಾಗಲಿ ಕಾಣದಾಗ ಅವರ ಜಾಣತನ ಎಷ್ಟೆಂಬುದು ತಿಳಿಯುತ್ತದೆ. ಆಗ ತಿಳಿದರೇನು ಫಲ?

15. ಯೋಗ್ಯರು-ಅಯೋಗ್ಯರು

ಹಾಲು ಕುಡಿಯುವಾಗ ಕೆನೆ ಮೇಲೆ ಬರುವುದಿಲ್ಲವೆ?

ಹಾಗೆಯೇ ಕೊಳೆಯೂ ಕಸವೂ ಮೇಲೆ ತೇಲುತ್ತದೆ!

ಸಮಾಜದಲ್ಲಿ ಮೇಲೆ ಬರುವವರ ವಿಚಾರವೂ ಹೀಗೆಯೇ. ಯೋಗ್ಯರೂ ಮೇಲೆ ಬರುತ್ತಾರೆ, ಅಯೋಗ್ಯರೂ ಮೇಲೆ ಬರುತ್ತಾರೆ.

ಕೆಲವೊಮ್ಮೆ ಮೇಲೆ ಬರಲು ಯೋಗ್ಯರಿಗಿಂತ ಅಯೋಗ್ಯರಿಗೇ ಅನುಕೂಲ ಹೆಚ್ಚು! ಪ್ರಜಾಪ್ರಭುತ್ವದಲ್ಲಿ ಮೇಲೆ ಬರುವ ಅವಕಾಶ ಎಲ್ಲರಿಗೂ ಸಮನಾಗಿಯೇ ಇದೆ. ಸಿದ್ಧಾಂತವೇನೋ ಸರಿಯೆ. ಆದರೆ ಪ್ರಯೋಗದಲ್ಲಿ ಇದು ಕಾಣುವುದಿಲ್ಲ. ಮೇಲೆ ಬರಲು ನಡೆಯುವ ಪೈಪೋಟಿ, ಹಗರಣ, ಸ್ಪರ್ಧೆಗಳನ್ನು ನೋಡಿದಾಗ ಯೋಗ್ಯರು ಅಷ್ಟಾಗಿ ಅಲ್ಲಿ ತಲೆಹಾಕುವಂತೆ ಕಾಣುವುದಿಲ್ಲ.

ಅಯೋಗ್ಯರಿಗೂ ಯೋಗ್ಯರಿಗೂ ತಿಕ್ಕಾಟ ನಡೆದರೆ ಗೆಲ್ಲುವವರು ಅಯೋಗ್ಯರೇ ತಾನೆ? ಅಯೋಗ್ಯರಿಗಿರಬಹುದಾದ ಬಲ ಯಾವುದು?

ಮೇಲೆ ಬರಬೇಕೆಂಬ ಆಸೆ; ಮೇಲೇರಲು ಇರಬೇಕಾದ ಛಲ, ಧೈರ್ಯ; ಹಿಡಿದ ಪಟ್ಟು ಬಿಡದೆ ಮುನ್ನುಗ್ಗುವ ಸಾಹಸ; ಅನೀತಿಯೆಂಬ ಅಳುಕು, ಅಧರ್ಮವೆಂಬ ಅಂಜಿಕೆ ಹತ್ತಿರವೂ ಸುಳಿಯದಿರುವುದು.

ಎಲ್ಲಕ್ಕಿಂತ ಹೆಚ್ಚಾಗಿ, 'ದುಡ್ಡಿದ್ದವನೇ ದೊಡ್ಡಪ್ಪ' ಎಂಬ ದೃಢವಾದ ನಂಬಿಕೆ. ಯಾವುದಕ್ಕಾದರೂ ದುಡ್ಡಿರಬೇಕು; ದುಡ್ಡಿನಿಂದ ಇನ್ನಷ್ಟು ದುಡ್ಡು. ಅಷ್ಟು ದುಡ್ಡಿದ್ದರೆ ಏನನ್ನಾದರೂ ಪಡೆದುಕೊಳ್ಳಬಹುದು; ಯಾರನ್ನಾದರೂ ವಶಮಾಡಿಕೊಳ್ಳಬಹುದು; ಆಗದವರನ್ನು ಇಲ್ಲವಾಗಿಸಬಹುದು. ಹಿಂಬಾಲಕರನ್ನು ಮುಂದೆ ತಳ್ಳಬಹುದು.

ಮೇಲೆ ಬರುವುದೆಂದರೆ ಅಯೋಗ್ಯರ ಪಾಲಿಗೆ ಇದೇ. ಅವರು ಮೇಲೆ ಮೇಲೆ ಬರುವ ಸನ್ನಾಹದಲ್ಲಿ ಮುಖ್ಯಪಾತ್ರ ವಹಿಸುವುದು ಹಣವೇ.

ಹಣವನ್ನೇ ಉತ್ತು, ಹಣವನ್ನೇ ಬಿತ್ತಿ, ಹಣದ ಬೆಳೆಯನ್ನೇ ಬಾಚಿಕೊಳ್ಳುವ ಹವ್ಯಾಸದ ಹರವನ್ನು ಯಾರರಿಯರು? ಹಣಕ್ಕೊಂದು ವಿಚಿತ್ರವಾದ ಮೋಡಿಯಿದೆ; ಅದಕ್ಕೆ ಮರುಳಾಗದವರು ವಿರಳ.

ದಾಸರ ನುಡಿಯಲ್ಲಿ ಸ್ವಲ್ಪ ಮಾರ್ಪಡಿಸಿ 'ಎಲ್ಲಾರು ಮಾಡುವುದು ದುಡ್ಡಿಗಾಗಿ' ಎನ್ನಬಹುದು. ಎಲ್ಲರಲ್ಲಿ ಯೋಗ್ಯರೂ ಸೇರುತ್ತಾರೆನ್ನಿ. ಅವರಾದರೂ ಹಣವಿಲ್ಲದೆ ಏನು ಮಾಡಬಲ್ಲರು?

ಎಲ್ಲರೂ ಮಾಡುವುದು ದುಡ್ಡಿಗಾಗಿ ಆದರೂ ಮಾಡಿದವರಿಗೆಲ್ಲ ದುಡ್ಡು ಕೈಸೇರುತ್ತದೆಂಬ ಭರವಸೆಯಿಲ್ಲವಷ್ಟೇ?

ದುಡ್ಡನ್ನು ಬರಮಾಡಿಕೊಳ್ಳುವಂತೆ ಮಾಡುವ ಮರ್ಮ ತಿಳಿದಿರಬೇಕು. ತಿಳಿದವರು ಮೇಲೆ ಬರಬಲ್ಲರು. ತಿಳಿದವರೇ ಬಹುಮಂದಿಯಿದ್ದರೆ ಬೇರೆಯವರನ್ನು ಬದಿಗೊತ್ತುವ ಗುಟ್ಟನ್ನೂ ಅರಿತಿರಬೇಕು. ದುಡ್ಡಿನಿಂದ ದುಡ್ಡು ದೊಡ್ಡದಾಗುವ ಹದನ ಇಲ್ಲಿ ಮುಖ್ಯ.

ಯೋಗ್ಯರು ಮೇಲೆ ಬರುವುದು ಕಷ್ಟವಲ್ಲವೆ?

16. ಸಂಪಾದನೆ-ಶೋಷಣೆ

ಹಣದ ಸಂಪಾದನೆಯೆಂದೊಡನೆ ಅದಕ್ಕೆ ತೆಕ್ಕೆಹಾಕಿಕೊಂಡು ಬರುವ ವಿವರವೆಂದರೆ ಶೋಷಣೆ.

ಶೋಷಣೆ ಬೇರೆಯವರನ್ನು ಕುರಿತಂತೆ ಇರುವುದು ಸಹಜ.

ವ್ಯಾಪಾರಿಯು ಲಾಭದ ದೃಷ್ಟಿಯಿಲ್ಲದೆ ಹೊರಡುವನೆ? ಅವನಲ್ಲಿ ಸೇರುವ ಹಣ ಬೇರೆಯವರಿಂದಲೇ ಬರಬೇಕಷ್ಟೇ? ಬರಮಾಡಿಕೊಳ್ಳುವ ಉದ್ದೇಶವೇ ಅವನದ್ದು.

ಮಾರುವವನಿಗೆ ಲಾಭವಾಗಬೇಕಾದರೆ ಕೊಳ್ಳುವವನಿಗೆ ನಷ್ಟವಾಗಬೇಕು. ಹಾಗೆಂದೇ ಮಾರುವವರೂ ಇರುತ್ತಾರೆ, ಲಾಭಕ್ಕೆ ಮಾರುತ್ತಾರೆ.

ಮಾರುಕಟ್ಟೆಯ ವ್ಯವಹಾರದಲ್ಲಿ ಜನಸಾಮಾನ್ಯರಿಗೆ ಅಗತ್ಯವಾದ ದವಸ ಧಾನ್ಯಗಳ ಜಾಡು ತಪ್ಪಿಸಿ, ಅಭಾವ ಪರಿಸ್ಥಿತಿಯನ್ನೇರ್ಪಡಿಸಿ, ಕಳ್ಳತನದಿಂದ ಅವನ್ನು ವಿಪರೀತ ಬೆಲೆಗೆ ಮಾರುವ ವ್ಯವಸ್ಥೆಯಿಲ್ಲವೆ?

ಅಂಜಿಕೆಯಿದ್ದವರು ಕತ್ತಲೆಯಲ್ಲಿ ಮಾರುತ್ತಾರೆ, ಕೊಳ್ಳುತ್ತಾರೆ. ಕತ್ತಲೆಯಲ್ಲೇ ಇರುವ ಮಾರುಕಟ್ಟೆಯೊಂದಿದೆಯಷ್ಟೇ?

ಅಂಜಿಕೆಯ ಚಳಿ ಬಿಟ್ಟವರು ನಡುಹಗಲಲ್ಲೇ ಇದೇ 'ಕಾಳಸಂತೆ'ಯ ವ್ಯಾಪಾರ ಮಾಡುತ್ತಾರೆ. ನಾಲ್ಕು ಜನ ಇಂಥವರಿದ್ದರೆಂದರೆ ಉಳಿದವರಿಗೆಲ್ಲ ನೈತಿಕ ಬಲವೊದಗಿ ಬರುತ್ತದೆ. ಕಾಡುಕತ್ತಲ ವ್ಯಾಪಾರಕ್ಕೂ ಬೆಳ್ಳಂಬೆಳಗಿನ ವ್ಯಾಪಾರಕ್ಕೂ ಅಂತರವೇನಿರದು!

ಈ ಬಗೆಯ ಶೋಷಣೆ ಯಾವ ವ್ಯಾಪಾರದಲ್ಲಾದರೂ ಇದ್ದದ್ದೇ. ಯಾವ ಕಾಲದಲ್ಲೂ ಇದು ಇದ್ದೀತು; ಎಲ್ಲ ದೇಶಗಳಲ್ಲೂ ಇದೆ. ಸಹಜವೆಂದೂ ಹೇಳಬಹುದೇನೋ?

ಇಷ್ಟು ಸಾಧಾರಣವಾಗಿರುವುದರಿಂದ ಅದು ಕೆಟ್ಟದ್ದೆಂಬ ಕಲ್ಪನೆಯೂ ಬಾರದು. ಎಲ್ಲರೂ ಮಾಡಿದಾಗ ಅದು ಪಾಪವೆಂದಾದೀತೆ?

ಇದಕ್ಕಿಂತ ದೊಡ್ಡ ಶೋಷಣೆ ಸಂಪನ್ಮೂಲಗಳನ್ನು ಕುರಿತದ್ದು.

ಕೊಳ್ಳುವವನು ನಷ್ಟಕ್ಕೀಡಾದರೆ ಮತ್ತೆ ಹಣವನ್ನು ಗಳಿಸಿಯಾನು, ತನ್ನ ನಷ್ಟವನ್ನು ಹೇಗಾದರೂ ತುಂಬಿಕೊಂಡಾನು.

ಹಣದ ವ್ಯವಸ್ಥೆ ಮನುಷ್ಯನೇ ಮಾಡಿಕೊಂಡದ್ದು ತಾನೇ? ಅದರಲ್ಲಿ ಏರುಪೇರಾದರೆ ಸರಿಪಡಿಸಿಕೊಳ್ಳುವ ಹವಣಿಕೆಯಿರುವುದಿಲ್ಲವೆ?

ಆದರೆ ಸಂಪಾದನೆಯ ದೃಷ್ಟಿಯಿಂದ ಭೂಮಿಯನ್ನೇ ಅಗೆದು ಅದರೊಳಗಿರುವ ನಿಧಿಯನ್ನು ಲೂಟಿ ಮಾಡುವವರಿದ್ದಾರೆ; ಹರಿಯುವ ನೀರನ್ನೇ ಅಡ್ಡಗಟ್ಟಿ, ಕುಲಗೆಡಿಸಿ

ಬಳಸುವವರಿದ್ದಾರೆ; ಬೆಟ್ಟದ ಬಂಡೆಗಳನ್ನು ಕಡಿದುರುಳಿಸಿ ಹಣವನ್ನು ದೋಚಿಕೊಳ್ಳುವವರಿದ್ದಾರೆ. ಗಿಡಮರಗಳನ್ನು ನೆಲಸಮ ಮಾಡಿ ಪುಡಿಕಾಸನ್ನು ಹೆಕ್ಕಿಕೊಳ್ಳುವವರಿದ್ದಾರೆ.

ಇಂಥ ಸಂಪನ್ಮೂಲಗಳು ನಷ್ಟವಾದರೆ ಮತ್ತೆ ಅವನ್ನು ತುಂಬಿಕೊಳ್ಳುವುದು ಸಾಧ್ಯವಿರದು. ಒಮ್ಮೆ ಹೋಯಿತೆಂದರೆ ಮತ್ತೆ ಬಾರದು. ಒಮ್ಮೆ ಹಾಳಾಯಿತೆಂದರೆ ಮತ್ತೆ ಸರಿಯಾಗದು.

ಮನುಷ್ಯನ ದುರಾಸೆಯಿಂದ ಹೀಗೆ ಪ್ರಕೃತಿಯ ಶೋಷಣೆ ನಡೆಯತೊಡಗಿದೆ. ಮನುಷ್ಯ ಮನುಷ್ಯನನ್ನು ಶೋಷಣೆಗೊಳಪಡಿಸಿದರೆ ಅದು ಅವರಿಬ್ಬರ ಪಾಡು. ಎಲ್ಲರಿಗೂ ಅಗತ್ಯವಾದ ನಿಸರ್ಗವನ್ನೇ ಶೋಷಣೆ ಮಾಡಿದರೆ ಎಲ್ಲರಿಗೂ ನಷ್ಟ.

17. ಸಾಲ–ಕೋಳ

ಸರ್ವಜ್ಞಕವಿಯು ಸಾಲದ ವಿಚಾರವಾಗಿ ಹೇಳಿರುವುದನ್ನು ಯಾರರಿಯರು?

ಸಾಲ ಎತ್ತುವಾಗ ಖೀರು ಕುಡಿದಂತೆ; ತೀರಿಸಬೇಕಾಗಿ ಬಂದಾಗ 'ಕೀಲು ಮುರಿದಂತೆ'.

ಇದು ಸಾಮಾನ್ಯರ ಮಾತಾಯಿತು; ಎತ್ತಿದ ಸಾಲವನ್ನು ತೀರಿಸಬೇಕೆನ್ನುವ ಬುದ್ಧಿಯಿದ್ದವರ ಮಾತಾಯಿತು.

ಆದರೆ ದೇಶವನ್ನು ಆಳುವವರು ಎತ್ತಿದ ಸಾಲ ಬೇರೆ ಬಗೆಯದು. ಅದನ್ನು ತೀರಿಸಬೇಕೆಂಬ ಅರಿವು ಆಳುವವರಿಗಿರದು; ಅವರು ಆಳುವ ಅವಧಿ ತೀರ ಸೀಮಿತವಾದುದರಿಂದ, ಸಾಲ ಎತ್ತುವುದಷ್ಟೇ ಅವರು ಮಾಡಬೇಕಾದುದು. ತೀರಿಸುವ ವಿಚಾರ ಅವರಿಗೇಕೆ?

ನಮ್ಮ ದೇಶ ರಾಜಕೀಯವಾಗಿ ಸ್ವತಂತ್ರವಾದಾಗ, ಹದಿನೆಂಟು ಸಾವಿರ ಕೋಟಿ ರೂಪಾಯಿಗಳ ವಿದೇಶಿ ವಿನಿಮಯವಿದ್ದಿತು. ನಲವತ್ತೆಂಟು ವರ್ಷಗಳ ನಂತರ, ಈಗ ಮೂರು ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು ವಿದೇಶಗಳಿಂದ ಎತ್ತಿದ್ದೇವೆ!

ಸ್ವಾಭಿಮಾನವಾಗಲಿ ಸ್ವದೇಶೀ ಕಲ್ಪನೆಯಾಗಲಿ ಇರದ, ವಿದೇಶೀ ಸಂಸ್ಕೃತಿಯನ್ನು ಮೆಚ್ಚಿಕೊಂಡ ನಮ್ಮ ಆಳರಸರು ನಮ್ಮ ಜನರಿಗೆ ದಯಪಾಲಿಸಿರುವ ಕೊಡುಗೆಯೆಂದರೆ ಈ ಸಾಲ. ಈ ಸಾಲದ ಮೊತ್ತ ಎಷ್ಟೆಂದರೆ, ಪ್ರತಿವರ್ಷವೂ ನಾವು ಸಾಲದ ಬಡ್ಡಿಯಾಗಿ ತೆರಬೇಕಾದ ಹಣವೇ ಮೂವತ್ತೈದು ಸಾವಿರ ಕೋಟಿ ರೂಪಾಯಿಗಳು; ನಮ್ಮ ಜನಸಂಖ್ಯೆಯನ್ನು ಎಣಿಸಿದರೆ ಹುಟ್ಟುವ ಒಂದೊಂದು

ಮಗುವಿನ ಮೇಲೂ ಮೂರು ಸಾವಿರ ರೂಪಾಯಿಗಳಷ್ಟು ಸಾಲದ ಹೊರೆಯಿದೆಯಂತೆ!

ಹುಟ್ಟಿದ ಮಗುವಿಗೆ ಈ ಹೊರೆಯ ಅರಿವು ಹೇಗೆ ಇರದೋ ಬೆಳೆದವರಿಗೂ ಅದರ ಅರಿವು ಇರದೆನ್ನಿ. ಇನ್ನು ತೀರಿಸುವ ಹೊಣೆಗಾರಿಕೆ ಹೇಗೆ ಬಂದೀತು?

ಸಾಲವನ್ನು ಕೊಡುವಾತನನ್ನು ಉದಾರಿಯೆನ್ನಬಹುದೇ? ಬಡ್ಡಿಯ ಆಸೆಯಿಂದಲ್ಲವೆ ಅವನು ಸಾಲ ನೀಡುವುದು?

ಸಾಲವನ್ನು ತೀರಿಸುವ ಶಕ್ತಿ ಸಾಲದವರು ಬಡ್ಡಿಯನ್ನಾದರೂ ತೆರಲೇಬೇಕು; ಬಡ್ಡಿಯ ಮೊತ್ತವೇ ಸಾಲದ ಹಣಕ್ಕೆ ಅನೇಕಪಟ್ಟು ಹೆಚ್ಚಾಗುತ್ತದೆ.

ಸಾಲ ಮಾಡಿದವನು ಕೆಳಗೆ; ಸಾಲ ನೀಡಿದವನು ಮೇಲೆ. ಸಾಲ ಕೊಟ್ಟವನು ದಣಿ, ಸಾಲ ಕೊಂಡವನು ಆಳು. ಅವನ ಹಂಗು ಇವನಿಗೆ ಇದ್ದದ್ದೇ.

ದೇಶದ ಪಾಡು ನೋಡಿ. ವಿದೇಶೀ ಸಾಲದಲ್ಲಿ ತತ್ತರಿಸುತ್ತಿರುವ ನಮ್ಮ ದೇಶ ವಿದೇಶೀ ವ್ಯಾಪಾರಿಗಳ ಆರ್ಥಿಕ ಆಕ್ರಮಣವನ್ನು ಸಹಿಸಿಕೊಳ್ಳಬೇಕಾಗಿದೆ. ಅವರು ಹೇಳಿದಂತೆ ನಾವು ಕೇಳಬೇಕಾಗಿದೆ.

ರಾಜಕೀಯ ಸ್ವಾತಂತ್ರ್ಯದೊಂದಿಗೆ ಆರ್ಥಿಕ ಪರಾವಲಂಬನೆ ಕಟ್ಟಿಟ್ಟ ಬುತ್ತಿಯಾಗಿದೆ. ಬೇರೆ ದಾರಿ ಕಾಣದೆ, ಮುಂದಿನ ಆಲೋಚನೆಯಿಲ್ಲದೆ ನಮ್ಮ ನಾಯಕರು ಗ್ಯಾಟ್, ಡಂಕೆಲ್‌ಗಳಂಥ ಒಪ್ಪಂದಗಳ ಸಂಕೋಲೆಗಳಿಗೆ ನಮ್ಮ ದೇಶವನ್ನು ಒಡ್ಡಿದ್ದಾರೆ.

ಕೈತುಂಬ ಸಾಲ; ಕಾಲುಗಳಲ್ಲಿ ಕೋಳ.

ಆದರೆ ದೇಶ ಎಂದಾದರೂ, ಹೇಗಾದರೂ ಸಾಲವನ್ನು ತೀರಿಸಬೇಕಲ್ಲ, ಕೋಳದಿಂದ ಬಿಡಿಸಿಕೊಳ್ಳಬೇಕಲ್ಲ? ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗ ಬೇಕಲ್ಲ?

ಇದಕ್ಕೆ ಸ್ವಾಭಿಮಾನ ಇರಬೇಕು, ಸ್ವಾವಲಂಬನೆಯ ಗೀಳಿರಬೇಕು.

18. ಅಂತೆಗೆ ತಕ್ಕ ಬೊಂತೆ

ಹೂವು ಬೇಕೆನ್ನುವವನು ಒಣಗಿದ ಮರಕ್ಕೆ ನೀರೆರೆಯುವನೆ?

ಅದರ ಕಡೆ ತಿರುಗಿಯೂ ನೋಡುವುದಿಲ್ಲ.

ಹಾಗೆಯೇ, ಹಣ ಬೇಕೆನ್ನುವವರು ಹಣವಿರದ ಹವ್ಯಾಸಕ್ಕೆ ಕೈಹಾಕುವುದಿಲ್ಲ. ಹಣವೆಲ್ಲಿದೆಯೋ ಅಲ್ಲಿಯೇ ಅವರ ಕಣ್ಣು.

ವಿದ್ಯಾಕ್ಷೇತ್ರದಲ್ಲಿ ನೋಡಿ, ವಿದ್ಯಾರ್ಥಿಗಳು ಉತ್ಸಾಹದಿಂದ ಮುನ್ನುಗ್ಗುವುದು ವೈದ್ಯ, ಎಂಜಿನಿಯರಿಂಗ್ ವಿಭಾಗಗಳ ಕಡೆಗೇ. ಏಕೆಂದರೆ ಹಣ ಸಂಪಾದನೆಯ ದಾರಿ ಸುಲಭವಾಗಿರುವುದು, ಹರವಾಗಿರುವುದು ಅಲ್ಲಿಯೇ ಅಲ್ಲವೆ?

ಇದಕ್ಕೆ ಅಗತ್ಯವಾದ ಆಸರೆಯಿಲ್ಲದವರು ವಾಣಿಜ್ಯದ ವಿವಿಧ ಮುಖಗಳತ್ತ ಕಣ್ಣು ಹೊರಳಿಸುತ್ತಾರೆ. ಚಿನ್ನವಿಲ್ಲದಿದ್ದರೆ ಬೆಳ್ಳಿಯಾದರೂ ಆಗಲೆಂದು.

ಇನ್ನು ಸಾಹಿತ್ಯ, ಸಂಗೀತ, ಕಲೆ, ಇತಿಹಾಸ, ಪ್ರಾಚೀನ ಭಾಷೆಗಳು, ತತ್ತ್ವಶಾಸ್ತ್ರ, ಪ್ರಾಕ್ತನವಿದ್ಯೆ ಮೊದಲಾದ ವಿಭಾಗಗಳಿಗೆ ಸೇರುವವರು ಯಾರು? ಬೇರೆಡೆ ಅಡಿಯಿಡಲಾರದವರು.

ವಿದ್ಯೆಯೆಂಬುದು ಉದ್ಯೋಗಕ್ಕೆ ಬಾಗಿಲು ಎಂಬ ಕಲ್ಪನೆಯನ್ನು ನಮ್ಮ ರಾಜಕಾರಣಿಗಳೂ, ವಿದ್ಯಾವಿಚಕ್ಷಣರೂ ಬೆಳೆಸಿ ನಿಲ್ಲಿಸಿದ್ದಾರೆ. ವಿದ್ಯಾಭ್ಯಾಸದ ಗುರಿ ಸಂಪಾದನೆಯ ದಾರಿಯನ್ನು ನೇರ ಮಾಡುವುದಷ್ಟೆ ಎಂದು ನಮ್ಮ ನಾಯಕರೆಲ್ಲರ ನಂಬಿಕೆ, ಉಪದೇಶ.

ಹೀಗಿರುವಾಗ, ಸಂಪಾದನೆಗೆ ಅನುಕೂಲವಾಗದ ವಿದ್ಯೆ ಯಾರಿಗೆ ಬೇಕು?

ಸಂಪಾದನೆಯ ದೃಷ್ಟಿಯಿಂದಲೇ ವಿದ್ಯಾವಿಭಾಗಗಳ ತಾರತಮ್ಯ; ಅಲ್ಲಿ ಅಭ್ಯರ್ಥಿಗಳ ನೂಕು-ನುಗ್ಗಲು ಹೆಚ್ಚು ಕಡಮೆ ಇರುವುದು ಇದರಿಂದಲೇ.

ಸಂಪಾದನೆಯ ಅವಕಾಶ ವಿಪುಲವಾಗಿರುವ ವಿಭಾಗವೆಂದರೆ ಅದು ಎಲ್ಲರಿಗೂ ದಕ್ಕುವುದುಂಟೆ? ಬುದ್ಧಿವಂತರಿಗೆಲ್ಲ ಪ್ರವೇಶವೆಂಬುದೂ ಇಲ್ಲವಲ್ಲ!

ಹಣವಿದ್ದವರು, ಅದನ್ನು ಪೋಲು ಮಾಡಬಲ್ಲವರು ಮಾತ್ರ ಹಣವನ್ನು ತೆತ್ತು ತಮ್ಮ ಮಕ್ಕಳನ್ನು ಸಂಪಾದನೆಗೆ ನೆರವಾಗುವ ವಿಭಾಗಗಳಿಗೆ ಸೇರಿಸುತ್ತಾರೆ. ಹಣವಿದ್ದವರಿಗೇ ಹೆಚ್ಚು ಹಣದ ಆಸೆಯಲ್ಲವೆ?

ಹಣವಿಲ್ಲದವನು ಹಣಕ್ಕೆ ಬಾಯಿಬಿಟ್ಟರೆ ಪ್ರಯೋಜನವೇನು?

ಹಣವಿದ್ದವನು ಅದನ್ನು ಚೆಲ್ಲಬೇಕು; ಚೆಲ್ಲಿದ್ದಕ್ಕಿಂತ ಅನೇಕ ಪಟ್ಟು ಹೆಚ್ಚು ಹಣವನ್ನು ಪಡೆದುಕೊಳ್ಳುವ ಆಸೆ ಅವನಿಗಿರುವುದಿಲ್ಲವೆ? ವಿದ್ಯೆ ದುಬಾರಿಯೆಂದ ಮೇಲೆ ಅದರಿಂದ ಒದಗುವ ಉದ್ಯೋಗವೂ ದುಬಾರಿಯಾಗದೆ ಉಂಟೆ?

ಇದೊಂದು ವಿಷವೃತ್ತ. ವೈದ್ಯವಿದ್ಯೆ ಸಾಮಾನ್ಯರಿಗೆ ಸಾಧ್ಯವಿಲ್ಲ; ಮುಂದೆ ವೈದ್ಯಕ್ಕೆ ತೆರಬೇಕಾದ ವೆಚ್ಚವನ್ನೂ ಸಾಮಾನ್ಯರು ಭರಿಸಲಾರರು!

ಶ್ರೀಮಂತರ ಮಕ್ಕಳೇ ವೈದ್ಯರಾಗುವವರು, ಅವರ ಬಳಿ ಬರುವ ರೋಗಿಗಳೂ ಶ್ರೀಮಂತರೇ ಇರಬೇಕು. ಬಡರೋಗಿಗಳತ್ತ ವೈದ್ಯರ ಗಮನ ಹರಿಯಲೇಕೆ?

ಒಣಗಿ ನಿಂತ ಮರದಿಂದ ಹೂವು ದೊರೆಯುವುದೆ? 'ನ ಪುಷ್ಪಾರ್ಥೀ ಸಿಂಚತಿ ಶುಷ್ಕತರುಂ'.

19. ಸಾಧನೆ-ಸಿದ್ಧಿ

ಸಂಸ್ಕೃತದಲ್ಲೊಂದು ಮಾತಿದೆ–

'ಯತ್ನವನ್ನಂತೂ ಮಾಡು, ಕೈಗೂಡದಿದ್ದರೆ ತಪ್ಪೇನು?' ಎಂಬರ್ಥದ್ದು.

ಕೈಗೂಡಬೇಕೆಂದೇ ಯತ್ನವನ್ನು ಮಾಡಬೇಕಲ್ಲವೆ? ಕೈಗೂಡುವುದಿಲ್ಲ ಎಂಬುದು ಮೊದಲೇ ತಿಳಿದಿದ್ದರೆ ಯತ್ನವನ್ನು ಮಾಡುವವರು ಯಾರು?

ಕೈಗೂಡಲಿ, ಬಿಡಲಿ ಯತ್ನವನ್ನು ಮಾಡುವುದು ನನ್ನ ಧರ್ಮ, ನನ್ನ ಕರ್ತವ್ಯ ಎಂದು ಭಾವಿಸುವವರನ್ನು ಕುರಿತದ್ದು ಮೇಲಿನ ಮಾತು.

ಮಾಡಲು ಹೊರಟಿದ್ದೆಲ್ಲವೂ ಕೈಗೂಡುತ್ತದೆ ಎಂದು ನಿಗದಿಯಾಗಿ ಹೇಳಲಾದೀತೆ? ಅಥವಾ ಮಾಡುವುದಷ್ಟರಿಂದಲೇ ಕೈಗೂಡುವುದಾದೀತೋ?

ಎರಡರ ನಡುವೆ ಇರುವ ವಿವರಗಳ ಮೇಲೆ ನಮ್ಮ ಅಂಕೆಯಿದೆಯೇ?

ಉದ್ಯಮವು ಸಫಲವಾಗಬೇಕೆಂಬ ಆಸೆಯಿರುವುದೇನೋ ಸರಿಯೆ. ಆದರೆ ಸಫಲವಾಗಿಯೇ ತೀರುವುದೆಂಬ ನಂಬಿಕೆಯಿರಲೇಬೇಕೆ?

ಸಫಲವಾದೀತೆಂಬ ನಿರೀಕ್ಷೆಯಿದ್ದರೇನೋ ಮಾಡುವ ಯತ್ನದಲ್ಲಿ ಉತ್ಸಾಹವಿರುತ್ತದೆ, ದಿಟ. ಫಲಾಕಾಂಕ್ಷೆಯಿದ್ದರಲ್ಲವೆ ಉದ್ಯಮ?

ಕೈಗೂಡುವುದೋ ಬಿಡುವುದೋ ಎಂಬ ಶಂಕೆಯಿದ್ದರೆ ಯತ್ನವೂ ಅಷ್ಟೇ ಸಡಿಲವಾಗುತ್ತದೆ, ಇನ್ನು ಸಫಲವಾಗುವ ಭರವಸೆಯೆಲ್ಲಿಯದು?

ತಾತ್ಪರ್ಯವಿಷ್ಟು: ಯತ್ನ ಮಾಡುವುದು ನಮ್ಮ ಕೈಯಲ್ಲಿದೆ, ಅದು ಪುರುಷಕಾರ. ಕೈಗೂಡುವುದು ನಮ್ಮ ಅಧೀನವಲ್ಲ, ಅದರಲ್ಲಿ ನಮ್ಮಯತ್ನವೊಂದೇ ಕೆಲಸ ಮಾಡುವುದಿಲ್ಲ. ಅದನ್ನು ಬೇಕಿದ್ದರೆ ಅದೃಷ್ಟವೆನ್ನಿ.

ಅದೃಷ್ಟವೆಂದರೆ ಕಣ್ಣಿನಿಂದ ಕಾಣಲಾಗದ್ದು, ಮನಸ್ಸಿನಿಂದ ಗ್ರಹಿಸಲಾಗದ್ದು. ನಮಗೇನೂ ತಿಳಿಯದು ಎನ್ನುವುದಕ್ಕೆ ಅದೊಂದು ಸಂಸ್ಕೃತದ ಮಾತು ಅಷ್ಟೆ.

ಅದೃಷ್ಟವನ್ನು ನಮಗೆ ಅನುಕೂಲವಾಗುವಂತೆ ಮಾಡಿಕೊಳ್ಳುತ್ತೇವೆ ಎಂದು ಯಾರಾದರೂ ಹೊರಡಬಹುದೆ? ಅದು ಅದೃಷ್ಟದ ಕಲ್ಪನೆಗೆ ವಿರುದ್ಧವಾದುದು!

ಅದು ಆಕಸ್ಮಿಕ, ತಾನಾಗಿ ಬರುವಂಥದು. ನಮ್ಮ ಸಾಮರ್ಥ್ಯಕ್ಕೆ, ಉತ್ಸಾಹಕ್ಕೆ ಅದೇನು ಬಗ್ಗುವಂಥದಲ್ಲ. ಅದು ಬರುವ ಸುಳಿವೂ ನಮಗೆ ಸಿಗಲಾರದು. ಅದರ ಒಲವು, ನಿಲುವು, ನೀತಿ, ರೀತಿಗಳೇನೋ ಯಾರು ಬಲ್ಲರು?

ಅದೃಷ್ಟವನ್ನು ನಂಬಿಕೊಂಡು ಯಾರೂ ಉದ್ಯಮವನ್ನಾರಂಭಿಸುವುದಿಲ್ಲ. ಉದ್ಯಮವನ್ನಾರಂಭಿಸುವಾಗ ಇರಬಹುದಾದ ಅದೃಷ್ಟ ಅದು ಮುಗಿಯುವ ವೇಳೆಗೆ ಮಾಯವಾಗಬಹುದು.

ನಮ್ಮ ಸಾಮರ್ಥ್ಯವನ್ನೂ ಅಗತ್ಯವನ್ನೂ ನೋಡಿಕೊಂಡು ಉದ್ಯಮಕ್ಕೆ ತೊಡಗುವುದು ಜಾಣತನ. ಉದ್ಯಮಕ್ಕೆ ತೊಡಗಿದ ಮೇಲೆ ಪ್ರಾಮಾಣಿಕವಾಗಿ ದುಡಿಯಬೇಕಾದುದು ಧರ್ಮ.

ಉದ್ಯಮ ಕೈಗೂಡಿದರೇನೋ ಒಳ್ಳೆಯದೇ. ಒಂದು ವೇಳೆ ಕೈಗೂಡದಿದ್ದರೂ ಪ್ರಾಮಾಣಿಕವಾಗಿ ದುಡಿದದ್ದು ವ್ಯರ್ಥವಾಗುವುದಿಲ್ಲ. ಅದರಿಂದಲೇ ಒಂದು ಪ್ರಯೋಜನವಿಲ್ಲವೆ?

ಕೈಗೂಡಲಿಲ್ಲವೆಂಬ ಕೊರಗು ನಮ್ಮನ್ನು ಕಾಡುವುದಿಲ್ಲ.

ಮಾಡಬಾರದ್ದನ್ನು ಮಾಡಹೊರಟು ಕೈಗೂಡಿದರೂ ಅದರಿಂದ ಸುಖವಿದೆಯೆ? ಸಮಾಧಾನವಿದೆಯೆ?

ಹಿಡಿದು ಹೊರಟ ದಾರಿ ಸರಿಯಾಗಿರಬೇಕಾದುದು ಮುಖ್ಯ.

20. ಕೃಷಿಗೆ ಪೇಟೆಂಟ್

ಆರ್ಥಿಕ ವ್ಯವಸ್ಥೆಯಲ್ಲಿ ಪೇಟೆಂಟ್ ಎಂಬ ಕಲ್ಪನೆಯುಂಟು. ಯಾರೋ ಒಬ್ಬ ತನ್ನ ಬುದ್ಧಿಶಕ್ತಿಯಿಂದ, ತನ್ನ ಶ್ರಮದಿಂದ ಏನನ್ನೋ ತಯಾರಿಸುತ್ತಾನೆನ್ನಿ. ಉಳಿದವರು ಅದನ್ನು ಬಳಸಬೇಕಾದರೆ ಅವನ ಹಕ್ಕನ್ನು ಮನ್ನಣೆ ಮಾಡಬೇಕಾದುದು ಸರಿಯೆ.

ಈ ಪೇಟೆಂಟ್ ಎಂಬ ಕಲ್ಪನೆ ಕೃಷಿಗೂ ಅನ್ವಯಿಸುತ್ತದೆಯೇ?

ಯಾರೋ ಒಬ್ಬ ಯಾವುದೋ ಹೊಸ ಸಂವಿಧಾನವನ್ನು ಅನುಸರಿಸಿ ಭೂಮಿಯಿಂದ ಹೆಚ್ಚು ಬೆಳೆಯನ್ನು ತೆಗೆಯುವ, ಅಥವಾ ಸಸ್ಯದ ಹೊಸ ತಳಿಯೊಂದನ್ನು ಸಿದ್ಧಪಡಿಸುವ ಪ್ರಯತ್ನ ಮಾಡಿದಾಗ ತನ್ನ ಸಂಶೋಧನೆಯನ್ನು ಅಥವಾ ತಯಾರಿಕೆಯನ್ನು ಪೇಟೆಂಟ್ ಮಾಡಿಕೊಳ್ಳುವುದು ನ್ಯಾಯವೇ?

ನ್ಯಾಯವಲ್ಲವೆಂದು ನಮ್ಮವರು ಹಿಂದಿನಿಂದ ನಂಬಿರುವರು. ನೆಲ ಎಲ್ಲರಿಗೂ ಸೇರಿದ್ದು; ಮಳೆ, ಗಾಳಿ, ನದಿ, ಕೊಳಗಳಂತೆ. ನೆಲದಲ್ಲಿ ಕೃಷಿ ಮಾಡಿ ಬೆಳೆ ತೆಗೆದಾಗ, ಯಾವಾತನು ಕೃಷಿ ಮಾಡಿದ್ದಾನೋ ಅವನಿಗೆ ಬೆಳೆ ಸಲ್ಲುತ್ತದೆ. ಆದರೆ ಕೃಷಿ ಮಾಡಿ ಬೆಳೆ ತೆಗೆಯುವುದು ಅವನು ಕಾದಿರಿಸಿಕೊಳ್ಳುವಂಥ ಹಕ್ಕಾಗುವುದಿಲ್ಲ.

ಅವನು ನೆಲದಿಂದ ಪಡೆದುಕೊಳ್ಳುವ ಬೀಜ ಅವನ ಸ್ವಂತ ಹಕ್ಕಾಗುವುದಿಲ್ಲ. ಅವನು ತೆಗೆದ ಬೆಳೆ ಬೇರೆ ಬೆಳೆಗಳಿಗಿಂತ ಸ್ವಲ್ಪ ಭಿನ್ನವಾಗಿದ್ದ ಮಾತ್ರಕ್ಕೆ ಅದರ ಮೇಲೆ ತನ್ನ ಹಕ್ಕನ್ನು ಕಾದಿರಿಸಿಕೊಳ್ಳಬೇಕಾದುದು ಸರಿಯಲ್ಲ.

ಬೇರೆ ಉತ್ಪಾದನೆಗಳಂತಲ್ಲ ಕೃಷಿ. ಇದರಲ್ಲಿ ನಿಸರ್ಗದ ಪಾತ್ರ ಹೆಚ್ಚಿನದು. ಮುಖ್ಯವಾಗಿ ಭೂಮಿಯ ಸಂಪತ್ತು. ಇದರಲ್ಲಿ ಮನುಷ್ಯನ ಬುದ್ಧಿವಂತಿಕೆ ಕೆಲಸ ಮಾಡುವುದಾದರೂ ಎಲ್ಲ ಮನುಷ್ಯರಿಗೂ ಸಮನಾಗಿಯೇ ದೊರಕಬೇಕಾದುದು.

ಇದು ನಮ್ಮ ದೇಶದವರ ದೃಷ್ಟಿ. ಇದೇ ದೃಷ್ಟಿಯನ್ನು ಪಾಶ್ಚಾತ್ಯ ಸಂಸ್ಕೃತಿಯಲ್ಲೂ ಕಾಣಬಹುದು. ಮುಂದುವರಿದ ದೇಶಗಳಲ್ಲಿ ಕೂಡಾ ಕೃಷಿಯ ಉತ್ಪಾದನೆಗಳನ್ನು ಪೇಟೆಂಟ್ ನಿಯಮಗಳಿಗೆ ಒಳಪಡಿಸಲಿಲ್ಲ.

ಆದರೆ ಈಚೆಗೆ, ಮುಂದರಿದವೆಂಬ ದೇಶಗಳಲ್ಲಿ ಕೆಲವರು ಪೇಟೆಂಟ್ ನಿಯಮಗಳ ಅನ್ವಯ ಕೃಷಿಯ ಕ್ಷೇತ್ರದಲ್ಲೂ ಆಗಬೇಕೆಂದು ವಾದಿಸುತ್ತಿದ್ದಾರೆ. ದುರಾಸೆಯೇ ಇವರ ಉದ್ದೇಶವೆಂದು ಬೇರೆ ಹೇಳಬೇಕಾದುದೇ ಇಲ್ಲ.

ಬಿತ್ತುವ ಬೀಜಗಳ ಮೇಲೆ, ಬೆಳೆಯುವ ದವಸ-ಧಾನ್ಯಗಳ ಮೇಲೆ 'ಉತ್ಪಾದಕರ ಹಕ್ಕು'ಗಳನ್ನು ಕಾದಿರಿಸಿಕೊಳ್ಳುತ್ತಿದ್ದಾರೆ. ಇವರ ಅಪ್ಪಣೆಯನ್ನು ಪಡೆಯದೆ, ಅಪ್ಪಣೆಗಾಗಿ ಹಣವನ್ನು ತೆರದೆ, ಬೇರೆ ಯಾರೂ ಈ ಬೀಜಗಳನ್ನು ಬಳಸುವಂತಿಲ್ಲ, ಈ ದವಸ-ಧಾನ್ಯಗಳನ್ನು ತೆಗೆಯುವಂತಿಲ್ಲ.

ಕೃಷಿಯೇ ಪ್ರಮುಖ ಜೀವನೋಪಾಯವಾದ ನಮ್ಮ ದೇಶದ ಮೇಲೂ ಈ ಜನರ ವಕ್ರದೃಷ್ಟಿ ಬಿದ್ದಿದೆ.

ಡಂಕೆಲ್ ಒಪ್ಪಂದದಲ್ಲಿ ನಮ್ಮ ದೇಶದ ಕೃಷಿಕ್ಷೇತ್ರದಲ್ಲೂ ಪೇಟೆಂಟ್ ಅನಿಷ್ಟ ಒದಗಿಬರುತ್ತದೆ. ನಮ್ಮ ರೈತರು ತಮ್ಮ ಬೆಳೆಗೆ ಬೇರೆ ದೇಶದ ಲೋಭಕಾರರಿಗೆ ಹಣ ತೆರಬೇಕಾಗಿ ಬರುತ್ತದೆ.

21. ಆರ್ಥಿಕ ಶೋಷಣೆ

ವಾಣಿಜ್ಯ, ಉದ್ಯಮಗಳ ಉದ್ದೇಶವೇನು?

ಜನರಿಗೆ ಬೇಕಾಗುವ ಪದಾರ್ಥಗಳ ಉತ್ಪಾದನೆ, ತಯಾರಿಕೆ. ಬೇಕೆನ್ನುವವರಿಗೆ ವಿತರಣೆ, ಬಳಕೆ.

ಉತ್ಪಾದನೆ ಮಾಡುವುದು ಬಳಕೆಗಾಗಿ.

ಮೊದಲಲ್ಲಿ ಜನರು ತಮಗೆ ಬೇಕಾದುದನ್ನು ತಾವೇ ತಯಾರಿಸಿ ಕೊಳ್ಳುತ್ತಿದ್ದರು. ಬರಬರುತ್ತ ತಯಾರಿಕೆ ಮಾಡುವವರೇ ಬೇರೆಯಾದರು, ಬಳಸುವವರೇ ಬೇರೆಯಾದರು. ಎರಡೂ ಜನರ ನಡುವೆ ವಿತರಣೆ ಮಾಡುವವರು.

ತಯಾರಿಸುವವರಿಗೆ ತಾವು ತಯಾರಿಸುವುದೇನು ಬೇಡ, ಅಥವಾ ತಯಾರಿಸುವುದೆಲ್ಲವೂ ಬೇಕಾಗಿರುವುದಿಲ್ಲ. ಬಳಸುವವರು ತಮಗೆ ಬೇಕಾದುದನ್ನು ತಾವೇ ತಯಾರಿಸಿಕೊಳ್ಳುವುದಿಲ್ಲ. ವಿತರಣೆ ಮಾಡುವವರು ತಯಾರಿಸುವುದೂ ಇಲ್ಲ, ಬಳಸುವುದೂ ಇಲ್ಲ.

ತಮಗೆ ಬೇಡದ ವಸ್ತುವನ್ನು ತಯಾರಿಸುವುದಾದರೂ ಏತಕ್ಕೆ? ತಾವು ತಯಾರಿಸದೆ, ಬಳಸದೆ ಇರುವ ವಸ್ತುವನ್ನು ವಿತರಣೆ ಮಾಡುವ ಶ್ರಮವೇತಕ್ಕೆ?

ಲಾಭವೇ ಉದ್ದೇಶ.

ವಾಣಿಜ್ಯ, ಉದ್ಯಮಗಳಲ್ಲಿ ಜನ ತೊಡಗುವುದು ಬಹು ಜನರ ಹಿತಕ್ಕಾಗಿ ಅಲ್ಲ, ತಮ್ಮ ಲಾಭಕ್ಕಾಗಿ. ತಯಾರಿಕೆಯನ್ನೂ ಮಾಡದೆ, ವಿತರಣೆಯನ್ನೂ ಮಾಡದೆ, ಬಳಸುವುದೊಂದನ್ನೇ ಮಾಡುವವರ ಪಾಲಿಗೆ ಇರುವುದು ಶೋಷಣೆಗೆ ತುತ್ತಾಗುವುದಷ್ಟೆ.

ಹಲವರ ನಷ್ಟ ಒಬ್ಬರ ಲಾಭ. ಲಾಭದ ಆಸೆಗೆ ಪೈಪೋಟಿ. ನಷ್ಟ ಮಾಡಿಕೊಳ್ಳಲು ಎಲ್ಲಿಯ ನುಗ್ಗಾಟ?

ಜನರಿಗೆ ಬೇಕಾಗುವ ವಸ್ತುಗಳನ್ನು ತಯಾರಿಸುವುದು, ಮಾರಾಟ ಮಾಡುವುದು ಎಂದಿನಿಂದಲೂ ಇದ್ದದ್ದೇ; ವಾಣಿಜ್ಯ, ಉದ್ಯಮ ಮೊದಲಾದದ್ದೇ ಹೀಗೆ.

ಆದಗೆ ಜನರಿಗೆ ವಸ್ತುಗಳು ಬೇಕಾಗುವಂತೆ ಮಾಡುವ ಪ್ರಯತ್ನವು ವಾಣಿಜ್ಯ, ಉದ್ಯಮಗಳೊಂದಿಗೆ ಸೇರಿಕೊಂಡು ಬಂದಿತು.

ದಿಟವಾಗಿ ಜನರಿಗೆ ಬೇಡವಾದ, ಮುಂದೆ ತೊಂದರೆಯನ್ನೇ ಉಂಟು ಮಾಡುವ ಪದಾರ್ಥಗಳನ್ನೂ ತಯಾರಿಸಿ, ಅವನ್ನು ಆಕರ್ಷಕವಾಗಿ ಜನರ ಮುಂದೆ ಕಾಣಿಸಿ, ಅವರ ಬಾಯಲ್ಲಿ ನೀರೂರಿಸಿ ತಾವು ಲಾಭಗಳಿಸುವ ಉಪಾಯ ಇದು.

ಇಂಥ ಪದಾರ್ಥಗಳು ಮಾರುಕಟ್ಟೆಯಲ್ಲಿ ಹೇರಳವಾಗಿವೆ. ಮರುಳು ಮಾಡುವ ರೂಪ, ಮೈಮರೆಸುವ ವರ್ಣನೆ, ನಮ್ಮ ಹಿತಕ್ಕೆಂದೇ ಸಿದ್ಧವಾದುದೆಂಬ ಭ್ರಮೆಗಳಿಂದ ಮಾರುಕಟ್ಟೆಯಿಂದ ಮನೆಗೆ ಸೇರುತ್ತವೆ; ಮೈಯೊಳಗೆ ನುಗ್ಗುತ್ತವೆ.

ಇವುಗಳ ಬಯಕೆ, ಬೇಡಿಕೆ ಜನರಲ್ಲಿ ಹೆಚ್ಚಿದಷ್ಟೂ ತಯಾರಿಸುವವರಿಗೆ ಸಂತೋಷವೇ. ಕುರಿ ಕೊಬ್ಬಿದಷ್ಟೂ ಕಟುಕನಿಗೆ ಲಾಭವೇ.

ತಯಾರಿಸುವಾಗ, ಬಹುಜನರ ಹಿತ, ಸುಖ ಎಂಬ ದೃಷ್ಟಿಯೇನಿರದು. ಬಳಕೆದಾರರ ಕಣ್ಣಿಗೆ ಮಣ್ಣೆರಚಿ, ಇವರ ಕಿಸೆಯೊಳಗೆ ಕೈಹಾಕಿ, ತಾವು ದೊಡ್ಡ ಕುಳವಾಗುವ ಹದನವನ್ನು ಶೋಷಣೆಯೆಂದು ಕರೆಯಬೇಕು.

ಆದರೆ ವಾಣಿಜ್ಯ-ಉದ್ಯಮಗಳಲ್ಲಿ ಈ ಮಾತನ್ನು ಬಳಸುವುದಿಲ್ಲ. ಬಳಸದಿದ್ದ ಮಾತ್ರಕ್ಕೆ ಅದೇನು ಇಲ್ಲವಾದೀತೆ?

ಯಂತ್ರಗಳು ಮಾಡುವುದು ಶೋಷಣೆಯೇ; ಯಂತ್ರವನ್ನು ಏರ್ಪಡಿಸಿ ಕೊಳ್ಳುವುದೂ ಶೋಷಣೆಯೇ.

ಬಳಕೆಗಾಗಿ ಉತ್ಪಾದನೆ ಎಂಬುದು ಮರೆಯಾಗಿ, ಲಾಭಕ್ಕಾಗಿ ಉತ್ಪಾದನೆ ಎಂಬುದು ತೋರಿಕೊಂಡಾಗ ಶೋಷಣೆಗೆ ಎಡೆಮಾಡಿಕೊಡದೆ ಉಂಟೆ?

22. ಹಣ-ಗುರಿ-ದಾರಿ

ಗಾಂಧೀಜಿಯವರು ಯಾರೂ ಹಣ ಮಾಡಿಕೊಳ್ಳಬಾರದೆಂದು ಹೇಳಲಿಲ್ಲ.

ಆದರೆ ಹಣ ಮಾಡಿಕೊಳ್ಳುವವರು ನೀತಿಯ ದಾರಿಯನ್ನೇ ಹಿಡಿಯ ಬೇಕೆಂಬುದು ಅವರ ನಿಲುವು.

ಹಿಡಿಯುವ ದಾರಿ ಯಾವುದಾದರಿರಲಿ, ಬಯಸಿದ ಗುರಿಯುನ್ನು ಮುಟ್ಟಿದರಾಯಿತು ಎಂಬುದನ್ನು ಅವರು ಒಪ್ಪಲಿಲ್ಲ.

ಗುರಿಯಷ್ಟೇ ದಾರಿಯೂ ಮುಖ್ಯ. ಗುರಿಯತ್ತಲೇ ಕಣ್ಣಿಟ್ಟು ಅದರತ್ತ ನಡೆಯುವುದು ಹೇಗೆಂಬುದನ್ನು ಗಮನಿಸದೆ ಇದ್ದರೆ ಹೇಗೆ?

ಎರಡರ ನಡುವೆ ವಿರಸವಿದ್ದಿತೆನ್ನಿ–ಆಗ, ಗಾಂಧೀಜಿಯವರ ಪ್ರಕಾರ, ದಾರಿಯೇ ಗುರಿಗಿಂತ ಮುಖ್ಯವಾದುದು.

ಸರಿಯಾದ ದಾರಿ ಇದೆಂದು ನಿಶ್ಚಯ ಮಾಡಿಕೊಂಡ ಮೇಲೆ, ಅದನ್ನು ಕೈಬಿಡದೆ ಹಿಡಿಯಬೇಕು, ಗುರಿಯನ್ನು ಮುಟ್ಟುವುದಾದರೆ ಸರಿ; ಮುಟ್ಟಲಾಗದಿದ್ದರೆ ಚಿಂತೆಯಿಲ್ಲ.

ನಮ್ಮ ಸಂಸ್ಕೃತಿಯ ಮೂಲತತ್ವವೇ ಇದೆಂದು ಗಾಂಧೀಜಿ ಮನಗಂಡರು. ಆರ್ಥಿಕ ಪ್ರಪಂಚದಲ್ಲಿ ಇದರ ಅನ್ವಯವಾಗಬೇಕೆಂಬ ಕಾತರ ಅವರಿಗಿದ್ದಿತು.

ಹೊರದೇಶದ ಪ್ರಭಾವ ನಮ್ಮ ಉದ್ಯಮಿಗಳ ಮೇಲೆ ಬಿದ್ದಾಗ, ವ್ಯಾಪಾರದಲ್ಲಿ ನೀತಿಯ ದಾರಿ ಹಿಂದೆ ಬಿದ್ದಿತು; ಲಾಭದ ಉದ್ದೇಶ ಮುಂದೆ ಬಂದಿತು.

ವ್ಯಾಪಾರವೆಂದರೆ ಲಾಭವೇ ಗುರಿಯಷ್ಟೆ? ನೀತಿಯನ್ನು ಬಿಡಲಾರದ ವ್ಯಾಪಾರಿ ಲಾಭಗಳಿಸುವುದಾದರೂ ಹೇಗೆ?

ನಮ್ಮ ವ್ಯಾಪಾರಿಗಳೆಲ್ಲರೂ ಹಿಂದೆ ನೀತಿಪರರೇ ಆಗಿದ್ದರೆಂದು ಅರ್ಥವಲ್ಲ. ನೀತಿಗೂ ವ್ಯಾಪಾರಕ್ಕೂ ಸಂಬಂಧವಿದ್ದುದು ಕಡಮೆಯೇ. ಆದರೆ ಸಂಸ್ಕೃತಿಯ ಮೌಲ್ಯಗಳಲ್ಲಿ ನೀತಿ, ನ್ಯಾಯ, ಧರ್ಮ ಇದನ್ನು ಎಲ್ಲರೂ ಒಪ್ಪಿದ್ದರು. ವ್ಯವಹಾರದಲ್ಲಿ ಅನುಸರಿಸಲಿ ಬಿಡಲಿ, ಭಾವನೆಯಲ್ಲಂತೂ ಇರುತ್ತಿದ್ದಿತು.

ಈಗ ಭಾವನೆಯಲ್ಲಿಯೂ ಅದು ಸಡಿಲವಾಗುತ್ತಿದೆಯೆಂದು ಆತಂಕ.

ಭಾರಿ ಭಾರಿ ಉದ್ಯಮಗಳಲ್ಲಿ ಮನುಷ್ಯನ ಕಡೆ ಗಮನವಿಲ್ಲ; ಲಾಭವೇ ಪರಮಾರ್ಥ. ನೀತಿಯ ಸೊಲ್ಲು ಕನಸಿನಲ್ಲಿಯೂ ಇರದು.

ಹಲವರನ್ನು ಹಿಂಸಿಸಿ ತಾನು ದೊಡ್ಡ ಕುಳವಾಗುವುದು ಹಿಂದೆಯೂ ಇದ್ದಿತು; ಆದರೆ ಅದು ಹೀನಾಯವೆನಿಸುತ್ತಿದ್ದಿತು. ಜನ ಅಂಥವರನ್ನು ಮರ್ಯಾದೆಯಿಂದ ಕಾಣುತ್ತಿರಲಿಲ್ಲ. ದೊಡ್ಡ ಕುಳವಾದವರಿಗೇ ಒಂದು ಬಗೆಯ ಅಂಜಿಕೆಯಿರುತ್ತಿದ್ದಿತು.

ಈಗ ಯಾರೂ ಅನೀತಿಗೆ ಅಂಜಬೇಕಾದುದಿಲ್ಲ; ಅನ್ಯಾಯವೆಂದು ಕಳವಳಪಡಬೇಕಾಗಿಲ್ಲ. ಅದು ಸಾಧಾರಣವಾಗಿ ಬಿಟ್ಟಿದೆ. ವ್ಯಾಪಕವಾಗಿ ಬಿಟ್ಟಿದೆ.

ಎಲ್ಲರೂ ಮಾಡುವುದೇ ತಾನೆ? ತನಗೊಬ್ಬನಿಗೆ ಸಂಕೋಚವೇಕೆ?

ಅಥವಾ ತಾನೊಬ್ಬ ಧರ್ಮರಾಯನಾದರೆ ಲೋಕವನ್ನು ತಿದ್ದಿದಂತಾಯಿತೆ? ತನಗೇ ಏಳಿಗೆಯಿಲ್ಲ, ಉಳಿಗಾಲವಿಲ್ಲ.

ವ್ಯಾಪಾರದಲ್ಲಿ ಅನೀತಿಯಿರುವುದು ಅಷ್ಟು ಅಪಾಯಕಾರಿಯಲ್ಲ. ಸಾರ್ವಜನಿಕ ಜೀವನದಲ್ಲಿ ಹೀಗೆ ಅನೀತಿಯ ಅಗತ್ಯವನ್ನು ಅಂಗೀಕರಿಸುವುದು ಅಪಾಯಕಾರಿ.

ಗಾಂಧೀಜಿಯ ಕನಸು ಜನರನ್ನು ದಾರಿ ಸರಿಯಾಗಬೇಕೆಂಬ ನಂಬಿಕೆಯ ಕಡೆ ಒಲಿಸಿಕೊಳ್ಳುವುದಾಗಿದ್ದಿತು.

ಹಣ ಬೇಡವೆಂದಲ್ಲ; ಹಣವನ್ನು ಬರಮಾಡಿಕೊಳ್ಳುವ ಬಗೆ ನೆಟ್ಟಗಿರಬೇಕು. ನೇರವಾದ, ಸರಿಯಾದ ದಾರಿಯನ್ನು ಹಿಡಿದರೆ ಹಣವು ಬಾರದೆಂಬ ಸಂಶಯವಿರಬಾರದು.

23. ಕೊಳಗದ ವಿಚಾರ

'ಅಳೆಯುತ್ತ, ಅಳೆಯುತ್ತ ಬಳಲುವರಲ್ಲದೆ ಕೊಳಗ ಬಳಲುವುದೇನು?'

ಇದೊಂದು ಮಾತು; ಬಸವಣ್ಣನವರದ್ದು.

ಧಾನ್ಯವನ್ನು ಅಳೆಯುವಾಗ ಕೊಳಗವನ್ನು ಬಳಸುತ್ತೇವೆ. ಅಳೆಯುವವರು ಆಯಾಸಪಡುತ್ತಾರೆ; ಬೇಸರ ಪಡುತ್ತಾರೆ. ಕೊಳಗಕ್ಕೇನು ಆಯಾಸವೂ ಇಲ್ಲ, ಬೇಸರವೂ ಇಲ್ಲ.

ಇದು ಸಾಧ್ಯ–ಸಾಧನಗಳ ವಿಚಾರ.

ಯಾವುದಾದರೊಂದು ಸಿದ್ಧಿಯನ್ನು ಪಡೆದುಕೊಳ್ಳಲು ಅದಕ್ಕೆ ಸರಿಯಾದ ಸಾಧನವನ್ನು ಬಳಸಬೇಕು ತಾನೆ? ಸಾಧನದಿಂದ ಯಾವುದು ಒದಗಿ ಬರುವುದೋ ಅದು ಸಾಧ್ಯವೆನಿಸಿಕೊಳ್ಳುತ್ತದೆ. ಸಾಧ್ಯವೆಂದರೆ ಸಾಧಿಸಬಹುದಾದುದು.

ಸಾಧ್ಯವನ್ನು ಸಾಧನೆಯಿಂದ ಕೈಗೂಡಿಸಿಕೊಳ್ಳುವವನು ಸಾಧಕ.

ಸಾಧಕನು ಚೇತನ; ಪ್ರಯತ್ನವನ್ನು ಮಾಡುವವನು. ಅವನಿಗೆ ಆಯಾಸ, ತೃಪ್ತಿ, ಸಮಾಧಾನ, ಬೇಸರ ಎಲ್ಲವೂ ಉಂಟು. ಪ್ರಯೋಜನ ಅವನಿಗೇ.

ಸಾಧನೆಯೆನ್ನುವುದು ಸಾಮಾನ್ಯವಾಗಿ ಜಡವಸ್ತು, ಕೊಳಗದಂತೆ.

ಕಾಳನ್ನು ಅಳೆದರೆ ಕೊಳಗಕ್ಕೇನು ಗಿಟ್ಟಿತು? ಕಾಳನ್ನಾದರೂ ಅಳೆಯಿರಿ, ಬಂಗಾರದ ನಾಣ್ಯಗಳನ್ನಾದರೂ ಅಳೆಯಿರಿ, ಕೊಳಗಕ್ಕೇನು ಕಾತರ?

ಕಾಮೋಪಭೋಗಗಳ ವಿಚಾರ ಬಸವಣ್ಣನವರು ಹೇಳುತ್ತಿರುವುದು.

ಭೋಗಸಾಮಗ್ರಿಗಳು ಸಾಧನ; ಸುಖವೆಂಬುದು ಸಾಧ್ಯ. ಸಾಮಗ್ರಿಗಳನ್ನು ಬಳಸಿಕೊಳ್ಳುವ ಭೋಗಿ ಸಾಧಕ.

ಅವನು ಸಾಮಗ್ರಿಗಳನ್ನು ಸಂಪಾದಿಸಿಕೊಂಡು ಬಳಸುತ್ತ ಹೋದಂತೆಲ್ಲ ಅವನ ಭೋಗಲಾಲಸೆ ಸೊರಗಿ ಹೋಗುತ್ತದೆ; ಭೋಗ ಸಾಮರ್ಥ್ಯವೂ ಕುಗ್ಗುತ್ತದೆಯೆನ್ನಿ.

ಆದರೆ ಭೋಗಸಾಮಗ್ರಿಗಳಿಗೇನು ಆತಂಕವಿಲ್ಲ; ಅವುಗಳ ಆಕರ್ಷಣೆಯಾಗಲಿ ಬೆಲೆಯಾಗಲಿ ಇಳಿಯುವುದಿಲ್ಲ.

ಹಣದ ಸಂಪಾದನೆಗೆ ಇದೇ ನ್ಯಾಯವನ್ನು ಅನ್ವಯಿಸಬಹುದು.

ಹಣದ ಗೀಳಿರುವವರು ಕಷ್ಟಪಟ್ಟು ಸಂಪಾದನೆಯ ದಾರಿಗಳನ್ನು ಹುಡುಕಿ, ಅವುಗಳಲ್ಲಿ ಮುನ್ನುಗ್ಗಿ ಹಣವನ್ನು ಗಳಿಸುತ್ತಾರೆ.

ಕೆಲವರಿಗೆ ಈ ಕಷ್ಟದ ಅರಿವಾಗಿ, ತಮ್ಮ ಗೀಳಿನಿಂದ ಬೇಸರವಾಗಿ ಇನ್ನು ಸಾಕೆನಿಸುತ್ತದೆ. ಹಣವನ್ನು ಅಳೆಯುವುದು ನಿಲ್ಲುತ್ತದೆ.

ಆದರೆ ಹಣವನ್ನು ಗಳಿಸಿಕೊಳ್ಳುವ ದಾರಿಗಳಿಗೇನು ಬೇಸರವಿಲ್ಲ. ಅವೆಲ್ಲ ಎಂದಿನಂತೆಯೇ ಇರುತ್ತವೆ. ಅವುಗಳಲ್ಲಿ ಸಾಗುವವರೂ ಹಲವರಿರುತ್ತಾರೆ.

ಹಣದ ಬೆನ್ನಟ್ಟಿ ಹೋದ ವ್ಯಕ್ತಿ ಬಳಲುವನು; ಹಣವನ್ನು ಗಳಿಸಿಕೊಳ್ಳುವ ಉಪಾಯಗಳಿಗೇನು ಬಳಲಿಕೆಯಿರದು. ಹಚ್ಚಹೊಸದಾಗಿಯೇ ಇರುತ್ತವೆ ಅವು!

ಕಾಲ ಸರಿದಂತೆ ನಾವು ಮುದಿಯಾಗುತ್ತೇವೆ, ಕಾಲವೇನು ಮುದಿಯಾಗುವುದಿಲ್ಲ. ಹೋಗುವವರು ನಾವು, ಕಾಲವಲ್ಲ!

ವಿವೇಕ ಬರಬೇಕಾದುದು ಮನುಷ್ಯನಿಗೆ; ಅವನು ಅರಸುವ ಹಣಕ್ಕಲ್ಲ; ಅವನು ಬಳಸುವ ಸಂವಿಧಾನಕ್ಕೂ ಅಲ್ಲ.

24. ಸರ್ವಜ್ಞನ ಕಿವಿಮಾತು

ವೆಚ್ಚಕ್ಕೆ ಹೊನ್ನು, ಬೆಚ್ಚನೆ ಮನೆ, ಇಚ್ಛೆಯನರಿತ ಸತಿ– ಇಷ್ಟಿದ್ದರೆ ಸ್ವರ್ಗಕ್ಕೆ ಕಿಚ್ಚ ಹಚ್ಚೆನ್ನುತ್ತಾನೆ ಸರ್ವಜ್ಞ.

ಸರಿಯೇ, ಇವು ಮೂರೂ ಇದ್ದ ಮೇಲೆ ಬೇರೊಂದು ಸ್ವರ್ಗದ ಬಯಕೆ ಯಾರಿಗಿದ್ದೀತು?

ಸ್ವರ್ಗದಲ್ಲಾದರೂ ಇಷ್ಟೇ ತಾನೆ ಇರಬೇಕಾದುದು?

ಅನುಕೂಲಗಳೆಲ್ಲ ಇದ್ದರೆ ಇಲ್ಲಿಯೇ ಸ್ವರ್ಗ. ಮೇಲಿನ ಸ್ವರ್ಗಕ್ಕೆ ಬೆಂಕಿ ಬೀಳಲಿ, ಯಾರಿಗೆ ಬೇಕಾಗಿದೆ?

ಮೂರರಲ್ಲಿ ಸರ್ವಜ್ಞನ ಪ್ರಕಾರ ವೆಚ್ಚಕ್ಕೆ ಹೊನ್ನೇ ಮೊದಲನೆಯದು.

ಆನುಪೂರ್ವಿಯೆಂಬ ನ್ಯಾಯದಂತೆ ಮೊದಲನೆಯದೇ ಮುಖ್ಯವಾದುದು.

ಅದಿದ್ದರೆ ಉಳಿದೆರಡೂ ಒದಗಿ ಬಂದಾವು; ಅದಿಲ್ಲದಿದ್ದರೆ ಇನ್ನೆರಡು ಕಷ್ಟಸಾಧ್ಯವೇ ತಾನೆ?

ಇದು ಎಲ್ಲರ ಅನುಭವದಲ್ಲೂ ಇರುವುದೇ.

ಹೊನ್ನಿನ ಗುಣವನ್ನು ಎಲ್ಲರೂ ಬಲ್ಲರು; ಹೊನ್ನಿನ ಅಗತ್ಯವೂ ಎಲ್ಲರಿಗಿದೆ.

ಆದರೆ ಸರ್ವಜ್ಞ 'ವೆಚ್ಚಕ್ಕೆ ಹೊನ್ನು' ಎಂದಾಗ ವೆಚ್ಚಕ್ಕೆ ಸಾಕಾಗುವಷ್ಟು ಹಣ ಎಂದು ಭಾವಿಸಿದನೆಂದು ತೋರುತ್ತದೆ.

ವೆಚ್ಚವನ್ನವಲಂಬಿಸಿ ಹೊನ್ನು ಎಂದರೆ ವೆಚ್ಚಗಳು ಖಚಿತವಾಗಿರುತ್ತದೆ. ಅಷ್ಟು ಬಯಕೆಗಳನ್ನು ತೀರಿಸಿದರೆ ಸಾಕು, ಹೆಚ್ಚು ಹೊನ್ನನ್ನು ಕಟ್ಟಿಕೊಂಡು ಮಾಡುವುದೇನು?

ಸರ್ವಜ್ಞನ ಮನಸ್ಸಿನಲ್ಲಿ ಎಲ್ಲರಿಗೂ ಇಂತಿಷ್ಟು ವೆಚ್ಚ ಮಾಡಬೇಕಾದ ಅಗತ್ಯವಿರುತ್ತದೆ ಎಂಬ ಭಾವನೆ.

ಊಟ, ಉಡುಗೆ, ಮನೆವಾರ್ತೆ ಇಷ್ಟು ನಡೆದರಾಯಿತಲ್ಲ?

ಆದರೆ ನಮ್ಮ ಕಾಲದಲ್ಲಿ ಇದು ಒಪ್ಪಲಾಗದ ಮಾತು.

ವೆಚ್ಚಕ್ಕೆ ಮಿತಿಯೇ ಇರದು; ಆಸೆ, ದುರಾಸೆ, ಪೈಪೋಟಿ, ಭೋಗಲಾಲಸೆ ಮುಂತಾದ ಹಲವು ಕಾರಣಗಳಿಂದ ಇಂತಿಷ್ಟೇ ವೆಚ್ಚ ಎಂದು ಹೇಳಬರುವುದಿಲ್ಲ.

ದಿನದಿನಕ್ಕೆ ವೆಚ್ಚ ಹೆಚ್ಚುತ್ತಲೇ ಹೋಗುತ್ತದೆ. ಹೀಗೆ ಹೆಚ್ಚುವ ವೆಚ್ಚಕ್ಕೆಲ್ಲ ಹೊನ್ನನ್ನು ಗಳಿಸುವ ಗೀಳೂ ಹೆಚ್ಚುತ್ತದೆ.

ಹೊನ್ನಿಲ್ಲದೆ ವೆಚ್ಚವಷ್ಟೆ ಇದ್ದರೆ ಆದೀತೆ? ವೆಚ್ಚ ಮಾಡುವ ಇಚ್ಛೆಯಷ್ಟೇ ಇದ್ದರೆ ಸಾಕೋ?

ಸರ್ವಜ್ಞನ ಮೂರು ಕಾರಣಗಳಲ್ಲಿ ಮೊದಲನೆಯದೇ ಅತಂತ್ರವಾಯಿತು.

ಇನ್ನು 'ಬೆಚ್ಚನ್ನ' ಮನೆಯೂ ಹೀಗಿದ್ದರಾಯಿತು ಎನ್ನುವಂತಿಲ್ಲ. ಮನೆಯಲ್ಲಿ ಬೆಚ್ಚಗಿರುವುದಷ್ಟೇ ಅಲ್ಲ; ಅಕ್ಕಪಕ್ಕದವರನ್ನು ಚುಚ್ಚುವಂತಿಲ್ಲದಿದ್ದರೆ ಅದೆಂಥ ಮನೆ?

ಮನೆಯಲ್ಲಿರಬೇಕಾದ ಭೋಗಸಾಮಗ್ರಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಅವೆಲ್ಲ ವೆಚ್ಚಗಳೇ, ಹೊನ್ನಿನ ಮೇಲೆ ನಿಂತವು.

ಕಡೆಯದು, ಇಚ್ಛೆಯನರಿತ ಸತಿ ಇನ್ನೂ ಕಷ್ಟದ್ದು. ತನ್ನ ಇಚ್ಛೆ ತನಗೇ ಅರಿಯದಿದ್ದರೆ, ಇನ್ನು ಕೈಹಿಡಿದವಳು ಅರಿಯುವುದು ಹೇಗೆ?

ಅವಳಿಗೆ ಬೇಕಾದುದು ವೆಚ್ಚಕ್ಕೆ ಹೊನ್ನು, ಬೆಚ್ಚನೆ ಮನೆ.

ಮೇಲಾಗಿ ಪತಿಯ ಇಚ್ಛೆಯನ್ನು ಸತಿ ಅರಿಯಬೇಕೆಂದು ಹೇಳಿದ ಸರ್ವಜ್ಞನಿಗೆ ಮಡದಿ ಇದ್ದಳೋ ಇಲ್ಲವೋ ತಿಳಿಯದು. ಸತಿಯ ಇಚ್ಛೆಯನ್ನು ಪತಿಯೂ ಅರಿಯಬೇಡವೆ?

ಇಷ್ಟೆಲ್ಲ ಅಡಚಣೆಗಳಿರುವಾಗ ಸ್ವರ್ಗಕ್ಕೆ ಕಿಚ್ಚು ಹಾಕುವುದು ಹೇಗೆ?

25. ಸಾಲದ ಸಂಸ್ಕೃತಿ

ಇದ್ದದ್ದು ಸಾಲದಿದ್ದರೆ ಸಾಲ ಎತ್ತುವುದು ಇದ್ದದ್ದೇ.

ಇದು ಯಾವ ಕಾಲದಲ್ಲೂ ಇದ್ದಿತು. ಆದರೆ ಅದಕ್ಕೊಂದು ಸ್ಥಾನಮಾನ ಇರಲಿಲ್ಲ.

ಜನರ ನಡುವೆ ಸಾಲಗಾರನಿಗೆ ಮರ್ಯಾದೆ ಇರಲಿಲ್ಲ. 'ಸಾಲವೋ ಶೂಲವೋ' ಎಂದು ಜನ ಅಂಜುತ್ತಿದ್ದರು. ಸಾಲ ಮಾಡಿದವನು ಸೋತನೆಂದೇ ಎಣಿಕೆ. ಹಾಗೆಂದೇ 'ಸಾಲ-ಸೋಲ' ಎಂಬ ಮಾತು.

ಕವಿಗಳೂ ಜನರನ್ನು ಎಚ್ಚರಿಸುತ್ತಿದ್ದರು. 'ಸಾಲವನು ಕೊಂಬಾಗ ಪಾಲೋಗರುಂಡಂತೆ, ಸಾಲಿಗನು ಬಂದೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂಬ ಮಾತಿಲ್ಲವೆ?

ಆದರೆ ಈಗ ಸಾಲಕ್ಕೆ ಬೆದರುವವರಿಲ್ಲ, ಹೇಸುವವರಿಲ್ಲ.

ಸಾಲವೆತ್ತುವುದು ಹೀನಾಯವೇನಲ್ಲ; ಎತ್ತಿದ ಸಾಲವನ್ನು ತೀರಿಸಲೇಬೇಕೆಂಬ ಕಾತರವಾಗಲಿ ಕಾಣಿಸುವುದೂ ಇಲ್ಲ.

ಎತ್ತಿದ ಸಾಲವನ್ನು ಮನ್ನಾ ಮಾಡಬೇಕೆಂದು ಅಬ್ಬರಿಸುವುದೂ ಉಂಟು?

ಸರಕಾರವೇ ಸಾಲ ಎತ್ತುತ್ತದೆ; ಸಂಸ್ಥೆಗಳು ಸಾಲದ ಬಲದಿಂದಲೇ ನಿಲ್ಲುತ್ತವೆ. ದೇಶವಿದೇಶಗಳಲ್ಲಿ ಸಾಲದ ವ್ಯವಹಾರವೇ ಎದ್ದು ಕಾಣುತ್ತದೆ.

ಮನೆ ಕಟ್ಟಲು ಸಾಲ, ಕಾರು ಕೊಳ್ಳಲು ಸಾಲ, ಉದ್ಯಮ ಆರಂಭಿಸಲು ಸಾಲ, ಮದುವೆಗೆ ಸಾಲ, ಮೋಜಿಗೆ ಸಾಲ.

ಮತ್ತೆ, ಸಾಲ ಕೊಡಲು ಮುಂದೆ ಬರುವವರೂ ಇದ್ದಾರೆನ್ನುವುದು ಇನ್ನೂ ಸೋಜಿಗ. 'ಇವತ್ತು ಕೊಂಡೊಯ್ಯಿರಿ, ನಾಳೆ ಹಣ ಕೊಡಿ' ಎಂದು ಅಂಗಲಾಚುವ ವ್ಯಾಪಾರಿಗಳಿಲ್ಲವೆ?

ಕಂತು-ಕಂತಿನಲ್ಲಿ ಸಾಲ ತೀರಿಸುವ ಒಪ್ಪಂದವನ್ನು ಮಾಡಿಕೊಳ್ಳುವುದಿದೆ.

ಇವೆಲ್ಲವೂ ಅರ್ಥಶಾಸ್ತ್ರದ ನೆಲೆಯಲ್ಲಿ ಸರಿಯೇ ಇರಬಹುದು. ಸಾಮಾಜಿಕ ಪರಿವರ್ತನೆಯಲ್ಲಿ ಆರ್ಥಿಕ ಮಾರ್ಪಾಟೂ ಸೇರಿಕೊಳ್ಳುತ್ತದೆ, ದಿಟ.

ಆದರೆ ಬದುಕೆಲ್ಲವೂ ಅರ್ಥಶಾಸ್ತ್ರದ ಅಧೀನವೇ ಆದರೆ ಹೇಗೆ?

ನೀತಿ ಸಂಹಿತೆಗೆ ಬೆಲೆಯೇ ಇಲ್ಲವೆ? ಸಾಲಕ್ಕೊಂದು ಮರ್ಯಾದೆಯ ಮಣೆಯನ್ನು ಹೀಗೆ ಹಾಕಬಹುದೆ?

ನಮ್ಮ ದೇಶವಂತೂ ವಿದೇಶೀ ಸಾಲದ ಮೇಲೇ ನಡೆಯುತ್ತಿರಬಹುದು. ಸಾಲ ನೀಡುವವರದ್ದು ಎಂದೂ ಮೇಲುಗೈ; ಸಾಲ ಕೊಳ್ಳುವವರ ಕೈ ಕೆಳಗೇ. ಸ್ವಾವಲಂಬನೆಯೆಂಬುದು ಕನಸಿನ ಕಜ್ಜಾಯ!

ವ್ಯಕ್ತಿ ಜೀವನದಲ್ಲೂ ಸಾಲಕ್ಕೊಂದು ಮೌಲ್ಯವನ್ನು ಒದಗಿಸಿಬಿಟ್ಟಿದ್ದಾರಲ್ಲ? ಸಾಲ ಎತ್ತದೆ ಬದುಕುವುದೇ ಸಾಧ್ಯವಿಲ್ಲವೆಂಬಂತೆ ಆಗಿದೆಯಲ್ಲ?

'ಸಾಲದೆನಬೇಡ' ಎಂದು ಹರಿದಾಸರು ಹೇಳಿದ್ದು ಗಾಳಿಯ ಪಾಲು. ಬಯಕೆಗೆ ತಕ್ಕಂತೆ ಹಣ; ಹಣಕ್ಕೆ ತಕ್ಕಂತೆ ಬಯಕೆಯಲ್ಲ.

ಬಯಕೆಗಳು ಬೆಳೆದಂತೆ ಹಣವೂ ಬೆಳೆಯಲಾರದು; ಹಾಗೆಂದು ಬಯಕೆಗಳೇನು ಬೆಳೆಯದೆ ಇರುವುದಿಲ್ಲ. ಇನ್ನು ಸಾಲವೇ ದಾರಿಯಲ್ಲವೆ?

'ಆಲಕ್ಕೆ ಹೂವಿಲ್ಲ, ಸಾಲಕ್ಕೆ ಕೊನೆಯಿಲ್ಲ'

ಸಾಲಗಾರನೆಂದು ಕಳವಳವೂ ಇಲ್ಲವಾಗುತ್ತಿದೆ. ಬದುಕಿನಲ್ಲಿ ಸಾಲವೇ ಹೆದ್ದಾರಿ ಎನ್ನುವಂತಿದೆ.

ಸಾಲ ತೀರಿಸಲೇಬೇಕೆಂಬ ಚಪಲವಾದರೂ ಏತಕ್ಕೆ? 'ಸಾವಿರ ತನಕ ಸಾಲ; ಅದರ ಮೇಲೆ ಲೋಲ!'

ಈ ಸಾಲದ ಸಂಸ್ಕೃತಿ ನಮ್ಮ ಒಳ್ಳೆಯದಕ್ಕೇ ಎನ್ನುವಿರಾ?

26. ಉದ್ಯಮದ ನೀತಿ

ಹಣದ ಬಯಕೆ ಭೂತವಾಗಿ ಮೈಯೇರಿ ಬಂದರೆ ನೀತಿ, ನ್ಯಾಯ, ಧರ್ಮ ಇವಕ್ಕೆಲ್ಲ ಸಂಚಕಾರವೇ.

ಲಾಭವೊಂದೇ ಮುಖ್ಯವಾದ ಉದ್ಯಮಿಯು ಲಾಭಕ್ಕಾಗಿ ಮಾನವೀಯತೆಯನ್ನೇ ಕೈಬಿಡಲು ಹಿಂಜರಿಯುವುದಿಲ್ಲ.

ಇದಕ್ಕೆ ನಿದರ್ಶನಗಳು ಅನೇಕ ಇವೆ.

ಚಿಕಿತ್ಸಾ ಪ್ರಪಂಚದಲ್ಲಿ ಬೇನೆಗಳನ್ನು ಗುಣಪಡಿಸುವಂಥ ಔಷಧಗಳನ್ನು ಕಂಡುಹಿಡಿಯುವ ಸಂಶೋಧಕರಿದ್ದಾರೆ. ಈ ಸಂಶೋಧನೆಗಳನ್ನು ಬಳಸಿಕೊಂಡು, ಔಷಧಗಳನ್ನು ತಯಾರಿಸುವ ಉದ್ಯಮಿಗಳೂ ಇದ್ದಾರೆ.

ಉದ್ಯಮಿಗಳ ಉದ್ದೇಶವೇನೋ ಹಣದ ಸಂಪಾದನೆಯೆನ್ನುವುದು ಸ್ಪಷ್ಟವಾದದ್ದು; ಜನರ ಕಷ್ಟವನ್ನು ನೀಗಿಸಬೇಕೆಂಬ ತೆವಲು ಅವರಿಗೇಕೆ?

ಸಂಶೋಧನೆಯ ಫಲವಾಗಿ ಸಿದ್ಧವಾದ ಔಷಧಿಗಳು ಪ್ರಯೋಗಕ್ಕೆ ಬಂದ ಮೇಲೆ, ಕೆಲವಾರು ಔಷಧಗಳಿಂದ ಗುಣಾಂಶಕ್ಕಿಂತಲೂ ಹಾನಿಯೇ ಹೆಚ್ಚಾಗಿರುವುದು ಕಂಡುಬಂದರೆ ಸಂಶೋಧಕರು ಈ ಔಷಧಗಳನ್ನು ಬಳಸಬಾರದೆಂದು ಸೂಚಿಸುತ್ತಾರೆ.

ಆದರೆ ಈ ಔಷಧಗಳನ್ನು ಆಗಲೇ ದೊಡ್ಡಪ್ರಮಾಣದಲ್ಲಿ ತಯಾರು ಮಾಡಿಟ್ಟುಕೊಂಡ ಉದ್ಯಮಿಗಳು ಮಾಡಬೇಕಾದುದೇನು?

ಜನರ ಹಿತ ಅವರ ಕಣ್ಣ ಮುಂದೆ ಇರುವುದಾದರೆ, ಈ ಔಷಧಗಳನ್ನು ಅವರು ಮಾರುಕಟ್ಟೆಯಲ್ಲಿ ಜನರಿಗೆ ಒದಗಿಸಬಾರದು. ಹಾನಿಕರ ಔಷಧಗಳು ಹಾಳಾಗುವುದೇ ನ್ಯಾಯವಾದ ದಾರಿ.

ಇದರಿಂದ ಉದ್ಯಮದಲ್ಲಿ ಭಾರಿ ನಷ್ಟವಲ್ಲವೆ? ಉದ್ಯಮಿಗೆ ಬೇಕಾದುದು ಲಾಭ; ಜನರ ಹಿತವಲ್ಲ.

ಸಂಶೋಧಕರ ಮಾತನ್ನು ಕೇಳಿ, ಕೆಲವು ಆಡಳಿತಗಳೂ ಈ ಹಾನಿಕರ ಔಷಧಗಳ ಮಾರಾಟವನ್ನು ನಿಷೇಧಿಸುವುದುಂಟು.

ಆಗ ಉದ್ಯಮಿಗಳು ಮಾಡುವುದೇನು?

ಸಂಶೋಧಕರ ಮಾತು ಸುಳ್ಳೆಂದು ಸಾಧಿಸಲು ಎಲ್ಲ ಪ್ರಯತ್ನವನ್ನೂ ಮಾಡುವುದು; ಅದಕ್ಕಾಗಿ ಬೇಕಾದಷ್ಟು ವೆಚ್ಚವನ್ನು ಮಾಡುವುದು. ಇದು ಮೊದಲನೆಯದು.

ಎರಡನೆಯದು, ಯಾವ ದೇಶದಲ್ಲಿ ಈ ಔಷಧಗಳ ಮಾರಾಟವನ್ನು ಆಡಳಿತವು ಇನ್ನೂ ನಿಷೇಧಿಸಿಲ್ಲವೋ, ಅಂಥ ದೇಶಗಳ ಮಾರುಕಟ್ಟೆಯಲ್ಲಿ ಈ ಔಷಧಗಳನ್ನು ಜನರಿಗೆ ಧಾರಾಳವಾಗಿ ಒದಗಿಸುವುದು.

ಲಾಭವೊಂದೇ ಉದ್ದೇಶವಾಗಿ ಉಳ್ಳ ಉದ್ಯಮಿಗಳು ಇವೆರಡೂ ದಾರಿಗಳನ್ನು ಹಿಡಿಯುತ್ತಿದ್ದಾರೆ.

ನಮ್ಮ ದೇಶದಲ್ಲಿ ಇಂಥ ಔಷಧಗಳು ಸುಮಾರು ಮೂರು ಸಾವಿರ ಹೆಸರುಗಳಲ್ಲಿ ದಿನನಿತ್ಯವೂ ಮಾರಾಟವಾಗುತ್ತಿವೆ. ಇತರ ದೇಶಗಳಲ್ಲಿ ಆತಂಕವಿಲ್ಲದೆ ಜನರಿಗೆ ದೊರೆಯುತ್ತವೆ.

ಅರಿಯದ ಜನರ ಆರೋಗ್ಯ ಹಾಳಾಗುತ್ತಿರುವುದು ಯಾರ ಹೊಣೆ? ಬಹುರಾಷ್ಟ್ರೀಯ ಉದ್ಯಮಿಗಳದ್ದೇ? ನಮ್ಮ ಆಡಳಿತದ್ದೇ?

ಉದ್ಯಮಿಗಳಂತೂ ಕೋಟ್ಯಂತರ ರೂಪಾಯಿಗಳ ಲಾಭವನ್ನು ತಮ್ಮ ದೇಶಗಳಿಗೆ ಕೊಂಡೊಯ್ಯುತ್ತಿದ್ದಾರೆ!

27. ಪರದೇಶಿಯಾದ ಸ್ವದೇಶಿ

ಹಣ ವ್ಯಕ್ತಿಗೂ ಬೇಕು, ಕುಟುಂಬಕ್ಕೂ ಬೇಕು, ಊರಿಗೂ ಬೇಕು, ನಾಡಿಗೂ ಬೇಕು, ದೇಶಕ್ಕೂ ಬೇಕು.

ಹಣ ತಾನಾಗಿಯೇ ಬರುವುದಿಲ್ಲವಷ್ಟೆ? ಅದನ್ನು ಗಳಿಸಬೇಕು.

ಗಳಿಸುವಾಗ ವ್ಯಕ್ತಿಯಾಗಲಿ, ನಾಡಾಗಲಿ ತನ್ನ ಸ್ಥಿತಿಗತಿಗಳನ್ನು, ಬಲ ಅನುಕೂಲಗಳನ್ನು, ಪ್ರವೃತ್ತಿ ನಿವೃತ್ತಿಗಳನ್ನು ಪರಿಗಣಿಸಬೇಕು. ಅಗತ್ಯವೊಂದು ಕಡೆ, ಸಾಮರ್ಥ್ಯ ಇನ್ನೊಂದು ಕಡೆ.

ನಾಡಿನ ಆರ್ಥಿಕ ನೀತಿ ನಾಡಿನ ಜನರ ಪ್ರವೃತ್ತಿಗಳನ್ನೂ ನಾಡಿನ ಸಂಪನ್ಮೂಲಗಳನ್ನೂ ಅವಲಂಬಿಸಬೇಕು.

ಬೇರೆ ನಾಡುಗಳ ಆರ್ಥಿಕ ಪ್ರಕ್ರಿಯೆಗಳನ್ನು ವಿಚಾರಮಾಡದೆ ಅನುಕರಣೆ ಮಾಡತೊಡಗಿದರೆ, ಹಣ ಬಾರದಿರುವುದು ಮಾತ್ರವಲ್ಲ, ಇದ್ದದ್ದೂ ಹೋಗುತ್ತದೆ.

ನಮ್ಮ ದೇಶ ಸ್ವತಂತ್ರವಾದೊಡನೆ ತುಳಿದ ಹಾದಿ ಆರ್ಥಿಕ ಅಭಿವೃದ್ಧಿಗಾಗಲಿ ದೇಶದ ಹಿತಸಾಧನೆಗಾಗಲಿ ಅನುಕೂಲವಾಗಿರಲಿಲ್ಲ. ಅದರ ಫಲವನ್ನು ನಾವಿಂದು ಉಣ್ಣುತ್ತಿದ್ದೇವೆ.

ಸಾವಿರಾರು ವರ್ಷಗಳಿಂದ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಬೇಸಾಯಕ್ಕೆ, ಹಳ್ಳಿಗರೇ ತೊಡಗಿದ ಸಣ್ಣ ಉದ್ಯಮಗಳಿಗೆ, ಮನೆಗಳಲ್ಲೇ ಮಾಡುತ್ತಿದ್ದ ಬಟ್ಟೆ, ಪಾತ್ರೆ ಪಡಗ ಮೊದಲಾದ ಕೈಗಾರಿಕೆಗಳಿಗೆ ಮೊದಲ ಸ್ಥಾನವಿರುತ್ತಿದ್ದಿತು.

ಇಲ್ಲಿನ ನಿಸರ್ಗ, ಜನರ ಸ್ವಭಾವ, ಸಂಪನ್ಮೂಲ, ಕೆಲಸದ ಕ್ರಮ, ಸಾಮರ್ಥ್ಯ, ಅಗತ್ಯ ಇವನ್ನು ಪರಿಗಣಿಸಿಯೇ ಆರ್ಥಿಕ ವ್ಯವಸ್ಥೆಯೊಂದು ಮೈದಳೆಯಿತು.

ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಹಿನ್ನೆಲೆಯಲ್ಲೇ ನಗರಗಳೂ ಬೆಳೆದವು. ನಾಗರಿಕ ಸಂಸ್ಕೃತಿಯೂ ಹರಡಿಕೊಂಡಿತು. ಆಡಳಿತವು ಈ ಆರ್ಥಿಕ ವ್ಯವಸ್ಥೆಯನ್ನು ಕೈಬಿಡದೆ ಕಾಪಾಡಿಕೊಂಡು ಬಂದುದು ನಮ್ಮ ಇತಿಹಾಸದುದ್ದಕ್ಕೂ ಕಾಣುತ್ತದೆ. ಹಳ್ಳಿಯೇ ದಿಲ್ಲಿಗೆ ಹಿನ್ನೆಲೆಯಾಗಿದ್ದಿತು.

ಆದರೆ ಸ್ವಾತಂತ್ರ್ಯಾನಂತರ ನೆಹ್ರೂ ನೇತೃತ್ವದಲ್ಲಿ ನಮ್ಮ ಆಡಳಿತವು ರೂಪಿಸಿದ ಆರ್ಥಿಕ ನೀತಿ (ಅಥವಾ ಅನೀತಿ!) ನಮ್ಮ ಜನರಿಗೆ ಒಗ್ಗಿ ಬಂದಿದ್ದ ಆರ್ಥಿಕ ವ್ಯವಸ್ಥೆಯನ್ನು ಕಡೆಗಣಿಸಿದುದು ಮಾತ್ರವಲ್ಲ, ಬುಡಮಟ್ಟಮಾಡಲು ಹವಣಿಸಿತು.

ದಿಲ್ಲಿಗೂ ಹಳ್ಳಿಗೂ ಇದ್ದ ಸಂಪರ್ಕವನ್ನು ಕಡಿದುಕೊಂಡು, ದಿಲ್ಲಿಗೂ ಪಾಶ್ಚಾತ್ಯ ರಾಷ್ಟ್ರಗಳಿಗೂ ಅದ್ದೂರಿಯ ನಂಟನ್ನು ಏರ್ಪಡಿಸಿಕೊಳ್ಳುವ ಉತ್ಸಾಹ ಅಂದಿನಿಂದ ಇಂದಿನವರೆಗೂ ಸಾಗಿ ಬಂದಿದೆ.

ಈ ಉತ್ಸಾಹದ ಫಲವೇನಾಗಿದೆ? ದೇಶದಲ್ಲಿ ಬಡತನ ಹೆಚ್ಚುತ್ತಿದೆ. ನಮ್ಮ ಗ್ರಾಮೀಣ ಕುಶಲಕರ್ಮಿಗಳಿಗೆ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಏನೊಂದು ಸ್ಥಾನವೂ ಪಾತ್ರವೂ ಇಲ್ಲವಾಗುತ್ತಿದೆ.

ಹೊರದೇಶದ ಪದಾರ್ಥಗಳು, ಹೊರದೇಶದ ಉದ್ಯಮಗಳು, ಹೊರದೇಶದ ಹಣದ ಹೂಡಿಕೆ ಇವಕ್ಕೇ ಆಡಳಿತವು ಮಾರು ಹೋಗಿದೆ.

ಇದರಿಂದಾಗಿ ನಮ್ಮ ಜನರ ಅಗತ್ಯಗಳೂ, ಪ್ರವೃತ್ತಿಗಳೂ, ಬದುಕಿನ ಬಗೆಗಳೂ ಬದಲಾಗುತ್ತಿವೆ. ಸ್ವಾಭಿಮಾನವಾಗಲಿ ಸಂಯಮವಾಗಲಿ ನಮ್ಮ ಸಂಸ್ಕೃತಿಯಿಂದ ಜಾರಿಕೊಳ್ಳುತ್ತಿವೆ.

ಹೀಗಾದೀತೆಂದು ಹೆದರಿಯೇ ಗಾಂಧೀಜಿ ಸ್ವದೇಶೀಮಂತ್ರವನ್ನು ನಮ್ಮ ಹಿರಿಯರಿಗೆ ಮನವರಿಕೆ ಮಾಡಿಕೊಟ್ಟರು. ಆದರೆ ಹಿರಿಯರು ಉಸಿರೆಳೆದ ಮೇಲೆ ಮಂತ್ರವು ಮರೆತು ಹೋಯಿತು.

ಆಳುವವರಂತೂ ಎಂದೂ ಈ ಮಂತ್ರವನ್ನು ಆದರಿಸಲೇ ಇಲ್ಲವೆನ್ನಿ. ಈಗಂತೂ ಸ್ವದೇಶವೆಂಬುದೇ ಅರಿವಿನಿಂದ ಮರೆಯಾಗುವಾಗ ಸ್ವದೇಶಿಗೆ ನೆಲೆಯೆಲ್ಲಿ, ಬೆಲೆಯೇನು?

28. ಸುಂಕ-ಬಿಂಕ

ಆಡಳಿತ ಉಳಿಯುವುದು, ಬೆಳೆಯುವುದು ಸಾಕಷ್ಟು ಆಮದು ಸುಂಕದಿಂದ.

ನಮ್ಮ ದೇಶದ ಒಟ್ಟು ಆದಾಯದಲ್ಲಿ ನೂರಕ್ಕೆ ಹದಿನೈದು ಪಾಲು ಸುಂಕದಿಂದಲೇ ಬರುವುದು; ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ಬರುವ ವಸ್ತುಗಳ ಮೇಲೆ ವಿಧಿಸುವ ಸುಂಕದಿಂದ. ಇದನ್ನು ಆಮದು ಸುಂಕ ಎಂದು ಕರೆಯುತ್ತಾರೆ.

ಹೊರದೇಶದ ಉದ್ಯಮಿಗಳು ತಮ್ಮಲ್ಲಿ ತಯಾರಾದುದನ್ನು ನಮ್ಮ ದೇಶಕ್ಕೆ ತಂದು ಮಾರಾಟಮಾಡಿ ಲಾಭಗಳಿಸಿಕೊಳ್ಳುವ ಮೊದಲು, ಈ ಆಮದು ಸುಂಕವನ್ನು ತೆರಬೇಕು.

ಇದರಿಂದ ನಮ್ಮ ದೇಶಕ್ಕೆ ಆದಾಯ; ನಮಗೂ ಆದಾಯವೇ ತಾನೆ?

ಆದರೆ ಈಚೆಗೆ ಡಂಕೆಲ್ ಮುಂತಾದ ಒಪ್ಪಂದಗಳಿಗೆ ತಲೆಬಾಗಿ ನಮ್ಮ ಆಡಳಿತದವರು ಇಂಥ ಆಮದು ಸುಂಕವನ್ನು ಕಡಮೆಮಾಡಲು ಸಮ್ಮತಿಸಿದ್ದಾರೆ.

ಹಿಂದೆ, ಮೂರು ವರ್ಷಗಳ ಹಿಂದೆ, ಸುಂಕದ ಪ್ರಮಾಣ ಶೇಕಡ ಮುನ್ನೂರು ಇದ್ದದ್ದು ಕಡಮೆಯಾಗುತ್ತ ಬಂದು, ಗ್ಯಾಟ್‌ಕರಾರಿಗೆ ಒಪ್ಪಿಕೊಳ್ಳುವಾಗ ಶೇಕಡ ನಲವತ್ತಕ್ಕೆ ಇಳಿಯಿತು.

ವಿದೇಶೀ ಉದ್ಯಮಿಗಳಿಗೇನೋ ಸಂತೋಷವೇ.

ಇಲ್ಲೊಂದು ಸುಲಭವಾದ ಮಾರುಕಟ್ಟೆಯೂ ಸಿಕ್ಕಿತು; ಸುಂಕದ ಹೊರೆಯೂ ಇಳಿಯಿತು. ಇನ್ನು, 'ಕಂಡರೆ ಸುಂಕ, ಕಾಣದಿದ್ದರೆ ಬಿಂಕ' ಎನ್ನುವುದು ಇದ್ದೇ ಇದೆ.

ವಿದೇಶೀ ಉದ್ಯಮಿಗಳು ಸಿರಿವಂತ ದೇಶಗಳವರು, ಮುಂದುವರಿದವರು. ನಮ್ಮದು ಬಡರಾಷ್ಟ್ರ; ಮುಂದರಿಯಲು ಹಾತೊರೆಯುತ್ತಿರುವ ದೇಶ.

ಅವರು ಇಲ್ಲಿಗೆ ಬಂದು ವ್ಯಾಪಾರಮಾಡಿ, ತಮ್ಮ ಬೊಕ್ಕಸವನ್ನು ತುಂಬಿಕೊಂಡು ಹೋಗಲು ಅನುಕೂಲ ಮಾಡಿಕೊಡುವುದೇ ಗ್ಯಾಟ್ ಮೊದಲಾದ ಒಪ್ಪಂದದ ಗುಟ್ಟು.

ಸುಂಕವನ್ನು ಕಡಮೆ ಮಾಡಿದರೆ ನಮ್ಮ ದೇಶದ ಆರ್ಥಿಕಸ್ಥಿತಿಗೆ ಕೊರತೆಯಲ್ಲವೇ? ಇದನ್ನು ತುಂಬಿಕೊಳ್ಳುವುದು ಹೇಗೆ?

ಸರಿ, ನಮ್ಮಲ್ಲೇ ತಯಾರಾದ ವಸ್ತುಗಳ ಮೇಲೆ ತೆರಿಗೆ ಹೇರಿದರಾಯಿತು, ಅಷ್ಟೇ ತಾನೆ.

ಸಣ್ಣದೊಂದು ಉದಾಹರಣೆ. ಅಡಿಗೆ ಮಾಡಲು ಗ್ಯಾಸ್ ಬಳಸುವೆವಲ್ಲವೆ? ಇದರ ಮೇಲೆ ಆಡಳಿತದ ಸುಂಕ ಶೇಕಡ ಎಂಬತ್ತೈದು ಇದ್ದುದನ್ನು ಇಪ್ಪತ್ತೈದಕ್ಕೆ ಇಳಿಸಿದರು. ಈ ಕೊರತೆಯನ್ನು ನೀಗಿಕೊಳ್ಳಲು ಸಿಲಿಂಡರಿನ ಬೆಲೆ ಹತ್ತು ರೂಪಾಯಿಗಳಷ್ಟು ಹೆಚ್ಚಿತು.

ಸುಂಕದಲ್ಲಿ ಕಡಮೆಯಾದರೆ ವಿದೇಶೀ ಕಂಪನಿಗಳು ಇನ್ನಷ್ಟು ಮೆರೆಯುತ್ತವೆ. ಸ್ವದೇಶೀ ತಯಾರಕರು ತೆರಿಗೆಯ ಹೊರೆಯಲ್ಲಿ ಕುಗ್ಗುತ್ತಾರೆ. ನಮ್ಮಲ್ಲಿ ತಯಾರಾದ ವಸ್ತುಗಳು ಮಾರುಕಟ್ಟೆಗಿಳಿಯುವುದೇ ಕಷ್ಟವಾಗುತ್ತದೆ.

ವಿದೇಶೀ ಕಂಪೆನಿಗಳು ನಮಗೆ ಬೇಡದ ವಸ್ತುಗಳನ್ನೂ ಇಲ್ಲಿಗೆ ತಂದು ಅವನ್ನು ನಾವು ಬೇಡುವಂತೆ ಮಾಡಿ, ನಮ್ಮನ್ನು ಮರುಳುಮಾಡಿ ನಮ್ಮಲ್ಲಿರುವ ಅಲ್ಪಸ್ವಲ್ಪ ಹಣವನ್ನೂ ದೋಚಿಕೊಂಡು ಹೋಗುತ್ತಿವೆ.

ಇದು ನಮ್ಮ ಆಡಳಿತದ ಉದಾರ ಆರ್ಥಿಕನೀತಿಯ ಫಲ.

ಸುಂಕದವನ ಮುಂದೆ ಸುಖದುಃಖ ಹೇಳಬಹುದೆ? ಹೇಳಿದರೆ 'ಕಂಕುಳಲ್ಲಿ ಏನು?' ಎಂದು ಕೇಳುತ್ತಾನೆ.

29. ಹಣದ ದಾರಿ

ಹಳೆಯ ಅರ್ಥಶಾಸ್ತ್ರ ಗ್ರಂಥಗಳಲ್ಲೊಂದು ಮಾತು–ನಮ್ಮ ಹಣವನ್ನು ಕಳ್ಳರಿಂದಲೂ ಅಧಿಕಾರಿಗಳಿಂದಲೂ ಕಾಪಾಡಿಕೊಳ್ಳಬೇಕು.

'ಚೋರರಾಜಪುರುಷೇಭ್ಯೋ ವಿತ್ತಂ ರಕ್ಷೇತ್'

ಇದು ಯಾವ ಕಾಲದಲ್ಲಾದರೂ ಸರಿಯಾದ ಮಾತೇ.

ಹಣಕ್ಕಿರುವ ಶತ್ರುಗಳು ಕಳ್ಳರು, ತೆರಿಗೆ ವಸೂಲಿಯವರು.

ಆಡಳಿತಕ್ಕೆ ಹಣ ಬೇಕು. ಜನರು ತೆರದಿದ್ದರೆ ಆಡಳಿತ ಹೇಗೆ ನಡೆದೀತು?

ಆಡಳಿತವನ್ನು ರಾಜನೆನ್ನಿ. ಆದರೆ ಮೇಲಿನ ಮಾತು ರಾಜನನ್ನು ಕುರಿತದ್ದಲ್ಲ. ರಾಜನ ಅಧಿಕಾರಿಗಳನ್ನು ಕುರಿತದ್ದು.

ಆಡಳಿತವನ್ನು ನಿರ್ವಹಿಸುವವರು, ಅವರನ್ನು ನಿರ್ವಹಿಸುವವರು; ಹೀಗೆ ನಿರ್ವಾಹಕರ ಪರಂಪರೆಯೇ ಇರುತ್ತದೆ. ಮಂತ್ರಿಯಿಂದ ಹಿಡಿದು ಪೇದೆಯವರೆಗೆ ಎಲ್ಲರೂ ಆಡಳಿತಗಾರರೇ; ರಾಜಪುರುಷರೇ.

ಹಳೆಯ ಕಾಲದಲ್ಲೂ ಇಂಥವರು ಇರುತ್ತಿದ್ದರೆನ್ನುವುದು ಮೇಲಿನ ಮಾತಿನಿಂದ ತಿಳಿಯುತ್ತದೆ. ಅವರ ಹಿಡಿತದಿಂದ ತಪ್ಪಿಸಿಕೊಳ್ಳಬೇಕೆನ್ನುವುದು ಮಾತಿನ ಸೂಚನೆ.

ಆಡಳಿತಕ್ಕೆ ಅಗತ್ಯವಾದ ತೆರಿಗೆಯನ್ನು ಕೊಡಬಾರದೆಂದು ಅರ್ಥವಲ್ಲ. ಆಡಳಿತಗಾರರು ದುರಾಸೆಗೆ ಬಲಿಯಾಗಬಾರದೆಂದು ಒಕ್ಕಣೆ.

ಜನ ತೆತ್ತದ್ದೆಲ್ಲ ಆಡಳಿತಕ್ಕೆ ಸಲ್ಲುವುದೆಂಬ ನಂಬಿಕೆಯಿರದು. ಅದರಿಂದ ಆಡಳಿತ ಅಚ್ಚುಕಟ್ಟಾಗಿ ನಡೆದೀತೆಂಬ ಭರವಸೆಯೂ ಇರದು.

ಆಡಳಿತದ ಸರಪಣಿಯಲ್ಲಿ ಯಾವುದೋ ಕೊಂಡಿಗೆ ಈ ನೈವೇದ್ಯ ಸಲ್ಲುತ್ತದೆ ಅಷ್ಟೆ; ಅಲ್ಲಿಂದ ಮುಂದೆ ಅದು ಸಾಗುವುದಿಲ್ಲ.

ನಾವು ನಮ್ಮ ಕೆಲಸಕ್ಕಾಗಿ ಕೊಡಮಾಡುವ ಹಣಕ್ಕೆ ಲಂಚವೆಂದು ಹೆಸರು; ಅದನ್ನು ಕೊಡುವವರು, ಕೊಳ್ಳುವವರು ಇವರಿಬ್ಬರ ನಡುವಣ ವ್ಯವಹಾರ ಅದು.

ಕೊಡುವವರು ಕೋಡಗ, ತೆಗೆದುಕೊಂಡವನು ತುಡುಗ. ಅವನಿಗೆ ಹೋಯಿತು, ಇವನಿಗೆ ಬಂದಿತು. ಆಡಳಿತವನ್ನು ದೂರಲೇಕೆ?

ಹಳೆಯ ಕಾಲಕ್ಕೂ ಈ ಕಾಲಕ್ಕೂ ಇರುವ ಅಂತರವೆಂದರೆ ಈಗ ಆಡಳಿತವು ಹೆಮ್ಮರವಾಗಿ ಹಬ್ಬಿ, ಆಲದ ಬಿಳಿಲುಗಳು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತಿರುವುದು.

ಬುಡಕ್ಕೆ ನೀರೆರೆದರೆ ಸಾಲದು; ಬಿಳಿಲುಗಳು ಬಿದ್ದಲ್ಲೆಲ್ಲಾ ನೀರು ಬೀಳಬೇಕು. ಬಿಳಲಿನಿಂದ ಬುಡಕ್ಕೆ ಹೋಗುವುದಂತೂ ಇಲ್ಲವಷ್ಟೆ?

ಬುಡಕ್ಕೆ ಬೀಳಬೇಕಾದ ನೀರು ತೆರಿಗೆ; ಬಿಳಲಿಗೆ ಬೇಕಾದುದು ಲಂಚ.

ಮೇಲಿನ ಮಾತಿನಲ್ಲಿ ಚೋರರು, ರಾಜಪುರುಷರು ಎಂದು ಬೇರೆಬೇರೆಯಾಗಿ ಕಾಣಿಸಲಾಗಿದೆ. ಕಳ್ಳರು ಬೇರೆ, ಆಡಳಿತಗಾರರು ಬೇರೆ ಎಂದಂತೆ.

ಆದರೆ ಆಡಳಿತಗಾರರೇ ಕಳ್ಳರಾದರೆ ಹೇಗೆ?

ಅಲ್ಲೂ ಒಂದು ಅಂತರವಿದೆ. ಕಳ್ಳರು ಕದಿಯುವುದು ನಮಗೆ ಅರಿವಿರದಂತೆ; ನಿದ್ದೆಯಲ್ಲಿ ಹಣ ಹೋದದ್ದು ಎದ್ದ ಮೇಲೇ ತಿಳಿಯುವುದು. ಆದರೆ ಆಡಳಿತಗಾರರು ಮಾಡುವ ವಸೂಲಿ ನಾವು ಎಚ್ಚರವಾಗಿರುವಾಗಲೇ, ನಮ್ಮ ಒಪ್ಪಿಗೆಯಿಂದಲೇ.

ಕಳ್ಳರಲ್ಲದ ಆಡಳಿತಗಾರರು ಇಲ್ಲವೆ? ಅವರನ್ನು ಕುರಿತು ಹೇಳಿದ ಮಾತಲ್ಲ ಇದು.

30. ಆರ್ಥಿಕ ಆಕ್ರಮಣ

ನಮ್ಮ ದೇಶ ಪರಕೀಯರ ಆಕ್ರಮಣದಿಂದ ಸ್ವತಂತ್ರವಾಯಿತು.

ನಾವು ನೂರಾರು ವರ್ಷ ಬೇರೆಯವರ ಗುಲಾಮರಾಗಿದ್ದೆವು; ಈಗ ಅದು ತಪ್ಪಿದೆ.

ನಮಗೆ ರಾಜಕೀಯವಾಗಿ ಸ್ವರಾಜ್ಯ, ಸ್ವಾತಂತ್ರ್ಯ ಒದಗಿದೆ.

ಆದರೆ ಸ್ವಾತಂತ್ರ್ಯದ ತಾತ್ಪರ್ಯ ಬರಿಯ ರಾಜಕೀಯ ಚೌಕಟ್ಟಿನಲ್ಲಿ ಮಾತ್ರ ಪ್ರಸಕ್ತವಾದುದೆ? ಸ್ವರಾಜ್ಯವೆಂದರೆ ನಮ್ಮವರೇ ರಾಷ್ಟ್ರಾಧ್ಯಕ್ಷರು, ಪ್ರಧಾನಿಗಳು ಇತ್ಯಾದಿ ಎಂದರಾಯಿತೆ?

ಆಕ್ರಮಣವೆಂದರೆ ಒಂದು ದೇಶ ಮತ್ತೊಂದರ ಮೇಲೆ ಬಿದ್ದು ಅದನ್ನು ತಮ್ಮ ವಶವಾಗಿ ಮಾಡಿಕೊಳ್ಳುವುದು, ತಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುವುದು.

ಆಕ್ರಮಣವೆಲ್ಲ ರಾಜಕೀಯವೇ ಎನ್ನಲಾಗದು.

ಆರ್ಥಿಕ ಆಕ್ರಮಣ, ಸಾಂಸ್ಕೃತಿಕ ಆಕ್ರಮಣ, ಸಾಮಾಜಿಕ ಆಕ್ರಮಣ, ಬೌದ್ಧಿಕ ಆಕ್ರಮಣ ಎಂದು ಮುಂತಾಗಿ ಬಗೆಗಳಿವೆ.

ನಮ್ಮದೇ ಲೋಕಸಭೆಯಿದೆ; ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ, ನಿಜ.

ಆದರೆ, ನಮ್ಮ ಉದ್ಯಮ ಎಷ್ಟರಮಟ್ಟಿಗೆ ನಮ್ಮದೇ ಆಗಿ ಉಳಿದಿದೆ? ನಮ್ಮ ದೇಶದ ಆರ್ಥಿಕ ಯೋಜನೆಗಳಲ್ಲಿ ಎಷ್ಟು ಸ್ವಾವಲಂಬಿಗಳಾಗಿದ್ದೇವೆ?

ನಮ್ಮ ಉದ್ಯಮಗಳಿಂದ ಲಾಭ ಪಡೆಯುತ್ತಿರುವವರು ನಮ್ಮವರೋ, ಬೇರೆ ದೇಶಗಳವರೋ? ಯಾರ ಕೈ ಕೆಸರಾಗುತ್ತದೆ, ಯಾರ ಬಾಯಿಗೆ ಮೊಸರು ದೊರೆಯುತ್ತದೆ?

ಆರ್ಥಿಕವಾದ ಆಕ್ರಮಣ ನಮ್ಮ ದೇಶದ ಮೇಲೆ ನಡೆಯುತ್ತಲೇ ಇದೆ. ಅದರಲ್ಲಿ ಸ್ವರಾಜ್ಯವನ್ನು ನಾವಿನ್ನೂ ಪಡೆದಿಲ್ಲ. ಅದನ್ನು ಪಡೆಯುವ ಸೂಚನೆಯೂ ಅಷ್ಟಾಗಿ ಇಲ್ಲ.

ಮಾರ್ಗೊ, ಪೆಪ್ಸಿ, ಯುನಿಲಿವರ್, ಸೀಸ್ವಾನ್ ಡಿ.ಪಿ. ಮುಂತಾದ ವ್ಯಾಪಾರ ಸಂಸ್ಥೆಗಳು ನಮ್ಮವರಿಗೆ ಮಾಡಿರುವ ಅನ್ಯಾಯದ ಮಾತನ್ನು ಮರೆತರೂ, ಗ್ರಿಂಡ್ಲೆ, ಚಾರ್ಟರ್ಡ್, ಸಿಟಿ ಮುಂತಾದ ಬ್ಯಾಂಕ್‌ಗಳು ನಡೆಸಿರುವ ಆಕ್ರಮಣವಾದರೂ ಎಂಥದು?

ಗ್ಯಾಟ್‌ಕರಾರಿನ ಬಲದಿಂದ ವಿದೇಶೀ ಬ್ಯಾಂಕುಗಳು ನಮ್ಮವರ ಮೇಲೆ ದಾಳಿ ಮಾಡಿ, ನಮ್ಮ ಹಣವನ್ನು ಕೊಂಡೊಯ್ಯುವ ಸಾಧ್ಯತೆಯಿದೆ.

ನಮ್ಮ ಉದ್ಯಮಗಳಿಗೆ ಕೊಡಲಿ ಪೆಟ್ಟನ್ನು ಹಾಕಿ ಬಹುರಾಷ್ಟ್ರೀಯ ಕಂಪನಿಗಳು ದೇಶದ ಸಂಪತ್ತನ್ನು ದೋಚಿಕೊಳ್ಳುವ ಸನ್ನಾಹ ಈಗಾಗಲೇ ನಡೆದಿದೆ.

ಆರ್ಥಿಕವಾಗಿ ಸ್ವಾವಲಂಬನೆಯಿಲ್ಲದ ಜನರಿಗೆ ರಾಜಕೀಯವಾದ ಸ್ವರಾಜ್ಯ ಬಂದರೆ ಪ್ರಯೋಜನವೇನು?

ರಾಜಕೀಯ ಸ್ವಾತಂತ್ರ್ಯವೆನ್ನುವುದು ಗುರಿಯಲ್ಲ, ದಾರಿ. ಅದರಿಂದ ನಮಗೆ ಬರಬೇಕಾದುದು ಆರ್ಥಿಕ ಸ್ವಾತಂತ್ರ್ಯ.

ನಮ್ಮ ರಾಜಕಾರಣಿಗಳು ಈ ಸರಳ ಸತ್ಯವನ್ನು ಮನಗಂಡಿಲ್ಲದಿರುವುದು ದುರ್ದೈವ; ನಮ್ಮ ಬುದ್ಧಿವಂತರು ಕೂಡ ಇದರ ಕಡೆ ಗಮನ ಹರಿಸುತ್ತಿಲ್ಲ.

ಆರ್ಥಿಕ ಸ್ವಾವಲಂಬನೆ ತಪ್ಪಿದರೆ ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ ಸ್ವಾತಂತ್ರ್ಯಗಳಿಗೆಲ್ಲ ಸಂಚಕಾರವೇ. ಇನ್ನು ರಾಜಕೀಯ ಸ್ವಾತಂತ್ರ್ಯಕ್ಕೆ ನೆಲೆಯಾದರೂ ಉಳಿದೀತೆ? ಬೆಲೆಯಾದರೂ ಬಂದೀತೆ?

31. ಲಾಭ-ನಷ್ಟ

ಲಾಭದ ಆಸೆಯ ಮುಂದೆ ಮಾನವೀಯತೆಯೂ ಸಡಿಲವಾಗುತ್ತದೆ.

ನಿದರ್ಶನಕ್ಕೊಂದು ಉದ್ಯಮಸಂಸ್ಥೆ. ಹಾಲೆಂಡಿನದು.

ಹಾಲಂಡಿನಲ್ಲಿ ದನಕರುಗಳು, ಎಮ್ಮೆಗಳು, ಕುರಿಗಳು ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿವೆ. ಜನರ ಸಂಪಾದನೆ ಈ ಜಾನುವಾರುಗಳಿಂದಲೇ ಎನ್ನಿ.

ಅವು ಹೆಚ್ಚಾಗಿ ಹಾಲುಕೊಡಲು ವಿಜ್ಞಾನದ ಸಾಧನಗಳನ್ನವಲಂಬಿಸುವುದು ಸಹಜವೇ ತಾನೇ? ಎಷ್ಟಾದರೂ ಮುಂದುವರಿದ ರಾಷ್ಟ್ರ.

ರಾಸಾಯನಿಕ ದ್ರವ್ಯಗಳನ್ನು ಧಾರಾಳವಾಗಿ ಬಳಸಿಕೊಂಡು ಅವುಗಳ ಗಾತ್ರ, ವೈಶಿಷ್ಟ್ಯ, ಪ್ರಯೋಜನಗಳನ್ನು ಹೆಚ್ಚಿಸಿಕೊಂಡಿದ್ದಾರೆ; ಹಣಮಾಡಿಕೊಂಡಿದ್ದಾರೆ.

ಅವು ತಿಂದು, ಕುಡಿದ ಪದಾರ್ಥಗಳಲ್ಲಿ ಸೇರಿದ್ದ ಈ ರಾಸಾಯನಿಕ ದ್ರವ್ಯಗಳು ಎಲ್ಲವೂ ದೇಹದಲ್ಲೇ ನಿಲ್ಲದೆ ಅವುಗಳ ಮಲಮೂತ್ರಗಳಿಂದ ಹೊರಹೋಗುವುದೂ ಉಂಟಷ್ಟೇ?

ಅಂಥ ಮಲಮೂತ್ರಗಳು ಭೂಮಿಯಲ್ಲಿ ಮಾತ್ರವೇ ಕರಗಬೇಕು? ಅದರಲ್ಲಿನ ರಾಸಾಯನಿಕ ದ್ರವ್ಯಗಳು ಭೂಮಿಗೆ ಸೇರುವುದಿಲ್ಲವೇ?

ಜಾನುವಾರುಗಳ ಸೆಗಣಿಯು ಒಂದೊಂದು ಕಡೆಯೂ ಗುಡ್ಡದಷ್ಟು ಎತ್ತರ ಸೇರುವಾಗ, ಅದರಡಿಯ ಭೂಮಿಯಲ್ಲಿ ರಾಸಾಯನಿಕ ದ್ರವ್ಯಗಳು ಧಾರಾಳವಾಗಿ ಸೇರಿ ವಿಶೇಷವಾಗಿ ಪರಿಣಮಿಸಿವೆಯಂತೆ.

ಭೂಮಿಯೊಳಗಿನ ನೀರಿನಲ್ಲಿ ಈ ವಿಷ ಬೆರೆಯಬಹುದೆಂಬ ಭಯ ಆ ದೇಶದ ವಿಜ್ಞಾನಿಗಳಲ್ಲಿ ಬೇರೂರಿದೆ. ಆ ನೀರನ್ನು ಬಳಸುವ ಜನರ ಗತಿಯೇನು? ಜಾನುವಾರುಗಳ ಗತಿಯೇನು?

ವಿಜ್ಞಾನಿಗಳ ಪ್ರಯೋಗಶಾಲೆಯಲ್ಲಿ ಈ ವಿಚಾರ ಮನವರಿಕೆಯಾದ ಮೇಲೆ ದನಕರುಗಳ, ಎಮ್ಮೆಗಳ, ಕುರಿಗಳ ಮಲಮೂತ್ರಗಳನ್ನು ಗುಡ್ಡದಂತೆ ಗುಡ್ಡ ಮಾಡಬಾರದು, ಅವನ್ನು ಬೇಗನೇ ಹೊರಗೆ ಅಟ್ಟಬೇಕು ಎಂಬ ಎಚ್ಚರಿಕೆಯನ್ನೂ ವಿಜ್ಞಾನಿಗಳು ನೀಡಿದ್ದಾರೆ.

ಜಾನುವಾರುಗಳ ಮಾಲೀಕರೇನು ಮಾಡಬೇಕು? ಉದ್ಯಮಿಗಳ ನೆರವನ್ನು ಪಡೆದು, ಬೆಟ್ಟದಷ್ಟು ಪ್ರಮಾಣದ ಸೆಗಣಿಯನ್ನು ಬೇರೆ ದೇಶಗಳಿಗೆ ಕಳಿಸಬೇಕು.

ಹಾಲೆಂಡಿನ ನೆಲ ಹಾಳಾಗಬಾರದು; ಬೇರೆ ದೇಶಗಳ ನೆಲ ಕೆಟ್ಟರೆ, ಅಲ್ಲಿ ಜನ ಸತ್ತರೆ ಇವರಿಗೇನು?

ಅಲ್ಲಿನ ಒಂದು ಸಂಸ್ಥೆ ತಮ್ಮ ದೇಶಕ್ಕೆ ಒದಗಲಿರುವ ವಿಪತ್ತನ್ನು ತಪ್ಪಿಸಲು, ಈ ವಿಷದಿಂದ ತುಂಬಿದ ಸೆಗಣಿಯನ್ನು ನಮ್ಮ ದೇಶಕ್ಕೆ ಕಳುಹಿಸಿಕೊಡಲು ಸನ್ನಾಹ ನಡೆಸುತ್ತಿದೆಯಂತೆ.

ಎಪ್ಪತ್ತು ಲಕ್ಷ ಟನ್‌ಗಳಷ್ಟು ಹಾಲೆಂಡಿನ ವಿಷಪೂರಿತ ಸೆಗಣಿ ನಮ್ಮ ಬೇಸಾಯಗಾರರಿಗೆ ಗೊಬ್ಬರವಾಗಿ ಬರಲಿದೆಯಂತೆ.

ಇದೇನು ದಾನವಾಗಿಯೂ ಅಲ್ಲ; ಬೆಲೆಗೆ, ಲಾಭಕ್ಕೆ.

ನಮ್ಮ ಜನರ ಆರೋಗ್ಯ, ಆಯುಷ್ಯದ ಆಲೋಚನೆ ಹಾಲೆಂಡಿನ ಉದ್ಯಮಿಗಳಿಗೇಕೆ? ಅವರಿಗೆ ಬೇಕಾಗಿರುವುದು ಅವರ ಜನ ಸುಖವಾಗಿರುವುದು.

ಅದೂ ಮುಖ್ಯವಲ್ಲ; ಅವರ ಉದ್ದೇಶ ಲಾಭ. ವ್ಯಾಪಾರಿ ಸಂಸ್ಥೆಗೆ ಅಗತ್ಯವಾದುದು ಲಾಭ ತಾನೆ?

ಮಾನವೀಯತೆಯಿಂದ ಲಾಭವಿದೆಯೆ?

32. ನ್ಯಾಯಾನ್ಯಾಯ

ಹಣವನ್ನು ಪಡೆಯಲು ಎರಡು ದಾರಿಗಳಂತೆ.

ಒಂದು ನ್ಯಾಯದ್ದು, ಇನ್ನೊಂದು ಅನ್ಯಾಯದ್ದು.

ನ್ಯಾಯದ ದಾರಿಯೆಂದರೆ ಸ್ವಂತ ದುಡಿಮೆಯಿಂದ ಪಡೆದುಕೊಳ್ಳುವುದು ಎಂದಷ್ಟೇ ಅರ್ಥವಲ್ಲ. ಬೇರೆಯವರಿಗೆ ತೊಂದರೆಯಾಗದಂತೆ, ಅವರ ಮೈಮನಸ್ಸುಗಳಿಗೆ ಹಿಂಸೆಯಾಗದಂತೆ ಪಡೆದುಕೊಳ್ಳುವುದು.

'ಅಹಿಂಸಾಯುತೋ ಮಾರ್ಗಃ'.

ಇದಕ್ಕೆ ವಿಪರೀತವಾದುದು ಅನ್ಯಾಯದ ದಾರಿ.

ನ್ಯಾಯದಿಂದ ಪಡೆದುಕೊಂಡ ಹಣ ಉಳಿಯುತ್ತದೆ, ನಮಗೆ ದಕ್ಕುತ್ತದೆ, ಅದರಿಂದ ಒಳ್ಳೆಯದೇ ಆಗುತ್ತದೆ.

'ಅನ್ಯಾಯಪ್ರವೃತ್ತೇರ್ನಚಿರಂ ಸಂಪದಂ'

ಅನ್ಯಾಯದಿಂದ ಬಂದದ್ದು ಬಹುಕಾಲ ಉಳಿಯಲಾರದು, ಅದರಿಂದ ಒಳಿತೂ ಆಗಲಾರದು.

ಅನ್ಯಾಯಕ್ಕೆ ಒಳಗಾದವರ ಕಣ್ಣೀರು, ಕೆಟ್ಟ ಮಾತು ಇವೆಲ್ಲ ಬಹಳ ಹೆಚ್ಚಿನದು. ಕೂರಂಬಿನಂತೆ ಗಾಸಿ ಮಾಡುತ್ತದೆ ಅದು; ಆದರೆ ಅದು ಮೇಲೆರಗುವ ಪರಿ ತಿಳಿಯುವುದಿಲ್ಲ.

ತ್ಯಾಗರಾಜ ಸ್ವಾಮಿಗಳು 'ನ್ಯಾಯಾನ್ಯಾಯಮು ತೆಲುಸುನು ಜಗಮುಲೊ' ಎಂದು ಹೇಳಿದರಲ್ಲವೆ?

ನ್ಯಾಯಾನ್ಯಾಯವೆಂಬ ವಿಭಾಗವನ್ನು ಜನ ಅರಿಯರೆಂದು ಇದರ ಅರ್ಥವಲ್ಲ.

ಅನ್ಯಾಯವೆಂದು ತಿಳಿದರೂ ಅದನ್ನೇ ಹಿಡಿಯುವರಲ್ಲಾ ಎಂಬುದು ಅವರ ಪರಿತಾಪ; ಮಾತಿನ ಧ್ವನಿ.

ಅನ್ಯಾಯವೆಂಬುದು ಯಾರಿಗಾದರೂ ತಟ್ಟನೆ ತಿಳಿಯುತ್ತದೆ. ಆದರೆ ಅದು ಸುಲಭದ ದಾರಿಯೆಂಬ ಸಮಾಧಾನ ಅದನ್ನು ಮರೆಮಾಚುತ್ತದೆ.

ಅಥವಾ, ಅದನ್ನು ಬಿಟ್ಟು ಬೇರೆ ದಾರಿಯೇನು ಎಂಬ ಕಳವಳವೋ, ಎಲ್ಲರೂ ಇದನ್ನೇ ಮಾಡುತ್ತಿದ್ದಾರಲ್ಲಾ ಎಂಬ ಅನಿಸಿಕೆಯೋ ಕೆಲಸ ಮಾಡುವುದುಂಟು.

ಅನ್ಯಾಯದ ದಾರಿ ಸುಲಭವೆಂಬುದು ದಿಟವಿದ್ದೀತು. ಸುಲಭವಲ್ಲದಿದ್ದರೂ, ಬೇಗನೆ ಫಲ ನೀಡುವ ದಾರಿಯೆಂಬುದೇನೋ ದಿಟ.

ಸಂಪಾದನೆಗೆ ತಿಂಗಳೆಲ್ಲ ದುಡಿದು, ದಿನವೆಲ್ಲ ಬೆವರು ಸುರಿಸಿ ಬೇಸರ ಪಡುವುದು ಹೇಗಿದೆ? ಯಾರದ್ದೊ ಕಿಸೆ ಕತ್ತರಿಸಿಯೊ, ಯಾವ ಮನೆಯಲ್ಲೊ ಕಳ್ಳತನ ಮಾಡಿಯೊ, ಯಾವ ವ್ಯವಹಾರದಲ್ಲೊ ಲಂಚ ಪಡೆದೊ ಹಣ ಮಾಡಿಕೊಳ್ಳುವುದು ಹೇಗಿದೆ?

ಜಾಣತನ ಸ್ವಲ್ಪ ಮಟ್ಟಿಗೆ ಬೇಕೇನೋ; ಶ್ರಮವಂತೂ ಇರದು! ಅನ್ಯಾಯದ ಕೆಲಸ ಮಾಡಲು ಧೈರ್ಯ ಬೇಕೆಂಬಿರಾ? ನಿಜ, ಧೈರ್ಯವೂ ಇರಬೇಕು.

ಬಹುಜನ ನ್ಯಾಯದ ಹರವಿನಲ್ಲೇ ಇರುವುದು ಅಂಜಿಕೆಯಿಂದಲೇ. ಅವಕಾಶವಿದ್ದರೆ ಅನ್ಯಾಯ ಮಾಡುವ ಮನಸ್ಸು ಅವರದ್ದು; ಅವಕಾಶ ತಾನಾಗಿ ಬರುತ್ತದೆಯೇ? ಅಂಜಿದವರಿಗೆ ಅವಕಾಶವೆಲ್ಲಿ?

ಇದಕ್ಕಿಂತ ಹೆಚ್ಚಾಗಿ ಮುಂದೆ ಇದರಿಂದ ಏನಾದೀತೆಂಬ ಆಲೋಚನೆ ಇರಬಾರದು; ಆಗ ಅನ್ಯಾಯವೆಂದರೆ ಹೆದರುವುದಿಲ್ಲ!

33. ಬಡವ ಮಡಗಿದಂತೆ

'ಬಡತನವೆನ್ನುವ ಭೂತ' ಎಂದು ಯಾರೋ ಹಿಂದೆ ಕತೆಯೊಂದನ್ನು ಬರೆದಿದ್ದರು.

ಬಡತನದ ಭೂತ ಬೆನ್ನು ಹಿಡಿದರೆ ಮನುಷ್ಯ ಮಾಡಬಾರದ್ದನ್ನೆಲ್ಲ ಮಾಡುತ್ತಾನೆ, ಅವನಿಗೆ ವಿವೇಕವೇ ತಪ್ಪುತ್ತದೆ ಎಂದು ಕತೆಯ ನೀತಿ.

ಬಡತನವನ್ನು ಓಡಿಸಬೇಕಾದುದು ಎಲ್ಲರ ಕರ್ತವ್ಯ, ನಾಡಿನ ಎಲ್ಲರ ಹೊಣೆ ಎಂದು ಕತೆಯ ತಾತ್ಪರ್ಯ.

ಇದು ಸರಿಯೇ, ಯಾರಲ್ಲವೆನ್ನುತ್ತಾರೆ?

ಬಡತನವನ್ನು ತಾವಾಗಿ ಯಾರು ಬರಮಾಡಿಕೊಳ್ಳುತ್ತಾರೆ? ಬಡತನಕ್ಕೆ ಯಾರು ಮನಸಾರೆ ಒಲಿಯುತ್ತಾರೆ? ಬೇರೆ ದಾರಿಯೇ ಇಲ್ಲದಿದ್ದರೆ ಅನುಭವಿಸುತ್ತಾರೆ ಅಷ್ಟೆ.

ಬಡತನವನ್ನು ಹೇಸುವವರೇ ಹೆಚ್ಚು ಮಂದಿ; ಅಂಜುವವರೇ ಎಲ್ಲರೂ. ಬಡತನವಿದ್ದರೆ ಅದು ತೊಲಗಬೇಕು. ಭಾಗ್ಯವಿದ್ದರೂ ಬಡತನ ಬರದಂತೆ ನೋಡಿಕೊಳ್ಳಬೇಕು ಎಂಬ ಕಾತರವೇ ಕಾಣುವುದು.

ಆದರೆ ಬಡತನವೆನ್ನುವುದು ಹೀನಾಯವಾಗಲಾರದು.

ಬಡವನಾಗಿದ್ದ ಮಾತ್ರಕ್ಕೆ ಅವನು ಮರುಳ, ಅಂಜುಗುಳಿ, ಹಿಂದುಳಿಯುವವನು ಎಂದಾಗಲಿ ನಿಕೃಷ್ಟನಾದವನು, ಗೆಲುವಿಲ್ಲದವನು ಎಂದಾಗಲಿ ಅರ್ಥವಲ್ಲ.

ಬಡವರಾಗಿಯೂ ಬದುಕಿನ ಬೆಲೆಯನ್ನು ಅರಿತುಕೊಂಡು ಎಲ್ಲರಿಗೂ ಮೆಚ್ಚಾಗಿ ಬಾಳಿದವರು ಬಹುಮಂದಿ. ಸಂಸ್ಕೃತಿಗೆ ಮೂಲಭೂತವಾದ ಕೊಡುಗೆಯನ್ನು ಕೊಟ್ಟವರೆಲ್ಲ ಬಡವರಾಗಿಯೇ ಉಳಿದವರು.

ನಮ್ಮಲ್ಲಿ ಬಡತನವನ್ನು ಬೇಕೆಂದೇ ಅರಸುವವರೂ ಇದ್ದಾರೆ. ಭಾಗ್ಯ ಮನೆಬಾಗಿಲಿಗೆ ಬಂದರೂ ಅದನ್ನು ಬರಮಾಡಿಕೊಳ್ಳದವರಿದ್ದಾರೆ. ಐಶ್ವರ್ಯವೆಂಬುದೊಂದು ಪಿಶಾಚಿಯೆಂದು ಬಗೆಯುವವರೂ ಇದ್ದಾರೆ.

ಇಂಥವರಿಂದ ಲೋಕಸಂಗ್ರಹದ ಕೆಲಸವೂ ಸಾಗಿದೆ; ಹಲವರ ಬಾಳುವೆಗೆ ಇವರಿಂದ ಬೆಳಕು ಸಂದಿದೆ, ಸಲ್ಲುತ್ತಿದೆ.

ಬಡತನಕ್ಕೆ ಹೀನಾಯದ ನಂಟನ್ನು ಸೇರಿಸುವುದು ಈಚೆಗೆ ತಲೆದೋರಿಕೊಂಡ ಬೇನೆ; ತಲೆ ತಿರುಗಿದವರ ಎಣಿಕೆ.

ಬಡವನಾದವನು ತನ್ನ ಸ್ಥಿತಿಗೆ ತಾನೇ ಮರುಗಿ, ಬೇರೆಯವರೆದುರು ಕೈವೊಡ್ಡಿ, ತಲೆಬಾಗಿ ನಿಂತರೆ ಅದು ಹೀನಾಯವೇ; ಯಾರಲ್ಲವೆನ್ನುತ್ತಾರೆ?

ಆದರೆ ಬಡತನವಿದ್ದರೂ ಸ್ವಾಭಿಮಾನವನ್ನು ಬಿಡದೆ, ಗಂಭೀರವಾಗಿ ಬಾಳುತ್ತ, 'ದೇವರು ಇರಿಸಿದಂತೆ ಇರುವೆ'ನೆಂಬ ವಿಶ್ವಾಸದಿಂದ ಬದುಕುವವರನ್ನು ನಾವು ನೋಡಿಲ್ಲವೆ?

ಹಾಗೆ ನೋಡಿದರೆ, ಭಾಗ್ಯ ಬರುವಾಗಲೇ ಭೂತವು ಬೆನ್ನಟ್ಟಿ ಬರುವುದು ಬಹುವೇಳೆ ದಿಟ. ಈ ಭೂತಚೇಷ್ಟೆಯ ಪರಿಯನ್ನು ಭಾಗ್ಯವಂತರೇ ಬಲ್ಲರು!

34. ವ್ಯಾಪಾರ-ನೀತಿಸಂಹಿತೆ

ಈಗೀಗ ಉದ್ಯಮದಲ್ಲೊಂದು ಸಂಕಟವನ್ನು ಮಾಲೀಕರು ಗಮನಿಸುತ್ತಿದ್ದಾರೆ. ವಿಶ್ವದಲ್ಲಿ ಎಲ್ಲೆಲ್ಲೂ ಇದು ದಿಟ.

ಕೆಲಸಗಾರರ ಕೌಶಲದಿಂದ ಉದ್ಯಮಕ್ಕೆ ಸಂಪೂರ್ಣವಾದ ಲಾಭ ಒದಗುತ್ತಿಲ್ಲ. ಅವರು ಕೆಲಸ ಮಾಡುವುದು ಅರೆಮನಸ್ಸಿನಿಂದಲೇ; ತಮ್ಮ ಶಕ್ತಿಯಿರುವಷ್ಟಲ್ಲ, ಎಷ್ಟು ಮಾಡಬೇಕೋ ಅಷ್ಟೆ.

ಅವರು ಶಕ್ತಿಮೀರಿ ಕೆಲಸ ಮಾಡುವಂತೆ ಹುರಿದುಂಬಿಸುವ ಉಪಾಯವೇನು ಎಂದು ಉದ್ಯಮಿಗಳು ತಲೆ ತುರಿಸಿಕೊಳ್ಳುತ್ತಿದ್ದಾರೆ. ಏನೇನೋ ಪ್ರಚೋದನೆಗಳನ್ನು, ಆಮಿಷಗಳನ್ನು ಕೆಲಸಗಾರರೆದುರು ತೋರಿಸುತ್ತಿದ್ದಾರೆ.

ಇವು ಯಾವುವೂ ಸಫಲವಾದಂತೆ ತೋರುವುದಿಲ್ಲ. ಕಾರ್ಮಿಕರ ಮನೋವೃತ್ತಿಯನ್ನು ಮಾರ್ಪಡಿಸುವ ಬಗೆ ಏನೆಂಬುದು ಬಗೆಹರಿದಿಲ್ಲ.

ಜಪಾನಿನಲ್ಲಿ ಹೊಸದೊಂದು ಉಪಾಯವನ್ನು ಹೂಡಿದ್ದಾರೆ. ಕೆಲಸಗಾರರು ಒಟ್ಟಾಗಿ ಪ್ರಾರ್ಥನೆ ಸಲ್ಲಿಸುವುದು, ಧ್ಯಾನಮಾಡುವುದು, ಆಧ್ಯಾತ್ಮಿಕ ವಿಚಾರಗಳಲ್ಲಿ ತೊಡಗುವುದು ಇದರಿಂದ ಉದ್ಯಮದ ದಿನಚರಿ ಆರಂಭವಾಗುತ್ತದೆ.

ಕೈಯಿಂದ ಮಾಡುವ ಕೆಲಸ ಏನೇ ಇರಲಿ, ಮನಸ್ಸು ನಿರ್ಮಲವಾಗಿದ್ದರೆ ಕೆಲಸದಲ್ಲಿ ಉತ್ಸಾಹ ಬರುತ್ತದೆ ಎಂಬುದು ಅಲ್ಲಿನ ಪರಿಣತರ ತರ್ಕ. ಮನಸ್ಸಿನ ನೈರ್ಮಲ್ಯಕ್ಕಾಗಿ ಪ್ರಾರ್ಥನೆ, ಧ್ಯಾನ, ಆಧ್ಯಾತ್ಮಿಕ ವಿಚಾರ.

ಇದರಿಂದ ಸ್ವಲ್ಪ ಪ್ರಯೋಜನವೇನೋ ಆಗಿದೆಯಂತೆ.

ಅಮೇರಿಕೆಯಲ್ಲೂ ವಾಣಿಜ್ಯ ಕ್ಷೇತ್ರದಲ್ಲಿ ನೀತಿಸಂಹಿತೆಯಿರಬೇಕೆಂಬ ಕೂಗು ಹೊರಟಿದೆ.

ಉದ್ಯಮವೆಂದರೆ ಹಣಕಾಸಿನ, ಲಾಭದ ವ್ಯವಹಾರ. ಉದ್ಯಮವಿರುವುದೇ ಲಾಭದ ಗಳಿಕೆಗಾಗಿ. ಲಾಭದ ಉದ್ದೇಶವಿಲ್ಲದೆ ಯಾರು ಉದ್ಯಮವನ್ನು ಆರಂಭಿಸುತ್ತಾರೆ?

ಇಲ್ಲಿ ನೀತಿಸಂಹಿತೆಯ ಔಚಿತ್ಯವೇನು? ಸಾಧ್ಯತೆಯೇನು?

ಅಗತ್ಯದ ಮಾತು ಬೇರೆ. ವ್ಯಾಪಾರದಲ್ಲೂ ಧರ್ಮ ಇರಬೇಕು, ಗಳಿಕೆಯೇ ಆದರೂ ನೀತಿಯ ನೆಲೆಯಲ್ಲಿ ಇರಬೇಕು ಎಂದು ಎಲ್ಲರೂ ಹೇಳುತ್ತಾರೆ; ಲಾಭಕೋರರೂ ಹೇಳದೆ ಇಲ್ಲ. ಸೈತಾನನಿಗೆ ಶಾಸ್ತ್ರ ತಿಳಿದಿಲ್ಲವೆ? ಆದರೆ ಮಾಡುವ ಕೆಲಸವನ್ನು ಬಿಡುತ್ತಾನೆಯೆ?

ಅಗತ್ಯವೆಂದೇ ಇಟ್ಟುಕೊಳ್ಳೋಣ. ಆದರೆ ವ್ಯಾಪಾರದಲ್ಲಿ ಅದು ಒಡಮೂಡುವ, ಪ್ರಭಾವ ಬೀರುವ ಸಂಭವ ಎಷ್ಟರಮಟ್ಟಿಗೆ?

ವ್ಯಾಪಾರದ ನೀತಿಸಂಹಿತೆಯೇ ಬೇರೆ, ದಿನನಿತ್ಯದ ನೀತಿಸಂಹಿತೆಯೇ ಬೇರೆ ಎಂದು ಹೇಳುವವರೂ ಇದ್ದಾರೆ. ಮನೆಯಲ್ಲೊಂದು, ಉದ್ಯಮದಲ್ಲಿನ್ನೊಂದು!

ವೈಯಕ್ತಿಕ ನೆಲೆಯಲ್ಲಿ ನೀತಿ, ಸಾರ್ವಜನಿಕ ನೆಲೆಯಲ್ಲಿ ನೀತಿ ಒಂದೇ ಆಗಿರಲು ಸಾಧ್ಯವಿದೆಯೆ? ಕೆಲಸಗಾರರಿಗೆ ಅರ್ಥವಾಗುವುದು ಒಂದು ನೀತಿಸಂಹಿತೆ; ಉದ್ಯಮಿಗಳು ಹೇಳುವುದು ಇನ್ನೊಂದು ನೀತಿಸಂಹಿತೆ; ಸ್ವಾರ್ಥದ್ದು.

ನೀತಿಸಂಹಿತೆಯೂ ಸ್ವಾರ್ಥಕ್ಕಾಗಿಯೇ ಎಂದರೆ ಅಂಥ ನೀತಿಸಂಹಿತೆಗಳ ಬೆಲೆಯೇನು? ಲಾಭಕ್ಕೆ ದಾರಿ ಮಾಡಿಕೊಡಲೆಂದು ನೀತಿಯನ್ನು ಬಳಸಿಕೊಂಡರೆ ಹೇಗೆ?

35. ಬದುಕು-ಅರ್ಥ

ಹದಿನೆಂಟು ವರ್ಷ ವಯಸ್ಸಿನ ಬೋರಿಸ್ ಬೆಕರ್ ನಾಲ್ಕಾರು ವರ್ಷಗಳ ಹಿಂದೆ ಟೆನಿಸ್ ಚಾಂಪಿಯನ್ ಆದ.

ಕ್ರೀಡಾಪ್ರಿಯರ ಕಣ್ಮಣಿಯಾದ; ಮಿಲಿಯನ್‌ಗಟ್ಟಳೆ ಹಣವೂ ಅವನನ್ನರಸಿ ಬಂದಿತು. ಅವನ ಜನಪ್ರಿಯತೆ ಮುಗಿಲನ್ನು ಮುಟ್ಟಿತು.

ಭೋಗಜೀವನ ಅವನ ವಶವಾಯಿತು. ಅವನು ಬಯಸಿದ್ದೆಲ್ಲ ಕೈಗೂಡುವಂತಾಯಿತು. ಬದುಕಿನಲ್ಲಿ ಇನ್ನೇನು ಬೇಕು?

ಆದರೆ ಈ ಹರೆಯದ ಹುಡುಗನಿಗೆ ಅದೇನೋ ಬದುಕೇ ಬೇಸರವೆನಿಸಿತು. ಎಲ್ಲೆಲ್ಲಿಯೂ ಸಮಾಧಾನ ಸಿಗಲಿಲ್ಲ. ತಾನಿರುವುದೇ ಒಂದು ಹೊರೆಯೆನಿಸಿತು. ಇನ್ನು ಭೋಗಕ್ಕೆಲ್ಲಿಯ ಯೋಗ? ಇದರಿಂದ ಸ್ಪಷ್ಟವಾಗುವುದೇನು?

ಹಣದಿಂದಾಗಲಿ, ಕೀರ್ತಿಯಿಂದಾಗಲಿ, ಭೋಗವಸ್ತುಗಳಿಂದಾಗಲಿ ಸುಖವೆಂಬುದು ಕಟ್ಟಿಟ್ಟ ಬುತ್ತಿಯಲ್ಲ. ಜನಪ್ರಿಯತೆಯಿಂದ ನೆಮ್ಮದಿಯು ತಾನೇ ತಾನಾಗಿ ಬರಲಾರದು.

ಬದುಕಿಗೊಂದು ಅರ್ಥವಿದೆಯೆಂಬುದು ಬೋರಿಸ್ ಬೆಕರ್‌ಗೆ ತಿಳಿಯಲಿಲ್ಲ. ಆಟದಲ್ಲಿ ಎಲ್ಲರನ್ನೂ ಗೆದ್ದ ಮಾತ್ರಕ್ಕೆ, ಎಲ್ಲರಿಂದಲೂ ಪುರಸ್ಕಾರವನ್ನು ಪಡೆದುಕೊಂಡ ಮಾತ್ರಕ್ಕೆ, ಮಿಲಿಯುನಿಯರ್ ಆದ ಮಾತ್ರಕ್ಕೆ ಬದುಕಿಗೊಂದು ಅರ್ಥ ಮೂಡಿಕೊಳ್ಳುವುದಿಲ್ಲ.

ಹೊರಗಿನಿಂದ ಎಲ್ಲಿಂದಲೋ ಬಂದು ಮೈಗೆ ಅಂಟಿಕೊಂಡು ಕೂಡುವುದಲ್ಲ ಈ ಅರ್ಥ. ತನ್ನ ಪರಂಪರೆಯಿಂದ, ತಂದೆತಾಯಿಯರಿಂದ, ತನ್ನ ಅಧ್ಯಯನದಿಂದ, ತನ್ನ ಅನುಭವದಿಂದ, ತಾನೇ ಮಾಡುವ ವಿಚಾರದಿಂದ ಬದುಕಿನ ಅರ್ಥ ಕೈಗೂಡುತ್ತದೆ.

ಹಣ ಯಶಸ್ಸು ಮುಂತಾದವುಗಳಿಗೂ ಈ ಅರ್ಥಕ್ಕೂ ಸಂಬಂಧವಿರದು. ಬದುಕಿನ ಬಗ್ಗೆ ಆಳವಾದ ಒಂದು ವಿಶ್ವಾಸ, ಸುತ್ತಮುತ್ತಲ ವಿಚಾರವಾಗಿ ಒಂದು ನಂಬಿಕೆ, ಇಷ್ಟಿದ್ದ ಮೇಲೆ ಬದುಕು ಹೇಗಿರಬೇಕು, ಬದುಕುವ ಉದ್ದೇಶವಾದರೂ ಏನು, ಬದುಕಿನಲ್ಲಿ ತಾತ್ಕಾಲಿಕ ಗುರಿಗಳು ಯಾವುವು, ಸಾರ್ವಕಾಲಿಕ ಧ್ಯೇಯವೇನು ಎಂಬುದೆಲ್ಲ ಅರಿವಿಗೆ ಬರುವುದು ಸಾಧ್ಯವಾದೀತು.

ಬೋರಿಸ್ ಬೆಕರ್ ಆಟದಲ್ಲಿ ಗೆದ್ದಂತೆಯೇ ಉದ್ಯಮದಲ್ಲಿ ಯಶಸ್ವಿಗಳಾಗುವವರಿದ್ದಾರೆ; ಅವನಂತೆಯೇ ಸಂಪತ್ತನ್ನು ಪಡೆದುಕೊಳ್ಳುವವರಿದ್ದಾರೆ, ಪ್ರಸಿದ್ಧರಾಗುವವರೂ ಇದ್ದಾರೆ.

ಆದರೆ ಅವರ ಮನಸ್ಸಿಗೆ ನೆಮ್ಮದಿ ದೊರೆತಿದೆಯೆ, ಅವರ ಹೃದಯದಲ್ಲಿ ಶಾಂತಿ ಮೂಡಿದೆಯೆ ಎಂಬುದು ಮುಖ್ಯವಾದ ವಿಚಾರ.

ಇದು ಅವರ ಜೀವನ ಮೀಮಾಂಸೆಯನ್ನು ಅವಲಂಬಿಸುವ ವಿವರ. ಬದುಕಿಗೆ ಅವರು ಕೊಡುವ ಬೆಲೆಯೇನು, ಬದುಕಿನ ತಾತ್ಪರ್ಯ ಅವರ ದೃಷ್ಟಿಯಲ್ಲಿ ಹೇಗೆ ಎಂಬುದು ಚೌಕಟ್ಟಾಗುತ್ತದೆ.

36. ಕುರುಡು ಕಾಂಚಾಣ

ಬೇಂದ್ರೆಯವರು ಕಾಂಚಾಣವನ್ನು ಕುರುಡೆಂದು ಕರೆದು, ಅದು ಕುಣಿಯುತ್ತಿರುವಂತೆ, ಕಾಲಿಗೆ ಬಿದ್ದವರನ್ನು ತುಳಿಯುತ್ತಿರುವಂತೆ ಕಲ್ಪಿಸಿಕೊಂಡಿದ್ದಾರೆ.

ಕಾಂಚಾಣವೆನ್ನುವ ಕನ್ನಡ ಮಾತಿಗೆ ಕಾಂಚನವೆನ್ನುವ ಸಂಸ್ಕೃತಪದ ಮೂಲ. ಕಾಂಚನವೆಂದರೆ ಬಂಗಾರ.

ಕಾಂಚನವೆಂಬ ಮಾತು ಹೊಳೆಯುವುದು, ಬೆಳಗುವುದು ಎಂಬರ್ಥದಲ್ಲಿ ಬರುತ್ತದೆ. 'ಕಚಿ ದೀಪ್ತಾ' ಎಂಬುದು ಧಾತು.

ಎಲ್ಲರನ್ನೂ ಆಕರ್ಷಿಸುವುದು, ಎಲ್ಲರ ಗಮನವನ್ನೂ ಸೆಳೆದುಕೊಳ್ಳುವುದು ಕಾಂಚನ, ಕಾಂಚಣ.

ಹಣಕ್ಕೆ ಈ ಗುಣ ಇರುವುದನ್ನು ಎಲ್ಲರೂ ಬಲ್ಲರು. ಎಲ್ಲರ ಬಯಕೆಗೂ ಅದು ಪಾತ್ರವಾದದ್ದು; ಪ್ರಪಂಚವನ್ನೆಲ್ಲ ಬೆಳಗುತ್ತಿರುವುದು ಅದೇ.

ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಎಲ್ಲರ ಕಣ್ಣನ್ನೂ ಕೋರೈಸುತ್ತಿರುವುದು ಕಾಂಚಾಣವೇ, ಎಲ್ಲರೂ ಅರಸುವುದು ಅದನ್ನೇ.

ಅದು ಕುರುಡೆಂದರೇನು? ಕಾಂಚಾಣವನ್ನು ಎಡೆಬಿಡದೆ ಬಯಸಿ ದುಡಿಯುವ ಭಕ್ತರ ಕೊರಳಿಗೆ ಮಾಲೆ ಹಾಕುತ್ತದೆ.

ತನ್ನ ಭಕ್ತನ ಯೋಗ್ಯತೆಯೇನು, ಅಗತ್ಯವೇನು, ಅವನ ವ್ಯಸನಗಳು ಯಾವುವು, ಅವನ ಕರ್ಮ ಎಂಥದು, ಕಾಂಚಾಣವನ್ನು ಪಡೆದುಕೊಂಡು ಯಾವ ಪುರುಷಾರ್ಥವನ್ನು ಅವನು ಸಾಧಿಸಿಕೊಳ್ಳುತ್ತಾನೆ ಮುಂತಾದ ಯಾವ ವಿವರವನ್ನೂ ಅದು ಗಮನಿಸುವುದಿಲ್ಲ, ವಿವೇಚನೆ ಮಾಡುವುದಿಲ್ಲ.

ಹೀಗೆ ಅದು ಕುರುಡು. ಅದಕ್ಕೆ 'ಇಂಥವನಿಗೆ ತಾನು ಒಲಿಯಬೇಕು, ಇಂಥವನನ್ನು ಕೂಡಿಕೊಳ್ಳಬಾರದು' ಎಂಬ ವಿವೇಕವಿಲ್ಲ.

ಮತ್ತೆ ಹಣದಿಂದ ಒಳ್ಳೆಯದೂ ಆಗಬಹುದು, ಕೆಟ್ಟದೂ ಆಗಬಹುದು; ಹಣಕ್ಕೆ ತನ್ನದೇ ಆದ ಪ್ರಯೋಜನವಾಗಲಿ ಬಯಕೆಯಾಗಲಿ ಇರದು. ಯಾರು ಹೇಗೆ ನಡೆಸಿದರೆ ಹಾಗೆ ನಡೆಯುತ್ತದೆ, ಬೇಕೆನ್ನುವುದಿಲ್ಲ, ಬೇಡವೆನ್ನುವುದಿಲ್ಲ.

ಒಂದೆಡೆ ನಿಲ್ಲದೆ, ಒಬ್ಬರಿಂದೊಬ್ಬರಿಗೆ ಸಲ್ಲುತ್ತ, ಎಲ್ಲೆಲ್ಲೂ ಕುಣಿದಾಡುತ್ತಿರುವ ಈ ಕಾಂಚಾಣ ತನ್ನ ಬಳಿ ಬಂದು ತನ್ನ ಸುತ್ತ ತಿರುಗುತ್ತಿರುವವರನ್ನೇ ತುಳಿಯುತ್ತದೆ.

ತನ್ನನ್ನೇ ನಂಬಿಕೊಂಡವರ ಬಾಳನ್ನು ಬರಡು ಮಾಡಿಬಿಡುತ್ತದೆ. ಅವರ ಬಗ್ಗೆ ಅಭಿಮಾನವಾಗಲಿ ಕರುಣೆಯಾಗಲಿ ಅದಕ್ಕಿರದು.

ತನ್ನ ಕಾಲಿಗೆ ಬಿದ್ದವರನ್ನು ತುಳಿಯುವಾಗಲೂ ಅದು ಕುರುಡೇ. ಯಾರನ್ನೊ ತುಳಿಯುತ್ತಿದ್ದೇನೆಂಬ ಪರಿವೆಯಾದರೂ ಇದೆಯೆ?

ಈ ಕುರುಡು ಕಾಂಚಾಣದ ಬಲೆಗೆ ಬಿದ್ದವರೂ ಕುರುಡರೇ ಆಗುವುದೊಂದು ಸೋಜಿಗ.

ಅವರಿಗಾದರೂ ಹಣದ ಗುಣ ಅವಗುಣಗಳು ತಿಳಿಯುವುದೆ? ಹೇಗಿದ್ದರೂ ಅದು ಬೇಕೆಂಬ ಹಟ ಅವರಿಗೆ.

37. ಹಣ - ಐಶ್ವರ್ಯ

ಹಲವರು ಹಣಕ್ಕೂ ಐಶ್ವರ್ಯಕ್ಕೂ ಇರುವ ಭೇದವನ್ನು ಎಣಿಸುವುದಿಲ್ಲ. ಅವೆರಡೂ ಬೇರೆ ಬೇರೆ. ಹಣವೆಂದರೆ ದ್ರವ್ಯ. ಐಶ್ವರ್ಯವೆನ್ನುವ ಮಾತಿಗೆ ಒಡೆತನ, ಶಕ್ತಿ ಎಂಬರ್ಥವಿದೆ.

ಬರಿದೆ ಹಣವನ್ನು ಕೂಡಿಹಾಕಿಕೊಂಡು ಅದನ್ನನುಭವಿಸದಿದ್ದರೆ ಅದು ಐಶ್ವರ್ಯವಾಗುವುದಿಲ್ಲ.

ಈಶ್ವರನ ಭಾವ ಐಶ್ವರ್ಯ. ಈಶ್ವರನೆಂದರೆ ಒಡೆಯ, ಆಳುವವನು. ಸುಖಭೋಗಗಳೆಲ್ಲ ಅವನ ಅಧೀನವಾಗಿರುವುದೆಂದರ್ಥ.

ಹಣವಿದ್ದು ಸುಖವನ್ನನುಭವಿಸಲಾಗದಿದ್ದರೆ ಅದು ಐಶ್ವರ್ಯವಲ್ಲ. ಹಣವಿದ್ದುದಕ್ಕೆ ತಕ್ಕಂತೆ ಒಡೆತನವೂ ಇರಬೇಕು.

ಒಡೆತನವಾದರೋ ಹಣದಿಂದ ಮಾತ್ರ ಒದಗಿಬರುವಂಥದಲ್ಲ. ಜನಾನುರಾಗ, ಬುದ್ಧಿವಂತಿಕೆ, ಸೌಜನ್ಯ, ಉಪಕಾರಬುದ್ಧಿ ಇವೆಲ್ಲವೂ ಇದ್ದರೆ ಬೇರೆಯವರ ಮೇಲೆ ಒಡೆತನವೂ ಇದ್ದೀತು.

ಅವನು ಹೇಳಿದಂತೆ ಜನ ಕೇಳುತ್ತಾರೆ, ಅವನನ್ನು ಅನುಸರಿಸುತ್ತಾರೆ, ಅವನನ್ನು ಓಲೈಸುತ್ತಾರೆ, ಹೊಗಳುತ್ತಾರೆ.

ಹೀಗೆ ಮಾಡಿದಾಗ ಹಣವಂತನಿಗೊಂದು ಹೆಮ್ಮೆ, ಹಣವಿದ್ದುದು ಸಾರ್ಥಕವಾಯಿತು ಎಂದುಕೊಂಡಾನು.

ಹಣವನ್ನು ಬಳಸಿ ಅದರಿಂದ ನೆಮ್ಮದಿಯನ್ನೋ ಸುಖವನ್ನೋ ಜನರ ಆದರವನ್ನೋ ಗಳಿಸಿಕೊಂಡರೆ ಅದು ಐಶ್ವರ್ಯವಾಗಿ ಮಾರ್ಪಡುತ್ತದೆ.

ಹಣವನ್ನು ಹಾಗೆಯೇ ಕೂಡಿಟ್ಟು, ಎಣಿಸುವುದರಲ್ಲೇ ಕಾಲ ಕಳೆಯುವವನಿಗೆ ಐಶ್ವರ್ಯವೆಲ್ಲಿ ಬಂತು?

ಧನವಿರುವುದು ಹಂಚಿಕೊಳ್ಳುವುದಕ್ಕೆ. ನಮ್ಮಲ್ಲಿ ದಾನವೆಂಬ ಮಾತಿಗೆ 'ಸಂವಿಭಾಗ'ವೆಂದೇ ಅರ್ಥವಿದೆ.

ಬೇರೊಬ್ಬರಿಗೆ ನಮ್ಮಲ್ಲಿರುವುದನ್ನು ಕೈಯೆತ್ತಿ ನೀಡಿದಾಗ, ನಮ್ಮ ಹಣವನ್ನು ಅವರೊಂದಿಗೆ ಹಂಚಿಕೊಳ್ಳುತ್ತೇವೆ.

ಹಣವನ್ನು ಮಾತ್ರ ಹಂಚಿಕೊಳ್ಳುವುದಿಲ್ಲ, ಐಶ್ವರ್ಯವನ್ನೂ ಹಂಚಿಕೊಳ್ಳುತ್ತೇವೆ.

ಹಣದ ಪ್ರಯೋಜನವು ಹಿಗ್ಗುವುದು ಅದನ್ನು ಸರಿಯಾದ ದಾರಿಯಲ್ಲಿ ಬಳಸುವಾಗಲೇ. ಅದರಿಂದ ನಮಗೂ ಇತರರಿಗೂ ತೃಪ್ತಿಯಾದರೆ, ಸಂತೋಷವಾದರೆ ಅದಕ್ಕಿಂತ ಮಿಗಿಲಾದ ಐಶ್ವರ್ಯವಿದೆಯೇ?

ಹಣದ ಸ್ವಭಾವವೇ ಕರಗುವುದು. ವೆಚ್ಚ ಮಾಡಿದಂತೆ ಅದು ಕಡಮೆಯಾಗುತ್ತ ಬರುತ್ತದೆ. ಆದರೆ ಹಣ ಹೋದರೂ ಉಳಿದುಕೊಳ್ಳುವುದು ಐಶ್ವರ್ಯ, ಹಣ ಸದ್ವಿನಿಯೋಗವಾದಾಗ.

38. ಹಣದಾಸೆಯ ಅಪಾಯ

'ಹಣವಿರಲಿ, ಹಣದಾಸೆ ಬೇಡ'.

ಹೀಗೆಂದು ರಂಗಬಿನ್ನಪವಿದ. ಆದರೆ ಒಗಟಿನಂತೆ ಕಾಣುತ್ತದೆಯಲ್ಲವೆ?

ಹಣದಾಸೆಯಿರದೆ ಹಣ ಬರುವುದಾದರೂ ಹೇಗೆ? ಆಸೆಯಿದ್ದಲ್ಲಿ ಹಣ; ಹಣವಿದ್ದಲ್ಲಿ ಆಸೆ. ಒಂದನ್ನು ಬಿಟ್ಟು ಇನ್ನೊಂದು ಇರಲು ಸಾಧ್ಯವೆ?

ರಂಗಬಿನ್ನಪದ ಅಭಿಪ್ರಾಯ ಹೆಚ್ಚಿನ ಹಣದಾಸೆ ಬೇಡ ಎಂದಿದ್ದೀತು.

ಹಣವಿರದವರಿಗೆ ಸ್ವಲ್ಪ ಹಣದಾಸೆ; ಹಣವಿದ್ದವರಿಗೆ ಹೆಚ್ಚಿನ ಹಣದಾಸೆ. ಇದು ಲೋಕಸ್ವಭಾವ. ಹಣವಿದ್ದರೆ ಇನ್ನಷ್ಟು ಹಣ ಸೇರುವ ಸಂಭವವಿದೆ. ಹಣವೇ ಇಲ್ಲದವನ ಬಳಿ ಹಣ ಸುಳಿಯದು.

ಆದರೆ ಹಣ ಯಾರಿಗೆ ಬೇಡ? ಅದನ್ನು ಬಯಸದಿರುವವರು ಯಾರು? ಬದುಕಿನ ಅಗತ್ಯಗಳು ತೀರುವುದು ಹಣದಿಂದಲೇ ಅಲ್ಲವೆ?

ಹಣವಿರಲಿ, ಬೇಡವೆನ್ನುವುದಿಲ್ಲ.

ಆದರೆ ಹಣವೇ ಮುಖ್ಯವೆಂದು ಅದರ ಬೆನ್ನುಹತ್ತಿ ಓಡುವುದು ಬೇಡ. ಇದು ರಂಗಬಿನ್ನಪದ ಆಶಯ.

ಬದುಕಿನಲ್ಲಿ ಹಣಕ್ಕೂ ಒಂದು ನೆಲೆಯಿದೆ, ಬೆಲೆಯಿದೆ. ಆ ನೆಲೆಯಲ್ಲಿ ಅದಿದ್ದರೆ ಅದಕ್ಕೊಂದು ಬೆಲೆ.

ಬದುಕಿನ ಎಲ್ಲ ನೆಲೆಗಳನ್ನೂ ಅದೇ ಆಕ್ರಮಿಸಿಕೊಳ್ಳುವುದಾದರೆ ಇರುವ ಬೆಲೆಯನ್ನೂ ಕಳೆದುಕೊಳ್ಳುತ್ತದೆ.

ಬದುಕನ್ನು ನೆಮ್ಮದಿಯಿಂದ ನಡೆಸಲು ಹಣ ಬೇಕು; ನೆಮ್ಮದಿಯಿರದಿದ್ದರೂ ಹಣವೇ ಇರಲಿ, ಹಣವೊಂದೇ ಇರುತ್ತಿರಲಿ ಎನ್ನುವುದು ಬುದ್ಧಿವಂತಿಕೆಯ ಲಕ್ಷಣವಲ್ಲ.

ಹಣದ ಸ್ವಭಾವವೊಂದಿದೆ. ಅದನ್ನೆ ಅರಸಿಕೊಂಡು ಹೋಗುವವರಿಗೆ ಅದು ಒಲಿಯುತ್ತದೆ; ಅದರ ಒಲುಮೆಯಲ್ಲಿ ಮಾಯೆಯ ಬಲೆಯೂ ಒಂದಿದೆ; ಅದೇ

ಸರ್ವಸ್ವವೆಂಬಂತೆ ತೋರಿಕೊಳ್ಳುತ್ತದೆ. ಬೇರೆ ಯಾವುದನ್ನೂ ಅರಸಲು ಅದು ಬಿಡುವುದಿಲ್ಲ.

ವಿದ್ಯೆ, ಕಲೆ, ಧರ್ಮ, ಲೋಕಸಂಗ್ರಹ, ಸುಖ ಇವೆಲ್ಲವೂ ಬದುಕಿನ ಅಗತ್ಯಗಳೇ. ಆದರೆ ಇವುಗಳಲ್ಲಿ ಹಣಕ್ಕಿರುವ ಕಪಿಮುಷ್ಟಿಯಿಲ್ಲ.

ಬದುಕಿನ ಸ್ವಾರಸ್ಯವನ್ನು ಇವು ಹೆಚ್ಚಿಸುತ್ತವೆ. ಇವಕ್ಕೆ ಹಣದ ಅಗತ್ಯವೇನೋ ಇದ್ದದ್ದೆ. ಆದರೆ ಆ ಅಗತ್ಯಕ್ಕೇ ಅಂಟಿಕೊಂಡು ಕೂಡುವುದಿಲ್ಲ, ಅವು.

ಹಣದ ಹಂಬಲವಿದ್ದರೆ ಉಳಿದ ಯಾವ ಆಸೆಯ ಕಡೆಗೂ ಮನಸ್ಸು ಹೋಗಲಾರದು; ಹಣದ್ದೇ ಗೀಳು!

ಇದೊಂದು ದೊಡ್ಡ ಅಪಾಯವೇ ಅಲ್ಲವೆ?

39. ಹಣದ ಹಿಡಿತ

ಮುಪ್ಪಡರಿದರೆ ಆಸೆಗಳು ಸಡಿಲವಾಗುತ್ತವೆ, ಜಾರಿಕೊಳ್ಳುತ್ತವೆ.

ದೇಹದಲ್ಲಿ ಬಲ ಕುಂದಿದಾಗ, ಇಂದ್ರಿಯಗಳು ಪಾಟವವನ್ನು ಕಳೆದುಕೊಂಡಾಗ, ಮನಸ್ಸು ಮುದುಡಿಕೊಂಡಾಗ ಆಸೆಗಳಿಗೆಲ್ಲಿ ಜಾಗ?

ಆಸೆಗಳಿದ್ದರೂ ಅವು ಕೈಗೂಡುವುದು ಕಷ್ಟವೆಂಬ ಅರಿವಾದಾಗ, ಬುದ್ಧಿವಂತನು ಆಸೆಗಳನ್ನು ಕೈಬಿಡುತ್ತಾನೆ.

ಯಾವುದಾದರೂ ತತ್ತ್ವದ, ಶ್ರದ್ಧೆಯ, ವೈರಾಗ್ಯದ ಬಲೆಗೆ ಬೀಳುತ್ತಾನೆ. ಹಾಗೆ ಸಮಾಧಾನಪಟ್ಟುಕೊಳ್ಳುತ್ತಾನೆ.

ಕೈಗೆಟುಕದ ದ್ರಾಕ್ಷಿಯನ್ನು ನರಿ ಹುಳಿಯೆನ್ನಲಿಲ್ಲವೆ?

ಯಾವುದಾದರೂ ಕಾರಣಕ್ಕೆ ಯಾವೊಂದು ಆಸೆಯೂ ದೂರವಾಗಬಹುದು.

ಆದರೆ ಎರಡು ಆಸೆಗಳು ಮಾತ್ರ ಅಂಟಿಕೊಂಡೇ ಇರುತ್ತವೆ.

ಒಂದು ಜೀವದ ಆಸೆ, ಇನ್ನೊಂದು ಹಣದ ಆಸೆ.

ಎಷ್ಟೇ ವಯಸ್ಸಾಗಿರಲಿ, ಏನೇ ತೊಂದರೆಗಳಿರಲಿ, ಸಾಯಲು ಯಾರೂ ಒಡಂಬಡುವುದಿಲ್ಲ.

ಪ್ರಾಣ ಹೋಗುತ್ತಿರುವಾಗಲೂ ಏನಾದರೂ ಮಾಡಿ ಅದನ್ನು ಹಿಂದಕ್ಕೆ ಸೆಳೆದುಕೊಳ್ಳುವ ಹಂಬಲ ಹಲವರಿಗೆ.

ಹಾಗೆಯೇ ಹಣದ ಮೇಲಣ ಮೋಹ, ಏನಾದರೂ ಬಿಡದು.

ಹಣವಿಲ್ಲದವರಿಗೇನೋ ಹಣವನ್ನು ಪಡೆದುಕೊಳ್ಳುವಾಸೆ; ಹಣವಿದ್ದವರಿಗೆ ಇನ್ನಷ್ಟು ಹಣವನ್ನು ಹೆಚ್ಚಿಸಿಕೊಳ್ಳುವ ದುರಾಸೆ?

ಹಣವಿದ್ದರೆ ಸುಖ, ಸಂತೋಷ, ನೆಮ್ಮದಿ ಎನ್ನುವ ಭ್ರಮೆ ಇದಕ್ಕೆ ಕಾರಣ.

ವಯಸ್ಸಾದಂತೆ, ಅನುಭವ ಒದಗಿದಂತೆ, ಈ ಭ್ರಮೆ ತೊಲಗುವುದಿಲ್ಲ; ಇನ್ನೂ ಗಟ್ಟಿಯಾಗಿ ಬೇರೂರಿಕೊಳ್ಳುತ್ತದೆ.

ಹಣದಿಂದ ಸುಖಕ್ಕಿಂತ ದುಃಖವೇ ಹೆಚ್ಚು ಎನ್ನುವುದು ಹಲವರ ಅನುಭವದಲ್ಲಿದೆ; ಹಣ ನಂಟರನ್ನು ಹಗೆಗಳನ್ನಾಗಿ ಮಾರ್ಪಡಿಸುವುದನ್ನು ಯಾರರಿಯರು? ತಂದೆ-ಮಕ್ಕಳನ್ನು ಅಗಲಿಸುವುದು ಕಂಡಿಲ್ಲವೆ?

ವಯಸ್ಸಾದಂತೆ, ಮನಸ್ಸು ಬಲಿತಂತೆ ಹಣದ ಆಸೆ ಕಡಮೆಯಾಗಬೇಕು, ಅದರ ಸೆಳೆತ ಸಡಿಲವಾಗಬೇಕು.

ಆದರೆ ಆಗುವುದಿಲ್ಲ. 'ಕುರುಡು ಕಾಂಚಾಣ' ಎನ್ನುತ್ತೇವೆ. ಕಾಂಚಾಣವೇನು ಕುರುಡಲ್ಲ; ಅದನ್ನು ನಂಬಿಕೊಂಡವರು ಕುರುಡರು.

ಜೀವದ ಆಸೆ ಹಣಕ್ಕಾಗಿ, ಹಣದ ಆಸೆ ಜೀವಕ್ಕಾಗಿ.

ಇವೆರಡೂ ಏತಕ್ಕಾಗಿ ಎಂಬುದರ ವಿವೇಚನೆ ಇರಬೇಡವೇ?

40. ನೀತಿಯ ಅತಂತ್ರ

ವ್ಯಾಪಾರದಲ್ಲಿ ನೀತಿ ಇರಬೇಕೆಂದು ಒಂದು ವಾದ.

ವ್ಯಾಪಾರಕ್ಕೂ ನೀತಿಗೂ ಸಂಬಂಧವಿಲ್ಲವೆಂದು ಇನ್ನೊಂದು ವಾದ.

ಎರಡನೆಯ ವಾದ ಉದ್ಯಮಿಗಳಿಗೆ, ವ್ಯಾಪಾರಿಗಳಿಗೆ ಹಿಡಿಸುವಂಥದೇ; ಅವರಿಗೆ ಅನುಕೂಲವಾದುದೇ.

ವ್ಯಾಪಾರ ಮಾಡುವುದೇ ಲಾಭಕ್ಕಾಗಿ; ಉದ್ಯಮ ಇರುವುದು ಗಳಿಕೆಗಾಗಿ ಅಲ್ಲವೆ?

ನೀತಿ ಸಂಹಿತೆಯ ದಾರಿ ನಷ್ಟದ್ದು, ಯಾವ ಉದ್ಯಮಿ ಅದನ್ನು ಹಿಡಿದಾನು?

ಆದರೆ ನೀತಿಯ ನೆಲೆಯೇ ಇಲ್ಲದಿದ್ದರೆ ವ್ಯಾಪಾರ ಸುಲಿಗೆಯಾಗಲಾರದೆ? ಉದ್ಯಮವೆನ್ನುವುದು ದೋಚಿಕೊಳ್ಳುವುದಕ್ಕೆ ಇನ್ನೊಂದು ಹೆಸರಾಗಲಾರದೆ?

ಎರಡೂ ವಾದಗಳ ನಡುವೆ ಇನ್ನೊಂದು ವಾದಕ್ಕೂ ಎಡೆಯಿದೆ.

ಲಾಭ ಮಾಡಿಕೊಳ್ಳಲೆಂದೇ ಹೊರಡುವವರು ನೀತಿಯ ಮಾತಿಗೆ ಕಿವಿಗೊಡುವುದು ಅಸಂಭವ. ಹೊರಗಿನವರು ಏನೇ ಹೇಳಿದರೂ ಅವರು ತಮ್ಮ ಪಟ್ಟು ಬಿಡುವುದಿಲ್ಲ.

ಅವರನ್ನು ಆಕ್ಷೇಪಿಸುವುದೂ ಸರಿಯಲ್ಲ. ವ್ಯಾಪಾರ, ಉದ್ಯಮಗಳ ಸ್ವಭಾವದಲ್ಲೇ ಲಾಭದ ಪ್ರಸಕ್ತಿಯಿದೆ. ಅದನ್ನೇ ಬಿಟ್ಟರೆ ವ್ಯಾಪಾರ, ಉದ್ಯಮ ಸರಿಯಾಗುವುದೂ ಇಲ್ಲ.

ವ್ಯಾಪಾರ ಕುದುರಿದರೆ ಬೇರೆಯವರಿಗೂ ಅದರಿಂದ ಉಪಯೋಗವಿಲ್ಲವೆ? ಉದ್ಯಮ ಬೆಳೆದರೆ ಬಳಕೆಗಾರರಿಗೂ ಅನುಕೂಲವಾದೀತು.

ದಿನನಿತ್ಯದ ಬದುಕಿನಲ್ಲೇ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಸಾಧ್ಯವಿರದು. ಇನ್ನು ಬಂಡವಾಳ ಹಾಕಿ ದುಡಿಯುವವರನ್ನು ನೀತಿ ಕಟ್ಟುಹಾಕುವುದೆಂತು?

ಇದು ದಿಟವೇ. ಆದರೆ ಉದ್ಯಮವಿರುವುದು ಜನರ ಅಗತ್ಯಗಳನ್ನು ಪೂರಯಿಸಲೆಂಬುದನ್ನು ಮರೆಯಬಾರದು. ಉದ್ಯಮಿಗಳಿಗೆ, ವ್ಯಾಪಾರಗಾರರಿಗೆ ಸಾಮಾಜಿಕ ಪ್ರಜ್ಞೆಯೂ ಇರಬೇಕು.

ಬರಿಯ ಆರ್ಥಿಕ ಚೌಕಟ್ಟಿನಲ್ಲೇ ವ್ಯಾಪಾರ ನಡೆಯುವುದಾದರೆ ಅದು ಬಹುಕಾಲ ನಿಲ್ಲಲಾರದು. ಒಬ್ಬನ ಲಾಭಕ್ಕೆಂದೇ ಉದ್ಯಮ ಸಿದ್ಧವಾದರೆ ಅದಕ್ಕೆ ಉಳಿಗಾಲವಿದೆಯೆ?

ಲಾಭ ಬೇಡವೆನ್ನುವುದಿಲ್ಲ. ಮನುಷ್ಯನ ಜಾಯಮಾನಕ್ಕೆ ಅದು ಅಂಟಿಕೊಂಡದ್ದು. ಆದರೆ ಲಾಭ ದರೋಡೆಯಾಗಬಾರದು.

ಲಾಭದ ಆಸೆಯಿಂದ ವಸ್ತುಗಳ ಕಲಬೆರಕೆಯಾಗಬಾರದು. ಜನರಿಗೆ ಹಿತವಲ್ಲದ್ದನ್ನು ಜಾಹಿರಾತುಗಳಿಂದ ಜನರ ಮೇಲೆ ಹೇರಬಾರದು. ಅಮಾಯಕರಾದ ಜನರನ್ನು ಮೋಸ ಮಾಡಿ ಅವರನ್ನು ತೊಂದರೆಗೀಡು ಮಾಡಬಾರದು.

ಇದು ನೀತಿಯ ಮಾತೇ. ಕೆಲವು ಉದ್ಯಮಗಳು ಹೊರದೇಶಗಳಲ್ಲಿ ನಿಷಿದ್ಧವೆಂದಾದ್ದನ್ನೂ ನಮ್ಮ ಜನರಿಗೆ ಧಾರಾಳವಾಗಿ ಒದಗಿಸುತ್ತಿವೆ. ಪ್ರಯೋಗಶಾಲೆಗಳಲ್ಲಿ ಅಹಿತ, ಅನಾರೋಗ್ಯ, ಮಾರಕ ಎಂದಾದ ಪದಾರ್ಥಗಳನ್ನೂ ಮಾರುಕಟ್ಟೆಯಲ್ಲಿ ಕಾಣಬಹುದು.

ನಮ್ಮ ದೇಶದ ಜನರಿಗೆ ತೊಂದರೆಯಾದರೆ ಚಿಂತೆಯಿಲ್ಲ; ತಮ್ಮ ದೇಶಗಳ ಜನ ಕಷ್ಟಪಡಬಾರದು ಎನ್ನುವ ಧೋರಣೆ ಮಲ್ಟಿನ್ಯಾಷನಲ್ ಕಂಪೆನಿಗಳಲ್ಲಿ ತೋರಿಕೊಳ್ಳುವುದು ವಾಡಿಕೆ.

ಇದು ನೀತಿಯ ಇನ್ನೊಂದು ಮುಖ; ಅನೀತಿಯದು. ನೀತಿ ಅನೀತಿಗಳ ನಡುವೆ ಇರುವ ಅಡ್ಡಗೆರೆಯನ್ನು ಗುರುತಿಸುವುದು ಕಷ್ಟ.

41. ಸಂಪತ್ತು-ಸೆಗಣಿ

ಬಂಕಿಮಚಂದ್ರ ಚಟ್ಟೋಪಾಧ್ಯಾಯರು ಸಂಪತ್ತನ್ನು ಸೆಗಣಿಗೆ ಹೋಲಿಸಿದ್ದಾರೆ.

ಹಸುವಿನಿಂದ ಹೊರಬರುವ ಹಾಲು ಎಷ್ಟು ರುಚಿಕರವೋ ಸೆಗಣಿಯೂ ಅಷ್ಟು ಪ್ರಯೋಜನಕಾರಿ.

'ಇಟ್ಟರೆ ಸೆಗಣಿಯಾದೆ, ತಟ್ಟಿದರೆ ಕುರುಳಾದೆ; ಸುಟ್ಟರೆ ನೊಸಲಿಗೆ ವಿಭೂತಿಯಾದೆ'

ಎಂದು ಮುಂತಾಗಿ ಗೋವಿನ ಹಾಡು ಹೇಳುವುದಿಲ್ಲವೆ?

ಬಂಕಿಮಚಂದ್ರರ ಸಾಮತಿಯ ವಿವರ ಇದು. ಸೆಗಣಿಯನ್ನು ಒಂದೇ ಕಡೆ ಕೂಡಿಸಿ ರಾಶಿ ಮಾಡಿದರೆ ಕೊಳೆತು ನಾರಿ ಅದರಿಂದ ಕೆಟ್ಟವಾಸನೆ ಮೂಗು ಬಡಿಯುತ್ತದೆ. ಅದೇ, ಸೆಗಣಿಯನ್ನು ಹೊಲದಲ್ಲೆಲ್ಲ ಹರಡಿದಾಗ ನೆಲ ಫಲವತ್ತಾಗುತ್ತದೆ; ಹಸುವಿನ ಸೆಗಣಿ ಒಳ್ಳೆಯ ಗೊಬ್ಬರ.

ಸಂಪತ್ತಿನ ಕತೆಯೂ ಇದೆ. ಹಣವೆಲ್ಲ ಒಂದೇ ಕಡೆ ಕೂಡಿಕೊಂಡಾಗ, ಅದು ಅಲ್ಲೇ ಕೊಳೆಯುತ್ತಲಿದ್ದಾಗ ಅದರಿಂದ ಕೆಡುಕೇ; ಹಣವಿದ್ದವನಿಗೆ ತೊಂದರೆಯೇ.

ಆದರೆ ಆ ಹಣವನ್ನು ಹಂಚಿಕೊಂಡಾಗ, ಹಲವರಿಗೆ ಅದರ ನೆರವು ದೊರೆತಾಗ, ಹಣದಿಂದ ಒಳಿತೇ ಆಗುತ್ತದೆ.

ಹಣವೂ ಸೆಗಣಿಯಂತೆ ನೆಲವನ್ನು ಸೇರಬೇಕು; ಸುತ್ತಲೂ ಹರಡಿಕೊಳ್ಳಬೇಕು. ನೆಲಕ್ಕೆ ತಾಗದೆ, ಒಂದೇ ಕಡೆ ಮೇಲೆ ಮೇಲೆ ಏರುತ್ತಲೇ ಇದ್ದರೆ ಅದರಿಂದ ಕೆಡುಕು ತಪ್ಪಿದ್ದಲ್ಲ.

ಹಣ ಇರುವುದು ಅನುಕೂಲಕ್ಕೆ ಉಪಾಯವಾಗಿಯೇ. ಸೆಗಣಿಯ ಉಪಯೋಗವೇನು? ನೆಲವನ್ನು ಫಲವತ್ತಾಗಿಸುವುದು. ಗೊಬ್ಬರಕ್ಕೆ ತನ್ನದೇ ಆದ ಪ್ರಯೋಜನವಿದೆಯೆ? ನೆಲದಿಂದ ಗಿಡ ಚೆನ್ನಾಗಿ ಬೆಳೆಯಲು ನೆರವಾಗುವುದೇ ಅದರ ಕೆಲಸ.

ಗೊಬ್ಬರವನ್ನು ಒಂದೇ ಕಡೆ ಪೇರಿಸಿಟ್ಟರೆ ಪ್ರಯೋಜನವೇನು? ಅದರ ಕೆಟ್ಟ ನಾತ ಸುತ್ತಲೂ ಹರಡಿಕೊಳ್ಳುತ್ತದೆ ಅಷ್ಟೆ. ಹತ್ತಿರ ಯಾರೂ ಸುಳಿಯುವುದಿಲ್ಲ.

ಹಣವನ್ನು ಕೂಡಿ ಹಾಕುವುದರಲ್ಲೇ ಕೆಲವರ ಆಸಕ್ತಿ; ಬೊಕ್ಕಸದಲ್ಲಿ ಬೇಕಾದಂತೆ ಹಣ ಸೇರಿದರೆ ಚೀಲದಲ್ಲಿ ಗೊಬ್ಬರವಿದ್ದಂತೆ. ಬೊಕ್ಕಸದ ಹಣ ಯಾವ ಕೆಲಸಕ್ಕೆ ಬರುತ್ತದೆ? ಚೀಲದ ಗೊಬ್ಬರವಾಗಲಿ ಏನನ್ನು ಬೆಳೆಸುತ್ತದೆ?

ಹೆಚ್ಚು ಹಣ ಇದ್ದಾಗ ಅದು ಹರಡಿಕೊಳ್ಳಬೇಕು. ಅದರಿಂದ ಹಲವರ ತೊಂದರೆ ತೀರಬೇಕು. ಹಲವು ಕಡೆ ಅದು ಇದ್ದಾಗ, ಹಣ ಇನ್ನೂ ಅಲ್ಲಲ್ಲಿ ಬೆಳೆಯಲು ಹಲವು ಅವಕಾಶಗಳಿದ್ದಾವು; ಹಲವರು ಹಣವಂತರಾದಾರು.

ಆಗ ಹಣಕ್ಕೂ ಒಂದು ಬೆಲೆ, ಒಂದು ಪ್ರಯೋಜನ, ಒಂದು ಮರ್ಯಾದೆ. ಚಲಾವಣೆಯಲ್ಲಿಲ್ಲದ ಹಣವನ್ನು ಯಾರು ಮೂಸುವರು? ಬೊಕ್ಕಸದಲ್ಲಿ ಕೂಡಿಟ್ಟ ದುಡ್ಡು ಸವಕಲು ನಾಣ್ಯದಂತೆಯೇ. ಅದಕ್ಕೆ ಶಕ್ತಿ ಬರಬೇಕೆಂದರೆ ಚಲಾವಣೆಗೆ ಬರಬೇಕು.

ಊರಿನಲ್ಲಿ ಒಬ್ಬ ಅತಿ ಶ್ರೀಮಂತನಿರುವುದಕ್ಕಿಂತ ನೂರು ಮಂದಿ ಅನುಕೂಲಸ್ಥರು ಇದ್ದರೆ ಒಳಿತಲ್ಲವೆ? ಸಂಪತ್ತಿಗಿರುವುದು ಸಾಮಾಜಿಕ ಸ್ಥಾನಮಾನ; ಅದು ವಿನಿಯೋಗವಾಗಬೇಕಾದುದೂ ಸಾಮಾಜಿಕ ಸ್ತರದಲ್ಲಿಯೇ.

ಸಂಪತ್ತಿಗಿರುವ ಸಾಮಾಜಿಕ ಚೌಕಟ್ಟು ಬಹುಮಟ್ಟಿಗೆ ಶ್ರೀಮಂತರ ಅರಿವಿಗೆ ಬರುವುದಿಲ್ಲ; ಇದರಿಂದಲೇ ಸಮಾಜದ ರೋಗ ರುಜಿನಗಳು ಹೆಚ್ಚುವುವು.

ಇದರ ಮನವರಿಕೆ ಮಾಡಿಕೊಡಲೆಂದೇ ಬಂಕಿಮಚಂದ್ರರು ಮೇಲಿನ ದೃಷ್ಟಾಂತವನ್ನು ಕೊಟ್ಟದ್ದು.

42. ದುಡ್ಡು ಮತ್ತು ಮಾರ್ಕ್ಸ್

ದುಡ್ಡೆಂಬ ವಸ್ತುವನ್ನು ಸೃಷ್ಟಿಸಿದವನು ಮನುಷ್ಯನೇ.

ಅದೇನು ನಿಸರ್ಗದಲ್ಲಿ ಸೇರಿಕೊಂಡು ಬಂದದ್ದಲ್ಲ; ಮರದಿಂದ ಕೆಳಗೆ ಉದುರುವುದಿಲ್ಲ, ಮಳೆಯಂತೆ ಮುಗಿಲಿಂದ ಇಳಿಯುವುದಿಲ್ಲ.

ತನ್ನ ಅನುಕೂಲಕ್ಕೆಂದೇ ಮನುಷ್ಯ ಅದನ್ನು ಹುಟ್ಟಿಸಿದ, ಅದನ್ನು ಕೈಯಾರೆ ಬೆಳೆಸಿದ, ಅದಕ್ಕೊಂದು ಬೆಲೆಯನ್ನು ಕಟ್ಟಿದ.

ಮನುಷ್ಯನ ದುಡಿಮೆಯ ಫಲವಾಗಿ ಬಂದದ್ದು ದುಡ್ಡು. ದುಡ್ಡು ಎಂಬ ಮಾತಿನಲ್ಲಿ ದುಡಿಯುವ ಸೊಗಡು ಇದೆಯಲ್ಲವೆ?

ಇದರಲ್ಲಿ ಕಾರ್ಲ್ ಮಾರ್ಕ್ಸ್ ಒಂದು ವಿಪರ್ಯಾಸವನ್ನು ಗಮನಿಸಿದ. ದುಡಿಯುವವರಿಂದ ಬಂದ ದುಡ್ಡು ದುಡಿಯುವವರನ್ನೇ ಕೈಬಿಟ್ಟು ದುಡಿಯದೆ ಇರುವವರ ಕೈಸೇರುವುದಲ್ಲವೆ? ಅದಕ್ಕೊಂದು ನೀತಿ ನಿಷ್ಠೆ ಎಂಬುದಿದೆಯೆ?

ದುಡಿಯುವವರಿಗೇ, ತನ್ನನ್ನು ಉಂಟು ಮಾಡಿದವರಿಗೇ ದ್ರೋಹವನ್ನು ಬಗೆದು, ಅವರು ತನ್ನನ್ನು ಬಯಸಿ ತಿರುಪೆ ಎತ್ತುವಂತೆ ಮಾಡುವುದು ದುಡ್ಡಿನ ಸ್ವಭಾವವೆಂದು ಮಾರ್ಕ್ಸ್ ಬರೆದ.

ದುಡಿಯುವವರು ಯಾರೋ, ಅದರ ಫಲವನ್ನು ಹೆಕ್ಕಿಕೊಳ್ಳುವವರು ಯಾರೋ. ದುಡಿಯದಿದ್ದವರ ಬಳಿ ದುಡ್ಡಿರಲೇಕೆ? ದುಡಿದವರಿಂದ ಅದನ್ನು ದೋಚಿಕೊಳ್ಳುವವರನ್ನು ಸುಮ್ಮನೆ ಬಿಡಬೇಕೆ? ಅವರಿಗೆ ಮರ್ಯಾದೆಯ ಮಣೆ ಹಾಕಬೇಕೆ?

ಇದು ಮಾರ್ಕ್ಸ್‌ವಾದ. ಸಿದ್ಧಾಂತವೇನೋ ಸರಿಯೆ. ದುಡ್ಡೆಂಬ ಕಲ್ಪನೆ ಮನುಷ್ಯನದ್ದೇ. ಇತರ ಪ್ರಾಣಿಗಳಲ್ಲಿ ಇದು ಕಾಣಸಿಗುವುದಿಲ್ಲ. ತನ್ನ ವ್ಯವಹಾರಕ್ಕೆ ಅದೊಂದು ನೆರವಾಗಲೆಂದು ಮನುಷ್ಯ ಅದನ್ನು ಹುಟ್ಟಿಸಿದ.

ವ್ಯವಹಾರದಲ್ಲಿ ನೆರವಾದುದು ಮಾತ್ರವಲ್ಲ, ವ್ಯವಹಾರವೆಲ್ಲ ತನ್ನಿಂದಲೇ ನಡೆಯುವಂತೆ ತೋರಿಕೊಂಡಿತು ಅದು! ದುಡ್ಡೇ ಸಂಪತ್ತು, ಸಾಮರ್ಥ್ಯ, ಅಧಿಕಾರ ಎನ್ನುವಂತಾಯಿತು. ಅದಕ್ಕಾಗಿ ಎಲ್ಲರೂ ಹಾತೊರೆಯುವಂತೆಯೂ ಆಯಿತು; ಶಕ್ತಿಯಿದ್ದವರು ಅದನ್ನು ದುರ್ಬಲರಿಂದ ದೋಚಿಕೊಳ್ಳುವಂತೆಯೂ ಆಯಿತು.

ಇದು ಮಾರ್ಕ್ಸ್ ಕಂಡ ವಿಪರ್ಯಾಸ. ಆದರೆ ಹೀಗೆ ಹೆತ್ತವರಿಗೇ ಕುತ್ತಾದ ದುಡ್ಡನ್ನು ದೂಷಿಸಿ ಫಲವೇನು? ಹೇಳಿಕೇಳಿ, ಅದು ಜಡಪದಾರ್ಥ. ಲೋಭ-ಲಾಭಗಳಿಗೆ ತುತ್ತಾದ ಮನುಷ್ಯ ಅದನ್ನು ಬಲವಂತದಿಂದ ದೋಚಿಕೊಳ್ಳುತ್ತಾನೆ. ನಾವು ದೂಷಿಸಬೇಕಾದುದು ಅವನನ್ನು.

ಹೀಗೆಂದು ಮಾರ್ಕ್ಸ್ ದೋಷಾರೋಪಣೆ ಮಾಡಿದುದು ದುಡ್ಡನ್ನು ದೋಚಿಕೊಂಡ ಮನುಷ್ಯನನ್ನೇ. ಇದೂ ಸರಿಯೇ. ಆದರೆ ಮಾರ್ಕ್ಸ್ ಎಡವಿದುದು ದುಡ್ಡಿರುವವರೆಲ್ಲ ಅದನ್ನು ದೋಚಿಕೊಂಡವರೇ ಎಂದು ಹೇಳಿದುದರಲ್ಲಿ.

ದುಡಿದವರು (ದುಡ್ಡಿಲ್ಲದವರು), ದುಡ್ಡಿರುವವರು (ದೋಚಿಕೊಂಡವರು) ಎಂದು ಮನುಷ್ಯ ಜಾತಿಯನ್ನೇ ಇಬ್ಭಾಗವಾಗಿ ಕಂಡನಲ್ಲವೆ? ಇದು ಸರಿಯಾಗಿ ಕಾಣುವುದಿಲ್ಲ. ನ್ಯಾಯದಿಂದ ದುಡ್ಡನ್ನು ಪಡೆದುಕೊಂಡು, ದೊಡ್ಡಕುಳವಾಗುವುದು ಸಾಧ್ಯವಿರದೆ? ದುಡ್ಡಿರುವವರಲ್ಲಿ ದೋಚಿಕೊಂಡವರು ಇರುತ್ತಾರೆ ನಿಜ. ಆದರೆ ದೋಚಿಕೊಳ್ಳದೆ ದುಡ್ಡೇ ಬರುವುದಿಲ್ಲವೆ?

ದುಡಿದವರ ಬಳಿ ದುಡ್ಡು ನಿಲ್ಲುವುದೇ ಇಲ್ಲವೆ? ಕೆಲವರ ಬಳಿ ನಿಲ್ಲದೆ ಹೋದರೆ ಅವರೇ ಕಾರಣವಾಗಿ ಇರಲಾರರೇ?

43. ಕೆರೆ-ಕೋಡಿ

ಪಂಚತಂತ್ರದ ಮಿತ್ರಲಾಭವೆಂಬ ಪ್ರಕರಣದಲ್ಲಿ ಹಣದ ವಿನಿಯೋಗವನ್ನು ಕುರಿತಂತೆ ಒಂದು ಸಾಮತಿಯಿದೆ.

ಕೆರೆಗೆ ಮಳೆಗಾಲದಲ್ಲಿ ನೀರು ಮೇಲಿಂದ ಹರಿದು ಬರುತ್ತದೆ; ಏರು ಪ್ರದೇಶದಿಂದಲೂ ಹರಿದು ಬಂದು ಸೇರಿಕೊಳ್ಳುತ್ತದೆ.

ಕೆರೆ ತುಂಬಿ ತುಳುಕತೊಡಗಿದಾಗ ಕೋಡಿಗಳಿರಬೇಕು; ತೂಬುಗಳಿದ್ದರೆ ಅವುಗಳ ಮೂಲಕ ನೀರು ಹರಿದು ಆಸುಪಾಸಿನ ಹೊಲಗದ್ದೆಗಳಿಗೆ ಹೋಗುತ್ತದೆ.

ಅದರಿಂದ ಪ್ರಯೋಜನವುಂಟು. ನೆಲದಲ್ಲಿ ತಣಿವು, ಬೆಳೆಗೆ ನೆರವು ಎರಡೂ ಅಗತ್ಯವಾದುವೇ ಅಲ್ಲವೆ? ಆಯಾಸವಿಲ್ಲದೆ ಇವು ಕೈಗೂಡುತ್ತವೆ.

ಹೀಗೆ ಮೊದಲೇ ಸಿದ್ಧವಾದ ತೂಬುಗಳಿರದಿದ್ದರೆ, ಕೆರೆಯು ಹುಚ್ಚೆದ್ದು ಊರಿಗೇ ಹರಿಯುತ್ತದೆ. ಬೆಳೆಯನ್ನು ಕೊಚ್ಚಿಸಿಕೊಂಡು ಹೋಗುತ್ತದೆ. ಜನರಿಗೂ ಆತಂಕ, ಬೆಳೆಯೂ ನಾಶ.

ಆಗ ಹೊರಹರಿಯದೆ ನೀರು ಕೆರೆಯಲ್ಲೇ ಇರುವುದಂತೂ ಸಾಧ್ಯವಿಲ್ಲ. ಹೆಚ್ಚಾದ ನೀರು ಹೊರಗೆ ಹೋಗಲೇ ಬೇಕಲ್ಲವೆ? ಇಲ್ಲದಿದ್ದರೆ ಕೆರೆಗೇ ಅಪಾಯ.

ಕೆರೆಯನ್ನು ಉಳಿಸಿಕೊಳ್ಳಬೇಕೆಂದರೆ ತೂಬುಗಳಿರಲೇಬೇಕು.

ಹಾಗೆಯೇ, ಹೆಚ್ಚಾಗಿ ಸೇರುತ್ತಿರುವ ಹಣವನ್ನು ಕಾಪಿಟ್ಟುಕೊಳ್ಳಬೇಕೆಂದರೆ ತ್ಯಾಗವೇ ದಾರಿ ಎಂದು ಪಂಚತಂತ್ರದ ಹಿತೋಪದೇಶ.

'ಉಪಾರ್ಜಿತಾನಾಮರ್ಥಾನಾಂ ತ್ಯಾಗ ಏವ ಹಿ ರಕ್ಷಣಂ'

ಕೆಲವರಲ್ಲಿ ವೃತ್ತಿಯಿಂದಾಗಿಯೋ ವ್ಯಾಪಾರದಿಂದಾಗಿಯೋ ಪುಣ್ಯದಿಂದಾಗಿಯೋ ಪ್ರಭಾವದಿಂದಾಗಿಯೋ ಹಣ ಸೇರುತ್ತಲೇ ಹೋಗುತ್ತದೆ. ಬೇಡವೆಂದರೂ ಹಣ ಬರತೊಡಗುತ್ತದೆ. ಏನು ಮಾಡುವುದು?

ತಮ್ಮ ಭೋಗಕ್ಕೆ ಬೇಕಾಗುವುದಕ್ಕಿಂತ ಮಿಗಿಲಾಗಿ ಹಣವಿರುವಾಗ ಅದರ ವಿನಿಯೋಗದ ದಾರಿಯನ್ನು ಗೊತ್ತುಗೊಳಿಸಿಕೊಳ್ಳಬೇಕಾಗುತ್ತದೆ. ಕೆರೆ ಕಟ್ಟುವಾಗಲೇ ತೂಬುಗಳ ವ್ಯವಸ್ಥೆ ಮಾಡಿಕೊಳ್ಳುವಂತೆ.

ಹಾಗೆ ಮಾಡಿಕೊಳ್ಳದಿದ್ದರೆ, ಹೆಚ್ಚಿನದಾದ ಹಣ ಹುಚ್ಚುಹುಚ್ಚಾಗಿ ಹೊರಗೆ ಹರಿದು ಹೋಗುತ್ತದೆ; ಪೋಲಾಗುತ್ತದೆ. ಇದರಿಂದ ಯಾರಿಗೂ ಒಳಿತೆಂಬುದಿಲ್ಲ. ಕಡೆಗೆ ಹಣದ ಮಾಲೀಕನನ್ನೇ ಹಾಳು ಮಾಡುವುದೂ ಉಂಟು. ಊರನ್ನು ಕೊಚ್ಚಿಸಿದ ಕೆರೆ ತಾನೇ ಬರಿದಾಗುವಂತೆ.

ತ್ಯಾಗವೆನ್ನುವುದು ಹಣದ ಸದ್ವಿನಿಯೋಗವೆಂದು ತಾತ್ಪರ್ಯ. ಬೇಕೆನಿಸಿದಾಗ ಬೇಕೆನಿಸಿದಷ್ಟು ಹಣ ಬಾರದಿರುವ ಭಾಗ್ಯಹೀನರ ಸಂಖ್ಯೆ ಎಂದಿಗೂ ದೊಡ್ಡದೇ. ಇಂಥವರೊಂದಿಗೆ ಹೆಚ್ಚಿನ ಹಣವನ್ನು ಹಂಚಿಕೊಳ್ಳುವುದೇ ದಾನವೆನಿಸುತ್ತದೆ. ಇದನ್ನು ಸಂಸ್ಕೃತದಲ್ಲಿ ಸಂವಿಭಾಗವೆನ್ನುತ್ತಾರೆ. ತ್ಯಾಗದ ದಿಟವಾದ ಅರ್ಥ ಇದೇ.

ಭಾಗ್ಯವಂತರ ಹಣ ಬಡವರ ನೆರವಿಗೆ ಬಂದಾಗ, ಹಣ ಹಾಳಾಗಲಿಲ್ಲ. ಉಳಿದುಕೊಂಡಿತು, ಊರ್ಜಿತವಾಯಿತು. ಇದೇ ರಕ್ಷಣೆ. ಕೆರೆಯಲ್ಲಿ ಹೆಚ್ಚಿನ ನೀರು ತೂಬಿನಿಂದ ಹೊರಗೆ ಹರಿದರೆ ಕೆರೆಗೆ ಕ್ಷೇಮವಲ್ಲವೆ?

ಹಣದ ರಕ್ಷಣೆಯ ಜೊತೆಗೆ ಬಡವರ ರಕ್ಷಣೆಯೂ ಆಯಿತು. ಕೆರೆಯಿಂದ ಹರಿದು ಕೋಡಿ ಹೊಲಗದ್ದೆಗಳನ್ನು ಕಾಪಾಡುವುದಿಲ್ಲವೇ ಹಾಗೆ.

ಕೆರೆಯೂ ಉಳಿಯಬೇಕು. ಊರೂ ಉಳಿಯಬೇಕು. ಇದಕ್ಕಾಗಿ ಕೆರೆಗೆ ತೂಬುಗಳಿರಲೇಬೇಕು.

44. ರತ್ನ-ಕಲ್ಲು

ರಾಮಾಯಣದಲ್ಲೊಂದು ಸಾಮತಿ ಬರುತ್ತದೆ.

ರತ್ನವನ್ನು ಮಾರಿ ಕಲ್ಲನ್ನು ಕಾಪಾಡಿಕೊಳ್ಳುವಂತೆ ಎಂಬುದು (ರತ್ನವ್ಯಯೇನ ಪಾಷಾಣಂ ರಕ್ಷಿತುಮಿಚ್ಛತಿ).

ರತ್ನಕ್ಕಿರುವ ಬೆಲೆ ಕಲ್ಲಿಗಿದೆಯೆ? ರತ್ನವನ್ನೇ ಕಾಪಾಡಿಕೊಳ್ಳಬೇಕಾದುದು ಜಾಣತನ. ಕಲ್ಲನ್ನು ಇಟ್ಟುಕೊಂಡು ಮಾಡುವುದೇನು?

ಆದರೆ ಜನರ ವ್ಯವಹಾರದಲ್ಲಿ ಈ ಜಾಣತನ ಕಾಣುವುದಿಲ್ಲ.

ಬೆಳಗಿನಿಂದ ಸಂಜೆಯವರೆಗೆ ದುಡಿಯುತ್ತಾರೆ. ದುಡಿದು ದುಡಿದು ಬಳಲುತ್ತಾರೆ. ಏಕೆ? ಹಣವನ್ನು ಗಳಿಸಲು. ದುಡಿದ ಮೇಲಾದರೂ ನೆಮ್ಮದಿಯಿಂದ ಕೂರುತ್ತಾರೆಯೆ? ಇಲ್ಲ. ಇನ್ನಷ್ಟು ಹಣಕ್ಕಾಗಿ ಹಾತೊರೆದು ಹೊರಡುತ್ತಾರೆ.

ನಮ್ಮ ಆಡಳಿತದವರು ದೇಶಕ್ಕೆ ಸಹಜವಾದ ಬೇಸಾಯವನ್ನು ಬದಿಗೊತ್ತಿ ಉದ್ದಿಮೆಗಳನ್ನು ಬೆಳೆಸುತ್ತಿರುವಂತೆ.

ಫಲವತ್ತಾದ ಭೂಮಿ ಆರೈಕೆಯಿಲ್ಲದೆ, ನೋಡಿಕೊಳ್ಳುವವರಿಲ್ಲದೆ ಬಂಜರು ಬಿದ್ದರೂ ಸರಿಯೆ; ಬೇಸಾಯಗಾರರು ನಗರಗಳಿಗೆ ಬಂದು ಉದ್ದಿಮೆಗಳಲ್ಲಿ ದುಡಿಯಬೇಕು. ಭಾರಿ ಭಾರಿ ಪ್ರಮಾಣದ ಉದ್ದಿಮೆಗಳನ್ನೇರ್ಪಡಿಸುವ ಸನ್ನಾಹ

ಆಡಳಿತದ್ದು; ಅವುಗಳಲ್ಲಿ ಸೇರಿ ಕೈತುಂಬ ಹಣಗಳಿಸಿ, ಮೈತುಂಬ ಬಟ್ಟೆಯುಟ್ಟು ಮೆರೆದು ಮೋಜು ಮಾಡಲು ಯುವಕರು ನಗರಗಳಲ್ಲಿ ಬಂದು ನೆರೆಯುತ್ತಾರೆ.

ಹಳ್ಳಿಗಳಲ್ಲಿರುವ ಜನ ಕಡಮೆಯೇ. ಇದ್ದವರಿಗೆ ಉತ್ಸಾಹವೂ ಅಷ್ಟಕ್ಕಷ್ಟೇ! ಭೂಮಿಯತ್ತ ಗಮನ ಹರಿಸುವ ಹವ್ಯಾಸ ಯಾರಿಗೆ? ನಮ್ಮ ದೇಶಕ್ಕಾದರೋ ಬೇಸಾಯವೇ ಪ್ರಧಾನವಾದದ್ದು. ನಮ್ಮ ಸಂಪತ್ತಿನ ಬಹುಭಾಗ ಬೇಸಾಯದಿಂದ ಸಂಪನ್ನವಾದದ್ದೇ.

ಇದು ರತ್ನ; ಉದ್ದಿಮೆಯಿಂದ ಒದಗುವುದು ಕಲ್ಲು (ಪಾಷಾಣ). ರತ್ನವನ್ನು ಬಿಟ್ಟುಕೊಟ್ಟು ಕಲ್ಲಿಗೆ ಕೈಯೊಡ್ಡುವುದು ನಮ್ಮ ನಾಡಿನ ಈಚಿನ ಆರ್ಥಿಕ ನೀತಿಯಾಗಿದೆ. ಆರ್ಥಿಕ ಸ್ಥಿತಿ ಆತಂಕಕಾರಿಯಾಗಿದೆಯೆಂದರೆ ಆಶ್ಚರ್ಯವೇನು?

ನಮ್ಮ ಆಡಳಿತಗಾರರು ವಿವೇಕಿಗಳಾದರೆ ಇಂಥ ಪರಿಸ್ಥಿತಿಯೇರ್ಪಡುವುದಿಲ್ಲ. ನಮ್ಮದು ಹಳ್ಳಿಗಳ ನಾಡೆಂದು ದಿಲ್ಲಿಯಲ್ಲಿ ಹೇಳಿಬಿಟ್ಟ ಮಾತ್ರಕ್ಕೆ ಹಳ್ಳಿಗಳ ಉದ್ಧಾರವಾಗುವುದಿಲ್ಲ. ಉದ್ದಿಮೆಗಳಿಗೆ ಕೊಡುತ್ತಿರುವ ಹೆಗ್ಗಳಿಕೆಯನ್ನು ಇಳಿಸಲಾರದೆ ಹೋದರೆ ಬೇಸಾಯಕ್ಕೆ ಸರಿಯಾದ ಉತ್ತೇಜನ ಸಿಗಲಾರದು. ಆಡಳಿತ ಮಾಡುವವರಿಗೆ ರತ್ನ ಯಾವುದು, ಕಲ್ಲು ಯಾವುದು ಎಂಬ ವಿವೇಚನೆಯಿರಬೇಕು.

ಉದ್ದಿಮೆಗಳ ಪ್ರಲೋಭನೆ, ಆಕರ್ಷಣೆ, ವ್ಯಾಪಕತೆಗಳೆದುರು ಬೇಸಾಯದ ಅಗತ್ಯದ ಅರಿವೂ ಉಳಿಯಲಾರದು. ಉದ್ದಿಮೆಗಳದ್ದೇ ಯುಗ ಇದು ಎಂಬಂತೆ ಆಗಿರುವಾಗ ಬೇಸಾಯಕ್ಕೆ ತಾವಾಗಿ ಯಾರು ಮಣಿಯುತ್ತಾರೆ? ಆಡಳಿತದ ಒತ್ತಾಸೆಯಿರದಿದ್ದರೆ ಬೇಸಾಯ ತಲೆಯೆತ್ತಿ ನಿಲ್ಲುವುದಾಗದು.

ಗಾಂಧೀಜಿಯವರ ಆರ್ಥಿಕ ಚಿಂತನೆಯಲ್ಲಿ ಬೇಸಾಯಕ್ಕೆ ಆದ್ಯತೆಯಿದ್ದಿತು. ಆಧುನಿಕ ಉದ್ದಿಮೆಗಳನ್ನು ಹದ್ದು ಮೀರಿ ಬೆಳೆಸಬಾರದೆಂಬ ಕಳಕಳಿಯಿದ್ದಿತು. ರತ್ನವನ್ನು ಕಾಪಾಡಿಕೊಳ್ಳಬೇಕೆಂಬ ತತ್ತ್ವ ಗಾಂಧೀಜಿಯವರದ್ದು; ರತ್ನವನ್ನು ಮಾರಿ ಕಲ್ಲನ್ನು ಕಾಪಾಡಿಕೊಳ್ಳಬೇಕೆಂಬುದು ಇಂದಿನ ಆಡಳಿತದ ನೀತಿ.

45. ಕಮ್ಮಾರನ ತಿದಿ

ಬದುಕಿನಲ್ಲಿ ಬೆಳಗಾಗುತ್ತದೆ, ಸಂಜೆಯಾಗುತ್ತದೆ. ದಿನಗಳು ಉರುಳುತ್ತವೆ. ಆಯುಸ್ಸು ಸವೆಯುತ್ತದೆ. ಸಾಧಿಸುವದಾದರೂ ಏನೆಂಬ ಎಣಿಕೆ ಇರಬೇಡವೆ?

ಹಣ ಸಂಪಾದಿಸುವವರಿಗೆ ಅದೊಂದು ಗೀಳು. ಹಣ ಎಲ್ಲಿದೆ? ತನ್ನ ಬಳಿಗೆ ಅದನ್ನು ಬರಮಾಡಿಕೊಳ್ಳುವುದು ಹೇಗೆ? ಬಂದಾಗ ಕೂಡಿಟ್ಟುಕೊಳ್ಳುವುದು ಯಾವ ಬಗೆಯಿಂದ? ವೆಚ್ಚ ಮಾಡುವುದು ಯಾವಯಾವುದಕ್ಕೆ? ತೆರಿಗೆಯ ಕಟ್ಟುಪಾಡನ್ನು ಕಳಚಿಕೊಳ್ಳುವುದೆಂತು?– ಇಂಥ ಆಲೋಚನೆಗಳೇ ತಲೆಯ ತುಂಬ.

ಹಗಲಾಗಲಿ ಇರುಳಾಗಲಿ ಇದೊಂದೇ ಚಿಂತೆ. ಬದುಕಿರುವುದೇ ಹಣದ ಗಳಿಕೆಗೆ; ಹಣವಿಲ್ಲದೆ ಸುಖವಿದೆಯೆ? ಸೌಲಭ್ಯವಿದೆಯೆ? ಸಮಾಜದಲ್ಲಿ ಸ್ಥಾನವಿದೆಯೆ? ನೆರೆಹೊರೆಯಲ್ಲಿ ಗೌರವವಿದೆಯೆ?

ಇಂಥವನನ್ನು ಬದುಕಿರುವ ಮನುಷ್ಯ ಎನ್ನಬಹುದೆ?

ಇವನಂತೆಯೇ ಕಮ್ಮಾರನ ತಿದಿಯೂ ಉಸಿರಾಡುತ್ತಿರುತ್ತದೆ ಮತ್ತು ತಿದಿಯನ್ನು ಒತ್ತಿದಾಗ ಉರಿ ಮೇಲೇಳುತ್ತದೆ. ಆದರೆ ತಿದಿಗೇನು ಜೀವವಿದೆಯೆ? ಅದು ಬದುಕಿದೆಯೆಂದು ಯಾರಾದರೂ ಬಗೆಯುವುದುಂಟೆ? ಅದರೊಂದಿಗೆ ಸಂವಾದವೇ, ವಿವಾದವೇ, ವ್ಯವಹಾರವೇ, ಸುಖವೇ ಏನಿದೆ? ಅದರಿಂದ ಮತ್ತೇನಾದರೂ ಪ್ರಯೋಜನವಾಗಲಿ ಇದ್ದೀತೋ?

ಉಸಿರಾಡಿದ ಮಾತ್ರಕ್ಕೆ ಬದುಕಿದಂತಾಯಿತೆ?

'ಲೋಹಕಾರಭಸ್ತ್ರೇವ ಶ್ವಸನ್ನಪಿ ನ ಜೀವತಿ'

ಬದುಕಿನಲ್ಲಿ ಬೇರೊಂದು ಆಸಕ್ತಿಯಿರುವ ಹಣವಂತನು ದಿಟವಾಗಿ ಕಮ್ಮಾರನ ತಿದಿಯಂತೆಯೇ. ಉಸಿರಾಡುತ್ತಿರುತ್ತಾನೆ; ಬದುಕಿನ ಸೂಚನೆ ಅಷ್ಟೇ!

ಊಟ ಮಾಡದೆ ಬದುಕುವುದಾದರೂ ಹೇಗೆ? ಆದರೆ ಬದುಕುತ್ತಿರುವ ಒಂದೇ ಪ್ರಯೋಜನ ಊಟ ಮಾಡುವುದು ಎನ್ನಬಹುದೆ? ಆದರೆ ಬದುಕಿರುವವ ಬದುಕಿದಂತೆಯೇ, ಅಷ್ಟಕ್ಕಿಂತ ಇನ್ನೇನು ಮಾಡಬೇಕು ಎಂದರೆ ಹೇಗೆ?

ಊಟ ಮಾಡುವುದನ್ನು ಹೀನಾಯವಾಗಿ ಕಾಣಬೇಕೆಂದಲ್ಲ. ಊಟದಲ್ಲಿ ರುಚಿ, ಶುಚಿ, ವೈವಿಧ್ಯ, ಸಡಗರ, ಸಂತೋಷ ಎಲ್ಲವೂ ಇರಬೇಕಾದದ್ದೇ. ಬದುಕಿನ ಮೂಲಭೂತ ವಿವರವಲ್ಲವೆ ಅದು?

ಆದರೆ ಹೊಟ್ಟೆಯೊಂದೇ ನಮಗಿರುವ ಅಂಗವೆ? ಮೈ ಮನಸ್ಸುಗಳಿಗೆ, ಇಂದ್ರಿಯಗಳಿಗೆ ಕೆಲಸವೇ ಬೇಡವೆ? ತೃಪ್ತಿಯೆಂಬುದು ಇತರ ಅಂಗಾಂಗಗಳಿಗೂ ಅಗತ್ಯವೇ. ಚೆನ್ನಾಗಿರುವ ರೂಪವನ್ನು ಕಾಣಬೇಕು. ಸಂತೋಷ ತರುವ ಶಬ್ದವನ್ನು ಕೇಳಬೇಕು. ಮನಸ್ಸಿಗೆ ಸುಖವನ್ನುಂಟು ಮಾಡುವ ಆಲೋಚನೆ ಮಾಡಬೇಕು; ನೆಮ್ಮದಿಯನ್ನು ತರುವಂಥ ವಿಚಾರಗಳಲ್ಲಿ ತೊಡಗಬೇಕು. ಸಮುದಾಯದಲ್ಲಿ ಇತರರೊಂದಿಗೆ ಬೆರೆಯಬೇಕು, ಅವರಿಗೂ ಹಿತವೆನಿಸಿದ್ದನ್ನು ಮಾಡಬೇಕು. ಇವೆಲ್ಲ ಬದುಕಿನ ಬಯಕೆಗಳಲ್ಲವೆ?

ಇದು ಯಾವುದರ ಕಡೆಗೂ ಒಲವನ್ನು ಹರಿಸದೆ, ಬರಿಯ ಹಣವೊಂದನ್ನೇ ಹಿಡಿದು ಹೊರಟರೆ ಬದುಕಿದಂತಾಯಿತೆ? ಬೆಂಕಿಯನ್ನು ಹೆಚ್ಚಿಸಲು ಕಮ್ಮಾರನ ತಿದಿ ಉಸಿರಾಡುತ್ತದೆ. ಹಾಗೆಯೇ ಹಣವನ್ನು ಹೆಚ್ಚಿಸಲು ಈ ಮನುಷ್ಯ

ಉಸಿರಾಡುತ್ತಿದ್ದಾನೆ, ಅಷ್ಟೆ. ಅದು ಹೇಗೆ ಬದುಕಿದಂತಾಗಲಿಲ್ಲವೋ ಇವನೂ ಹಾಗೆಯೇ.

ಬದುಕು ಸಮಗ್ರವಾಗಬೇಕಾದರೆ ಹಣವೂ ಬೇಕು; ಸಾಹಿತ್ಯ, ಸಂಗೀತ, ಕಲೆ, ಆಟ, ವಿನೋದ, ದರ್ಶನ ಎಲ್ಲವೂ ಬೇಕು. ಆಗ ಬದುಕಿಗೊಂದು ಅರ್ಥ ಬರುತ್ತದೆ.

46. ದಾನಿ-ದೀನ

ಸಂತ ಜೆರೋಮ್ ಹೇಳಿದ ಒಂದು ಮಾತು ಸ್ವಾರಸ್ಯವಾಗಿದೆ.

'ಹಣವನ್ನು ಕೂಡಿಡಬೇಕೆಂದು ಬಯಸುವೆಯಾದರೆ, ಅದಕ್ಕೊಂದು ಸುರಕ್ಷಿತವಾದ ಎಡೆಯನ್ನು ತೋರಿಸುತ್ತೇನೆ. ಅದೇನೆಂಬೆಯಾ? ಬಡವರ ಹೊಟ್ಟೆ'.

ಇದರ ತಾತ್ಪರ್ಯವೇನೋ ಸ್ಪಷ್ಟವಾಗಿದೆ. ಬಡಬಗ್ಗರ ಅನುಕೂಲಕ್ಕೆಂದು ಮಾಡಿದ ವೆಚ್ಚ ಸಾರ್ಥಕವಾಗುತ್ತದೆ; ಹಣದ ಸರಿಯಾದ ವಿನಿಯೋಗವೇ ಅದು ಎಂಬುದು.

ಆದರೆ ಇದರಲ್ಲಿ ಹಲವು ತಕರಾರುಗಳು ಏಳುತ್ತವೆ. ಬಡವರೆಂದರೆ ಯಾರು? ಎಂಥವರು? ದೈಹಿಕ ಸಾಮರ್ಥ್ಯವಿದ್ದು ಅಲಸಿಗನಾಗಿ ಕೆಲಸ ಮಾಡದೆ ತುಂಡಾಡಿಯಾಗಿ ಅಲೆಯುವವನು ಬಡವನೇ; ಅವನಲ್ಲೇನು ಹಣವಿರದು. ಅವನಿಗೆ ಹಣವನ್ನು ನೀಡಿದರೆ ಅದು ಉಳಿಯಲಾರದು. ಹಣದ ಸದ್ವಿನಿಯೋಗವಲ್ಲ ಅದು.

ಜೂಜು, ಕುಡಿತ, ಹಾದರ ಮುಂತಾದ ಚಟಗಳಿದ್ದವನು ಎಂದೂ ಬಡವನೇ. ತಾನೇ ಕೆಲಸ ಮಾಡಿ ಸಂಪಾದಿಸಿದ ಹಣವೂ ಅವನ ಬಳಿ ಉಳಿಯಲಾರದು. ಇನ್ನು ದಾನವಾಗಿ ಕೊಟ್ಟದ್ದು ಉಳಿದೀತೇ?

ತನ್ನ ಹಣದ ಬೆಲೆಯನ್ನೇ ತಿಳಿಯದಿದ್ದವನು ಬೇರೆಯವರ ಹಣದ ಬೆಲೆಯನ್ನು ತಿಳಿಯುವುದು ಹೇಗೆ?

ಮತ್ತೆ, ಬಡವರ ಸಂಖ್ಯೆ ಸಣ್ಣದೇನಲ್ಲ. ಎಲ್ಲರಿಗೂ ಹೊಟ್ಟೆ ತುಂಬುವಷ್ಟು, ಎಲ್ಲರನ್ನೂ ತಣಿಸುವಷ್ಟು ಹಣ ಯಾವ ಉದಾರಿಯಲ್ಲಿ ತಾನೇ ಇದ್ದೀತು? ಯಾರು ಯೋಗ್ಯರೆಂದು ಅರಸಿಕೊಂಡು ಹೋಗುವುದಾದೀತೆ? ಯಾರಾದರೂ ಆದೀತು ಎಂದು ಭಾವಿಸಿದರೂ ಸರಿಯಾಗುವುದಿಲ್ಲ.

ದಾನ ನೀಡುವುದೇ ಮುಖ್ಯವೆಂದರೂ ಯಾರಿಗೆ ದಾನ ಮಾಡಿದಾಗ ಅದು ಸಾರ್ಥಕವಾಗುತ್ತದೆ ಎಂಬ ಎಣಿಕೆಯಿರಬೇಕಲ್ಲವೆ? ಇಲ್ಲವಾದರೆ ಹಣವನ್ನೆತ್ತಿ ಬಿಸಾಡುವುದಕ್ಕೂ, ದಾನ ಮಾಡುವುದಕ್ಕೂ ವ್ಯತ್ಯಾಸವೇನಿದೆ?

ಸಮುದಾಯ ಜೀವನದಲ್ಲಿ ಹಣದ ಸಂಪಾದನೆಗೂ ಸ್ಥಾನವಿದೆ. ಹಣದ ವಿನಿಯೋಗಕ್ಕೂ ಸ್ಥಾನವಿದೆ. ಹಣವಂತರು ಲೋಭಿಗಳಾಗಿ, ಜಿಪುಣರಾಗಿ, ನಿರ್ದಯರಾಗಿ ಇರಬೇಕೆಂದು ಯಾರು ತಾನೆ ಹೇಳಿಯಾರು? ಅವರಿಗೊಂದು ಸಾಮಾಜಿಕ ಪ್ರಜ್ಞೆಯಿರಲೇಬೇಕು. ತನ್ನದೆಂದಾದ ಹಣ ಹಲವರ ಕೈತಪ್ಪಿ ತನಗೆ ಬಂದಿದೆ; ಇದರಲ್ಲಿ ಹಲವರ ಪಾಲು ಇದೆ, ತಾನೊಬ್ಬನೇ ಇದನ್ನು ಉಣ್ಣಬಾರದು ಎಂಬ ವಿವೇಕ ಇರಬೇಕು.

ನ್ಯಾಯದಿಂದ ಹಣವನ್ನು ಪಡೆದುಕೊಳ್ಳಬೇಕು ಎಂಬ ಬುದ್ಧಿಯಿರುವಂತೆಯೇ ವಿವೇಕದಿಂದ ಇದನ್ನು ವಿನಿಯೋಗ ಮಾಡಬೇಕು ಎಂಬ ನಿಶ್ಚಯವೂ ಇರಬೇಕು. ಬಡವರ ಹೊಟ್ಟೆಯಲ್ಲಿ ನಿನ್ನ ಹಣವನ್ನು ಕೂಡಿಡು ಎಂದಾಗ ಅವರನ್ನು ಊಟದಿಂದ ತಣಿಸು ಎಂದಷ್ಟೇ ಅರ್ಥವಲ್ಲ. ಅನ್ನಸಮಾರಾಧನೆಯೇನೋ ಸರಿಯೇ; ಆದರೆ ಅದರ ಪ್ರಯೋಜನ ಕಡಮೆಯೇ. ಸಂತನ ಮಾತಿನಲ್ಲಿ ಬಡವರು ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ನೆರವಾಗಬೇಕಾದುದು ಹಣವಂತರ ಕರ್ತವ್ಯ ಎಂಬುದು ಧ್ವನಿ.

ಇದಕ್ಕಿಂತ ಹೆಚ್ಚಾಗಿ, ಹಣವಂತರ ಗಮನ ಮತ್ತು ಕನಿಕರ ಬಡಬಗ್ಗರ ವಿಚಾರವಾಗಿ ಇರತಕ್ಕದ್ದೆಂದು ಸಂತ ಜೆರೋಮ್‌ನ ಅಭಿಪ್ರಾಯ. ಅವರ ದಾನಕ್ಕಿಂತ ಹೆಚ್ಚಿನ ಬೆಲೆಯುಳ್ಳದ್ದು ಅವರ ಮನೋವೃತ್ತಿ, ಕರ್ತವ್ಯಪ್ರಜ್ಞೆ.

47. ದುರಾಸೆಯ ಫಲ

ಹಣ ಬೇಕಾದುದು ಯಾರಿಗೆ? ಹಣವಿಲ್ಲದವರಿಗೆ ಅದು ಬೇಕೆನಿಸಿದರೆ ಸರಿ; ಅದು ಸಹಜವೇ. ಯಾರಲ್ಲವೆನ್ನುತ್ತಾರೆ?

ಆದರೆ ಹಣ ಇದ್ದವರೂ ಹಣಕ್ಕೆ ಬಾಯಿಬಿಟ್ಟರೆ ಹೇಗೆ? ಹಾಗೆ ಬಾಯಿ ಬಿಡುವವರು ತಮ್ಮಲ್ಲಿರುವ ಹಣ ಸಾಲದೆಂದು ಬಗೆಯುತ್ತಾರೆ. ಅದೂ ಸರಿಯೆ. ಎಷ್ಟು ಹಣವಿದ್ದರೆ ಸಾಕೆನಿಸೀತು? ಬದುಕಿನ ವೆಚ್ಚ ಏರುತ್ತಲೇ ಇರುವಾಗ?

ಹೆಚ್ಚು ಹೆಚ್ಚು ಹಣಕ್ಕೆ ಆಸೆಪಡುವವರಿದ್ದಾರೆ; ಆದರೆ ಅವರಿಗೆಲ್ಲ ಅದು ದಕ್ಕಲಾರದು. ಅದು ದಕ್ಕುವುದು ಯಾರಿಗೆ? ನಮ್ಮ ದೇಶದ ನಿಸರ್ಗದತ್ತ ಸಂಪತ್ತಿನ ಮೇಲೆ ಒಡೆತನವನ್ನು ಗಿಟ್ಟಿಸಿಕೊಂಡವರಿಗೆ.

ನೈಸರ್ಗಿಕ ಸಂಪತ್ತೆಂದರೆ ಪ್ರಧಾನವಾಗಿ ನೀರು, ನೆಲ, ಗಾಳಿ. ಬೇಸಾಯಕ್ಕೆಂದು ಅನಾದಿ ಕಾಲದಿಂದ ಬಳಸಿಕೊಂಡಿದ್ದ ನೆಲದ ಬಹುಭಾಗವನ್ನು ಈಗ ಉದ್ಯಮಿಗಳು, ಹಣವಂತರು ಆಕ್ರಮಿಸಿಕೊಳ್ಳುತ್ತಿದ್ದಾರೆ; ಬೇಸಾಯವನ್ನು ಬದಿಗೊತ್ತಿ ಕಾರ್ಖಾನೆಗಳು, ಕಟ್ಟಡಗಳು ಕಾಣಿಸಿಕೊಳ್ಳತೊಡಗಿವೆ.

ಹೆಸರಾಂತ ಹೊರಗಣ ಪಾನೀಯ ಕಂಪೆನಿಯವರೊಬ್ಬರು ಪಂಜಾಬಿನಲ್ಲಿ ತಮ್ಮ ಉದ್ಯಮ ಶಾಖೆಯನ್ನು ಆರಂಭಿಸಿದಾಗ ನೆಲದ ಬಹುಭಾಗ ಅವರ ಪಾಲಾಯಿತು. ಉಳುತ್ತಿದ್ದ ಭೂಮಿ ಕಟ್ಟಡಗಳ ಭಾರವನ್ನು ಹೊತ್ತು ನಿಲ್ಲ ಬೇಕಾಯಿತು. ಉಳುಮೆ ಮಾಡುತಿದ್ದವರಿಗೆಲ್ಲ ಉದ್ಯಮದಲ್ಲಿ ಕೆಲಸ ಕೊಡುವ ಆಸೆಯನ್ನೂ ಕಂಪೆನಿ ತೋರಿಸಿತು. ಐದು ಸಾವಿರ ಮಂದಿಗೆ ಒಡನೆಯೇ ಉದ್ಯೋಗಾವಕಾಶ ನೀಡುವುದಾಗಿ ಭರವಸೆ ಪ್ರಕಟವಾಯಿತು.

ಕಂಪೆನಿಯು ಅಸ್ತಿತ್ವಕ್ಕೆ ಬಂದ ಮೇಲೆ ಕೆಲಸ ಕೊಟ್ಟದ್ದು ಐನೂರು ಮಂದಿಗೆ ಮಾತ್ರ. ಉಳಿದವರ ಗತಿಯೇನು? ಕೈಲಿದ್ದ ಬೇಸಾಯವೂ ಹೋಯಿತು, ಆಸೆಪಟ್ಟ ಕೆಲಸವೂ ಸಿಗಲಿಲ್ಲ! ಇಂಥ ವ್ಯವಹಾರ ದೇಶದಲ್ಲೆಲ್ಲ ನಡೆಯುತ್ತಿದೆ.

ನಮ್ಮ ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ ಹತ್ತು ಮಂದಿ ಹೀಗೆ ಹಣವಿದ್ದವರು, ಇನ್ನಷ್ಟು (ಎಷ್ಟೆಂಬುದಕ್ಕೆ ಮಿತಿಯಿಲ್ಲ) ಹಣ ಮಾಡಿಕೊಳ್ಳಲು ಹವಣಿಸುತ್ತಿರುವವರು; ಉಳಿದ ತೊಂಬತ್ತು ಮಂದಿ ಹಣವಿಲ್ಲದವರು, ಹಣವನ್ನು ಹೇಗೆ ಮಾಡಿಕೊಳ್ಳಬೇಕೆಂದು ತಿಳಿಯದೆ ಪರದಾಡುತ್ತಿರುವವರು.

ನೆಲ, ನೀರು ಎಲ್ಲವೂ ಈ ಹತ್ತು ಮಂದಿಯ ವಹಿವಾಟಿನಲ್ಲಿದೆ. ನಿಸರ್ಗ ಸಿದ್ಧವಾದ, ಸಾರ್ವಜನಿಕವಾದ ಸಂಪತ್ತು ಹೀಗೆ ಕೆಲವರ ಕೈಯಲ್ಲಿ ಸಿಕ್ಕು ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಹರಿಯುವ ನದಿಗೆ ಅಣೆಕಟ್ಟು ಹಾಕುವ ಉದ್ಯಮಗಳು, ಕೆಲವರು ಹಣವಂತರ ಭೋಗಕ್ಕೇ ಮೀಸಲಾದ ಸಾಮಗ್ರಿಗಳನ್ನು ತಯಾರಿಸುವ ಕಂಪೆನಿಗಳು, ಬೇರೆಡೆ ತಿರಸ್ಕೃತವಾದ ವಸ್ತುಗಳನ್ನು ಇಲ್ಲಿನವರಿಗೆ ಸಲ್ಲಿಸುವ ಘಟಕಗಳು, ಮುಂತಾದುವು ಬೆಳೆಯುತ್ತಿವೆ.

ಆಳರಸರು ಈ ದುರಾಸೆಯ ಉದ್ಯಮಿಗಳ ಬಲೆಗೆ ಬಿದ್ದಿರುವ ನಿದರ್ಶನಗಳೂ ಈಗೀಗ ಬಯಲಾಗುತ್ತಿವೆಯಷ್ಟೆ? ಎಣ್ಣೆ ಅಳೆದ ಮಾನದಲ್ಲಿ ಜಿಡ್ಡು ನಿಲ್ಲದೆ ಇರುತ್ತದೆಯೆ? ಜೇನು ಸಂಗ್ರಹಿಸಿದವನು ಕೈಯನ್ನು ನೆಕ್ಕಿಕೊಳ್ಳದೆ ಇರುತ್ತಾನೆಯೆ?

ಆಡಳಿತದ ಒತ್ತಾಸೆ, ಬೆಂಬಲ ಮತ್ತು ಉದ್ಯಮಿಗಳ ದುರಾಸೆ, ಸಾಹಸ ಇವುಗಳ ಸೇರ್ಪಡೆಯಿಂದಾಗಿ ನೈಸರ್ಗಿಕ ಸಂಪತ್ತು ಸಾಮಾನ್ಯ ಜನರಿಗೆ ದೊರೆಯುವುದೇ ಅಸಾಧ್ಯವೆನಿಸಿದೆ.

48. ಕೆರದ ಅಳತೆಗೆ ಕಾಲು

ಬದುಕಿನ ಅಗತ್ಯಗಳಿಗೆ ಹಣವಿಲ್ಲದೆ ಆಗುತ್ತದೆಯೆ? ಊಟ, ಉಡುಗೆ, ಸಂಚಾರ, ವಿಹಾರ, ಮಕ್ಕಳು, ಮರಿ, ಓದು, ಆಟ ಯಾವುದಕ್ಕಾದರೂ ಹಣ ಬೇಕೇ ಬೇಕು. ಆದರೆ ಅಗತ್ಯಗಳು ಯಾವುವೆಂಬುದು ಖಚಿತವಾಗಿವೆಯೆ?

ಹಣ ಸೇರಿದಂತೆಲ್ಲ ಅಗತ್ಯಗಳ ಹರವೂ ಹೆಚ್ಚುತ್ತದೆ. ಅಗತ್ಯಕ್ಕೂ ಮೋಜಿಗೂ ಇರುವ ಅಂತರ ಕಡಮೆಯಾಗುತ್ತದೆ. ಹೊಸ ಹೊಸ ಬಯಕೆಗಳು ತೋರಿಕೊಂಡಂತೆ ಅವೆಲ್ಲ ಅಗತ್ಯಗಳೇ ಎಂಬಂತೆ ಕಾಣುತ್ತವೆ. ಅವುಗಳ ಪೂರೈಕೆಗೆ ಸರಿಯಾಗಿ ಹಣ ಇರಬೇಕು; ಹಣ ಇರುವುದಕ್ಕೆ ಸರಿಯಾಗಿ ಬಯಕೆಗಳೂ ಇರಬೇಕು. ಬಯಕೆಗಳು ಹೆಚ್ಚಿದಂತೆ ಹಣವೂ ಹೆಚ್ಚಬೇಕು. ಆದರೆ ಬಯಕೆಗಳು ಹೆಚ್ಚಿದಷ್ಟು ಸುಲಭವಾಗಿ ಸರಾಗವಾಗಿ ಹಣ ಹೆಚ್ಚುತ್ತದೆಯೆ? ಹಣದ ಅಗತ್ಯ ಏರುತ್ತಲೇ ಇರುತ್ತದೆ.

ಇರುವ ಹಣಕ್ಕೆ ಸರಿಯಾಗಿ ಅಗತ್ಯಗಳು ಎಂಬ ಜಾಣತನದ ತತ್ವ ಹೋಗಿ ಇರುವ, ಏರುವ ಅಗತ್ಯಗಳಿಗೆ ತಕ್ಕಂತೆ ಹಣವನ್ನು ಪಡೆದುಕೊಳ್ಳುವ ಕಾತರ ಮೈದಳೆಯುತ್ತದೆ. ಕೆರದ ಅಳತೆಗೆ ಕಾಲನ್ನು ಕುಯ್ಸಿಕೊಂಡಂತೆ! ಇದೇ ದುರಾಸೆಗೆ ಕಾರಣ; ಅಗತ್ಯಗಳ ಅವಾಂತರ ಏರ್ಪಟ್ಟಿರುವುದು ಹೀಗೆಯೇ.

ಹೆಚ್ಚು ಹಣವಿದ್ದಾಗ ವಿಚಾರ ಮಾಡುವ ಶಕ್ತಿಯಿರುತ್ತದೆ. ಅದೇ ಹಣ ಬಂದು ಸೇರತೊಡಗಿದರೆ ವಿಚಾರಶಕ್ತಿ ತಲೆಯಿಂದ ಕೆಳಗಿಳಿದು ಜೇಬಿಗೆ ಬರುತ್ತದೆ. ಹಣದ ಗೀಳು ಒಡಲಲ್ಲಿ ಮನೆ ಮಾಡಿದಾಗ, ಯಾವುದು ಒಳಿತು, ಯಾವುದು ಅಲ್ಲ ಎಂಬ ವಿವೇಚನೆ ಮರೆಯಾಗುತ್ತದೆ. ಹಣ ಏನನ್ನು ಕೊಳ್ಳಬಲ್ಲದು, ಏನನ್ನು ಮಾಡಬಲ್ಲದು, ಎಷ್ಟು ಸಾಮರ್ಥ್ಯವನ್ನು ಒದಗಿಸಬಲ್ಲದು ಎಂಬುದು ಮುಖ್ಯವಾಗುತ್ತದೆ.

ಹಣವಿದ್ದಾಗ ಹಿತದ ಆಲೋಚನೆ ಇರುವುದಿಲ್ಲ; ಸುಖದ ಕಡೆಯೇ ಎಲ್ಲ ಗಮನವೂ. ಹಣವು ಸುಖ ಸಾಮಗ್ರಿಗಳನ್ನೊದಗಿಸಿ ಸುಖವನ್ನು ತಂದು ಕೊಡಬಲ್ಲುದೆಂಬುದೇನೋ ದಿಟವೇ. ಆದರೆ ಸುಖವೆಂಬುದೇ ಹಿತವೆಂದು ಹೇಳಬಹುದೆ? ಬದುಕಿನಲ್ಲಿ ಯಾವುದು ಒಳಿತೋ, ಬದುಕಿಗೊಂದು ಅರ್ಥವನ್ನೂ ನೆಮ್ಮದಿಯನ್ನೂ ಯಾವುದು ತರಬಲ್ಲುದೋ ಅದು ಹಿತ. ಸುಖವೆಂದರೆ ಆ ಕಾಲಕ್ಕೆ ಸೊಗಯಿಸುತ್ತದೆ, ಬೇಕೆನಿಸುತ್ತದೆ. ಸುಖಾನುಭವವೇನೋ ಆಪ್ಯಾಯಮಾನವಾದುದೇ. ಆದರೆ ಅದು ಬಹುಕಾಲ ಉಳಿಯುವುದಲ್ಲ, ನೆಲೆ ನಿಲ್ಲುವುದಂತೂ ಅಲ್ಲವೇ ಅಲ್ಲ.

ಮೇಲಾಗಿ, ಒಂದು ಸುಖ ಬಂದರೆ ಅದಕ್ಕಿಂತ ಹೆಚ್ಚಿನ ಸುಖ ಎಂಬುದುಂಟು; ಸುಖವು ಹೋಗಲಾಗಿ ಮತ್ತೆ ಅದನ್ನು ಪಡೆದುಕೊಳ್ಳುವ ಹಂಬಲವೂ ಇರುತ್ತದೆ. ಬೇರೆಯವರ ಸುಖವನ್ನು ಕಂಡು ಕರುಬುವುದೂ ಇರುತ್ತದೆ. ಜೊತೆಗೇ ಅಷ್ಟೋ ಇಷ್ಟೋ ದುಃಖವೂ ಸೇರುವುದಿಲ್ಲವೆ? ಸುಖ-ದುಃಖಗಳು ದ್ವಂದ್ವ. ಕೆಲವೊಮ್ಮೆ

ಸುಖವನ್ನು ಅನುಭವಿಸಿದ ಮೇಲೆ ಆಯಾಸವೋ ಬೇಸರವೋ ಪಶ್ಚಾತ್ತಾಪವೋ ಒದಗುವುದುಂಟು. ಹಿತದಲ್ಲಿ ಇಂಥ ವಿವರಗಳಿರುವುದಿಲ್ಲ.

ಆದರೆ ಹಣದಿಂದ ಹಿತವೆನ್ನುವುದು ಬರಲಾರದು. ಸುಖವಾದರೆ ಸಹಜವಾದ, ಸ್ವಭಾವಸಿದ್ಧವಾದ ಪ್ರವೃತ್ತಿ; ಎಲ್ಲರಿಗೂ, ಕಡೆಗೆ ಎಲ್ಲ ಪ್ರಾಣಿಗಳಿಗೂ, ಅದರ ಬಯಕೆಯಿರುತ್ತದೆ. ಹಿತದ ಬಯಕೆಯ ಹಿನ್ನೆಲೆಯಲ್ಲಿ ವಿಚಾರ, ವಿವೇಚನೆ, ಸಂಸ್ಕೃತಿಗಳಿರುತ್ತವೆ. ಎಲ್ಲರಿಗೂ ಹಿತದ ಬಯಕೆ ಬರಲಾರದು; ಅದಕ್ಕೊಂದು ಬುದ್ಧಿಶಕ್ತಿಯಿರಬೇಕಾಗುತ್ತದೆ.

ಹಾಗೆಂದೇ ಹಿತವು ಸುಖದಷ್ಟು ವ್ಯಾಪಕವಾದುದಲ್ಲ. ಅದಕ್ಕೆ ಹಣದ ಅಗತ್ಯವೂ ಇರದು, ಅದರ ಆಲಂಬನೆಯೂ ಇರದು.

49. ಗ್ರಾಮರಾಜ್ಯ

'ಆನೆ ಮೇಲೆ ಹೋಗುವವನನ್ನು ಸುಣ್ಣ ಕೇಳಿದ ಹಾಗೆ' ಎಂಬುದೊಂದು ಗಾದೆ.

ದಾರಿಯಲ್ಲಿ ನಡೆಯುತ್ತಿರುವವನಿಗೆ ಎಲೆಯಡಿಕೆ ಜಗಿಯಲು ಸುಣ್ಣ ಬೇಕಾಗಿದೆ. ಯಾರನ್ನು ಕೇಳುವುದು? ಯಾರನ್ನು ಕೇಳಿದರೆ ಕೊಟ್ಟಾರು?

ತನ್ನಂತೆಯೇ ನಡೆದು ಹೋಗುತ್ತಿರುವವರನ್ನು, ತನ್ನಂತೆಯೇ ಎಲೆಯಡಿಕೆ ಜಗಿಯುತ್ತಿರುವವರನ್ನು ಕೇಳಿದರೆ, ಅವರು ಕೊಟ್ಟಾರು.

ಅದು ಬಿಟ್ಟು, ಆನೆಯ ಮೇಲೆ ಹೋಗುತ್ತಿರುವ ಮಾವಟಿಗನನ್ನು ಕೇಳಿದರೆ ಇವನಿಗೆ ಸುಣ್ಣ ದೊರೆಯುವುದುಂಟೆ?

ಆನೆಯನ್ನು ನಡೆಯಿಸುತ್ತಿರುವವರು ಒಂದು ವೇಳೆ ಎಲೆಯಡಿಕೆಯನ್ನು ಜಗಿಯುತ್ತಿದ್ದರೂ, ಸುಣ್ಣವನ್ನು ಇವನಿಗೆ ಕೊಡುವುದು ಹೇಗೆ?

ಆನೆಯೇ ಎತ್ತರ, ಅದರ ಮೇಲೆ ಮಾವಟಿಗ, ಸುಣ್ಣವನ್ನು ಬಯಸಿದ ದಾರಿಹೋಕನ ಕೈ ಅಷ್ಟು ದೂರ ಹೋಗುವುದೇ ಕಷ್ಟ.

ಕೈ ಚಾಚಿದರೂ, ಅದಕ್ಕಾಗಿ ಆನೆ ನಿಲ್ಲುವುದುಂಟೆ? ನಿಂತರೂ, ಸೊಂಡಿಲಿನಿಂದ ಇವನನ್ನು ನೇವರಿಸದೆ ಇರುವುದುಂಟೆ? ಇವನ ಕೈಯಿಂದ ಎಲೆಯಡಿಕೆಯನ್ನು ಕಿತ್ತುಕೊಳ್ಳದೆ ಇರುವುದುಂಟೆ?

ಸಾಮಾನ್ಯ ಜನರು ಅಧಿಕಾರಿಗಳ ನೆರವನ್ನು ಬಯಸಿದಾಗ ಇದೇ ಕತೆ. ಅಧಿಕಾರದ ಅಮಲಿನಲ್ಲಿದ್ದಾಗ ಆನೆಯ ಮೇಲಿದ್ದಂತೆಯೇ.

ಹಳ್ಳಿಯ ರೈತ ವಿಶ್ವಸಂಸ್ಥೆಯ ನೆರವನ್ನು ಬೇಡಿದರೆ ಆಗುವ ಅವಸ್ಥೆ ಇದೇ. ಇವನ ಕೂಗು ವಿಶ್ವ ಆರ್ಥಿಕ ವ್ಯವಸ್ಥೆಯ ಹೊಣೆಯನ್ನು ಹೊತ್ತ ಸಂಸ್ಥೆಗೆ ಮುಟ್ಟುವುದಾದರೂ ಹೇಗೆ? ಮುಟ್ಟಬೇಕಾದುದಾದರೂ ಏಕೆ?

ಹಳ್ಳಿಯವರಿಗೂ ದಿಲ್ಲಿಗೂ ಇರುವ ನಂಟು ಸುಣ್ಣ ಬೇಡುವ ದಾರಿ ಹೋಕನಿಗೂ ಆನೆಯ ಮೇಲೇರಿ ಸಾಗುವವನಿಗೂ ಇರುವಂಥದೇ.

ದಿಲ್ಲಿಯಲ್ಲಿ ಆಳುವವರೆಲ್ಲ ಹಳ್ಳಿಗಳನ್ನು ಉದ್ಧಾರ ಮಾಡುವ ಮಾತುಗಳನ್ನಾಡುವವರೇ. ಆದರೆ ಅವರ ಗಮನವೆಲ್ಲ ನಗರಗಳ ಮೇಲೇ, ಅಲ್ಲಿರುವ ಹಣವಂತರ ಮೇಲೇ. ಅವರ ಓಡಾಟವೆಲ್ಲ ಹೊರ ದೇಶಗಳಲ್ಲೇ.

ಅವರ ಆಲೋಚನೆಗಳೂ ನೂರು-ಸಾವಿರ ಕೋಟಿಗಟ್ಟಲೆ ವೆಚ್ಚದ ಬಾಬಿನಲ್ಲೇ. ಹಳ್ಳಿಯವರಿಗೆ ಬೇಕಾದುದು ದೊಡ್ಡ ದೊಡ್ಡ ಆಧುನಿಕ ಉದ್ಯಮಗಳಲ್ಲ. ತಮ್ಮ ಹಳ್ಳಿಗಳಲ್ಲಿ ತಾವೇ ನೋಡಿಕೊಳ್ಳಬಹುದಾದ ಸಣ್ಣ ಸಣ್ಣ ಯೋಜನೆಗಳು. ಎಲೆಯಡಿಕೆಗೆ ಬೇಕಾಗುವ ಸುಣ್ಣ ಅಷ್ಟೆ.

ಆನೆಗಳನ್ನು ಕಟ್ಟಿಕೊಂಡು ಅವರೇನು ಮಾಡುವರು? ಆನೆಯನ್ನೇರಿ ಹೋಗುವವರಲ್ಲಿ ಸುಣ್ಣ ಬೇಡುವ ಬವಣೆಯಾದರೂ ಏತಕ್ಕೆ?

ಸ್ವರಾಜ್ಯವೆಂದರೆ ದಿಟವಾದ ಅರ್ಥದಲ್ಲಿ ಗ್ರಾಮರಾಜ್ಯವೇ. ವಿಕೇಂದ್ರೀಕೃತವಾದ ಆಡಳಿತ. ನಾಡಿನ ಆರ್ಥಿಕ ವ್ಯವಸ್ಥೆಗೆ ಅನುಕೂಲವಾದುದು. ಗಾಂಧೀಜಿ ಸ್ವರಾಜ್ಯಕ್ಕೆಂದು ಹೋರಾಟವನ್ನು ಆರಂಭಿಸಿದಾಗ ಅವರ ಮನಸ್ಸಿನಲ್ಲಿದ್ದುದೂ ಇದೇ.

ಆಡಳಿತ ಹಳ್ಳಿಯಲ್ಲೇ ಇರಬೇಕು, ದಿಲ್ಲಿಯಲ್ಲಲ್ಲ ಎಂಬುದು ನಮ್ಮ ಆಳರಸರಿಗೆ ಇನ್ನೂ ಹೊಳೆದಿಲ್ಲವಲ್ಲ!

50. ಕಾಡು-ನೀರು-ಬದುಕು

ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಆಡಳಿತವು ಮಾಡಿಕೊಳ್ಳುವ ಯೋಜನೆಗಳಲ್ಲಿ ಬಹುಮಟ್ಟಿಗೆ ಜಾಣತನವನ್ನು ಕಾಣಲಾರೆವು.

ದೇಶದ ಸ್ಥಿತಿಗತಿಗಳ, ಜನರ ವೃತ್ತಿ ಪ್ರವೃತ್ತಿಗಳ, ನಿಸರ್ಗದ ಅನುಕೂಲ ಪ್ರತಿಕೂಲಗಳ ಎಣಿಕೆಯೇ ಇರದಂತೆ ಇವೆ ಈ ಯೋಜನೆಗಳು.

ನಮ್ಮದು ಹೇಳಿ ಕೇಳಿ ಬೇಸಾಯದ ಅವಲಂಬನೆ; ಬೇಸಾಯಕ್ಕೆ ಹಳ್ಳಿಯ ಜೀವನವೇ ಆಸರೆ. ನಮಗೆ ಬೇಕಾದುದು ಹರಿಯುವ ನೀರು, ಫಲವತ್ತಾದ ಭೂಮಿ,

ಕಾಲಕಾಲಕ್ಕೆ ಮಳೆ, ತಿಳಿಯಾದ ಗಾಳಿ, ಇವಕ್ಕೆಲ್ಲ ಅನುಕೂಲವಾಗುವಂತೆ ಕಾಡು-ಮೇಡು.

ತಿಳಿವಳಿಕೆಯಿಲ್ಲದ ಜನನಾಯಕರು ದೇಶವನ್ನು ಉದ್ಧಾರ ಮಾಡುತ್ತೇವೆಂದು ಹೊರಟು, ಭಾರಿ ಅಣೆಕಟ್ಟುಗಳನ್ನು ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಕಟ್ಟುವ ಯೋಜನೆ ಹೂಡಿದರು. ಹರಿಯುವ ನೀರಿಗೆ ದೊಣ್ಣೆನಾಯಕನ ಅಪ್ಪಣೆಯೆ? ಅಪ್ಪಣೆಯೇನೋ ಆಯಿತು. ಕಟ್ಟಿದ ಅಣೆಕಟ್ಟುಗಳ ಗತಿ ಏನಾಗಿದೆಯೆಂಬುದೊಂದು ವಿಚಾರವಾದರೆ, ಹಾಗೆ ಕಟ್ಟಲು ಕಡಿದ ಕಾಡುಗಳಿಂದ ಎಷ್ಟು ಅನಾಹುತವಾಗಿದೆ ಯೆಂಬುದಿನ್ನೊಂದು.

ಕಾಡು ಇದ್ದರೇ ನೆಲದಲ್ಲಿ ನೀರು ನಿಲ್ಲುವ, ನೀರನ್ನು ಹಿಡಿದಿಡುವ ಸಾಧ್ಯತೆ. ನದಿಯಲ್ಲಿ ಪ್ರವಾಹ ಬಂದಾಗಲೂ ನೆರೆಯಲ್ಲಿರುವ ಕಾಡು ಅದನ್ನು ತಡೆಹಿಡಿಯುತ್ತದೆ. ಕಾಡಿದ್ದ ಕಡೆ ಗಾಳಿಯೂ ತಿಳಿಯಾಗಿರುತ್ತದೆ; ಮಳೆ ಸುರಿಯುತ್ತದೆ. ಕಾಡನ್ನು ಕಡಿದು ನದಿಯನ್ನು ಅಡ್ಡಕಟ್ಟಿದರೆ, ಪ್ರವಾಹವೂ ಹೆಚ್ಚು; ಬರಗಾಲವನ್ನೂ ಬರಮಾಡಿಕೊಂಡಂತೆ.

ಹೊರದೇಶಗಳಲ್ಲಿರುವ ಯೋಜನೆಗಳನ್ನೇ ನಮ್ಮ ದೇಶದಲ್ಲಿ ತಂದರೆ ಒಳಿತಾದೀತೆಂದು ಕನಸು ಕಂಡವರೇ ತಿಳಿಗೇಡಿಗಳು. ನಮ್ಮ ನೈಸರ್ಗಿಕ ಸಂಪತ್ತನ್ನು ಕಳೆದುಕೊಂಡು ಪರದೇಶದ ಋಣಕ್ಕಾಗಿ ಬಾಯಿಬಿಟ್ಟುಕೊಂಡಿರುವ ನಮ್ಮಂಥವರನ್ನೇ ಕುರಿತು ಹೇಳಿದ್ದು –'ಕೈಯಲ್ಲಿರುವ ಎಲೆಯಡಿಕೆಯನ್ನು ಕೊಟ್ಟು ಬೇರೆಯವರ ಬಾಯಲ್ಲಿರುವ ತಾಂಬೂಲಕ್ಕೆ (ತಂಬುಲ) ಕೈಯೊಡ್ಡಿದಂತೆ' ಎಂಬ ಗಾದೆ.

ಕಾಡನ್ನು ಕಡಿದು ಕಟ್ಟಡಗಳನ್ನೆಬ್ಬಿಸಿದರೆ ನಮ್ಮ ಸಮಸ್ಯೆಗಳು ತೀರಿದಂತಲ್ಲ; ಇನ್ನಷ್ಟು ಹೆಚ್ಚಿದಂತೆ. ನೀರಾವರಿ ಯೋಜನೆಗಳನ್ನೂ ಅಣೆಕಟ್ಟುಗಳನ್ನೂ ನಮ್ಮ ನಾಯಕರು ಜನರೆದುರು ತೋರಿಸುತ್ತಲೆ ಇದ್ದಾರೆ. ಅವುಗಳ ಪ್ರಯೋಜನವಂತೂ ಜನರನ್ನು ಮುಟ್ಟಿಲ್ಲ. ಅವುಗಳಿಗೆ ತಗುಲಿದ ವೆಚ್ಚವೋ ಹೇಳತೀರದು. ಅದಕ್ಕೂ ನಮ್ಮಲ್ಲೊಂದು ಗಾದೆಯಿದೆ– 'ಕೂಸು ಕಾಸಿಗೆ ಬಾಳದು; ಜೋಗುಳ ಮುಗಿಲು ಮುಟ್ಟಿತು.'

ಕಾಡನ್ನು ಹಾಳು ಮಾಡಿದರೆ ಊರು ಬೆಳೆಯಲಾರದು ಎಂಬ ಸರಳ ಸತ್ಯವನ್ನು ಜನ ಮನವರಿಕೆ ಮಾಡಿಕೊಳ್ಳಬೇಕು. ಹಳ್ಳಿಗಳು ಹಿಂದೆ ಸಮೃದ್ಧವಾಗಿದ್ದುದು ನೆರೆಯ ಕಾಡುಗಳ ನೆರವಿನಿಂದಲೇ. ಕಾಡನ್ನು ಕಳೆದುಕೊಂಡ ಹಳ್ಳಿ ಎಷ್ಟು ಮಾತ್ರಕ್ಕೂ ಬೆಳೆಯಲಾರದು; ಅದಕ್ಕೆ ಉಳಿಗಾಲವೂ ಇರದು.

ಕಾಡಿದ್ದರೇ ನದಿಯಲ್ಲಿ ನೀರು; ಕೆರೆಯು ತುಂಬುವುದು ಬರಿಯ ಮಳೆಯಿಂದಲ್ಲ, ನೆರೆಯಲ್ಲಿರುವ ಕಾಡಿನಿಂದ. ಬಾವಿಗಳಿಗೂ ನೀರು ಬರುವುದು

ಪಕ್ಕದ ದೊಡ್ಡ ದೊಡ್ಡ ಮರಗಳ ನೆರವಿನಿಂದಲೇ. ಕಾಡು ನೀರಿನ ದಣಿಯೆಂದು ಪ್ರಕೃತಿಯ ವ್ಯವಸ್ಥೆ. ನೀರಿಲ್ಲದೆ ಜೀವವೂ ಉಳಿಯದೆಂಬುದು ಪ್ರಕೃತಿಯ ನಿಯಮವೇ. ಕಾಡಿದ್ದರೇ ನೀರು, ನೀರಿದ್ದರೆ ಬದುಕು.

51. ದುಡ್ಡಿಲ್ಲದೆ ಅಡ್ಡಬಿದ್ದರೆ?

ಸಂಸ್ಕೃತದಲ್ಲೊಂದು ಮಾತಿದೆ – ಹಣದ ಆಸೆಯಿರುವವನಿಗೆ ಬರಿಯ ನಮಸ್ಕಾರದಿಂದ ಸಂತೋಷವಾಗುವುದುಂಟೆ? 'ಕೋ ನಾಮ ಅರ್ಥಾರ್ಥೀ ಪ್ರಣಾಮೇನ ತುಷ್ಯತಿ?'

ನಮಸ್ಕಾರವೆಂದರೆ ವಿನಯ, ಅನುನಯ, ಗೌರವ ಎಲ್ಲವೂ ಇರುತ್ತವೆ. ಯಾರಾದರೂ ಹಿರಿಯರು, ಮೇಧಾವಿಗಳು, ಗುರುಗಳು, ಮೇಲಧಿಕಾರಿಗಳು ಎಂದರೆ ಸಾಮಾನ್ಯವಾಗಿ ಜನ ಟೊಂಕ ಬಗ್ಗಿಸಿ, ಕೈಮುಗಿದು ನಮಸ್ಕಾರ ಮಾಡುತ್ತಾರೆ.

ಸಜ್ಜನರಾದರೆ ಅಷ್ಟಕ್ಕೇ ತೃಪ್ತರಾಗಿ ಮನಸಾರೆ ಹರಸುತ್ತಾರೆ. ಆದರೆ ದುರಾಸೆಯುಳ್ಳ ಜನರಾದರೆ ಬರಿದೆ ಮಣಿದ ಜನಕ್ಕೆ ಮನ್ನಣೆ ನೀಡುವುದಿಲ್ಲ. ಅವರಿಂದ ತಾವು ಗಿಟ್ಟಿಸಿಕೊಳ್ಳಬಹುದಾದುದೇನು ಎಂದು ಹುಡುಕುತ್ತಾರೆ.

'ನಮಸ್ಕಾರವಿರಲಿ, ಪುರಸ್ಕಾರವೇನು?' ಎಂದು ಅವರ ಪ್ರಶ್ನೆ.

ಸಾವಿರ ನಮಸ್ಕಾರಗಳಿಂದ ಸೊಪ್ಪು-ಉಪ್ಪಾದರೂ ದೊರಕುವುದುಂಟೆ? ಸಾಲವನ್ನೆಲ್ಲ ನಮಸ್ಕಾರದಿಂದಲೇ ತೀರಿಸಿ ಬಿಡುತ್ತೇವೆ ಎಂದರೆ ಆದೀತೆ? ಆಪ್ತಕಾಮನಾದ ದೇವರಿಗೆ ನಮಸ್ಕಾರಗಳು ಸಾಕು; ಸಂಸಾರದಲ್ಲಿರುವ ಮನುಷ್ಯರಿಗೆ?

ನಮಸ್ಕಾರ ಮೊದಲ ಹೆಜ್ಜೆ ಅಷ್ಟೆ. ಮುಂದೇನು ಎನ್ನುವ ಕುತೂಹಲ ಹಲವು ಜನರಿಗೆ ಇರುತ್ತದೆ. ಕೆಲಸವಾಗಬೇಕಾದರೆ ವಿನಯದಿಂದ ಬರಬೇಕು, ಅನುನಯವೂ ಬೇಕು; ಇಷ್ಟು ನಮಸ್ಕಾರದ ಇಂಗಿತ. ಆದರೆ ಅಷ್ಟೇ ಸಾಲದಲ್ಲ? ಕುರುಡು ಕಾಂಚಾಣ ಬಲು ವಾಚಾಳಿ; ಅದರಿಂದಾಗದ ಕೆಲಸವೇ ಇಲ್ಲ. ಅದರ ಪಾತ್ರವಿಲ್ಲದ ಕೆಲಸವೂ ಇಲ್ಲವೆಂದರೆ ತಪ್ಪೇನಲ್ಲ.

ಅದಕ್ಕೂ ನಮಸ್ಕಾರಕ್ಕೂ ಎಲ್ಲಿಯ ತಾಳಿಕೆ? ನಮಸ್ಕಾರದೊಂದಿಗೆ ದುಡ್ಡಿನ ಕೊಡುಗೆಯೂ ಕೂಡಿಕೊಂಡರೇ ನಮಸ್ಕಾರಕ್ಕೆ ಬೆಲೆ, ಇಲ್ಲವಾದರೆ ನಮಸ್ಕಾರಕ್ಕೆ ಪ್ರತಿಯಾಗಿ ಸಿಗುವುದು ತಿರಸ್ಕಾರವೇ.

ದುಡ್ಡಿಲ್ಲದೆ ಅಡ್ಡಬಿದ್ದರೆ ದಡಿಗೆಯ ಪೆಟ್ಟೇ! ದುಡ್ಡು ಕೊಟ್ಟು ಅಡ್ಡ ಬೀಳದಿದ್ದರೂ ಕೆಲಸ ನಡೆಯುತ್ತದೆ. ದುಡ್ಡಿದ್ದರೆ ಅಡ್ಡಬೀಳುವ ಆಯಾಸವೂ ಬೇಡ.

ಸಂಸ್ಕೃತದಲ್ಲಿ ಇನ್ನೂ ಒಂದು ಮಾತು – 'ಹಣದ ಆಸೆಯಿರುವವನನ್ನು ಅನುನಯದಿಂದ ಕಂಡರೆ ಅದು ದೈನ್ಯಕ್ಕಷ್ಟೇ ದಾರಿ' ('ಅರ್ಥಪರೇಷು ಅನುನಯಃ ಕೇವಲಂ ದೈನ್ಯಾಯ'). ದೈನ್ಯವೆಂದರೆ ಹೀನಾಯವಾಗಿ ಕಾಣುವುದು, ಕೀಳರಿಮೆ.

ಕೆಲಸವಾಗಬೇಕೆಂದು ಅಧಿಕಾರಿಯನ್ನೂ ನಾಯಕನನ್ನೂ ಅರಸಿ ಅವನಲ್ಲಿ ನಯ ವಿನಯ, ಭಯ-ಭಕ್ತಿಗಳನ್ನು ತೋರಿಸಿದರೆ ಅಧಿಕಾರಿಗಾಗಲಿ ನಾಯಕನಿಗಾಗಲಿ ಇವನಲ್ಲಿ ಎಷ್ಟು ಗೌರವವಿದ್ದೀತು? ಇವನನ್ನು ಅವನು ಹೀನಾಯವಾಗಿಯೇ ಕಾಣುವುದು ಸಹಜ. ಅಂಥವನ ನಮಸ್ಕಾರಕ್ಕೇನು ಬೆಲೆ?

ಅದೇ, ಅಧಿಕಾರಿಗಾಗಲಿ, ನಾಯಕನಿಗಾಗಲಿ ಹಣವನ್ನು ಚೆಲ್ಲಿದರೆ ಅದಕ್ಕೊಂದು ಬೆಲೆ ಬರುತ್ತದೆ; ಚೆಲ್ಲಿದವನನ್ನು ಅಸಡ್ಡೆಯಿಂದ ಕಾಣಲಾಗುವುದಿಲ್ಲ; ನಮಸ್ಕಾರಕ್ಕೂ ಯೋಗ್ಯನಾಗುತ್ತಾನೆನ್ನಿ! ಹಣದ ಮಹಿಮೆ ಅಂಥದು.

ನಮಸ್ಕಾರವೆಂದರೆ ಬಾಗುವುದು, ಬಗ್ಗಿಸುವುದು ಎಂದರ್ಥ. ಹಣದ ಥೈಲಿಯನ್ನು ಬಾಗಿಸಿದರೂ ಸಾಕಲ್ಲ, ಮೈಯನ್ನು ಬಗ್ಗಿಸುವ ಕಷ್ಟವೇತಕ್ಕೆ?

ಸಂಸ್ಕೃತಿಯ ವಿವರವಿರುವುದು ಸುಸಂಸ್ಕೃತರಿಗೆ ಮಾತ್ರ; ಸಜ್ಜನರೇ ಸುಸಂಸ್ಕೃತರು.

52. ಪ್ರಗತಿ–ವಿಕೃತಿ

ಎಲ್ಲ ರಾಷ್ಟ್ರಗಳೂ ಪ್ರಗತಿಪರವಾಗಿರಬೇಕು, ಮುಂದುವರಿಯಬೇಕು, ನಿಂತೆಡೆ ನಿಲ್ಲಬಾರದು–ಇದೊಂದು ಈ ಕಾಲದ ಕೂಗು.

ಯಾವುದೇ ದೇಶವಾಗಲಿ ಕಾಲಕಾಲಕ್ಕೆ ಪ್ರಗತಿಪರವಾಗಿಯೇ ಇರುತ್ತದೆ; ಯಾವ ಜನ ತಾನೆ ಹಿಂದುಳಿದಿರುತ್ತಾರೆ? ಹಿಂದೆ ಸರಿಯುತ್ತಾರೆ? ಎಲ್ಲರೂ ಹೋಗುವುದು ಮುಂದೆಯೆ.

ಆದರೆ ಹಿಂದೆ ಇದೊಂದು ಕೂಗಾಗಿರಲಿಲ್ಲ, ವೇದಿಕೆಯ ಘೋಷಣೆಯಾಗಿರಲಿಲ್ಲ, ರಾಜಕಾರಣಿಗಳ ಬ್ರಹ್ಮಾಸ್ತ್ರವಾಗಿರಲಿಲ್ಲ. ಪ್ರಗತಿಯೆಂದರೆ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯೆಂದಷ್ಟೆ ಈ ಕೂಗಿನ ಅರ್ಥ. ಅಲ್ಲಿರುವ ಸೌಲಭ್ಯಗಳು, ಸಾಮಗ್ರಿಗಳು, ಸಲಕರಣೆಗಳು ಎಲ್ಲವೂ ಇಲ್ಲಿಗೆ ಬಂದುದಾದರೆ ಪ್ರಗತಿ.

ಎಲ್ಲ ಕ್ಷೇತ್ರಗಳಲ್ಲೂ ನಮ್ಮ ದೇಶ ಈ 'ಪ್ರಗತಿ'ಯನ್ನೇ ಮುಂದಿರಿಸಿಕೊಂಡು ಸಾಗುತ್ತಿದೆ. ನಮ್ಮ ದೇಶಕ್ಕೆ ಪ್ರಧಾನವಾದುದು ಕೃಷಿ; ನಮ್ಮ ಆರ್ಥಿಕತೆಯ

ಮೂಲಾಧಾರವೇ ವ್ಯವಸಾಯ. ಇದು ನಮ್ಮ ನಾಯಕರಿಗೆ ಸರಿಯೆಂದು ಕಾಣಲಿಲ್ಲ; ಬೇಸಾಯವನ್ನೇ ನಂಬಿಕೊಂಡ ಜನ ಪ್ರಗತಿಪರವಾಗುವುದು ಹೇಗೆ?

ಭಾರಿ ಭಾರಿ ಉದ್ಯಮಗಳಿದ್ದರೆ ಅದು ಪ್ರಗತಿಯ ದಾರಿ. ಉದ್ಯಮಗಳಿಗೆ ಪಾಶ್ಚಾತ್ಯ ತಂತ್ರಗಳನ್ನು ಬಳಸಿಕೊಂಡರೆ ಪ್ರಗತಿಯ ದಾರಿಯನ್ನು ಹಿಡಿದಂತೆ. ಅಲ್ಲಿನ ತಜ್ಞರನ್ನು ಇಲ್ಲಿಗೆ ಬರಮಾಡಿಕೊಂಡು, ಅವರಿಗೆ ತಾಂಬೂಲವನ್ನು ಕೊಟ್ಟು, ಅವರ ಎಂಜಲಿಗೆ ನಾವು ಕೈಯೊಡ್ಡಿದರೆ ಪ್ರಗತಿ.

ಬೇಸಾಯದ ಕೆಲಸದಲ್ಲಿ ಯಂತ್ರಗಳ ಬಳಕೆ, ಬೆಳೆಗಳಿಗೆ ಮದ್ದನ್ನು (ಎಂದರೆ ವಿಷವನ್ನು) ಸಿಂಪಡಿಸುವುದು, ನೆಲಕ್ಕೆ ಕೃತಕ ಗೊಬ್ಬರಗಳನ್ನು, ರಾಸಾಯನಿಕ ನೆರವನ್ನು ನೀಡಿ ಫಲವತ್ತಾದೀತೆಂದು ಎದುರುನೋಡುವುದು. ತಳಿಗಳ ಆಯ್ಕೆಯಲ್ಲಿ ವಿದೇಶೀಯರ ಮಾರ್ಗದರ್ಶನ ಪಡೆದುಕೊಳ್ಳುವುದು, ಮಾರುಕಟ್ಟೆಯನ್ನು ತಯಾರಿಸಲು ಹೆಣಗುವುದು ಇವೆಲ್ಲ ಪ್ರಗತಿಯ ಮುಖಗಳೇ.

ಈ ಪ್ರಗತಿಯ ಫಲವೇನಾಗಿದೆ? ವಿದೇಶಿ ತಜ್ಞರ ಬಂಡವಾಳ ಹೆಚ್ಚಿದೆ. ಅವರ ಅಧಿಕಾರದ ಹರವು ಹರಡಿಕೊಳ್ಳುತ್ತಿದೆ. ವಿಶ್ವ ಆರ್ಥಿಕ ಸಂಸ್ಥೆಗಳ ಮುಂದೆ ಸಾಲಗಾರರಾಗಿ ನಿಂತಿದ್ದೇವೆ. ಸಾಲ ತೀರಿಸುವ ಬಗೆಗಾಣದೆ ಇದ್ದೇವೆ. ನೆಲದ ಸಾರ ಕಡಮೆಯಾಗುತ್ತಿದೆ. ನಮ್ಮ ಕೋಠಿಗಳಲ್ಲಿ ಧಾನ್ಯದ ದಾಸ್ತಾನು ಕೊಳ್ಳುವವರಿಲ್ಲದೆ ಮುಗ್ಗುತ್ತಿದೆ. ಕೊಳ್ಳುವವರಿಲ್ಲ, ಏಕೆಂದರೆ ಬೆಲೆ ಗಗನಕ್ಕೇರಿರುವುದರಿಂದ, ನಮಗೆ ಅಗತ್ಯವಿಲ್ಲವೆಂದಲ್ಲ.

ಯಾಂತ್ರಿಕ ವಾಹನಗಳ ಅನುದಿನದ ಪೈಪೋಟಿಯಿಂದಾಗಿ ದೇಶದ ಗಾಳಿ ಕುಲಗೆಟ್ಟಿದೆ; ನಗರಗಳಲ್ಲಿ ಸ್ವಾಸ್ಥ್ಯಜೀವನವೆಂಬುದು ಹಗಲುಗನಸಾಗುತ್ತಿದೆ; ನಗರಗಳ ಸಂಖ್ಯೆಯಂತೂ ಹೆಚ್ಚುತ್ತಲೇ ಇದೆ. ಇತಿಮಿತಿಯೆಂಬುದೇನೂ ಇರದು.

ಅಂತೂ ಪ್ರಗತಿಯೆಂಬ ಹಾರಗುದುರೆಯ ಬೆನ್ನನ್ನೇರಿ ನಮ್ಮ ದೇಶ ದೂರ ದೂರ ಏನೋ ಸಾಗುತ್ತಿದೆ. ಎಲ್ಲಿಗೆ ಹೊರಟಿದೆ ಎಂಬುದರ ಅರಿವು ಯಾರಿಗೂ ಇದ್ದಂತಿಲ್ಲ. ಪಾಶ್ಚಾತ್ಯರನ್ನನುಕರಿಸಿ ಅವರು ಹೋದಲ್ಲಿಗೆ ನಾವು ಹೋದರಾಯಿತು ಎಂದು ನಮ್ಮ ನಾಯಕರು ನಂಬಿದಂತಿದೆ. ಅವರ ನಂಬಿಕೆಗೇ ಬೆಲೆಯಿಲ್ಲವೆ?

ಬದುಕಿನಲ್ಲಿ ನೆಮ್ಮದಿ, ಸಂಸ್ಕೃತಿಯಲ್ಲಿ ಸುಸ್ಥಿತಿ, ಪುರುಷಾರ್ಥಗಳ ಸಾಧನೆ ಇವು ಈಗ ನಾವು ಹಿಡಿದಿರುವ ಪ್ರಗತಿ ಪಥದಿಂದ ದೊರಕುವ ಸೂಚನೆಯೇನೂ ಕಾಣುವುದಿಲ್ಲ. ಇದೇನು ಪ್ರಗತಿಯೋ, ವಿಕೃತಿಯೋ?

53. ಅಂತರಾಳದ ಅಳಲು

'ಹಿಡಿದದ್ದು ತಪ್ಪಿತು, ಮೆಟ್ಟಿದ್ದು ಮುರಿಯಿತು' – ಹೀಗೊಂದು ಮಾತುಂಟು.

ಹಣ್ಣನ್ನು ಕಿತ್ತಲು ಮರಹತ್ತಿದವನು, ಒಂದು ಕೊಂಬೆಯನ್ನು ಕಾಲಿಂದ ಮೆಟ್ಟಿಕೊಂಡು ಅದರ ಮೇಲೆ ನಿಂತು, ದೂರದ ಇನ್ನೊಂದು ಕೊಂಬೆಗೆ ಕೈಚಾಚಿ ಅದರಲ್ಲಿ ಹಣ್ಣನ್ನು ಹಿಡಿಯಲು ಹೊರಟಾಗ, ಕೆಳಗಣ ಕೊಂಬೆ ಅವನ ಭಾರವನ್ನು ತಾಳಲಾರದೆ ಮುರಿಯಿತು; ಮೇಲಿನ ಕೊಂಬೆ ಅವನಿಗೆ ಎಟುಕದೆ ಹೋಯಿತು.

ಅವನ ಪಾಲಿಗೆ ಇದೂ ಇಲ್ಲ, ಅದೂ ಇಲ್ಲ. ದೊರಕಿದ್ದ ಕೊಂಬೆ ಮುರಿದು ಹೋಯಿತು; ಆತುಕೊಳ್ಳಲು ಮೇಲಿನ ಕೊಂಬೆ ಸಿಗಲಿಲ್ಲ.

ನಮಗೆ ಎಷ್ಟೋ ಬಾರಿ ಇಂಥ ಪೇಚಾಟ ಒದಗಿ ಬರುತ್ತದೆ. ಇದ್ದದ್ದು ಕೈಬಿಟ್ಟು ಹೋಗುತ್ತದೆ; ಬಯಸಿದ್ದು ದೊರಕುವುದಿಲ್ಲ. ಬೇಕೆಂದು ಬಯಸಿ ಪ್ರಯತ್ನ ಪಡುವಾಗ, ಆಸರೆಯೇ ಮರೆಯಾಗಿ ಬಿಡುತ್ತದೆ, ಏನು ಮಾಡುವುದು?

ನಮ್ಮ ದೇಶದ ಜನರು ಆರ್ಥಿಕ ನೆಲೆಯನ್ನು ಹೆಚ್ಚಿಸಿಕೊಳ್ಳಲು ಉದ್ಯಮ, ತಂತ್ರ, ವಿಜ್ಞಾನ ಎಲ್ಲವನ್ನೂ ಹಿಡಿಯುತ್ತಾರೆ. ಅವು ಯಾವುವೂ ಕೈಗೆ ಎಟುಕುವುದಿಲ್ಲ. ಇವನ್ನು ಪಡೆದುಕೊಳ್ಳಲೆಂದು ತಮ್ಮಲ್ಲಿದ್ದ ಸಂಸ್ಕೃತಿಯನ್ನು ಕೈಬಿಡುತ್ತಾರೆ. ಮತ್ತೆ ಅದನ್ನು ದೊರಕಿಸಿಕೊಳ್ಳುವುದು ಕಷ್ಟ; ಅಸಾಧ್ಯವೆಂದೇ ಎನಿಸೀತು.

ಉದ್ಯಮಕ್ಕೆಂದು ಬೇಸಾಯವನ್ನು ಬಿಡುತ್ತಾರೆ. ಬೇಸಾಯದಲ್ಲಿದ್ದ ಆಸರೆಯೂ ಹೋಯಿತು, ಉದ್ಯಮದಿಂದ ಲಾಭವೂ ಇಲ್ಲ, ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಿ ಬಿಡುತ್ತಾರೆ. ಕೆಟ್ಟು ಪಟ್ಟಣ ಸೇರುವುದಲ್ಲ; ಪಟ್ಟಣವನ್ನು ಸೇರಿಯೆ ಕೆಡುವುದು. ಹಳ್ಳಿಗೆ ಹಿಂದಿರುಗುವುದು ನಾಚಿಕೆಗೇಡು; ಮನಸ್ಸು ಬಾರದು. ಪಟ್ಟಣದಲ್ಲಿ ಬದುಕುವುದು ಕಷ್ಟ. ಕಷ್ಟವಾದರೂ ಅಲ್ಲೇ ಬದುಕಬೇಕು.

ಈ ತೀರ್ಮಾನಕ್ಕೆ ಮೊದಲು ವಿಚಾರ ಮಾಡದಿದ್ದರೆ ಆಗುವುದು ಹೀಗೆಯೇ. ತಾನು ಕಾಲಿಟ್ಟಿರುವ ರೆಂಬೆ ಗಟ್ಟಿಯಾಗಿದೆಯೋ, ತನ್ನ ಮೈತೂಕವನ್ನು ತಾಳಿಕೊಳ್ಳಬಲ್ಲುದೇ ಎಂದು ವಿಚಾರ ಮಾಡದೆ ಅದರ ಮೇಲೆ ನಿಂತರೆ ಮುರಿದು ಬೀಳದೆ ಇರುತ್ತದೆಯೆ? ತನಗೆ ಕಾಣುತ್ತಿರುವ ಹಣ್ಣನ್ನು ಕೈಯಿಂದ ಸಲೀಸಾಗಿ ಕೀಳಬಲ್ಲೆನೆ, ಕೈ ಚಾಚಿದರೆ ಮೈ ಜೋಲಿ ಹೋಗದೇ, ಮೈ ಬಾಗಿದರೆ ಆಯತಪ್ಪಿ ಬೀಳಲಾರೆನೇ ಎಂದೆಲ್ಲಾ ಯೋಚನೆ ಮಾಡದೆ ಹಣ್ಣಿನ ಮೇಲೇ ಕಣ್ಣಿಟ್ಟು ಕುಣಿದು ಕುಪ್ಪಳಿಸಿದರೆ 'ಹಿಡಿದದ್ದು ತಪ್ಪಿತು, ಮೆಟ್ಟಿದ್ದು ಮುರಿಯಿತು'.

ಬಯಸಿದ್ದು ಬರಲಿಲ್ಲ, ಇದ್ದದ್ದು ಹೋಯಿತು. ದೊರಕದ ವಸ್ತುವಿಗೆ ಆಸೆಪಟ್ಟು ಮೈಗಾಸಿ ಮಾಡಿಕೊಂಡಾಯಿತು. ಇದು ದೇಶದಲ್ಲೆಲ್ಲ ನಡೆಯುತ್ತಿದ್ದರೂ, ದೇಶದ ದುಃಸ್ಥಿತಿಗೆ ಇದೇ ಕಾರಣವಾದರೂ ಜನರಿಗೆ ಮನವರಿಕೆಯಾಗುವುದಿಲ್ಲ.

ನಮ್ಮ ಜನ ಬುದ್ಧಿವಂತರೇ; ಅದನ್ನು ಜಗತ್ತೆಲ್ಲ ಒಪ್ಪಿಕೊಂಡಿದೆ. ಆದರೂ ಇದೊಂದು ವಿವೇಕ ಏಕಿಲ್ಲವೋ ತಿಳಿಯದು. ನಮ್ಮದೇ ಆದ ಆರ್ಥಿಕ ನೀತಿ, ಸಾಮಾಜಿಕ ವ್ಯವಸ್ಥೆ, ಆಡಳಿತ ರಚನೆ, ಜೀವನ ವಿಧಾನ, ಕಲಾಶೈಲಿ, ಆಶೋತ್ತರ ಇವನ್ನೆಲ್ಲ ಉಳಿಸಿಕೊಳ್ಳಬೇಕೆಂಬ ತವಕ ಕಾಣುತ್ತಿಲ್ಲ. ಹೊರಗಣ ವಿವರಗಳ ಮೇಲೆ ಅದೇನೋ ವ್ಯಾಮೋಹ; ಅವನ್ನೆಲ್ಲ ನಮ್ಮದಾಗಿ ಮಾಡಿಕೊಳ್ಳುವ ಹವಣಿಕೆಯಂತೂ ಎದ್ದು ಕಾಣುತ್ತದೆ. ಇದ್ದದ್ದು ಕೈಬಿಟ್ಟು ಹೋಗುತ್ತಿದೆ; ಬಾರದುದರ ಬಯಕೆ ಕುಣಿದಾಡುತ್ತಿದೆ.

'ಹುಚ್ಚಲ್ಲ, ಬೆಪ್ಪಲ್ಲ, ಶಿವಲೀಲೆ' ಎನ್ನೋಣವೆ? ಅಥವಾ, ಯಾವುದೋ ಕೀಳರಿಮೆಯ ಅಭಿವ್ಯಕ್ತಿಯೆನ್ನೋಣವೆ? ದಾಸ್ಯ ಮನೋವೃತ್ತಿ ಇನ್ನೂ ಬಗೆಹರಿದಿಲ್ಲ ಎನ್ನೋಣವೆ? ತಿಳಿಯದು.

54. ಹಣಕ್ಕೆ ದಾಸರು

ಮನುಷ್ಯರಲ್ಲಿ ಕೆಲವರು ಒಡೆಯರು, ಕೆಲವರು ಊಳಿಗದವರು. ಹಣವಿದ್ದವರು ಒಡೆಯರು; ಹಣವಿಲ್ಲದವರು ಊಳಿಗದವರು. ಊಳಿಗದವರು ಒಡೆಯರನ್ನು ಆಶ್ರಯಿಸುವುದು ಹಣಕ್ಕಾಗಿಯೇ. ಹಣವಿಲ್ಲದವನು ಒಡೆಯ ನಾನೆಂದು ಬಗೆದರೆ ಅವನ ಬಳಿ ಯಾರು ಸುಳಿಯುತ್ತಾರೆ?

'ಮನುಷ್ಯನು ಮನುಷ್ಯನಿಗೆ ದಾಸನಲ್ಲ; ಹಣಕ್ಕೆ ದಾಸ' ಎಂದು ಸಂಸ್ಕೃತದ ಸುಭಾಷಿತವೊಂದಿದೆ. ಒಡತನವಿರುವುದು ದಿಟವಾಗಿ ಹಣದಲ್ಲಿಯೆ. ಹಣವುಳ್ಳವನಿಗೆ ಒಡೆತನ ಬರುವುದೂ ಅವನಲ್ಲಿರುವ ಹಣದಿಂದಲೇ.

ಹೀಗಾಗಿ ಮನುಷ್ಯನ ಮನುಷ್ಯತ್ವಕ್ಕೇ ಬೆಲೆ ಕಡಮೆಯಾಗುತ್ತದೆ. ಅವನ ಸ್ಥಿತಿ-ಗತಿ, ನೆಲೆ-ಬೆಲೆ ಎಲ್ಲವೂ ಹಣದಿಂದಲೇ ನಿರ್ಧಾರಗೊಳ್ಳುತ್ತದೆ. ಮನುಷ್ಯತ್ವದಲ್ಲಿ ಇರುವ ಮೌಲ್ಯಗಳು ಪುಟಗೊಳ್ಳುವುದೂ ಹಣದಿಂದಲೇ. ಹಣವಿಲ್ಲದಿದ್ದ ವಿದ್ಯೆಗೆ ಬೆಲೆಯಿದೆಯೆ? ಸಂಪತ್ತಿಲ್ಲದೆ ವಿವೇಕವಿದ್ದರೆ ಯಾರು ಮೂಸುತ್ತಾರೆ? ಹಣವಿದ್ದವನ ಕರುಣೆ ಎಲ್ಲರ ಕಣ್ಣನ್ನೂ ಕೋರೈಸುತ್ತದೆ; ಹಣವಿಲ್ಲದೆ ಕರುಣೆಯಿದ್ದರೆ ಯಾರು ಕೇಳುತ್ತಾರೆ? ನೆರವಿಗೆ ಬರುವ ಬುದ್ಧಿಯಿದ್ದರೂ ಹಣವಿಲ್ಲದೆ ಅದು ಮುನ್ನುಗ್ಗಿದರೆ ಏನಾದೀತು?

ಹಣದ ಅಗತ್ಯ ಹೀಗೆ ಸಿದ್ಧವಾಗುತ್ತದೆ. ಮನುಷ್ಯತ್ವದ ಮೌಲ್ಯಗಳಿದ್ದು ಮೇಲೆ ಹಣವಿದ್ದರೆ ಅದು ಸರಿಯೇ; ಮೌಲ್ಯಗಳಿಗೂ ಬೆಲೆ ಬರುತ್ತದೆ. ಆದರೆ ಮೌಲ್ಯಗಳನ್ನೇ ಮರೆಮಾಚುವಂತೆ ಹಣವು ದಟ್ಟವಾಗಿ ಕವಿದುಕೊಂಡರೆ, ಹಣದ ಅಗತ್ಯ ದಾರಿ

ತಪ್ಪಿದಂತೆ ಆಗುತ್ತದೆ. ಮೌಲ್ಯಗಳಿಗೆ ಮೆರುಗು ಕೊಡುವುದು ಹಣದ ಕೆಲಸ; ಇದ್ದುದನ್ನು ಎತ್ತಿ ತೋರಿಸುವುದು. ಮೌಲ್ಯಗಳನ್ನೇ ಹಿಂದಕ್ಕೆ ದೂಡಿ, ತಾನೇ ಮೆರೆಯತೊಡಗಿದರೆ ಹಣ ಅನರ್ಥಕ್ಕೆ ಕಾರಣವಾಗುತ್ತದೆ.

ಒಡೆಯನಲ್ಲಿಯಾಗಲಿ ಊಳಿಗದವನಲ್ಲಿಯಾಗಲಿ ಮೌಲ್ಯಗಳು ಸಮವೇ, ಇಬ್ಬರೂ ಮನುಷ್ಯರೇ ತಾನೆ? ಮನುಷ್ಯತ್ವ ಇಬ್ಬರಿಗೂ ಸಮಾಧಾನವೇ. ಒಬ್ಬನಲ್ಲಿ ಹಣ ಇದೆ, ಇನ್ನೊಬ್ಬನಲ್ಲಿ ಇಲ್ಲ. ಇಷ್ಟೇ ವ್ಯತ್ಯಾಸ. ಅವನು ನೀಡಬಹುದಾದುದು ಹಣ; ಇವನಿಗೆ ಬೇಕಾದುದೂ ಹಣವೇ. ಇವನು ಅವನನ್ನಾಶ್ರಯಿಸುವುದು ಹಣಕ್ಕೆಂದೇ. ಇವನಲ್ಲಿಯೇ ಹಣವಿದ್ದರೆ ಬೇರೊಬ್ಬನನ್ನಾಶ್ರಯಿಸಬೇಕೆ?

ಇಲ್ಲಿ ದಿಟವಾದ ಆಶ್ರಯ ಹಣವೇ. ಇದನ್ನು ಹಲವರು ಮರೆತು ತಾನು ಒಡೆಯ, ತನ್ನನ್ನೇ ಊಳಿಗದವರು ಆಶ್ರಯಿಸುತ್ತಾರೆ ಎಂಬ ಭ್ರಮೆಗೆ ಪಕ್ಕಾಗುತ್ತಾರೆ. ಊಳಿಗದವರಿಗೆ ಬೇಕಾದುದು ತಾನಲ್ಲ, ತನ್ನಲ್ಲಿರುವ ಹಣ ಎಂಬಷ್ಟು ವಿವೇಕವಿರುವುದಿಲ್ಲ. ಹಣದ ಸಾಮರ್ಥ್ಯವನ್ನು ಅರಿತುಕೊಂಡು ಹಣವಿರುವ ತಾನು ಏನನ್ನಾದರೂ ಮಾಡಬಲ್ಲೆನೆಂದು ಬೀಗುವುದೂ ಉಂಟು. ಆಗಲೂ ಎಲ್ಲವನ್ನೂ ಮಾಡುವುದು ಹಣವೇ, ತಾನಲ್ಲ ಎಂಬ ತಿಳಿವಳಿಕೆಯಾದರೂ ಇದ್ದೀತೆ?

ತಾನು, ತನ್ನಲ್ಲಿರುವ ಹಣ ಎಂಬ ವಿಭಾಗವನ್ನು ಕಂಡುಕೊಳ್ಳದೆ ಇರುವ ಒಡೆಯನೂ ಹಣಕ್ಕೆ ದಾಸನೇ; ತಾನು, ತನಗೆ ಬೇಕಾದ ಹಣ ಎಂಬ ವಿಭಾಗವನ್ನು ಅರಿತುಕೊಳ್ಳದಿರುವ ಊಳಿಗದವನೂ ಹಣಕ್ಕೆ ದಾಸನೇ. ಇಬ್ಬರೂ ಹಣಕ್ಕೆಂದು ತಮ್ಮ ಮನುಷ್ಯತ್ವವನ್ನೇ ಒತ್ತೆ ಇಟ್ಟು, ಹಣವನ್ನು ಪಡೆದುಕೊಂಡು ಮನುಷ್ಯತ್ವವನ್ನು ಕಳೆದುಕೊಳ್ಳುತ್ತಾರೆ.

ಹಣದ ಗೀಳು ಹೆಚ್ಚಾದಂತೆ ಮನುಷ್ಯತ್ವದ ಬೆಲೆ ಇಳಿಯುತ್ತದೆ. ಸಮರಸವಿರಬೇಕಾದಲ್ಲಿ ವಿರಸ ಏರ್ಪಡುತ್ತದೆ.

55. ಅಂತರದ ಆತಂಕ

ಹಣವಿದ್ದವರು ಏನನ್ನಾದರೂ ಮಾಡಿಯಾರು. ಹಣವಿಲ್ಲದವರು ಏನನ್ನು ತಾನೆ ಮಾಡಬಹುದು?

ಹೀಗೆ ಇಬ್ಬರಿಗೂ ನಡುವೆ ಇರುವ ಅಂತರ ಅನಾದಿಕಾಲದಿಂದ ಬಂದಿದೆ. ಈ ಅಂತರವನ್ನು ಕಡಮೆ ಮಾಡಬೇಕೆಂದು ಹಲವಾರು ಪ್ರಯೋಗಗಳು ನಡೆದಿವೆ. ಹಣವಂತರಿಂದ ಹಣವನ್ನು ಕಸಿದುಕೊಂಡು ಹಣವಿಲ್ಲದವರಿಗೆ ಹಂಚುವ ಕೆಲಸ ಧಾರ್ಮಿಕ ಸಂಸ್ಥೆಗಳಿಂದಲೂ ನಡೆದಿದೆ, ರಾಜಕಾರಣದ ಕ್ರಾಂತಿಯಿಂದಲೂ ನಡೆದಿದೆ.

ಹಣವಿದ್ದವರು ಇಲ್ಲದವರಾಗುವುದು ಸುಲಭ, ಆದರೆ ಇಲ್ಲದವರು ಉಳ್ಳವರಾಗುವುದು ಕಷ್ಟ. ಪ್ರಯೋಗಗಳು ಸುಲಭವಾದದ್ದನ್ನೆ ಆರಿಸಿಕೊಳ್ಳುವುದು. ಹಣವಂತರನ್ನು ತೆರಿಗೆಯಿಂದಲೋ ತಿರುಪೆಯಿಂದಲೋ ಸುಲಿಗೆ ಮಾಡಿ ಅವರನ್ನು ಕ್ರಮೇಣ ಹಣವಿಲ್ಲದವರನ್ನಾಗಿಸುವುದು ನಡೆಯುತ್ತಲೇ ಇದೆ. ಸರಕಾರವಾಗಲಿ ಸಂಸ್ಥೆಗಳಾಗಲಿ ಇದನ್ನು ಕೈಗೊಳ್ಳುವುದೂ ಇದ್ದದ್ದೇ.

ಆದರೆ ಹಣವಿಲ್ಲದವರನ್ನು ಹಣವಂತರನ್ನಾಗಿ ಮಾಡುವ ಪ್ರಯೋಗ ಅಷ್ಟಾಗಿ ಆಸಕ್ತಿಯಿಂದ ನಡೆಯುತ್ತಿಲ್ಲ. ಹಣವಿಲ್ಲದ ವ್ಯಕ್ತಿಗಳು ಹಣವುಳ್ಳವರಾಗುತ್ತಿರುವ ನಿದರ್ಶನಗಳು ಅನೇಕ; ಆದರೆ ಇದು ವ್ಯಕ್ತಿಗತವಾದ ಪರಿವರ್ತನೆ. ಸಮಾಜದಲ್ಲಿ ಬಡತನವನ್ನೇ ತೊಡೆದುಹಾಕುವ 'ಗರೀಬಿ ಹಟಾವ್' ಮುಂತಾದ ಯೋಜನೆಗಳು ಯಾವುವೂ ಸಫಲವಾಗಿಲ್ಲ.

ಹಣವಂತರು ಹೆಚ್ಚು ಹಣವಂತರಾಗುವುದೂ ಇದೆ; ಬಡವರು ಇನ್ನಷ್ಟು ಬಡವರಾಗುವುದೂ ಇದೆ. ಇದು ಕೆಲವರಿಗೆ ಮಾತ್ರ ಅನ್ವಯಿಸುತ್ತದೆ, ಹಲವರಿಗಲ್ಲ. ಸಮಾಜ ಸಮಸ್ಯೆ ಇದಲ್ಲ. ಸಮಾಜದ ಕಳಕಳಿ ಬಹುಜನರನ್ನು ಕುರಿತಂತೆ ಇರಬೇಕು. ಸಮಾಜದಲ್ಲಿ ಆರ್ಥಿಕ ಸುಭದ್ರತೆ, ಸಾಮಾಜಿಕ ಸೌಹಾರ್ದ ಇರಬೇಕಾದರೆ ಇಡೀ ಹಣವಂತರು-ಬಡವರ ಅಂತರ ಕಡಮೆಯಾಗಬೇಕು.

ಹಣವಂತರನ್ನು ಬಡವರನ್ನಾಗಿ ಮಾಡಿದರೆ ಸಮಾಜಕ್ಕೇನೂ ಲಾಭವಿರದು; ಬಡವರ ಸಂಖ್ಯೆ ಇನ್ನಷ್ಟು ಹೆಚ್ಚುತ್ತದೆ ಅಷ್ಟೆ. ಅಶಾಂತಿಯೂ ಅಧಿಕವಾಗುತ್ತದೆ; ಆರ್ಥಿಕ ಯೋಜನೆಗಳಿಗೆ ಆಸರೆ ತಪ್ಪುತ್ತದೆ; ಉದ್ಯಮದಲ್ಲಿ ಉತ್ಸಾಹವೂ ಕುಗ್ಗುತ್ತದೆ. ಹಣವಂತರಿರದೆ ಯಾವ ಸಮಾಜ ತಾನೇ ಮುಂದುವರಿದೀತು?

ಮಾಡಬೇಕಾದ ಕೆಲಸ, ಬಡವರನ್ನು ಭಾಗ್ಯವಂತರನ್ನಾಗಿ ಮಾಡುವುದು. ಬಡತನದ ಆಯಾಮದಲ್ಲಿ ಇಳಿಮುಖವಾದರೆ, ಮೇಲೆ ಹೇಳಿದ ಅಂತರ ತಾನಾಗಿ ಕಡಮೆಯಾಗುತ್ತದೆ. ಇದನ್ನು ಮಾಡುವಾಗ ದುರಾಸೆಯ ಹಣವಂತರನ್ನು ಹತ್ತಿಕ್ಕಬೇಕಾದುದು ಅಗತ್ಯವಾಗುತ್ತದೆ. ಹಾಗೆಯೇ ಅನಾಸಕ್ತರಾದ ಬಡವರನ್ನೂ ಹುರಿದುಂಬಿಸಬೇಕಾಗುತ್ತದೆ. ಅವರಿಗೆ ವಿದ್ಯೆ, ಉದ್ಯೋಗ, ವೃತ್ತಿ, ದೇಶದ ಹಿತಾಸಕ್ತಿ ಇವುಗಳತ್ತ ಒಲವನ್ನು ಮೂಡಿಸಬೇಕಾಗುತ್ತದೆ.

ನಾಡಿನ ಆರ್ಥಿಕ, ಸಾಮಾಜಿಕ ಪ್ರವಾಹದಲ್ಲಿ ಅವರೂ ಪಾಲ್ಗೊಳ್ಳುವ ಉತ್ಸಾಹ ಮೂಡಬೇಕು. ಹಣವಂತರ ಆಸರೆಯ ಮೇಲೇ ಸುಭದ್ರವಾದ ಸರಕಾರ ನಿಲ್ಲುವುದೆಂದಾಗ, ವಿದ್ಯಾವಂತರಾದ ದೇಶದ ಹಿತವನ್ನು ಬಯಸುವ ಹಣವಂತರೆಂದರ್ಥ, ಸ್ವಾರ್ಥಿಗಳಾದ ಹಣವಂತರೆಂದಲ್ಲ. ಹಣದ ಹಂಚಿಕೆಯ ಜೊತೆಗೆ ದೇಶಾಭಿಮಾನದ ಮನೋಧರ್ಮವೂ ಹರಡಿಕೊಂಡಲ್ಲದೆ ದೇಶಕ್ಕೆ ಪ್ರಗತಿಯೆಂಬುದಿರದು.

56. ಅರಿವಿಲ್ಲದ ಔದಾರ್ಯ

ಒಬ್ಬ ಧನವಂತ, ಒಂದು ನೂರು ಹಸುಗಳನ್ನು ಕಟ್ಟಿಕೊಂಡಿದ್ದಾನೆನ್ನಿ. ಅವನು ಎಷ್ಟು ಹಸುಗಳ ಹಾಲನ್ನು ತಾನೇ ಕುಡಿದಾನು? ಒಂದು ಹಸುವಿನ ಹಾಲನ್ನಾದರೂ ಪೂರಾ ಕುಡಿಯಬಲ್ಲನೋ? ಕುಡಿದರೆ ಹಿತವಾದೀತೋ?

ಉಳಿದ ಹಸುಗಳ ಹಾಲನ್ನೆಲ್ಲ ಬೇರೆಯವರಿಗೆ ತಾನೇ ಕೊಡಬೇಕು? ಮಾರುತ್ತಾನೆಯೋ ದಾನಮಾಡುತ್ತಾನೆಯೋ ಅದು ಬೇರೆ ಮಾತು.

ಮಾರಿ ದುಡ್ಡು ಮಾಡಿಕೊಳ್ಳುತ್ತಾನೆಂದೇ ಇಟ್ಟುಕೊಳ್ಳೋಣ. ಆ ದುಡ್ಡೆಲ್ಲವನ್ನೂ ತಾನೇ ಅನುಭವಿಸುವುದಾದರೂ ಆದೀತೋ? ಹಸುಗಳನ್ನು ಕಟ್ಟಿಕೊಳ್ಳುವ ಕಷ್ಟಕ್ಕೆ ತಕ್ಕ ಪ್ರತಿಫಲವೇನೋ ಸಿಗಬೇಕು; ಇಲ್ಲವಾದರೆ ನಷ್ಟವೇ ಆದೀತು. ಅಷ್ಟು ಮಾತ್ರವಾದರೆ ಸಾಕೇ? ಲಾಭವಿಲ್ಲದಿದ್ದರೆ ಈ ಕಷ್ಟ ಏತಕ್ಕೆ?

ಲಾಭದಿಂದ ಭೂಮಿಯನ್ನು ಕೊಂಡ; ಬೇಕಾದಂತೆ ಬೆಳೆಯನ್ನು ಬೆಳೆದನೆನ್ನಿ. ಬೆಳೆದುದೆಲ್ಲವನ್ನೂ ತಾನೊಬ್ಬ ತಿನ್ನಲಾಗುವುದೇ? ಇವನು ತಿನ್ನಬಹುದಾದ ಅಳತೆ ಸಣ್ಣದೇ. ತಾನು ಕಷ್ಟಪಟ್ಟು ಬೆಳೆದುದನ್ನು ಬೇರೆಯವರಿಗೆ ನೀಡಬೇಕು, ಇಲ್ಲವೆ ಮಾರಬೇಕು.

ಮಾರಿದನೆನ್ನಿ; ಮತ್ತೆ ಲಾಭವೇ! ಅದರಿಂದ ಮನೆಗಳನ್ನು ಕೊಂಡ; ಕಟ್ಟಿಸಿದನೆನ್ನಿ. ಮನೆಯೇನು, ಅರಮನೆಯೇ! ಅಂಥ ಹಣವಂತನ ಮನೆಯಲ್ಲಿ ಯಾವುದಕ್ಕೆ ಕೊರತೆ? ಯಾವ ಅನುಕೂಲವಿರದು?

ಆದರೆ ಯಜಮಾನನ ಅನುಕೂಲಕ್ಕೆ ಬರುವುದು ಎಷ್ಟು? ನೂರು ಕೋಣೆಗಳಿರುವ ಅರಮನೆಯಲ್ಲೇ ಇದ್ದರೂ ಅವನಿಗೆ ಸಾಕಾಗುವುದು ಒಂದು ಕೋಣೆಯಷ್ಟೆ!

ಆ ಕೋಣೆಯಲ್ಲಾದರೂ ಎಲ್ಲವನ್ನೂ ತುಂಬಿಕೊಂಡು ಇರಬಲ್ಲನೋ ಎಂದರೆ ಅದೂ ಆಗದು. ಕೋಣೆಯಲ್ಲಿ ಎಲ್ಲೋ ಒಂದು ಕಡೆ ಒಂದು ಮಂಚ; ಅದರ ಮೇಲೆ ಒರಗಿರಬಹುದು, ಹಾಯಾಗಿ ಮಲಗಬಹುದು, ಸುಖವನ್ನನುಭವಿಸಬಹುದು.

ಹಣವಂತನ ಮಂಚ ಸಣ್ಣದಾಗಿರುವುದು ಹೇಗೆ? ದೊಡ್ಡ ಮಂಚವೇ ಇರಬೇಕು. ಹೋಗಲಿ ಮಲಗುವಾಗ ಇಡೀ ಮಂಚವನ್ನೆಲ್ಲ ತುಂಬಿಕೊಂಡು ಮಲಗಿಯಾನೋ ಎಂದರೆ ಅದೂ ಇಲ್ಲ. ಮಂಚದ ಒಂದು ಸಣ್ಣ ಭಾಗವಷ್ಟೇ ಇವನ ಪಾಲಿನ ಸುಖಕ್ಕೆ ಬರುವುದು.

ಹಣ ಎಷ್ಟಾದರಿರಲಿ, ಅನುಕೂಲಗಳು ಎಂತಾದರಿರಲಿ, ಒಡ್ಡೋಲಗ ಹೇಗಾದರಿರಲಿ, ಇವನಿಗೆ ದಕ್ಕುವುದು ಅದರಲ್ಲಿನ ಸಣ್ಣದೊಂದು ಭಾಗವಷ್ಟೆ; ಉಳಿದುದೆಲ್ಲ ಬೇರೆಯವರ ಮೋಜಿಗೆ ಅಷ್ಟೆ.

ತನಗೆಂದು ಮಾಡಿಕೊಂಡ ಆಸ್ತಿಗೆ ಪಟ್ಟ ಕಷ್ಟವಷ್ಟೆ ತನ್ನದು; ಅದನ್ನು ಅನುಭವಿಸುವವರು ಆ ಕಷ್ಟ ಪಡದ ಇತರರು. ಕಂಡು ಕೇಳದ ಇತರರಿಗೆ ತಾನು ದುಡಿದು ಒದಗಿಸುವ ಔದಾರ್ಯ ಈ ದುರಾಸೆಯವನದ್ದು, ಆದರೆ ಆ ಔದಾರ್ಯದ ಅರಿವು ಮಾತ್ರ ಇರುವುದಿಲ್ಲವೆನ್ನಿ.

ಅರಿವೇ ಇಲ್ಲದಿದ್ದರೆ ಅದೆಂಥ ಔದಾರ್ಯ? ಅದಕ್ಕೆ ಫಲವಾದರೂ ಏನಿದ್ದೀತು? ಉದಾರಿಯೆಂದು ಗುರುತಿಸುವವರು ಯಾರೂ ಇರರು. ಜನರ ಪಾಲಿಗೆ ಅವನೊಬ್ಬ ಸ್ವಾರ್ಥಿಯಷ್ಟೆ.

57. ಅರ್ಥ-ಕಾಮ

ಸುಖವಿಲ್ಲದೆ ಇರಬಾರದೆಂದು ಶಾಸ್ತ್ರ ಹೇಳುತ್ತದೆ (ನ ನಿಃಸುಖಃ ಸ್ಯಾತ್).

ಆದರೆ ಇದೊಂದು ಒಕ್ಕಣೆಯನ್ನೂ ಸೇರಿಸುತ್ತದೆ. ಪಡೆದುಕೊಳ್ಳುವ ಸುಖವು ಧರ್ಮಕ್ಕಾಗಲಿ ಅರ್ಥಕ್ಕಾಗಲಿ ವಿರೋಧವಾಗಿರಬಾರದು ('ಧರ್ಮಾರ್ಥಾವಿರೋಧೇನ ಕಾಮಂ ಸೇವತ') ಎಂದು.

ಧರ್ಮದ ಮಾತನ್ನು ಸದ್ಯಕ್ಕೆ ಬಿಡೋಣ. ಅರ್ಥ ಎಂದರೆ ಹಣಕ್ಕೂ ಸುಖವು ವಿರೋಧವಾಗಿರಬಾರದಲ್ಲವೆ? ಅರ್ಥ-ಕಾಮಗಳ ನಡುವಣ ನಂಟನ್ನು ಶಾಸ್ತ್ರ ಪರಿಶೀಲಿಸುತ್ತದೆ. ಕಾಮವೆಂಬುದು ಸ್ವತಂತ್ರವಾದ ಪುರುಷಾರ್ಥ. ಎಲ್ಲ ಮನುಷ್ಯರೂ, ಮನುಷ್ಯರು ಮಾತ್ರವೇನು, ಎಲ್ಲ ಪ್ರಾಣಿಗಳೂ ಬಯಸುವುದು ಸುಖವನ್ನೇ ಅಲ್ಲವೆ? ಅದನ್ನು ಬಿಟ್ಟರೆ ಬದುಕಿಗೆ ಅರ್ಥವಿದೆಯೆ?

ಆದರೆ ಅದು ತನ್ನಷ್ಟಕ್ಕೆ ತಾನೇ ಒದಗಿ ಬರಲಾರದು. ಸ್ವತಂತ್ರವಾದ ಪುರುಷಾರ್ಥವೆನ್ನುವಾಗ ಅದರಾಚೆ ಏನೂ ಇರದು, ಬೇರೊಂದು ಪುರುಷಾರ್ಥಕ್ಕೆ ಅದು ದಾರಿಯಾಗದು ಎಂದು ತಾತ್ಪರ್ಯ. ದಿಟವಾಗಿ ಅದು ಪರತಂತ್ರವೇ; ಅದು ಅರ್ಥವನ್ನವಲಂಬಿಸಿಯೇ ಊರ್ಜಿತವಾಗುವುದು. ಅರ್ಥದ ಆಸರೆಯಿಲ್ಲದೆ ಕಾಮವನ್ನು ಪೂರೈಸಿಕೊಳ್ಳುವುದು ಹೇಗೆ?

ಅರ್ಥವೂ ಸ್ವತಂತ್ರವಾದ ಪುರುಷಾರ್ಥವಲ್ಲ. ಎಂದರೆ ಅರ್ಥವನ್ನು ಪಡೆದುಕೊಂಡರಾಯಿತು, ಮುಂದೇನೂ ಗುರಿಯಿರದು ಎನ್ನುವಂತಿಲ್ಲ. ಹಣವನ್ನು ಗಳಿಸಿಕೊಂಡ ಮಾತ್ರಕ್ಕೆ ಏನಾದಂತಾಯಿತು? ಅದು ಸುಖಕ್ಕೆ ದಾರಿಯಾಗಬೇಕಲ್ಲವೆ? ಸುಖದ ಕಲ್ಪನೆಯಿರದಿದ್ದರೆ ಅರ್ಥ ನಿರರ್ಥಕವೇ. ಕಾಮ ಗುರಿಯಾದರೆ ಅರ್ಥ ದಾರಿ; ಅರ್ಥವೇ ಗುರಿಯೆನ್ನಲಾಗದು. ಅರ್ಥದ ಪಾತ್ರ ಸಂಕುಚಿತವಾದುದು. ಪರತಂತ್ರವಾದುದು.

ಕಾಮ-ಅರ್ಥಗಳಿಗೆ ಹೀಗೆ ಅನ್ಯೋನ್ಯ ಪಾರತಂತ್ರ್ಯ. ಕಾಮಕ್ಕಾಗಿ ಅರ್ಥ; ಅರ್ಥವನ್ನನುಸರಿಸಿ ಕಾಮ. ಒಂದು ಇನ್ನೊಂದನ್ನು ಕೆಡಿಸದಂತೆ ನೋಡಿಕೊಳ್ಳುವುದು ವಿವೇಕ. ಇದನ್ನೇ ಅವಿರೋಧವೆನ್ನುವುದು. ಅರ್ಥಕ್ಕೆ ಅನುರೂಪವಾಗಿ ಕಾಮವಿದ್ದರೆ ಅದು ಅವಿರೋಧ. ಕಾಮದ ವೇಗವನ್ನು ಅರ್ಥವು ತಡೆಯಲಾರದೆ ಹೋದರೆ ಅದು ವಿರೋಧ. ಆಗ ಕಾಮವೇ ಕೆಡುತ್ತದೆ.

ಕಾಮವು ಗುರಿಯಾಗಿಯೂ ಅರ್ಥವು ದಾರಿಯಾಗಿಯೂ ಇರಬೇಕಾದುದು ಸಹಜ. ಅರ್ಥವೇ ಗುರಿಯಾಗಿಬಿಟ್ಟು ಕಾಮ ಅದಕ್ಕೆ ದಾರಿಯಾಗಿ ಮಾರ್ಪಟ್ಟಾಗ ಪುರುಷಾರ್ಥವೇನೂ ಕೈಗೂಡುವುದಿಲ್ಲ. ಗುರಿ-ದಾರಿಗಳ ನಡುವಣ ನಂಟು ಪ್ರವೃತ್ತಿಗಳಿಗೆ ಸಹಜವಾಗಿರಬೇಕು; ಇಲ್ಲವಾದರೆ ಉನ್ಮಾರ್ಗ ಪ್ರವೃತ್ತಿ.

ಹೀಗೆ ಗುರಿ-ದಾರಿಗಳ ಅನ್ಯೋನ್ಯಾಶ್ರಯ ಏರ್ಪಡುವುದು ಧರ್ಮದ ಕಲ್ಪನೆಯಿಂದ. ಅವೆರಡರ ನಡುವೆ ಸಮರಸವನ್ನು ಸಾಧಿಸುವುದೂ ಧರ್ಮವೇ. ಆದ್ದರಿಂದಲೇ ಸುಖವನ್ನರಸುವವರು ಧರ್ಮವನ್ನು ಬಿಡಬಾರದು. ಅರ್ಥವನ್ನೂ ಬಿಡಬಾರದೆಂದು ಶಾಸ್ತ್ರ ಸೂಚಿಸುವುದು. ಧರ್ಮವು ಅರ್ಥಕ್ಕೆ ದಾರಿಯಾಗಬೇಕು. ಅರ್ಥವು ಕಾಮಕ್ಕೆ ದಾರಿಯಾಗಬೇಕು. ಮೂರರ ನಡುವೆ ಸೆಣಸಾಟವಿರಬಾರದು.

ಈ ಮೂರರ ಪರಸ್ಪರ ನೆರವಿನಿಂದಲೇ ಸುಖವನ್ನು ಪಡೆದುಕೊಳ್ಳುವುದು ಜಾಣತನವೆಂದು ಶಾಸ್ತ್ರದ ಧ್ವನಿ. 'ಸುಖವಿಲ್ಲದೆ ಇರಬಾರದು' ಎಂಬಷ್ಟೇ ವಾಕ್ಯ ಭಾಗವನ್ನು ಗಮನಿಸಿದರೆ ಸಾಲದು; 'ಧರ್ಮಕ್ಕಾಗಲಿ ಅರ್ಥಕ್ಕಾಗಲಿ ವಿರೋಧವಿರದಂತೆ' ಎಂಬುದು ಇನ್ನೂ ಮುಖ್ಯವಾದ ವಾಕ್ಯ ಭಾಗ.

58. ಭ್ರಷ್ಟಾಚಾರ

ಈಚಲ ಮರದ ಕೆಳಗೆ ಕೂತು ಮಜ್ಜಿಗೆ ಕುಡಿಯುವವರ ವಿಚಾರ ಕೇಳಿದ್ದೀರಲ್ಲವೇ? ಜನರ ಅನುಭವದಲ್ಲಿ ಬಂದಿರುವ ವಿಚಾರವೇ ಇದು.

ಪಾಪ, ಅವರು ಕುಡಿಯುವುದೇನೋ ಮಜ್ಜಿಗೆಯೇ; ಹೆಂಡವಲ್ಲ. ಅವರೂ ಸಭ್ಯರು; ಉಡುಗೆ, ತೊಡುಗೆ, ಮಾತು, ಕತೆ ಎಲ್ಲವೂ ಮರ್ಯಾದಸ್ಥರದ್ದೇ.

ಆದರೆ ಅವರು ಕೂತಿರುವುದು ಈಚಲ ಮರದ ಕೆಳಗೆ. ಈಚಲ ಮರದಿಂದ ಹೆಂಡ ತೆಗೆಯುವುದು ಎಲ್ಲರಿಗೂ ತಿಳಿದದ್ದೇ. ಇಂಥ ಕಡೆ ಇವರು ಸುಮ್ಮನೆ ಸುಳಿದಾಡಿದರೂ ಅನುಮಾನಕ್ಕೆ ಆಸ್ಪದವೇ ಎನ್ನುವಾಗ, ಅಲ್ಲೇ ಕೂತು ಏನನ್ನೋ ಕುಡಿಯುತ್ತಿದ್ದಾರೆಂದರೆ ಜನ ಏನೆಂದುಕೊಳ್ಳುವರು?

ನಮ್ಮ ರಾಜಕಾರಣದಲ್ಲಿ ಸುಳಿಯುವಂಥ ಧರ್ಮಗುರುಗಳ ವ್ಯವಹಾರ ಈ ತೆರನಾದದ್ದೇ. ಬಾಯಲ್ಲಿ ಹೇಳುವುದು ಆಧ್ಯಾತ್ಮವೇ; ಕೊರಳಲ್ಲಿ ಕಾಣುವುದು ರುದ್ರಾಕ್ಷಿಯೇ, ತೊಟ್ಟಿರುವುದು ಕಾವಿಯೇ; ಪರಿಸರವೆಲ್ಲ ಭಕ್ತರದ್ದೇ; ಕಟ್ಟಲು ಹೊರಡುವುದೆಲ್ಲ ದೇವರ ಗುಡಿಗಳೇ, ಆಶ್ರಮಗಳೇ.

ಅವರಲ್ಲಿಗೆ ಬಂದು ಹೋಗುವವರು ಮಾತ್ರ ರಾಜಕಾರಣದಲ್ಲಿ ಕೆಟ್ಟ ಹೆಸರನ್ನು ಮಾಡಿಕೊಂಡಿರುವವರೇ. ಅವರ ಹವ್ಯಾಸದ ಹರವಿನಲ್ಲಿ ಭ್ರಷ್ಟಾಚಾರ ಸೇರದೆ ಹೊರಗೆ ನಿಲ್ಲುವುದು ಹೇಗೆ? ಭ್ರಷ್ಟಾಚಾರವೇ ಜೀವನಾಡಿಯಾದಾಗ, ಧರ್ಮಗುರುಗಳ ಬಳಿಗೆ ಬಂದಾಗ, ಧರ್ಮಗುರುಗಳಿಂದ ಮರ್ಯಾದೆಗೊಂಡಾಗ ಭ್ರಷ್ಟಾಚಾರಕ್ಕೂ ಒಂದು ಘನತೆ ಬಂದಂತೆ ಅಲ್ಲವೆ? ಅನುಮೋದನೆ ದೊರೆತಂತೆ ಅಲ್ಲವೆ?

ಇಂಥವರನ್ನು ಧರ್ಮಗುರುಗಳು ಒಳಮಾಡಿಕೊಂಡಾಗ ಅವರನ್ನು ಸುಧಾರಣೆ ಮಾಡುವುದು ಉದ್ದೇಶವಲ್ಲ; ಅವರಿಂದ ಸಾಧ್ಯವಾಗುವ ಅನುಕೂಲಗಳನ್ನು ಪಡೆದುಕೊಳ್ಳುವುದು ಉದ್ದೇಶ; ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದು ಉದ್ದೇಶ.

ಈಚಲ ಮರದ ಕೆಳಗೆ ಕೂತು ಮಜ್ಜಿಗೆ ಕುಡಿಯುವ ಸಾಮತಿಯೇ! ಹೆಂಡವನ್ನು ತಾವು ಕುಡಿಯದಿದ್ದರೂ, ಹೆಂಡವನ್ನು ಕುಡಿಯುವವರಿಗೆ, ಹೆಂಡವನ್ನು ಮಾಡುವವರಿಗೆ, ಹೆಂಡವನ್ನು ಮಾರುವವರಿಗೆ ತಮ್ಮ ಆಶೀರ್ವಾದವನ್ನು ನೀಡುವ ಗುರುಗಳು ಇವರು. ಇವರೂ ಹೆಂಡವನ್ನು ಕುಡಿದಂತೆಯೇ ಆಯಿತು ಎಂದು ಹೇಳಿದರೆ ತಪ್ಪೇನು? ಪ್ರತ್ಯಕ್ಷವಾಗಿ ಕುಡಿಯುವುದಿಲ್ಲ, ಪರೋಕ್ಷವಾಗಿ ಕುಡಿಯುವರು.

ಧರ್ಮಗುರುಗಳು ತಾವೇ (ಒಂದು ವೇಳೆ) ಭ್ರಷ್ಟಾಚಾರಕ್ಕೆ ಇಳಿಯದಿದ್ದರೂ ಭ್ರಷ್ಟಾಚಾರದಲ್ಲೇ ಮುಳುಗಿರುವವರ ಕೈಹಿಡಿದರೆ, ತಾವೂ ಅದರಲ್ಲಿ ತೊಡಗಲು ತಮ್ಮ ಅಭ್ಯಂತರವೇನಿರದು ಎಂದಲ್ಲವೆ ಅರ್ಥ? ಅವಕಾಶವಿಲ್ಲದ್ದರಿಂದ ಸಾಧುಗಳು; ಅವಕಾಶವಿರುವುದಾದರೆ ಬೇರೆ ಮಾತು!

ಭ್ರಷ್ಟಾಚಾರದಲ್ಲಿ ಹಣವೊಂದೇ ಮುಖ್ಯವಲ್ಲ; ಪ್ರಭಾವವೂ ಮುಖ್ಯವಾಗುತ್ತದೆ. ಹಣದಿಂದ ಬಲವಿದ್ದರೆ ಅದು ಪ್ರಭಾವದಿಂದ ಪ್ರಬಲವಾಗುತ್ತದೆ. ಮೋಕ್ಷ ಚಿಂತನೆಯ ಸೋಗು ಹಾಕಿಕೊಂಡು ಧರ್ಮಗುರುಗಳು ಪ್ರಭಾವಶಾಲಿಗಳಾದಾಗ ಹೆಚ್ಚುವುದು ಧರ್ಮವಲ್ಲ; ಕಾಮ; ನೆಮ್ಮದಿಯಲ್ಲ, ದುರಾಸೆ.

ಭ್ರಷ್ಟರಿಗೆ ಶಿಷ್ಟರ ಆಸರೆ ಬೇಕು, ದಿಟ; ಅವರ ಅನುಕೂಲಕ್ಕೆ ಇದು ಕಾರಣವಾಗುತ್ತದೆ. ಆದರೆ ಶಿಷ್ಟರಿಗೆ ಭ್ರಷ್ಟರ ಆಸರೆ ಬೇಕೆ? ಭ್ರಷ್ಟರ ಹಣವಾಗಲಿ, ಒಲವಾಗಲಿ, ನೆರವಾಗಲಿ ಇದ್ದ ಶಿಷ್ಯರು ಶಿಷ್ಟರಾಗಿ ಉಳಿಯುವ ಭರವಸೆಯಿದೆಯೆ?

59. ಧನಮದ

ಮತ್ತನ್ನುಂಟು ಮಾಡುವ ತಿನಿಸುಗಳಿವೆ, ಕುಡಿತಗಳಿವೆ. ಇವೆಲ್ಲ ಹೊರಗಿನಿಂದ ಬಂದು ಬಾಯಿ ಮೂಲಕ ಮೈಯೊಳಗೆ ಸೇರಿ ಮದವನ್ನುಂಟು ಮಾಡುವ ಪದಾರ್ಥಗಳು; ಅವುಗಳನ್ನು ಗುರುತಿಸುವುದು ಕಷ್ಟವಲ್ಲ.

ಆದರೆ ಇವಿಷ್ಟೇ ಮದಕ್ಕೆ ಕಾರಣವಾಗುತ್ತವೆ ಎನ್ನುವಂತಿಲ್ಲ. ವಿದ್ಯಾಮದ, ಕುಲಮದ, ಧನಮದಗಳನ್ನೂ ಎಲ್ಲರೂ ಬಲ್ಲರಷ್ಟೇ? ಅವೇನು ಕುಡಿತ, ತಿನಿಸುಗಳಂತೆ ಪದಾರ್ಥಗಳಲ್ಲ; ಹೊರಗಿನಿಂದ ಬರುವುವೂ ಅಲ್ಲ. ಮನಸ್ಸಿನ ವೃತ್ತಿಗಳು ಅವು. ಅವನ್ನು ಗುರುತಿಸುವುದು ಕಷ್ಟ.

ತಾನು ಓದಿದವನು, ಎಲ್ಲವನ್ನೂ ಬಲ್ಲವನು ಎಂದುಕೊಂಡಾಗ ವಿದ್ಯಾಮದ; ತಾನು ಒಳ್ಳೆಯ ವಂಶಕ್ಕೆ ಸೇರಿದವನು, ಕುಲೀನ ಎಂದುಕೊಂಡಾಗ ಕುಲಮದ; ತನ್ನಲ್ಲಿ ಹಣವಿದೆ, ತಾನು ಏನನ್ನಾದರೂ ಮಾಡಬಲ್ಲೆ ಎಂದುಕೊಂಡಾಗ ಧನಮದ. ಇನ್ನೂ ಇಂಥದೇ ಇತರ ಮದಗಳೂ ಇವೆಯೆನ್ನಿ. ರೂಪ, ಬಲ, ಶೀಲ, ಅಧಿಕಾರ, ಕೌಶಲ ಇವೆಲ್ಲ ಮದಕ್ಕೆ ಕಾರಣವಾಗಬಹುದು.

ಇವನ್ನು ಮದವೆನ್ನುವುದೇತಕ್ಕೆ? ಮನಸ್ಸನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು, ಯುಕ್ತಾಯುಕ್ತ ವಿವೇಚನೆಯನ್ನು ಮರೆ ಮಾಡಿ, ಬೇರೆ ಯಾವ ಆಲೋಚನೆಗೂ ಅವಕಾಶವಿರದಂತೆ ಮಾಡಿದರೆ ಅದು ಮದ. ಮತ್ತು, ಮದವೇರಿದರೆ ಬೇರೆ ಯಾತರ ಪರಿವೆಯೂ ಇರುವುದಿಲ್ಲ, ಯಾರ ಗಣನೆಯೂ ಇರುವುದಿಲ್ಲ.

ಧನಮದದಲ್ಲಿ ತನಗೆ ಹಣವಿದೆಯೆಂಬುದೇ ಮುಖ್ಯ ವಿಚಾರ. ತನ್ನ ಪ್ರತಿಷ್ಠೆ, ಮರ್ಯಾದೆ, ಮಾನ ಎಲ್ಲವೂ ಈ ಹಣದ ಮೇಲೆ ನಿಂತಿದೆಯೆಂಬ ಎಣಿಕೆ. ತನ್ನ ಸಂಪತ್ತು ಎಲ್ಲರ ಕಣ್ಣನ್ನೂ ಕೋರೈಸಬೇಕು, ತನ್ನ ಹೆಗ್ಗಳಿಕೆಯನ್ನು ಸುತ್ತಲವರೆಲ್ಲರೂ ಮನವರಿಕೆ ಮಾಡಿಕೊಳ್ಳಬೇಕು, ಎಲ್ಲರ ಮೇಲೂ ತನ್ನ ಅಂಕೆಯಿರಬೇಕು ಎನ್ನುವ ಭಾವನೆ ಧನಮತ್ತನಾದವನಿಗೆ. ಯಾರನ್ನು ಕಂಡರೂ ಅವನಿಗೆ ಅಸಡ್ಡೆಯೇ.

ಹಣವಿದ್ದವನನ್ನು ಹಣವಿಲ್ಲದವರೂ, ಹಣವನ್ನು ಬಯಸುವವರೂ ಓಲೈಸುವುದೂ ವಾಡಿಕೆ. ಹಣವಿದ್ದವನನ್ನು ಇಂದ್ರ, ಚಂದ್ರ, ದೇವೇಂದ್ರ ಎಂದು ಮುಖಸ್ತುತಿ ಮಾಡಿ, ಹಾಡಿ ಹೊಗಳಿ, ಅವನೆದುರು ಅಡ್ಡಬಿದ್ದು, ಅವನ ಮಾತನ್ನು ದೊರೆಯ ಅಪ್ಪಣೆಯೆಂಬಂತೆ ಕೇಳಿಕೊಂಡು ನಡೆಸುವರು. ಅವನ ದೋಷಗಳನ್ನು ಅವನ ಮುಂದೆ ಎತ್ತಿ ಆಡದೆ, ಅವನಲ್ಲಿರುವ ಇಲ್ಲದಿರುವ ಗುಣಗಳನ್ನೇ ದೊಡ್ಡದು ಮಾಡಿ ಅವನ ಸ್ವಾಭಿಮಾನದ ಸೊಡರಿಗೆ ಎಣ್ಣೆಯೆರೆಯುತ್ತಾರೆ.

ಇದು ಹಣವುಳ್ಳವನ ಮದಕ್ಕೆ ಕಾರಣವಾಗುತ್ತದೆ. ತನ್ನ ಹಿರಿಮೆ, ಹೆಗ್ಗಳಿಕೆಗಳ ಚಿತ್ರವೇ ಅವರ ಒಡಲ ತುಂಬ ಹರಡಿಕೊಳ್ಳುತ್ತದೆ. ತಾನು ಏನನ್ನಾದರೂ ಮಾಡಬಲ್ಲೆ,

ತನಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬ ದೃಢ ವಿಶ್ವಾಸ ಅವನಲ್ಲಿ ಬೇರೂರಿಕೊಳ್ಳುತ್ತದೆ. ಉಳಿದವರೆಲ್ಲ ತನ್ನೆದುರು ಕಾಲಕಸದಂತೆ ಎಂಬ ನಂಬಿಕೆ ಗಟ್ಟಿಯಾಗುತ್ತದೆ.

ತನ್ನ ಹಣಕ್ಕಾಗಿ ಇತರರು ತನ್ನನ್ನು ಆಶ್ರಯಿಸುತ್ತಾರೆ, ತನ್ನನ್ನು ಹೊಗಳುತ್ತಾರೆ, ಮುಂದೆ ಹೊಗಳುವವರೂ ಹಿಂದೆ ತೆಗಳುತ್ತಾರೆ, ತನ್ನ ಮುಂದೆ ಅವರು ತೋರುವ ವಿನಯ-ವಿಧೇಯತೆ ಎಲ್ಲವೂ ಬರಿಯ ನಾಟಕ ಎಂಬ ವಿವೇಕ ಅವನಿಗೆ ಇರುವುದಿಲ್ಲ. ಅವರ ಬೂಟಾಟಿಕೆಯ ಮಾತಿನಿಂದ ಉಬ್ಬಿಹೋಗುತ್ತಾನೆ. ಅವನಿಗೆ ಎಚ್ಚರವಾಗುವುದು ತನ್ನ ಹಣವೆಲ್ಲ ಕರಗಿಹೋಗಿ, ತನ್ನ ಬಳಿ ಯಾರೂ ಸುಳಿಯದಾಗಲೇ.

60. ಕಾಗೆ-ಕೋಗಿಲೆ

ಕಾಗೆಯೂ ಕಪ್ಪು, ಕೋಗಿಲೆಯೂ ಕಪ್ಪು; ಆಕಾರವೂ ಹೆಚ್ಚು ಕಡಮೆ ಒಂದೇ. ನೋಡಿದಾಗ ಯಾವುದು ಕಾಗೆ, ಯಾವುದು ಕೋಗಿಲೆ ಎಂದು ತಿಳಿಯುವುದು ಕಷ್ಟ. ಆದರೆ ಒಮ್ಮೆ ಬಾಯಿ ಬಿಟ್ಟಿತೆಂದರೆ, ರಾಗದಿಂದಲೇ ಭೇದ ತಿಳಿಯುತ್ತದೆ.

ಕಾಗೆ ಬಾಯಿಬಿಟ್ಟಿತೆಂದರೆ ಕೆಟ್ಟಿತು; ಸುಮ್ಮನಿರುವಾಗಲೆ ಅದರ ಹೆಗ್ಗಳಿಕೆ. ಅದನ್ನು ಕೋಗಿಲೆಯೆಂದೇ ಭ್ರಮಿಸುವವರು ಇರುತ್ತಾರೆ. ಹಾಗೆಯೇ ಕೋಗಿಲೆಯನ್ನೂ ಕಾಗೆಯೆಂದು ಬಗೆಯುವವರೂ ಇರುತ್ತಾರೆ; ಅದು ಬಾಯಿ ಬಿಡದೆ ಇದ್ದರೆ ಅದಕ್ಕೆ ಮರ್ಯಾದೆಯಿರದು.

ಒಂದಕ್ಕೆ ಮೌನ ಹಿತ, ಇನ್ನೊಂದಕ್ಕೆ ಹಗೆ. ಕಾಗೆ ಕೂಗಿದರೆ ಕೋಲನ್ನೆತ್ತಿ ಹೊಡೆದೋಡಿಸುತ್ತಾರೆ. ಕೋಗಿಲೆಯ ದನಿಯಾದರೆ ಕಿವಿಯಿಟ್ಟು ಕೇಳುತ್ತಾರೆ; ಅದೆಲ್ಲಿದ್ದೀತೆಂದು ಹುಡುಕಾಡುತ್ತಾರೆ.

ರಾಜಕಾರಣದಲ್ಲೂ ಕಾಗೆಗಳಿವೆ, ಕೋಗಿಲೆಗಳಿವೆ. ಅವುಗಳ ನಡುವೆ ಇರುವ ಭೇದ ತಟ್ಟನೆ ತಿಳಿಯುವುದಿಲ್ಲ. ಈ ಪ್ರಯತ್ನವನ್ನು ಬೇರೆ ಯಾರೂ ಮಾಡದಿದ್ದರೂ ಕೆಲವೊಮ್ಮೆ ತಮ್ಮಷ್ಟಕ್ಕೆ ತಾವೇ ಅವು ದನಿ ತೆಗೆಯುತ್ತವೆ. ವಸಂತಮಾಸ ಬಂದಿತೆಂದರೆ ಕೋಗಿಲೆಯ ಇಂಚರ ಕೇಳುವುದಿಲ್ಲವೆ? ಬೀದಿಯಲ್ಲಿ ಇಲಿ ಸತ್ತು ಬಿದ್ದಿತೆಂದರೆ ಕಾಗೆಗಳು ಅರಚುತ್ತ ಬರುವುದಿಲ್ಲವೆ? ಬೇರೆ ಕರೆ ಬೇಕಾಗಿಲ್ಲ.

ರಾಜಕಾರಣಿಗಳ ದಿಟವಾದ ಸ್ವರೂಪವೂ ಹೀಗೆಯೇ ಹಲವು ಕೆಲವು ಸಂದರ್ಭಗಳಲ್ಲಿ ತಾನಾಗಿ ತೋರಿಕೊಳ್ಳುತ್ತದೆ. ಪತ್ರಕರ್ತರೂ, ತನಿಖೆಯಲ್ಲಿ ತೊಡಗಿದವರೂ ಆಗಾಗ ಅವರ ಬಾಯಿ ಬಿಡಿಸುತ್ತಾರೆ; ನ್ಯಾಯಾಲಯದಲ್ಲಂತೂ

ಸರಿಯೇ ಸರಿ, ಅವರು ಬಾಯಿ ಬಿಡಲೇಬೇಕು. ಆಗ ಕಾಗೆ ಯಾವುದು, ಕೋಗಿಲೆ ಯಾವುದು ಎನ್ನುವುದು ತಿಳಿಯುತ್ತದೆ.

ಆದರೆ ಅಲ್ಲಿಯವರೆಗೆ ಜನರು ಕಾಗೆಯನ್ನು ಕೋಗಿಲೆಯೆಂದೇ ತಿಳಿದು ಮೋಸ ಹೋದದ್ದು ಉಳಿದುಕೊಳ್ಳುತ್ತದೆ; ಅದನ್ನೇನು ತೊಡೆದು ಹಾಕುವುದು ಸಾಧ್ಯವಿಲ್ಲ. ಇಂಥವರು ಮಾಡಿಕೊಂಡ ಹಣ, ಮಾಡಿದ ಅನ್ಯಾಯ, ಅವರಿಂದ ಜನರಿಗೆ ಆದ ಅಪಚಾರ, ಅನಾನುಕೂಲಗಳು ಒಣಗಿದ ಬರೆಗಳಾಗಿ ಉಳಿದುಕೊಳ್ಳುತ್ತವೆ; ಅವನ್ನು ಗುಣಪಡಿಸುವುದಾಗದು.

ಜನರ ಪಾಲಿಗೆ ವಿವೇಚನಾ ಶಕ್ತಿಯಿರುವವರೆಗೂ ರಾಜಕಾರಣದ ಕಾಗೆಗಳು ಕೋಗಿಲೆಗಳಾಗಿ ತೋರಿಕೊಳ್ಳುವ ಸಾಧ್ಯತೆಯಿರದು. ಬೇಗನೆ ಮೋಸ ಹೋಗುವ ಭೋಳೆಸ್ವಭಾವದ ಜನರಿದ್ದರೆ ಅವರನ್ನು ಮೋಸ ಮಾಡಲು ಹಾತೊರೆಯುವ ದುಷ್ಟರೂ ಇರುತ್ತಾರೆ; ಯಶಸ್ವಿಗಳೂ ಆಗುತ್ತಾರೆ. ಅಂತೆಗೆ ತಕ್ಕ ಬೊಂತೆಯಲ್ಲವೆ? ಜನರು ಎಚ್ಚರವಾಗಿದ್ದರೆ ಈ ತೊಂದರೆಯಿಲ್ಲ.

ಆದರೆ ಕಾಗೆ ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತದೆ; ಬೇಡವೆಂದರೂ ಬಂದೆರಗುತ್ತದೆ. ಓಡಿಸಿದರೂ ಹೋಗುವುದಿಲ್ಲ. ಕೋಗಿಲೆಯಾದರೆ ಕಾಣಿಸಿಕೊಳ್ಳುವುದೇ ಇಲ್ಲ; ಅದರ ದನಿಯಿಂದ ಅದೆಲ್ಲಿದೆಯೆಂದು ಹುಡುಕಬೇಕು; ಎಲ್ಲಿಯೋ ಅಡಗಿಕೊಂಡಿರುತ್ತದೆ. ಗುರುತಿಸುವುದೂ ಕಷ್ಟ, ಹಿಡಿಯುವುದೂ ಕಷ್ಟ.

ರಾಜಕಾರಣದಲ್ಲೂ ಇದು ದಿಟ. ಕಾಗೆಗಳೇ ಹೆಚ್ಚಾಗಿರುವಾಗ ಒಂದೊಂದು ಕೋಗಿಲೆಯಿದ್ದರೂ ಅದಕ್ಕೆ ಉಳಿಗಾಲವಿರುವುದಿಲ್ಲ. ಕಾಗೆಗಿರುವಷ್ಟು ಧೈರ್ಯ ಕೋಗಿಲೆಗಿರದು. ಆದರೆ ಕಾಗೆ ಕಾಗೆಯೇ, ಕೋಗಿಲೆ ಕೋಗಿಲೆಯೇ.

61. ಸ್ವಾಭಿಮಾನದ ಹಣ

ಪ್ರಾಮಾಣಿಕವಾಗಿ ದುಡಿದು ಗಳಿಸಿಕೊಂಡ ದುಡ್ಡು ಗಟ್ಟಿಯಾದುದು, ನಾಲ್ಕು ಕಾಲ ನಿಲ್ಲುವಂಥದು; ಗಳಿಸಿಕೊಂಡವರಿಗೆ ದಿಟವಾಗಿ ದಕ್ಕುವಂಥದು.

ಇಲ್ಲಿ ದುಡ್ಡು ಮುಖ್ಯವಲ್ಲ, ದುಡಿಮೆ ಮುಖ್ಯ. ಇಲ್ಲಿ ಕೆಲಸ ಮಾಡುವುದು ಜಾಣತನವಲ್ಲ. ನೀತಿಪರತೆ, ಸೇವೆಯೆಂಬ ಮನೋಭಾವ ಇರಬೇಕಾದುದಿಲ್ಲ. ಸ್ವಾರ್ಥವೇ ಇರಲಿ. ಆದರೆ ಸ್ವಾಭಿಮಾನವೂ ಇರಬೇಕು.

ತಾನು ದುಡಿದು ಗಳಿಸಿದ್ದು ತನಗೆ ಎಂಬುದು ಅಭಿಮಾನ. ಬೇರೊಬ್ಬರು ಅನುಕಂಪದಿಂದಲೋ ಆದರದಿಂದಲೋ ನೀಡಿದುದು ತನಗೆ ಬೇಡ ಎಂಬುದು.

ಯಾರನ್ನೂ ಬೇಡಬಾರದು, ಯಾರಿಂದಲೂ ಏನನ್ನೂ ಕಸಿದುಕೊಳ್ಳಬಾರದು, ಯಾರ ಕಣ್ಣಿಗೂ ಮಣ್ಣೆರಚಿ ದೋಚಿಕೊಳ್ಳಬಾರದು ಎಂಬುದೇ ನೀತಿಪರತೆ. ಇದೇ ಪ್ರಾಮಾಣಿಕತೆ.

ಇಲ್ಲಿ ವ್ಯಕ್ತಿಯ ಏಳಿಗೆಗೆ ಬೆಲೆಯಿಲ್ಲದೆ ಇಲ್ಲ. ದುಡಿದು ಗಳಿಸುವಾಗ ನೀತಿಪರನಾದವನು, ಪ್ರಾಮಾಣಿಕನಾದವನು ವಿರಕ್ತನೇನೂ ಅಲ್ಲ; ವಿಲಾಸಕ್ಕೆ ವಿಮುಖನಾಗಿ ಕಾಡಿಗೆ ಓಡುವವನೂ ಅಲ್ಲ. ಅವನಿಗೆ ಬಯಕೆಗಳು ಇರುತ್ತವೆ. ಬದುಕಿನಲ್ಲಿ ಚೆಲುವನ್ನು ಕಾಣಬೇಕೆಂಬ ತವಕವೂ ಇರುತ್ತದೆ. ಹಣವನ್ನು ಗಳಿಸಿಕೊಳ್ಳುವ ಕಾತರವೂ ಇರುತ್ತದೆ. ಅವನೇನು ಸಂತನೂ ಅಲ್ಲ, ಸನ್ಯಾಸಿಯೂ ಅಲ್ಲ.

ಆದರೆ ಹಣ ಹೇಗೆ ಬಂದರೂ ಆಯಿತು, ಬರುವುದು ಮುಖ್ಯ ಎನ್ನುವವನಲ್ಲ ಅವನು. ಹಣ ಬರಬೇಕು ದಿಟ, ಆದರೆ ಸರಿಯಾಗಿ ಬರಬೇಕು. ಮಾನಮರ್ಯಾದೆಗಳನ್ನು ಮೂಟೆ ಕಟ್ಟಿಟ್ಟು ಏನನ್ನು ಮಾಡಿದರೂ ಆಯಿತು ಎನ್ನುವವನಲ್ಲ ಇವನು.

ಹಣ ಗಳಿಸಿಕೊಳ್ಳುವುದರಲ್ಲೊಂದು ಮಡಿವಂತಿಕೆಯೂ ಇರಬೇಕೆ? ದುಡ್ಡಿಗೇನು ಮೈಲಿಗೆಯಿಲ್ಲ ಎನ್ನುವುದು ದಿಟ. ಕೊಳಚೆಯಲ್ಲಿ ಬಿದ್ದ ರೂಪಾಯಿಗೆಷ್ಟು ಬೆಲೆಯೋ ಮಂದಾಸನದ ಮೇಲಿರಿಸಿದ ರೂಪಾಯಿಗೂ ಅಷ್ಟೇ ಬೆಲೆ; ಕಟ್ಟಿಗೆ ಮಾರುವವನು ಗಳಿಸಿದ ರೂಪಾಯಿಯೇ ಕಾರುಬಾರಿನವನು ಗಳಿಸಿಕೊಳ್ಳುವ ರೂಪಾಯಿ. ಅದು ಯಾರಲ್ಲಿದೆ, ಹೇಗೆ ಬಂದಿತು ಎಂಬುದೇನೂ ಎಣಿಕೆಗೆ ಬಾರದು. ಮಣ್ಣು ಹೊರುವುದೂ ದುಡ್ಡಿಗೇ, ಮಂತ್ರಿಯಾಗುವುದೂ ದುಡ್ಡಿಗೇ. ದುಡ್ಡಿಗೇನು ಮಣ್ಣು ಅಂಟಿಕೊಳ್ಳುವುದಿಲ್ಲ, ಮಂತ್ರಾಲೋಚನೆಯ ಮಂಕೂ ಕವಿಯುವುದಿಲ್ಲ.

ಮಾರುಕಟ್ಟೆಯ ಮೌಲ್ಯದ ದೃಷ್ಟಿಯಿಂದ ಇದು ಸರಿಯೆ. ಆದರೆ ಹಣಕ್ಕೆ ಇಷ್ಟೇ ಮೌಲ್ಯವೆನ್ನಬಹುದೆ? ಅದಕ್ಕೊಂದು ಅಂತಃಸತ್ವವೂ ಇದೆ. ರೂಪಾಯಿ ಗಟ್ಟಿಯಾಗಿರುವುದು ಮುಟ್ಟಿದಾಗ ಮಾತ್ರ ಅಲ್ಲ; ನೀರಿಗೆ ಕರಗಬಾರದು, ಗಾಳಿಗೆ ಹಾರಿಹೋಗಬಾರದು.

ಪ್ರಾಮಾಣಿಕವಾಗಿ ದುಡಿದುಗಳಿಸಿದ ರೂಪಾಯಿಗಿರುವ ಗಟ್ಟಿತನ ಮೋಸದಿಂದಲೋ ದಾನದಿಂದಲೋ ಪಡೆದುಕೊಂಡ ರೂಪಾಯಿಗಿರದು. ಮೋಸದಿಂದ ಬಂದ ದುಡ್ಡು ದುರ್ವಾಸನೆಯಿಂದ ಕೂಡಿರುತ್ತದೆ; ದಾನವಾಗಿ ಪಡೆದುಕೊಂಡಿದ್ದು ಹುಲ್ಲಿಗಿಂತ ಹಗುರವಾಗಿರುತ್ತದೆ. ಹರಿಯುವ ನೀರಿನಲ್ಲಿ ಅದು ಕೊಚ್ಚಿ ಹೋಗುತ್ತದೆ; ಬೀಸುವ ಗಾಳಿಯಲ್ಲಿ ತೂರಿ ಹೋಗುತ್ತದೆ. ನಾಲ್ಕು ಕಾಲ ನಿಲ್ಲುವುದಲ್ಲ ಅದು.

ತನ್ನ ಮೇಲೆ ತನಗೆ ವಿಶ್ವಾಸವಿದ್ದರೆ, ತನ್ನನ್ನು ತಾನೇ ಗೌರವದಿಂದ ಕಾಣುವುದಾದರೆ, ತನ್ನಲ್ಲಿ ಕೀಳರಿಮೆಯಿರದಿದ್ದರೆ ತಾನು ಗಳಿಸಿದ ದುಡ್ಡು

ಗಟ್ಟಿಯಾಗಿಯೇ ಇರುತ್ತದೆ. ಅದು ತನ್ನದೇ ಎನ್ನುವ ನಂಬಿಕೆ ಬರುತ್ತದೆ. ಇದರಲ್ಲಿ ಸ್ವಾಭಿಮಾನದ ಕಳೆಯಿರುತ್ತದೆ. ಆಗ ದುಡ್ಡಿಗೊಂದು ವಿಶೇಷವಾದ ಒಳಗಣ ಬೆಲೆ ಮೂಡಿಬರುತ್ತದೆ.

62. ಸುಖೀರಾಜ್ಯದಲ್ಲಿ ಹಣ

ಹಣದಲ್ಲೆರಡು ಬಗೆ–ಸ್ವಂತದ್ದು, ಸಾರ್ವತ್ರಿಕವಾದದ್ದು.

ಎರಡೂ ಬಗೆಗಳಲ್ಲಿ ಆರ್ಜನೆ, ರಕ್ಷಣೆ, ವಿತರಣೆಗಳ ಅಂಶವಿದೆ. ಹಣವನ್ನು ಸಂಪಾದಿಸಬೇಕು, ಕಾಪಾಡಿಕೊಳ್ಳಬೇಕು, ಸರಿಯಾಗಿ ವೆಚ್ಚ ಮಾಡಬೇಕು. .

ಸಾರ್ವತ್ರಿಕವಾದ ಹಣವಿರುವುದು ಸುಖೀರಾಜ್ಯದ ಪ್ರಯೋಜನಸಕ್ಕಾಗಿ. ಎಲ್ಲರಿಂದ ಪಡೆದುಕೊಂಡ ಹಣವನ್ನು ಎಲ್ಲರ ಸುಖಕ್ಕಾಗಿ ವಿತರಣೆ ಮಾಡುವುದು ಸುಖೀರಾಜ್ಯ. ಇದು ಯಾವುದೇ ಸರಕಾರವಾಗಲಿ ಅದರ ಕರ್ತವ್ಯವೇ. ಕರ್ತವ್ಯದ ಅರಿವಾಗಲಿ, ಪೂರೈಕೆಯಾಗಲಿ ತಾನಾಗಿ ಆಗುವುದಿಲ್ಲ; ಅದರಲ್ಲಿ ಸಮಸ್ಯೆಗಳಿರುತ್ತವೆ.

ಸಾರ್ವತ್ರಿಕವಾದ ಹಣವನ್ನು ಸ್ವಂತದ್ದಾಗಿ ಮಾರ್ಪಡಿಸಿಕೊಳ್ಳುವುದೇ ಭ್ರಷ್ಟಾಚಾರವೆನಿಸಿಕೊಳ್ಳುತ್ತದೆ. ಸರಕಾರದ ಹೊಣೆಗಾರಿಕೆಯನ್ನು ಹೊತ್ತವರೋ, ಸರಕಾರದ ನಂಟನ್ನು ಪಡೆದುಕೊಂಡವರೋ, ಸರಕಾರದ ಮೇಲೆ ಪ್ರಭಾವವನ್ನು ಬೀರಬಲ್ಲವರೋ ಇದರಲ್ಲಿ ತೊಡಗುವುದು ವಾಡಿಕೆ. ಉಳಿದವರಿಗೆ ಈ ಬಗೆಯ ಸೌಕರ್ಯವಿರದು.

ಸ್ವಂತದ ಹಣವನ್ನು ಸಾರ್ವತ್ರಿಕ ಹಣವಾಗಿ ಮಾರ್ಪಡಿಸಿಕೊಳ್ಳಲು ಸರಕಾರ ಹವಣಿಸುತ್ತಿರುವುದೂ ಇದೆ. ಸ್ವಂತದ ಹಣವೇ ಸಾರ್ವತ್ರಿಕವಾಗಿ ತೋರಿಕೊಳ್ಳದಿದ್ದರೆ ಸುಖೀರಾಜ್ಯದ ನಿರ್ವಹಣೆಗೆ ಹಣವೆಲ್ಲಿಯದು? ಬಗೆಬಗೆಯ ತೆರಿಗೆಗಳು ಸಾರ್ವತ್ರಿಕ ಹಣದ ಸಂಪಾದನೆಯ ದಾರಿಗಳಲ್ಲೊಂದು. ಅದು ಮಿತವಾಗಿದ್ದರೆ ಜನರಿಗೆ ಹೊರೆಯಲ್ಲ. ಮಿತಿಯನ್ನು ಮೀರಿದರೆ ಸುಲಿಗೆ ಎನಿಸಿಕೊಳ್ಳುತ್ತದೆ.

ಸುಖೀರಾಜ್ಯವೆಂದಾಗ ಜನರು ಸರಕಾರದಿಂದ ಹಲವು ಅನುಕೂಲಗಳನ್ನು ನಿರೀಕ್ಷಿಸುವುದು ಸಹಜ; ಅವರದ್ದೇ ಅಲ್ಲವೆ ಸರಕಾರದ ಸಂಪತ್ತು? ಕೆಲವೊಮ್ಮೆ ಸುಖೀರಾಜ್ಯ ಜನರ ನಿರೀಕ್ಷೆಯನ್ನು ಸಫಲಗೊಳಿಸುವುದಿಲ್ಲ. ಜನರಿಗೆ ಆತಂಕ ಪರಿಸ್ಥಿತಿ ಒದಗುತ್ತದೆ. ಜನರು ದಂಗೆಯೇಳುತ್ತಾರೆ. ಇಲ್ಲವೆ ಅಕ್ರಮ ವ್ಯವಹಾರದಲ್ಲಿ ತೊಡಗುತ್ತಾರೆ; ಆರ್ಥಿಕ, ಸಾಮಾಜಿಕ ಅಪರಾಧಗಳು ಹೆಚ್ಚುತ್ತವೆ.

ಹೀಗಾದಾಗ ಸುಖೀರಾಜ್ಯದ ಕಲ್ಪನೆಯು ಕುಸಿದು ಬೀಳುತ್ತದೆ. ಆಗ ಜನರ ನೈತಿಕ ಮಟ್ಟ ಇಳಿಯಿತೆಂದೇ ಅರ್ಥವಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ ಬದಲಾವಣೆಗಳಾಗಿವೆಯೆಂಬುದು ಕಾರಣವಾಗಬಲ್ಲದು.

ಉದ್ಯಮಗಳ ಸ್ವರೂಪ, ವ್ಯವಹಾರದ ರೀತಿ ಇವು ಈಗ ಕಂಪ್ಯೂಟರ್ ಯುಗದಲ್ಲಿ ತೀವ್ರಗತಿಯಿಂದ ಬದಲಾಗಿ ಯಂತ್ರಗಳ ಅವಲಂಬನೆ ಹೆಚ್ಚಿದೆ. ಕೆಲಸಕ್ಕೆ ಮನುಷ್ಯರು ಬೇಡವಾಗಿದ್ದರೆ ನಿರುದ್ಯೋಗ ಸಮಸ್ಯೆ ಕಾಡತೊಡಗುತ್ತದೆ. ವಿದೇಶಿಯರ ಪ್ರಕಟ, ಗುಪ್ತ ವ್ಯಾಪಾರಗಳು ಹೆಚ್ಚಿವೆ. ದೇಶದೇಶಗಳ ನಡುವೆ ಪೈಪೋಟಿ ವಿಪರೀತವಾಗಿ ತಲೆದೋರಿದೆ.

ಗ್ರಾಮೀಣ ಸಂಸ್ಕೃತಿಯು ನೆಲೆಯೇ ಮರೆಯಾಗಿ ನಗರಗಳು ಗೊತ್ತು ಗುರಿಯಿಲ್ಲದೆ ಬೆಳೆಯತೊಡಗಿವೆ. ಉತ್ಪಾದನೆ-ವಿತರಣೆಗಳ ನಡುವೆ ದಳ್ಳಾಳಿ ಮನೋಭಾವ ಮೂಡಿಕೊಂಡಿವೆ. ದುರಾಸೆಯ ಮೇಲಾಟದಲ್ಲಿ ಸಾರ್ವಜನಿಕ ಹಣವನ್ನು ಸ್ವಂತದ್ದಾಗಿ ಮಾಡಿಕೊಳ್ಳುವ ಹವಣಿಕೆ ಹರಡಿಕೊಳ್ಳುತ್ತಿದೆ.

ಇಷ್ಟರ ನಡುವೆ ಸಾಂಸ್ಕೃತಿಕವಾದ ಗೊಂದಲಗಳೂ ಏರ್ಪಟ್ಟಿವೆ. ಜಾತಿ ಮತಗಳ ನಡುವೆ, ಗಂಡು ಹೆಣ್ಣುಗಳ ನಡುವೆ, ಯಜಮಾನ-ಕಾರ್ಮಿಕರ ನಡುವೆ, ವಿವಿಧ ವರ್ಗಗಳ ನಡುವೆ ಸೆಣಸಾಟ ಪ್ರಬಲವಾಗಿದೆ. ಇವನ್ನೆಲ್ಲ ಸಮರ್ಪಕವಾಗಿ ಬಗೆಹರಿಸುವ ಸಾಮರ್ಥ್ಯ ಸುಖೀರಾಜ್ಯಕ್ಕೆ ಇರಬೇಕು. ಇದು ನಾಯಕರ ಹಿರಿಮೆಯಿಂದ ಮಾತ್ರ ಸಾಧ್ಯ.

ಸುಖೀರಾಜ್ಯದಲ್ಲಿ ಹಣಕ್ಕಿಂತ ಹೆಚ್ಚಾಗಿ ಜಾಣತನದ ಮಾರ್ಗದರ್ಶನ ಅಗತ್ಯವಿದೆ.

63. ಬಡತನದ ನೆಲೆಯೇನು?

ನಮ್ಮ ಸಂಸ್ಕೃತಿಯಲ್ಲಿ ಬಡತನವನ್ನು ಹಾಡಿ ಹೊಗಳುವುದೊಂದು ಪರಿಪಾಟ ಇದೆ, ಅಥವಾ ಇದ್ದಿತು. ನಮ್ಮ ನಾಡಿನ ಬಡತನಕ್ಕೆ ಇದೇ ಕಾರಣವೆಂದು ಮೂದಲಿಸುವವರೂ ಇಲ್ಲದಿಲ್ಲ; ಬಡತನವನ್ನು ಪ್ರೋತ್ಸಾಹಿಸುವುದಕ್ಕಿಂತ ಹೆಚ್ಚಿನ ಪಾಪವುಂಟೆ?– ಎಂದವರ ವಾದ.

ಬಡವರು ಬಡವರಾಗಿಯೇ ಉಳಿಯಬೇಕೆಂದು ಹೇಳುವುದು ಸರಿಯೆಂದು ಯಾರು ತಾನೆ ಹೇಳಿಯಾರು? ಬಡತನಕ್ಕೆ ಅಲಸಿಕತೆಯೇ ಮೂಲವೆಂದು ಯಾರರಿಯರು? ಸೋಮಾರಿತನವೇ ಮನುಷ್ಯನಿಗೆ ಸರಿಯಾದ ಪ್ರವೃತ್ತಿಯೆನ್ನುವವರು

ಯಾರು? ಬಡತನದ ಬೇಗೆಯಲ್ಲಿರುವವರಿಗೆ ಬಡತನದ ಹೆಗ್ಗಳಿಕೆಯ ಉಪದೇಶ ಹೇಗೆ ತಾನೆ ಹಿಡಿಸೀತು?

ಬಡತನದಿಂದ ಆಗುತ್ತಿರುವ ಅನ್ಯಾಯಕ್ಕಾದರೂ ಮಿತಿಯಿದೆಯೇ? ಸುಳ್ಳು, ಕಳ್ಳತನ, ಮೋಸ, ದರೋಡೆ, ಕೊಲೆ ಮೊದಲಾದವುಗಳು ಬಹು ಮಟ್ಟಿಗೆ ಬಡತನದಿಂದಲೇ ಒದಗಿಬರುತ್ತವೆ. ಬೇರೆ ಕಾರಣಗಳಿಲ್ಲವೆಂದಲ್ಲ; ಆದರೆ ಬಡತನದ್ದು ಮುಖ್ಯವಾಗಿ ಮೇಲೆದ್ದು ನಿಲ್ಲುತ್ತದೆ.

ಉದ್ಯಮಿಗಳು ಬಡವರನ್ನು ದುಡಿಸುವ ಬಗೆಯನ್ನಾದರೂ ನೋಡಿ. ಬಡವರೆಲ್ಲ ಬಲ್ಲಿದರಾದರೆ ಈ ಸಿರಿವಂತರಿಗೆ ಸುಖವೆಲ್ಲಿಯದು? ಸಿರಿವಂತರಿಗೂ ಬಡವರಿಗೂ ಸೆಣಸಾಟ ಮೊದಲಿನಿಂದ ಇದ್ದದ್ದೇ. ಸಿರಿವಂತರಿಗೆ ತಾವು ಮಾತ್ರ ಸಿರಿವಂತರಾಗಿರಬೇಕೆಂಬ ಹಟ; ಬಡವರಿಗೆ ತಾವೂ ಸಿರಿವಂತರಾಗಬೇಕೆಂಬ ಬಯಕೆ, ಕಾತರ.

ಬಡತನದಿಂದ ಬಳಲುವವರಿಗೆ ಸ್ವತಂತ್ರವಾಗಿ ಚಿಂತನೆ ಮಾಡುವುದೂ ಸಾಧ್ಯವಾಗದು; ಹೊಟ್ಟೆ ಬಟ್ಟೆಗಾಗಿ ದುಡಿಯುವದೇ ಅವರಿಗೆ ಸಾಕಾಗುತ್ತದೆ! ಇನ್ನು ಆಲೋಚನೆಯ ಮೋಜುಗಾರಿಕೆಗೆ ಸಮಯವೆಲ್ಲಿ? ಹಣವಿದ್ದವರಿಗೇ ಆಲೋಚನೆಯ ಸ್ವಾತಂತ್ರ್ಯ. ಅದಕ್ಕೆ ಅನುಕೂಲವೆಲ್ಲ ದೊರೆಯುತ್ತದೆ. ಅದನ್ನು ಜಗಜ್ಜಾಹೀರು ಮಾಡಲೂ ಜನ ಸಿದ್ಧರಾಗಿರುತ್ತಾರೆ; ಅವರಿಗೆ ತಾನೆ ಹಣದಾಸೆ ಇರುವುದಿಲ್ಲವೆ?

ಇನ್ನು ಆಡಳಿತದ ಕರ್ತವ್ಯವಾದರೂ ಏನು? ಬಡತನವನ್ನು ಪ್ರೋತ್ಸಾಹಿಸುವುದಲ್ಲ, ಹರಡುವುದಲ್ಲ, ಹೊಗಳುವುದಲ್ಲ; ಅದನ್ನು ತೊಲಗಿಸುವುದು, ಅದರ ಹುಟ್ಟಡಗಿಸುವುದು. ಜನರಿಗೆ ಅಗತ್ಯವಾದ ಉದ್ಯೋಗ, ಅನ್ನ, ನೀರು, ಬಟ್ಟೆ, ವಾಸ, ವಿನೋದ, ವಿಹಾರ, ಆರೋಗ್ಯ ಎಲ್ಲವೂ ಕೈಗೆಟಕುವಂತೆ ಮಾಡದಿದ್ದರೆ ಸರಕಾರವೇತಕ್ಕೆ?

ಮತ್ತೆ ಕವಿಗಳೂ ದಾರ್ಶನಿಕರೂ ಬಡತನವನ್ನು ಹೊಗಳಿದ್ದೇಕೆ? ಬಡವರೆಂದರೆ ಅವರ ಪಾಲಿಗೆ ಉಣ್ಣಲೂ ಉಡಲೂ ಅನುಕೂಲವಿಲ್ಲದೆ, ಇರಲು ನೆಲೆಯಿಲ್ಲದೆ ನಿರ್ಗತಿಕರಾಗಿರುವ ಮಂದಿಯಲ್ಲ. ಮಿತಿಮೀರಿದ ಬಯಕೆಯುಳ್ಳವರೇ ಬಡವರು. ಸಾಮಾನ್ಯವಾದ ಆರ್ಥಿಕ ನೆಮ್ಮದಿಯಿದ್ದರೆ ಸಾಕೆನ್ನುವವರು, ಬದುಕಿನಲ್ಲಿ ಹಣವೊಂದೇ ಮುಖ್ಯವೆಂದು ಬಗೆಯದವರು, ನೆಮ್ಮದಿಯ ಸರಿಯಾದ ಕಲ್ಪನೆ ಇರುವವರು ಬಡವರು.

ಇಲ್ಲಿ ಬಡತನವೆಂದರೆ ದಾರಿದ್ರ್ಯವಲ್ಲ, ತೃಪ್ತಿ. ಅದಕ್ಕೆ ಮೂಲ ಅಲಸಿಕೆಯಲ್ಲ, ಸಮಾಧಾನ. ಇರುವ ಅನುಕೂಲವು ಕೆಟ್ಟ ಚಾಳಿಗಳಿಗೆ ದಾರಿಮಾಡಿಕೊಡಲಾರದು; ಗರ್ವದಿಂದ ಬೀಗುತ್ತ ಬೇರೆಯವರನ್ನು ಅಸಡ್ಡೆಯಿಂದ ಕಾಣುವುದಾಗದು, ಇತರರನ್ನು

ಶೋಷಣೆ ಮಾಡುವುದಂತೂ ಇರಲಾರದು. ಬಡವನಾದರೆ ಮಡಗಿದಂತೆ ಇರುತ್ತಾನಲ್ಲವೆ? ಇರುವಷ್ಟು ಸಾಕು, ಬಂದದ್ದರಿಂದ ನೆಮ್ಮದಿ ಎನ್ನುವವನು ಸಮಾಜ ಕಂಟಕನಾಗುವುದಾದರೂ ಹೇಗೆ?

64. ನಗದು ಹಣ-ಅದ್ಭುತದೀಪ

ಆಂಗ್ಲ ಕವಿ ಬೈರನ್ ಹೇಳಿದನಂತೆ- 'ನಗದು ಹಣವೇ ಅಲ್ಲಾವುದ್ದೀನನ ಅದ್ಭುತದೀಪ'.

ಅಲ್ಲಾವುದ್ದೀನನ ಅದ್ಭುತ ದೀಪವನ್ನು ಕೈಯಿಂದ ಉಜ್ಜಬೇಕಷ್ಟೇ; ಆಗ ಬಯಸಿದ್ದೆಲ್ಲ ಒಡನೆಯೇ ಕೈಗೂಡಿಬಿಡುತ್ತದೆ. ಯಾವ ದುಡಿಮೆಯೂ ಬೇಕಾಗಿಲ್ಲ; ಶ್ರಮದ ಅಗತ್ಯವಿಲ್ಲ; ಕೆಲಸ ಮಾಡಿ ಫಲಕ್ಕಾಗಿ ಕಾಯಬೇಕಾದುದಿಲ್ಲ.

ನಗದು ಹಣದ ಉಪಯೋಗ ಹೀಗೆಯೇ, ಅದರ ಮೇಲೆ ಕೈಯಾಡಿಸುವುದೊಂದೇ ಕೆಲಸ; ಬೇಡಿದುದನ್ನೆಲ್ಲ ಪಡೆದುಕೊಳ್ಳಬಹುದು. ಪಡೆದುಕೊಳ್ಳುವುದೂ ಒಡನೆಯೇ; ಕಾಯಬೇಕಾಗಿಲ್ಲ, ಮತ್ತೇನು ದುಡಿಮೆಯ ಅಗತ್ಯವೂ ಇರದು.

ಸಾಮ್ಯ ಇಷ್ಟಕ್ಕೇ ಮುಗಿಯುವುದಿಲ್ಲ. ಅಲ್ಲಾವುದ್ದೀನನ ಅದ್ಭುತದೀಪವೇನು ಯಾರೊಬ್ಬರ ಶಾಶ್ವತ ಸ್ವತ್ತೂ ಅಲ್ಲ. ಯಾರು ದಕ್ಕಿಸಿಕೊಂಡರೆ ಅವರದ್ದೇ; ಅವರು ಅದನ್ನು ಉಳಿಸಿಕೊಂಡಿರುವಷ್ಟು ಕಾಲ, ಬಳಸಿಕೊಳ್ಳುವಷ್ಟು ಕಾಲ.

ಹಣ ಯಾರೊಬ್ಬರ ಬಳಿಯೂ ಬಹುಕಾಲ ನಿಲ್ಲುವುದಿಲ್ಲ; ಅದ್ಭುತದೀಪವೂ ಅಷ್ಟೇ, ನಗದು ಹಣವೂ ಅಷ್ಟೆ. ಒಬ್ಬರ ಕೈಯಿಂದ ಇನ್ನೊಬ್ಬರ ಕಿಸೆಗೆ ಸಾಗುತ್ತಲೆ ಇರುತ್ತದೆ. ನಗದು ಹಣ ಅವರ ಕಿಸೆಯಿಂದ ಕೈಗೆ ಬರುತ್ತದೆ, ಮತ್ತೆ ಅವರ ಕೈಯಿಂದ ಮತ್ತೊಬ್ಬರ ಕಿಸೆಗೆ. ಹಣ ನಗದಾದರೂ ಹರಿಯುವ ಸ್ವಭಾವದ್ದೇ ಅದು.

ದೀಪಕ್ಕೇನೋ ಅದ್ಭುತ ಶಕ್ತಿಯೆ, ನಗದು ಹಣಕ್ಕಿರುವಂತೆ. ಆದರೆ ಅದರ ಒಡೆಯನಾದರೋ ತುಂಬ ಎಚ್ಚರದಿಂದಿರಬೇಕು. ಅದನ್ನು ಕಸಿದುಕೊಳ್ಳಲು ಹಲವರು ಸಿದ್ಧವಾಗಿರುತ್ತಾರೆ, ಹವಣಿಸುತ್ತಿರುತ್ತಾರೆ. ನಗದು ಹಣದ ಸುತ್ತ ನೆರೆಯವರು ಅದರ ಮೇಲೆ ಆಸೆಯಿಟ್ಟಿರುವವರೇ, ಅದಕ್ಕಾಗಿ ಕೈಚಾಚಿರುವವರೇ.

ಅದ್ಭುತದೀಪವಷ್ಟೆ ಇದ್ದರೆ ಲಾಭವೇನು? ಅದನ್ನುಜ್ಜಿ ತಮ್ಮ ಬಯಕೆಯನ್ನು ಅದರೆದುರು ತೋಡಿಕೊಂಡಾಗಲೇ ಅದರ ಪ್ರಯೋಜನ. ನಗದು ಹಣವೂ ಹೀಗೆಯೇ. ಸುಮ್ಮನೆ ಇರಿಸಿಕೊಂಡಿದ್ದರೆ ಅದರಿಂದೇನು ಆದೀತು? ಅದನ್ನು ಹೊರ ತೆಗೆದು ಅದರ ಮೇಲೆ ಕೈಯಾಡಿಸಿ ತನಗೆ ಬೇಕಾದುದನ್ನು ನಿರ್ಧರಿಸಿದಾಗಲೇ ಅದರ ಸ್ವಾರಸ್ಯ.

ಬಳಸದಿದ್ದಾಗ ಅದ್ಭುತದೀಪವೂ ಸಾಮಾನ್ಯ ದೀಪವೂ ಒಂದೇ; ಅವುಗಳ ನಡುವೆ ಅಂತರವಿದ್ದು ನಗದು ಹಣವನ್ನೂ ಬರಿದೆ ಕೂಡಿ ಹಾಕಿಕೊಂಡಿದ್ದರೆ ಅದು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಚೆಲುವಿಗಾಗಿ ಬಳಸದಿದ್ದರೆ ಗಾಜೇನು, ವಜ್ರವೇನು, ಮಾಣಿಕ್ಯವೇನು, ಮಣ್ಣಿನ ಹೆಂಟೆಯೇನು?

ಅದ್ಭುತದೀಪದ ಪ್ರಯೋಜನ ಒಳಿತಿಗೂ ಆಗಬಹುದು, ಕೆಡಕಿಗೂ ಆಗಬಹುದು. ಅದನ್ನು ಹಿಡಿದವರ ಮನಸ್ಸು ಹೇಗಿದ್ದರೆ ಹಾಗೆ. ಮಾಂತ್ರಿಕನದು ಕೆಟ್ಟ ಮನಸ್ಸು. ಅಲ್ಲಾವುದ್ದೀನನದು ಒಳ್ಳೆಯ ಮನಸ್ಸು. ದೀಪಕ್ಕಾದರೆ ತನ್ನದೇ ಮನಸ್ಸೆಂಬುದಿಲ್ಲ. ನಗದು ಹಣಕ್ಕೂ ಹಾಗೆಯೇ. ಅದನ್ನು ಯಾರಾದರೂ ಬಳಸಿಕೊಳ್ಳಬಹುದು. ಯಾವುದಕ್ಕಾದರೂ ಬಳಸಿಕೊಳ್ಳಬಹುದು. ಅದರಿಂದ ಒಳ್ಳೆಯದೂ ಆದೀತು. ಕೆಟ್ಟದ್ದೂ ಆದೀತು.

ದೀಪದ ಪ್ರಯೋಜನವೇನು? ಪ್ರಮುಖವಾಗಿ ಬೆಳಕು ಕೊಡುವುದಲ್ಲದೆ ಬಯಕೆಗಳನ್ನು ಬೆಳಗಿಸುವುದು. ದೀಪ ಬೆಳಗುವುದರಿಂದಲೇ ಬಯಕೆಗಳು ಈಡೇರುವಂತಾದರೆ ಅದು ಅದ್ಭುತದೀಪ. ಹಣದ ಪ್ರಯೋಜನ ನಮ್ಮ ಅಗತ್ಯಗಳನ್ನು ಪೂರೈಸುವುದು; ಒಡನೆಯೇ ಪೂರೈಸುವಂತಾದರೆ ಅದು ನಗದು ಹಣ.

65. ಗುರಿಗೊಂದು ಅಂಬು

ಒಂದು ಗುರಿಗೆ ಎರಡಂಬು ತೊಡಬಾರದಂತೆ. ಇದು ಕುಮಾರವ್ಯಾಸನ ಸೂಚನೆ. ಒಂದು ಗುರಿಗೆ ಸರಿಯಾಗಿ ಒಂದೇ ಬಾಣ ಹೂಡಬೇಕು; ಎರಡು ಬಾಣಗಳನ್ನು ಒಂದೇ ಗುರಿಯತ್ತ ಕಳುಹಿಸಿದರೆ ಹೇಗೆ? ಯಾವೊಂದೂ ಗುರಿಯನ್ನು ತಾಕದಿರಬಹುದು.

ಕೆಲಸ ಮಾಡುವಾಗ ನೇಮಕಗೊಂಡವರು ಕೆಲಸ ಮಾಡುವುದರ ಮೇಲಷ್ಟೆ ಗಮನ ಹರಿಸಿದರೆ ಉತ್ತಮ. ಜೊತೆ ಜೊತೆಗೇ ಹಣವನ್ನು ಮಾಡಿಕೊಳ್ಳಬಯಸಿದರೆ ಕೆಲಸವೂ ಸರಿಯಾಗುವುದಿಲ್ಲ; ಹಣವೂ ಕೈ ಸೇರುವುದಿಲ್ಲ.

ಹಣವನ್ನು ಗಳಿಸಲೆಂದೇ ಹೊರಟವರು ಅದನ್ನಷ್ಟೆ ಮಾಡಬೇಕು; ಜೊತೆ ಜೊತೆಗೆ ರಾಜಕಾರಣ, ಸಮಾಜ ಸೇವೆ, ಧರ್ಮ ಮೊದಲಾದುವನ್ನೂ ಸೇರಿಸಿಕೊಂಡರೆ ಸಮನಾಗದು. ತ್ರಿಕರಣಪೂರ್ವಕವಾಗಿ ಹಣವನ್ನು ಗಳಿಸಬೇಕು.

ಆದರೆ ಹಣ ಯಾತರೊಂದಿಗೆ ಬೆರೆತರೂ ತಾನೂ ಕೆಡುತ್ತದೆ, ತನ್ನೊಂದಿಗೆ ಸೇರಿದುದನ್ನೂ ಕೆಡಿಸುತ್ತದೆ. ಹಣವೂ ರಾಜಕಾರಣವೂ ಬೆರೆತಾಗಲೇ ಭ್ರಷ್ಟಾಚಾರ.

ಭ್ರಷ್ಟಾಚಾರದಲ್ಲಿ ಪಡೆದುಕೊಂಡ ಹಣವು ಕೈಹತ್ತುವುದಿಲ್ಲ; ಮಾಡಿದ ಕೆಲಸವೂ ಊರ್ಜಿತವಾಗುವುದಿಲ್ಲ.

ಈಗೀಗ ಹಣ ಮಾಡಿಕೊಳ್ಳಲೆಂದೇ ರಾಜಕಾರಣಕ್ಕಿಳಿಯುವ ಮಂದಿ ಹೆಚ್ಚುತ್ತಿದ್ದಾರೆ. ಉದ್ದೇಶವೇ ಸ್ವಾರ್ಥವಾದ ಮೇಲೆ ಅವರಿಂದ ಜನರಿಗೆ ಅನುಕೂಲವಾಗುವ ಸಂಭವವಿರುವುದಾದರೂ ಹೇಗೆ? ಅವರ ಸುತ್ತ ನೆರೆಯವರೂ, ಅವರಿಗೆ ನೆರವಾಗುವವರೂ ಸ್ವಾರ್ಥಿಗಳೇ ಇರುತ್ತಾರೆ; ಹಣದಾಸೆಯೇ ಅವರ ಒಲುಮೆಯ ಗುಟ್ಟು.

ರಾಜಕಾರಣವೊಂದು ಸಾಧನ, ಸೋಗು, ಅಷ್ಟೆ. ಜನರ ಹಿತವನ್ನು ಸಾಧಿಸುವ ಮಾತನ್ನಾಡುವುದು ಒಂದು ಅಂಬು. ತಮ್ಮ ಕಿಸೆಯನ್ನು ತುಂಬಿಸಿಕೊಳ್ಳುವ ಹವಣಿಕೆ ಇನ್ನೊಂದು ಅಂಬು. ಗುರಿ ತಾಕುವುದು ಒಂದು ಅಂಬೇ ತಾನೆ? ಕಿಸೆಯನ್ನು ತುಂಬಿಸಿಕೊಳ್ಳುವುದೇ ಕೈಗೂಡುವುದು. ಹಿತದ ಮಾತು ಗಾಳಿಗೆ ತೂರಿಕೊಂಡು ಹೋಗುತ್ತದೆ.

ಧರ್ಮವೂ ಹೀಗೆಯೇ – ಮಠಗಳವರು ಧರ್ಮವನ್ನು ಉಳಿಸುತ್ತೇವೆ ಎಂದು ಡಂಗುರ ಸಾರಿ ಹೊರಟು ಮಾಡುವುದಾದರೂ ಏನನ್ನು? ಮಠಮಾನ್ಯವನ್ನು ಬೆಳೆಸಿಕೊಳ್ಳುವುದು. ಇಷ್ಟಾಗಿ ಮಠ ಮಾನ್ಯವೆಂದರೂ ಸಂಸ್ಥೆಗೇನೂ ಲಾಭವಿಲ್ಲ. ವ್ಯಕ್ತಿಗೇ ಲಾಭ. ಮಠಾಧಿಪತಿಯೋ, ಮಠದ ಕಾರುಬಾರಿಯೋ ತಿಂದು ತೇಗುತ್ತಾನೆ; ಇತರರನ್ನು ತಿರಿಯುವಂತೆ ಮಾಡುತ್ತಾನೆ. ಕಡೆಗೆ ತಾನೂ ತಿರಿಯಬೇಕಾಗುವುದು ಅವನಿಗೆ ತಿಳಿಯದು!

ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ಯಾರಿಗೆ ತಿಳಿಯದು? ರಾಜಕಾರಣದಲ್ಲಿನ ಭ್ರಷ್ಟಾಚಾರವಾಗಲಿ ಯಾರಿಗೆ ತಿಳಿಯದು? ರಾಜಕಾರಣವೂ ಧರ್ಮವೂ ಹಲವೊಮ್ಮೆ ಬೆರೆತುಕೊಳ್ಳುವುದುಂಟು; ಇದು ತಾನೆ ಯಾರಿಗೆ ತಿಳಿಯದು? ಹಾಗಾದಾಗ ರಾಜಕಾರಣವೂ ಕೆಡುತ್ತದೆ; ಧರ್ಮವೂ ಕೆಡುತ್ತದೆ. ಒಂದು ಗುರಿಗೆ ಎರಡಂಬಾದರೆ ಒಂದು ಇನ್ನೊಂದನ್ನು ಕೆಡಿಸದೆ ಬಿಡುವುದೆ?

ಚೆನ್ನಾಗಿ ಬಾಳಬೇಕೆಂಬಾಸೆ ಯಾರಿಗಿರದು? ಅದು ಎಲ್ಲರ ಗುರಿಯೆ. ಅದಕ್ಕೆ ಸರಿಯಾದ ಸಾಧನವನ್ನು ಕಂಡುಕೊಳ್ಳುವುದು ಅಂಬು.

66. ಸಂಪನ್ಮೂಲ

ಮನುಷ್ಯನ ಉಳಿವಿಗೆ, ಬೆಳವಣಿಗೆಗೆ ಬೇಕಾದುದು ಸಂಪನ್ಮೂಲ. ಇದನ್ನು ಮೂಲವಾಗಿರಿಸಿಕೊಂಡೇ ನಾಡಿನ ಆರ್ಥಿಕ ಸ್ಥಿತಿ ನೆಲೆಗೊಳ್ಳುವುದು, ಉತ್ತಮಗೊಳ್ಳುವುದು.

ಕೆಲವು ಸಂಪನ್ಮೂಲಗಳನ್ನು ಮನುಷ್ಯನೇ ಮಾಡಿಕೊಂಡಿದ್ದಾನೆ. ಕೈಗಾರಿಕೆ, ಕೃಷಿ, ಯಂತ್ರ, ವಾಹನ, ಕಾರ್ಖಾನೆ, ಸಂಚಾರ ಮಾಧ್ಯಮ, ಸಂಪರ್ಕ ಮಾಧ್ಯಮ, ಬಗೆಬಗೆಯ ಉದ್ಯಮಗಳು ಇತ್ಯಾದಿ. ಆದರೆ ಇವೆಲ್ಲ ದಿಟವಾದ ಅರ್ಥದಲ್ಲಿ ಸಂಪನ್ಮೂಲಗಳಲ್ಲ. ಅದಕ್ಕೂ ಮೂಲದಲ್ಲಿ ಪ್ರಕೃತಿಯೇ ಕೊಡುವಂಥ ಕಾಡು, ನೆಲ, ನೀರು, ಗಾಳಿ, ಎಣ್ಣೆ, ಖನಿಜ ಮೊದಲಾದವು ಇರುತ್ತವೆ. ಇವು ಇಲ್ಲವಾದಾಗ ಮನುಷ್ಯನು ಮಾಡಿಕೊಳ್ಳುವ ಸಂಪನ್ಮೂಲ ಯಾವುದಿರುತ್ತದೆ? ಅಥವಾ ಇವನ್ನು ಕೆಡಿಸಿದಾಗ ಮನುಷ್ಯನು ಮಾಡಿಕೊಂಡ ಸಂಪನ್ಮೂಲಗಳೂ ಕೆಡುತ್ತವೆಯಲ್ಲವೆ?

ಹೆಚ್ಚು ಹೆಚ್ಚು ಹಣ ಮಾಡಿಕೊಳ್ಳುವ ಹವಣಿಕೆಯಿಂದ ಸಂಪನ್ಮೂಲಗಳನ್ನು ಎಚ್ಚರವಿಲ್ಲದೆ, ಸಂಯಮವಿಲ್ಲದೆ ಬರಿದು ಮಾಡುತ್ತಿರುವುದು ಈಗೀಗ ಕಂಡು ಬರುತ್ತಿದೆ. ಮನುಷ್ಯನ ದುರಾಸೆಗೆ ಮಿತಿಯಿದೆಯೆ? ದುರಾಸೆಗೆ ಅಂಕೆ ಇರಬೇಕಾದುದು ತಿಳಿವಳಿಕೆಯಿಂದ. ವಿಜ್ಞಾನ ಮುಂದುವರೆದು ತಿಳಿವಳಿಕೆಯ ಹರವೂ ಎತ್ತರವೂ ಹೆಚ್ಚುತ್ತಿದೆ, ದಿಟ. ಆದರೆ ವಿವೇಕವಿಲ್ಲದ ತಿಳಿವಳಿಕೆಗೆ ಬೆಲೆಯಿಲ್ಲವಷ್ಟೆ? ಬೆಲೆಯ ಮಾತು ಹೋಗಲಿ, ಅಪಾಯಕಾರಿಯೂ ಆಗಬಹುದು.

ಮನುಷ್ಯನ ಬೆಳವಣಿಗೆ ನಾಗಾಲೋಟದಿಂದ ಮುನ್ನುಗ್ಗುತ್ತಿರುವಾಗ ಅವನಿಗೆ ಆತಂಕಕಾರಿಯಾಗುವುದು ಎರಡು ವಿವರಗಳು. ಒಂದು ಸಂಪನ್ಮೂಲಗಳ ಹಾಳು; ಇನ್ನೊಂದು ಜನಸಂಖ್ಯೆಯ ಏರು. ಎರಡರ ಕಡೆಯೂ ಗಮನಹರಿಸಬೇಕಾದ ಅಗತ್ಯ ಎಂದಿಗಿಂತ ಇಂದು ಹೆಚ್ಚು. ಇವೆರಡರಲ್ಲಿ ನಮಗೆ ಪ್ರಸ್ತುತವಾಗಿರುವುದು ಮೊದಲನೆಯದು; ಆದರೆ ಎರಡರ ನಂಟೂ ಇದ್ದೇ ಇದೆ. ಕಾಡು ಕಡಿದರೆ ಸಂಪನ್ಮೂಲದ ನಾಶ; ಜನಸಂಖ್ಯೆ ಹೆಚ್ಚಿ ಊರಾಗಬೇಕಾದರೆ ಕಾಡನ್ನು ಕಡಿಯದೆ ಇರುವುದು ಹೇಗೆ? ಇದು ದಿಟವೇ; ಆದರೆ ಎಲ್ಲ ಸಂಪನ್ಮೂಲದ ನಾಶಕ್ಕೂ ಜನಸಂಖ್ಯೆಯೇ ಕಾರಣವೆನ್ನುವಂತಿಲ್ಲ.

ಕಾಡನ್ನು ಕಡಿಯುವುದು ಊರಾಗಲು ಮಾತ್ರವಲ್ಲ. ಹಣದಾಸೆಗೆ ಮರಗಳನ್ನು ಕಡಿಯುವ, ದೇಶವಿದೇಶಗಳಿಗೆ ಸಾಗಿಸುವ ಉದ್ಯಮ ಊರ್ಜಿತವಾಗಿಲ್ಲವೆ? ಭೂಮಿಯಿಂದ ಖನಿಜವನ್ನು ಚೂರೂ ಉಳಿಯದಂತೆ ಹೊರ ತೆಗೆದು ಕಾರ್ಖಾನೆಗಳಿಗೆ ಬಳಸುತ್ತಿರುವುದು ಹಣದಾಸೆಯಿಂದಲ್ಲವೆ? ಎಣ್ಣೆ ಬಾವಿಗಳನ್ನು ಬರಿದು ಮಾಡಿ ಉದ್ಯಮಗಳನ್ನು ಏರ್ಪಡಿಸುತ್ತಿದ್ದೇವೆ; ವಾಹನಗಳಿಗೆ ಪೆಟ್ರೋಲ್ ಎಣ್ಣೆ ಬೇಕು.

ವಾಹನಗಳ ಸಂಖ್ಯೆ, ಅವುಗಳಲ್ಲಿ ಭೋಗಪರಿಕರಗಳು, ವಾಹನದ ಬಗೆಗಳು, ವಿತರಣೆಯ ವೈವಿಧ್ಯ ಇವೆಲ್ಲ ಮೂಲಭೂತವಾಗಿ ತಿಳಿವಳಿಕೆಯಿದ್ದು ವಿವೇಕವಿಲ್ಲದಿರುವ ನಿದರ್ಶನಗಳು.

ಉತ್ಪಾದನೆಯ ಕೂಗು ಎದ್ದಿರುವುದು ಅಭಿವೃದ್ಧಿಯ ನೆಪದಲ್ಲಿ; ಮುಖ್ಯವಾಗಿ ಮನುಷ್ಯನ ದುರಾಸೆಯೇ ಅದರ ಆಸರೆ. ಉತ್ಪಾದನೆಯನ್ನು ಮನುಷ್ಯನು ತಾನೇ ಏರ್ಪಡಿಸಿಕೊಂಡು ಸಂಪನ್ಮೂಲಗಳ ಮೂಲಕವಾಗಿ ಮಾಡುವುದಾಗಿ ಉದ್ಯಮಿಗಳ ಸಮಾಧಾನ. ಆದರೆ ಈ ಕೃತಕ ಸಂಪನ್ಮೂಲಗಳು ನೆರವಾಗುವುದು ಪ್ರಾಕೃತಿಕ ಸಂಪನ್ಮೂಲದ ಬಲದ ಮೇಲೇ. ಮನುಷ್ಯನ ಬದುಕು ಚೆನ್ನಾಗುತ್ತಿದೆಯೆಂದರೆ ಪ್ರಕೃತಿಯ ಸಂಪತ್ತು ಹಾಳಾಗುತ್ತಿದೆಯೆಂದೇ ಅರ್ಥ.

ಸಂಪನ್ಮೂಲಗಳ ಬಳಕೆಯಿಲ್ಲದೆ ಬದುಕುವುದೇ ಸಾಧ್ಯವಿಲ್ಲ ಎಂಬ ಮಾತು ನಿಜ; ಸಂಪನ್ಮೂಲಗಳು ನಮ್ಮ ಬದುಕಿಗೇ ಇವೆಯೆಂಬುದು ಮಾತ್ರ ಸುಳ್ಳು. ಮನುಷ್ಯನು ತಾನು ನೆಮ್ಮದಿಯಿಂದ ಬದುಕಲು ಎಷ್ಟು ಅಗತ್ಯವೋ ಅಷ್ಟು ಮಾತ್ರವೇ ಸಂಪನ್ಮೂಲವನ್ನು ಬಳಸಿಕೊಳ್ಳುವುದು ವಿವೇಕ. ಹಳೆಯ ಕಾಲದಲ್ಲಿ ಸಂಪನ್ಮೂಲಗಳನ್ನು ದೋಚಿಕೊಳ್ಳುವ, ನಿಸರ್ಗದ ಮೇಲೆ ದಾಳಿ ಮಾಡುವ ಪ್ರವೃತ್ತಿಯಿರಲಿಲ್ಲ. ಅದು ಹೊಸ ಯುಗದ ರೋಗ.

ನೆಮ್ಮದಿಯಿಂದ ಬದುಕಬೇಕೆನ್ನುವ ಬಯಕೆಯೇನು ತಪ್ಪಲ್ಲ; ಎಲ್ಲ ಪ್ರಾಣಿಗಳದ್ದೂ ಇದೇ ಪ್ರವೃತ್ತಿ. ಆದರೆ ಬೇರೆಯೆಲ್ಲವನ್ನೂ ಶೋಷಣೆ ಮಾಡಿ ತಾನು ಬದುಕಬೇಕೆನ್ನುವ ಹಂಬಲ ಹೆಚ್ಚಿಕೊಂಡರೆ ತೂಕ ತಪ್ಪುತ್ತದೆ; ಆಯ ತಪ್ಪುತ್ತದೆ. ಉದ್ಧಾರವಾಗುವುದಕ್ಕಿಂತ ಹಾಳಾಗುವ ಸಂಭವವೇ ಮಿಗಿಲಾದುದು.

67. ಪ್ರಗತಿ

ಪ್ರಗತಿಯೆಂದರೆ ಮುಂದುವರಿಯುವುದು; ಇದ್ದಲ್ಲೇ ಇರುವುದೂ ಅಲ್ಲ, ಹಿಂದಕ್ಕೆ ಸರಿಯುವುದೂ ಅಲ್ಲ; ಹಿಂದುಳಿಯುವುದಂತೂ ಅಲ್ಲವೆ ಅಲ್ಲ!

ಮನುಷ್ಯನಿಗೆ ಮುಂದರಿಯುವುದೆಂದರೇನೆಂಬ ತಿಳಿವಳಿಕೆ ಬಹು ಜನರಿಗಿರದು. ಹೆಚ್ಚು ಹೆಚ್ಚಾಗಿ ಹಣವನ್ನು ಪಡೆದುಕೊಂಡು ಭೋಗ ಸಾಧನೆಗಳನ್ನೆಲ್ಲ ಸಂಪಾದಿಸಿಕೊಳ್ಳುವುದೇ ಪ್ರಗತಿಯೆ? ಬಹುಜನರ ಮೇಲೆ ಒಂದಿಲ್ಲೊಂದು ಬಗೆಯ ಒಡೆತನವನ್ನು ಪಡೆದುಕೊಳ್ಳುವುದೇ ಪ್ರಗತಿಯೆ? ಅನೇಕ ರೀತಿಯ ಶಕ್ತಿಗಳನ್ನು ಗಳಿಸಿಕೊಂಡು ಯಾಂತ್ರಿಕ ಜೀವನವನ್ನು ನಡೆಸುತ್ತ ಇರುವುದೇ ಮುಂದು ವರಿಯುವುದೇ?

ಮನುಷ್ಯ ಮುಂದುವರಿಯುವಂತೆಯೇ ದೇಶವೂ ಮುಂದುವರಿಯುತ್ತದೆ. ಆಗ ಪ್ರಗತಿಯ ಅರ್ಥವೇನು? ದೇಶ ಮಾತ್ರ ಮುಂದುವರಿದರೆ ಸಾಕೆ? ಮಾನವಕುಲವೇ ಪ್ರಗತಿ ಪಥವನ್ನು ಹಿಡಿಯಬೇಕಲ್ಲವೆ?

ಹೀಗಾದಾಗ ಮನುಷ್ಯನ ಪ್ರಗತಿಗೂ ದೇಶದ ಪ್ರಗತಿಗೂ, ದೇಶಗಳ ಪ್ರಗತಿಗೂ ಮಾನವ ಸಮುದಾಯದ ಪ್ರಗತಿಗೂ ನಡುವೆ ವಿರೋಧಗಳು ಏರ್ಪಡದೆ ಇರುವುದು ಸಾಧ್ಯವೇ? ವಿರೋಧವಿದ್ದಾಗ ಯಾವುದರ ಪ್ರಗತಿ ಮುಖ್ಯವಾದೀತು? ಯಾವುದು ಗೌಣವೆನಿಸಿಕೊಂಡೀತು?

ಒಬ್ಬ ಮನುಷ್ಯ ಮುಂದರಿಯುವಾಗ, ಬೇಕಾಗಿಯೋ ತಾನಾಗಿಯೋ, ಪಕ್ಕದವರನ್ನು ಹಿಂದಕ್ಕೆ ತಳ್ಳಿ ಸುತ್ತ ಇರುವ ಎಲ್ಲವನ್ನೂ ತನ್ನ ಸಲುವಾಗಿಯೆ ಬಳಸಿಕೊಂಡು, ಕಣ್ಣು ಮುಚ್ಚಿ (ಎಂದರೆ ಅನ್ಯಾಯವನ್ನಾಗಲಿ ಅಪಾಯವನ್ನಾಗಲಿ ಕಾಣಲಿಚ್ಛಿಸದೇ) ಮುನ್ನುಗ್ಗುವುದು ನಡೆಯುತ್ತದೆ. ಇದನ್ನು ಯಾರರಿಯರು?

ಹಣವಿದ್ದರೆ ಮುಂದುವರಿಯುವುದು ಸುಲಭ ಎಂದುಕೊಂಡು ಹಣವನ್ನು ಗಳಿಸಿಕೊಳ್ಳುವುದೆ ಮೊದಲ ಹೆಜ್ಜೆಯಾಗುತ್ತದೆ. ಹಣವನ್ನು ಯಾರೂ ಸೃಷ್ಟಿ ಮಾಡಲಾರರು. ಇರುವ ಹಣವನ್ನೆ ತಾನು ಪಡೆದುಕೊಳ್ಳಬೇಕೆಂದರೆ ಬೇರೆಯವರಲ್ಲಿದ್ದುದನ್ನೆ ತನ್ನಲ್ಲಿಗೆ ಬರಮಾಡಿಕೊಳ್ಳಬೇಕು. ಬೇರೆ ಕೆಲವರು ಬಡವರಾಗದೆ ತಾನು ಸಿರಿವಂತನಾಗುವುದು ಹೇಗೆ? ಇತರರು ಹಿಂದುಳಿಯದೆ ತಾನು ಮುಂದುವರಿಯುವುದು ಹೇಗೆ?

ಆಗ ನ್ಯಾಯವನ್ನು ಗಮನಿಸಬಾರದು, ನೀತಿಯೆಂಬ ಮಡಿವಂತಿಕೆ ಯಿರಬಾರದು, ದೇಶಭಕ್ತಿಯ ಉಪದ್ರವವಿರಬಾರದು. ತಾನುಂಟೋ ಮೂರು ಲೋಕವುಂಟೋ? ಹಣವನ್ನು ಹೇಗೋ ಗಳಿಸಿಕೊಂಡು ಭೋಗಜೀವನದ ಎಲ್ಲ ಪರಿಕರಗಳನ್ನೂ ತನ್ನ ಕೈಗೆ ತಂದುಕೊಳ್ಳುವುದು ಮುಂದಿನ ಹೆಜ್ಜೆ. ಈ ಪರಿಕರಗಳು ಹೇಗೆ ಬರುತ್ತವೆ? ಪರಿಕರದಲ್ಲಿರುವ ಸಂಪನ್ಮೂಲಗಳನ್ನು ಶೋಷಣೆ ಮಾಡದೆ ಇವು ಬರಲಾರವು.

ಪರಿಕರಗಳೂ ಬಂದುವೆನ್ನಿ. ಹಣವಿದ್ದರೆ ಪರಿಕರಗಳೇನೋ ಸಿದ್ಧ; ಆದರೆ ಪರಿಕರಗಳಿದ್ದರೆ ಸುಖವೂ ಸಿದ್ಧವೆನ್ನಲಾದೀತೋ? ಪರಿಕರಗಳ ಉತ್ಪಾದನೆಯಲ್ಲಿ ಪರಿಸರವು ಕೆಟ್ಟಾಗ, ಸಂಪನ್ಮೂಲಗಳು ಬರಿದಾದಾಗ ಸುಖವೆಂಬುದು ಉಳಿದೀತೋ? ಅದನ್ನು ಬಿಡಿ, ವ್ಯಕ್ತಿಯೊಬ್ಬ ತನ್ನ ಸುಖಕ್ಕೆಂದು ನೆಲವನ್ನು ಬರಿದು ಮಾಡಿ, ನೀರನ್ನು ಕೆಡಿಸಿ, ಗಾಳಿಯಲ್ಲಿ ವಿಷವನ್ನು ತುಂಬಿದಾಗ ಸುತ್ತಮುತ್ತಲಿನ ಜನಕ್ಕೆ ಯಾವ ನೆಮ್ಮದಿ? ದೇಶಕ್ಕೆ ತಾನೆ ಹಿತವೆ?

ನಮ್ಮ ಕೈಗಾರಿಕೆಗಳು, ಉದ್ಯಮಗಳು, ಅಣೆಕಟ್ಟುಗಳು, ವಾಹನ ಸೌಕರ್ಯಗಳು, ಆಧುನೀಕರಣ ಪ್ರವೃತ್ತಿಗಳು ಎಲ್ಲವೂ ಪರಿಸರವನ್ನು ಹಾಳು ಮಾಡುವುದರಲ್ಲೆ

ತೊಡಗಿವೆ. ಇನ್ನು ದೇಶದ ಪ್ರಗತಿ ಹೇಗೆ ತಾನೆ ಸಾರ್ಥಕವಾದೀತು? ವ್ಯಕ್ತಿಗಳ ದುರಾಸೆಯಿಂದ ಇಡೀ ದೇಶವನ್ನೇ ಬಲಿಗೊಡುತ್ತಿರುವುದನ್ನು ಕಾಣುತ್ತೇವೆ.

ತನ್ನ ದೇಶದ ಮೇಲೆ ಅಭಿಮಾನವಿಲ್ಲದವನಿಗೆ, ಮಾನವ ಸಂಕುಲದ ಒಳಿತಿನ ಮೇಲೆ ಒಲವಾದರೂ ಹೇಗಿದ್ದೀತು? ಪರಿಸರದೊಂದಿಗೆ ಹೊಂದಿಕೊಂಡು, ಸುತ್ತಲ ಎಲ್ಲರ ನೆಮ್ಮದಿಯನ್ನೂ ಗಮನಿಸಿ, ಅರ್ಥವತ್ತಾದ ಬದುಕನ್ನು ಸಾಗಿಸುವುದೇ ಪ್ರಗತಿಯೆಂಬುದಾಗಲಿ ಅವನಿಗೆ ಹೇಗೆ ತಿಳಿದೀತು?

68. ಹಣದ ಸಂಸ್ಕೃತಿ

ಹಣ ಸಂಪಾದಿಸುವುದಕ್ಕೂ ಸಂಸ್ಕೃತಿಗೂ ಏನಾದರೂ ಸಂಬಂಧವಿದೆಯೇ?

ಬದುಕಿನ ಕೆಲವು ಮೌಲ್ಯಗಳನ್ನು ಎತ್ತಿಹಿಡಿಯುವುದು ಸಂಸ್ಕೃತಿಯ ಪ್ರಯೋಜನ ಎಂದರೆ, ಹಣ ಸಂಪಾದನೆ ಬದುಕಿನ ಅಗತ್ಯಗಳಲ್ಲೊಂದು ಎಂದರೆ– ಅವೆರಡಕ್ಕೂ ಸಂಬಂಧವಿದ್ದೇ ಇರಬೇಕು.

ಸಂಸ್ಕೃತಿಯು ಹಣಸಂಪಾದನೆಯನ್ನು ಮಾಡುವ ಬಗೆಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತಿಳಿಸುವುದೆಂದು ನಮ್ಮ ಎಣಿಕೆ.

ಹಣದ ಅಗತ್ಯ ಯಾವುದೇ ಕಾಲದಲ್ಲೂ ಇದ್ದಿತು; ಎಲ್ಲ ಜನರಲ್ಲಿಯೂ ಇರುವುದೇ. ಹಣವಿಲ್ಲದೆ ಬದುಕಿನ ಅಗತ್ಯಗಳನ್ನು ತೀರಿಸುವುದಾದೀತೇ? ಆದರೆ ಹಣವೇ ಮುಖ್ಯವೆಂದು ಯಾವುದೇ ಸಂಸ್ಕೃತಿಯೂ ಹೇಳಲಾರದು. ಬದುಕಿನ ಇತರ ಅಗತ್ಯಗಳನ್ನು ತೀರಿಸಿಕೊಳ್ಳಲು ಹಣವೊಂದು ಸಾಧನವಷ್ಟೆ.

ಹಣವನ್ನು ಸಂಪಾದಿಸುವಾಗ ಸಮಾಜದ ಗೊತ್ತುಗುರಿಗಳಿಗೆ ಅಡಚಣೆಯುಂಟಾಗಬಾರದು; ಇತರರಿಗೆ ತೊಂದರೆಯಾಗಬಾರದು. ಹಣವನ್ನು ಬಳಸಿಕೊಳ್ಳುವಾಗಲೂ ಎಚ್ಚರವಿರಬೇಕು. ತನಗಾಗಲಿ ನೆರೆಯವರಿಗಾಗಲಿ ಅದರಿಂದ ಒಳಿತಾಗಬೇಕೇ ವಿನಾ ಕೆಡುಕಾಗಬಾರದು.

ಯಾವುದೇ ಸಂಸ್ಕೃತಿಯಾಗಲಿ ಇದನ್ನು ತಿಳಿಯಪಡಿಸುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಹಣ ಸಂಪಾದನೆಯು ನ್ಯಾಯವಾದ ದಾರಿಯಿಂದಲೇ ಆಗಬೇಕೆಂದೂ ಅದರ ಸದ್ವಿನಿಯೋಗ ಆಗಬೇಕೆಂದೂ ಮತ್ತೆ ಮತ್ತೆ ಹೇಳುವುದಿದೆ. ಸಂಪಾದಿಸಿದ ಹಣವು ತನ್ನ ಭೋಗಲಾಲಸೆಯನ್ನು ಪೂರೈಸುವಷ್ಟರಲ್ಲೇ ಮುಗಿಯಬಾರದೆಂದೂ, ಇತರರ ಅನುಕೂಲಕ್ಕಾಗಿಯೂ ಅದರ ಒಂದು ಪಾಲು ಮೀಸಲಾಗಿರಬೇಕೆಂದೂ ಕಿವಿಮಾತು ಬರುತ್ತದೆ.

ಸ್ವಂತಸುಖ, ಲೋಕಹಿತ ಎರಡೂ ಸಮಾನವಾಗಿಯೇ ಬದುಕಿನ ಮೌಲ್ಯಗಳು. ಒಂದಕ್ಕೆ ಇನ್ನೊಂದು ವಿರೋಧವಾಗಬಾರದು. ಅನ್ಯಾಯದಿಂದ ಪಡೆದುಕೊಂಡ ಹಣ ಸ್ವಂತಸುಖಕ್ಕೂ ಬರುವುದಿಲ್ಲ; ಲೋಕಹಿತವೂ ಅದರಿಂದ ಕೈಗೂಡುವುದಿಲ್ಲ. ಆದ್ದರಿಂದ ಹಣ ಸಂಪಾದನೆಯಲ್ಲಿ ನ್ಯಾಯಾನ್ಯಾಯ, ಯುಕ್ತಾಯುಕ್ತ ಎಂಬ ವಿವೇಚನೆಯಿರಬೇಕು. ವಿಚಾರಮಾಡಿ ಹಣವನ್ನು ಸಂಪಾದಿಸಬೇಕು, ವಿನಿಯೋಗಿಸಬೇಕು.

ಇದು ಸಂಸ್ಕೃತಿಯ ದೃಷ್ಟಿ; ಅದು ಸಮಾಜದಲ್ಲಿ ಎಲ್ಲರ ಒಳಿತನ್ನು ಕುರಿತದ್ದು. ಆದರೆ ಹಣದ್ದೇ ಒಂದು ಸಂಸ್ಕೃತಿ ಮೈದಳೆಯುವುದುಂಟು. ಹಣಕ್ಕೇನು ನ್ಯಾಯಾನ್ಯಾಯಗಳ ಮೈಲಿಗೆ ಸೋಂಕುವುದೇ? ಕಪ್ಪು, ಬಿಳಿಯೆಂಬ ಬಣ್ಣ ತನಗೆ ತಾನೇ ಅಂಟಿಕೊಳ್ಳುವುದೇ? ಅವಕಾಶವಿರುವಾಗ ಸಂಪಾದಿಸಬೇಕು; ಆಮೇಲೆ ಅನ್ಯಾಯದ ವಾಸನೆಯನ್ನು ಹೋಗಲಾಡಿಸಲು ಏನಾದರೂ ಮಾಡಿದರಾಯಿತು. ನ್ಯಾಯವನ್ನೇ ನಂಬಿದರೆ ಸಂಪಾದನೆಯಾಗುವುದೇ ಕಷ್ಟ! ಸಂಪಾದಿಸುವಾಗ ನ್ಯಾಯ, ಅನ್ಯಾಯ, ಯುಕ್ತ, ಅಯುಕ್ತ ಎಂದು ವಿಚಾರಮಾಡುವ ಮಡಿವಂತಿಕೆಗೆ ಫಲ ಬಡತನವೇ.

ಹೀಗಿರುವುದರಿಂದಲೇ 'ಕುರುಡು ಕಾಂಚಾಣ'ವೆನ್ನುವುದು. ಮತ್ತೆ ತಾನು ಕಷ್ಟಪಟ್ಟೋ (ಕಷ್ಟಪಡದೆಯೋ) ಸಂಪಾದಿಸಿಕೊಂಡ ಹಣವನ್ನು ತಾನು ತನ್ನ ಭೋಗಕ್ಕಾಗಿ ವೆಚ್ಚ ಮಾಡದೆ ಲೋಕೋಪಕಾರಕ್ಕೆಂದು ಹೊರಟರೆ ಅದು ಹೇಗೆ ಸರಿಯಾದೀತು? ಅವರವರ ಶ್ರಮದಿಂದ ಅವರವರಿಗೆ ಫಲ. ಒಬ್ಬ ದುಡಿದದ್ದು ಹತ್ತು ಜನರ ಉಪಯೋಗವನ್ನೇಕೆ ಸಾಧಿಸಬೇಕು?

ಹೀಗೆ ಆರ್ಜನದಲ್ಲೇ ಅನೀತಿ, ವ್ಯಯದಲ್ಲೂ ಸಂಕುಚಿತ ಮನೋವೃತ್ತಿ, ರಕ್ಷಣದಲ್ಲಿ ಲೋಭಬುದ್ಧಿ ಇವು ಹಣದ್ದೇ ಸಂಸ್ಕೃತಿಯ ಮೂಲಸೂತ್ರಗಳು.

69. ಉದ್ಯಮ-ಉಪದ್ರವ

'ಉದ್ಯಮಿಗಳಾಗಿ, ಇಲ್ಲವೆ ನಾಶವಾಗುತ್ತೀರಿ', 'ಉತ್ಪಾದನೆ, ಇಲ್ಲವೆ ವಿನಾಶ' ('ಪ್ರೊಡ್ಯೂಸ್ ಆರ್ ಪೆರಿಶ್') ಎಂದು ದೊಡ್ಡವರೊಬ್ಬರು ಕರೆ ಕೊಟ್ಟರು; ಬಹಳ ಹಿಂದಲ್ಲ.

ದೇಶ ಉದ್ಧಾರವಾಗಬೇಕೆಂಬ ಕನಸು ಕಂಡವರು ಅವರು; ಉದ್ಯಮದಿಂದಲೆ ಉದ್ಧಾರ ಎಂದು ದೃಢವಾಗಿ ನಂಬಿದ್ದವರು ಅವರು. ಅವರ ಇಡೀ ಬದುಕು ಈ ನಾಡಿನ ಔದ್ಯಮೀಕರಣದಲ್ಲೆ ಸವೆಯಿತು.

ಈ ಕರೆ ಕೊಟ್ಟವರು ಸರ್ ಎಂ. ವಿಶ್ವೇಶ್ವರಯ್ಯನವರು. ಅವರ ಉತ್ಕಟ ದೇಶಾಭಿಮಾನ, ಪ್ರಾಮಾಣಿಕತೆ, ನಿಸ್ವಾರ್ಥ ಸೇವೆ ಇವುಗಳ ಬಗ್ಗೆ ಎರಡು ಮಾತಿಲ್ಲ.

ಆದರೆ ಅವರು ಕೊಟ್ಟ ಕರೆ ಎಷ್ಟರ ಮಟ್ಟಿಗೆ ಸಾಧುವಾದುದು ಎಂಬ ವಿಚಾರವಾಗಿ ಸಂಶಯವಿದೆ.

ಈಗ ಉದ್ಯಮಗಳೇನೋ ಹೆಚ್ಚುತ್ತಿವೆ; ಉದ್ಯಮಿಗಳೂ ನಾವು ತಾನೆಂದು ಮುನ್ನುಗ್ಗಿ ಬರುತ್ತಿದ್ದಾರೆ. ತೆರ ತೆರನಾದ ಉದ್ಯಮಗಳು; ಹಲವು ದೇಶದ ಉದ್ಯಮಿಗಳು. ಉತ್ಪಾದನೆಯೂ ಅಗತ್ಯಕ್ಕಿಂತ ಹೆಚ್ಚಾಗಿಯೇ ನಡೆಯುತ್ತಿದೆ; ಬಹುವೆಚ್ಚದಿಂದಲೂ ಸಾಗುತ್ತಿದೆ.

ಆದರೆ ದೇಶದ ಉದ್ಧಾರವಾಗಿದೆಯೆ? ವಿನಾಶ ತಪ್ಪಿದೆಯೆ? ಜನರ ಸುಖ ಹೆಚ್ಚಿದೆಯೆ? ಬಡತನ ಮರೆಯಾಗಿದೆಯೆ? ಸುಖೀರಾಜ್ಯವೆಂಬುದು ಏರ್ಪಟ್ಟಿದೆಯೆ?

ಇಲ್ಲವೆಂದೇ ಹೇಳಬೇಕು. ಎಂದ ಮೇಲೆ ಉದ್ಯಮದಿಂದಲೇ ದೇಶದ ಉದ್ಧಾರವಾಗುತ್ತದೆ ಎಂಬ ಮಾತಿನಲ್ಲಿ ಎಷ್ಟು ತಥ್ಯವಿದ್ದೀತು? 'ಉತ್ಪಾದನೆ, ಇಲ್ಲವೆ ವಿನಾಶ' ಎಂಬುದನ್ನು 'ಪ್ರೊಡ್ಯೂಸ್ ಎಂಡ್ ಪೆರಿಶ್' ಎಂದು ಮಾರ್ಪಡಿಸಬೇಕೋ ಏನೋ!

ನಾಡಿನ ಜನರೇ ಉದ್ಯಮಶೀಲರಾಗಬೇಕೆಂಬುದು ಎಂ.ವಿ. ಅವರ ಆಶಯವಿದ್ದಿತು. ಈಗಾಲಾದರೋ ಬಹುರಾಷ್ಟ್ರೀಯ ಉದ್ಯಮಗಳು ನಾಡಿನಲ್ಲೆಲ್ಲ ಪಿಡುಗಿನಂತೆ ಬೆಳೆದುಕೊಳ್ಳುತ್ತಿವೆ. ಈಗ ವಿಜ್ಞಾನ, ತಂತ್ರ ಇವುಗಳ ಮೇಲಾಟ; ಇವುಗಳಿಂದ ಉದ್ಯಮಗಳು ನಾಡಿನಲ್ಲಿ ಎಲ್ಲೆಲ್ಲೂ ಎದ್ದುಕೊಳ್ಳುತ್ತಿವೆಯಾಗಿ ಉದ್ಯಮೀಕರಣದ ಸಂಸ್ಕೃತಿ ಪ್ರಚುರವಾಗಿದೆ. ಎಂ.ವಿ. ಅವರ ಕನಸು ನನಸಾಗಿದೆ.

70. ಸೂಪರ್ ಮಾರ್ಕೆಟ್

ಕಾಲ ಕಾಲಕ್ಕೆ ಜನರ ಒಲವು ಬದಲಾಗುತ್ತದೆ, ದಿಟ. ಹಾಗೆ ಬದಲಾದಾಗ ಹಿಂದಿನಿಂದ ಬಂದದ್ದು ಉಳಿಯುವುದು ಕಷ್ಟ. ಬದುಕಿನ ಬಗೆಗಳೇ ಬದಲಾದರೆ, ಬದುಕಲು ನೆರವಾಗುವ ಸಂವಿಧಾನಗಳೂ ಮಾರ್ಪಡುತ್ತವೆ.

ಈಗ ಸೂಪರ್ ಬಜಾರುಗಳು, ಸೂಪರ್ ಮಾರ್ಕೆಟ್‌ಗಳು ಹೆಚ್ಚುತ್ತಿವೆ. ಎಲ್ಲ ಬಡಾವಣೆಗಳಲ್ಲೂ ಈ ಬಗೆಯ ದೊಡ್ಡ ಮಳಿಗೆಗಳು ಕಾಣಿಸಿಕೊಳ್ಳುತ್ತಿವೆ. ಅಲ್ಲಿಗೆ ಹೋಗಿ ಕೊಳ್ಳುವ ಗಿರಾಕಿಗಳೂ ಹೆಚ್ಚುತ್ತಿದ್ದಾರೆ.

ಜನರಿಗೇನೋ ಅನುಕೂಲವೇ. ಬಯಸಿದ್ದೆಲ್ಲ ಒಂದೇ ಎಡೆ ದೊರಕುತ್ತದೆ. ಅಂಗಡಿಗಳನ್ನರಸಿ ಅಲೆದಾಡಬೇಕಾಗಿಲ್ಲ. ಬೆಲೆಗಾಗಿ ಹಿಗ್ಗಾಮುಗ್ಗಾ ಎಳೆದಾಡಬೇಕಾಗಿಲ್ಲ. ಮಾರಾಟದ ವ್ಯವಸ್ಥೆಯೂ ಕಣ್ಣಿಗೆ ಮನಸ್ಸಿಗೆ ಹಿತವಾಗಿರುತ್ತದೆ. ಅಲ್ಲಿಗೆ ಹೋಗಿಬರುವುದೇ ಒಂದು ಸತ್ಸಂಪ್ರದಾಯವೆಂಬಂತೆ (ಫ್ಯಾಶನ್) ಆಗಿದೆ.

ಆದರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಇದರ ಅಗತ್ಯವನ್ನಾಗಲಿ ಇದರಿಂದಾಗುವ ಸಾಧಕ-ಬಾಧಕಗಳನ್ನಾಗಲಿ ಕುರಿತು ವಿಚಾರ ಮಾಡುವ ಮಂದಿ ಕಡಮೆ. ಸೂಪರ್ ಮಾರ್ಕೆಟ್ ನಡೆಸಲು ಹೆಚ್ಚಿನ ಆರ್ಥಿಕ ಸಾಮರ್ಥ್ಯ, ಸೌಲಭ್ಯ, ಪ್ರಭಾವಗಳುಳ್ಳವರು ಮಾತ್ರ ತೊಡಗಬಹುದು. ಮಾರುವ ಕೊಳ್ಳುವ ವ್ಯವಹಾರವನ್ನು ಕೇಂದ್ರೀಕರಿಸಿದ್ದರಿಂದ ಲಾಭ ಯಾರಿಗೆ? ಕೇಂದ್ರೀಕರಣವನ್ನು ನಿರ್ವಹಿಸಿದವರಿಗೆ ತಾನೆ?

ಉಳಿದ ಸಣ್ಣ-ಪುಟ್ಟ ಅಂಗಡಿಗಳವರ ಪಾಡೇನು? ಸಣ್ಣ ಸಣ್ಣ ಉದ್ದಿಮೆಗಳಲ್ಲಿ ತೊಡಗಿರುವವರು, ಮಾರಾಟದ ಪದಾರ್ಥಗಳ ತಯಾರಕರು ತಮ್ಮ ಹೊಟ್ಟೆ ಹೊರೆದುಕೊಳ್ಳುವ ಬಗೆ ಹೇಗೆ?

ಒಬ್ಬನು ಅಂಗಡಿಯನ್ನು ತೆರೆದನೆಂದರೆ, ಸುತ್ತ ಮುತ್ತ ವಾಸಿಸುವ ಜನರ ಉತ್ತೇಜನವನ್ನು ಅಪೇಕ್ಷಿಸುವುದು ಸಹಜ. ವಾಸಸ್ಥಳಗಳು ವಿಶಾಲವಾಗಿ ಹರಡಿಕೊಂಡಂತೆ ಅಂಗಡಿಗಳೂ ಅಲ್ಲಲ್ಲಿ ಮೂಡಿಕೊಳ್ಳುವುದು ಸಹಜ. ನಮ್ಮ ವ್ಯಾಪಾರ ವಹಿವಾಟುಗಳಲ್ಲಿ ತುಂಬ ಹಿಂದಿನಿಂದ ಬಂದ ಕ್ರಮವೇ ಇದು. ಅಲ್ಲಲ್ಲಿಯ ಜನರಿಗೆ ನೆರವಾಗಲು ಅಲ್ಲಲ್ಲಿ ಸಣ್ಣ ಸಣ್ಣ ಅಂಗಡಿಗಳು, ಸಣ್ಣ ಸಣ್ಣ ಕೈಗಾರಿಕೆಗಳು, ಸಣ್ಣ ಸಣ್ಣ ಉದ್ಯಮಗಳು.

ಇದರಿಂದ ಜನರಿಗೆ ಅನುಕೂಲ ಇಲ್ಲದೆ ಉಂಟೆ? ಜನರ ಅನುಕೂಲ ಹಾಗಿರಲಿ, ಎಷ್ಟೋ ಮಂದಿಗೆ ಉದ್ಯೋಗಾವಕಾಶ ದೊರೆಯುವುದಿಲ್ಲವೆ? ಒಂದೊಂದು ಬಡಾವಣೆಯಲ್ಲೂ ಕೆಲಸಕ್ಕಾಗಿ ಹಾತೊರೆಯುವ ಜನ ಇರುವುದಿಲ್ಲವೆ? ನೂರು ಸಣ್ಣ ಪುಟ್ಟ ಅಂಗಡಿಗಳ ಹೊಟ್ಟೆಯ ಮೇಲೆ ಹೊಡೆದು ಒಂದು ಸೂಪರ್ ಬಜಾರ್ ಏರ್ಪಡಿಸಿದರೆ ಒದಗುವ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವವರು ಯಾರು?

ಪ್ರತಿ ಊರಿನಲ್ಲೂ ಸೂಪರ್ ಬಜಾರ್, ದೊಡ್ಡ ಊರುಗಳಲ್ಲಿ ಬಡಾವಣೆಗೊಂದರಂತೆ ಸೂಪರ್ ಬಜಾರ್, ಆಗುತ್ತಿರುವಾಗ, ಇದರಿಂದ ಸಾವಿರಾರು ಸಣ್ಣ ಸಣ್ಣ ಮಳಿಗೆಗಳು, ಅಂಗಡಿಗಳು ಮುಚ್ಚಬೇಕಾಗಿ ಬಂದಿರುವುದು ಯಾರ ಗಮನಕ್ಕೆ ಬರುತ್ತದೆ? ಎಷ್ಟು ಸಣ್ಣ ಕೈಗಾರಿಕೆಗಳು ಇದರಿಂದ ಹಾಳಾಗಿವೆ ಎಂದು ಎಣಿಸುವವರು ಯಾರು?

ಅಮೇರಿಕೆಯಲ್ಲಿ, ಇಂಗ್ಲೆಂಡಿನಲ್ಲಿ ಸೂಪರ್ ಮಾರ್ಕೆಟ್ ಸಮಂಜಸವಾಗ ಬಹುದು. ಆದರೆ ನಮ್ಮ ದೇಶಕ್ಕೆ ಇದು ಹಿತಕರವೆ? ಇದರ ಅಗತ್ಯ ನಮ್ಮ ಜನಕ್ಕೆ ಇದೆಯೆ? ಅಮೇರಿಕ, ಇಂಗ್ಲೆಂಡ್‌ನಲ್ಲಿ ಬಳಕೆಗೆ ಬಂದದ್ದು ನಮ್ಮಲ್ಲೂ ಬರಲೇಬೇಕೆಂಬ ಹಟ ಏತಕ್ಕೆ? ಹಲವು ರೀತಿಯಲ್ಲಿ ಅವರನ್ನು ಅನುಕರಣಮಾಡಿ ನಮ್ಮ ಕೈ ಸುಟ್ಟುಕೊಂಡಿದ್ದೇವೆ. ನಮ್ಮ ಆರ್ಥಿಕ ಸಾಮಾಜಿಕ ಪರಿಸ್ಥಿತಿ ಹದಗೆಡುತ್ತಿರುವುದು ಈ ಬಗೆಯ ಅಂಧಾನುಕರಣದಿಂದಲೇ ಅಲ್ಲವೆ?

71. ಉಪ್ಪು ಹಗರಣ-ಹಣ

ನಾಡಿನ ಇತ್ತೀಚಿನ ಇತಿಹಾಸದಲ್ಲಿ, ಮಹಾತ್ಮಾಗಾಂಧಿಯವರ ಬದುಕಿನಲ್ಲಿ ಉಪ್ಪಿನ ಸತ್ಯಾಗ್ರಹವೊಂದು ವಿಶಿಷ್ಟವಾದ ಘಟ್ಟ. ಗುಲಾಮಗಿರಿಯ ವಿರುದ್ಧವಾಗಿ ನಡೆದ ಚಳುವಳಿಗಳಲ್ಲಿ ಅದೊಂದು. ಅದು ಬಹುಮಟ್ಟಿಗೆ ಸಾಂಕೇತಿಕವಾಗಿದ್ದಿತು.

ಈಗ ಉಪ್ಪಿನದೇ ಇನ್ನೊಂದು ಹಗರಣ ಹುಟ್ಟಿಕೊಂಡಿದೆ. ಆಗ ಉಪ್ಪನ್ನು ತಯಾರಿಸಲು ಜನರಿಗಿದ್ದ ಹಕ್ಕನ್ನು ಕಸಿದುಕೊಂಡಿತೆಂದು ಆಂಗ್ಲ ಸರಕಾರದ ವಿರುದ್ಧ ಸತ್ಯಾಗ್ರಹವೇರ್ಪಟ್ಟಿತು. ಆಂಗ್ಲರ ಕಾರುಬಾರು ನಡೆಯುತ್ತಿದ್ದಾಗ ಹಣವನ್ನು ಇಲ್ಲಿಂದ ದೋಚಿಕೊಂಡು ಹೋಗುವುದೇ ಉದ್ದೇಶವಾಗಿದ್ದಿತು.

ಈಗಲಾದರೋ ದೇಶ ರಾಜಕೀಯವಾಗಿ ಸ್ವತಂತ್ರವಾಗಿದೆ. ಹೊರಗಿನವರು ಯಾರೂ ನಮ್ಮ ಮೇಲೆ ಆಡಳಿತ ನಡೆಸುವುದು ಸಾಧ್ಯವಿಲ್ಲ. ಆದರೆ ಆರ್ಥಿಕವಾಗಿ ಪರಾವಲಂಬನೆಯಾಗಬಹುದಲ್ಲ? ಬಹುರಾಷ್ಟ್ರ ಉದ್ಯಮಗಳು ತೊಡಗಿರುವುದು ಹೆಚ್ಚೊ ಕಡಮೆ ಇದೇ ಯತ್ನದಲ್ಲಿಯೇ ಎಂದು ಹಲವರ ಎಣಿಕೆ. ಹಣದಾಸೆಯೇ ಮೂಲ.

ಅಯೋಡಿನ್ ಸೇರಿಸಿದ ಉಪ್ಪನ್ನು ಬಹುರಾಷ್ಟ್ರ ಉದ್ಯಮದ ಘಟಕಗಳು ತಯಾರಿಸುತ್ತಿವೆಯಂತೆ. ನಮ್ಮ ಸರಕಾರವು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇದಕ್ಕೆ ನೆರವಾಗುತ್ತಿದೆ. ನೆರವಾಗುವುದೆಂದರೆ ಅವರ ಉಪ್ಪನ್ನು ನಮ್ಮ ಜನ ಕೊಂಡು ಬಳಸಲು ಉತ್ತೇಜನ ನೀಡುವುದು. ಹಾಗೆ ಮಾಡಬೇಕೆಂದರೆ ಜನರು ಸಾಮಾನ್ಯವಾಗಿ ಬಳಸುವ ಸಾಮಾನ್ಯ ಉಪ್ಪಿನ ಮಾರಾಟವನ್ನು ತಡೆಗಟ್ಟುವುದು. ಅಯೋಡಿನ್ ಸೇರಿಸಿದ ಉಪ್ಪನ್ನೇ ಜನ ಬಳಸುವಂತೆ ಮಾಡುವುದು.

ಇದಕ್ಕೊಂದು ಕಾರಣವನ್ನಾದರೂ ಹೇಳಬೇಕಲ್ಲ? ನಮ್ಮ ಜನರಿಗೆ ಅಯೋಡಿನ್ ಕೊರತೆಯಿದೆಯೆಂದೂ ಆರೋಗ್ಯ ಕೆಡುತ್ತಿದೆಯೆಂಬುದೂ ಕಾರಣ. ಸಾಮಾನ್ಯ ಉಪ್ಪಿನಲ್ಲಿ ಅಯೋಡಿನ್ ಇಲ್ಲದೆ ಇರುವುದರಿಂದ ಅದರ ಬಳಕೆಗೆ ಬದಲು ಈ ಬಹುರಾಷ್ಟ್ರ ಉದ್ಯಮಗಳು ತಯಾರಿಸುವ ಉಪ್ಪನ್ನು ಬಳಸಬೇಕಂತೆ.

ಅನ್ವೇಷಣೆಯ ಪ್ರಕಾರ ನಮ್ಮ ಜನರಲ್ಲಿ ನೂರಕ್ಕೆ ಇಬ್ಬರಿಗೆ ಮಾತ್ರ ಈ ಕೊರತೆಯಿರುವುದೆಂದು ತಿಳಿದು ಬಂದಿದೆ. ಅವರಿಗೆ ಅನುಕೂಲವಾಗುವಂತೆ ಮಾಡಲು ಬೇರೆ ದಾರಿಯಿಲ್ಲವೆ? ಉಳಿದವರ ಮೇಲೂ ಈ ಒತ್ತಡವನ್ನು ಹೇರಲೇಕೆ?

ಬಹುರಾಷ್ಟ್ರ ಉದ್ಯಮಕ್ಕೆ ಹಣದ ಬಯಕೆಯಿರುವುದು ಸಹಜ. ಆದರೆ ನಮ್ಮ ಜನರಲ್ಲಿ ಒಂದು ಮಿಲಿಯನ್ ಸಂಖ್ಯೆಗೂ ಹೆಚ್ಚು ಮಂದಿ, ಕಡಲತೀರ ದೇಶಗಳಲ್ಲಿರುವವರು, ಉಪ್ಪಿನ ತಯಾರಿಕೆಯಲ್ಲಿ ತೊಡಗಿದ್ದಾರಲ್ಲವೆ? ಅವರಿಗೆ

ಅದೇ ಜೀವನೋಪಾಯ, ಜೀವನಾಧಾರ. ಗೋವೆಯಲ್ಲಂತೂ ಶತಮಾನಗಳಿಂದ ಈ ಉದ್ಯೋಗ ಬಳಕೆಯಲ್ಲಿದೆ. ಅಲ್ಲಿನ ಜನ ಮೀನನ್ನೂ ತಿನ್ನುವುದರಿಂದ, ಮೀನಿನಲ್ಲಿ ಅಯೋಡಿನ್ ಘಟಕ ಇರುವುದರಿಂದ, ಅಯೋಡಿನ್ ಕೊರತೆ ಅಷ್ಟಾಗಿ ಇರಲಾರದು.

ಮೇಲಾಗಿ, ಆಹಾರದಲ್ಲಿ ಮಾತ್ರವೇ ಉಪ್ಪನ್ನು ಬಳಸುವುದು? ಚರ್ಮವನ್ನು ಹದಮಾಡಲು, ಬೇಸಾಯದಲ್ಲಿ– ಹೀಗೆ ಹಲವಾರು ಉಪಯೋಗಗಳಿವೆ ಉಪ್ಪಿಗೆ. ಎಲ್ಲರೂ ಎಲ್ಲ ಕಾರಣಕ್ಕೂ ಅಯೋಡಿನ್ ಸೇರಿಸಿದ ಉಪ್ಪನ್ನೇ ಕೊಳ್ಳಬೇಕೆಂದು ಕಡ್ಡಾಯ ಮಾಡಿದರೆ ಹೇಗೆ? ಈ ಉಪ್ಪಿಗೆ ಹೆಚ್ಚಿನ ಬೆಲೆ ತೆರಬೇಕು ಬೇರೆ.

ಹೋಗಲಿ, ಇದನ್ನು ನಮ್ಮ ಲೋಕಸಭೆಯಲ್ಲಾಗಲಿ, ರಾಜ್ಯದ ವಿಧಾನ ಸಭೆಗಳಲ್ಲಾಗಲಿ ಚರ್ಚೆಗೆ ತಂದಿದ್ದಾರೆಯೇ? ಜನರ ನಿರ್ಣಯವನ್ನು ಸರಕಾರ ಪಡೆದುಕೊಂಡಿದೆಯೆ? ಕಳೆದ ವರ್ಷ ಅಕ್ಟೋಬರ್‌ನಿಂದ ಸಾಮಾನ್ಯ ಉಪ್ಪಿನ ಬಳಕೆಯನ್ನು ಕೇರಳವೊಂದು ರಾಜ್ಯವನ್ನು ಬಿಟ್ಟು ಉಳಿದೆಡೆ ತಡೆಹಿಡಿದಿರುವುದು, ಅಯೋಡಿನ್ ಮಿಶ್ರಣ ಮಾಡಿದ ಉಪ್ಪಿನ ತಯಾರಿಕೆಗೆ ಒತ್ತಾಸೆಯಾಗಿ, ಅವರ ಹಣದಾಸೆಯನ್ನು ಪೂರೈಸಲೊ ಎಂದು ಸಂಶಯಪಡುವ ಸಾಧ್ಯತೆಯಿಲ್ಲವೆ? ಕೇರಳದಲ್ಲಿರುವ ಪ್ರತಿಭಟನೆಗೆ ಆಧಾರವೇ ಇಲ್ಲವೆ?

72. ತೆರೆದ ಬಾಗಿಲು

ನಮ್ಮ ಆರ್ಥಿಕ ನೀತಿಯಲ್ಲಿ ಹೊಸದು 'ತೆರೆದ ಬಾಗಿಲು' ಎನ್ನುವುದು. ಪ್ರಪಂಚದ ಯಾವುದೇ ಶ್ರೀಮಂತ ಉದ್ಯಮಿ ಅಥವಾ ಸಾಹಸಿ ನಮ್ಮ ದೇಶಕ್ಕೆ ಬಂದು ಉದ್ಯಮವನ್ನು ಸ್ಥಾಪಿಸಿ ನಡೆಸಬಹುದು. ಎಲ್ಲರಿಗೂ 'ಮುಕ್ತದ್ವಾರ'.

ಇದರಿಂದ ನಮ್ಮ ದೇಶದ ಜನರಿಗೆ ಎಷ್ಟು ಅನುಕೂಲವಾದೀತು? ಯಾವ ಉದ್ಯಮವನ್ನು ನಾವೇ ಮಾಡಲಾರೆವು, ಹೊರಗಿನ ಬಂಡವಾಳವೇ ಬೇಕಾದೀತು? ಹೊರದೇಶದವರು ಇಲ್ಲಿ ಹೂಡುವ ಬಂಡವಾಳದಿಂದ ಅವರಿಗೆಷ್ಟು ಲಾಭ, ನಮ್ಮವರಿಗೆಷ್ಟು ಅನುಕೂಲ? ನಮ್ಮ ಪರಿಸರಕ್ಕೆ ಏನಾದರೂ ಧಕ್ಕೆಯಾದೀತೋ? ನಮ್ಮ ಪ್ರಾಕೃತಿಕ ಸಂಪತ್ತು ಎಷ್ಟು ಪ್ರಮಾಣದಲ್ಲಿ ಬರಿದಾಗುತ್ತದೆ?

ಇಂಥ ವಿವರಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಬೇಕಾದವರು ಆಡಳಿತದ ಅಧಿಕಾರಿಗಳು. ಅವರು ತಜ್ಞರಾಗಿರಬೇಕು, ಪ್ರಾಮಾಣಿಕರಾಗಿರಬೇಕು, ದೇಶಭಕ್ತ ರಾಗಿರಬೇಕು. ರಾಜಕಾರಣದ ದಾರಿಯಿಂದ ಆಡಳಿತದ ಹೊಣೆಯನ್ನು ಕಸಿದುಕೊಂಡವರಿಗೆ ಈ ಗುಣಗಳಿರುವುವೆಂದು ಯಾರು ಪ್ರಮಾಣ ಮಾಡಿಯಾರು?

ಹೊರಗಿನ ಉದ್ಯಮಿಗಳು ಇಲ್ಲಿ ಬಂದು ಬಂಡವಾಳವನ್ನು ಹೂಡಿದರೆ, ನಮಗೆ ಲಾಭವಾದೀತೆಂಬ ಭ್ರಾಂತಿ ಹಲವು ರಾಜಕಾರಣಿಗಳಲ್ಲಿದೆ. ಅದಕ್ಕಾಗಿ ಅವರು ಮತ್ತೆ ಮತ್ತೆ ವಿದೇಶಗಳಿಗೆ ಪ್ರಯಾಣ ಬೆಳೆಸಿ, ಹೊರಗಿನ ಉದ್ಯಮಿಗಳನ್ನು ಆಕರ್ಷಿಸಿ, ಆಹ್ವಾನಿಸಿ ಇಲ್ಲಿ ಅವರಿಗೆ ಎಲ್ಲ ಬಗೆಯ ಸೌಕರ್ಯಗಳನ್ನೂ ಒದಗಿಸುವ ಭರವಸೆಯನ್ನು ನೀಡಿ ತಮ್ಮ ಬಲೆಗೆ ಹಾಕಿಕೊಳ್ಳುವುದೊಂದು ಪದ್ಧತಿ ಬೇರೂರಿ ಕೊಂಡಿದೆ.

ನಾಡಿನಲ್ಲಿ ಉದ್ಯಮಗಳಿಗೆ ಸಂಬಂಧಿಸಿದಂತೆ ಕಾನೂನುಗಳಿವೆ. ಪರಿಸರದ ರಕ್ಷಣೆ ಮಾಡಬೇಕೆಂಬ ನಿಯಮವಿದೆ; ಮಾಲಿನ್ಯವನ್ನು ಹದ್ದುಬಸ್ತಿನಲ್ಲಿರಿಸಿಕೊಳ್ಳುವ ಹವಣಿಕೆಯಿದೆ. ಇವೆಲ್ಲ ಕಾನೂನು ಪುಸ್ತಕಗಳಲ್ಲಿರುವ ವಿವರಗಳು. ಇವನ್ನು ಅನ್ವಯಕ್ಕೆ ತರಬೇಕೆಂಬ ತವಕ ಇರುವುದು ಕಡಮೆ.

ಹೊರಗಿನ ಉದ್ಯಮಿಗಳು ಇಲ್ಲಿಗೆ ಬಂದು ಬಂಡವಾಳವನ್ನು ಹೂಡುವಾಗ ಅವರಿಗೆ ಆತಂಕವನ್ನುಂಟುಮಾಡುವುದು ಮೇಲೆ ಕಾಣಿಸಿದ ಕಾನೂನುಗಳೇ. ಈ ಕಾನೂನುಗಳನ್ನು ಸಾಧ್ಯವಾದಷ್ಟು ಮುರಿಯುವ ಕಾತರ ಅವರಿಗಿರುವುದು ಆಶ್ಚರ್ಯವಲ್ಲ. ಈ ಕಾತರವನ್ನು ಕಳೆಯಲು ಅಧಿಕಾರಿಗಳು ನೆರವಾದರೆ ಅವರಿಗೆ ಇಷ್ಟ ಬಂದಷ್ಟು ಹಣವನ್ನು ಸುರಿಯಲೂ ಇವರು ಹಿಂದೆ ಮುಂದೆ ನೋಡುವುದಿಲ್ಲ.

ಪರಿಸ್ಥಿತಿ ಹೀಗಿದ್ದಾಗ, ತೆರೆದ ಬಾಗಿಲಿನ ಆರ್ಥಿಕ ನೀತಿಯಿಂದ ದೇಶಕ್ಕೆ ಹಿತವಾದೀತೆಂಬುದು ಯಾವ ಪ್ರಮಾಣದಲ್ಲಿ ದಿಟ? ಕಟ್ಟುಪಾಡುಗಳಿದ್ದರೆ ಇವರು ಬಂಡವಾಳ ಹೂಡಲು ಹೆದರುತ್ತಾರೆ. ಅಲ್ಲಿ ಸಲ್ಲದವರು ಇಲ್ಲಿ ಸಲ್ಲಬಹುದೆಂಬ ಆಸೆಯಿಂದಲೇ ಅಲ್ಲವೆ ಅವರು ಬರುವುದು?

ಸಾಲುಗಟ್ಟಿ ಹೊರಗಿನ ಉದ್ಯಮಿಗಳು ಇಲ್ಲಿಗೆ ಬರುವುದನ್ನು ನೋಡಿದರೆ ಇಲ್ಲಿ ಅವರಿಗೆ ಯಾವ ನಿರ್ಬಂಧವೂ ಇಲ್ಲವೇನೋ ಎಂಬ ಸಂಶಯ ಬರುವುದು ಸಹಜ. ನಮ್ಮ ಮಂತ್ರಿಗಳೂ ಹೊರದೇಶಗಳಿಗೆ ಹೋಗಿ ಅಲ್ಲಿನ ಬಂಡವಾಳದಾರರನ್ನು ಕೈಬೀಸಿ ಕರೆಯುತ್ತಿದ್ದಾರಲ್ಲವೆ? ಯಾವ ಯಾವ ಆಮಿಷಗಳನ್ನೊಡ್ಡಿ ಅವರನ್ನು ಬರಮಾಡಿಕೊಳ್ಳುತ್ತಾರೆಯೋ ಯಾರು ಬಲ್ಲರು?

ಆದರೆ ನಮಗೆ ತಿಳಿಯುವುದು ಪರಿಸರ ಮಾಲಿನ್ಯ ನಿಯಂತ್ರಣವನ್ನು ಅವರಿಗಾಗಿ ಸಡಿಲಗೊಳಿಸುತ್ತಿರುವುದು. ಇದರ ಹಿನ್ನೆಲೆಯಲ್ಲಿರುವ ಭ್ರಷ್ಟಾಚಾರ ಈಗೀಗ ಪ್ರಕಟವಾಗುತ್ತಿದೆ. ಅರ್ಥದ ವರ್ತುಲದೊಳಗೊಂದು ಅನರ್ಥವರ್ತುಲ.

73. ಬೆಳೆದ ಬಂಗಾರ

ಹಳೆಯದೊಂದು ಕತೆ. ಅದರ ಅನ್ವಯ ಇಂದಿಗೂ ಉಂಟು.

ಶ್ರೀಮಂತನೊಬ್ಬನಿಗೆ ಸೋಮಾರಿ ಮಕ್ಕಳು. ಯಾವ ಕೆಲಸವನ್ನೂ ಮಾಡದೆ ಉಂಡು ತಿರುಗಾಡುವವರು. ತಂದೆಗೆ ಇವರನ್ನು ತಿದ್ದಲು ಸಾಧ್ಯವಿಲ್ಲದೆ ಹೋಯಿತು. ಇನ್ನೇನು ಸಾಯುವ ಗಳಿಗೆಯೂ ಬಂದಿತು. ಮಕ್ಕಳಿಗೆ ಮುಂದೇನು ಎಂಬ ಚಿಂತೆ ಕಾಡತೊಡಗಿತು.

ಮಕ್ಕಳನ್ನು ಹತ್ತಿರ ಕರೆದ. ತೀರಿಕೊಳ್ಳಲಿರುವ ತಂದೆ ತಮಗೆ ಐಶ್ವರ್ಯವನ್ನು ಹಂಚಿಕೊಡುವನೆಂದು ಉತ್ಸಾಹದಿಂದಲೇ ಹೋದರು. ತಂದೆ– 'ನೋಡಿ ಮಕ್ಕಳೆ, ನನ್ನ ಆಸ್ತಿಯನ್ನೆಲ್ಲ ಬಂಗಾರವಾಗಿ ಮಾರ್ಪಡಿಸಿ ದ್ರಾಕ್ಷಿ ತೋಟ ಇದೆಯಲ್ಲ, ಅದರಲ್ಲಿ ನೆಲದೊಳಗೆ ಹುದುಗಿಸಿಟ್ಟಿದ್ದೇನೆ. ನೀವೆಲ್ಲರೂ ಅದನ್ನು ಹೊರತೆಗೆದು ಸಮನಾಗಿ ಹಂಚಿಕೊಳ್ಳಿ' ಎಂದು ಹೇಳಿ ಕಣ್ಣು ಮುಚ್ಚಿದ.

ಅವರು ತೀರಿಕೊಂಡ ತಂದೆಗೆ ಮಾಡಬೇಕಾದ ಕರ್ಮಗಳನ್ನೆಲ್ಲ ಮಾಡಿದ ಮೇಲೆ, ದ್ರಾಕ್ಷಿ ತೋಟಕ್ಕೆ ದಾಳಿಯಿಟ್ಟರು. ಅಲ್ಲಿಯ ತನಕ ಒಮ್ಮೆಯೂ ಅದರತ್ತ ಕಣ್ಣಾಡಿಸಿದವರಲ್ಲ. ಗುದ್ದಲಿ, ಹಾರೆ, ಪಿಕಾಸಿಗಳನ್ನು ಹಿಡಿದು ತೋಟವನ್ನೆಲ್ಲ ಅಗೆದರು. ಬಂಗಾರ ಅವರ ಕಣ್ಣಿಗೆ ಎಲ್ಲಿಯೂ ಬೀಳಲಿಲ್ಲ.

ತಮ್ಮ ತಂದೆ ಸಟೆಯನ್ನೇ ನುಡಿದು ತಮ್ಮನ್ನು ಮೋಸಗೊಳಿಸಿದ್ದಾನೆಂದು ಅವರಿಗೆ ಖಾತರಿಯಾಯಿತು. ಆದರೆ ನೆಲವನ್ನೆಲ್ಲ ಅಗೆದದ್ದಾಗಿದೆಯಲ್ಲ? ದ್ರಾಕ್ಷಿಯ ಗಿಡಗಳನ್ನಾದರೂ ಬೆಳೆಸಿದರಾಯಿತು ಎಂದುಕೊಂಡರು. ನೆಲವನ್ನೆಲ್ಲ ಚೆನ್ನಾಗಿ, ಆಳವಾಗಿ ಅಗೆದಿದ್ದರಾಗಿ ಆ ವರ್ಷದ ಫಸಲು ಚೆನ್ನಾಗಿಯೇ ಬಂದಿತು. ಸುಮಾರು ಲಾಭವೂ ದೊರಕಿತು.

ಇದನ್ನು ಕಂಡು ಅವರು ಮತ್ತೊಮ್ಮೆ ಫಸಲನ್ನು ತೆಗೆದರು. ತೆಗೆಯುವ ಮುನ್ನ ಹಿಂದಿನಂತೆಯೇ ನೆಲವನ್ನು ಅಗೆದಿದ್ದರು. ಗಿಡಗಳ ಮೇಲೆ ಅಕ್ಕರೆಯೂ ಒದಗಿದ್ದಿತು. ಲಾಭಕ್ಕೆ ಕಾರಣವಾಯಿತೆಂಬ ಕಾರಣದಿಂದ ಆ ವರ್ಷ ಇನ್ನಷ್ಟು ಚೆನ್ನಾಗಿ ಬೆಳೆ ಬಂದಿತು; ಲಾಭವೂ ಇಮ್ಮಡಿಸಿತು.

ಹೀಗೆ ತಂದೆ ಬಿಟ್ಟು ಹೋದ ದ್ರಾಕ್ಷಿ ತೋಟದಿಂದ ಅವರು ಶ್ರೀಮಂತರಾದರು. ದುಡಿಮೆಯ ಸ್ವಾರಸ್ಯ ಅವರಿಗೆ ಅರ್ಥವಾಗಿದ್ದಿತು; ಸೋಮಾರಿತನವನ್ನು ಬಿಟ್ಟು ಮೈಮುರಿದು ಕೆಲಸ ಮಾಡುವ ಪ್ರವೃತ್ತಿ ಬೆಳೆದಿದ್ದಿತು.

ಆಗ ಅವರಿಗೆ ತಮ್ಮ ತಂದೆಯ ಮಾತಿನ ಗುಟ್ಟು ತಿಳಿಯಿತು. ನೆಲದೊಳಗೆ ಹುದುಗಿಸಿದ ಬಂಗಾರದ ನಿಧಿಯೆಂದರೆ ಕೃಷಿಯೇ; ನೆಲವನ್ನು ಅಗೆದದ್ದು ಕೈಕೆಲಸಕ್ಕೆ

ಒತ್ತಾಸೆ ನೀಡಿತು. ಕಷ್ಟಪಟ್ಟು ತೆಗೆದ ಬೆಳೆ ಅವರಿಗೆ ದಿಟವಾಗಿ ಬಂಗಾರವನ್ನು ತಂದುಕೊಟ್ಟಿತು. ಬಂಗಾರಕ್ಕೇ ಹುಡುಕಿದಾಗ ಬಂಗಾರ ಸಿಗಲಿಲ್ಲ.

ಈಗಿನ ಆರ್ಥಿಕ ನೀತಿಯಲ್ಲಿ ಕೈಕೆಲಸಕ್ಕೆ ಬೆಲೆಯಿರದು; ಕಷ್ಟದಿಂದ ತೆಗೆಯುವ ಬೆಳೆಗೆ ಬೆಲೆಯಿಲ್ಲ; ಅಲ್ಪಶ್ರಮದಿಂದ ದೊರಕುವ ಗಟ್ಟಿ ಬಂಗಾರಕ್ಕೇ ಬೆಲೆ. ಬೆಳೆಯಿಂದ ಬಂಗಾರ ತೆಗೆಯುವ ಕಲ್ಪನೆ ಹಿಂದಿನ ಕಾಲದ್ದಾಯಿತು. ಈಗ ಬಂಗಾರವೇ ಬೆಳೆಯಬೇಕು.

ಬೇಸಾಯವನ್ನೆ ನಂಬಿರುವ ಈ ದೇಶದಲ್ಲಿ, ಬೇಸಾಯವನ್ನು ಕಡೆಗಣಿಸಿ ವಾಣಿಜ್ಯ ಉದ್ಯಮಗಳಿಗೇ ಅಗ್ರಪಟ್ಟ ಕಟ್ಟಿರುವ ಆರ್ಥಿಕ ನೀತಿಗೆ ಏನೆನ್ನಬೇಕು? ಹಳ್ಳಿಗರೂ ಬೆಳೆಯಿಂದ ನಿಧಾನವಾಗಿ ಬರುವ ದುಡ್ಡಿಗಿಂತ ಬೇಗನೆ, ಹೆಚ್ಚಾಗಿ ಬರುವ ದುಡ್ಡಿಗೆ ಆಸೆಪಟ್ಟು, ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಬರುತ್ತಿದ್ದಾರಲ್ಲವೆ? ಕೆಟ್ಟು ಪಟ್ಟಣವನ್ನು ಸೇರುವ ಮಾತಲ್ಲ ಇದು. ಪಟ್ಟಣವನ್ನು ಸೇರಿ ಕೆಡುವುದು.

74. ಹಣ-ಹೊಟ್ಟೆ

ಹಣ ಗಳಿಸುವುದಕ್ಕೆ ಹೊಟ್ಟೆ ಹೊರೆದುಕೊಳ್ಳುವುದೆಂಬ ಇನ್ನೊಂದು ಮಾತಿದೆಯಲ್ಲವೆ? ಹಣವಿರದಿದ್ದರೆ ಹೊಟ್ಟೆಗೇನು ಗತಿ? ಎಲ್ಲಾರು ಮಾಡುವುದು ಹೊಟ್ಟೆಗಾಗಿ ಎಂದು ದಾಸರೇ ಹೇಳಿದರಲ್ಲವೆ?

ಸರಿ, ಆದರೆ ಹೊಟ್ಟೆಗೆ ಹಾಕುವುದಷ್ಟೆ ಆಹಾರವೆನ್ನಬಹುದೆ? ಮೈಯೊಳಗಿರುವುದು ಹೊಟ್ಟೆಯೊಂದೇ ಅಲ್ಲ, ತಲೆಯಿದೆ, ಒಡಲಿದೆ. ಇಂದ್ರಿಯಗಳಿವೆ. ಜೀವವಿದೆ. ಇವಕ್ಕೆಲ್ಲ ಆಹಾರ ಬೇಡವೆ?

ಹೊಟ್ಟೆಗೆ ಬೇಕಾದುದನ್ನು ಪಡೆದುಕೊಳ್ಳಲು ಹಣ ಬೇಕು. ಹಣವೇನು ಮೇಲಿಂದ ಉದುರುವುದಿಲ್ಲ; ದುಡಿದು ಗಳಿಸಬೇಕಾದುದು ಅದು. ಅದನ್ನು ಗಳಿಸಿಕೊಳ್ಳಲು ಬದುಕಿನ ಬಹು ವೇಳೆ, ಬಹು ಶ್ರಮ ವೆಚ್ಚವಾಗುತ್ತದೆಯೆಂಬುದು ಎಲ್ಲರ ಅರಿವಿನಲ್ಲಿರುವ ವಿಚಾರವೇ. ಹೊಟ್ಟೆ ಹೊರೆದುಕೊಳ್ಳುವುದೆಂದರೆ ಯಾವುದಾದರೊಂದು ಉದ್ಯೋಗ ಅಥವಾ ಯಾವುದಾದರೊಂದು ಹವಣಿಕೆಯನ್ನು ಹಮ್ಮಿಕೊಳ್ಳುವುದಲ್ಲವೆ?

ಹೊಟ್ಟೆಗೆಂದು ತಿಂದದ್ದು ಸ್ಥೂಲ ಭಾಗದಲ್ಲಿ ಮೈಗೆ ಬಲವನ್ನು ಕೊಡುತ್ತದೆ; ಇಂದ್ರಿಯಗಳ ಪಾಟವನ್ನು ಹೆಚ್ಚಿಸುತ್ತದೆ. ಸೂಕ್ಷ್ಮ ಭಾಗದಲ್ಲಿ ಮನಸ್ಸಿಗೆ ಗೆಲುವನ್ನೂ ನೆಮ್ಮದಿಯನ್ನೂ ತರುತ್ತದೆ. ಸ್ಥೂಲ ಭಾಗದ ಉದ್ದೇಶವನ್ನಷ್ಟೇ ಪೂರೈಸಿಬಿಟ್ಟರೆ ಹೊಟ್ಟೆಯ ಕೊರತೆ ನೀಗಿದಂತಾಗಲಿಲ್ಲ. ಮನಸ್ಸಿನ ನೆಮ್ಮದಿಯಿದ್ದರೇ ಉಂಡದ್ದು

ಅರಗುವುದು. ಹೇಗಾದರಾಯಿತು, ಹಣ ಬಂದದ್ದು ಮುಖ್ಯ ಎಂದಾಗಲಿ, ಏನಾದರಾಯಿತು, ಹೊಟ್ಟೆಗೆ ಹಾಕಿಕೊಂಡರೆ ಸರಿ ಎಂದಾಗಲಿ ಹೇಳುವಂತಿಲ್ಲ. ಅನ್ಯಾಯದಿಂದ ಬಂದ ಹಣವಾಗಲಿ, ಅನಾಚಾರದಿಂದ ಉಂಡ ಅನ್ನವಾಗಲಿ ದಕ್ಕುವುದಿಲ್ಲ. ಕಡೆಗೆ ಅದರಿಂದ ಗಾಸಿ ಇದ್ದದ್ದೇ ಅನ್ನುವ ಸೂಕ್ಷ್ಮ ಭಾಗ ಮನಸ್ಸಿಗೆ ಸೇರುವಂತೆಯೇ, ಹಣದ ಒಂದು ಭಾಗವೂ ನೆಮ್ಮದಿಗೆ ಕಾರಣವಾಗುತ್ತದೆ.

ಹಣದ ಮೊತ್ತಕ್ಕಿಂತ ಹಣದ ಗುಣಾಂಶ ಮಿಗಿಲಾದುದು. ದಾಸರು ಹೇಳಿದಂತೆ 'ಅಳಲಿಸಿ ಪರರನ್ನು, ಗಳಿಸಿ ತಂದರ್ಥವು ಉಳಿಯದು'. ನಾವು ಪಡೆದುಕೊಂಡ ಹಣ ಬೇರೆಯವರಿಗೆ ಎಷ್ಟು ತೊಂದರೆಯನ್ನು ತಂದಿದೆ ಎಂಬ ತಿಳಿವಳಿಕೆಯಿರಬೇಕು. ಬೇರೆಯವರ ಕಣ್ಣೀರಿನಿಂದ ಸಂದ ಹಣ ನಮಗೆಂದಾದರೂ ಒಳಿತನ್ನು ಮಾಡಬಲ್ಲುದೆ? ಹಣವನ್ನು ಗಳಿಸುವ ಗಳಿಗೆಯಲ್ಲಿ ಇದು ಅರಿವಿಗೆ ಬರಬೇಕು. ನ್ಯಾಯಾನ್ಯಾಯ ವಿವೇಕವಿಲ್ಲದೆ, ಯುಕ್ತಾಯುಕ್ತ ವಿವೇಚನೆಯಿಲ್ಲದೆ ಗಳಿಸಿಕೊಂಡ ಹಣ ಹೊಟ್ಟೆ ಹೊರೆಯುವುದಿಲ್ಲ; ಹೊಟ್ಟೆಗೆ ಹೊಡೆಯುತ್ತದೆ. ಹಣವಿಲ್ಲದಿರುವ ಕೊರತೆಗಿಂತ ಅನ್ಯಾಯದ ಹಣ ಕೈಸೇರುವುದು ಹೆಚ್ಚು ದುಃಖಕ್ಕೆ ಕಾರಣವಾಗುತ್ತದೆ.

ಹಣವೆಂದರೆ ಹೊರಗಣ ವಸ್ತು, ಕಣ್ಣಿಗೆ ಕಾಣುವಂಥದು, ಕೈಯಿಂದ ಮುಟ್ಟಲಾಗುವಂಥದು, ತೊಳೆದರೆ ಅದರ ಕೊಳೆ ಹೋಗುತ್ತದೆ ಎಂಬುದು ಸಾಮಾನ್ಯ ಜನರ ಎಣಿಕೆ. ಹಣಕ್ಕೆ ಇದಕ್ಕಿಂತ ಮಿಗಿಲಾದ ಗುಣವೊಂದಿದೆ ಎಂಬುದನ್ನರಿಯರು ಜನ. ಹೇಗೆ ಬಂದಿತೆಂಬುದನ್ನವಲಂಬಿಸಿ ಹಣದ ಗುಣ ಏರ್ಪಡುತ್ತದೆ.

'ಹಣದ ಬೆಲೆಯೇನೋ ಎಲ್ಲರಿಗೂ ಸಮನಾದುದೇ.' ಆದರೆ ಒಬ್ಬೊಬ್ಬರ ಹಣಕ್ಕೂ ಅವರವರ ಗುಣ ಸೇರಿಕೊಳ್ಳುತ್ತದೆ; ಅವಗುಣವೂ ಕೂಡಿಕೊಳ್ಳುತ್ತದೆ. ಹಣಕ್ಕೊಂದು ಆಂತರಿಕ ಬೆಲೆಯಿದೆಯೆನ್ನುವುದನ್ನು ತಿಳಿಯದಿದ್ದರೆ ಹಣ ನಮ್ಮ ನೆರವಿಗೆ ಬರಲಾರದು. ಹೊಟ್ಟೆ ಹೊರೆದುಕೊಳ್ಳುವುದಕ್ಕೂ ವಿಶೇಷವಾದ ಅರ್ಥವೊಂದಿದೆ. ಬರಿದೆ ಉಂಡ ಮಾತ್ರಕ್ಕೆ ಹೊಟ್ಟೆ ಹೊರೆದುಕೊಂಡಂತಾಗಲಿಲ್ಲ.

75. ದೇಶೀಯ ಆರ್ಥಿಕ ವ್ಯವಸ್ಥೆ

ಇಂದಿನ ಆರ್ಥಿಕ ವ್ಯವಸ್ಥೆಯು ನಮ್ಮನ್ನಾಳಿ ದೇಶವನ್ನು ದಿವಾಳಿಯೆಬ್ಬಿಸಿದ ಆಂಗ್ಲ ಅಧಿಕಾರಿಗಳು ಕೊಟ್ಟು ಹೋಗಿರುವ ಬಳುವಳಿ. ನಮ್ಮ ದೇಶಕ್ಕೇನು ಸಹಜವಾದುದಲ್ಲ. ನಮ್ಮ ದೇಶದ ಉದ್ಧಾರಕ್ಕೆಂದು ಅವರು ಬಿಟ್ಟು ಹೋದುದೂ ಅಲ್ಲ.

ನಾಡನ್ನು ಆಳಿದವರಲ್ಲಿ ಅವರೇ ಕಡೆಯವರಾಗಿ, ಅವರು ಅನುಸರಿಸಿದ ಎಲ್ಲ ರೀತಿ ನೀತಿಗಳನ್ನು ನಮ್ಮವರು ಅನುಸರಿಸುವಂತಾಯಿತು. ನಮ್ಮವರೇ ಆಳಲು ಮೊದಲು ಮಾಡಿದಾಗಲೂ ಅವರನ್ನು ಮೆಚ್ಚಿಕೊಂಡಿದ್ದವರೇ ಆಗಿದ್ದುದರಿಂದ ಅವರ ಪ್ರಭಾವವೇ ಉಳಿದುಕೊಂಡದ್ದು ಆಶ್ಚರ್ಯವೇನಲ್ಲ. ಹೆಸರಿಗೆ ಸ್ವರಾಜ್ಯ; ಸ್ವಂತಿಗೆಯ ಸೊಲ್ಲೂ ಇಲ್ಲ.

ಆಂಗ್ಲರು ಬರುವುದಕ್ಕೆ ಮೊದಲು ನಮ್ಮಲ್ಲಿ ಅರ್ಥವ್ಯವಸ್ಥೆಯೇ ಇರಲಿಲ್ಲವೆ? ಅರ್ಥವ್ಯವಸ್ಥೆಯನ್ನು ಅವಲಂಬಿಸದೆ ವಿಜಯನಗರ ಸಾಮ್ರಾಜ್ಯ ಮೆರೆಯಿತೆ? ಮೊಗಲ್ ಆಳರಸರು ಅರ್ಥವ್ಯವಸ್ಥೆಯನ್ನು ಕಡೆಗಣಿಸಿದ್ದರೆ? ಅದಕ್ಕೂ ಮುಂಚೆ ಪಲ್ಲವರು, ಚೋಳರು, ಹೊಯ್ಸಳರು, ಪಾಂಡ್ಯರು, ಚಾಳುಕ್ಯರು ಆಳುತ್ತಿದ್ದಾಗ ಅರ್ಥ ವ್ಯವಸ್ಥೆಯ ಅರಿವೇ ಅವರಿಗಿರಲಿಲ್ಲವೆ? ಅರ್ಥನೀತಿಯ ಬೆಳಗಾದದ್ದು ಆಂಗ್ಲರು ಇಲ್ಲಿಗೆ ಬಂದ ಮೇಲೆಯೇ ಎಂದು ಹೇಳಬಹುದೆ?

ಇದನ್ನು ಕುರಿತು ಆಲೋಚಿಸುವ ಬಿಡುವು ನಮ್ಮ ಆರ್ಥಿಕ ತಜ್ಞರಿಗೆ ಇರದು. ಇದು ನಮ್ಮಲ್ಲೇ, ನಮ್ಮಿಂದಲೇ ಆದ ವ್ಯವಸ್ಥೆ; ಇದರಲ್ಲಿ ನಮ್ಮ ದೇಶಕ್ಕೆ, ನಮ್ಮ ಜನರಿಗೆ ಅನುಕೂಲವಾದ ಹಿನ್ನೆಲೆಯಿದ್ದಿತು, ಆಶಯವಿದ್ದಿತು. ಆಯಾ ಪ್ರಾಂತ್ಯಗಳಲ್ಲಿ ಅವರಿಗವರಿಗೆ ಹಿತವೆನಿಸಿದ ಅರ್ಥವ್ಯವಸ್ಥೆಯಿದ್ದಿತು. ಹೀಗಾಗಿ ಆಂಗ್ಲರ ಅಧಿಕಾರ ಇಲ್ಲಿ ಮೂಡುವಾಗಲೂ ನಾಡಿನ ಆರ್ಥಿಕ ಸ್ಥಿತಿ ಚೆನ್ನಾಗಿಯೆ ಇದ್ದಿತು.

ನಮ್ಮ ದೇಶದ ಸಂಪತ್ತಿನ ಮೇಲೆ ಕಣ್ಣಿಟ್ಟೇ ಅಲ್ಲವೇ ಆಂಗ್ಲರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು ಇಲ್ಲಿಗೆ ಬಂದು ದೇಶದ ಮೇಲೆ ಒಡೆತನ ಗಳಿಸಿಕೊಳ್ಳಲು ಹೆಣಗಾಡಿದುದು? ಅಲ್ಲಿಯವರೆಗೆ ದೇಶದ ಆರ್ಥಿಕ ವ್ಯವಸ್ಥೆ ಸುಭದ್ರವಾಗಿದ್ದಿತೆನ್ನಲು ಪುರಾವೆಯಿದೆ. ಹಲವಾರು ವಿದೇಶೀ ಪ್ರವಾಸಿಗರು ಇದನ್ನು ಉಲ್ಲೇಖಿಸಿರುವುದಿದೆ. ನಮ್ಮಲ್ಲಿನ ಬರಹಗಳೂ ಇದನ್ನು ಸಮರ್ಥಿಸುತ್ತವೆ.

ನಮ್ಮದು ಬಡದೇಶವಾದದ್ದು ನಮ್ಮ ಆರ್ಥಿಕ ವ್ಯವಸ್ಥೆ ಮಾರ್ಪಟ್ಟಾಗಲೆ. ಇಂಗ್ಲೆಂಡಿನಲ್ಲಾದಂತೆ ಇಲ್ಲಿಯೂ ಉದ್ಯಮ ಕ್ರಾಂತಿ ನಡೆಯಬೇಕೆಂಬ ಹಂಬಲದಿಂದ ಆಂಗ್ಲ ಆಳರಸರೂ ಅವರ ದೇಶೀ ಅಭಿಮಾನಿಗಳೂ ಇಲ್ಲಿನ ಹಿಂದಿನ ಅರ್ಥವ್ಯವಸ್ಥೆಯನ್ನು ತೊಡೆದು ಹಾಕಿ ಆಧುನಿಕ ಯುಗಕ್ಕೆ ನಾಡನ್ನು ನಡೆಯಿಸಿದರು.

ಭಾರತವು ಹಿಂದುಳಿದ ದೇಶವೆಂದು ಅವರೆಲ್ಲರ ನಂಬಿಕೆ. ಪಾಶ್ಚಾತ್ಯ ಜನರನ್ನನುಕರಿಸದಿದ್ದರೆ ಮುಂದರಿಯುವುದು ಸಾಧ್ಯವಿಲ್ಲವೆಂದು ಅವರ ತೀರ್ಮಾನ. ನಮ್ಮ ಅರ್ಥಶಾಸ್ತ್ರಜ್ಞರಿಗೆ ಇಂದಿಗೂ ಅದೇ ಕಲ್ಪನೆ. ನಮ್ಮ ಇಂದಿನ ಆಳರಸರು ಅಂದಿನ ಆಳರಸರ ಮನೋಧರ್ಮವನ್ನೇ ಬಹುಮಟ್ಟಿಗೆ ಹಿಡಿದಿದ್ದಾರೆ. ನಾಡು ಸ್ವತಂತ್ರವಾಗಿ ಅರ್ಧ ಶತಕವಾದರೂ ಗುಲಾಮಗಿರಿ ತಪ್ಪಿಲ್ಲ. ಅಂದು ಆರಂಭವಾದ ಬಡತನ ಇಂದಿನವರೆಗೂ ಕಾಡುತ್ತಲೆ ಬಂದಿದೆ.

ನಮ್ಮ ನಾಡು ಮೊದಲು ಮಾಡಿಕೊಂಡ, ನಡುಯುಗದಲ್ಲೂ ಬೆಳೆಸಿಕೊಂಡ, ಆಂಗ್ಲರ ಆಕ್ರಮಣ ಕಾಲದವರೆಗೂ ಹಾಗೂ ಹೀಗೂ ಸಾಗಿಬಂದ ಅರ್ಥವ್ಯವಸ್ಥೆಯ ಅಧ್ಯಯನವನ್ನು ಈಗಲಾದರೂ ನಮ್ಮ ತಜ್ಞರು ಮಾಡುವುದಾದರೆ ಇನ್ನೂ ಹಾಳಾಗುವುದನ್ನು ತಪ್ಪಿಸಬಹುದೋ ಏನೋ!

76. ಹೊಟ್ಟೆಬಾಕರು

ಜಗತ್ತಿನಲ್ಲಿ ಜನಸಂಖ್ಯೆ ಹೆಚ್ಚುತ್ತಿರುವುದು ದಿಟ. ಇದರಿಂದ ನಮ್ಮ ಭೂಮಿಗೆ ಆತಂಕವಿರುವುದೂ ದಿಟ. ಇರುವ ಸಂಪನ್ಮೂಲಗಳು ಸಾಲುವುದಿಲ್ಲ. ಜನರ ಒತ್ತಡದಿಂದ ಆರೋಗ್ಯ ಕೆಡುತ್ತದೆ, ನೆಮ್ಮದಿ ಮರೆಯಾಗುತ್ತದೆ, ಹಗರಣ ಹೆಚ್ಚುತ್ತದೆ. ಬದುಕಿನ ಮೌಲ್ಯ ಇಳಿಯುತ್ತದೆ.

ಇವೆಲ್ಲ ದಿಟವೇ. ಆದರೆ ಇದಕ್ಕಿಂತ ದೊಡ್ಡದಾದ ಕುತ್ತು ಇನ್ನೊಂದಿದೆ. ಅದು ಅತಿ ಹೊಟ್ಟೆಬಾಕತನ. ಜನಸಂಖ್ಯೆ ಹೆಚ್ಚುತ್ತಿರುವುದು ಸಾಮಾನ್ಯವಾಗಿ ಜಡಜನರ ನಡುವೆ. ತಮಗೇ ಸಾಲದ ಕೂಳನ್ನು ಕಿತ್ತುಕೊಳ್ಳಲು ಜನರೂ ಹೆಚ್ಚಿದರೆ ಕಷ್ಟವಲ್ಲವೆ? ಆದರೆ ಇವರೆಲ್ಲರ ಕೂಳನ್ನು ಕಬಳಿಸಲು ಅಲ್ಪಸಂಖ್ಯೆಯ ಹಣವಂತರು ಟೊಂಕ ಕಟ್ಟಿದರೆ ಮಾಡುವುದೇನು? ಹಣವಂತರಿಗೂ ಬಡವರಂತೆಯೆ ಊಟ ಬೇಕು, ಬಟ್ಟೆ ಬೇಕು, ಮನೆ ಬೇಕು, ವಿದ್ಯೆ ಬೇಕು, ವಿನೋದ ಬೇಕು. ಆದರೆ ಬಡವರಷ್ಟೇ ಊಟ, ಬಟ್ಟೆ, ಮನೆ ಅವರಿಗೂ ಇರುವುದಾದರೆ ತೊಂದರೆಯಿಲ್ಲ. ವಾಸ್ತವವಾಗಿ ಹೀಗಿಲ್ಲ.

ಸಿರಿವಂತರು ತಾವು ತಿನ್ನುವುದಕ್ಕಿಂತ ಹತ್ತುಪಟ್ಟು ನೂರುಪಟ್ಟು ಹೆಚ್ಚಿನ ಕೂಳನ್ನು ಗಳಿಸುತ್ತಾರೆ. ತಾವೂ ತಿನ್ನದೆ, ಇತರರಿಗೂ ಕೊಡದೆ ಹಾಳು ಮಾಡುತ್ತಾರೆ. ಐವತ್ತು ಜನರಿಗೆ ಆಗಬಹುದಾದ ಬಟ್ಟೆ ಒಬ್ಬ ಹಣವಂತನಲ್ಲಿರುತ್ತದೆ. ಇವರು ಸೊಗಸಾದ ಬಟ್ಟೆಯುಟ್ಟು ಮೆರೆಯುತ್ತಾರೆ; ಉಳಿದ ಐವತ್ತು ಮಂದಿ ಇದರಿಂದಾಗಿ ಅರೆಬೆತ್ತಲೆಯಿರಬೇಕಾಗುತ್ತದೆ. ಒಬ್ಬ ಹಣವಂತನ ಮನೆಗೆ ತಗುಲುವ ವೆಚ್ಚ ಸಾವಿರ

ಮಂದಿಗೆ ಸೂರನ್ನು ಒದಗಿಸಬಲ್ಲುದು. ಅವನು ತನ್ನ ವಿನೋದಕ್ಕೆ ಸುರಿಯುವ ಹಣದಿಂದ ಇನ್ನೂ ನೂರಾರು ಮಂದಿಯ ಅಗತ್ಯಗಳನ್ನು ಪೂರೈಸಬಹುದು.

ಇದನ್ನು 'ಓವರ್ ಕನ್‌ಸ್ಯೂಮರಿಸಂ' ಎನ್ನುತ್ತಾರೆ. 'ಓವರ್ ಪಾಪ್ಯುಲೇಷನ್' ಎಂಬುದು ಎಲ್ಲರಿಗೂ ತಿಳಿದಿದೆ. ಸಂಪನ್ಮೂಲಗಳನ್ನು ಗಮನಿಸಿ ಅದರ ಮೇಲೆ ಒತ್ತಡ ಹೇರುವಂತಾದರೆ ಜನಸಂಖ್ಯೆಯ ಮಿತಿ ಮೀರಿತು ಎಂದರ್ಥ. ಇದರಿಂದಾಗಿ ಆಹಾರ, ವಸತಿ, ನೀರು, ಉದ್ಯೋಗ, ವಿದ್ಯೆ ಎಲ್ಲ ಸೌಕರ್ಯಗಳೂ ಕಷ್ಟವಾಗುತ್ತವೆ. ಇದು ಸಮಸ್ಯೆಯೇ. ಇದರ ನಿಯಂತ್ರಣ ಮಾಡಬೇಕಾದ ಅಗತ್ಯವಿದ್ದೇ ಇದೆ. ಇದು ಸಾಧ್ಯವಾಗುತ್ತಿಲ್ಲವೆಂಬುದೂ ಎಲ್ಲರಿಗೂ ತಿಳಿದದ್ದೇ.

ಇದರ ಜೊತೆಗೆ ಸೌಕರ್ಯಗಳ ವಿತರಣೆಯಲ್ಲಿ, ಸಂವಿಭಾಗದಲ್ಲಿ ಮೇಲೆ ಹೇಳಿದ 'ಓವರ್ ಕನ್‌ಸ್ಯೂಮರಿಸಂ' (ಅತಿ ಹೊಟ್ಟೆಬಾಕತನ) ಎಂಬ ಅಪಾಯಕಾರಿ ಪ್ರವೃತ್ತಿಯೂ ಬೆಳೆದುಕೊಂಡರೆ ಭೂಮಿಯ ಮೇಲೆ ಮನುಷ್ಯರ ಬಾಳು ತೀರ ದುಸ್ತರವೆನಿಸುತ್ತದೆ. ಅನಗತ್ಯವಾದ ಭೋಗ ಸಾಮಗ್ರಿಗಳನ್ನು ಕೊಳ್ಳುವುದು, ಕೊಂಡ ಮೇಲೆ ಅವನ್ನು ಬಳಸುವುದು, ಬಳಸಿ ಮತ್ತಷ್ಟು ಅಂಥದೇ ಸಾಮಗ್ರಿಗಳಿಗೆ ವೆಚ್ಚ ಮಾಡುವುದು– ಇದು 'ಓವರ್ ಕನ್‌ಸ್ಯೂಮರಿಸಂ'.

ಹೊಟ್ಟೆಬಾಕತನದಿಂದ ಆಹಾರವನ್ನು ಸಂಗ್ರಹಿಸುವುದು, ಅದನ್ನು ತಿಂದು ಅದು ಅರಗದೆ ಹೊಟ್ಟೆ ಕೆಟ್ಟು, ಅದನ್ನು ನೀಗಿಸಿಕೊಳ್ಳಲು ವೈದ್ಯರ ಬಳಿ ಓಡಿ ಅವರಿಗೆ ಹಣತೆತ್ತು, ಅದರಿಂದ ಪಾಠ ಕಲಿಯದೆ ಮತ್ತೆ ಮಿತಿಯನ್ನರಿಯದೆ ತಿನ್ನುವುದು, ಇದೇ ಹೊಟ್ಟೆಬಾಕತನದ ಫಲ. ಇದಕ್ಕೆ ಅಗತ್ಯಕ್ಕಿಂತ ಹೆಚ್ಚಾಗಿ ಹಣವಿರುವುದೇ ಕಾರಣ. ಮಾಡಬಾರದ್ದನ್ನು ಮಾಡಿದಾಗ ಆಗಬಾರದ್ದು ಆಗದೆ ಬಿಡುತ್ತದೆ

77. ಹರಿಯುವ ಹಣ

ಮನುಷ್ಯನಿಗೆ ದುಡ್ಡಿನ ಮೇಲೆ ಮಮತೆ ಮೂಡಿಕೊಂಡಾಗ ಸಂಪತ್ತೆಂದರೆ ದುಡ್ಡೇ ಎಂಬ ಭ್ರಮೆ ಬೇರೂರಿಕೊಂಡಿತು.

ಆರೋಗ್ಯವೂ ಒಂದು ಸಂಪತ್ತು; ದುಡಿಮೆಯ ಅವಕಾಶವೂ ಒಂದು ಸಂಪತ್ತು; ಗಾಳಿ ಬೆಳಕುಗಳೂ ಸಂಪತ್ತೇ; ಭೂಮಿ-ಕಾಣೆಯೂ ಸಂಪತ್ತು; ವಿದ್ಯೆಯೂ ಸಂಪತ್ತು; ಕರಕುಶಲತೆಯೂ ಸಂಪತ್ತೇ. ಬರಿಯ ಹಣವೇ ಸಂಪತ್ತೇ?

ಆದರೆ ಈಗ ಮನುಷ್ಯನ ಆಸೆ ಕೇಂದ್ರೀಕೃತವಾಗಿರುವುದು ಹಣದ ಗಳಿಕೆಯ ಮೇಲೆ. ನೆಲವಿದ್ದರೆ ಏನಾಯಿತು, ಬೆಳೆ ಬಂದರೆ ಏನು ಸಾರ್ಥಕ? ಮೈಯಲ್ಲಿ ಬಲವಿದ್ದರೆ ಅದೇತಕ್ಕೆ? ಕೈಯಲ್ಲಿ ಹಣ ಓಡಾಡಬೇಕು. ಅದೀಗ ಸಂಪತ್ತು.

ಈ ಒಲುಮೆಯಿಂದಲೆ ಹಳ್ಳಿಯನ್ನು ಬಿಟ್ಟು ನಗರಗಳಲ್ಲಿ ಯುವಕರು ಬಂದು ನೆರೆಯುವುದು. ಉತ್ತು, ಬಿತ್ತು, ಬೆಳೆ ತೆಗೆದರೆ ಒಡನೆಯೇ ಕೈಯಲ್ಲಿ ಹಣ ತೋರಿಕೊಳ್ಳುವುದಿಲ್ಲ. ಅದೇ ಕಾರ್ಖಾನೆಯಲ್ಲಿ ದಿನವೂ ದುಡಿದು ಬಂದರೆ ಗಟ್ಟಿ ಹಣವನ್ನು ಕಣ್ಣಾರೆ ಕಾಣಬಹುದು, ಕೈಯಾರೆ ಮುಟ್ಟಬಹುದು, ಮನಸಾರೆ ವೆಚ್ಚಮಾಡಬಹುದು!

ಹೊರಗಿನಿಂದ ಬಂದು ಇಲ್ಲಿ ಆರಂಭಿಸಿರುವ ಉದ್ಯಮಗಳು ಈ ವಲಸೆಯ ಪ್ರಮಾಣವನ್ನು ಹೆಚ್ಚಿಸಿವೆ. ಅವರು ಇಪ್ಪತ್ತು ಕೋಟಿ ವಹಿವಾಟು ಇರಿಸಿಕೊಂಡು ಆರಂಭ ಮಾಡಿದಾಗ ಉದ್ಯೋಗದ ಅವಕಾಶಗಳು ಹೆಚ್ಚಾಗಿದ್ದು ಗ್ರಾಮೀಣ ತರುಣರನ್ನು ಆಕರ್ಷಣೆ ಮಾಡಿದುವು. ಹಳ್ಳಿಗಳು ಮುದುಕರ ಪಾಲಾದುವು. ಬೇಸಾಯ ಬಡವಾಯಿತು. ಆದರೆ ಅದೇ ಉದ್ಯಮಗಳು ಯಾಂತ್ರಿಕ ಅನ್ವಯದಿಂದ ಬೆಳೆದು ವಹಿವಾಟಿನ ಪ್ರಮಾಣ ಆರುನೂರ ಎಪ್ಪತ್ತಕ್ಕೆ ಏರಿದಾಗ ಉದ್ಯೋಗಾವಕಾಶದಲ್ಲೂ ಇಳುವರಿ! ವಹಿವಾಟೇ ಹೆಚ್ಚಿತು; ಇರುವ ಉದ್ಯೋಗಗಳು ಮಾತ್ರ ಕಡಮೆಯಾಯಿತು, ಹೆಚ್ಚಲಿಲ್ಲ.

ನಗರಗಳಲ್ಲಿ ನಿರುದ್ಯೋಗ ಸಮಸ್ಯೆ ಮುಗಿಲು ಮುಟ್ಟಿರುವುದು ಹೀಗೆ. ಹಳ್ಳಿಗಳಿಂದ ನಿರ್ವಾಸಿತರು; ಮತ್ತೆ ಹಳ್ಳಿಗಳಿಗೆ ಹೋಗಲಾರರು. ಇಲ್ಲೇ ಇದ್ದರೆ ಬದುಕು ನಡೆಯುವುದು ಹೇಗೆ? ಬದುಕಿಗೆ ಹಣವಂತೂ ಬೇಕಲ್ಲ? ಅಪರಾಧದ ನೂರು ದಾರಿಗಳು ಸಾವಿರ ಅನಕಾಶಗಳು ಇಂಥವರಿಗೇ ಕಾದು ಕೂತಿವೆ! ಕಳ್ಳತನ ಹಳೆಯ ಕಾಲದ್ದಾಯಿತು; ಸುಲಿಗೆ, ಹಾಡುಹಗಲೇ ದರೋಡೆ, ದುಡ್ಡಿಗಾಗಿ ಕೊಲೆ, ಒತ್ತೆಯಿಟ್ಟು ಹಣ ಪಡೆಯಲು ಮಕ್ಕಳ ಅಪಹರಣ, ಶ್ರೀಮಂತರ ಅಪಹರಣ. ಒಂದೇ ಎರಡೆ?

ದುಡ್ಡು ಅನಾಯಾಸವಾಗಿ ಬಂದಿತೆಂದರೆ ಅದನ್ನು ಪೋಲು ಮಾಡುವ ವಿಧಾನಗಳಿಗೂ ಕೊರತೆಯಿಲ್ಲ. ಅನ್ಯಾಯದಿಂದ ಬಂದದ್ದು ಅಸಡ್ಡಾಳದಲ್ಲಿ ಹೋಗುತ್ತದೆಯಲ್ಲವೆ? ಗಿರಾಕಿಗಳ ಮನಸೆಳೆಯಲು ಕೊನೆ ಮೊದಲಿಲ್ಲದೆ ಬರುವ ಜಾಹಿರಾತುಗಳನ್ನು ನೋಡಿದರೆ ಹಣ ಯಾವ ದಾರಿ ಹಿಡಿಯುತ್ತದೆಯೆಂಬುದು ತಿಳಿಯುತ್ತದೆ. ಅನಗತ್ಯವಾದ ಬೇಡಿಕೆಗಳಿಗೇ ಅಗ್ರಪಟ್ಟ. ಹಿಂದೆ ಭೋಗ ಸಾಮಗ್ರಿಯೆಂದಾಗಿದ್ದುದು ಈಗ ಅತ್ಯಗತ್ಯವಾಗಿಬಿಡುತ್ತಿದೆ! ಹಿಂದೆ ಶ್ರೀಮಂತರ ಮೋಜು ಎಂದಾಗಿದ್ದುದು ಈಗ ಸಾಮಾನ್ಯನ ಪಾಲಿಗೂ ಬರುತ್ತಿದೆ. ಭೋಗಕ್ಕೆ ವಸ್ತುವಿದೆಯೆಂದ ಮೇಲೆ ಅದರ ಬಯಕೆ ಇರದೆ ಇರುತ್ತದೆಯೆ?

ಬಯಕೆ ತೀರಿಸಿಕೊಳ್ಳಲು ದುಡ್ಡಿರಬೇಕಷ್ಟೆ. ಅದು ಕಿಸೆಯಲ್ಲಿಯೇ ಇರಬೇಕು; ಕೈಗೆಟಕುವಂತಿರಬೇಕು. ಎಲ್ಲೆಲ್ಲಿಯೋ ನೆಲದಲ್ಲಿ, ಮನೆಯಲ್ಲಿ, ಆರೋಗ್ಯದಲ್ಲಿ, ವಿದ್ಯೆಯಲ್ಲಿ ಸಂಪತ್ತಿದ್ದರೆ ಅದರಿಂದ ಏನಾದಂತಾಯಿತು? ಇಂಗ್ಲಿಷಿನಲ್ಲಿ 'ಲಿಕ್ವಿಡ್ ಕ್ಯಾಷ್' ಎನ್ನುತ್ತಾರಲ್ಲ, ಅದಿರಬೇಕು, ಹರಿಯುವ ಹಣ.

78. ಮಾರುಕಟ್ಟೆಯ ಏರ್ಪಾಟು

ದೇಶದ ಆಡಳಿತದ ಹೊಣೆಯನ್ನು ಹೊತ್ತಿರುವವರಿಗೆ ಇರಬೇಕಾದ ಚಿಂತೆ ದೇಶದ ಬಹುಮಂದಿಯ ನೆಮ್ಮದಿಯನ್ನು ಕುರಿತು. ಬಹುಮಂದಿಗೆ ಅವರವರ ಸೌಕರ್ಯಕ್ಕನುಗುಣವಾಗಿ ಒಳ್ಳೆಯ ಊಟ, ತಲೆಯ ಮೇಲೆ ಸೂರು, ಉಡಲು ಬಟ್ಟೆ, ಒಳ್ಳೆಯ ನೀರು, ಕೈಗೆಟಕುವ ವಾಹನ ಸೌಕರ್ಯ, ಮಕ್ಕಳಿಗೆ ವಿದ್ಯಾಭ್ಯಾಸ, ಆರೋಗ್ಯ ಸಾಧನೆ ಇಷ್ಟು ಅತ್ಯಗತ್ಯವಾದ, ಮಾನವ ಸಹಜವಾದ ಬಯಕೆಗಳು.

ನಮ್ಮ ದೇಶದ ಸಂಪನ್ಮೂಲಗಳನ್ನು ಗಣನೆಗೆ ತಂದುಕೊಂಡರೆ, ಬೇಸಾಯದ ಹರವನ್ನು ಎಣಿಸಿದರೆ, ಬಹುಮಂದಿ ಹಳ್ಳಿಗಳಲ್ಲೇ ಬದುಕಿರುವುದನ್ನು ಗಮನಿಸಿದರೆ, ನಮ್ಮ ಆರ್ಥಿಕ ಉತ್ಪಾದನಾಶಕ್ತಿಗೆ ಇದೇನು ಕಷ್ಟವಲ್ಲ. ಜನಸಂಖ್ಯೆ ಹೆಚ್ಚು ಎಂಬುದನ್ನು ಗಮನಕ್ಕೆ ತಂದುಕೊಂಡರೂ ಅತ್ಯಗತ್ಯವಾದ ಬಯಕೆಗಳನ್ನು ತೀರಿಸುವುದು ಅಸಾಧ್ಯವೇನಲ್ಲ.

ಆದರೆ ನಮ್ಮ ಆಡಳಿತ ಏದುಸಿರು ಎಳೆಯುತ್ತಿರುವುದೇಕೆ? ಆರ್ಥಿಕ ಬೆಳವಣಿಗೆಯೆಂಬ ಭ್ರಮೆ ಕಾಡುತ್ತಿರುವುದರಿಂದ, ದೇಶಕ್ಕೆ ಅನುಕೂಲವಾದ, ಸಹಜವಾದ ಆರ್ಥಿಕ ವ್ಯವಸ್ಥೆ ಏನೆಂಬ ಅರಿವು ಆಡಳಿತಕ್ಕೆ ಇಲ್ಲದೆ ಇರುವುದರಿಂದ. ಎಲ್ಲರಿಗೂ ಹೊರಗಿನಿಂದ ಬಂದ ಕಾರ್ ಬೇಕು, ಕಂಪ್ಯೂಟರ್ ಬೇಕು, ದೂರದರ್ಶನ ಬೇಕು, ಹವಾನಿಯಂತ್ರಣ ವ್ಯವಸ್ಥೆಯಿರಬೇಕು, ರಾಸಾಯನಿಕ ಗೊಬ್ಬರ ಬೇಕು, ವಿಮಾನ ಪ್ರಯಾಣ ಬೇಕು, ಆಕರ್ಷಕ ಅಂಗಡಿಗಳ ಸಾಲು ಕಟ್ಟಿಸಿರಬೇಕು, ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿದ ಆಸ್ಪತ್ರೆಯಿರಬೇಕು ಎಂದು ಆಡಳಿತಕ್ಕೆ ಯಾರು ಮನವಿ ಸಲ್ಲಿಸಿದ್ದಾರೆ?

ಅದೇನೋ ಆಡಳಿತ ಮಾಡುವವರಿಗೆ ಇದೊಂದು ಗೀಳು. ಆಧುನಿಕತೆಯೆಂದರೆ ಇವೆಲ್ಲ ಇರಲೇಬೇಕೆಂದು ಅವರ ಹಟ. ದೇಶ ಹೀಗಿದ್ದರೆ ಪಾಶ್ಚಾತ್ಯ ದೇಶಗಳೊಂದಿಗೆ ಹೆಗಲು ಕೊಟ್ಟು ನಿಲ್ಲಬಹುದೆಂದು ಅವರ ವಿಶ್ವಾಸ. ತಮಗೆ ಈ ಭೋಗ ಜೀವನ ಸಾಧ್ಯವಾಗಿರುವುದೇ ಈ ಭ್ರಮೆಗೆ ಮೂಲವೆನ್ನಿ. ಎಲ್ಲರಿಗೂ ಇದನ್ನು ಒದಗಿಸಬೇಕೆಂಬ ಬಯಕೆ ಅವರಿಗೆ ಪ್ರಾಮಾಣಿಕವಾಗಿ ಇದ್ದೀತೆ ಎನ್ನುವುದು ಅನುಮಾನವೇ. ಒಂದು ವೇಳೆ ಇದ್ದರೂ ಅದನ್ನು ಆಗಮಾಡಿಸುವುದು ಹೇಗೆಂಬ ಜಾಣತನ ಇರುವುದು ಸಂಶಯವೇ.

ದೊಡ್ಡ ದೊಡ್ಡ ಉದ್ಯಮಗಳಿಂದ, ಪರರಾಷ್ಟ್ರಗಳ ನೆರವಿನಿಂದ, ಹೊರಗಿನವರ ಬಂಡವಾಳದಿಂದ ನಮ್ಮ ಆರ್ಥಿಕ ಬೆಳವಣಿಗೆಯಾದೀತು ಎಂಬ ತಿಳಿವಳಿಕೆಯು ಆಡಳಿತದವರಿಗೆ ಐವತ್ತು ವರ್ಷಗಳಿಂದಲೂ ಬೆಳೆದು ಬಂದಿದೆ. ರಾಜಕೀಯವಾಗಿ ಸ್ವತಂತ್ರವಾದ ದೇಶ ಆರ್ಥಿಕವಾಗಿ, ಸಾಮಾಜಿಕವಾಗಿ ಪರತಂತ್ರವಾಗುತ್ತಿರುವುದು

ಅವರ ಗಮನಕ್ಕೆ ಬಂದಿಲ್ಲ. ಎಲ್ಲ ರಾಷ್ಟ್ರಗಳ ಉದ್ಯಮ ಸಂಸ್ಥೆಗಳು ಇಲ್ಲಿ ತಮ್ಮ ವ್ಯಾಪಾರದ ಬಲೆಯನ್ನು ಬೀಸಿ ಜನರನ್ನು ಮರುಳು ಮಾಡಿ ಹಗಲು ದರೋಡೆ ಮಾಡುತ್ತಿರುವುದು ಅವರಿಗೆ ಪ್ರಮಾದವೆನಿಸಿಲ್ಲ.

ಉದ್ಯಮದ ಅಂಗವಾಗಿ ಹೊರಚೆಲ್ಲಿದ ರಾಸಾಯನಿಕ ವಿಷ ನಮ್ಮ ಜನರ ಆರೋಗ್ಯವನ್ನು ಕೆಡಿಸಿದರೆ ಹೊರರಾಷ್ಟ್ರದ ಉದ್ಯಮಿ ಬಂಡವಾಳಗಾರರಿಗೆ ಯಾವ ಆತಂಕ? ನಮ್ಮ ಜನರ ಹಿತಚಿಂತನೆ ನಮ್ಮ ಆಡಳಿತಗಾರರಿಗೇ ಇಲ್ಲದಿರುವಾಗ ಹೊರಗಿನ ವ್ಯಾಪಾರಿಗೆ ಇದ್ದೀತೆಂದು ಭಾವಿಸಬೇಕೆ? ಅವನಿಗೆ ಬೇಕಾದುದು ಇಲ್ಲೊಂದು ಮಾರುಕಟ್ಟೆ. ಇದಕ್ಕಾಗಿ ಆಡಳಿತವನ್ನು ಹೇಗಾದರೂ ತನ್ನ ವಶ ಮಾಡಿಕೊಂಡರಾಯಿತು. ತಾನು ಜನರನ್ನು ಸುಲಿಗೆ ಮಾಡುವ ಪರವಾನಿಗೆಯನ್ನು ಪಡೆದುಕೊಂಡರಾಯಿತು. ಇವರಿಗೆ ಅನುಕೂಲವಾದ ಮಂದಿ ಆಡಳಿತದಲ್ಲಿ ಅವರಿಗೆ ಕಾಣಿಸಿಕೊಳ್ಳುವುದೂ ಕಷ್ಟವೇನಿಲ್ಲ. ಇನ್ನೇನು ಬೇಕು?

79. ಬಯಕೆ-ಪೂರೈಕೆ

ಕನ್ನಡಿಯೊಳಗಿನ ಗಂಟು ಕಂಡು ಅದಕ್ಕೆ ಕೈಚಾಚುವವಗೆ ದೊರಕುವುದೆ? ಕನ್ನಡಿಯ ಗಂಟೆಂದರೆ ದಿಟವಾದುದಲ್ಲ; ಬಯಕೆಯ ಬಲದಿಂದ ತೋರಿಕೊಳ್ಳುವುದು. ಬಯಕೆಗೂ ದಿಟವಾಗಿ ಇರುವುದಕ್ಕೂ ನಡುವೆ ಇರುವ ಅಂತರವನ್ನು ಅರಿತುಕೊಳ್ಳುವುದು ಜಾಣತನವಲ್ಲವೆ?

ಬಯಕೆಯಿರಬೇಕಾದುದು ಸರಿಯೇ. ಬಯಸುವುದೂ ಸಹಜವೇ. ಬಯಕೆಯಿಲ್ಲದೆ ಯಾರು ಏನನ್ನು ತಾನೆ ಮಾಡಿಯಾರು? ಆದರೆ ಬಯಕೆ ಹಗಲುಗನಸಾಗಬಾರದು, ಮುಗಿಲ ಮಲ್ಲಿಗೆಯಾಗಬಾರದು. ವಾಸ್ತವಿಕತೆಯ ಚೌಕಟ್ಟಿನಲ್ಲಿ ಬಯಕೆಯಿದ್ದರೆ ಅದು ಕೈಗೂಡುವ ಸಂಭವವಿರುತ್ತದೆ. ಹಾಗಿಲ್ಲವಾದರೆ ಬಯಕೆಯೂ ವ್ಯರ್ಥ; ಅದನ್ನು ಸಾಧಿಸಿಕೊಳ್ಳುವ ಹವಣಿಕೆಯೂ ವ್ಯರ್ಥ.

ಕನ್ನಡಿಯೊಳಗಿನ ಗಂಟೆಂದರೆ ಆಕಾರವಿದೆ, ದ್ರವ್ಯವಿಲ್ಲ. ಹೊಳೆಯುತ್ತದೆ, ಆಕರ್ಷಕವಾಗಿರುತ್ತದೆ. ಆದರೆ ಕೈಗೆ ಎಟುಕಲಾರದು; ಕೈಚಾಚಿದರೆ ಕನ್ನಡಿಯ ಗಾಜು ಅಡ್ಡ ಬರುತ್ತದೆ. ಗಂಟೇನೋ ಇದ್ದಲ್ಲಿಯೇ ಇರುತ್ತದೆ; ಕಾಣಿಸುವಲ್ಲಿಯೇ ಕಾಣಿಸುತ್ತದೆ; ಕಾಣಿಸುವಂತೆಯೇ ಇರುತ್ತದೆ ಕನ್ನಡಿಯಲ್ಲಿ ಮಾತ್ರ.

ಕನ್ನಡಿಯೊಳಗಿನ ಗಂಟಿಗೆ ಮೂಲವಾಗಿ ದಿಟವಾದ ಗಂಟೊಂದಿರಬೇಕಲ್ಲವೆ? ಅದರೆ ಇಲ್ಲಿನ ದಿಟವಾದ ಗಂಟು ಸನಿಹದಲ್ಲಿಲ್ಲ. ನಮ್ಮ ಮನಸ್ಸಿನೊಳಗೆ ಅಡಗಿರುವ ಬಯಕೆಯ ಗಂಟು ಕನ್ನಡಿಯಲ್ಲಿ ಪ್ರತಿಫಲಿಸುತ್ತಿದೆ ಅಷ್ಟೆ. ಬಯಕೆಯ ಗಂಟೂ

ಗಂಟೇ ಅಲ್ಲವೆ? ಅದನ್ನು ಇಲ್ಲವೆನ್ನಲಾದೀತೆ? ಆದರೆ ಅದರ ದ್ರವ್ಯ ಭೌತಿಕವಾದುದಲ್ಲ, ಮಾನಸಿಕವಾದುದು, ಈ ಅಂತರವನ್ನು ಅರಿಯಬೇಕಷ್ಟೆ.

ನಮ್ಮೊಳಗಿರುವ ಭಾವನೆಯನ್ನೇ ದಿಟವಾಗಿ ಹೊರಗೆ ಕಂಡುಕೊಂಡರೆ ಅದಕ್ಕೆ ವಾಸ್ತವಿಕತೆಯೊದಗಿ ಬರುವುದಿಲ್ಲ. ಹೊರಗಿನ ಹಣದ ಗಂಟು ಸುಮ್ಮನೆ ಕಂಡು ಕೈಗೆತ್ತಿಕೊಳ್ಳುವುದಲ್ಲ. ಅದಕ್ಕಾಗಿ ಶ್ರಮಪಡಬೇಕಾಗುತ್ತದೆ. ದುಡಿಮೆಯ ಫಲವಾಗಿ ಪಡೆದುಕೊಂಡ ಗಂಟು ಕನ್ನಡಿಯೊಳಗೆ ಕಾಣುವ ಗಂಟಿನಂತೆ ಆಕರ್ಷಕವಾಗಿರಲಾರದು, ಅಷ್ಟು ಭಾರಿಯಾಗಿಯೂ ಇರಲಾರದು. ಆದರೆ ಇದು ದಿಟವಾದ ಗಂಟು; ಕೈಚಾಚಿದರೆ ಮುಟ್ಟಬಹುದು, ಅನುಭವಿಸಬಹುದು; ಕೈಯೆತ್ತಿ ಬೇರೆಯವರಿಗೆ ನೀಡಬಹುದು.

'ಕನಸಿನಲ್ಲಿ ಕಂಡ ಬೆಳೆಯನ್ನು ಕೂಡಿಕೊಳ್ಳಲು ಎಚ್ಚೆತ್ತ ಮೇಲೆ ಗೋಣಿಯನ್ನು ಹರವುವುದೆ' ಎಂದು ಒಂದು ಸಾಮತಿಯಿದೆ. ಕನಸಿನಲ್ಲಿ ಕಂಡದ್ದೂ ಬಯಕೆಯ ಮಡಿಲಿನಿಂದಲೇ ಎದ್ದುಬಂದದ್ದು; ಅಲ್ಲಿ ಬಯಕೆಗೆ ಕಡಿವಾಣವಿರದು, ಅಡೆತಡೆಯಿರದು. ಎಚ್ಚರವಾದ ಮೇಲೆ ಕನಸಿನ ರಾಜ್ಯವಿಲ್ಲ; ಗಟ್ಟಿಯಾದ ಸಂಗತಿಗಳು, ದಿಟವಾದ ವ್ಯವಹಾರ. ಬರಿಯ ಬಯಕೆ ಏನನ್ನೂ ಮಾಡಲಾರದು.

ಕನ್ನಡಿಯೊಳಗೆ ಅಥವಾ ಕನಸಿನಲ್ಲಿ ಕಾಣುವುದೊಂದೇ ಕೆಲಸ ನಡೆಯುವುದು. ಬಯಕೆ ಹೇಗಿದ್ದರೆ ಹಾಗೆ ಅದರ ಕಾಣ್ಕೆ ಕನ್ನಡಿಯೊಳಗೆ ಅಥವಾ ಕನಸಿನಲ್ಲಿ. ಅಲ್ಲಿ ವಿಚಾರವೇನಿರದು. ಬಯಕೆ ಸರಿಯಾದುದೆ? ಸಾಧ್ಯವಾದುದೆ? ಅದರಿಂದ ತೊಂದರೆಯೇನಾದರೂ ಒದಗೀತೆ? ತನಗಾಗಲಿ ಇತರರಿಗಾಗಲಿ ಒಳಿತಾದೀತೆ? ಪಡುವ ಶ್ರಮಕ್ಕೆ ಪಡೆದುಕೊಳ್ಳುವ ಫಲ ಸರಿದೂಗೀತೆ? ಬಯಕೆ ಒಂದು ವೇಳೆ ಕೈಗೂಡಿದರೂ ನಾಲ್ಕುಕಾಲ ಇರುವಂಥದೆ? ಇಂಥ ವಿಚಾರ ಇರಬೇಕಲ್ಲವೆ?

ಹಣವನ್ನು ಗಳಿಸುವುದು ಯಾರಿಗೆ ಬೇಡ? ಆದರೆ ಗಳಿಕೆಗೂ ಬಯಕೆಗೂ ಇರುವ ಅಂತರವೆಂಥದು? ಗಳಿಕೆಯ ಸಾಧ್ಯಾಸಾಧ್ಯತೆಯನ್ನೂ ಮಿತಿಯನ್ನೂ ಅರಿತುಕೊಂಡು ಬಯಕೆಯನ್ನೆ ಮಾರ್ಪಡಿಸಿಕೊಳ್ಳುವುದು ಜಾಣತನ. ತನ್ನ ಬಯಕೆ ಹೇಗಾದರೂ ಕೈಗೂಡಲೇಬೇಕೆಂದು ಹಟ ಹಿಡಿದರೆ ಬಯಕೆಗೂ ಪೆಟ್ಟು, ಮಾಡುವ ಪ್ರಯತ್ನಕ್ಕೂ ಕೇಡು. ಕನ್ನಡಿಯ ಗಂಟು ಕಾಣಬೇಕಷ್ಟೆ; ಮುಟ್ಟಹೋದರೆ ಸ್ವಾರಸ್ಯವಿಲ್ಲ.

80. ತನಗೇ ಬುದ್ಧಿಯಿರದಿದ್ದರೆ?

'ಏರಿ ಕುಳಿತ ಕೊಂಬೆ ಎರಡಾಗಿ ಮುರಿದರೇನಯ್ಯ?' ಎಂದು ಪುರಂದರದಾಸರೊಮ್ಮೆ ಚಿಂತೆಗೊಳಗಾದರು.

ಕೊಂಬೆಯನ್ನೇರಿ ಕುಳಿತವರಿಗೆ ಈ ಚಿಂತೆಯಿರುವುದೋ ಇಲ್ಲವೋ. ಅದನ್ನು ನೋಡುತ್ತಿರುವವರಿಗೆ ಒಮ್ಮೊಮ್ಮೆ ಕಾತರವಿರುತ್ತದೆ. ಕೊಂಬೆ ಮುರಿಯುವುದು ಏರಿ ಕುಳಿತವರಿಗೆ ತಿಳಿಯುವುದಕ್ಕಿಂತ ಬೇಗನೆ ನೋಡುವವರಿಗೆ ತಿಳಿಯುತ್ತದೆ. ಏರಿ ಕುಳಿತವರಿಗೆ ತಿಳಿಯುವುದು ಅದು ಮುರಿದು ಬಿದ್ದಾಗಲೆ.

ನೋಡುವವರು ಎಚ್ಚರ ಹೇಳಿದಾಗ ಅದನ್ನು ಕೇಳಿ ತಿಳಿದುಕೊಳ್ಳುವಷ್ಟು ತಾಳ್ಮೆಯೂ ಜಾಣತನವೂ ಇರದಿದ್ದರೆ, ದೊಪ್ಪೆಂದು ಬೀಳುವುದು ತಪ್ಪದು. ತನಗೇ ಬುದ್ಧಿಯಿರದಿದ್ದರೆ, ಬುದ್ಧಿಯ ಮಾತನ್ನಾದರೂ ಕೇಳಬೇಕಲ್ಲವೆ?

ಹಣ ಗಳಿಕೆಯ ಮಂಪರದಲ್ಲಿರುವವರು ಹೀಗೆ ಕೊಂಬೆಯನ್ನೇರಿ ಕುಳಿತವರೇ. ಕೊಂಬೆಯು ತಮ್ಮ ಭಾರವನ್ನು ತಡೆದೀತೋ ಇಲ್ಲವೋ ಎಂದು ಅವರು ತಾವೇ ಕಂಡುಕೊಳ್ಳಲಾರರು. ಹಣವನ್ನು ಗಳಿಸಬೇಕೆಂಬ ಹುಮ್ಮಸದಲ್ಲಿ ಸಾವಧಾನ ವಿರುವುದಿಲ್ಲ. ಬಯಕೆಯು ಬೀಗುತ್ತಿರುವಾಗ ಎಚ್ಚರವೂ ಕಡಮೆಯೇ ಎನ್ನಿ!

ತಿಳಿದವರ ಬಳಿ ಹೋಗಿ ತಿಳಿವಳಿಕೆಯನ್ನು ಪಡೆದುಕೊಳ್ಳಬೇಕೆಂಬ ವಿನಯವಾದರೂ ಇದ್ದರೆ ಆದೀತು. ತಿಳಿದವರು ಹತ್ತಿರ ಇರದಿದ್ದರೂ ಸುಭಾಷಿತಗಳಿವೆ, ಶಾಸ್ತ್ರವಿದೆ, ಹಿರಿಯರ ಬರವಣಿಗೆಗಳಿವೆ. ಜಾಣರಾಗಲು ದಾರಿಯೇ ಇಲ್ಲವೆ? ಕಂಡುಕೊಳ್ಳುವ ತವಕವಿದ್ದರೆ ದಾರಿಯಿದ್ದೇ ಇರುತ್ತದೆ, ಕಂಡೂ ಬರುತ್ತದೆ. ಬೇಡದಿದ್ದವರಿಗೆ ಇಲ್ಲ, ಅಷ್ಟೆ.

ಆದರೆ ಹಣ ಬರಲು ತೊಡಗಿತೆಂದರೆ ಅದೊಂದು ಭಂಡಧೈರ್ಯ ಬಂದು ಬಿಡುತ್ತದೆ, ಅದೊಂದು ಯುಕ್ತಿ ಏರ್ಪಡುತ್ತದೆ. ಇಷ್ಟು ಹಣದಿಂದ ಒಳಿತಾದ ಮೇಲೆ, ಅನುಕೂಲವಾದ ಮೇಲೆ ಇನ್ನಷ್ಟು ಹಣದಿಂದ ಇನ್ನೂ ಹೆಚ್ಚು ಒಳಿತಾಗಬೇಕು, ಅನುಕೂಲವಾಗಬೇಕು, ಕೆಡುಕಾಗುವುದು ಹೇಗೆ ಸಾಧ್ಯ? ಹೆಚ್ಚು ಹಣದಿಂದ ಕೆಡುಕಾಗುವುದಿದ್ದರೆ ಇಷ್ಟೊಂದು ಮಂದಿ ಹಣಕ್ಕೆ ಹಾತೊರೆಯುತ್ತಿದ್ದರೆ? ಲೋಕದಲ್ಲಿ ಹಣಕ್ಕಿರುವ ಆಕರ್ಷಣೆ ಉಳಿದ ಯಾವುದಕ್ಕಿದೆ? ಮೊದಲು ಹಣ, ಆಮೇಲೆ ಉಳಿದದ್ದೆಲ್ಲ.

ಹಣ ಮಾಡಿಕೊಂಡವರೆಲ್ಲ ತೊಂದರೆಗೆ ಸಿಲುಕಿದ್ದಾರೆಯೆ? ಯಾರೋ ಒಬ್ಬಿಬ್ಬರು ಹಾಗೆ ಕಷ್ಟಕ್ಕೆ ಪಕ್ಕಾಗಿದ್ದಾರೆಂದರೆ ಎಲ್ಲರಿಗೂ ಅದೇ ಪಾಡೆಂದು ಭಾವಿಸಲೇಕೆ? ಅವರವರ ಅದೃಷ್ಟ ಹೇಗಿದ್ದರೆ ಹಾಗೆ! ಅದನ್ನು ಬಲ್ಲವರು ಯಾರು?

ಎಲ್ಲರೂ ಹೆದರಿ ಹೌಹಾರಿ ಬೀಳುವ ಅಗತ್ಯವೇನು? ಕಾನೂನು ಇದ್ದಂತೆ ನಡೆದವರು ನಡೆಯುತ್ತಲೆ ಇರಬೇಕು. ಅವರಿಗೆ ಬೆಳಕು ಹರಿಯುವುದೇ ಇಲ್ಲ. ನ್ಯಾಯ ನೀತಿ ಎಂದು ಕೂತವರು ಕೂತೇ ಇರಬೇಕು, ಭಾಗ್ಯದ ಬಾಗಿಲು ಅವರಿಗೆ ತೆರೆಯುವುದೇ ಇಲ್ಲ. ಪಾಪದವರು!

ಈ ಯುಕ್ತಿಗೆ ಪ್ರತಿಯುಕ್ತಿಯೇನಿದೆ? ಇದು ದಾಸರ ಚಿಂತೆ. ಕೊಂಬೆಯೇರಿ ಕುಳಿತವರು ಮೇಲೇ ಇರುವರೆಂಬ ನೆಚ್ಚಿಗೆ ದಾಸರಿಗಿಲ್ಲ. ಕೊಂಬೆಯು ಗಟ್ಟಿಯಾಗಿದೆಯೋ ಮೊದಲು ನೋಡಿ ಅನಂತರ ಅದನ್ನೇರಲು ಹೊರಡು ಎಂದು ಅವರ ಕಿವಿಮಾತು. ಏರಿ ಕುಳಿತಮೇಲೆ ಕೊಂಬೆ ಗಟ್ಟಿಯೋ ಟೊಳ್ಳೋ ಎಂದು ಆಲೋಚನೆಮಾಡಿ ಪ್ರಯೋಜನವಿರದು. ಏರಬೇಕಾದರೆ ಗಟ್ಟಿಕೊಂಬೆಯನ್ನೇ ಏರು. ಅದರ ತಾತ್ಪರ್ಯ ಹಣವನ್ನು ಗಳಿಸುವುದಿದ್ದರೆ, ನ್ಯಾಯವಾದ ದಾರಿಯನ್ನೇ ಹಿಡಿ. ನೀತಿಯನ್ನು ಬಿಡದೆ ದುಡ್ಡು ಮಾಡಿಕೋ. ಆ ಹಣ ನಿನಗೆ ಹಗೆಯಾಗುವುದಿಲ್ಲ, ನಿನ್ನ ಒಳಿತಿಗೇ ಆಗುತ್ತದೆ.

ಹಾಗಲ್ಲದೆ, ದಾರಿ ಯಾವುದಾದರಿರಲಿ ಹಣ ಬಂದರೆ ಸಾಕು ಎಂದರೆ, ಕೊಂಬೆ ಹೇಗಾದರಿರಲಿ ಅದನ್ನೇರಿ ಕುಳಿತುಕೋ ಎಂದಂತೆ. ಆಗ ಏರಿ ಕುಳಿತ ಕೊಂಬೆ ಎರಡಾಗಿ ಮುರಿದರೇನು ಮಾಡುವುದು? ಕೆಳಗೆ ಬೀಳದೆ ಮತ್ತೇನು ಗತಿಯಿದೆ? ಹಾಗೆ ಬಿದ್ದವನಿಗೆ ಮತ್ತೆ ಕೊಂಬೆಯೇರುವ ಧೈರ್ಯವಾದರೂ ಉಳಿದಿರುವುದೋ? ಬಿಸಿ ಹಾಲನ್ನು ನಾಲಗೆಗೆ ಹಚ್ಚಿಕೊಂಡ ತೆನಾಲಿ ರಾಮಕೃಷ್ಣನ ಬೆಕ್ಕು ತಣ್ಣಗಿರುವ ಹಾಲಿಗೂ ಅಂಜಿ ಓಡಿಹೋದಂತೆ! ಕೆಡುವುದು ಸುಲಭ, ಕೆಟ್ಟ ಮೇಲೆ ಬುದ್ಧಿ ಬರುವುದು ಕಷ್ಟ.

81. ಹಣ ಹಿಂದೆ, ಬಯಕೆ ಮುಂದೆ

'ಸಿರಿ ದೊರೆಕೊಂಡೊಡೆ ಮತ್ತಂ ತಿರಿಯುತ್ತಿರಲೇಕೆ?' ಎಂದು ಒಬ್ಬ ಕವಿ ಕೇಳುತ್ತಾನೆ. ಸಿರಿ ಬಂದ ಮೇಲೆ ತಿರಿಯುವ ಕಾರಣವೇನು? ತಿರಿಯುವುದು ತಪ್ಪಲೆಂದೇ ಅಲ್ಲವೆ ಸಿರಿಯನ್ನು ಬಯಸುವುದು?

ಆದರೆ ಸಿರಿಯನ್ನು ಬಯಸುವವನು ಅಷ್ಟಕ್ಕೇ ಸುಮ್ಮನಾಗುವುದಿಲ್ಲ. ಇನ್ನಷ್ಟು ಸಿರಿ, ಮತ್ತಷ್ಟು ಸಿರಿ ಎಂದು ಬಾಯಿ ಬಿಡುತ್ತಾನೆ. ಸಿರಿ ಬಂದೊದಗಿದ ಕಡೆ ಮತ್ತೆ ಸಿರಿ ಸೇರುವುದೂ ಸುಲಭವೇ ಎನ್ನಿ. ಹಳ್ಳವಿದ್ದಲ್ಲಿ ನೀರು ಸೇರದೆ?

ಇದೊಂದು ವೈಪರೀತ್ಯ. ಇಷ್ಟು ಸಿರಿ ಸಾಕು; ಇಷ್ಟರಲ್ಲಿ ತೃಪ್ತಿಪಟ್ಟುಕೊಳ್ಳುತ್ತೇನೆ ಎನ್ನುವ ಸಿರಿವಂತ ಇರಲಾರ. ಇದ್ದವರಿಗೆ ಇನ್ನಷ್ಟರಾಸೆ; ತೃಪ್ತಿಯೂ ಮುಂದೆ ಮುಂದೆ ಓಡುತ್ತದೆ; ಕೈಗೆಟಕುವುದಿಲ್ಲ. ಸಿರಿ ಯಾರನ್ನಾಗಲಿ ತಣಿಸಲಾರದು.

ಐಶ್ವರ್ಯದ ಸ್ವಭಾವವೇ ಹಾಗೆಂದು ಹೇಳಬಹುದೋ ಏನೋ! ಇಂದ್ರಿಯಗಳ ಸುಖಕ್ಕೆ, ದೇಹದ ಅನುಕೂಲಕ್ಕೆ, ತನ್ನನ್ನು ನಂಬಿದವರ ಹಿತಕ್ಕೆ, ಮುಂದಿನವರ ಆಸರೆಗೆ ಅಷ್ಟಿಷ್ಟು ಸಂಪತ್ತು ಬೇಡವೆ? ನಾಳೆಗೆಂದು ಒಂದಿಷ್ಟನ್ನಾದರೂ ಕೂಡಿಡಬೇಕಲ್ಲ? ಇವೊತ್ತಿನ ಕತೆ ಮುಗಿದರೆ ಆಯಿತೆ?

ಹಣದ ಬಯಕೆ ಮೂಡಿಕೊಳ್ಳುವುದೇ ಹೀಗೆ. ಇದರಲ್ಲಿ ಯಾವ ದೋಷವನ್ನು ಯಾರೂ ಎಣಿಸಲಾರರು. ಸಂಸಾರಿಗಳೆಂದಾದವರಿಗೆ ಸಹಜವಾದ ಪ್ರವೃತ್ತಿಯೇ ಇದು. ಆದರೆ ಇದು ಇಷ್ಟಕ್ಕೇ ನಿಲ್ಲುವುದಿಲ್ಲವೆಂಬುದು ಮಾತ್ರ ಆತಂಕಕ್ಕೆಡೆ ಮಾಡಿಕೊಡುತ್ತದೆ.

ಬಯಕೆಯನ್ನು ಪೂರೈಸಲೆಂದು ಹಣವನ್ನು ಗಳಿಸುತ್ತೇವೆ; ಹಿಂದಿದ್ದ ಬಯಕೆಗಳೇನೋ ತೀರಿದುವೆನ್ನಿ. ಆದರೆ ಹಣದಿಂದ ಒದಗುವ ಬಯಕೆಗಳೂ ಇರುತ್ತವೆಯಲ್ಲ? ಇವೆಲ್ಲ ಹೊಸ ಬಯಕೆಗಳು. ಇವನ್ನು ತೀರಿಸಲು ಇನ್ನಷ್ಟು ಹಣಬೇಕಾಗುತ್ತದೆ.

ಇದ್ದ ರೋಗವನ್ನು ಕಳೆದುಕೊಳ್ಳಲು ಮದ್ದೊಂದನ್ನು ಮಾಡುತ್ತೇವೆ; ವೈದ್ಯರನ್ನು ಕಾಣುತ್ತೇವೆ. ಅವರಿಂದ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತೇವೆ. ಆ ಶಾಸ್ತ್ರ ಈಗ ಬೇಕಾದಂತೆ ಬೆಳೆದಿರುವುದರಿಂದ ಯಾವ ರೋಗಕ್ಕಾದರೂ ಸಿದ್ಧೌಷಧವಿದೆ. ಅಂಥ ಔಷಧದಿಂದ ಇರುವ ರೋಗ ಪರಿಹಾರವಾಯಿತೆಂದೇ ಇಟ್ಟುಕೊಂಡರೂ, ಅದರ ಬಲದಿಂದಾಗಿ ಇಲ್ಲದ ರೋಗಗಳು ತಲೆದೋರಿಕೊಂಡರೆ ಸೋಜಿಗವೇನಿಲ್ಲ. ಆಧುನಿಕ ವೈದ್ಯರ ಚಿಕಿತ್ಸಾ ಪದ್ಧತಿಯಲ್ಲೇ ಈಗ ಇಂಥ ರೋಗಗಳ ದೊಡ್ಡ ಪಟ್ಟಿಯಿದೆ.

ಸಿರಿಯ ವಿಚಾರವೂ ಹೀಗೆಯೇ. ಬಯಕೆಗಳನ್ನು ತೀರಿಸಿಕೊಳ್ಳಲು ಹಣ ಬೇಕೇ ಬೇಕು. ಆದರೆ ಹಣವನ್ನು ಗಳಿಸಿಕೊಳ್ಳುವಾಗಲೆ, ಹಿಂದಿನ ಬಯಕೆಗಳು ಪೂರೈಸುತ್ತಿದ್ದಂತೆಯೆ, ಹೊಸ ಬಯಕೆಗಳು ಕಾಣಿಸಿಕೊಳ್ಳುತ್ತವೆ. ಅವನ್ನು ತೀರಿಸಿಕೊಳ್ಳಲು ಮತ್ತಷ್ಟು ಹಣ ಬೇಡವೆ? ಹಳೆಯ ರೋಗಗಳನ್ನು ಕಳೆಯುವ ಮದ್ದು ಹೊಸ ರೋಗಗಳನ್ನುಂಟು ಮಾಡಿದರೆ ಅವಕ್ಕೆ ಮತ್ತೆ ಮದ್ದು ಮಾಡಬೇಡವೆ?

ಈ ಸರಮಾಲೆ ಮುಗಿಯುವುದು ಹೇಗೆ? ಬಯಕೆಗಳನ್ನು ನೀಗಿಸಿಕೊಳ್ಳಲೆಂದು ಗಳಿಸಿದ ಹಣ ಮತ್ತಷ್ಟು ಬಯಕೆಗಳನ್ನು ಒದಗಿಸುತ್ತಿದ್ದರೆ, ಎಷ್ಟು ಹಣವಿದ್ದರೆ ತಾನೆ ತೃಪ್ತಿಯೆಂಬುದು ಬಂದೀತು? ನೆಮ್ಮದಿಯೆಂಬುದು ಕಾಣಿಸಿಕೊಂಡೀತು?

ಹೀಗಾಗಿ ಸಿರಿಯನ್ನು ದೊರಕಿಸಿಕೊಳ್ಳುವ ಮೊದಲೂ ತಿರಿಯಬೇಕು, ದೊರಕಿಸಿಕೊಂಡ ಮೇಲೂ ತಿರಿಯುತ್ತಿರಬೇಕು. ಸಿರಿಯಿಲ್ಲದ ತಿರಿಪೆ ಅದು, ಸಿರಿಯಿದ್ದು ತಿರಿಪೆ ಇದು. ಸಿರಿಯಿರಲಿ ಇಲ್ಲದಿರಲಿ, ತಿರುಪೆಯಂತೂ ತಪ್ಪಿದ್ದಲ್ಲ.

82. ಹಣದ ಹತ್ತು ಹಾದಿ

ದುಡಿದು ಸಂಪಾದಿಸುವ ಶಕ್ತಿ ಎಲ್ಲರಿಗೂ ಒಂದೇ ಬಗೆಯಾಗಿರುವುದಿಲ್ಲ. ಕೆಲವರಿಗೆ ಕೆಲವು ವಿಚಾರದಲ್ಲಿ ಸಾಮರ್ಥ್ಯ. ಅದಕ್ಕೆ ಬೇಡಿಕೆಯಿದ್ದರೆ ಅವರಿಗೆ ದುಡ್ಡು.

ಯಾವ ಕೆಲಸಕ್ಕೆ ಹೆಚ್ಚು ಹಣ ಸಂಪಾದಿಸುವ ಗುಣವಿದೆ? ಕಾಲ ಕಾಲಕ್ಕೆ ಇದು ಬದಲಾಗುತ್ತದೆ. ಒಂದು ಕಾಲಕ್ಕೆ ಸರಕಾರೀ ನೌಕರಿಗೆ ಮಾನ್ಯತೆಯಿದ್ದಿತು. ಮತ್ತೊಂದು ಕಾಲದಲ್ಲಿ ವೈದ್ಯರಿಗೆ, ಇನ್ನೊಂದರಲ್ಲಿ ಇಂಜಿನಿಯರರಿಗೆ. ಈಗ ಕಂಪ್ಯೂಟರ್ ಉದ್ಯಮಿಗೆ. ಹೀಗೆ ಕಾಲಕಾಲಕ್ಕೆ ಬೇರೆ ಬೇರೆ.

ಆದರೆ ಜನರಿಗೆ ಅಗತ್ಯವೆನಿಸಿದ ಉದ್ಯಮ ಸಾಮಗ್ರಿಗಳ ಉತ್ಪಾದನೆ, ಮಾರಾಟ ವಹಿವಾಟು. ಇದರಲ್ಲಿ ಹಣ ಗಳಿಸುವ ಸಂಭವ ಯಾವ ಕಾಲಕ್ಕೂ ಹೆಚ್ಚಿನದೇ. ಯಾವುದೇ ಸಮಾಜವಾಗಲಿ, ವರ್ತಕರಿಗೆ, ಉದ್ಯಮಿಗಳಿಗೆ ಹಣ ಸಂಪಾದಿಸಲು ಇರುವ ಅವಕಾಶ ಬೇರೆಯವರಿಗೆ ಇರಲಾರದು.

ಇದನ್ನು ಕಂಡು ಬೇರೆ ಉದ್ಯೋಗಾವಕಾಶಗಳನ್ನೂ ಮಾರಾಟದ ಮಳಿಗೆಗಳಾಗಿ ಮಾರ್ಪಡಿಸುವ ಹವಣಿಕೆ ಹರಡಿಕೊಳ್ಳುತ್ತಿದೆ. ವಿದ್ಯಾಭ್ಯಾಸವೂ ಒಂದು ಮಾರಾಟದ ವ್ಯವಸ್ಥೆಯಾಗುತ್ತಿದೆ. ಶಿಕ್ಷಣ ಶಾಲೆಗಳನ್ನು ತೆರೆಯುವುದು ಮಕ್ಕಳಿಗೆ ವಿದ್ಯಾದಾನ ಮಾಡುವ ಉದ್ದೇಶದಿಂದಲ್ಲ; ಹಣ ಮಾಡಿಕೊಳ್ಳುವ ರಾಜಮಾರ್ಗವಾಗಿ. ಸೇರುವಾಗ ಹಣ, ಸೇರಿದ ಮೇಲೆ ತಿಂಗಳು ತಿಂಗಳು ಹಣ, ಮೇಲೆ ಅದಕ್ಕೆ ಇದಕ್ಕೆ ಎಂದು ಸುಲಿಗೆ, ಮನೆಯ ಕಲಿಕೆಗೆ ಶುಲ್ಕ, ಪರೀಕ್ಷೆಗೆ ಕೂಡಲು ಹಣ, ಹೀಗೆ ಪಾಠಕ್ಕಿಂತ ವೆಚ್ಚವೇ ಹೆಚ್ಚು.

ಶಾಲೆಯ ಉಪಾಧ್ಯಾಯ ವೃತ್ತಿಗೆ ಸೇರಲು ಯಾರು ಬಯಸಿಯಾರು? ಬೇರೆಲ್ಲಿಯೂ ಅವಕಾಶವಿರದಿದ್ದರೆ ಮಾತ್ರ. ಅವರಿಗೆ ಸಂಬಳವೂ ಕಡಮೆ. ಕೆಲಸವೂ ಹೆಚ್ಚು. ಆದರೆ ಶಾಲೆಯನ್ನು ನಡೆಸುವವರು ಇದನ್ನೊಂದು ಉದ್ಯಮವೆಂದೇ ನಡೆಸುತ್ತಾರೆ. ಖಾಸಗಿ ಶಾಲೆಗಳು ಲೆಕ್ಕವಿಲ್ಲದಷ್ಟು ಕಾಣಿಸಿಕೊಳ್ಳುತ್ತಿರುವುದು ಈ ಕಾರಣದಿಂದಲೇ. ಬೇರೇನೂ ಆದಾಯದ ದಾರಿಯಿರದಿದ್ದವರು ಶಾಲೆಯನ್ನು ನಡೆಸಲು ಹೊರಟರಾಯಿತು; ಅವರ ಬದುಕಿನ ಜಂಜಡವೆಲ್ಲ ತೀರಿತು.

ಮತ್ತೆ ಕೆಲವು ಅಬ್ಕಾರಿ ಮೊದಲಾದ ಬಾಬ್ತುಗಳಿವೆ. ಕೆಲವು ನಗರಗಳಲ್ಲಿ 'ರಿಯಲ್ ಎಸ್ಟೇಟ್'ನಂಥ ಲಕ್ಷ್ಮೀನಿವಾಸ ಇನ್ನೊಂದಿಲ್ಲ. ನಿವೇಶನಗಳನ್ನು ಕೊಳ್ಳುವುದು, ಮನೆಯನ್ನು ಕಟ್ಟಿಸುವುದು, ಮಾರುವುದು ಇದರಲ್ಲಿಯೇ ಹಣವಿರುವುದು.

ಒಂದು ಕಾಲಕ್ಕೆ ಚಲನಚಿತ್ರ ಮಂದಿರಗಳು, ಉಪಹಾರ ಮಂದಿರಗಳು ಸಂಪಾದನೆಗೆ ಹೆದ್ದಾರಿಗಳೆನಿಸಿದ್ದವು. ಈಗ ದೂರದರ್ಶನ ಬಂದ ಮೇಲೆ ಚಲನಚಿತ್ರ ಮಂದಿರಗಳಿಗೆ ಹೋಗುವವರು ಕಡಮೆಯೆಂದೇನೋ, ಕಲ್ಯಾಣಮಂದಿರಗಳ ಕಡೆ ಒಲವು ಹೆಚ್ಚಾಗುತ್ತಿದೆ. ಎಲ್ಲಿ ನೋಡಿದರೂ ಸಭಾ-ಭವನವು ಬಿಡುವಾಗಿರುವುದೇ ವಿರಳ. ದಿನವೊಂದಕ್ಕೆ ತೆರಬೇಕಾದುದೂ ಸಾವಿರಗಟ್ಟಳೆಯೆ.

ಇಷ್ಟರ ಮೇಲೆ, ಬೇಗನೆ ದೊಡ್ಡ ಒಕ್ಕಲಾಗಲು ಇರುವ ಒಂದೇ ದಾರಿಯೆಂದರೆ ಭ್ರಷ್ಟಾಚಾರ! ಅದೊಂದು ಆಚಾರಗಳಲ್ಲಿ ಮುಖ್ಯವಾದುದು. ಸದಾ ಅದು ಚಲಾವಣೆಯಲ್ಲಿರುವುದರಿಂದ ಸದಾಚಾರವೇ ಆಯಿತು! ಯಾವುದು ಹೋದರೂ ಅದು ಉಳಿದುಕೊಳ್ಳುವುದರಿಂದ ಶಿಷ್ಟಾಚಾರವೂ ಆಯಿತು!

83. ನೀತಿಯ ನೆಲೆ

ಬಾವಿಯಿಂದ ಸೇದಿದ ನೀರನ್ನು ಯಾರಾದರೂ ಬೀದಿಯಲ್ಲಿ ಸುರಿಯುತ್ತಾರೆಯೆ? ಸೇದುವ ಕಷ್ಟ ಅರಿತವರು ಯಾರೂ ಹಾಗೆ ಮಾಡರು. ಅದನ್ನು ಜೋಪಾನ ಮಾಡುತ್ತಾರೆ, ಎಚ್ಚರದಿಂದ ವೆಚ್ಚ ಮಾಡುತ್ತಾರೆ.

ಮಧ್ಯಮ ವರ್ಗದ ಜನರು ಜೀವನೋಪಾಯವೆಂದು ಗಳಿಸುವ ಹಣ ಇಂಥದೇ. ಕಷ್ಟಪಟ್ಟು ದುಡಿದು ಗಳಿಸಿದ ಹಣ ಅವರದ್ದು; ದುಂದಿಗೆ ಹೆದರುತ್ತಾರೆ ಅವರು. ದಿನದಿನವೂ ಅವರ ಶ್ರಮ ಇದ್ದದ್ದೇ; ಗಳಿಕೆಯೂ ಗಳಿಗೆಯ ದುಡಿಮೆಯದೇ. ವೆಚ್ಚ ಮಾಡುವಾಗ ಹಿಡಿತವಿರುತ್ತದೆ; ಅಗತ್ಯದ ಎಣಿಕೆಯಿರುತ್ತದೆ.

ಆದರೆ ದುಡಿಮೆಗೂ ಗಳಿಕೆಗೂ ನಂಟು ಅಷ್ಟು ಗಟ್ಟಿಯಾಗದಿರುವಾಗ, ಸುಲಭವಾಗಿ, ಅನಾಯಾಸದಿಂದ ಹಣ ಬಂದೊದಗಿದಾಗ ಈ ಹಿತಮಿತ ಬುದ್ಧಿಯಿರುವುದಿಲ್ಲ. ವೆಚ್ಚ ಮಾಡಲು ಹಿಂದೆಮುಂದೆ ನೋಡುವುದಿಲ್ಲ. ಮೂರನ್ನು ಕಟ್ಟುವ ಕಡೆ ಆರನ್ನು ಕಟ್ಟುತ್ತಾರೆ. ಹೋದದ್ದಕ್ಕೆ ಮರುಗುವುದಿಲ್ಲ; ಕೈ ಧಾರಾಳಕ್ಕೆ ಅಂಜುವುದಿಲ್ಲ. ಹಣವೂ ನೀರಿನಂತೆ ಹರಿಯುತ್ತದೆ.

ಇದು ಕಷ್ಟವನ್ನು ಕಾಣದೆ ಹಣವಂತರಾದವರು ಹಿಡಿಯುವ ದಾರಿ. ತಂದೆತಾಯಿಯರು ಕಷ್ಟಪಟ್ಟು, ಹೊಟ್ಟೆಕಟ್ಟಿ ಕೂಡಿಟ್ಟದ್ದು ತಿಳಿಗೇಡಿ ಮಕ್ಕಳಿಗೆ ಸುಲಭವಾಗಿ ಸಂದರೆ ವೆಚ್ಚ ಮಾಡಲು ಅವರೇಕೆ ಹಿಂಜರಿಯಬೇಕು? ವೆಚ್ಚವಾದ ಹಣ ಹಿಂದಕ್ಕೆ ಬರಬೇಕು, ಎರಡು ಪಟ್ಟಾಗಿ ಏರಬೇಕು ಎಂದು ಬಯಸುವುದಾದರೂ ಏತಕ್ಕೆ? ಹಣವೆಲ್ಲ ಪೂರಾ ಹೋದಮೇಲೆ ನೋಡಿಕೊಂಡರಾಯಿತು! ಹಿಂದೆ

ಏನಾಯಿತೆಂಬ ಅರಿವು ಇಲ್ಲದವರಿಗೆ ಮುಂದೆ ಏನಾದೀತೆಂಬ ಆತಂಕವೂ ಇರುವುದಿಲ್ಲ. ಆ ಗಳಿಗೆ ಕಳೆದರಾಯಿತು, ಅಷ್ಟೆ.

ಇನ್ನು ಕೆಲವು ಬಾಬುಗಳಲ್ಲಿ ಬರಿಯ ಒಂದು ರುಜು ಹಾಕಿದರೆ ಹಣ, ಅಹವಾಲು ಅರ್ಜಿಯನ್ನು ತೆಗೆದುಕೊಳ್ಳಲು ಹಣ, ದಾಖಲೆಯನ್ನು ಎತ್ತಿ ತೋರಿಸಿದರೆ ಹಣ, ಅಧಿಕಾರಿಗೆ ಒಂದು ಮಾತು ಹೇಳಲು ಹಣ, ಕಛೇರಿಯ ಒಳಗೆ ಕಳಿಸಿದರೆ ಹಣ, ಮನವಿಯನ್ನು ಒಪ್ಪಲು ಹಣ, ಮಂಜೂರು ಮಾಡಲು ಹಣ, ನೋಡಲು ಹಣ, ಕೂಡಲು ಹಣ, –ಹೀಗೆ ಹಣ ಜಡಿಮಳೆ ಬಂದಂತೆ ಏರುತ್ತಲೇ ಇದ್ದರೆ, ಹಣದ ಮೇಲೆ ಗೌರವ ಯಾರಿಗಿದ್ದೀತು?

ಕೇಳಿದಷ್ಟು ಬರುವಾಗ ಹೇಳಿದಷ್ಟು ತೆರಲು ದುಮ್ಮಾನವೇಕೆ? ಇದು ಈಗ ಹರಡಿಕೊಳ್ಳುತ್ತಿರುವ ಮನೋಧರ್ಮ. ಆದರೆ ಪ್ರಾಮಾಣಿಕವಾಗಿ ದುಡಿದು ಮಿತವಾಗಿ ಗಳಿಸಿಕೊಂಡ ಹಣವಿದ್ದವರು ಅನ್ಯಾಯವಾಗಿ ಹಣ ತೆರಬೇಕೆಂದರೆ ಕಸವಿಸಿಪಡುತ್ತಾರೆ. ಹಣ ಗಳಿಸಿಕೊಂಡ ದಾರಿ ನೇರವಾದುದು; ಅದನ್ನು ವೆಚ್ಚ ಮಾಡುವಾಗ ಅಡ್ಡದಾರಿ ಹಿಡಿಯಲೇಕೆ? ಆದರೆ ಅಡ್ಡದಾರಿ ಹಿಡಿಯದೆ ಕೆಲಸವೇ ಕೈಗೂಡದು ಎನ್ನುವಾಗ ಅವರು ಹಣವನ್ನೂ ಕೈಬಿಡುತ್ತಾರೆ; ಅದರೊಂದಿಗೆ ತಮ್ಮ ನೀತಿ-ನಿಯತ್ತುಗಳನ್ನೂ ಕೈಬಿಡುತ್ತಾರೆ.

ನೀರಿಗಿಳಿದವನಿಗೆ ಚಳಿಯೇನು, ಮಳೆಯೇನು? ಮಧ್ಯಮವರ್ಗದ ಜನರಲ್ಲಿಯೂ ಅನೀತಿಯ ಗಾಳಿ ಬೀಸುತ್ತಿರುವುದು ಇದೇ ಕಾರಣದಿಂದ. ನೀತಿಯು ಸಮಾಜದಲ್ಲಿ ನೆಲೆಸುವುದೇ ಈ ವರ್ಗದ ಜನರಿಂದ; ಶ್ರೀಮಂತರಿಂದಲೂ ಅಲ್ಲ, ಕಡು ಬಡವರಿಂದಲೂ ಅಲ್ಲ. ಈ ವರ್ಗದ ಜನರಲ್ಲಿ ಅತಂತ್ರದ ಪರಿಸ್ಥಿತಿಯೊದಗಿದರೆ ನೀತಿಯ ನೆಲೆಗಟ್ಟು ಕುಸಿದು ಬಿದ್ದಂತೆಯೇ.

84. ಕುಬೇರನ ರಾಜ್ಯದಲ್ಲಿ ಭಿಕಾರಿ

ಕಳೆದ ಐವತ್ತು ವರ್ಷಗಳಲ್ಲಿ ಹಿಂದೆಂದೂ ನಡೆಯದಿದ್ದ ಮಾರ್ಪಾಟು ನಡೆದಿದೆ. ಮುಖ್ಯವಾಗಿ ಆರ್ಥಿಕ ಬೆಳವಣಿಗೆ ಮತ್ತು ವ್ಯಾಪಾರದ ವಿಕಾಸ. ಈ ಕ್ಷೇತ್ರಗಳಲ್ಲಿ ಇಡೀ ವಿಶ್ವದ ಆರ್ಥಿಕ ಉತ್ಪಾದನೆ ೧೯೫೦ರಲ್ಲಿ ೩.೮ ಟ್ರಿಲಿಯನ್ ಡಾಲರುಗಳಷ್ಟು ಇದ್ದಿತು; ೧೯೯೨ರಲ್ಲಿ ಇದು ೧೮.೯ ಟ್ರಿಲಿಯನ್ ಡಾಲರುಗಳಷ್ಟಾಯಿತು. ಎಂದರೆ ಐದು ಪಟ್ಟು ಹೆಚ್ಚಾಯಿತು!

ವಿಶ್ವದಲ್ಲಿ ಇದೇ ಅವಧಿಯಲ್ಲಿ ಒಟ್ಟು ವ್ಯಾಪಾರ ರಫ್ತು ೩೦೮ ಬಿಲಿಯನ್ ಡಾಲರುಗಳಷ್ಟಿದ್ದದ್ದು, ೩೫೫೪ ಬಿಲಿಯನ್ ಡಾಲರುಗಳಷ್ಟಾಯಿತು. ಎಂದರೆ

ಹನ್ನೊಂದು ಪಟ್ಟಿಗೂ ಮೀರಿ! ಆರ್ಥಿಕ ಬೆಳವಣಿಗೆಗೆ ಎರಡು ಪಟ್ಟು ಹೆಚ್ಚಾದಂತಾಯಿತು!

ಈ ಕಾರಣಗಳಿಂದಾಗಿ ಈಗಿನ ಪ್ರಪಂಚದಲ್ಲಿ ಒಂದು ಬಿಲಿಯನ್ ಸಂಖ್ಯೆಗೂ ಮೀರಿ ಜನ ಅಪಾರ ಐಶ್ವರ್ಯದ ಅಮಲಿನಲ್ಲಿದ್ದಾರೆ. ಇದರ ಅರ್ಥ ಏನು? ಬಡವರಿಗೂ ಭಾಗ್ಯವಂತರಿಗೂ ಇದ್ದ ಅಂತರ ಈಗ ಮಿತಿ ಮೀರಿ ಹೆಚ್ಚಿದೆ. ಭಾಗ್ಯವಂತರೆಂದರೆ ನಮ್ಮ ಕಲ್ಪನೆಗೆ ಬಾರದಷ್ಟು ಭೋಗಸಾಮಗ್ರಿಗಳನ್ನುಳ್ಳವರು; ರಾಜವೈಭವದಲ್ಲಿ ಮೆರೆಯುವವರು. ಬಡವರೆಂದರೆ ಒಪ್ಪತ್ತಿನ ಕೂಳಿಗೂ ಗತಿಯಿಲ್ಲದೆ, ಮೈಮುಚ್ಚಲು ಅರಿವೆಯಿಲ್ಲದೆ, ಮುಂದೆ ಗತಿಯೇನೆಂದು ಆತಂಕದಲ್ಲಿರುವವರು. ಎರಡೂ ತೆರನಾದ ವರ್ಗಗಳು ಈಗ ಹರಡಿಕೊಳ್ಳುತ್ತಿವೆ.

ಕಾರ್ಪೊರೇಷನ್ ಸಂಸ್ಥೆಗಳವರು, ಬ್ಯಾಂಕಿಂಗ್ ಉದ್ಯಮಗಳವರು, ಆರ್ಥಿಕ ಬಲೆಯನ್ನು ಬೀಸುವವರು, ಕ್ರೀಡಾಪಟುಗಳು, ಸಿನಿಮಾ ತಾರೆಯರು, ಇವರೆಲ್ಲ ಅನೇಕ ಮಿಲಿಯನ್ ಡಾಲರ್ ವಾರ್ಷಿಕ ವರಮಾನವನ್ನು ಪಡೆಯುವರು. ಆದರೆ ಪ್ರಪಂಚದಲ್ಲಿ ಸುಮಾರು ಒಂದು ಬಿಲಿಯನ್ ಜನ ದಿನವೊಂದಕ್ಕೆ ಒಂದು ಡಾಲರನ್ನು ದುಡಿಯಲಾರದೆ ಬಡತನದಲ್ಲಿ ಬಿಸುಸುಯ್ಯುತ್ತಿದ್ದಾರೆ.

ಈ ಬಗೆಯ ಬಡತನ ಎಲ್ಲೋ ಭಾರತ, ಚೀನಾ, ಆಫ್ರಿಕಾಗಳಲ್ಲಿ ಎನ್ನುವಂತಿಲ್ಲ; ಅಮೇರಿಕದ ಪ್ರಸಿದ್ಧ ನಗರಗಳಲ್ಲೂ ಸಿರಿತನ-ಬಡತನಗಳ ತಾಂಡವ ನಡೆಯುತ್ತಿದೆ. ಅಲ್ಲಿಯೂ ಉಳ್ಳವರು ಇನ್ನಷ್ಟು ಪಡೆದುಕೊಳ್ಳುತ್ತಿದ್ದಾರೆ, ಇಲ್ಲದವರು ಇದ್ದುದನ್ನೂ ಕಳೆದುಕೊಳ್ಳುತ್ತಿದ್ದಾರೆ. ಸಿರಿವಂತರ ಸಿರಿಸಂಪತ್ತು ಮುಗಿಲು ಮುಟ್ಟುತ್ತದೆ; ಬಡವರ ನೆಲ ಪಾತಾಳಕ್ಕೆ ಕುಸಿಯುತ್ತಿದೆ.

ಇದರಿಂದಾಗಿ ಸಾಮಾಜಿಕ ಅವ್ಯವಸ್ಥೆಯೂ ಮೈದಳೆದಿದೆ. ಇದು ಸಹಜವೇ ಎನ್ನಿ. ಪ್ರಪಂಚದ ಎಲ್ಲೆಡೆಗಳಲ್ಲೂ ಕಳ್ಳತನ, ದರೋಡೆ, ಕೊಲೆ, ಅತ್ಯಾಚಾರ, ವಿವಾಹವಿಚ್ಛೇದ, ಕುಡಿತ, ಅಸಭ್ಯತೆ ಇವು ಹೆಚ್ಚುತ್ತಿವೆ. ದೇಶದಿಂದ ದೇಶಕ್ಕೆ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ನೆಲೆ ತಪ್ಪಿದವರು, ನಿರ್ವಾಸಿತರು ವಲಸೆ ಹೋಗುತ್ತಿದ್ದಾರೆ. ಹಿಂಸೆಯ ಪಾತ್ರ ಮಿತಿ ಮೀರಿದೆ. ಸಣ್ಣ ಪುಟ್ಟ ಸಮಸ್ಯೆಗಳಿಗೂ ಕೊಲೆಯ ಪರಿಹಾರವೇ ವಾಡಿಕೆಯಾಗುತ್ತಿದೆ.

ಅಮೇರಿಕಾದಲ್ಲಿ ಒಂದು ಲಕ್ಷ ಮಕ್ಕಳು ಶಾಲೆಗೆ ಕೋವಿಯನ್ನು ಒಯ್ಯುತ್ತಾರಂತೆ; ಅವರಲ್ಲಿ ದಿನವೂ ನಲವತ್ತು ಮಕ್ಕಳು ಗಾಸಿಗೀಡಾಗುತ್ತಾರೆ, ಇಲ್ಲವೆ ಸಾಯುತ್ತಾರೆ ಎಂದು ವರದಿಗಳು ತಿಳಿಸುತ್ತವೆ. ಎಂದ ಮೇಲೆ ಆತಂಕದ ಮಟ್ಟ ಎಷ್ಟಿದೆಯೆಂಬುದು ತಿಳಿಯುತ್ತದೆಯಲ್ಲವೆ? ಜನಗಳಲ್ಲಿ ಭೀತಿ ಹೆಚ್ಚುತ್ತಿರುವುದರಿಂದ ಖಾಸಗಿ ರಕ್ಷಾದಳ ವ್ಯವಸ್ಥೆಯೇ ಒಂದು ದೊಡ್ಡ ಉದ್ಯಮವಾಗಿ ಮೈದಳೆದಿದೆ. ಪ್ರಪಂಚದಲ್ಲೆಲ್ಲ ಹೆಚ್ಚು ಕಡಮೆ ಈ ಉದ್ಯಮ ಹರಡಿಕೊಳ್ಳುತ್ತಿದೆಯೆನ್ನಿ.

ಈ ಶತಮಾನದ ಆರಂಭದಲ್ಲಿ ಯುದ್ಧ ನಡೆಯಿತೆಂದರೆ ಜರುಗುವ ಹತ್ಯೆಯಲ್ಲಿ ನೂರಕ್ಕೆ ತೊಂಬತ್ತು ಪಾಲು ಸೇನೆಯ ಮಂದಿಯದೇ. ಆದರೆ ಈಗ ಎಲ್ಲಿಯಾದರೂ ಹಗರಣ ನಡೆದರೆ ಸಾಯುವವರು ನೂರರಲ್ಲಿ ತೊಂಬತ್ತು ಮಂದಿ ನಾಗರಿಕರು!

ಇವೆಲ್ಲ ಕಳೆದ ಐವತ್ತು ವರ್ಷಗಳಲ್ಲಿ ನಡೆದಿರುವ ಮಾರ್ಪಾಟಿನ ನಿದರ್ಶನಗಳು. ಇವುಗಳ ಹಿನ್ನೆಲೆಯಲ್ಲಿ ಆರ್ಥಿಕವಾದ ಅತಂತ್ರ, ವ್ಯಾಪಾರದಲ್ಲಿ ಸ್ವೇಚ್ಛಾಪ್ರವೃತ್ತಿ ಎರಡನ್ನೂ ಗುರುತಿಸುವುದು ಕಷ್ಟವಲ್ಲ. ವೈಯಕ್ತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಇವು ಹೊಡೆದೋಡಿಸುತ್ತಿವೆ.

85. ಗಳಿಗೆಯಲ್ಲಿ ಸಂಪತ್ತು

ಇಲ್ಲದ ಬಡವನಿಗೆ ಬಲು ರಾಜ್ಯ ಬಂದರೆ ಏನಾದೀತು?

ಇದೊಂದು ಕುತೂಹಲ ಹಲವರಿಗೆ. ಹೀಗಾಗಿರುವ ಸಂದರ್ಭಗಳು ಹಲವೆನ್ನಿ. ನಮ್ಮ ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಇದಕ್ಕೆ ಧನಿಕರಾಗಿರುವುದನ್ನು ಕಾಣುತ್ತೇವೆ. ತೀರ ದರಿದ್ರರು ಎಂದು ಅವರೂ ಇತರರೂ ಭಾವಿಸಿದ್ದವರು ಕೂಡ ಕುಬೇರನ ಒಕ್ಕಲಾಗಿರುವ ನಿದರ್ಶನಗಳು ಯಾರ ಗಮನಕ್ಕೆ ಬಂದಿಲ್ಲ?

ಮಧ್ಯಮವರ್ಗದವರು ತಮ್ಮ ದುಡಿಮೆಯಿಂದ ಉತ್ತಮ ವರ್ಗಕ್ಕೇರ ಬೇಕಾದರೆ ಬಹಳ ಕಾಲ ಹಿಡಿಸುತ್ತದೆ. ಅವರು ಮೇಲೇರುವುದೂ ನಿಧಾನವಾಗಿಯೆ. ಕ್ರಮಕ್ರಮವಾಗಿ. ಇದ್ದಕ್ಕಿದ್ದಂತೆ ಅವರು ಶ್ರೀಮಂತರಾಗಿ ಬಿಡುವುದಿಲ್ಲ. ಅವರು ನಡೆಯುವ ಹಾದಿಯಲ್ಲಿ ಓಡುವುದಾದರೆ ಅದು ಅದೃಷ್ಟದ ಮಾತು. 'ಕ್ಷಣಶಃ ಕಣಶಶ್ಚೈವ' ಎಂಬ ಮಾತು ಇಂಥವರನ್ನು ಕುರಿತೇ ಇರುವುದು.

ಆರ್ಥಿಕವಾಗಿ ಅಧಮ ವರ್ಗದವರೂ ಮೊದಲ ವರ್ಗಕ್ಕೆ ಸೇರಿಕೊಂಡು, ಅನಂತರ ಉತ್ತಮ ವರ್ಗಕ್ಕೇರಲು ಪ್ರಯತ್ನ ಪಡುವುದೂ ಸಹಜವೇ. ಹೀಗಾಗಿರುವ ನಿದರ್ಶನಗಳೂ ಅನೇಕ ಇವೆ. ಅಧಮ ವರ್ಗದಲ್ಲಿದ್ದವರೂ ಮಧ್ಯಮ ವರ್ಗವನ್ನು ಮುಟ್ಟಬೇಕಾದರೆ ಶ್ರಮಪಡಬೇಕು. ಗುಣವಂತರಾಗಿರಬೇಕು, ಅದೃಷ್ಟವಿರಬೇಕು. ಜೊತೆಗೆ ತಾಳ್ಮೆಯೂ ಇರಬೇಕು. 'ತಕ್ಕ ಮೇಳವಿದ್ದರೂ ತಾಳ ಬೇಕು' ಅಲ್ಲವೆ?

ಇವೆಲ್ಲ ಸಹಜವಾಗಿ ನಡೆಯುವ ಮಾರ್ಪಾಡು. ಇದರಲ್ಲಿ ಆಶ್ಚರ್ಯವೆನಿಸುವ ಸಂಗತಿಯೇನಿಲ್ಲ. ಹಾಗೆ ಹಣವಂತರಾದವರ ತಲೆ ತಿರುಗುವುದಿಲ್ಲ; ಇಲ್ಲಸಲ್ಲದ ಜೋರು ಜಂಬ ಬಂದಡರುವುದಿಲ್ಲ. ಬೇರೆಯವರನ್ನು ಹೀನಾಯವಾಗಿ ಕಾಣುವ ಗತ್ತು ಇರುವುದಿಲ್ಲ. ತನ್ನ ದುಡಿಮೆಗೆ, ಯೋಗ್ಯತೆಗೆ ತಕ್ಕಷ್ಟು ಫಲ ಎಂಬ ನಂಬಿಕೆಯಿರುತ್ತದೆ.

ಆದರೆ ಶ್ರಮಪಡದೆ, ಹಲವು ಕಾಲ ಕಾಯದೆ, ಇದ್ದಕ್ಕಿದಂತೆ ದೊಡ್ಡ ಕುಳವಾಗುವ ಸಂದರ್ಭ ಬರುವುದು ಹಿಂದೆ ವಿರಳವಾಗಿದ್ದಿತು. ಈಗ ಇಂಥ ಅವಕಾಶ ಹೆಚ್ಚಾಗಿವೆ. ಶ್ರಮಪಟ್ಟು, ಕಾದು ಹಣ ಸಂಪಾದಿಸುವವನು ಹೆಡ್ಡನೆಂಬ ಭಾವನೆಯೂ ಹರಡಿಕೊಳ್ಳುತ್ತಿದೆ. ಬುದ್ಧಿವಂತನ ಲಕ್ಷಣವೆಂದರೆ ಅನಾಯಾಸವಾಗಿ ಹಣವನ್ನು ಪಡೆದುಕೊಳ್ಳುವುದು, ಉಳಿದ ಎಲ್ಲರಿಗಿಂತ ಹೆಚ್ಚು ಪಡೆದುಕೊಳ್ಳುವುದು ಎಂಬ ಎಣಿಕೆ ಯುವಕರಲ್ಲೂ ಬೆಳೆಯುತ್ತ ಬಂದಿದೆ.

ಶರೀರಶ್ರಮ ಉಳಿಸಲೆಂದೇ ಉದ್ಯೋಗದಲ್ಲಿ ಹೊಸ ಹೊಸ ಯಾಂತ್ರಿಕ ಪರಿಕರಗಳು ಹೊರಬರುತ್ತಿಲ್ಲವೆ? ಹತ್ತು ಮಂದಿ ಹಗಲೆಲ್ಲ ದುಡಿದು ಮಾಡುವುದನ್ನು ಒಂದು ಯಂತ್ರ ಕೆಲವಾರು ಗಳಿಗೆಗಳಲ್ಲೇ ಮಾಡಿ ಮುಗಿಸುವುದನ್ನು ಯಾರು ಕಂಡಿಲ್ಲ? ದುಡಿಮೆಗೆ ಬದಲಾಗಿ ಯಂತ್ರವನ್ನು ಪಡೆದುಕೊಂಡರಾಯಿತು, ಅಲ್ಲವೇ?

ಇದೇ ಮನೋಧರ್ಮ ಮನುಷ್ಯರಲ್ಲೂ ಕೆಲಸ ಮಾಡತೊಡಗಿದೆ. ಹತ್ತಾರು ವರ್ಷ ಕಾಲ ದುಡಿದು ಗಳಿಸುವುದನ್ನು ಒಂದೆರಡು ತಿಂಗಳುಗಳಲ್ಲೇ ಗಳಿಸಬಾರದೇಕೆ? ಅದಕ್ಕೆ ಬೇಕಾದ ಜಾಣತನವೊಂದಿದ್ದರೆ ಆಯಿತು. ಜಾಣತನದ ಮುಂದೆ ನೀತಿ, ನಿಯತ್ತು, ಧರ್ಮ, ಅಧರ್ಮ, ನ್ಯಾಯ, ಅನ್ಯಾಯ ಇದು ಯಾವುದರ ಪರಿವೆಯೂ ಇರದು. ಅವೆಲ್ಲ ಹಳೆಯ ಕಾಲದ ಕತೆಯಾಯಿತು.

ಬಡವನಿಗೆ ಬಲು ರಾಜ್ಯ ಬಂದರೆ ತಲೆ ತಿರುಗುವ ಸಂಭವ ಹೆಚ್ಚು. ಬಲು ರಾಜ್ಯ ಬರಬಾರದೆಂದಲ್ಲ, ಬರುವ ಕ್ರಮ ಸರಿಯಾಗಿರಬೇಕು. ಕ್ರಮ ತಪ್ಪಿದರೆ, ಇದ್ದಕ್ಕಿದ್ದಂತೆ ಬರುವ ಆಸೆಯಿದ್ದರೆ, ಬಂದ ಬಲುರಾಜ್ಯದಿಂದ ಅವನಿಗೆ ಕೆಡುಕೇ ಹೆಚ್ಚು. ಹೆಜ್ಜೆಯಿಟ್ಟು ನಡೆಯಲಾರದವನು ನಾಗಾಲೋಟ ಓಡುವೆನೆಂದು ಹೊರಟರೆ ಹೇಗೆ?

86. ಮುಂದಿನ ಪಾಡೇನು?

ಎಲ್ಲರಿಗೂ ಇರುವುದು ಮುಂದಿನ ಯೋಚನೆ. ಇಂದೇನೋ ಆಯಿತು. ನಾಳೆಗೆ ಏನು? ನಾಡಿದ್ದಿಗೆ ಏನು? ನನ್ನ ಪಾಡಾಯಿತು. ಮಕ್ಕಳ ಪಾಡೇನು? ಮುಂದೆ ಅವರು ಚೆನ್ನಾಗಿ ಇರಬೇಡವೆ? ಅದಕ್ಕಾಗಿ ದುಡಿದು. ದುಡ್ಡು ಮಾಡಿಕೊಳ್ಳಬೇಕು.

ಮನುಷ್ಯನಿಗೆ ಸಹಜವಾದ ಆಲೋಚನೆಯೇ ಇದು. ಕೆಲವು ಪ್ರಾಣಿಗಳೂ ಕೂಡ ಮುಂದಿನ ಸ್ಥಿತಿ-ಗತಿಗಳಿಗೆ ಈಗಲೇ ಸಿದ್ಧಮಾಡಿಕೊಳ್ಳುವುದನ್ನು ಕಂಡಿದ್ದೇವೆ. ಇರುವೆಗಳು ಆಹಾರವನ್ನು ಸಂಗ್ರಹಿಸುತ್ತವೆ, ಪಕ್ಷಿಗಳು ಗೂಡನ್ನು ಕಟ್ಟಿಕೊಳ್ಳುತ್ತವೆ, ಮರಿಗಳಿಗೆ ಹಿತವಾಗುವಂತೆ ಅಣಿಮಾಡುತ್ತವೆ.

ಬಹುಮಟ್ಟಿಗೆ ಪ್ರಾಣಿಗಳು ಅಂದಂದಿನ ಕತೆ ಕಳೆದರೆ ಸಾಕು ಎನ್ನುವ ಪ್ರವೃತ್ತಿಯವೇ. ಆದರೆ ಮನುಷ್ಯನ ಬುದ್ಧಿಶಕ್ತಿಯಲ್ಲಿ ಮುಂದಾಲೋಚನೆಯ ಪಾತ್ರವಿದೆ. ಹಿಂದೇನಾಯಿತು, ಇಂದು ಏನಾಗುತ್ತಿದೆ, ಮುಂದೇನಾದೀತು ಎಂದು ಚಿಂತಿಸಬಲ್ಲ ಪ್ರಾಣಿ ಮನುಷ್ಯ.

ಇದಿಲ್ಲದಿದ್ದರೆ ಸಂಸ್ಕೃತಿ ಉಳಿಯಲಾರದು, ಬೆಳೆಯಲಾರದು. ಒಟ್ಟಾಗಿ ಬದುಕಬೇಕಾದ ಅಗತ್ಯ ಕೈಗೂಡಲಾರದು. ಮುಂದಿನ ಕಷ್ಟಸುಖಗಳಿಗೆ ಈಗಲೇ ಪರಿಹಾರ-ಸಾಧನಗಳನ್ನು ಕಂಡುಕೊಳ್ಳುವುದು ಜಾಣತನವೇ ತಾನೆ? ನೀರಡಿಕೆಯಾದಾಗ ಬಾವಿ ತೋಡಲು ತೊಡಗಿದರೆ ಹೇಗೆ?

ಆದರೆ ಹಿಂದಿನದನ್ನು ಮರೆತು ಇಂದಿನದನ್ನು ಕೈಬಿಟ್ಟು ಮುಂದಿನದನ್ನೇ ಕಟ್ಟಿಕೊಂಡು ಹೊರಟರೆ ಹೆಡ್ಡತನವಾದೀತು. ಇಂದಿನ ಅಗತ್ಯಗಳನ್ನು ಬದಿಗಿರಿಸಿ, ಮುಂದಿನ ಸುಖದಿನಗಳಿಗಾಗಿ ಕಾಯುತ್ತ ಕುಳಿತವರು ಆ ದಿನಗಳು ಬಂದಾಗ ಅವನ್ನು ಅನುಭವಿಸಲಾರರು. ಅವನ್ನೂ ಬದಿಗಿರಿಸಿ ಇನ್ನೂ ಮುಂದಿನ ಗಳಿಗೆಗಳಿಗೆ ಕಾದು ಕೂಡುತ್ತಾರೆ!

ಇದ್ದುದನ್ನು ಕಳೆದುಕೊಂಡು ಇಲ್ಲದುದಕ್ಕಾಗಿ ಪರದಾಡುವ ಬವಣೆ ಅವರದ್ದು. ಹಾಗೆ ನೋಡಿದರೆ ದಿಟವಾಗಿ ಇರುವದು ಇಂದೆ. ಹಿಂದೆಂಬುದು ಮರೆಯಾಯಿತು; ಮತ್ತೆ ಮರಳದು. ಮುಂದೆಂಬುದು ಕನಸು; ಇನ್ನೂ ಮೈವೆತ್ತಿ ಬಂದಿಲ್ಲ. ಬರುವಾಗ ಹೇಗಿರುವುದೋ ತಿಳಿಯದು.

ಇಂದು ಚೆನ್ನಾಗಿ ಬಾಳುವುದೇ ದಿಟವಾದ ಪ್ರವೃತ್ತಿ. ಇಂದಿನ ಸುಖವೇ ಸುಖ; ಇಂದಿನ ಕಷ್ಟವೇ ಕಷ್ಟ. ಮುಂದೆ ಎಚ್ಚರವಾಗುತ್ತೇನೆಂದು ಇಂದು ನಿದ್ದೆ ಹೋದರೆ ಹೇಗೆ? ಅಥವಾ ಮುಂದೆ ಸುಖಪಡುತ್ತೇನೆಂದು ಇಂದು ಕಷ್ಟಪಟ್ಟರೂ ಸರಿಯಾಗದು. ಅಂದಿನ ಸುಖಕ್ಕೆ ಅಂದಿನ ಕಷ್ಟ.

ಇನ್ನೂ ಒಂದು ತೊಡಕಿದೆ; ಹಿಂದಿನದೇನೋ ನೆನಪಿನಲ್ಲಿರುವಷ್ಟು; ಇಂದು ಎಂಬುದು ನಡೆಯುತ್ತಿರುವವರೆಗೆ ಮಾತ್ರ; ಆದರೆ ಮುಂದೆಂಬುದಕ್ಕೆ ಗಡಿ ಯಾವುದು? ನಾಳೆಯೂ ಆಗಬಹುದು, ಹತ್ತು ವರ್ಷಗಳ ನಂತರವೂ ಆಗಬಹುದು. ಶತಮಾನವೂ ಆದರೆ ಆದೀತು! ನಾಳೆಗೆಂದು ಕೂಡಿಡಲು ಹೊರಟರೆ ಅದಕ್ಕೆ ಕೊನೆಯಿದೆಯೆ?

ಮುಂದಿನ ಪಾಡನ್ನು ಕುರಿತು ಚಿಂತಿಸುವಾಗ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಅವರ ಮುಂದಿನ ಮಕ್ಕಳು ಎಲ್ಲರೂ ಸೇರಬೇಕಲ್ಲವೆ? ಅವರೆಲ್ಲರ ಪಾಡನ್ನು ನಮ್ಮ ತಲೆಗೆ ಕಟ್ಟಿಕೊಂಡರೆ ತಲೆ ನೆಟ್ಟಗೆ ನಿಲ್ಲದು. ಹತ್ತಿರದ ಮುಂದಿನದು ಅಷ್ಟೆ ನಮ್ಮ ಎಣಿಕೆಗೆ ಬಂದರಾಯಿತು. ಅದೂ ನೇರವಾಗಿರಬೇಕೆಂದರೆ ಇಂದು ಸರಿಯಾಗಿರಬೇಕು. ಇಂದು ಕೆಟ್ಟರೆ ಮುಂದೆಯೂ ಕೆಡುವುದು ತಪ್ಪದು.

87. ಊರೇ ಕೆಟ್ಟು ಹೋದರೆ...

'ಲೋಕದವರೆಲ್ಲ ಸತ್ತರೆ ಶೋಕ ಮಾಡುವವರು ಯಾರು?'

ಹತ್ತು ಹಲವರಲ್ಲಿ ಒಬ್ಬ ತೀರಿಕೊಂಡರೆ ಉಳಿದವರು ಕಣ್ಣೀರಿಟ್ಟಾರು; 'ಅಯ್ಯೋ ಹೋದನೇ' ಎಂದು ಮರುಗಿಯಾರು.

ಇದ್ದವರೆಲ್ಲರೂ ತೀರಿಕೊಂಡರೆ ಯಾರು ಕಣ್ಣೀರಿಡಬೇಕು? ಯಾರಿಗಾಗಿ ಯಾರು ಮರುಗಬೇಕು?

ಸಮಾಜದಲ್ಲಿ ಒಳ್ಳೆಯವರು ತುಂಬ ಮಂದಿ ಇದ್ದು ಕೆಟ್ಟವರ ಸಂಖ್ಯೆ ಕಡಮೆಯದಿದ್ದರೆ, ಒಳ್ಳೆಯವರು, ಕೆಟ್ಟವರನ್ನು ನೋಡಿ, 'ಅಯ್ಯೋ, ಕೆಡುತ್ತಾರಲ್ಲ?' ಎಂದು ಮರುಗುವುದು ಸಹಜ; ಕೆಡಬಾರದೆಂದು ಬುದ್ಧಿ ಹೇಳುವುದೂ ಸಹಜವೇ. ಆದರೆ ಕೆಟ್ಟವರೇ ಬಹುಸಂಖ್ಯಾತರಾದಾಗ ಒಳ್ಳೆಯವರ ಮಾತನ್ನು ಕೇಳುವವರು ಯಾರು? ಅವರ ಮಾತಿಗೆ ಬೆಲೆಯೇನು ಬಂದೀತು?

ಆದರೆ ಯಾವ ಸಮಾಜದಲ್ಲೂ ಒಳ್ಳೆಯವರು, ಕೆಟ್ಟವರು ಎಂಬುವರು ಬಹುಸಂಖ್ಯೆಯಲ್ಲೂ ಇರುವುದಿಲ್ಲ. ಈ ತೆರನಾದ ಇಬ್ಭಾಗವೂ ಸರಿಯಾದುದಲ್ಲ. ವ್ಯಕ್ತಿಗಳಿರುತ್ತಾರೆ; ಕೆಲವೊಮ್ಮೆ ಕೆಡುತ್ತಾರೆ. ಒಂದೊಂದು ವೇಳೆ ಅವರದ್ದೇ ಮೇಲುಗೈಯಾಗುತ್ತದೆ. ಅವರು ಮೇಲೆ ಬಂದುದನ್ನು ಕಂಡು ಮತ್ತೆ ಕೆಲವರು ಅವರ ದಾರಿಯನ್ನೇ ಹಿಡಿಯುತ್ತಾರೆ. ಇದು ಹರಡಿಕೊಳ್ಳುತ್ತದೆ.

ಮೋಸ, ಲಂಚ, ಸುಳ್ಳು, ಕಳ್ಳತನ ಇವೆಲ್ಲ ಹೀಗೆಯೇ ಹರಡಿಕೊಳ್ಳುವುದು. ನಮ್ಮ ಸಮಾಜದಲ್ಲಿ ಭ್ರಷ್ಟಾಚಾರ ಎಲ್ಲ ಕ್ಷೇತ್ರಗಳಲ್ಲೂ ವ್ಯಾಪಿಸಿಕೊಂಡಿರುವುದು. ಇದೇ ಕಾರಣದಿಂದ ಹೊಗೆಬತ್ತಿ ಎಳೆಯುವುದು ತಪ್ಪು; ಆದರೆ ನೂರು ಜನ ಅದನ್ನೇ ಮಾಡಿದರೆ ಅದೊಂದು ಫ್ಯಾಶನ್ ಆಗಿ ಬಿಡುತ್ತದೆ. ಅದು ತಪ್ಪೆಂದು ಯಾರೂ ಎಣಿಸುವುದಿಲ್ಲ. ಹಾಗೆಯೇ ಲಂಚ. ಎಲ್ಲಿಯೋ ಒಬ್ಬ ಲಂಚ ಕೇಳಿದರೆ, ಇನ್ನೊಬ್ಬ ಕೊಟ್ಟರೆ ಅದು ತಪ್ಪು. ಆದರೆ ಹೋದಲ್ಲೆಲ್ಲ ಲಂಚ ಕೇಳುವುದು, ಕೊಡುವುದು ಕಂಡು ಬರುತ್ತಲೇ ಇದ್ದರೆ ಅದು ತಪ್ಪೆಂಬ ಭಾವನೆಯೇ ಮರೆಯಾಗಿ ಬಿಡುತ್ತದೆ.

ಹೀಗಾಗಿ ಲಂಚವನ್ನು ತಡೆಗಟ್ಟಬೇಕೆಂಬ ಕಾತರವೇ ಯಾರಿಗೂ ಒದಗುವುದಿಲ್ಲ. ಸಮಾಜದ ಸಹಜವಾದ ದಾರಿಯೆ ಇದು, ಎಲ್ಲರೂ ಮಾಡುತ್ತಾರೆ, ಹಾಗೆ ಮಾಡದೆ ಇದ್ದವರೇ ಹೆಡ್ಡರು ಎಂಬ ಎಣಿಕೆ-ಎಲ್ಲರದ್ದೂ ಆಗಿ ಬಿಡುತ್ತದೆ. ಈಗ ಹಾಗಾಗಿದೆಯೆನ್ನಿ. ಲಂಚ ನೀಡದಿದ್ದರೆ ಏನೊಂದು ಕೆಲಸವೂ ನಡೆಯುವುದಿಲ್ಲ ಎಂಬುದು ಬಹುಮಂದಿಯ ದೃಢನಂಬಿಕೆ; ಲಂಚ ನೀಡುವುದು ಸರಿಯೋ ತಪ್ಪೋ ಎಂಬುದು ಸಮಸ್ಯೆಯೇ ಅಲ್ಲವೆಂಬಂತೆ.

ಸಿದ್ಧಾಂತವನ್ನು ಕಟ್ಟಿಕೊಂಡು ಮಾಡುವುದೇನು? ಲಂಚವು ತಾತ್ವಿಕವಾಗಿ ತಪ್ಪೇ ಇದ್ದೀತು. ಇರಲಿ, ಆದರೆ ಪ್ರಯೋಗದಲ್ಲಿ ಬಂದು ಬಿಟ್ಟಿದೆಯಲ್ಲ? ಹತ್ತು ಜನರು ಅದೇ ದಾರಿಯನ್ನು ಹಿಡಿದಿರುವಾಗ ನಾನೊಬ್ಬ ದೂರಿದರೆ ಏನಾದಹಾಗಾಯಿತು? ಕೈಲಾಗದವನು ಮೈಪರಚಿಕೊಂಡಂತೆ.

ಎಲ್ಲರೂ ಹೀಗೆಣಿಸಿಯೇ ಲಂಚ ಅಷ್ಟು ವ್ಯಾಪಕವಾಗಿರುವುದು. ಅದು ತಪ್ಪೆನ್ನುವ ಕಲ್ಪನೆಯೇ ಹಲವರ ಪಾಲಿಗೆ ಮರೆಯಾಗುತ್ತಿದೆ. ಅಷ್ಟೊಂದು ಹರಡಿಕೊಂಡಿರುವುದರಿಂದ ಅದು ಸರಿಯಾದದ್ದೇ ಎಂಬ ಭಾವನೆಯೂ ಇಲ್ಲದಿಲ್ಲ. ಮತ್ತೆ, ಎಲ್ಲರೂ ಅದನ್ನು ಮಾಡುತ್ತಾರೆ ಎಂಬ ಎಣಿಕೆಯೂ ಕೆಲಸ ಮಾಡುತ್ತದೆ. ಎಲ್ಲರೂ ಮಾಡುವಾಗ ತಪ್ಪೆಂದು ಯಾರು ಹೇಳಬೇಕು? ಯಾರಾದರೂ ಹೇಳಿದರೂ ಕೇಳುವವರು ಯಾರು?

88. ತೂಕಡಿಸುವವರು

ಪಾರ್ಶ್ವನಾಥ ಪುರಾಣದಲ್ಲೊಂದು ಸಂದರ್ಭ– 'ತೂಂಕಡಿಪ್ಪವರನ್ ಒಪ್ಪುವ ಪಾಸಿನ ಮೇಲೆ ನೂಂಕಿದಂತೆ'. ಒಂದು ಗಾದೆಯಿದೆಯಲ್ಲ, ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತೆ, ಎಂಬುದೇ ಇದರ ತಾತ್ಪರ್ಯ. ಮೊದಲೇ ತೂಕಡಿಸುತ್ತಿದ್ದಾನೆ. ಕುಳಿತಲ್ಲೇ ಜೋಂಪು; ಕಣ್ಣು ಎಳೆದುಕೊಂಡು ಹೋಗುತ್ತಿದೆ, ಇಂಥವನಿಗೆ ಮಲಗಲೆಂದು ಹಾಸಿಗೆಯನ್ನು ಅಣಿಮಾಡಿಕೊಟ್ಟರೆ ಮಲಗದೆ ಇರುತ್ತಾನೆಯೆ? ಕುಳಿತಲ್ಲೇ ತೂಕಡಿಸುವವನು ಮಲಗಿದ ಮೇಲೆ ನಿದ್ರೆ ಮಾಡದೆ ಇರುವುದುಂಟೆ?

ತೂಕಡಿಕೆಯೆಂದರೆ ಎಚ್ಚರ ತಪ್ಪುವುದು; ಕಣ್ಣು ಮುಚ್ಚುವುದು; ಮನಸ್ಸನ್ನು ದೂರ ಅಟ್ಟುವುದು. ಸಮಾಜದಲ್ಲಿ ತೂಕಡಿಸುವ ಜನ ಇರುತ್ತಾರೆ. ಯಾವುದು ಸರಿ, ಯಾವುದು ತಪ್ಪು ಎಂದಾಗಲಿ, ಏನನ್ನು ಮಾಡಿದರೆ ಒಳಿತು, ಯಾತರಿಂದ ಕೆಡುಕು ಎಂದಾಗಲಿ ವಿವೇಕವಿರುವುದಿಲ್ಲ. ಇದೇ ಎಚ್ಚರ ತಪ್ಪುವುದು. ನ್ಯಾಯಾನ್ಯಾಯಗಳನ್ನು ಕುರಿತಂತೆ ಕುರುಡುತನ ಕಣ್ಣು ಮುಚ್ಚುವುದು, ತಾನು ಹಿಡಿದಿರುವ ದಾರಿ ಸರಿಯಾದುದೇ ಎಂಬ ಆಲೋಚನೆಯನ್ನೇ ಮಾಡದೆ ಇರುವುದು, ಮನಸ್ಸನ್ನು ದೂರ ಅಟ್ಟುವುದು.

ಲೋಭಿಗಳು, ಕಾಮುಕರು, ದುರ್ವ್ಯಸನಿಗಳು, ಲಂಪಟರು ಇವರೆಲ್ಲ ಈ ಬಗೆಯ ಜನರೇ. ಅವರು ತಮ್ಮ ದುರಾಸೆಯನ್ನು ತೀರಿಸಿಕೊಳ್ಳಲು ಏನನ್ನು ಮಾಡಲೂ ಹಿಂಜರಿಯರು. ಹೀಗಿರುವವರಿಗೆ ಸರ್ಕಾರವೋ, ರಾಜಕಾರಣವೋ

ಮತ್ತಾವುದಾದರೂ ಪ್ರಭಾವವೋ ಒತ್ತಾಸೆಗೆ ಬಂದರೆ ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತೆಯೇ ಅಲ್ಲವೆ?

ಇತಿಹಾಸದಲ್ಲಿ ಆಡಳಿತವು ಕೆಡುಕರಿಗೆ ಅನುಕೂಲ ಮಾಡಿಕೊಟ್ಟ ಸಂದರ್ಭಗಳು ಸಾವಿರಾರು. ತೂಕಡಿಸುವವರಿಗೇ ಹಾಸಿಗೆ ಬೇಕಾಗಿರುವುದು. ಎಚ್ಚರವಾಗಿರುವವರಿಗೆ ಹಾಸಿಗೆಯೇಕೆ? ಭ್ರಷ್ಟಾಚಾರವೊಂದು ಬೇತಾಳವಾಗಿ ಮೈದಳೆದಿರುವುದು ಈ ಕಾರಣದಿಂದಲೇ. ತೂಕಡಿಸುವ ಜನ ಇದ್ದಾರೆ; ಅವರಿಗೆ ಒಪ್ಪಾದ ಹಾಸಿಗೆಯನ್ನು ಹಾಸಿಕೊಡುವ ಅಧಿಕಾರಿಗಳು ಆಡಳಿತದಲ್ಲಿರುತ್ತಾರೆ.

ಹಾಸಿಗೆ ಹಾಸಿಕೊಡುವ ಸಾಮರ್ಥ್ಯವಿದ್ದವರು ತೂಕಡಿಸುತ್ತಿರುವವರು ಯಾರೆಂಬುದನ್ನು ನೋಡುತ್ತಿರುತ್ತಾರೆ. ತೂಕಡಿಸುತ್ತಿರುವವರಂತೂ ಹಾಸಿಗೆ ಎಲ್ಲಿದೆಯೆಂಬುದನ್ನೆ ಅರಸುತ್ತಿರುತ್ತಾರೆ. ಎರಡೂ ವರ್ಗದವರು ಮೇಳೈಸಿದಾಗ ಕೇಳುವುದೇನು? ಆದರೆ ಹಾಸಿಗೆ ಹಾಸಿ ಕೊಡುವವರು ಎಚ್ಚರವಾಗಿಯೇ ಇರುತ್ತಾರೆ; ಅವರು ಸಿಕ್ಕಿಹಾಕಿಕೊಳ್ಳುವುದಿಲ್ಲ. ಅವರು ಹಾಸಿಕೊಟ್ಟ ಹಾಸಿಗೆಯಲ್ಲಿ ಮಲಗಿದವರು ಎಚ್ಚರ ತಪ್ಪುತ್ತಾರೆ; ಸಿಕ್ಕಿಹಾಕಿಕೊಳ್ಳುತ್ತಾರೆ.

ಭ್ರಷ್ಟಾಚಾರದಲ್ಲಿ ಇದೊಂದು ಸಮಸ್ಯೆ. ತೂಕಡಿಸುವುದು ತಪ್ಪೋ, ಹಾಸಿಗೆ ಹಾಸಿಕೊಡುವುದು ತಪ್ಪೋ? ತೂಕಡಿಸದೆ ಇದ್ದವನಿಗೆ ಹಾಸಿಗೆಯೇಕೆ? ತೂಕಡಿಕೆಯೂ, ಒಂದು ಹಾಸಿಗೆಯೂ ಇದ್ದರೆ ಮಲಗಬಾರದೇಕೆ? ತೂಕಡಿಸುವವರು ಇದ್ದಾಗ ಅವರಿಗೆ ಹಾಸಿಗೆ ಒದಗಿಸಬೇಕೆಂಬ ಬುದ್ಧಿ ಕೆಲವರಿಗೆ ಬಂದರೆ ಅದು ಸಹಜವೇ ತಾನೆ? ಅಂತೆಗೆ ತಕ್ಕ ಬೊಂತೆ. ಹಾಸಿಗೆ ಕಣ್ಣೆದುರೇ ಕಾಣುತ್ತಿರುವಾಗ ತೂಕಡಿಕೆ ಬಾರದಿದ್ದವರಿಗೂ ತೂಕಡಿಕೆ ಬರುವಂತಾದರೆ ಆಶ್ಚರ್ಯವೆ? ಇದು ಬೊಂತೆಗೆ ತಕ್ಕ ಅಂತೆ.

ತೂಕಡಿಸುವವರು ಸಮಾಜದಲ್ಲಿರುವವರೆಗೂ ಅವರಿಗೆ ಹಾಸಿಗೆ ಹಾಸಿ ಕೊಡುವವರೂ ಇರುತ್ತಾರೆ. ಅದೊಂದು ಬಿಡಿಸಲಾಗದ ನಂಟು.

89. ಉದ್ಯಮದಲ್ಲಿ ಆಚಾರ

ಉದ್ಯಮವು ಮೈದಳೆಯುವಾಗ ತನ್ನ ಆಶೋತ್ತರಗಳನ್ನು ಸ್ಪಷ್ಟಪಡಿಸಬೇಕು. ಇಲ್ಲವಾದರೆ ಜನರಿಗೆ ಉದ್ಯಮದ ಬಗ್ಗೆ ನಂಬಿಕೆ ಮೂಡುವುದು ಹೇಗೆ? ಜನರ ನಂಬಿಕೆಯನ್ನು ಗಳಿಸಿಕೊಳ್ಳದೆ ಉದ್ಯಮವು ಉಳಿಯುವುದಾದರೂ ಹೇಗೆ? ಬೆಳೆಯುವುದಾದರೂ ಆದೀತೆ?

ಹುಟ್ಟುಹಾಕಿದ ಉದ್ಯಮ ಬೆಳೆಯಬೇಕು. ಬೆಳೆಯದಿದ್ದರೆ ಇಳಿಯುತ್ತದೆ, ಅಳಿಯುತ್ತದೆ. ಒಂದೇ ಆರ್ಥಿಕ ನೆಲೆಯಲ್ಲಿ ನಿಲ್ಲುವುದು ಆರೋಗ್ಯಶಾಲಿಯಾದ

ಉದ್ಯಮದ ಲಕ್ಷಣವಲ್ಲ. ಬೆಳೆಯುವ ದಾರಿಯನ್ನು ಉದ್ಯಮವು ಮೊದಲೇ ಗುರುತಿಸಿಕೊಳ್ಳುತ್ತದೆ. ಅದೇ ಆಶೋತ್ತರದ ಮುಖ್ಯಾಂಶ. ಬೆಳೆಯುವ ದಾರಿಯನ್ನು ಸಮಗ್ರವಾಗಿ ಸ್ಪಷ್ಟಪಡಿಸುವುದಿಲ್ಲ, ದಿಟ. ಜನರಿಗೆ ತಿಳಿಯಬೇಕಾದ ವಿವರಗಳೂ ಇರುತ್ತವೆ; ಅವರು ತಿಳಿಯಬಾರದ ವಿವರಗಳೂ ಇರುತ್ತವೆ.

ಸ್ಪಷ್ಟಪಡಿಸುವ ವಿವರಗಳಲ್ಲಿ ಪ್ರಧಾನವಾದುದು ಉದ್ಯಮದ ಪ್ರಾಮಾಣಿಕತೆ. ಉದ್ಯಮದ ಆರ್ಥಿಕ ನೆಲೆ, ಸುಭದ್ರತೆ, ಸಾಮರ್ಥ್ಯ, ಉತ್ಪಾದನೆಯ ವೈಶಿಷ್ಟ್ಯ, ಬಂಡವಾಳಗಾರರ ಹಿರಿಮೆ-ಗರಿಮೆ ಇವೆಲ್ಲದರ ಜೊತೆಗೆ ಜನರನ್ನು ಮೋಸಗೊಳಿಸುವುದಿಲ್ಲ ಎಂಬ ಆಶ್ವಾಸನೆಯೂ ಇರಬೇಕಲ್ಲವೆ? ಜನರ ನಂಬಿಕೆಯನ್ನು ಕುದುರಿಸಿಕೊಂಡರೆ ಸಾಲದು; ಅದನ್ನು ಕಾಪಿಟ್ಟುಕೊಳ್ಳುವುದೂ ಮುಖ್ಯವಲ್ಲವೆ?

ಉದ್ಯಮಕ್ಕೂ ಒಂದು ಆಚಾರ ಸಂಹಿತೆಯಿರುತ್ತದೆ. ಅದನ್ನು ಸ್ಪಷ್ಟಪಡಿಸಬೇಕಾದ ಅಗತ್ಯವೂ ಇದೆ. ಉದ್ಯಮಗಳು ಆರಂಭವಾಗುವಾಗ ಇದನ್ನು ಕಾಣಿಸಿಯೂ ಇರುತ್ತಾರೆ. ಕೆಲಸಗಾರರನ್ನು ನೇಮಿಸಿಕೊಳ್ಳುವಾಗ ಇದನ್ನು ಅವರ ಗಮನಕ್ಕೆ ತರುವುದೂ ಉಂಟು. ಕಾಲಕಾಲಕ್ಕೆ ಇದರ ಪುರಶ್ಚರಣವೂ ಆಗುತ್ತದೆ.

ಆದರೆ ಇಷ್ಟರಿಂದ ಉದ್ಯಮದಲ್ಲಿ ಆಚಾರ ಸಿದ್ಧವಾಯಿತು ಎನ್ನುವಂತಿಲ್ಲ. ಆಶಯವೇನೋ ಸದಾಚಾರದ್ದು; ವ್ಯವಹಾರದಲ್ಲಿ ಇದು ಬರಬೇಕಲ್ಲ? ನೀತಿಯ ಮಾತುಗಳನ್ನು ಮುದ್ರಿಸಿ ಕೆಲಸಗಾರರಿಗೆ ಹಂಚಿಬಿಟ್ಟ ಮಾತ್ರಕ್ಕೆ ನೀತಿಯ ನೆಲೆ ಬೇರೂರಿತು ಎನ್ನಬಹುದೆ? ಉದ್ಯಮದ ಬಂಡವಾಳಗಾರರು, ಮೇಲ್ವಿಚಾರಕರು, ಮುತ್ಸದ್ದಿಗಳು, ನೇತಾರರೆನಿಸಿಕೊಂಡವರು, ಕೆಲಸಗಾರರ ನಾಯಕರು ಇವರೆಲ್ಲರ ಆಸಕ್ತಿಯನ್ನೂ ಆಚಾರ ಸೆಳೆಯಬೇಕು.

ಮೇಲಿನ ಸ್ತರವಾಗಿ ಕಂಡುಕೊಂಡ ಆಚಾರ ಇತರ ಸ್ತರಗಳಲ್ಲಿ ಇಳಿದು ಬರುವುದು ಸಾಧ್ಯ. ಹಿರಿಯರಲ್ಲಿ ತೋರಿಕೊಂಡ ನಿಷ್ಠೆ ಕಿರಿಯರಿಗೂ ಬರುತ್ತದೆ. ಮುಂದಾಳುಗಳ ಪ್ರಾಮಾಣಿಕತೆ ಹಿಂಬಾಲಕರ ಪಾಲಿಗೂ ಬಂದೊದಗುತ್ತದೆ. ಸದಾಚಾರವನ್ನು ಕಾಪಾಡಿಕೊಳ್ಳುವುದು ಬರಿಯ ಪ್ರಣಾಳಿಕೆಗಳಿಂದಾಗದು; ಆಶೋತ್ತರಗಳ ಪ್ರಕಟಣೆಯಿಂದ ಕೈಗೂಡದು.

ಉದ್ಯಮದ ಎಲ್ಲ ನೆಲೆಗಳಲ್ಲೂ ಪ್ರಾಮಾಣಿಕತೆಯ ಪರಿಮಳ ಹರಡಿಕೊಳ್ಳುವುದಾದರೆ ಮಾತ್ರ ಉದ್ಯಮ ಉಳಿದೀತು. ಅನೀತಿಯ, ದುರಾಚಾರದ ಗಾಳಿ ಬೀಸತೊಡಗಿತೆಂದರೆ ಉದ್ಯಮಿಯ ಸಾಹಸ, ಮೇಲ್ವಿಚಾರಕರ ಸಾಮರ್ಥ್ಯ, ಉದ್ಯಮದ ಬಂಡವಾಳ ಎಲ್ಲವೂ ವ್ಯರ್ಥವಾಗುತ್ತವೆ. ಉದ್ಯಮ ಉಳಿಯುವುದು ಕಷ್ಟವಾಗುತ್ತದೆ.

ಉದ್ಯಮವನ್ನು ಕುರಿತಂತೆ ನಂಬಿಕೆ ಜನರಿಗೂ ಉಳಿಯುವುದಿಲ್ಲ. ಕೆಲಸಗಾರರಿಗೂ ಉಳಿಯುವುದಿಲ್ಲ. ಆಕಾರಕ್ಕಿಂತಲೂ ಆಚಾರ ಮುಖ್ಯವಲ್ಲವೆ?

90. ಧನಬಲ

ಬಲಗಳಲ್ಲಿ ಅನೇಕ ಬಗೆಗಳು. ಹಣವಿರುವುದೊಂದು ಬಲ; ಧನ ಬಲ. ತಿಳಿವಳಿಕೆಯಿರುವುದಿನ್ನೊಂದು ಬಲ; ಬುದ್ಧಿ ಬಲ. ಓದಿರುವುದು ಮತ್ತೊಂದು ಬಲ; ವಿದ್ಯಾಬಲ.

ಇವುಗಳಲ್ಲಿ ಕೆಲವು ಗುರಿ, ಕೆಲವು ದಾರಿ. ಓದುವುದೇತಕ್ಕೆ? ಬುದ್ಧಿ ಬರಲೆಂದು ಓದು ದಾರಿ, ಬುದ್ಧಿ ಗುರಿ. ಬುದ್ಧಿ ಬರಬೇಕಾದುದಾದರೂ ಏತಕ್ಕೆ? ಹಣ ಬರಲೆಂದಲ್ಲವೆ? ಬುದ್ಧಿ ದಾರಿಯಾಯಿತು, ಧನ ಗುರಿಯಾಯಿತು. ಹೀಗೆ ಎಲ್ಲ ಬಲಗಳೂ ಧನಬಲಕ್ಕೆ ಕಾರಣಗಳೆಂದು ಕೆಲವರ ಎಣಿಕೆ.

ಧನಬಲವೇ ಬಲ; ಅದು ಇದ್ದರೆ ಉಳಿದ ಬಲಗಳು ತಾವಾಗಿ ಬಂದೊದಗುತ್ತವೆ. ಹೀಗೆ ಭಾವಿಸುವವರು ಧನವನ್ನು ಗಳಿಸಲೆಂದೇ ತಮ್ಮ ಬಾಳನ್ನೆಲ್ಲ ಕಳೆಯುವುದು ಸಹಜ. ಮಾಡಬಾರದ್ದನ್ನೂ ಮಾಡಲು ಅಂಜದೆ, ಎಲ್ಲೆಂದರಲ್ಲಿ ಮುನ್ನುಗ್ಗುವ ಧೈರ್ಯ ಅವರಿಗೆ ಬರುತ್ತದೆ.

ಆರೋಗ್ಯವಿದ್ದವನಿಗೆ ಪಥ್ಯದ ನಿರ್ಬಂಧವೇತಕ್ಕೆ? ಏನನ್ನಾದರೂ ಅರಗಿಸಿಕೊಳ್ಳುವ ಶಕ್ತಿಯಿದ್ದವನಿಗೆ ಇದನ್ನು ತಿನ್ನಬಾರದು, ಅದನ್ನು ತಿನ್ನಬಾರದು, ಆಗ ತಿನ್ನಬಾರದು, ಈಗ ತಿನ್ನಬಾರದು ಎಂದು ಮುಂತಾಗಿ ಅಡೆತಡೆಗಳಿರಲಾರವಷ್ಟೆ?

'ಸರ್ವಂ ಬಲವತಾಂ ಪಥ್ಯಂ' ಎಂಬ ಮಾತಿದೆ. ಹಾಗೆಯೇ ಲೋಕವನ್ನು ಹಿಂಸಿಸುವ ದುರುಳರು ಕೂಡ ಬಲಶಾಲಿಗಳಿಗೆ ಹೆದರುತ್ತಾರೆ ಎಂಬ ಇನ್ನೊಂದು ಮಾತೂ ಇದೆ. 'ಬಾಧಕಾ ಅಪಿ ಲೋಕಾನಾಂ ಬಲಿನೋ ಬಿಭ್ಯತಿ'. ದುರುಳರು ಬಲಶಾಲಿಗಳನ್ನು ಬಳಸಿಕೊಳ್ಳುವುದೂ, ಬಲಶಾಲಿಗಳು ದುರುಳರನ್ನು ಬಳಸಿಕೊಳ್ಳುವುದೂ ವಾಡಿಕೆಯಲ್ಲವೆ? ಇಲ್ಲಿ ಬಲವೆಂದರೆ ಧನಬಲವೇ.

ಧನಬಲವುಳ್ಳವರನ್ನು ದುರುಳರು ಬಳಸಿಕೊಳ್ಳುವುದು ಸುಲಭ. ಏಕೆಂದರೆ ಅವರಿಗೆ ವಿವೇಕವಿರುವುದಿಲ್ಲ. ಇದು ಯುಕ್ತ, ಇದು ಅಯುಕ್ತ ಎಂಬ ವಿವೇಚನೆ ಯಿದ್ದವರ ಬಳಿ ಧನ ಸುಳಿಯುವುದಿಲ್ಲ. ಹೀಗೆ ವಿವೇಕವಿಲ್ಲದವರಿಗೆ ಯಾರು ಒಳ್ಳೆಯವರು, ಯಾರು ದುರುಳರು ಎಂಬ ಅರಿವಾದರೂ ಇರುವುದು ಹೇಗೆ?

ಒಂದು ಬಲ ಇದ್ದಲ್ಲಿ ಇನ್ನೊಂದು ಬಲ ಇರಲಾರದೆಂದೇ ತೋರುತ್ತದೆ. ಧನಬಲವಿದ್ದರೆ ಬುದ್ಧಿಬಲವಿರದು; ಬುದ್ಧಿ ಬಲವಿದ್ದಲ್ಲಿ ಧನಬಲವಿರಲಾರದು. ಬುದ್ಧಿ, ಧನ ಎರಡೂ ಒಟ್ಟಿಗೆ ಸೇರುವುದು ದುರ್ಲಭ. ಹಾಗೆಯೇ ವಿದ್ಯೆಯೇ ಬಲವೆಂಬವರಿಗೆ ಬುದ್ಧಿಬಲವಿರುವುದು ಕಡಮೆ.

ಬದುಕಲು ಯಾವುದಾದರೊಂದು ಬಲವಿರಬೇಕು. ಯಾವ ಬಲದಿಂದ ಬದುಕು ಚೆನ್ನಾದೀತು ಎಂಬುದನ್ನು ಅವರವರು ಕಂಡುಕೊಳ್ಳಬೇಕು. ಕೆಲವರಿಗೆ

ಕೆಲವೊಂದು ಬಲವನ್ನು ಗಳಿಸಿಕೊಳ್ಳುವ ಪ್ರವೃತ್ತಿಯಿರುತ್ತದೆಯೆನ್ನಿ. ಲೋಕ ದೃಷ್ಟಿಯಿಂದಲೂ ಹೆಚ್ಚು ಮಾನ್ಯವೆಂದುದನ್ನು ಅರಸುವುದೂ ಇದೆ. ಒಂದು ಕಾಲದಲ್ಲಿ ವಿದ್ಯೆಗೆ ಬೆಲೆಯಿದ್ದಿತು; ಈಗ ಧನಕ್ಕೆ ಬೆಲೆ, ಹೆಚ್ಚು ಧನ ಯಾವ ವಿದ್ಯೆಯಿಂದ ಬಂದರೆ ಆ ವಿದ್ಯೆಗೆ ಹೆಚ್ಚಿನ ಒತ್ತು. ವಿದ್ಯೆ ದಾರಿಯಾಯಿತು, ಧನ ಗುರಿ.

ಉಳಿದ ಬಲಗಳ ಮೇಲೆ ಒಲವು ಇದ್ದವರೂ ಕೂಡ ಈ ಬಲಗಳನ್ನು ಒಂದು ಏಣಿಯ ಕ್ರಮದಲ್ಲಿ ಅಳವಡಿಸಿಕೊಳ್ಳುತ್ತಾರೆ. ಅವು ಮೆಟ್ಟಿಲು ಮೆಟ್ಟಿಲಾಗಿ ತೋರಿಕೊಳ್ಳುತ್ತವೆ. ಮೇಲಣ ಮೆಟ್ಟಿಲು ಯಾವುದು ಎಂಬುದು ಅವರವರಿಗೆ ಬಿಟ್ಟದ್ದು.

91. ದುಡ್ಡಿದೆ, ನೀತಿಯಿದೆಯೆ?

ಉದ್ಯಮ ಸಂಸ್ಥೆಗಳಲ್ಲಿ ನೀತಿ ಸಂಹಿತೆಯನ್ನು ಅಳವಡಿಸಿಕೊಳ್ಳಬೇಕೆಂದು ಈಗೀಗ ಹಿರಿಯ ಉದ್ಯಮಿಗಳು ಹೇಳತೊಡಗಿದ್ದಾರೆ.

ಅಮೇರಿಕದ ಹಲವು ದೊಡ್ಡ ದೊಡ್ಡ ಉದ್ಯಮಗಳಲ್ಲಿ ನೀತಿಯಿಲ್ಲದೆ ನಡವಳಿಕೆಯಿಂದ ಹಾನಿಯಾಗುತ್ತಿದೆಯಂತೆ. ಉದ್ಯಮದ ಉದ್ದೇಶಕ್ಕೆ ಎಡರು ತೊಡರುಗಳು ತೋರಿಕೊಳ್ಳುತ್ತಿವೆಯಂತೆ.

ಹೀಗಾಗಿ ಉದ್ಯಮದಲ್ಲೊಂದು ನೈತಿಕ ವಾತಾವರಣವನ್ನು ಕಲ್ಪಿಸಿಕೊಳ್ಳ ಬೇಕೆಂಬ ಹವಣಿಕೆ ಅವರದ್ದು. ಇದನ್ನು ಹೇಗೆ ಮಾಡಬೇಕೆಂಬುದು ಅವರ ಚಿಂತೆ. 'ಬಿಸಿನೆಸ್ ಎಥಿಕ್ಸ್' ಎಂಬ ಗೀಳು ಉದ್ಯಮಿಗಳನ್ನು ಕಾಡಹತ್ತಿದೆ.

ನೀತಿವಂತನಾದ ಮನುಷ್ಯ ಉದ್ಯಮಸ್ಥಾನಕ್ಕೆ ಬೆಳಿಗ್ಗೆ ಬಂದಾಗ ಕಛೇರಿಯ ಬಾಗಿಲಲ್ಲಿ ತನ್ನ ನೀತಿಯನ್ನು ಇಟ್ಟು, ಸಂಜೆ ತಾನು ಮನೆಗೆ ಮರಳುವಾಗ ತನ್ನೊಂದಿಗೆ ಅದನ್ನು ಕೊಂಡೊಯ್ಯಬಹುದೆ?

ಮನೆಯ ನೀತಿಯೇ ಬೇರೆ, ಉದ್ಯಮದ ನೀತಿಯೇ ಬೇರೆ ಎಂದರೂ ಒಬ್ಬನೇ ಮನುಷ್ಯ ವೈಯಕ್ತಿಕ ನೀತಿ, ಔದ್ಯಮಿಕ ನೀತಿ ಎಂದು ಇಬ್ಭಾಗವಾಗಿ ಒಡೆಯಲು ಸಾಧ್ಯವೆ?

ಆದರೆ ಎಲ್ಲೆಲ್ಲಿಯೂ ಕಾಣಸಿಗುತ್ತಿರುವುದು ಇದೇ.

ಉದ್ಯಮದ ಉದ್ದೇಶವೇ ಹಣ ಸಂಪಾದಿಸುವುದು; ಉದ್ಯಮಿಯ ಕಣ್ಣೆರಬೇಕಾದುದೇ ಲಾಭದ ಕಡೆಗೆ ಅಲ್ಲವೆ? ಇದರಲ್ಲಿ ನೀತಿಯೆಂಬ ಅಳುಕಿದ್ದರೆ ಉದ್ಯಮವು ಊರ್ಜಿತವಾಗುವುದಾದರೂ ಹೇಗೆ? ಸುಳ್ಳು, ತಟವಟ, ಲಂಚ, ರುಷುವತ್ತು, ಮೋಸ, ಮುಸುಕು ಇವೆಲ್ಲ ಇಲ್ಲದಿದ್ದರೆ ಉದ್ಯಮದಲ್ಲಿ ದೊಡ್ಡ ಕುಳವಾಗುವುದು ಸಾಧ್ಯವಿರದು ಎಂದಲ್ಲವೆ ಎಣಿಕೆ?

ಮೋಸ ಮಾಡದೆ ಹಣವನ್ನು ಹೊಂದಿಸಿಕೊಳ್ಳುವುದು ಸಾಧ್ಯ ಎಂಬುದನ್ನು ಉದ್ಯಮಿಗಳು ಮನವರಿಕೆ ಮಾಡಿಕೊಳ್ಳಬೇಕೆಂದು ಔದ್ಯಮಿಕ ನೀತಿವಾದಿಗಳು ಹೇಳುತ್ತಿದ್ದಾರೆ. ಉದ್ಯಮಕ್ಕೂ ಭ್ರಷ್ಟಾಚಾರಕ್ಕೂ ಸಹಜವೆನ್ನಬಹುದಾದ ಯಾವ ನಂಟೂ ಇರದು ಎಂದು ಅವರ ವಾದ. ನೀತಿಗೆಟ್ಟು ಆಢ್ಯರಾಗಬೇಕಾದ ಅಗತ್ಯವೇನಿಲ್ಲ. ನೀತಿಗೂ ಉದ್ಯಮಕ್ಕೂ ಸಿದ್ಧಾಂತದಲ್ಲಾಗಲಿ ಪ್ರಯೋಗದಲ್ಲಾಗಲಿ ವಿರೋಧವಿರಬೇಕಾದುದೇನಿಲ್ಲ.

ಆಲ್ಬರ್ಟ್ ಷ್ವೇಟ್ಸರ್‌ನ ನೀತಿಯೆಂದರೆ ಸದಾಚಾರವೆಂದು ಹೇಳಿದಾಗ 'ತನ್ನೊಬ್ಬನ ಸುಖವನ್ನು ಮಾತ್ರ ಎಣಿಸದೆ, ಇತರರ ಹಿತವನ್ನೂ ಎಣಿಸುವುದೇ ನೀತಿ' ಎಂದು ವಿವರಿಸಿದ. ಉದ್ಯಮಿಯ ದೃಷ್ಟಿ ತನ್ನ ಲಾಭದಲ್ಲೇ ನೆಟ್ಟಿರದೆ, ಉದ್ಯಮದಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೆರವಾಗುವ ಎಲ್ಲರ ಅನುಕೂಲವನ್ನೂ ಸಾಧಿಸುವಲ್ಲಿ ಹರಿಸಿದರೆ ಅದು ನೀತಿಪರವಾದ ಉದ್ಯಮವೇ ಆಯಿತು.

ಉದ್ಯಮವೆಂಬುದು ಸಾಮಾಜಿಕ ವ್ಯವಸ್ಥೆಯ ಒಂದು ಅಂಗ ಎಂಬ ಅರಿವಿದ್ದರೆ ಸಾಕು, ಸಮಾಜದ ಹಿತಸಾಧನೆಗಾಗಿ ಉದ್ಯಮದ ಅಗತ್ಯ ಎಂಬ ಅರಿವು ತಾನಾಗಿ ಮೂಡುತ್ತದೆ. ಆಗ ದುರಾಚಾರಕ್ಕೆ ಎಡೆಯಿರದು.

92. ದಾರಿಯೋ, ಗುರಿಯೋ?

ಬದುಕಿನಲ್ಲಿ ಮುಖ್ಯವಾದದ್ದು ಹಣ; ಅದನ್ನು ಗಳಿಸುವುದೇ ಪುರುಷಾರ್ಥ. ಹಣ ಇದ್ದರಲ್ಲವೆ ಕಾಮಗಳನ್ನು ಪೂರೈಸಿಕೊಳ್ಳುವ ಸಾಧ್ಯತೆ? ಧರ್ಮಕ್ಕೇ ಆಗಲಿ ಹಣ ಇರಬೇಡವೆ?

ಹೀಗೆಂದು ಅರ್ಥಶಾಸ್ತ್ರದಲ್ಲಿ ಕೌಟಿಲ್ಯನೇ ಹೇಳುತ್ತಾನೆ. ಸಾಧಾರಣವಾಗಿ ಎಲ್ಲರ ದೃಷ್ಟಿಯೂ ಇದೇ ಅಲ್ಲವೆ? ಹಣ ಬೇಕು, ಬೇಡವೆಂದಲ್ಲ. ಆದರೆ ಅದೊಂದೇ ಮುಖ್ಯ, ಅದನ್ನು ಗಳಿಸುವುದೇ ಬದುಕಿನ ಪರಮೋದ್ದೇಶ ಎನ್ನಬಹುದೆ? ಹಣವನ್ನು ಬಿಟ್ಟು ಬೇರಾವ ಪ್ರಸಕ್ತಿಯೂ ಮನುಷ್ಯನಿಗಿರದೆ?

ತಿನ್ನುವುದು, ಕುಡಿಯುವುದು, ಚಪಲಗಳನ್ನು ತೀರಿಸಿಕೊಳ್ಳುವುದು, ಇಷ್ಟರಲ್ಲೇ ಬಹು ಜನರ ಆಯುಸ್ಸು ಮುಗಿಯುತ್ತದೆ. ಇದಕ್ಕಾಗಿ ತಮ್ಮ ದೈಹಿಕ, ಮಾನಸಿಕ ಶಕ್ತಿಗಳನ್ನೆಲ್ಲ ವೆಚ್ಚ ಮಾಡುತ್ತಾರೆ; ಇರುವ ಕಾಲವನ್ನೆಲ್ಲ ಅದಕ್ಕೇ ವಿನಿಯೋಗಿಸುತ್ತಾರೆ.

ಹೀಗೆ ಮಾಡುವಾಗ ಮನುಷ್ಯರೂ ಪ್ರಾಣಿವರ್ಗವೇ ಎಂದು ಸಿದ್ಧವಾಯಿತು. ಪ್ರಾಣಿಗಳು ಮಾಡುವುದೂ ಇಷ್ಟನ್ನು ತಾನೆ? ಮನುಷ್ಯನಿಗಿರುವ ಹೆಚ್ಚುಗಾರಿಕೆಯೇನು? ಆದರೆ ಮನುಷ್ಯನಿಗೂ ಇತರ ಪ್ರಾಣಿವರ್ಗಕ್ಕೂ ಅಂತರವೊಂದಿದೆ. ಮೇಲು ಕೀಳೆಂಬ ಎಣಿಕೆ ಬೇಡ; ಅಂತರವೆಂದರೆ ಸಾಕು.

ಇದು ಮನುಷ್ಯನ ಸಂಸ್ಕೃತಿಗೆ ಸಂಬಂಧಿಸಿದ್ದು. ಮಾತು, ಕತೆ, ನೀತಿ, ಆಚಾರ, ವ್ಯವಹಾರ, ಸಮಾಜ, ಸಂಬಂಧ, ಕಲೆ, ಅಧ್ಯಾತ್ಮ ಹೀಗೊಂದು ಪರಿಸರ ಮನುಷ್ಯನ ಸುತ್ತ ಬೆಳೆದಿದೆ. ಇದಕ್ಕೆ ಹೊಂದಿಕೊಂಡಂತೆಯೂ ಮನುಷ್ಯನ ಹೊಣೆಗಾರಿಕೆಯಿದೆಯಲ್ಲವೆ। ಇದನ್ನು ಅರಿಯದೆ, ಇದರ ಸ್ವಾರಸ್ಯವನ್ನು ಮನಗಾಣದೆ, ಮನುಷ್ಯ ತಿನ್ನುವುದು, ಕುಡಿಯುವುದು, ಸುಖಪಡುವುದು ಇಷ್ಟರಲ್ಲೇ ಬಾಳನ್ನು ಕಳೆಯಲು ನಿಶ್ಚಯಿಸಿದರೆ ಆಗ ಅವನಿಗೆ ಹಣವೇ ಮುಖ್ಯವಾಗುತ್ತದೆ.

ಸಂಸ್ಕೃತಿಯ ದೃಷ್ಟಿಯಿಂದ ಅವನನ್ನು ನಿಷ್ಪ್ರಯೋಜಕನೆನ್ನಬೇಕು. ಅವನಿಂದ ಇತರರಿಗೆ ಯಾವ ಬಗೆಯ ನೆರವೂ ಆಗಲಾರದು. ಸಮಾಜಕ್ಕೊಂದು ಹೊರೆ ಅವನು. ಅವನು ಬದುಕಿದುದು ಸುಮ್ಮನೆ ಎಂದಾಗುತ್ತದೆ. ಆದರೆ ಇತರ ನಿಷ್ಪ್ರಯೋಜಕರ ಕಣ್ಣಿಗೆ ಅವನು ನಿಷ್ಪ್ರಯೋಜಕನೆಂದು ಕಾಣುವುದಿಲ್ಲವೆನ್ನಿ. ಅವರ ಬಾಳೂ ಕಳೆಯುತ್ತಿರುವುದು, ಹೀಗೆಯೇ. ಅವರು ಮಾಡುವುದೆಲ್ಲವೂ ತಿನ್ನುವುದು, ಕುಡಿಯುವುದು, ಚಪಲ ತೀರಿಸಿಕೊಳ್ಳುವುದು ಅಷ್ಟೇ. ಅವರಿಗೆ ಇವನು ಆದರ್ಶ ಪುರುಷನೇ ಆದಾನು! ಹಣವನ್ನು ಸಂಪಾದಿಸಿದ ಮೇಲೆ ಉಳಿದ ಪುರುಷಾರ್ಥಗಳನ್ನು ಕೈಗೂಡಿಸಿಕೊಳ್ಳುವ ಕಡೆ ಮನಸ್ಸು ಹರಿದರೆ ಒಳ್ಳೆಯದೇ; ಆದರೆ ಹೀಗಾಗುವುದು ಕಡಮೆ. ಹಣ ದಾರಿಯಾಗುವುದಿಲ್ಲ, ಗುರಿಯಾಗಿಬಿಡುತ್ತದೆ.

93. ಸುಖವೋ ಕಷ್ಟವೋ?

ಸ್ಯಾಮ್ಯುಎಲ್ ಜಾನ್‌ಸನ್ ಒಮ್ಮೆ ಹೇಳಿದನಂತೆ – ಮದುವೆಯಾಗಬೇಕು; ಏಕೆಂದರೆ ಮದುವೆಯಾಗದೆ ಇರುವವನಿಗೆ ಯಾವ ಸಂತೋಷವೂ ಇರದು. ಮದುವೆಯಾದರೇನೋ ಕಷ್ಟಗಳು ಬರುತ್ತವೆ; ಹಾಗೆಂದು ಮದುವೆಯಾಗದಿದ್ದರೆ ಸುಖವೇ ಇಲ್ಲವಲ್ಲ?

ಈ ಮಾತು ಹಣದ ವಿಚಾರಕ್ಕೂ ಅನ್ವಯಿಸುತ್ತದೆ. ಹಣವಿದ್ದವರಿಗೆ ಬಗೆಬಗೆಯ ಕಷ್ಟಗಳಿರುತ್ತವೆ, ದಿಟ. ಕಾಪಾಡಿಕೊಳ್ಳುವ ಕಷ್ಟ, ತೆರಿಗೆಯ ತೊಂದರೆ, ಸಾಲಗಾರರ ಸುಲಿಗೆ, ಕಳ್ಳರ ಕಾಟ, ದುಂದುವೆಚ್ಚ – ಹೀಗೆ ಹತ್ತು ಹಲವಾರು.

ಹಣವನ್ನೇ ಸಂಪಾದಿಸದಿದ್ದರೆ ಈ ಕಷ್ಟಗಳೇನೋ ಇಲ್ಲ. ಹಾಗೆಂದು ಹಣವನ್ನು ಸಂಪಾದಿಸದೆ ಇರುತ್ತಾರೆಯೆ? ಹಣವಿರದಿದ್ದರೆ ಸುಖವೆಲ್ಲಿ ಬಂತು? ಹಣವಿದ್ದರೆ ಸುಖಪಡುವ ಸಾಧ್ಯತೆಯಾದರೂ ಇರುತ್ತದೆಯಲ್ಲವೆ?

ಭಿಕ್ಷುಕರು ಬರುತ್ತಾರೆಂದು ಹೆದರಿ ಅಡುಗೆ ಮಾಡದೆ ಇರುವವರುಂಟೆ? ಅಜೀರ್ಣವಾದೀತೆಂಬ ಭಯದಿಂದ ಊಟ ಮಾಡದೇನೆ ಇರಬಹುದೆ? ಕಷ್ಟಗಳು

ಬಂದಾವೆಂದು ಬೆದರಿ ಮದುವೆಯನ್ನೆ ಮಾಡಿಕೊಳ್ಳದಿದ್ದರೆ ಹೇಗೆ? ಹಣ ಸಂಪಾದಿಸುವ ವಿಚಾರವೂ ಹೀಗೆಯೆ.

ಹಣವಿಲ್ಲದೆ ಬದುಕು ದುಸ್ತರವಾಗುತ್ತದೆ. ಆಡಂಬರವಿಲ್ಲದಿದ್ದರೂ ಅಗತ್ಯಗಳಾದರೂ ತೀರಬೇಕಲ್ಲ? ಉಣ್ಣಲು ಅನ್ನ, ತೊಡಲು ಬಟ್ಟೆ, ಇರಲು ಮನೆ, ಮಕ್ಕಳು ಮರಿಗೆ ಓದು, ಇಷ್ಟಾದರೂ ಆಗಬೇಡವೆ?

ಅಗತ್ಯಗಳು ಬರುಬರುತ್ತ ಹೆಚ್ಚುತ್ತವೆಯೆನ್ನುವುದೇನೋ ದಿಟ. ಮೋಜೆಂದು ಒಂದು ಕಾಲದಲ್ಲಿದ್ದುದು, ಮುಂದೆ ಸಹಜವೇ ಆಗಿಬಿಡುತ್ತದೆ. ಆಡಂಬರವೆಂದು ಬಗೆದದ್ದು ಬದುಕಿನಲ್ಲಿ ಅನಿವಾರ್ಯವಾಗಿ ಸೇರಿಕೊಂಡುಬಿಡುತ್ತದೆ.

ಹೀಗಾದಾಗ, ಹಣವೂ ಹೆಚ್ಚು ಹೆಚ್ಚು ಬೇಕಾಗುತ್ತದೆ. ಸಂಪಾದಿಸುವ ಕ್ಲೇಶವೂ ಹೆಚ್ಚಾಗುತ್ತದೆ. ಹಣ ಹೆಚ್ಚಾದಾಗ ಅದನ್ನು ಕಾಪಾಡಿಕೊಳ್ಳುವ ಕ್ಲೇಶವೂ ಹೆಚ್ಚಾಗುತ್ತದೆ. ಹೆಚ್ಚಿನ ಹಣಕ್ಕೆ ಹೊಂದಿಕೊಂಡು ಬರುವ ನಷ್ಟಗಳೂ ಸಹಜವಾಗಿಯೆ ಹೆಚ್ಚುತ್ತವೆ, ಹೆಚ್ಚು ಹಣ, ಹೆಚ್ಚು ಕಷ್ಟ, ಎಂಬಂತೆ.

ಹಣದಿಂದ ಬರುವ ಸುಖಕ್ಕಿಂತ ಒದಗುವ ಕಷ್ಟಗಳೇ ಮೇಲೆದ್ದು ಕಾಣಿಸಿಕೊಳ್ಳುವುದೂ ಉಂಟು. ಹಣವಿರುವಾಗ ಹಲವು ಕ್ಲೇಶಗಳೇನೋ ಇರುತ್ತವೆ. ಆದರೆ ಅವು ಸುಖಕ್ಕೆ ಅಡ್ಡಿ ಬರಬಹುದು. ಸುಖವನ್ನೇ ಇಂಗಿಸಿಬಿಟ್ಟರೆ ಹಣದ ಪ್ರಯೋಜನವಾದರೂ ಏನಾದೀತು? ಸುಖವನ್ನು ತರದ ಹಣ ಇದ್ದರೇನು, ಹೋದರೇನು?

ಹಣದ ಸಾಮರ್ಥ್ಯವನ್ನು ಅರಿತುಕೊಂಡಂತೆಯೆ ಅದರ ದಿಟವಾದ ಬೆಲೆಯನ್ನೂ ಕಂಡುಕೊಳ್ಳುವುದು ಜಾಣತನ. ಹಣಕ್ಕೆ ಸುಖವನ್ನು ತಂದುಕೊಡುವ ಸಾಮರ್ಥ್ಯವಿದೆ. ಹಾಗೆಂದು ಅದನ್ನೇ ನಂಬಿಕೊಂಡರೆ ಅದು ಕಷ್ಟವನ್ನೇ ಕಂಡೀತು. ಅದಕ್ಕಿರುವ ನೆಲೆ ಸೀಮಿತವಾದುದೇ. ಅದನ್ನು ಮನವರಿಕೆ ಮಾಡಿಕೊಳ್ಳಬೇಕು.

ಆಸೆ ಹೆಚ್ಚಾಗಿದ್ದರೆ ಎಷ್ಟು ಹಣವಾದರೂ ಕಡಮೆಯೇ ಅಲ್ಲವೆ? ಮೇಲಾಗಿ ಹಣವನ್ನು ಪಡೆದುಕೊಳ್ಳುವುದರಲ್ಲೇ ಬದುಕನ್ನೆಲ್ಲ ಕಳೆದರೆ ಸುಖಪಡುವುದು ಯಾವಾಗ? ಮನುಷ್ಯನಿಗೆ ನೆರವಾಗಿ ಹಣವಿರಬೇಕು; ಹಣಕ್ಕೆ ನೆರವಾಗಿ ಮನುಷ್ಯನಿದ್ದರೆ ಕಷ್ಟವೇ! ಮುಖ್ಯವಾಗಿರಬೇಕಾದುದು ವಿವೇಕ.

94. ಹಣದಿಂದ ಸೊಕ್ಕಿದವರು

'ಇಕ್ಕಿದರುಂಟು, ಮದದಲಿ ಸೊಕ್ಕಿದರೇನುಂಟು?'

ಹೀಗೆಂದು ಪುರಂದರದಾಸರದ್ದೊಂದು ಮಾತು.

ಇಕ್ಕುವುದು, ಸೊಕ್ಕುವುದು ಎಂಬೆರಡೂ ಹಣದ ಎರಡು ದಾರಿಗಳು. ಒಂದರಿಂದ ಒಳಿತು, ಇನ್ನೊಂದರಿಂದ ಕೆಡುಕು ಎಂದು ದಾಸರ ಅಭಿಪ್ರಾಯ. ಯಾರೊಬ್ಬರಲ್ಲಿ ಹಣ ಸೇರಿತೆನ್ನಿ. ಅದೇನು ಆಕಾಶದಿಂದ ಉದುರಿತೆ? ಮನೆಯ ಹಿತ್ತಲ ಮರದಲ್ಲಿ ಬಿಟ್ಟಿತೆ? ದುಡಿದು ಸಂಪಾದಿಸಿದ್ದೇ ಎಂದರೂ ಬೇರೆಯವರಿಂದ ಪಡೆದುಕೊಂಡದ್ದು ತಾನೆ?

ಒಂದೆಡೆಯಿಂದ ಇನ್ನೊಂದೆಡೆಗೆ ಸಾಗುವುದೆ ಹಣದ ಸ್ವಭಾವ. ಒಬ್ಬರಿಂದ ಇನ್ನೊಬ್ಬರಿಗೆ ಸಲ್ಲುವುದೇ ಅದರ ಧರ್ಮ. ಒಬ್ಬನಿಗೆ ಸಾಕಾಗುವಷ್ಟು ಮಟ್ಟಿಗೆ ಹಣವಿದ್ದಿತೆಂದರೂ ಅವನ ಊಟ, ಉಡುಗೆಗಳಿಗಾದರೂ ಅದು ಬೇರೆಯವರ ಕೈಸೇರಬೇಕು. ಅಗತ್ಯಕ್ಕಿಂತ ಹೆಚ್ಚಿನ ಹಣವಿದ್ದರಂತೂ ಹಲವು ದಾರಿಗಳಲ್ಲಿ ಅದು ಹರಿದು ಹಲವರ ಕೈಸೇರಬೇಕು.

ಇದ್ದವರು ಇಲ್ಲದವರಿಗೆ ದಾನ ಮಾಡುವುದು ಒಂದು ದಾರಿ. ಹಣದ ಸ್ವಭಾವವನ್ನೇ ಅನುಸರಿಸಿದ್ದು ಅದು. ಸಮಾಜದ ಒಂದು ಅಗತ್ಯವನ್ನೂ ಅದು ಪೂರೈಸಿದಂತಾಗುತ್ತದೆ. ಉಳ್ಳವರು ಇಕ್ಕಿದರೆ ತಾನೆ ಇಲ್ಲದವರಿಗೆ ಅನುಕೂಲ?

ದಾನಕ್ಕೆ ಕೈಯೊಡ್ಡಬಾರದು, ದುಡಿದು ಸಂಪಾದಿಸಬೇಕು ಎನ್ನುವುದೇನೋ ಸರಿಯೆ. ಆದರೆ ದುಡಿಯುವ ಅವಕಾಶ ಎಲ್ಲರಿಗೂ ಬರುವುದುಂಟೆ? ದುಡಿಯುವ ದೈಹಿಕ, ಮಾನಸಿಕ ಅನುಕೂಲವಾದರೂ ಎಲ್ಲರಿಗೂ ಉಂಟೋ? ದುಡಿಯುವ ಸಾಮರ್ಥ್ಯವಿದ್ದು ದುಡಿಯದಿದ್ದರೆ ಅದು ತಪ್ಪು; ಸೋಮಾರಿಗೆ ನೆರವಾಗಬಾರದು. ಪರಾವಲಂಬನೆಗೆ ಉತ್ತೇಜನ ನೀಡಬಾರದು.

ಆದರೆ ಸಮಾಜದಲ್ಲಿ ಬಡತನವೊಂದೇ ಸಮಸ್ಯೆಯಲ್ಲ. ಸಮಾಜ ಕಲ್ಯಾಣಕ್ಕೆ ಹತ್ತು ಹಲವಾರು ಮುಖಗಳು. ರೋಗಿಗಳು, ಪ್ರಕೃತಿ ವಿಕೋಪಕ್ಕೆ ಪಕ್ಕಾದವರು, ಅಪಘಾತಕ್ಕೆ ಈಡಾದವರು, ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದವರು. ಅನಾಥರಾದ ಮಕ್ಕಳು, ನಿರ್ಗತಿಕರಾದ ಮುದುಕರು ಹೀಗೆ ಸಮಾಜದ ಸಮಸ್ಯೆಗಳು ಬೆಳೆಯುತ್ತವೆ.

ಈ ಸಮಸ್ಯೆಗಳನ್ನೆಲ್ಲ ಹಣವೊಂದೇ ಪರಿಹರಿಸುವುದೆಂದಲ್ಲ. ಆದರೆ ಹಣದ ಅಗತ್ಯವೂ ಇದೆಯಲ್ಲವೆ? ಹಣವುಳ್ಳವರು ನೀಡದಿದ್ದರೆ ಆದೀತೆ? ಇಲ್ಲದವರು ಇಕ್ಕುವುದು ಹೇಗೆ? ಉಳ್ಳವರು ಇಕ್ಕುವಾಗಲೂ ವಿವೇಕವಿರಬೇಕು, ವಿಮರ್ಶೆಯಿರಬೇಕು, ವಿಚಾರ ಮಾಡಬೇಕು.

ತಮ್ಮ ಅಗತ್ಯಗಳನ್ನು ಮೀರಿ ಹಣವಿದ್ದವರು, ಇಕ್ಕುವ ಮನಸ್ಸಿಲ್ಲದಿದ್ದರೆ, ಸೊಕ್ಕುವುದು ಖಂಡಿತ. ಸದ್ವಿನಿಯೋಗವಾಗದ ಯಾವುದು ಹೆಚ್ಚಾಗಿದ್ದರೂ ಮದಕ್ಕೆ ಎಡೆ. ಇವುಗಳಂತೆಯೆ ಧನಮದವೂ. ಮದ ಒದಗಿತೆಂದರೆ ಕಣ್ಣು ಕುರುಡಾಗುತ್ತದೆ, ವಿವೇಕ ಜಾರುತ್ತದೆ, ವಿಚಾರ ಸಡಿಲವಾಗುತ್ತದೆ. ಹೀಗಾದಾಗ ಹಳ್ಳಕ್ಕೆ ಬೀಳದಿರುವುದು ಹೇಗೆ? ಮರದ ಮೇಲೆ ಗತ್ತಿನಿಂದ ಮಲಗಿದವನು ಎಚ್ಚರಗೊಳ್ಳುವುದು ಯಾವಾಗ? ನೆಲಕ್ಕೆ ಬಿದ್ದ ಮೇಲೇ ತಾನೆ? ಸೊಕ್ಕಿದವನು ಸುಧಾರಿಸಿಕೊಳ್ಳುವುದು, ಸೊಕ್ಕಿಗೆ ಆಸರೆಯಾದ ಹಣ ಸೋರಿಹೋದ ಮೇಲೇ. ಆಮೇಲೆ ಇಕ್ಕುವ ಮನಸ್ಸು ಬಂದರೆ ಪ್ರಯೋಜನವೇನು? ಇಕ್ಕುವ ಮನಸ್ಸು ಮೊದಲೇ ಇದ್ದಿದ್ದರೆ ಸೊಕ್ಕುತ್ತಲೇ ಇರಲಿಲ್ಲ ಅವನು!

95. ಸೊಡರಿನ ಸಡಗರ

ಸಿರಿಯೆಂಬುದೊಂದು ಸೊಡರಂತೆ. ಗಾಳಿಯಿಲ್ಲದಿದ್ದಾಗ ನೆಮ್ಮದಿಯಾಗಿ ನೆಟ್ಟಗೆ ದೀಪ ಬೆಳಗುತ್ತದೆ. ಗಾಳಿ ಬೀಸಲು ತುಯ್ದಾಡುತ್ತದೆ. ಬಿರುಗಾಳಿಗೆ ಆರಿಯೇ ಹೋಗುತ್ತದೆ; ಬೆಳಕಿದ್ದೆಡೆ ಕತ್ತಲೆಯೇ ಆಗ.

ಸಿರಿಯುಳ್ಳವರು ಇದನ್ನು ಅರಿತುಕೊಳ್ಳಬೇಕು. ಗಾಳಿ ಬೀಸದಂತೆ ಸೊಡರಿಗೆ ಕೈ ಅಡ್ಡ ಹಿಡಿಯಬೇಕು; ಬಿರುಗಾಳಿ ಬರದೆಡೆ ಸೊಡರನ್ನಿರಿಸಿಕೊಳ್ಳಬೇಕು. ಸೊಡರಿನ ಬೆಳಕು ಇದ್ದೇ ಇರುವುದೆಂಬ ನಂಬಿಕೆಯಿರಬಾರದು. ಗಾಳಿಗಿಕ್ಕಿದ ದೀಪ ಉರಿಯುತ್ತಲೆ ಇರುವುದಾದೀತೆ? ಉಳಿಸಿಕೊಳ್ಳುವ ಜಾಣತನವಿದ್ದರೆ ಉಳಿದೀತು. ಎಚ್ಚರ ತಪ್ಪಿದರೆ ಕತ್ತಲೆ ಕಾಡುವುದು ದಿಟ. ಕತ್ತಲೆಯಲ್ಲಿ ಸೊಡರನ್ನು ಮತ್ತೆ ಹೊತ್ತಿಸಿಕೊಳ್ಳುವುದು ಕಷ್ಟ.

ಸೊಡರೆಂಬುದು ಗಟ್ಟಿಯಾದ ವಸ್ತುವೇನಲ್ಲ. ಮಳೆಯಾಗಲಿ, ಗಾಳಿಯಾಗಲಿ, ಕೆಡದೆ ಇರುವ ದ್ರವ್ಯವಲ್ಲ. ಅತ್ತ ಬಿಸಾಡಿದರೂ ಇದ್ದೇ ಇರುವುದು ಎಂಬಂಥ ಪದಾರ್ಥವಲ್ಲ. ದೀಪದ ಉರಿ ಗಳಿಗೆ ಗಳಿಗೆಗೂ ಚಂಚಲವೇ. ಅದೇನು ಸ್ಥಿರವಾದುದಲ್ಲ. ಉರಿಯುವಾಗ ಬೆಳಕು ನೀಡುತ್ತದೆ; ನೆರವಿಗೆ ಬರುತ್ತದೆ. ಆದರೆ ನಮಗೆ ಬೆಳಕನ್ನು ನೀಡಬೇಕೆಂಬ ಬಯಕೆ, ನಮಗೆ ನೆರವಾಗಬೇಕೆಂಬ ಆಸೆ ಅದಕ್ಕೇನಿರದು. ಉರಿಯುತ್ತಲೇ ಇರಬೇಕೆಂಬ ತವಕ ದೀಪಕ್ಕಿರುವುದೆಂತು?

ಗಾಳಿ ಬಂದೆಡೆ ತೂರುತ್ತದೆ; ತತ್ತರಿಸುತ್ತದೆ. ಬಿರುಗಾಳಿ ಬಂದಿತೆಂದರೆ ಆರಿಯೇ ಹೋಗುತ್ತದೆ. ಹಾಗಾದರೂ ತನ್ನನ್ನು ತಾನು ಉಳಿಸಿಕೊಳ್ಳಬೇಕೆಂಬ ಹವಣಿಕೆಯು ಅದಕ್ಕಿರದು. ಇರುವಾಗ ಆಸೆಯಿಲ್ಲ; ಹೋಗುವಾಗ ಮರುಕವಿಲ್ಲ. ಎಷ್ಟಾದರೂ ಜಡ.

ಸಿರಿಯೆಂಬುದೂ ಹೀಗೆಯೇ ಜಡ. ತನ್ನನ್ನೂ ತಾನು ಅರಿಯದು; ಸುತ್ತಲದೇನನ್ನೂ ತಿಳಿಯದು. ತಾನು ಇರುವುದೆಲ್ಲಿ, ತನ್ನನ್ನು ಪಡೆದುಕೊಂಡಿರುವ ಭಾಗ್ಯಶಾಲಿ ಯಾರು ಎಂಬುದೇನನ್ನೂ ಅದು ಲೆಕ್ಕಿಸುವುದಿಲ್ಲ. ಯಾವ ಕಡೆಯಿಂದ ಒತ್ತಡ ಬಂದರೆ ಆ ಕಡೆಗೆ ಒಲಿಯುತ್ತದೆ; ಯಾರು ಸೆಳೆದುಕೊಂಡರೆ ಅವರಿಗೆ ದಕ್ಕುತ್ತದೆ. ತನ್ನ ಮಾಲಕನಿಗೆ ನಿಷ್ಠೆಯಿಂದ ತಾನು ನಡೆದುಕೊಳ್ಳಬೇಕೆಂಬ ನಿಯತ್ತು ಅದಕ್ಕೇನಿಲ್ಲ. ತನಗೆ ಮಾಲಕನಿದ್ದಾನೆಂಬುದನ್ನಾಗಲಿ ಅದು ಎಣಿಸುವುದಿಲ್ಲ.

ಇಂಥ ಸಿರಿಯನ್ನು ಪಡೆದುಕೊಂಡವನು ಅದನ್ನು ಕಾಪಿಟ್ಟುಕೊಳ್ಳುವುದು ಸುಲಭವೇನಲ್ಲ. ಸಿರಿಯಿದ್ದಲ್ಲಿ ಅದನ್ನು ದೋಚಿಕೊಳ್ಳುವ ಹದ್ದುಗಳು ಹಾರಾಡುತ್ತಲೆ ಇರುತ್ತವೆ; ಮೇಲೆರಗಲು ಸಮಯಕ್ಕಾಗಿ ಕಾದಿರುತ್ತವೆ. ಇವುಗಳ ಕಣ್ಣು ತಪ್ಪಿಸಿ ಸಿರಿಯನ್ನು ಉಳಿಸಿಕೊಳ್ಳಲು ಜಾಣತನವೂ ಬೇಕು, ಎಚ್ಚರವೂ ಬೇಕು. ಹರಿಯುವ ನೀರನ್ನು ಕೈಯಲ್ಲಿ ಹಿಡಿದಿಟ್ಟುಕೊಳ್ಳಲು ಹವಣಿಸಿದಂತೆಯೇ ಆಗುತ್ತದೆ! ಸೋರಿ ಹೋಗಲು ಹತ್ತು ದಾರಿಗಳಿರುವಾಗ ಉಳಿಸಿಕೊಳ್ಳುವುದು ಹೇಗೆ?

ಸೊಡರಿನ ಸಾಮತಿ ಸರಿಯಾದದ್ದು. ಕತ್ತಲೆಯನ್ನು ನೀಗಲು ಸೊಡರು ನೆರವಾಗುತ್ತದೆ. ಬದುಕಿನ ಕಷ್ಟ ಕಾರ್ಪಣ್ಯಗಳನ್ನು ಕಳೆದುಕೊಳ್ಳಲು ಸಿರಿ ನೆರವಾಗುತ್ತದೆ. ಸೊಡರಿನಂತೆಯೆ ಅಲುಗಾಡುವುದು, ಒದ್ದಾಡುವುದು ಸಿರಿಗೂ ಇದ್ದದ್ದೇ. ಗಾಳಿಯಿಲ್ಲದಿದ್ದರೂ ಸೊಡರು ಉರಿಯಲಾರದು; ಗಾಳಿ ಹೆಚ್ಚಾದರೂ ಉಳಿಯಲಾರದು. ಹಾಗೆಯೆ ಆಸೆಯಿಲ್ಲದಿದ್ದರೂ ಸಿರಿ ಬರುವುದಿಲ್ಲ. ಎಷ್ಟು ಅಗತ್ಯವೊ ಅಷ್ಟು ಗಾಳಿಯನ್ನು ಸೊಡರಿಗೆ ಒದಗಿಸಬೇಕು; ಆಗ ಅದು ನೆಮ್ಮದಿಯಿಂದ ಉರಿಯುತ್ತದೆ, ಬೆಳಕನ್ನು ನೀಡುತ್ತದೆ.

ಸಿರಿಗೂ ಹಾಗೆಯೇ. ಅಗತ್ಯಕ್ಕೆ ತಕ್ಕಂತೆ ಅದಕ್ಕೆ ಅನುವು ಮಾಡಿಕೊಡಬೇಕು. ಅದರತ್ತಲೇ ಗಮನವೆಲ್ಲ ಇದ್ದರೆ ಅದರಿಂದಾಗುವ ಅನುಕೂಲಗಳನ್ನು ಅನುಭವಿಸುವುದು ಹೇಗೆ? ಸೊಡರನ್ನು ಉರಿಸುವುದರಲ್ಲೇ ವೇಳೆ ಕಳೆದರೆ, ಬೆಳಕನ್ನು ಬಳಸಿಕೊಳ್ಳುವುದು ಯಾವಾಗ? ಇತರರ ಆಕ್ರಮಣವನ್ನು ಹತ್ತಿಕ್ಕುವುದರಲ್ಲೆ ಆಯುಸ್ಸು ಕಳೆದರೆ ತನ್ನ ಅಗತ್ಯವನ್ನು ಪೂರೈಸಿಕೊಳ್ಳುವುದು ಕಷ್ಟವಲ್ಲವೆ?

96. ಸಿದ್ಧಸಾಮಗ್ರಿಯ ಯುಗ

ಅಡುಗೆಯಾಗಲಿ, ಉಡುಪಾಗಲಿ ಇದು ಪೂರ್ವಸಿದ್ಧ ಸಾಮಗ್ರಿಯ ಯುಗ. ದಿಢೀರೆಂದು ಎಲ್ಲವೂ ಆಗಿಬಿಡಬೇಕು.

ಬಟ್ಟೆ ಬೇಕೆಂದಾಗ ಬಟ್ಟೆಯನ್ನು ಬೇಕಾದಷ್ಟು ಕೊಂಡು ದರ್ಜಿಯನ್ನು ಹುಡುಕಿ ಅವನ ಕೈಗೊಪ್ಪಿಸಿ, ಅವನು ಹೇಳಿದ ಅವಧಿಯನ್ನು ನೀಡಿ, ಅವನು ಬಟ್ಟೆಯನ್ನು ಹೊಲಿದು ಕೊಟ್ಟಾಗ ತರುವುದು ಹಳೆ ಕಾಲದ್ದಾಯಿತು. ಈಗ 'ರೆಡಿಮೇಡ್' ಅಂಗಡಿಗಳಿವೆ. ಆದರೆ ಅದೇನು ಸುಖವೆ?

ಹೊಲಿದು ಸಿದ್ಧಪಡಿಸಿದ ಬಟ್ಟೆಯನ್ನು ಕೊಂಡುಕೊಳ್ಳಲೆಂದು ಅಂಗಡಿಗೆ ಹೋಗುತ್ತೀರೆನ್ನಿ. ಇರುವುದನ್ನೆಲ್ಲ ನೋಡಿದರೆ ಯಾವುದೋ ಒಂದೇ ಬಟ್ಟೆಯ ಬಣ್ಣ ನಿಮಗೆ ಹಿಡಿಸುತ್ತದೆ. ಅದನ್ನು ಅಂಗಡಿಯಾತ ನಿಮಗೆ ತೋರಿಸಿದಾಗ, ಅದು ನಿಮ್ಮ ಅಳತೆಯಲ್ಲ! ಒಂದು ವೇಳೆ ನಿಮ್ಮ ಅಳತೆಯೂ ಹೌದು. ನಿಮಗೆ ಒಪ್ಪಿಗೆಯೂ ಆಯಿತೆಂದರೆ ಅದನ್ನು ಹಾಕಿಕೊಳ್ಳಲು ನೋಡಿದಾಗ ಅದು ಸರಿಯೆನಿಸುವುದಿಲ್ಲ. ಹಾಗೆ ಹಾಕಿಕೊಂಡಾಗ ಸರಿಯೆಂದೂ ತೋರಿತೆನ್ನಿ, ಅದರ ಬೆಲೆ ತುಂಬ ದುಬಾರಿಯೆನಿಸುತ್ತದೆ! ನಿಮ್ಮ ಕಿಸೆಗೆ ಅದು ಅನುಕೂಲವೆನಿಸದು.

ಒಂದು ವೇಳೆ ಅದು ನಿಮಗೆ ಇಷ್ಟವೂ ಆಯಿತು, ಅಳತೆಯೂ ಸರಿಯಾಗಿದೆ, ಬೆಲೆಯೂ ನೀವು ತೆರಲಾರದಷ್ಟು ಅತಿಯಲ್ಲ ಎಂದರೆ, ಮನೆಗೆ ತಂದು ಒಮ್ಮೆ ತೊಟ್ಟುಕೊಂಡರೆ ಹರಿದುಹೋಗುತ್ತದೆ! ಹೀಗೆ ಆಗುವುದುಂಟು. ಎಲ್ಲರಿಗೂ ಅಲ್ಲ. ಹೆದರಿದವರ ಮೇಲೆ ಹಲ್ಲಿ ಬೀಳುವುದುಂಟಲ್ಲವೆ?

ಈ ಅಪಾಯವೇನೋ ಇದೆ, ಆದರೆ ಸಿದ್ಧವಾದ ಸಾಮಗ್ರಿಯನ್ನು ಮಾರುವ ಅಂಗಡಿಯಿಂದ ಎಷ್ಟು ಪ್ರಯೋಜನ ನೋಡಿ. ಬಟ್ಟೆಗಾಗಿ ಅಲೆದು, ದರ್ಜಿಗಾಗಿ ಅಂಡಲೆದು, ಅವನ ಮರ್ಜಿಯನ್ನು ಕಾದು, ವಾರಗಳು ಕಳೆದು ಪಡೆದುಕೊಳ್ಳುವ ಶ್ರಮವಿಲ್ಲವಷ್ಟೆ? ಬಯಸಿದೊಡನೆ, ಕಿಸೆಯಲ್ಲಿ ಕಾಸಿದ್ದರೆ ಕೈಗೂಡುವ ಹದನವಿದು.

ಊಟದಲ್ಲೂ ಇದೇ ಹವಣಿಕೆ. ಮನೆಯಲ್ಲಿ ಒಲೆಯ ಮುಂದೆ ಕೂತು, ನಿಂತು, ಸಾಮಗ್ರಿಗಳನ್ನೆಲ್ಲ ಸಿದ್ಧಪಡಿಸಿಕೊಂಡು, ಗಂಟೆಗಟ್ಟಳೆ ದುಡಿದರೇ ಅಡುಗೆ. ದಿಢೀರನೆ ಬಡಿಸುವ 'ಇನ್‌ಸ್ಟೆಂಟ್' ಊಟ, ಬೇಗನೇ ತಿನ್ನಬಹುದಾದ 'ಫಾಸ್ಟ್' ಊಟ– ಇವುಗಳ ಮುಂದೆ ಅಡುಗೆಯ ದುಡಿಮೆ ಯಾರಿಗೆ ಬೇಕಾದೀತು. ದುಡ್ಡು ಮುಂದಿಟ್ಟು ಏನು ಬೇಕೆಂದು ಹೇಳಿದರೆ ಆಯಿತು, ಅಲಾವುದ್ದೀನನ ದೀಪದಂತೆ ಅದು ನಿಮ್ಮೆದುರು ಪ್ರತ್ಯಕ್ಷವಾಗುತ್ತದೆ.

ಆದರೆ ಮನೆಯ ಊಟದ ರುಚಿಯೇ ಬೇರೆ; ಉಪಾಹಾರ ಗೃಹಗಳು ಒದಗಿಸುವ ಅಪಾಯವಿಲ್ಲ; ಹೊಟ್ಟೆ ಕೆಡುವುದಿಲ್ಲ. ಅದೇ ಹೋಟೆಲಿನ ಊಟ

ಎಲ್ಲರಿಗೂ ತಡೆಯಲಾರದು. ದಿನವೂ ಅದನ್ನೆ ತಿನ್ನುತ್ತಿದ್ದರೆ ಅಭ್ಯಾಸವೂ ಆದೀತೆನ್ನಿ; ರುಚಿಯೂ ಕಂಡೀತು. ಆದರೆ ವೆಚ್ಚ ಮನೆಯ ಊಟಕ್ಕಿಂತ ದುಬಾರಿಯೆ ಅಲ್ಲವೆ?

97. ಬೇಲಿಯ ಕೆಲಸ

'ಹೊಲ ಬೇಲಿ ಮೆದ್ದರೆ, ಮೊಲವೆದ್ದು ಇರಿದರೆ ಯಾವ ದಾರಿ?' ಎಂದು ಪುರಂದರದಾಸರು ಕೇಳಿದರು.

ಹಸು ಬಂದು ಮೇಯಬಾರದೆಂದು ಹೊಲಕ್ಕೆ ಬೇಲಿ ಹಾಕುತ್ತಾರೆ. ಬೇಲಿಯೇ ಹೊಲವನ್ನು ಮೇಯತೊಡಗಿದರೆ ಮಾಡುವುದೇನು? ಹೊಲದಲ್ಲಿ ಬೆಳೆಯನ್ನು ತಿನ್ನಬಾರದೆಂದು ಮೊಲವನ್ನು ಅಟ್ಟುತ್ತಾರೆ. ಅಂಜಿಕೆಯ ಪ್ರಾಣಿಯಾದುದರಿಂದ ಕಂಡೊಡನೆ ಓಡಿ ಹೋಗುವುದೆಂದು ಎಣಿಕೆ. ಆದರೆ ಮೊಲವೇ ಎದುರು ನಿಂತು, ಮೇಲೆ ಹಾರಿ ಕಚ್ಚುವುದಾದರೆ ಏನು ಮಾಡುವುದು? ನಮ್ಮ ನಿರೀಕ್ಷೆಯೇ ಒಂದು, ಆಗುವುದೇ ಇನ್ನೊಂದು. ಜನರನ್ನು ತೊಂದರೆಯಿಂದ ಕಾಪಾಡಲು ವ್ಯವಸ್ಥೆಯಿರುತ್ತದೆ; ಆದರೆ ವ್ಯವಸ್ಥೆಯಿಂದಲೇ ಜನರಿಗೆ ತೊಂದರೆಯಾಗುವುದಾದರೆ ಬೇರೆ ದಾರಿಯಿದೆಯೆ? ಮೊದಲಿಗೆ ಜನರ ಹಿತವನ್ನು ಸಾಧಿಸಲು ರಾಜರಿದ್ದರು. ಆದರೆ ಎಷ್ಟೋ ಮಂದಿ ದೊರೆಗಳಿಂದ ಜನರು ಹೇಳಲಾರದಷ್ಟು ಬವಣೆ ಪಟ್ಟಿಲ್ಲವೆ? ದೊರೆಗಳು ಅನ್ಯಾಯಕಾರಿಗಳೆಂದು ಯಾರಲ್ಲಿ ದೂರುವುದು? ಆ ದೊರೆಯ ಮಂತ್ರಿ ಇನ್ನೆಂಥವನೋ! ಸೇನಾನಿಯ ಗುಣವೇನೋ, ಪುರೋಹಿತನೆಷ್ಟು ಪಾಪಿಯೋ! ಸೈರಿಸಿಕೊಳ್ಳದೆ ಬೇರೆ ದಾರಿಯೆ ಇಲ್ಲ.

ಪ್ರಜಾತಂತ್ರದಲ್ಲಾದರೆ ಆಳುವವರನ್ನು ಸರಿಕಾಣದಿದ್ದರೆ ಬದಲಿಸುವುದು ಸಾಧ್ಯ. ಕಾಲಕಾಲಕ್ಕೆ ಜನರೇ ತಮ್ಮನ್ನು ಆಳುವವರು ಯಾರೆಂಬುದನ್ನು ನಿರ್ಧರಿಸುತ್ತಾರೆ. ಅಭ್ಯರ್ಥಿಗಳ ಗುಣ, ಹಿನ್ನೆಲೆ, ಯೋಗ್ಯತೆ, ಸಾಮರ್ಥ್ಯ ಎಲ್ಲವನ್ನೂ ಅಳೆದು ತೂಗಿ ವಿವೇಕದಿಂದ, ದಾಕ್ಷಿಣ್ಯವಿಲ್ಲದೆ ಆಯ್ದುಕೊಳ್ಳಬೇಕೆಂಬುದು ಪ್ರಜಾತಂತ್ರದ ಎಣಿಕೆ. ಆನುವಂಶಿಕ ರಾಜರ ಆಡಳಿತಕ್ಕಿಂತ ಇದು ಮೇಲಲ್ಲವೆ?

ಸರಿಯೇ, ರಾಜರನ್ನು ಗದ್ದಿಗೆಯಿಂದ ಕೆಳಗಿಳಿಸಿ ಕಾಡಿಗೋಡಿಸುವುದಾಗದು. ತಾವೇ ಅವನ ರಾಜ್ಯದಿಂದ ಹೊರಗೆ ಹೋಗಬೇಕಷ್ಟೆ. ಪ್ರಜಾತಂತ್ರದಲ್ಲಿ ಪ್ರಜೆಗಳದ್ದೇ ಮೇಲುಗೈ. ಅವರು ಆರಿಸಿಕೊಂಡವರು ಆಳರಸರು; ಸರಿಕಾಣದಿದ್ದರೆ ಅವರು ಮತ್ತೊಮ್ಮೆ ಆಳುವಂತಿಲ್ಲ. ಆದರೆ ಒಮ್ಮೆ ಆಯ್ಕೆಯಾಯಿತೆಂದರೆ ಮತ್ತೆ ಚುನಾವಣೆಯವರೆಗೆ ಅವರೇ ದೊರೆಗಳು; ಅವರನ್ನು ಜನರು ಸಹಿಸಿಕೊಳ್ಳದೆ ಬೇರೆ ದಾರಿಯಿಲ್ಲ. ಅವರೆಷ್ಟೇ ದುರ್ಮಾರ್ಗಿಗಳಾಗಿರಲಿ, ದುರ್ಬಲರಾಗಿರಲಿ, ದುರ್ಬುದ್ಧಿಗಳಾಗಿರಲಿ ಅವರನ್ನು ಅವರ ಅಧಿಕಾರಾವಧಿಗೆ ಮುನ್ನ ಕೆಳಗಿಳಿಸುವಂತಿಲ್ಲ.

ಆಳುವವರ ದೃಷ್ಟಿ ತಮ್ಮ ಅಧಿಕಾರಾವಧಿಯ ಮೇಲೆ. ಮತ್ತೆ ಆಯ್ಕೆಯಾಗಿ ಬರುವ ನಿಶ್ಚಯವಿಲ್ಲವೆಂದು ತಿಳಿದಾಗ, ತಮ್ಮ ಸ್ವಂತದ ಪ್ರಯೋಜನವನ್ನು ಸಾಧಿಸಿಕೊಳ್ಳುವ ಹಂಬಲ ಬೇರೂರುವುದು ಸಹಜ. ಎಲ್ಲ ಪ್ರಯೋಜನಗಳಿಗೂ ಮೂಲಭೂತವಾದುದು ಹಣ. ಸಾಧ್ಯವಾದಷ್ಟು ಹಣವನ್ನು ಗಳಿಸಿಕೊಳ್ಳುವ ಚಟ ಪ್ರಜಾತಂತ್ರದ ಅರಸರಲ್ಲಿ ಕಾಣುವುದು ಸಹಜವೇ. ಸಾಮಾನ್ಯನೊಬ್ಬನು ಅಧಿಕಾರ, ಅಂತಸ್ತು, ಸ್ಥಾನ, ಮಾನಗಳ ರುಚಿ ಕಂಡಾಗ, ಮತ್ತೆ ಸಾಮಾನ್ಯನಾಗಬಯಸುವನೆ? ಅಧಿಕಾರ ಇರುವಾಗ ಅರಸನಾದವನು ಅಧಿಕಾರ ಹೋದ ಮೇಲೂ ಅರಸನಾಗಿಯೆ ಉಳಿಯಬೇಕಲ್ಲವೆ?

ಹೀಗೆ ಅವನನ್ನು ಉಳಿಸುವುದು ಹಣವೊಂದೇ. ಹಾಗೆಂದೇ ಅಧಿಕಾರ ಇರುವಾಗಲೇ ಹಣವನ್ನು ಮಾಡಿಕೊಳ್ಳುವ ಹಂಬಲ ಹಲವರಿಗಿರುವುದು. ಹಣವನ್ನೂ ಜನರಿಂದಲೇ ಕಸಿದುಕೊಳ್ಳಬೇಕಲ್ಲವೆ? ಅವರನ್ನು ಕಾಡದೆ ಗಾಸಿ ಮಾಡದೆ ಹಣವೆಲ್ಲಿ ಬರುತ್ತದೆ? ಬೇಲಿಯೇ ಹೊಲವನ್ನು ಮೆಯ್ಯುವ ಸಂಗತಿಯೇ ಇದು. ಅಧಿಕಾರವಿದ್ದಾಗ ಸಾಮಾನ್ಯನೂ ಇರಿಯಬಲ್ಲ ಮೊಲ.

98. ಹಣ-ತೃಪ್ತಿಗಳ ಹಗರಣ

ಹಣದ ಒಂದು ಗುಣ ಅದು ಎಷ್ಟಿದ್ದರೂ ಸಾಕೆನಿಸದಿರುವುದು. ತೃಪ್ತಿಗೂ ಹಣಕ್ಕೂ ಹುಟ್ಟಿನಿಂದಲೆ ಬಂದ ವೈರ. ಹಣವಿದ್ದಷ್ಟೂ ಹಣದ ಕೊರತೆ ಹೆಚ್ಚುತ್ತದೆ, ಹಣದ ಬಯಕೆ ಹೆಚ್ಚುತ್ತದೆ.

ಬೇರೆಯ ಪರಿಕರಗಳಿಗೆ ಈ ಗುಣವಿಲ್ಲ. ಊಟ ಮಾಡುವಾಗ ಹಸಿವು ಹೋದರೆ ಊಟದ ಬಯಕೆಯೂ ಮರೆಯಾಗುತ್ತದೆ; ಎಷ್ಟು ರುಚಿಯಾಗಿದ್ದರೂ ಅದು ಬೇಡವೆನಿಸುತ್ತದೆ. ಬಟ್ಟೆಯೂ ಅಷ್ಟೆ. ಅಂಗಿಯ ಮೇಲಂಗಿಯೆಂದು ಎಷ್ಟನ್ನು ಹಾಕಿಕೊಳ್ಳಬಹುದು? ಅದಕ್ಕೂ ಮಿತಿಯಿರುತ್ತದೆ. ಕೆಲಸವನ್ನು ತಾನೆ ಎಷ್ಟು ಮಾಡಬಹುದು? ಎಷ್ಟೇ ಇಷ್ಟವಾದದ್ದಾಗಲಿ, ಒಂದು ಮಿತಿಯನ್ನು ಮೀರಿದರೆ ಬೇಸರವಾಗುತ್ತದೆ. ಆಟ, ಪಾಠ, ಹಾಡು, ಹಸೆ ಎಲ್ಲವೂ ಹೀಗೆಯೆ. ಮಿತಿಯರಿತು ಸಾಗುತ್ತವೆ.

ಹಣವಾದರೆ ಹೀಗಲ್ಲ. ಎಷ್ಟು ಸಂಪಾದಿಸಿದರೆ ತಾನೆ ಸಾಕು ಎನಿಸಬಹುದು? ಎಷ್ಟು ಬೊಕ್ಕಸದಲ್ಲಿದ್ದರೆ ತೃಪ್ತಿಯಾದೀತು? ಸಂಪಾದಿಸುತ್ತಲೆ ಇರಬೇಕು; ಬೊಕ್ಕಸದಲ್ಲಿ ಕೂಡಿಡುತ್ತಲೆ ಇರಬೇಕು. ಕೈಲಾಗದಿದ್ದಾಗ ಅದು ಬೇರೆ ಮಾತು; ಅವಕಾಶ ತಪ್ಪಿ ಹೋದರೆ ಅದು ಇನ್ನೊಂದು ಮಾತು. ಮೈಯಲ್ಲಿ ಬಲವಿದ್ದು ಗಳಿಸುವ ಅವಕಾಶ ದೊರಕಿದಾಗ, ಯಾರು ತಾನೆ ಗಳಿಸದೆ ತಣ್ಣಗೆ ಕೂಡುತ್ತಾರೆ?

ಗಳಿಸುವ ಗೀಳಿರುವವರು ಇದಕ್ಕೊಂದು ಸಮಾಧಾನವನ್ನೂ ಹೇಳುತ್ತಾರೆನ್ನಿ. ಬರುಬರುತ್ತ ಹಣದ ಬೆಲೆ ಇಳಿಯುತ್ತಿದೆ. ಬದುಕುವ ವೆಚ್ಚ ದಿನದಿನಕ್ಕೆ ಏರುತ್ತಲೆ ಹೋಗುತ್ತಿಲ್ಲವೆ? ಹೀಗಾಗಿ, ಹಣ ಹೆಚ್ಚು, ಹೆಚ್ಚಾಗಿಯೆ ಬೇಕಾಗುತ್ತದೆ. ಎಷ್ಟು ಸಂಪಾದಿಸಿದರೂ ಬಯಕೆಗಳನ್ನೆಲ್ಲ ಪೂರೈಸಿಕೊಳ್ಳುವುದು ಕಷ್ಟವೆನಿಸುತ್ತದೆ.

ಇದನ್ನು ಒಪ್ಪುವವರೂ ಬಹುಮಂದಿ ಇದ್ದಾರೆಂಬುದು ದಿಟ. ಹಿಂದಿನ ಕಾಲದಲ್ಲಿ ಇದ್ದ ಬೆಲೆ, ಈಗಿರುವ ಬೆಲೆ, ಮುಂದೆ ಇರಬಹುದಾದ ಬೆಲೆ ಇವನ್ನೆಲ್ಲ ಗಣನೆಗೆ ತಂದುಕೊಂಡರೆ ಮೇಲಿನ ಸಮಾಧಾನ ಸರಿಯೆನಿಸುತ್ತದೆ. ಆದರೆ ಇದರಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆಯೆನ್ನುವುದನ್ನು ಅವರು ಕಾಣರು; ಕಂಡುಕೊಂಡರೂ ಕಾಣದಂತೆಯೇ ಇರುವರು.

ಅದೇನೆಂದರೆ, ಹಿಂದಿನವರಿಗಿಂತ ಇಂದಿನವರ ಬಯಕೆಗಳು ಹೆಚ್ಚಾಗಿವೆಯೆಂಬುದು. ಎಳೆತನದಲ್ಲಿ ಇದ್ದ ಅಗತ್ಯಗಳು ನಾವು ಬೆಳೆದಂತೆ ಅವೂ ಬೆಳೆಯುತ್ತವೆ. ಹಣವನ್ನು ದೊರಕಿಸಿಕೊಳ್ಳುವಾಗಲೆ ನಮ್ಮ ಅಗತ್ಯಗಳನ್ನೂ ಹೆಚ್ಚು ಮಾಡಿಕೊಂಡು ಹೋಗುತ್ತಿರುವುದನ್ನು ನಾವು ಗಮನಿಸುವುದಿಲ್ಲ. ನೀರನ್ನು ತುಂಬುವ ಪಾತ್ರೆಯಲ್ಲಿ ತೂತುಗಳಿದ್ದರೆ ಎಷ್ಟು ನೀರನ್ನು ತುಂಬಿದರೆ ತಾನೆ ಪಾತ್ರೆ ನೀರಿನಿಂದ ತುಂಬೀತು? ಮೇಲೆ ಸುರಿದ ನೀರು ಹೊರಗೆ ಹರಿದೀತು?

ಬದುಕಿನಲ್ಲಿ ಒಂದು ಅಚ್ಚುಕಟ್ಟು, ಕಟ್ಟುಪಾಡು ಇದ್ದರೆ ಅದು ತೂತಿಲ್ಲದ ಪಾತ್ರೆ; ಬಯಕೆಗಳು ಪಾತ್ರೆಯಲ್ಲಿ ಅಡಕವಾಗುತ್ತವೆ. ಅದಕ್ಕೆ ಸರಿಯಾದಷ್ಟು ಮಾತ್ರ ಹಣದ ಪೂರೈಕೆಯಾದರೆ ಸಾಕು. ಪಾತ್ರೆ ತುಂಬಿದರೂ ನೀರನ್ನು ಸುರಿಯುತ್ತಾರೆಯೆ?

ನಮ್ಮ ನಮ್ಮ ಪಾತ್ರೆಯ ಪ್ರಮಾಣ ಎಷ್ಟಿರಬೇಕೆನ್ನುವುದನ್ನು ನಾವೇ ನಿರ್ಧರಿಸಿಕೊಳ್ಳಬೇಕು. ಬೇರೆಯವರ ಪಾತ್ರೆಯನ್ನು ನೋಡಿದರೆ ಅಂದಾಜು ಸಿಗುವುದಿಲ್ಲ; ಎಡವಟ್ಟಾಗಬಹುದಷ್ಟೆ.

99. ಹಣದ ಹಸಿವು

ಸುಮತಿ ಶತಕವೆಂಬ ತೆಲುಗು ಪದ್ಯಗಳ ಮಾಲಿಕೆಯೊಂದಿದೆ. ಅಲ್ಲಿನ ಮಾತುಗಳು ಸರ್ವಜ್ಞನ ಮಾತುಗಳನ್ನು ನೆನಪಿಗೆ ತರುತ್ತವೆ.

ಒಂದು ಕಡೆ ಅವನು ಹೇಳುತ್ತಾನೆ – ಹಸಿದಾಗ ಮಾಡುವ ಊಟ ಅಮೃತಕ್ಕೆ ಸಮಾನ (ಆಕೊನ್ನ ಕೂಡೆಯಮೃತಮು). ಹೊಟ್ಟೆಯಲ್ಲಿ ಹಸಿವಿದ್ದಾಗ ಊಟ ಬೇಕೆನಿಸುತ್ತದೆ; ಬೇಕೆನಿಸಿದಾಗ ನಾಲಗೆಗೆ ರುಚಿ. ಇಷ್ಟಪಟ್ಟು ತಿಂದದ್ದು ಹೊಟ್ಟೆಗೆ ಹೋದ ಮೇಲೆ ಅಲ್ಲಿ ಚೆನ್ನಾಗಿ ಜೀರ್ಣವಾಗುತ್ತದೆ. ಜೀರ್ಣವಾದದ್ದು ರಸವಾಗಿ

ಮೈಗೆ ಬಲವನ್ನೂ ಲವಲವಿಕೆಯನ್ನೂ ಒದಗಿಸುತ್ತದೆ. ಅದನ್ನೇ ಇಲ್ಲಿ ಅಮೃತವೆಂದು ಬಣ್ಣಿಸಿರುವುದು.

ಇನ್ನೊಂದು ಕಡೆ ಅವನದ್ದೇ ಮಾತಿದೆ – ಉಂಡರೂ ಹಸಿವನ್ನು ನೀಗಿಸದ ಊಟ ಅಸಹ್ಯವಾದುದು (ಆಕಲಿಯುಡುಗಿನ ಕುಡುಪುನು). ಹಸಿವಿದ್ದಾಗ ಊಟ ಬೇಕೆನಿಸುತ್ತದೆ. ಉಂಡರೆ ಹಸಿವು ತಣಿಯಬೇಕು. ಹಾಗಾಗದೆ, ಉಂಡರೂ ಹಸಿವು ಹಾಗೆಯೆ ಉಳಿದರೆ ಉಂಡೇನು ಪ್ರಯೋಜನ?

ಈ ಮಾತಿನ ತಾತ್ಪರ್ಯ ಬರಿಯ ಊಟಕ್ಕೆ ಮಾತ್ರ ಅನ್ವಯಿಸುವುದೆಂದು ತಿಳಿಯಬಾರದು. ಬದುಕಿನ ಹಲವು ವಿವರಗಳಿಗೆ ಇದು ಸರಿಯಾದೀತು. ಹಣದ ವಿಚಾರವನ್ನೇ ನೋಡಿ. ಅಗತ್ಯವಿದ್ದಾಗ ಹಣವನ್ನು ಸಂಪಾದಿಸಿದರೆ, ಹಣದ ಬೆಲೆ ತಿಳಿಯುತ್ತದೆ. ಅದರ ಅಗತ್ಯವೇ ಇರದವರು ದುಡಿಯುವುದು ಹೇಗೆಂಬುದು ಎಲ್ಲರಿಗೂ ತಿಳಿದಿದೆ. ಅವರ ಹಿಂದಿನವರು ಗಳಿಸಿದ್ದು, ಶ್ರಮವಿಲ್ಲದೆ ದಕ್ಕಿದ್ದು, ಎಂದೂ ಎಣಿಸದೆ ಇದ್ದಕ್ಕಿದ್ದಂತೆ ಬಂದದ್ದು – ಹೀಗೆ ಹಣ ಕೈಸೇರಿದಾಗ ಅದರಿಂದ ಒಳ್ಳೆಯದೇನೂ ಆಗಲಿಕ್ಕಿಲ್ಲ. ಅವನಿಗೆ ಹಸಿವೆಯೆ ಇಲ್ಲ; ಊಟದ ರುಚಿ ಹೇಗೆ ತಿಳಿದೀತು? ರುಚಿಸದೆ ತಿಂದದ್ದು ಮೈಗೆ ಹತ್ತುವುದಾದರೂ ಹೇಗೆ?

ಹಸಿವಿದೆಯೆನ್ನಿ; ಹಣದ ಅಗತ್ಯವಿದೆ. ಆದರೆ ಪಡೆದುಕೊಂಡ ಹಣ ಅಗತ್ಯವನ್ನು ಪೂರೈಸಲಾರದು ಎನ್ನುವಾಗ ಆ ಹಣ ಅಸಹ್ಯವೆನಿಸುತ್ತದೆ. ಹಣವಿದ್ದು ಅಗತ್ಯಗಳು ಇರದಿದ್ದರೆ ಹಣದಿಂದ ಪ್ರಯೋಜನವೇನು?

ಹಣದ ವಿಚಾರವನ್ನಷ್ಟೆ ಗಮನಿಸುವಾಗ, ಸಂಪಾದಿಸಬೇಕಾದುದು ಕೊರತೆಗಳನ್ನು ನೀಗಿಸಿಕೊಳ್ಳಲು. ಊಟ ಮಾಡುವುದು ಹಸಿವನ್ನು ಹೋಗಲಾಡಿಸಿಕೊಳ್ಳಲು; ಮೋಜಿಗಾಗಿ ಅಲ್ಲ; ಆಡಂಬರಕ್ಕಾಗಿ ಅಲ್ಲ. ತನ್ನ ಅಗತ್ಯಗಳೇನು ಎಂಬುದನ್ನು ಅರಿತುಕೊಂಡು ಸಂಪಾದನೆಯನ್ನು ಅದಕ್ಕೆ ಅಳವಡಿಸಿಕೊಳ್ಳುವುದು ಜಾಣತನ.

ಅಗತ್ಯಗಳಿಗೂ ಸಂಪಾದನೆಗೂ ಸಂಬಂಧವೇ ಇರದಾಗ, ಹಸಿವು ಎಷ್ಟೆಂದು ಅರಿತುಕೊಳ್ಳದೆ ಊಟ ಮಾಡಿದಂತೆ. ಊಟ ಮಾಡುವುದೇ ಮುಖ್ಯವಾಗುತ್ತದೆ; ಹಸಿವನ್ನು ತಣಿಸಿಕೊಳ್ಳುವ ಅಗತ್ಯ ಹಿಂದೆ ಸರಿಯುತ್ತದೆ. ಆಗ ಉಂಡದ್ದು ಅರಗದೆ ಇರುವ ತೊಂದರೆಯುಂಟು. ಹಣದ ಸಂಪಾದನೆಯೂ ಹೀಗೆಯೇ ಆದೀತು.

ಇನ್ನು, ಅಗತ್ಯಗಳನ್ನು ನಮ್ಮ ಹತೋಟಿಯಲ್ಲಿರಿಸಿಕೊಳ್ಳದಿದ್ದರೆ ಅವು ಬೆಳೆಯುತ್ತಲೆ ಹೋಗುತ್ತವೆ. ಎಷ್ಟು ಸಂಪಾದಿಸಿದರೂ ಸಾಲದೆನಿಸುತ್ತದೆ. ಹಣ ಹೆಚ್ಚಿದಂತೆ ಬಯಕೆಗಳೂ ಹೆಚ್ಚುತ್ತಿದ್ದರೆ ಹಣದ ಪ್ರಯೋಜನವೇನು? ಬಯಕೆಗಳಿಗೆ ಕಡಿವಾಣ ಹಾಕದೆ, ಹಣದ ಹಿಂದೆ ಎಷ್ಟು ಓಡಿದರೂ ಹಣ ಸಾರ್ಥಕವಾಗಲಾರದು. ಮಿತಿಯಿದ್ದಾಗಲೆ ಹಿತ.

100. ಭಂಡಾರದ ಲೂಟಿ

ಸಂಸ್ಕೃತದಲ್ಲಿ 'ಆಢ್ಯವದಾನ್ಯ ನ್ಯಾಯ'ವೆಂಬುದೊಂದಿದೆ.

ಹಣವಿದ್ದವರು, ಬಡವರು, ಅವರಿವರನ್ನು ಬೇಡಿ ಅಷ್ಟಿಷ್ಟು ಹಣ ಪಡೆದುಕೊಂಡು ಬದುಕನ್ನು ನಿರ್ವಹಿಸುವುದು ವಾಡಿಕೆಯಲ್ಲಿದ್ದ ಕಾಲದ ಮಾತು ಅದು. ಅನುಕೂಲವಾಗಿರುವ ಹಲವರಿಂದ ಅಲ್ಪಸ್ವಲ್ಪ ತೆಗೆದುಕೊಂಡಾಗ ಅವರಿಗೂ ಹೊರೆಯೆನಿಸುವುದಿಲ್ಲ; ಇವನಿಗೂ ಮತ್ತೆ ಬೇಡದಷ್ಟು ಧನವೇನು ಬರುವುದಿಲ್ಲ. ಅದರ ಬದಲು ಒಬ್ಬ ಭಾರಿ ಧನಿಕನನ್ನು ಆಶ್ರಯಿಸಿ ಅವನಿಂದ ದೊಡ್ಡ ಮೊತ್ತವನ್ನೆ ಪಡೆದುಕೊಂಡರೆ ಇವನು ದೊಡ್ಡ ಕುಳವಾದಾನು. ಇದು ಈ ನ್ಯಾಯದ ತಾತ್ಪರ್ಯ.

ಇದರ ಇಂಗಿತವೇನೆಂದರೆ – ಸುಖ ಪಡೆಯಬೇಕೆಂಬ ಬಯಕೆಯಿಂದ ಅದು, ಇದು, ಇಲ್ಲಿ, ಅಲ್ಲಿ, ಆಗ, ಈಗ ಅಷ್ಟಿಷ್ಟು ಸಾಮಗ್ರಿಗಳನ್ನು ಪಡೆದುಕೊಳ್ಳುತ್ತಾರೆ; ಎಲ್ಲವನ್ನೂ ಕೂಡಿದರೆ ಸಮಗ್ರ ಸುಖವಾಯಿತೆಂದು ಅವರ ಭ್ರಾಂತಿ. ಆದರೆ ಭಗವಂತನನ್ನು ಆಶ್ರಯಿಸಿಯೋ, ಆಧ್ಯಾತ್ಮದ ದಾರಿಯನ್ನು ಹಿಡಿದೋ, ಯೋಗವನ್ನು ಅಭ್ಯಾಸ ಮಾಡಿಯೋ ನೆಮ್ಮದಿಯನ್ನು ಪಡೆದುಕೊಂಡರೆ ಅದೀಗ ಸಮಗ್ರ ಸುಖ.

ಅವರಿವರನ್ನು ಬೇಡಿ ಏನನ್ನು ತಾನೆ, ಎಷ್ಟನ್ನು ತಾನೆ, ಪಡೆದುಕೊಳ್ಳಬಹುದು? ಎಲ್ಲರಿಗೂ ಎಲ್ಲವನ್ನೂ ನೀಡುವ ದಣಿಯನ್ನೇ ಬೇಡಿದರೆ ಒಳಿತಲ್ಲವೆ? ಕೈಯೊಡ್ಡಬಾರದು ಎಂದು ಪುರಂದರದಾಸರ ಮಾತೂ ಇದೆ.

ಇದರ ಅನ್ವಯವನ್ನು ನಮ್ಮ ಕಾಲದಲ್ಲಿ ಬೇರೊಂದು ರೀತಿಯಿಂದ ಮಾಡಿರುವುದನ್ನು ಕಾಣಬಹುದು. ಲೂಟಿ ಮಾಡಿದರೆ ಭಂಡಾರವನ್ನೇ ಲೂಟಿ ಮಾಡಬೇಕು! ಸಣ್ಣಪುಟ್ಟ ಮನೆಗಳಿಗೆ ಕನ್ನ ಹಾಕಿ, ಸಾಮಾನ್ಯ ಜನರನ್ನು ಅಡ್ಡಗಟ್ಟಿ, ಪುಡಿಗಾಸುಗಳನ್ನು ಕಸಿದುಕೊಂಡರೆ ಏನಾದಹಾಗಾಯಿತು? ಶ್ರೀಮಂತನನ್ನೇ ಸುಲಿಯಬೇಕು, ಸರಕಾರವನ್ನೇ ಲೂಟಿ ಮಾಡಬೇಕು, ಖಜಾನೆಯನ್ನೇ ದೋಚಿಕೊಳ್ಳಬೇಕು.

ಒಮ್ಮೆಲೆ ತುಂಬ ಹಣವಂತನಾಗುವುದು ಮುಖ್ಯ. ಸ್ವಲ್ಪಸ್ವಲ್ಪವಾಗಿ ಹಣವನ್ನು ಕೂಡಿಸಿಕೊಳ್ಳುವುದು ಕಷ್ಟವೂ ಆಗುತ್ತದೆ; ಕಾಲವೂ ಹಿಡಿಸುತ್ತದೆ. ಹಾಗೆ ಕೂಡಿಟ್ಟಿದ್ದು ದೊಡ್ಡ ನಿಧಿಯೆಂದು ಎಂದೂ ಆಗದು. ವೆಚ್ಚವಾದಂತೆಲ್ಲ ಕರಗುತ್ತದೆ. ಇದು ಕೆಲವರಿಗೆ ಆಕರ್ಷಕವಲ್ಲ. ಒಮ್ಮೆಲೆ ಅಪಾರ ಹಣ ಬರುವ ದಾರಿಯನ್ನು ಅವರು ಎದುರು ನೋಡುತ್ತಾರೆ. ಅದೂ ಸುಲಭದಲ್ಲಿ, ಬೇಗನೆ ಆಗಿಬಿಡಬೇಕು. ಮೈ ಬೆವರಬಾರದು, ಕೈಕಾಲು ನೋಯಬಾರದು, ಮನಸ್ಸೂ ಮುದುಡಿಕೊಳ್ಳಬಾರದು.

ಇದಕ್ಕೆ ಈಗ ಹತ್ತಾರು ಹವಣಿಕೆಗಳಿವೆ. ಇವು ಸಫಲವಾಗಲು ನ್ಯಾಯಾನ್ಯಾಯ ವಿವೇಚನೆಯೆಂಬುದನ್ನು ಕೈಬಿಡಬೇಕು. ಯಾವ ಅನ್ಯಾಯಕ್ಕೂ ಅಂಜದೆ, ಅಳುಕದೆ

ಮುನ್ನುಗ್ಗುವ ಭಂಡ ಧೈರ್ಯವಿರಬೇಕು. ಬಂದದ್ದೆಲ್ಲಾ ಬರಲಿ, ಅದೃಷ್ಟವೊಂದಿರಲಿ ಎಂಬ ಮಂತ್ರದ ಪುನಶ್ಚರಣ ಮಾಡಬೇಕು. ಯಾರೇನು ಅಂದರೂ ಅದನ್ನು ಎಣಿಕೆಗೆ ತಂದುಕೊಳ್ಳದೆ ತಮ್ಮ ದಾರಿಯನ್ನು ತಾವು ಹಿಡಿಯುವ ಅಸುರ ಸ್ಥೈರ್ಯವಿರಬೇಕು. ಮಾನ, ಮರ್ಯಾದೆಯೆಂಬ ಅಳುಕನ್ನು ಕಳಚಿಡಬೇಕು.

ಹಿಡಿದರೆ ದೊಡ್ಡ ಲಾಭವಾಗುವಂಥ ಉದ್ಯಮವನ್ನೇ ಹಿಡಿಯಬೇಕೆಂಬುದು ಹಲವರ ಹಟ. ಸಣ್ಣಪುಟ್ಟದಕ್ಕೆ ಅವರು ಕೈಕೊಳೆ ಮಾಡಿಕೊಳ್ಳುವುದಿಲ್ಲ. ದೊಡ್ಡದಕ್ಕಾದರೆ ಬದುಕನ್ನೆ ಒತ್ತೆಯಿಟ್ಟಾರು. ಬದುಕುವುದೇ ಹಣಕ್ಕಾಗಿ ಎಂದ ಮೇಲೆ ಎಲ್ಲಿ ಹೆಚ್ಚು ಹಣವಿದೆಯೋ ಅಲ್ಲಿಯೇ ಒಲವು; ಅಲ್ಪ ತೃಪ್ತಿಯು ಸಾಹಸಿಯ ಲಕ್ಷಣವಲ್ಲ. ಈ ಮನೋವೃತ್ತಿ ಹರಡಿಕೊಳ್ಳುತ್ತಿರುವಾಗ ಮೌಲ್ಯಚಿಂತನೆಗೆ ಅವಕಾಶವೇ ಇಲ್ಲವಾಗಿದೆ.

101. ದಾನಿ-ಲೋಭಿ

ಲೋಕದಲ್ಲಿ ಉದಾರ ಮನಸ್ಸಿನವರಿರುತ್ತಾರೆ. ತಮ್ಮಲ್ಲಿರುವ ಧನವನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವ ಬಯಕೆಯೂ ಅವರಿಗಿರುತ್ತದೆ. ಅದನ್ನೇ ದಾನವೆನ್ನುವುದು. ದಾನಕ್ಕೆ ಮೂಲಾರ್ಥ 'ಸಂವಿಭಾಗ', ಎಂದರೆ ಹಂಚಿಕೊಳ್ಳುವುದು, ಪಾಲ್ಗೊಳ್ಳುವುದು. ತಮ್ಮಲ್ಲಿರುವುದು ತಮಗೆ ಮಾತ್ರ ಸಲ್ಲಬೇಕು ಎಂಬ ಹಟವಿಲ್ಲದೆ ಇರುವುದು ಔದಾರ್ಯವೆನಿಸಿಕೊಳ್ಳುತ್ತದೆ.

ಇದಕ್ಕೆ ವಿರುದ್ಧವಾಗಿ, ತಮ್ಮಲ್ಲಿರುವ ಧನದಲ್ಲಿ ಒಂದು ಕಿಲುಬು ಕಾಸೂ ಬೇರೆಯವರಿಗೆ ದೊರಕಬಾರದೆಂದು ಹಟ ತೊಟ್ಟು, ತಮ್ಮ ಬೊಕ್ಕಸದ ಮೇಲೆ ಸರ್ಪಕಾವಲಾಗಿ ಕೂತವರು ಲೋಭಿಗಳು, ಜಿಪುಣರು. ಅದನ್ನು ತಾವೂ ಬಳಸುವುದಿಲ್ಲ, ಬೇರೆಯವರಿಗೂ ನೀಡುವುದಿಲ್ಲವೆನ್ನಿ. ಅವರಿಗೆ ಔದಾರ್ಯವೂ ಇಲ್ಲ, ದಾನ ಮಾಡುವ ಮನಸ್ಸೂ ಇಲ್ಲ.

ಕೆಲವೊಮ್ಮೆ ದಾನಿಗಳ ಜೊತೆ ಲೋಭಿಗಳು ಸೇರಿಬಿಡುವುದುಂಟು. ಇದನ್ನು ಒಬ್ಬ ತೆಲುಗು ಕವಿ ಕಲ್ಪವೃಕ್ಷದ ಸುತ್ತ ಬೆಳೆದುಕೊಂಡ ಮುಳ್ಳುಗಜ್ಜುಗದ ಗಿಡದಂತೆ ಎಂದು ಬಣ್ಣಿಸಿದ್ದಾನೆ. ಕಲ್ಪವೃಕ್ಷವೆಂದರೆ ಬಯಸಿದ್ದನ್ನೆಲ್ಲ ಪೂರೈಸುವ ಅಪೂರ್ವವಾದ ಮರ. ದಾನಿಯ ಔದಾರ್ಯ ಇಂಥದೇ. ಆದರೆ ಅದರ ಸುತ್ತಲೂ ಮುಳ್ಳುಗಿಡ ಬೆಳೆದುಕೊಂಡು ಬಿಟ್ಟರೆ ಕಲ್ಪವೃಕ್ಷದ ಹತ್ತಿರ ಹೋಗುವುದು ಹೇಗೆ? ಹತ್ತಿರ ಹೋಗದೆ ಅದರ ಪ್ರಯೋಜನವನ್ನು ಪಡೆದುಕೊಳ್ಳುವುದು ಹೇಗೆ?

ಸರಕಾರವೇನೋ ಕೆಲವೊಮ್ಮೆ ಸಾಮಾನ್ಯ ಜನರಿಗೆ ಅನುಕೂಲವಾಗಲೆಂದು ಕೆಲವು ಯೋಜನೆಗಳನ್ನು ಹಾಕುತ್ತದೆ. ಆದರೆ ಅದರಲ್ಲಿರುವ ಕೆಲವು ಅಧಿಕಾರಿಗಳು

ಹೀಗಾಗಗೊಡುವುದಿಲ್ಲ. ಅಗತ್ಯವಿಲ್ಲದಿದ್ದ ಕಡೆಯೂ ತಡೆ ಹಾಕುತ್ತಾರೆ, ನೆರವಿಗೆ ಅಡ್ಡಿಯಾಗುತ್ತಾರೆ. ಅಧಿಕಾರಿಗಳು ಪ್ರಾಮಾಣಿಕರೇ ಇರಬಹುದು; ಹಣ ಪೋಲಾಗಬಾರದೆಂಬ ಅವರ ಕಾತರ ಮೆಚ್ಚತಕ್ಕದ್ದೂ ಇರಬಹುದು. ಆದರೆ ನ್ಯಾಯವೆಂಬುದರ ಜೊತೆಗೆ ಔದಾರ್ಯವೂ ಸೇರಬೇಕೆಂಬ ಗುಟ್ಟು ಅವರಿಗೆ ತಿಳಿಯದು. ಅವರ ಹಿಡಿತದಲ್ಲಿ ನ್ಯಾಯವಿರುತ್ತದೆ. ಜಾಣತನವಿರುವುದಿಲ್ಲ.

ಇನ್ನು ಅಧಿಕಾರಿಗಳು ದುರಾಶೆಯವರಾಗಿಬಿಟ್ಟರಂತೂ, ಸರಕಾರದ ಔದಾರ್ಯದಿಂದ ಇವರಿಗಷ್ಟೇ ಲಾಭ. ಉಳಿದವರಿಗೆ ನಿರಾಶೆಯೇ. ಇವರೀಗ ದಿಟವಾಗಿ ಮುಳ್ಳುಗಿಡಗಳು. ಇವರನ್ನು ದಾಟಿ ಕಲ್ಪವೃಕ್ಷವನ್ನು ಸೇರುವುದೇ ದುಸ್ತರ. ಸರಕಾರದ ಉದಾರವಾದ ಯೋಜನೆಗಳು ಎಷ್ಟಿದ್ದರೇನು? ಬಡವರನ್ನು ಅವು ಮುಟ್ಟುವುದೆ ಇಲ್ಲ; ಅಗತ್ಯವಿದ್ದವರು ಯೋಜನೆಗಳ ನೆರವನ್ನು ಪಡೆದುಕೊಳ್ಳುವುದು ಕಷ್ಟವೇ.

ಹೀಗಾಗಿ ಇವರ ಪಾಲಿಗೆ ಆ ಯೋಜನೆಗಳೆಲ್ಲ 'ಕನಸಿನ ಬತ್ತ'ವೇ. ಎಚ್ಚರದಲ್ಲಿ ಅವನ್ನು ಪಡೆದುಕೊಳ್ಳಲು ಗೋಣಿ ಹಾಸಬಹುದೆ? ಆದರೆ ಅದೇನೋ ಗಂಟು – ದಾನಿಗಳಿಗೂ ಲೋಭಿಗಳಿಗೂ. ಹಣವಿರುವ ಕಡೆ ಹಣ ಬೇಕಾದವರು ಸೇರುವುದೇನೋ ಸರಿಯೆ. ಆದರೆ ಹಣವನ್ನೆಲ್ಲ ತಾವೇ ದೋಚಿಕೊಳ್ಳಬೇಕೆಂದು ಹೊರಡುವವರು ಉದಾರಿಗಳ ಹತ್ತಿರ ಸೇರಿಕೊಂಡುಬಿಟ್ಟರೆ ಹೇಗೆ? ಉದಾರಿಗಳ ಪ್ರಯೋಜನವೇ ಮರೆಯಾಗಿಬಿಡುತ್ತದೆ.

102. ಸ್ವಾವಲಂಬನೆಯ ಅಗತ್ಯ

ಆರ್ಥಿಕ ನೀತಿಯೆಂಬುದು ಆಳರಸರು ಮಾಡುವ ವ್ಯವಸ್ಥೆ. ಅವರಿಗೆ ತಿಳಿವಳಿಕೆಯಿದ್ದರೆ ಜನರ ಅಗತ್ಯಗಳನ್ನನುಸರಿಸಿ, ಅವರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡುತ್ತಾರೆ. ನಮ್ಮದು ಹೇಳಿಕೇಳಿ ಬೇಸಾಯವೇ ಮುಖ್ಯವಾದ ನಾಡು. ನಮ್ಮ ಆರ್ಥಿಕ ವ್ಯವಸ್ಥೆಗೆ ಕೃಷಿಯೇ ಕೇಂದ್ರವಾಗಿರಬೇಕು.

ರಾಜಕಾರಣವಾಗಿ ನಾಡು ಸ್ವತಂತ್ರವಾದಾಗ ಬೇಸಾಯದ ಮೇಲೆ ಒತ್ತುಕೊಟ್ಟವರು ಗಾಂಧೀಜಿಯೊಬ್ಬರೇ. ಗ್ರಾಮವು ಸ್ವಾವಲಂಬಿಯಾಗಬೇಕು, ಜನರ ಉದ್ಯಮವೆಲ್ಲ ಬೇಸಾಯಕ್ಕೆ ನೇರವಾಗಿಯೋ ಓರೆಯಾಗಿಯೋ ಸಂಬಂಧಿಸಿರಬೇಕು ಎಂದು ಅವರು ಹೇಳುತ್ತಲೆ ಇದ್ದರು. ನಗರಗಳು ಬೆಳೆಯಬಾರದೆಂಬುದೂ ಅವರ ಅನಿಸಿಕೆಯಾಗಿದ್ದಿತು.

ಆದರೆ ಅವರ ಅನುಯಾಯಿಗಳೆಂದು ಸೋಗು ಹಾಕಿ ಆಡಳಿತವನ್ನು ತಮ್ಮದಾಗಿ ಮಾಡಿಕೊಂಡ ನಾಯಕರು ಅವರ ಕಳಕಳಿಯನ್ನು ಅರಿತುಕೊಳ್ಳಲಿಲ್ಲ; ಅವರ ಮಾತನ್ನು ಕೇಳಲೂ ಇಲ್ಲ. ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರಭಾವಿತರಾದ ಈ ನಾಯಕರು ಅಲ್ಲಿರುವಂತೆಯೇ ಇಲ್ಲೂ ಭಾರೀ ಉದ್ಯಮಗಳ ಕನಸನ್ನು ಕಂಡರು; ನಗರದಲ್ಲಿರುವ ಜನರ ಅನುಕೂಲವೇ ಅವರಿಗೆ ಮುಖ್ಯವೆನಿಸಿತು.

ಇದರಿಂದಾಗಿ ಮೊದಲಿಗಿದ್ದ ಆರ್ಥಿಕ ಸ್ವಾವಲಂಬನೆ ಕಣ್ಮರೆಯಾಯಿತು. ಹೊರದೇಶಗಳ ತಜ್ಞರ ಆಮದು, ಹೊರದೇಶದ ಸಾಮಗ್ರಿಗಳ ಬೇಡಿಕೆ, ನಗರದ ನಿವಾಸಿಗಳ ಮೋಜಿಗೆ ಬೇಕಾದ ಪರಿಕರಗಳ ಉತ್ಪಾದನೆ ಮುಂತಾದ ನೀತಿಗಳಿಂದಾಗಿ ನಮ್ಮ ಆರ್ಥಿಕ ವ್ಯವಸ್ಥೆಯೇ ದಾರಿತಪ್ಪಿತು. ಅಪಾರ ಹಣವನ್ನು ವೆಚ್ಚ ಮಾಡಿ ಕಟ್ಟಿಕೊಂಡ ಅಣೆಕಟ್ಟುಗಳು ನಮ್ಮ ಕೊರಳಿಗೇ ಹಾಕಿಕೊಂಡ ಉರುಳಾಯಿತು. ನಮ್ಮ ಭಾರಿ ಉದ್ಯಮಗಳು ನಮ್ಮ ಬಡತನವನ್ನೇ ಹೆಚ್ಚಿಸಿದುವು. ಹಳ್ಳಿಗಳಲ್ಲಿ ನಿರುದ್ಯೋಗಿಗಳಾಗಿ ಅಲೆದಾಡುವ ಪರಿಸ್ಥಿತಿ ಬಂದಿತು.

ಉದ್ಯಮಗಳಿಗಾಗಿ ಪರದೇಶಗಳಿಂದ ಸಾಲವನ್ನೂ ಮಾಡಿದ ನಮ್ಮ ಆಳರಸರು ಅದನ್ನು ತೀರಿಸಲಾರದೆ ಬಡ್ಡಿಯೊಂದಿಗೆ ಅದನ್ನು ಬೆಳೆಸಿದರು. ನಮ್ಮ ನಾಡಿನಲ್ಲಿ ಹುಟ್ಟುವ ಒಂದೊಂದು ಮಗುವಿನ ಮೇಲೂ ಮೂರು ನಾಲ್ಕು ಸಾವಿರ ರೂಪಾಯಿಗಳಷ್ಟು ಸಾಲವಿದೆಯೆಂದು ಅಂದಾಜು ಮಾಡಲಾಗಿದೆ. ಈಗ ನಮ್ಮ ದೇಶ ಮಾಡಿರುವ ಸಾಲದ ಮೊತ್ತ ಮೂರು ಲಕ್ಷ ಕೋಟಿ ರೂಪಾಯಿಗಳಷ್ಟಂತೆ; ಅದಕ್ಕೆ ನಾವು ಪ್ರತಿವರ್ಷವೂ ಹೊರಗಿನ ಬಂಡವಾಳದಾರರಿಗೆ ತೆರಬೇಕಾದ ಬಡ್ಡಿಯೇ ಮೂವತ್ತೈದು ಸಾವಿರ ಕೋಟಿ ರೂಪಾಯಿಗಳಂತೆ! ಇದು ನಾವು ಇಪ್ಪತ್ತೊಂದನೆಯ ಶತಮಾನಕ್ಕೆ ಸರಿಯುವ ಸಿದ್ಧತೆ; ಆಧುನಿಕತೆಯ ಮೆರುಗಿಗೆ ತೆರಬೇಕಾದ ತೆರಿಗೆ.

ನಾಡಿನ ಆಳರಸರಿಗೆ ನಮ್ಮ ಜನರ ಹಿತಾಸಕ್ತಿಯೇ ಇಲ್ಲದಿರುವುದು ಇದಕ್ಕೆ ಕಾರಣ. ಆಡಳಿತದಲ್ಲಿ ಸೇರಿಕೊಂಡಿರುವ ಹೆಗ್ಗಣಗಳು ತಂತಮ್ಮ ಹೊಟ್ಟೆ ಹೊರೆದುಕೊಳ್ಳುವುದರಲ್ಲೇ ತೊಡಗಿದರೆ, ಬೇರೆಯವರ ಒಳಿತೆಂಬುದು ಅವರಿಗೆ ತಿಳಿಯುವುದು ಹೇಗೆ? ಇಷ್ಟರ ಮೇಲೆ ತಿಳಿವಳಿಕೆಯೂ ಸಾಲದು. ಅವರ ಓದೆಲ್ಲ ಹೊರದೇಶಗಳತ್ತ ಕಣ್ಣಿಟ್ಟದ್ದೇ. ನಮ್ಮದೂ ಒಂದು ನಾಡು; ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ಆರ್ಥಿಕ ವ್ಯವಸ್ಥೆಯ ಕಲ್ಪನೆಯೂ ಒಂದಿದೆ; ಇದು ನಮ್ಮ ಸ್ವಾವಲಂಬನೆಗೆ ಅನುಕೂಲವಾದೀತು ಎಂಬ ಕಲ್ಪನೆಯೇ ಅವರಿಗಿಲ್ಲ.

ನಾವಾಗಿ ಅವರನ್ನು ಆರಿಸಿಕೊಂಡು ನಮ್ಮ ಆಡಳಿತವನ್ನು ಅವರಿಗೆ ಒಪ್ಪಿಸಿದ್ದೇವೆ ಎಂಬ ತಿಳಿವಳಿಕೆ ನಮಗಾದರೂ ಇರಬೇಡವೆ?

103. ನಂಬಿ ಕೆಡುವುದು

'ಸಿರಿಯೆಂಬುದು ಸಂಜೆಗೆಂಪು' ಎಂದು ನಡುಕನ್ನಡದ ಕವಿಯೊಬ್ಬ ಹೇಳಿದುದುಂಟು. ಸಂಜೆಯ ವೇಳೆ, ಹೊತ್ತು ಮುಳುಗುವಾಗ, ಬಾನಿನಲ್ಲಿ ಕೆಂಪಡರುತ್ತದೆ; ನೋಡಲು ಬಲು ಚೆನ್ನು. ಆದರೆ ನೋಡುತ್ತಿದ್ದಂತೆಯೆ ಮರೆಯಾಗಿ ಕತ್ತಲು ಕವಿದು ಬಿಡುತ್ತದೆ! ಬಲು ಹೊತ್ತು ಇರುವ ಚೆಲುವಿನ ನೋಟವಲ್ಲ ಅದು. ತೋರಿಯಡಗುವ ಹೊಳವು ಹಿಡಿದಿಡಲು ಬರುವುದಿಲ್ಲ.

ಸಿರಿಯೂ ಹೀಗೆಯೆ ಎಂದು ಕವಿವಾಣಿ. ಅದು ಬಹುಕಾಲ ಉಳಿದೀತೆಂದು ನೆಚ್ಚದಿರು ಎಂದವನ ಕಿವಿ ಮಾತು. ಸಿರಿಯಿರುವಾಗಲೇನೋ ಸಂಭ್ರಮವೇ, ಸಂತೋಷವೇ–ಸಂಜೆಗೆಂಪಿನಂತೆ. ಯಾರಲ್ಲವೆನ್ನುತ್ತಾರೆ?

ಆದರೆ ಅಷ್ಟಕ್ಕೆ ತನಗೆ ಸರಿಯಾರೆಂದು ಮೆರೆದರೆ, ಬೇಗನೆ ಅದು ಮರುಕಕ್ಕೆ ಎಡೆಮಾಡಿ ಕೊಡುತ್ತದೆ. ಹಿಗ್ಗಿದ ಮನಸ್ಸು ಮುದುಡಿಕೊಳ್ಳಬೇಕಾಗುತ್ತದೆ. ಮೇಲೇರಿದ ಜೋರು ಕೆಳಗೆ ಜಾರಬೇಕಾಗುತ್ತದೆ. ಮೆರೆದವರ ಹಮ್ಮು ಮುರಿಯುತ್ತದೆ.

ಬಂದ ಸಿರಿ ಬಂದಂತೆಯೇ ಉಳಿದುಕೊಳ್ಳುವುದು ಹೇಗೆ? ಸಿರಿಯ ಸ್ವಭಾವವೂ ಅದಲ್ಲವಷ್ಟೆ? ಹಣ ಇದ್ದರೆ ವೆಚ್ಚಕ್ಕೆ ಆದೀತು. ವೆಚ್ಚಕ್ಕೆ ವಿನಿಯೋಗಿಸದೆ ಇದ್ದ ಹಣದ ಪ್ರಯೋಜನವಾದರೂ ಏನು? ವೆಚ್ಚ ಮಾಡುತ್ತ ಬಂದರೆ ಉಳಿಯುವುದು ಹೇಗೆ? ಕರಗುವುದೇ ಸಿರಿಗೆ ಸಹಜವಾದುದು, ಸಂಜೆಗೆಂಪಿನಂತೆಯೆ ಎನ್ನಿ.

ವೆಚ್ಚದಲ್ಲಿ ಎಚ್ಚರವಹಿಸಿ ಉಳಿಸಿಕೊಳ್ಳುವಿರೆನ್ನಿ. ಆಗಲೂ ಸಿರಿಗೆ ಆತಂಕವಿಲ್ಲದಿಲ್ಲ. ವೆಚ್ಚ ಮಾಡದೆ ಇದ್ದರೂ ಜೋಪಾನವಾಗಿ ಉಳಿಸಿಕೊಳ್ಳಬೇಕಲ್ಲ? ಅದೇನು ಸುಲಭವೇ? ಹಣವನ್ನು ಸಂಪಾದಿಸುವುದು ಎಷ್ಟು ಕಷ್ಟವೋ, ಅದನ್ನು ಕಾಪಾಡಿಕೊಳ್ಳುವುದು ಅಷ್ಟೇ ಕಷ್ಟ. ಒಮ್ಮೆ ಬಂದಿತೆಂದು ಸುಮ್ಮನೆ ಇರಲಾಗದು.

ಕಾಪಾಡಿಕೊಳ್ಳುವಾಗಲೂ ಅದು ಕರಗುವುದುಂಟು. ಸಂರಕ್ಷಣೆಯ ಶುಲ್ಕವೋ ತೆರಿಗೆಯೋ ಮತ್ತೊಂದೋ ಇದ್ದೇ ಇರುತ್ತದೆ! ಅದು ಉಳಿಯಬೇಕೆಂದು, ಬೆಳೆಯಬೇಕೆಂದು ಯಾವುದಾದರೊಂದು ವಹಿವಾಟನ್ನು ಆರಂಭಿಸಿದಿರೆನ್ನಿ. ಅದರ ಕಟಪಟೆಯನ್ನು ಯಾರರಿಯರು? ಸಂಜೆಗೆಂಪನ್ನು ಉಳಿಸಿಕೊಳ್ಳಲು ಹೆಣಗುವಂತೆಯೇ ಅದು!

ಇನ್ನು ಕಳ್ಳರ, ಮೋಸಗಾರರ ಕಣ್ಣು ಈ ಕೂಡಿಟ್ಟ ಸಿರಿಯ ಮೇಲೆ ಇರದೆ ಇದ್ದರೆ ಹೇಗೆ? ಸಿರಿಯು ಚಂಚಲೆಯಂತೆ; ಬಹುಕಾಲ ಒಂದು ಕಡೆ ನಿಲ್ಲಲರಿಯದು. ಕೈಯಿಂದ ಕೈಗೆ, ಕಿಸೆಯಿಂದ ಕಿಸೆಗೆ, ಬೊಕ್ಕಸದಿಂದ ಬೊಕ್ಕಸಕ್ಕೆ ಸಾಗುತ್ತಲೆ ಇರಬೇಕು.

ನೀವಾಗಿ ವೆಚ್ಚ ಮಾಡದಿದ್ದರೆ, ವೆಚ್ಚ ಮಾಡಿಸುವವರು ಬರುತ್ತಾರೆ. ಅಂತೂ ಸಿರಿ ಕರಗಬೇಕು.

ಒಮ್ಮೆ ಕರಗಿತೆಂದರೆ ಮತ್ತೆ ಬರುವುದು ಸುಲಭವಲ್ಲ. ಸಂಜೆಗೆಂಪು ಕತ್ತಲೆಯಲ್ಲಿ ಒಮ್ಮೆ ಮರೆಯಾಯಿತೆಂದರೆ ಮತ್ತೆ ಅದು ಕಾಣಿಸಿಕೊಳ್ಳುವುದೆ? ಅದಕ್ಕೆ ಮರುದಿನ ಸಂಜೆಯುವರೆಗೆ ಕಾಯಬೇಕು. ಕಾದರೂ ಹಿಂದಿನ ಸಂಜೆಯ ಕೆಂಪೇ ಕಾಣಿಸಿಕೊಳ್ಳುವುದೆಂಬ ನೆಚ್ಚಿಗೆಯಿದೆಯೆ? ಕಾಣಿಸಿಕೊಂಡರೂ ಮತ್ತೆ ಸಂಜೆಗೆಂಪಿನ ಕತೆಯೇ! ತೋರಿಯಡಗುತ್ತದೆ.

ಸಿರಿಯಿಂದ ಸಮಾಧಾನ ದೊರಕುವುದೆಂದು ಬಗೆದರೆ ನಿರಾಶೆಯೇ ಕಟ್ಟಿಟ್ಟದ್ದು. ಸಿರಿಯಿಂದ ಎಷ್ಟು ಸುಖ ಸಾಧ್ಯವೋ ಅಷ್ಟನ್ನು ದೊರಕಿಸಿಕೊಳ್ಳುವುದು ಜಾಣತನ. ಅದನ್ನೇ ನಂಬಿಕೊಂಡರೆ ಕೆಡುವುದು ಖಂಡಿತ.

104. ಸಿರಿಯ ಅಲಂಕಾರ

ಸಿರಿತನವಾಗಲಿ ಬಡತನವಾಗಲಿ ಹಲವು ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅದರಲ್ಲಿ ತಾರತಮ್ಯ ಇದ್ದದ್ದೇ. ಲೋಕದಲ್ಲಿ ಯಾರೂ ಸಿರಿವಂತರಲ್ಲ, ಯಾರೂ ಬಡವರಲ್ಲ. ಒಬ್ಬರಿಗಿಂತ ಇನ್ನೊಬ್ಬರು ಹೆಚ್ಚು ಅಥವಾ ಕಡಮೆ ಸಿರಿವಂತರು, ಹೆಚ್ಚು ಅಥವಾ ಕಡಮೆ ಬಡವರು. ತೀರ ಇದು, ತೀರ ಅದು ಎಂಬುದಿಲ್ಲ.

ಬಡವ, ಭಾಗ್ಯವಂತ ಎಂದು ನಿರ್ಧರಿಸುವುದು ಅವರು ಏನನ್ನು ಹೊಂದಿದ್ದಾರೆ ಎಂಬುದರಿಂದ ಅಲ್ಲ. ಏನನ್ನು ಬಯಸುತ್ತಾರೆ ಎಂಬುದರಿಂದ. ಎಷ್ಟು ಬಯಕೆಯಿದ್ದರೆ ಅಷ್ಟು ಬಡತನವೇ. ಬಯಕೆಯೇ ಇಲ್ಲದವರಿಗೆ ಬಡತನವೆಲ್ಲಿ ಬಂತು?

ಎಲ್ಲವೂ ಇದ್ದರೂ ಇನ್ನೂ ಬೇಕೆಂದು ಬಯಸುವವನಿಗೆ ಸಿರಿಯು ಸಮಾಧಾನವನ್ನು ತಂದೊದಗಿಸಲಾರದು. ಎಷ್ಟಿದ್ದರೂ ಅವನು ದಿಟವಾಗಿ ಬಡವನೇ. ಬಡವನಂತೆಯೇ ಬೇಗುದಿ ಪಡುತ್ತಾನೆ; ತನ್ನ ಕೊರತೆಯನ್ನು ನೀಗಿಸಿಕೊಳ್ಳಬೇಕೆಂದು ಹಲುಬಿ ಹಂಬಲಿಸುತ್ತಾನೆ. ಮನಸ್ಸಿನ ನೆಮ್ಮದಿ ಕಾಣದೆ ಪರದಾಡುತ್ತಾನೆ.

ಇದ್ದುದು ಸಾಕು ಎಂದು ತೆಪ್ಪಗೆ ಇರುವುದು ನೆಮ್ಮದಿಗೆ ಮೂಲ. ಇಷ್ಟು ಸಾಲದು, ಇನ್ನಷ್ಟು ಬೇಕು ಎನ್ನುವುದು ಬಡತನದ ಲಕ್ಷಣ. ಇರುವಷ್ಟು ಸಾಕು, ಇನ್ನೇನೂ ಬೇಡ ಎನ್ನುವುದು ಸಿರಿತನದ ಲಕ್ಷಣ. ಇದನ್ನು 'ಅಲಂಭಾವನೆ'ಯೆನ್ನುತ್ತಾರೆ. 'ಅಲಂ' ಎಂಬ ಸಂಸ್ಕೃತ ಮಾತಿಗೆ 'ಸಾಕು' ಎಂದರ್ಥ. ಬಂದದ್ದು ಸಾಕು, ಇರುವುದು ಸಾಕು ಎಂದುಕೊಂಡರೆ ಅದು 'ಅಲಂಕಾರ'.

ಯಾವುದಾಗಲಿ ಹೊರೆಯಾಗದೆ, ಗೊಂದಲಕ್ಕೀಡು ಮಾಡದೆ, ಮೈ-ಮನಸುಗಳನ್ನು ಹಗುರವಾಗಿ ಇರಿಸುವುದಾದರೆ ಅದೇ ಭೂಷಣವಲ್ಲವೆ? ಅದನ್ನೇ ಅಲಂಕಾರವೆನ್ನುವುದು. ಎಷ್ಟು ಬೇಕೋ ಅಷ್ಟು; ಎಷ್ಟಿದೆಯೋ ಅಷ್ಟು ಸಾಕು ಎಂದುಕೊಂಡರೆ ಯಾವುದೂ ಹೊರೆಯಾಗುವುದಿಲ್ಲ, ತೊಂದರೆಗೆ ಕಾರಣವಾಗುವುದಿಲ್ಲ.

ಅತಿಯಾದ ಸಿರಿತನವಾಗಲಿ, ಅತಿಯಾದ ಬಡತನವಾಗಲಿ ಎರಡೂ ನಮ್ಮನ್ನು ಕಷ್ಟಕ್ಕೆ ಈಡುಮಾಡಬಲ್ಲವು. ಅದಕ್ಕಾಗಿಯೇ, ಹೆಚ್ಚು ಭಾಗ್ಯ ಬಂದಾಗ ದಾನ ಮಾಡು, ಪರೋಪಕಾರ ಮಾಡು ಎಂದೂ, ಹೆಚ್ಚು ಬಡತನವಿದ್ದಾಗ ದುಡಿದು ದೊಡ್ಡವನಾಗು ಎಂದೂ ಸುಭಾಷಿತವಿರುವುದು.

ಬಡವನು ಬಡತನದಲ್ಲೇ ಇರಬೇಕೆಂದು ಯಾರು ಹೇಳುತ್ತಾರೆ? ತನ್ನ ಬಡತನವನ್ನು ಕಡಮೆ ಮಾಡಿಕೊಳ್ಳುವ ಪ್ರಯತ್ನವನ್ನು ಅವನು ಮಾಡಬೇಕಲ್ಲವೆ? ತನ್ನ ಬಡತನವನ್ನು ಇನ್ನಷ್ಟು ಹೆಚ್ಚು ಮಾಡಿಕೊಳ್ಳಬಾರದು. ಸಿರಿವಂತನಾಗಲು ಯತ್ನಿಸಬೇಕು.

ಸಿರಿವಂತನಾದರೋ, ಅವನು ಕಡಮೆ ಸಿರಿವಂತನಾಗಬೇಕೆಂದು ಯಾರೂ ಹೇಳುವುದಿಲ್ಲ. ಹೆಚ್ಚು ಹೆಚ್ಚು ಸಿರಿವಂತನಾಗಬೇಕೆಂದು ಬಯಸುವುದು ತಪ್ಪು ಎಂಬುದೇನೋ ಸರಿ. ಬಯಕೆ ಏರಿದಂತೆಲ್ಲ ಬಡತನವೂ ಹೆಚ್ಚುತ್ತದೆ. ಸಿರಿವಂತನು ಸಿರಿವಂತನಾಗಿಯೇ ಉಳಿಯಬೇಕೆಂದರೆ ಅವನಿಗೆ 'ಅಲಂಭಾವನೆ'ಯಿರಬೇಕು. ಸಿರಿಯಲ್ಲಿ ತೃಪ್ತಿಯಿದ್ದರೆ ಅದು ಅಲಂಕಾರವಲ್ಲವೆ? ಭಾಗ್ಯಕ್ಕೆ ಬಯಕೆ ಭೂಷಣವಾಗಲಾರದು.

ಚೆನ್ನಾಗಿ ಬದುಕಿ ಬಾಳಲು ಸಿರಿ ನೆರವಾಗುತ್ತದೆ. ಬಡತನ ಅಡ್ಡಿಯಾಗುತ್ತದೆ. ಬಡತನವನ್ನು ನೀಗಿಕೊಳ್ಳುವ ಆಸೆಯಿರುವುದು ಸಹಜವೇ. ಆದರೆ ಬರುವ ಸಿರಿಯೊಂದಿಗೆ ವಿವೇಕವೂ ಬಂದೊದಗಿದರೆ ಸಿರಿಗೊಂದು ಸಾರ್ಥಕ್ಯ. ಬಡತನ ಹೋದರೆ ನೆಮ್ಮದಿ ಬರಬೇಕು; ಬಡತನವೂ ಹೋಯಿತು, ನೆಮ್ಮದಿಯೂ ಹೋಯಿತು ಎಂದರೆ ಹೇಗೆ? ಸಿರಿ ಬಂದುದಕ್ಕೆ ಪ್ರಯೋಜನವೇನು?

105. ಧರ್ಮಕ್ಕೆ ದಾನ

ಕೆಲವರು ಹಣ ಗಳಿಸುವ ಹವಣಿಕೆಯಲ್ಲೇ ಇರುತ್ತಾರೆ. ಧರ್ಮ ಕಾರ್ಯಗಳಿಗಾಗಿಯೇ ಈ ಹಣವನ್ನು ಉಪಯೋಗಿಸುತ್ತೇವೆಂಬ ಭರವಸೆಯನ್ನು ನೀಡುತ್ತಾರೆ.

ಧರ್ಮಕ್ಕಾಗಿ ಹಣವನ್ನು ಪಡೆದುಕೊಳ್ಳುವುದಿದ್ದರೆ ಅದು ಒಳ್ಳೆಯದಲ್ಲವೆ ಎಂದು ಭಾವಿಸಿ ಹಣವನ್ನು ಅವರಿಗೆ ನೀಡುವವರೂ ಇರುತ್ತಾರೆ. ಧರ್ಮದಿಂದ ಪುಣ್ಯ; ಧರ್ಮಕ್ಕೆ ದಾನ ಮಾಡಿದರೂ ಪುಣ್ಯ ಅಲ್ಲವೆ?

ಆದರೆ ಧರ್ಮದ ಹೆಸರಿನಲ್ಲಿ ಪಡೆದುಕೊಂಡ ಹಣವೆಲ್ಲ ಧರ್ಮಕ್ಕೇ ವಿನಿಯೋಗವಾಗುತ್ತೆಯೆಂಬ ಭರವಸೆಯೇನು? ಹಣ ಸೇರಿಕೊಳ್ಳುವ ಮುಂಚೆ ಇದ್ದ ಮನೋಧರ್ಮ ಹಣ ಸೇರಿಕೊಂಡ ಮೇಲೆ ಇರುವುದು ಕಷ್ಟ. ಧರ್ಮಕ್ಕೆಂದು ಕೊಟ್ಟ ಹಣದಲ್ಲಿ ಒಂದು ಪಾಲಾದರೂ ಧರ್ಮಕ್ಕೆ ದುಡಿಯುವವರ ಪಾಲಿಗೆ ಬರಬೇಡವೆ? ಇಲ್ಲವಾದರೆ ಅವರು ಬದುಕುವುದು ಹೇಗೆ?

ಈ ಸಂದರ್ಭದಲ್ಲಿ ಸಂಸ್ಕೃತದಲ್ಲೊಂದು ಮಾತಿದೆ—ಕೆಸರಿನಲ್ಲಿ ಕಾಲಿಟ್ಟು ಕಾಲು ತೊಳೆದುಕೊಳ್ಳುವುದಕ್ಕಿಂತಲೂ ಕೆಸರಿನಲ್ಲಿ ಕಾಲಿಡದೆ ಇರುವುದೇ ಮೇಲು ಎಂಬರ್ಥದ್ದು.

ಇಲ್ಲಿ ಕೆಸರೆಂದರೆ ಹಣ ಸಂಪಾದನೆ. ಅದರಲ್ಲಿ ತೊಡಗುವುದೆಂದರೆ ಕೆಸರಲ್ಲಿ ಕಾಲಿಡುವಂತೆಯೇ. ಶ್ಲೋಕದಲ್ಲಿ 'ವಿತ್ತೇಹಾ' ಎಂಬ ಮಾತಿದೆ; ಹಣಕ್ಕಾಗಿ ಆಶೆ, ಬಯಕೆ ಎಂದು ಮಾತಿನ ಅರ್ಥ. ದೂರದಿಂದಲೇ ಕೆಸರನ್ನು ನೋಡಿ, ಅದರಿಂದ ದೂರವಿರುವುದು ಇಲ್ಲಿ 'ನಿರೀಹಾ' ಎಂಬ ಮಾತಿನಿಂದ ಸ್ಪಷ್ಟವಾಗುತ್ತದೆ. 'ನಿರೀಹಾ' ಎಂದರೆ ಆಸೆಯಿಲ್ಲದಿರುವುದು, ಬಯಕೆಗಳಿರದಿರುವುದು.

ಹಣವಿದ್ದರೇನೋ ಧರ್ಮದ ಕೆಲಸಗಳನ್ನು ಮಾಡಬಹುದೆಂಬ ಮನಸ್ಸಿರುತ್ತದೆ. ಎಲ್ಲರಿಗೂ ಇರುವುದಿಲ್ಲವೆನ್ನಿ. ಕೆಲವರಿಗಾದರೂ ಇರುವ ಸಂಭವವುಂಟು. ಬದುಕಿನ ಅಗತ್ಯಗಳನ್ನು ಪೂರೈಸಿಕೊಂಡ ಮೇಲೆ ತಾನೆ ಧರ್ಮದ ಯೋಚನೆ?

ಹಣವಿಲ್ಲದಿದ್ದಾಗ ಇರದ ಅನೇಕ ಅಗತ್ಯಗಳು ಹಣ ಬಂದ ಮೇಲೆ ತೋರಿಕೊಳ್ಳುತ್ತವೆ; ಅಗತ್ಯಗಳ ಹರವು ಹೆಚ್ಚಿಕೊಳ್ಳುತ್ತದೆ. ಹಾಗಾಗಿ ಧರ್ಮದ ಕೆಲಸಗಳಿಗೆ ಅವಕಾಶ ಕಡಮೆಯಾಗುತ್ತ ಬರುತ್ತದೆ. ಮೊದಲಿದ್ದ ಧರ್ಮದ ಮೇಲಣ ಒಲವು ಬರುಬರುತ್ತ ಮರೆಯಾಗುತ್ತದೆ. ಹಣ ಬರುವುದು ಸ್ವಾರ್ಥಕ್ಕೇ ಎಂಬಂತಾಗುತ್ತದೆ.

ದಿಟವಾದ ಧಾರ್ಮಿಕ ಪ್ರಸಕ್ತಿ ಇದ್ದವರಿಗೂ ಹೀಗಾದ ಮೇಲೆ, ಹಣದ ಸಂಪಾದನೆಗೆಂದೇ ಧರ್ಮದ ಹೆಸರನ್ನು ಹೇಳುವವರ ವಿಚಾರ ಹೇಳುವುದೇನಿದೆ? ಹಣದ ಬರುವಿಕೆಯೇ ಮುಖ್ಯವೆಂದೂ, ಧರ್ಮಕ್ಕೆ ಆಗುವ ನೆರವು ಗೌಣವೆಂದೂ ಯಾರರಿಯರು?

ಧರ್ಮದ ಹತ್ತಾರು ಮುಖಗಳು ಹಣ ಸಂಪಾದನೆಗೆ ಒದಗಿಬರುತ್ತವೆ. ಬಡವರಿಗೆ ವಿದ್ಯೆ, ಮನೆ, ಸಾಮಾಜಿಕ ನೆರವು, ವೈದ್ಯ, ಮನೋರಂಜನೆ, ಆರ್ಥಿಕ ನೆರವು ಇತ್ಯಾದಿ ಇತ್ಯಾದಿ. ಇವೆಲ್ಲವೂ ಹಣವಿಲ್ಲದೆ ಆಗುತ್ತವೆಯೆ? ಆ ಹಣವನ್ನು

ನೀಡುವವರು ಯಾರು? ಹಣವಿರುವ ನೀವು, ನಾವು. ಬಡವರಿಗೆ ಅನುಕೂಲಗಳನ್ನು ನೇರವಾಗಿ ಒದಗಿಸುವವರು ಅವರು; ಹಣವನ್ನು ಪಡೆದುಕೊಳ್ಳುವವರು. ದುಡಿಮೆ ಅವರದ್ದು, ಕೊಡುಗೆ ಮಹಾಜನರದ್ದು; ಅವರ ಪಾಲಿಗೆ ದುಡಿಮೆಯ ಕಷ್ಟವಿಲ್ಲ.

ತರ್ಕವೇನೋ ಸರಿಯೆ. ಆದರೆ ಪಡೆದುಕೊಂಡ ಹಣವೆಲ್ಲ ಸರಿಯಾಗಿಯೇ ವಿನಿಯೋಗವಾಗುವ ನಿಶ್ಚಯವಿರಬೇಕಲ್ಲ? ಮಧ್ಯವರ್ತಿ ವೆಚ್ಚಗಳ ಪಾಲು ಎಷ್ಟೆಂಬುದು ತಿಳಿಯಬೇಕಲ್ಲ?

ಇನ್ನು ದೇವರ ಹೆಸರಿನಲ್ಲಿ ಹುಟ್ಟಿಕೊಳ್ಳುವ ದಳ್ಳಾಳಿಗಳ ಸಂಖ್ಯೆ ಸಣ್ಣದೇನಲ್ಲ. ಊರುಕೇರಿಗಳಲ್ಲೆಲ್ಲ ಗುಡಿಗಳು, ಉತ್ಸವಗಳು ಎಂದು ಹಣ ಸುಲಿಯುವುದೇ ಒಂದು ಉದ್ದಿಮೆಯಾಗಿಬಿಟ್ಟಿದೆ. ಕೆಸರಲ್ಲಿ ಕಾಲಿಟ್ಟವರಿಗೆ ಕಾಲು ತೊಳೆದುಕೊಳ್ಳಬೇಕೆಂಬ ತವಕವೇನಿರದು?

106. ಬಯಕೆ-ಬಡತನ

'ಬಯಕೆಗಳು ಹೆಚ್ಚಿದಂತೆಲ್ಲ ಅವನು ಬಡವ. ಬಯಕೆಗಳೇ ಇರದಿದ್ದವನು ಸಿರಿವಂತ' ಎಂಬುದೊಂದು ಮಾತಿದೆ. ಸಿರಿವಂತನಿಗೆ ಸಮಾಧಾನವಿರುತ್ತದೆ. ಬಡವನಿಗೆ 'ಅದು ಬೇಕು, ಇದು ಬೇಕು' ಎಂಬ ಹವಣಿಕೆಯಲ್ಲಿ ನೆಮ್ಮದಿಯನ್ನೆಲ್ಲಿಂದ ತರಬೇಕು? ಸಿರಿವಂತನಿಗೆ ತನಗೆ ಬೇಕಾದುದೆಲ್ಲ ಇದೆ ಎಂಬ ಸಮಾಧಾನ.

ಇಲ್ಲಿ ಬಡವನೆನ್ನುವಾಗ ಇರುವುದಕ್ಕೊಂದು ಎಲ್ಲೆಕಟ್ಟಿದೆ. ಅಗತ್ಯ ಇಷ್ಟು, ಅನುಕೂಲ ಇಷ್ಟು ಎಂಬ ಎಣಿಕೆಯಿದ್ದು, ಅಗತ್ಯವನ್ನು ಪೂರೈಸುವಂಥ ಅನುಕೂಲವಿರದಿದ್ದರೆ, ಬಯಕೆ; ಕೊರಗು. ಇರುವಷ್ಟಕ್ಕೇ ಇರುವ ಅನುಕೂಲವನ್ನೂ ಹೊಂದಿಸಿಕೊಂಡರೆ, ಅನುಕೂಲಕ್ಕೆ ತಕ್ಕಂತೆ ಅಗತ್ಯವನ್ನು ನೇರ್ಪಡಿಸಿಕೊಂಡರೆ ಬಡತನವೆಲ್ಲಿಯದು?

ಸಾಲದು, ಅಥವಾ ಇಲ್ಲ ಎಂಬ ಕೊರಗಿನ ಮನೋಧರ್ಮವನ್ನೆ ಬೆಳೆಸಿಕೊಂಡಾಗ, ಬೆಳೆಯುವುದು ಬಡತನವೇ. ಬಡತನ ಬೆಳೆದಂತೆಲ್ಲ ಬಯಕೆಗಳೂ ಬೆಳೆಯುತ್ತವೆ. ಬಯಕೆಗಳಿಗೂ ಬಡತನದ ಗಾಳಿಯೇ ಆಸರೆ, ಅದರದ್ದೇ ವಾಸನೆ. ಎಷ್ಟು ಬಯಕೆ ತೀರಿದರೆ ಇನ್ನಷ್ಟು ಬಯಕೆಗಳು ಹುಟ್ಟಿಕೊಳ್ಳುತ್ತವೆ. ಅನುಕೂಲಕ್ಕೊಂದು ಮಿತಿಯುಂಟು, ಕೊನೆಯೆಂಬುದುಂಟು—ಬಯಕೆಗಳಿಗೆ ಮಿತಿಯೂ ಇಲ್ಲ, ಕೊನೆಯೂ ಇಲ್ಲ. ಬಯಕೆಗಳಿರುವವರೆಗೂ ಬಡತನ ಮುಗಿಯುವುದೂ ಇಲ್ಲ.

ಸಿರಿಯೆಂದರೆ ವಿಶಾಲವಾದುದು, ಅದಕ್ಕೆ ಕಟ್ಟುಪಾಡಿರದು. ಉಸಿರು ಕಟ್ಟುವಂಥ ಪರಿಸ್ಥಿತಿಯಿಲ್ಲದ್ದು. ಬಡತನವೆನ್ನುವುದು ಹಾಗಲ್ಲ; ಬಯಕೆಗಳು ಕುತ್ತಿಗೆಗೆ

ಉರುಳು ಹಾಕಿದಂತೆ ವ್ಯಕ್ತಿಯ ಮನಸ್ಸನ್ನು ಸಂಕುಚಿತ ಮಾಡಿಬಿಡುತ್ತವೆ. ಬಡತನದ ಮಾನದಂಡ ಅನುಕೂಲ ಎಷ್ಟಿದೆ ಎಂಬುದಲ್ಲ; ಅಗತ್ಯಗಳು ಎಷ್ಟಿವೆ ಎಂಬುದು. ಸಿರಿತನದ ಮಾನದಂಡವೂ ಅದೇ ಎನ್ನಿ.

ಇರುವಷ್ಟು ಸಾಕು ಎನ್ನುವವನ ಮನಸ್ಸು ಕಟ್ಟುಪಾಡಿಲ್ಲದ್ದು; ಅದರಾಚೆ ಏನಾದರೂ ಇರಲಿ, ಎಂತಾದರೂ ಇರಲಿ, ಅದರ ಚಿಂತೆ ಇವನಿಗಿಲ್ಲ. ಹಾಗೆಂದೇ ಅವನ ನೆಮ್ಮದಿ ಕದಡುವುದಿಲ್ಲ. ಬರಬೇಕಾದದ್ದು ಬಂದೇ ಬರುತ್ತದೆ, ಬಾರದ್ದು ಏನಾಗಲಿ ಇರುವುದಿಲ್ಲ ಎಂಬ ವಿಶ್ವಾಸ ಅವನದು. ಗಾಳಿಯ ಗೋಪುರ ಕಟ್ಟಿಕೊಂಡು ಅದರ ಮೇಲೇರಿ ಹೋಗುವ ಹೆಡ್ಡತನ ಅವನಿಗಿಲ್ಲ. ಅದನ್ನೇ ಪುರಂದರದಾಸರು 'ಇಟ್ಹಾಂಗೆ ಇರುವೆ ಹರಿಯೆ, ಎನ್ನ ದೊರೆಯೆ' ಎಂದು ಹೇಳಿದ್ದು. ಹಾಗಿದ್ದ ಮೇಲೆ, 'ನಾನೇಕೆ ಬಡವನೋ ಹರಿಯೆ, ನಾನೇಕೆ ಪರದೇಶಿ?'

ಬಡತನವಾಗಲಿ, ಸಿರಿತನವಾಗಲಿ ಮನಸ್ಸಿನ ಧರ್ಮಗಳು. ನೆಮ್ಮದಿಯ ಪ್ರವೃತ್ತಿಯಿದ್ದರೆ ಸಿರಿವಂತನೇ; ಅವನಿಗೆ ದುಡ್ಡಿರಲಿ, ಬಿಡಲಿ, ಬಯಕೆಗಳಿಲ್ಲವಲ್ಲ. ಅಷ್ಟು ಸಾಕು. ಬಡವನಿಗೂ ಹಾಗೆಯೆ, ದುಡ್ಡಿರಲಿ, ಬಿಡಲಿ, ಬಯಕೆಗಳಿದ್ದರೆ ಬಡವನೇ. ಹೊರನೋಟಕ್ಕೆ ಸಿರಿವಂತರೆಂದು ಕಂಡುಕೊಂಡರೂ ಒಳಗೆ ಅವರನ್ನು ಬಡತನ ಕಾಡುತ್ತದೆ.

'ಕಷ್ಟ ಬೇಡೆಂಬಾಸೆ, ಕಡುಸುಖವ ಕಾಂಬಾಸೆ' ಇದು ಎಲ್ಲರಿಗೂ ಇರುತ್ತದೆ. ಇಷ್ಟರಿಂದ ಯಾರೂ ಬಡವರೂ ಅಲ್ಲ, ಸಿರಿವಂತರೂ ಅಲ್ಲ. ಇದಕ್ಕಾಗಿ ಬಯಕೆಗಳನ್ನು ಏರ್ಪಡಿಸಿಕೊಂಡರೆ ಮಾತ್ರ ಬಡವರೇ.

107. ದಡ್ಡರ ದುಡ್ಡು

ಮನುಷ್ಯರಿಗೆ ಬುದ್ಧಿಯಿರುವುದೇನೋ ದಿಟ, ಆದರೆ ಅದನ್ನು ಬಳಸಿಕೊಳ್ಳುವವರು ವಿರಳ. ಆಲೋಚನೆ ಮಾಡುವ ಕಷ್ಟ ಯಾರಿಗೆ ಬೇಕು? ಬೇರೆಯವರನ್ನು ನೋಡಿ, ಅವರಿದ್ದಂತೆ ಇದ್ದರೆ ಆಯಿತು ಎನ್ನುವವರೇ ಬಹುಮಂದಿ.

ಹಣ ಸಂಪಾದನೆ ಮಾಡುವವರು ಹಣದಿಂದಾಗುವ ಅನುಕೂಲಗಳನ್ನೇ ಗಮನಿಸುತ್ತಾರೆ. ಬದುಕುವ ಬಗೆಯಲ್ಲಿ ಮೇಲಿನ ಮಟ್ಟವನ್ನು ಮುಟ್ಟುವ ಅವಕಾಶಕ್ಕೆ ಹಾತೊರೆಯುತ್ತಾರೆ. ಮನೆಯ ವೈಭವ, ವಾಹನದ ವೈಖರಿ, ಯಾಂತ್ರಿಕ ಪರಿಕರಗಳ ಬಾಹುಳ್ಯ, ಮೋಜಿನ ರೀತಿ ಇವೆಲ್ಲ ಬದುಕಿನ ಮಟ್ಟವನ್ನು ತೋರ್ಪಡಿಸುತ್ತವೆಯಲ್ಲವೆ? ಇದಕ್ಕೆ ಹಣದ ಅಗತ್ಯವಿದ್ದೇ ಇದೆ. ಎಷ್ಟು ಹಣವಿದ್ದರೆ ಅಷ್ಟು ಒಳ್ಳೆಯದು.

ಈ ಮಾತು ಎಷ್ಟು ದಿಟವೆಂಬುದನ್ನು ನೆಮ್ಮದಿಯಿಂದ ವಿಚಾರ ಮಾಡುವ ಮಂದಿ ಎಷ್ಟಿರುತ್ತಾರೆ? ಹೀಗೆ ವಿಚಾರ ಮಾಡಲು ಬುದ್ಧಿಶಕ್ತಿಯ ವೆಚ್ಚವಾಗಬೇಕು; ಸ್ವತಂತ್ರವಾಗಿ ನಿರ್ಣಯಕ್ಕೆ ಬರಲು ಬುದ್ಧಿಶಕ್ತಿಯಿರಬೇಕು. ಬರಿಯ ಅನುಕರಣವೆಂದರೆ ಸರಿ, ಬುದ್ಧಿಶಕ್ತಿಯ ಬಳಕೆಯೇನಿರಬೇಕಾದುದಿಲ್ಲ.

ದಡ್ಡರಿಗೆ ದುಡ್ಡಿನ ಮೇಲೆ ಆಸೆ. ದುಡ್ಡು ಯಾರಲ್ಲಿಯೂ, ಯಾವೆಡೆಯೂ ಬಹುಕಾಲ ನಿಲ್ಲದೆಂಬ ಸೊಲ್ಲು ಅವರಿಗೆ ತಿಳಿಯದು. ಸಂಸ್ಕೃತದ ಶ್ಲೋಕವೊಂದು 'ನಂದಂತಿ ಮಂದಾಃ ಶ್ರಿಯಮಪ್ಯನಿತ್ಯಾಂ' ಎಂದೇ ಮೊದಲಾಗುತ್ತದೆ. ಹಣವು ಬೇಕೆಂಬಾಸೆಯಿಂದ ಮಾಡುವುದನ್ನೆಲ್ಲ ಮಾಡುತ್ತಾರೆ; ಮಾಡಬಾರದ್ದನ್ನೂ ಮಾಡುತ್ತಾರೆ. ಅಗತ್ಯವಾದದ್ದನ್ನು ಬಿಡುತ್ತಾರೆ, ಅನಗತ್ಯವಾದುದನ್ನು ಕಟ್ಟಿಕೊಳ್ಳುತ್ತಾರೆ.

ಹೀಗೆ ಮಾಡುವಾಗ ತೊಂದರೆ ಬಾರದೆಯಿರುವುದುಂಟೆ? ತೊಂದರೆ ಬಂದಿತೆಂದರೆ ಇವರು ಹಳಹಳಿಸುತ್ತಾರೆ, ಕಳವಳಪಡುತ್ತಾರೆ. ಭೂಮಿಯೇ ಬಾಯಿ ಬಿಟ್ಟಿತೆಂಬಂತೆ ಬೆದರುತ್ತಾರೆ. 'ಪರಂ ವಿಷೀದಂತಿ ವಿಪದ್‌ಗೃಹೀತಾಃ' ಆಗ ಹಣವು ಕೈಬಿಟ್ಟಿತೆಂಬ ಕೊರಗು; ಇದ್ದ ಅನುಕೂಲಗಳು ಮರೆಯಾಗುವ ಭೀತಿ. ಆಗಲೂ ಅವರು ಬುದ್ಧಿಯ ಬೆಳಕಿನಲ್ಲಿ ತೊಂದರೆಗಳನ್ನು ಪರೀಕ್ಷಿಸಿ ವಿಚಾರ ಮಾಡಿದರೆ ಅಷ್ಟು ಆತಂಕಕ್ಕೆ ಕಾರಣ ಕಾಣುವುದಿಲ್ಲ. ಹೇಗೋ ಸಾವರಿಸಿಕೊಳ್ಳಬಹುದು, ಗಂಡಾಂತರದಿಂದ ಪಾರಾಗಬಹುದು. ಹೀಗೆ ಮಾಡುವುದಿಲ್ಲ; ಬುದ್ಧಿಶಕ್ತಿಯ ವೆಚ್ಚವಾದರೆ ಹೇಗೆ?

ಹೀಗೆ ದುಡ್ಡು ಬರುವಾಸೆ, ತೊಂದರೆ ಬಾರದಿರಬೇಕೆಂಬಾಸೆ ಎರಡೂ ಇರುವಾಗ ಮನುಷ್ಯ ಬುದ್ಧಿಶಕ್ತಿಯನ್ನೆ ಅವಲಂಬಿಸಿದರೆ ಒಳಿತು. ಹಣದ ಅನುಕೂಲಗಳನ್ನು ಕಂಡು ಮರುಳಾಗದಂತೆ ಹಣದ ಸಹಜ ಕೊಡುಗೆಗಳಾದ ತೊಂದರೆಗಳನ್ನೂ ಮೊದಲೇ ಅರಿತುಕೊಳ್ಳಬೇಕು. ತೊಂದರೆ ಬಂದಾಗ, ಅದರ ಪೂರ್ವಾಪರಗಳನ್ನೂ ವಿಚಾರ ಮಾಡಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು.

ಆಗ ದುಡ್ಡಿನ ಮೇಲೆ ಬುದ್ಧಿಗೆಟ್ಟ ಬಯಕೆಯೂ ಇರುವುದಿಲ್ಲ; ತೊಂದರೆ ಬಂದಾಗ ಕಸಿವಿಸಿಯೂ ಇರುವುದಿಲ್ಲ. ದುಡ್ಡನ್ನು ಬರಮಾಡಿಕೊಳ್ಳುವಾಗ ಹಿಡಿಯುವ ದಾರಿ ಸರಿಯಾಗಿರಬೇಕೆಂದೂ, ನೇರವಾಗಿರಬೇಕೆಂದೂ ಎಚ್ಚರವಿರುವುದು ಅಗತ್ಯ; ಇದು ವಿಚಾರದಿಂದಲೇ ಬರುತ್ತದೆ. ತೊಂದರೆ ಬಂದಾಗ ಎದೆಗುಂದದೆ, ತಪ್ಪು ದಾರಿ ಹಿಡಿಯದೆ ಅದನ್ನು ತಾಳಿಕೊಳ್ಳುವ ಅದನ್ನು ನೀಗಿಕೊಳ್ಳುವ ಹದನವನ್ನು ಅರಿತುಕೊಳ್ಳುವುದೂ ಬುದ್ಧಿಶಕ್ತಿಯಿಂದಲೇ.

ದಡ್ಡರ ಬಳಿ ದುಡ್ಡು ಸೇರುವುದೂ ಹೆಚ್ಚು. ಅವರಿಗೆ ಬರುವ ತೊಂದರೆಗಳೂ ಹೆಚ್ಚು. ದುಡ್ಡಿನಿಂದೇನು ಜಾಣತನ ಬರುವುದಿಲ್ಲ; ತೊಂದರೆಯಿಂದೇನು ವಿವೇಕ ಬರುವುದಿಲ್ಲ ಅವರಿಗೆ.

108. ಆಯುಧವೋ ಆಭರಣವೋ?

ನೈಜೀರಿಯಾ ದೇಶದವರಲ್ಲೊಂದು ಗಾದೆಯಿದೆಯಂತೆ— "ಆಯುಧಗಳಿಗಿಂತಲೂ ಹೆಚ್ಚು ಮಂದಿ ಜನರನ್ನು ಕೊಲ್ಲುವುದು ಹಣ".

ಆಯುಧಗಳನ್ನು ತಯಾರಿಸುವುದೇ ಜನರನ್ನು ಕೊಲ್ಲಲೋಸುಗ. ಆಯುಧಗಳಿಂದ ಜನ ಸಾಯುತ್ತಾರೆಂದರೆ ಆಶ್ಚರ್ಯವೇನಿಲ್ಲ. ಆದರೆ ಹಣವಿರುವುದು ಜನರ ಬದುಕಿಗೆ ನೆರವಾಗಲೆಂದಲ್ಲವೆ? ಹಣದಿಂದ ಯಾರು ಸಾಯುತ್ತಾರೆ?

ಆಯುಧವನ್ನುಪಯೋಗಿಸುವಂತೆ ಹಣವನ್ನುಪಯೋಗಿಸುತ್ತಾರೆಯೆ?

ಆದರೆ ಗಾದೆಯ ಇಂಗಿತದಲ್ಲಿ ದಿಟವಾದ ಎಣಿಕೆಯೊಂದಿದೆ. ಹಣವನ್ನು ಕಾಣದವರು ಹೇಗೆ ಬದುಕುವರೋ ನಾವರಿಯೆವು. ಹಣದ ಅಗತ್ಯವನ್ನು ಕಂಡುಕೊಂಡು ಹಣವನ್ನು ಗಳಿಸಿಕೊಳ್ಳಲು ಹೆಣಗಾಡುವ ಜನರ ಸಂಖ್ಯೆ ದೊಡ್ಡದು. ಹೆಣಗಾಟದಲ್ಲೇ ಹೆಣವಾಗುವವರು ಎಷ್ಟೋ ಮಂದಿ!

ಇನ್ನು ಹಣ ಕೈಸೇರಿದ ಮೇಲೆ, ಯಾರನ್ನೂ ಲೆಕ್ಕಿಸದೆ ಯಾವುದಕ್ಕೂ ಮಣಿಯದೆ, ನ್ಯಾಯಾನ್ಯಾಯದ ವಿವೇಚನೆಯಿಲ್ಲದೆ, ಮುನ್ನುಗ್ಗುವವರು ಎಷ್ಟು ಮಂದಿ ಬಡವರನ್ನು ಸಾಯಬಡಿಯುವರೋ ಬಲ್ಲವರಾರು? ಒಬ್ಬ ಶ್ರೀಮಂತನಾದನೆಂದರೆ ಹತ್ತು ಮಂದಿ ಬಡವರಾದರು ಎಂದೇ ಅರ್ಥ.

ಆಯುಧವಾದರೆ ಹತ್ತಿರ ಬಂದವರನ್ನು ಗಾಸಿಗೊಳಿಸುತ್ತದೆ; ದೂರದಲ್ಲಿದ್ದರೂ ತಾಕಿಯೇ ನೋವನ್ನುಂಟುಮಾಡಬೇಕು, ಸಾಯಿಸಬೇಕು. ಹಣಕ್ಕಾದರೆ ಹೀಗಲ್ಲ; ತಾನು ತೋರಿಕೊಳ್ಳದೆಯೇ ಜನರನ್ನು ಕೊಲ್ಲಬಲ್ಲುದು. ಹಣಕ್ಕಾಗಿ ಬಾಯಿ ಬಿಡುವವರು ಹಣವನ್ನು ಪಡೆದುಕೊಳ್ಳುತ್ತಾರೆಂಬ ನಂಬಿಕೆಯಿದೆಯೆ? ಹಣ ಬರುವುದರೊಳಗೇ ತೀರಿಕೊಳ್ಳುವವರಿಲ್ಲವೆ?

ಆಯುಧಕ್ಕೂ ಹಣಕ್ಕೂ ಇನ್ನೂ ಒಂದಂತರವಿದೆ. ಆಯುಧವು ಸಾಮಾನ್ಯವಾಗಿ ತನ್ನನ್ನು ಪಡೆದಿರುವವನನ್ನು ತೊಂದರೆಗೀಡು ಮಾಡುವುದಿಲ್ಲ. ಎಲ್ಲಿಯೋ ಅಪಘಾತ, ಪ್ರಮಾದ ಇಂಥ ಸಂದರ್ಭಗಳನ್ನು ಬಿಡಿ. ಉಳಿದಂತೆ ಆಯುಧವು ತನ್ನನ್ನು ಹಿಡಿದವನ ನೆರವಿಗೇ ಬರುತ್ತದೆ.

ಹಣ ಹಾಗಲ್ಲ. ತನ್ನ ಮಾಲಕನನ್ನೇ ಹಲವು ಬಗೆಗಳಲ್ಲಿ ಚಿತ್ರಹಿಂಸೆಗೀಡುಮಾಡಿ ಕೊಲ್ಲುತ್ತದೆ. ಹಣದ ಮದ, ಅದರಿಂದ ಹುಟ್ಟುವ ದರ್ಪ, ಆಗ ನಂದಿಹೋಗುವ ದಯೆದಾಕ್ಷಿಣ್ಯಗಳ ಸೊಡರು, ದೀಪ ಆರಿದಾಗ ತೋರಿಯಾವರಿಸಿಕೊಳ್ಳುವ ಕತ್ತಲೆ, ಮುಂದಣ ಗತಿ ಕಾಣದೆ ಹಳ್ಳಕ್ಕೆ ಹಾರುವ ರಭಸ ಇವೆಲ್ಲ ಹಣದ ಅಭಿವ್ಯಕ್ತಿಗಳೇ.

ಹಣವಿದ್ದವರು ಹಾಳಾಗುವಷ್ಟು ಸುಲಭವಾಗಿ ಹಣವಿಲ್ಲದವರು ಹಾಳಾಗಲು ಸಾಧ್ಯವಿಲ್ಲ. ಹಣದಲ್ಲೆ ಹಾಳು ಮಾಡುವ ಸ್ವಭಾವವಿದೆ. ಬದುಕನ್ನೇ ತುಚ್ಛವಾಗಿ ಕಾಣುವ ಹವಣಿಕೆ ಅದಕ್ಕಿದೆ.

ಆಯುಧವೇನು ಮನಸ್ಸನ್ನು ಮರುಳು ಮಾಡುವುದಿಲ್ಲ. ಕಣ್ಣನ್ನು ಕುರುಡು ಮಾಡುವುದಿಲ್ಲ. ಹಣವಾದರೆ ಮನಸ್ಸನ್ನು ಕುಗ್ಗಿಸುತ್ತದೆ, ಕಣ್ಣು ಕಾಣದಂತೆ ಮಾಡುತ್ತದೆ. ಸಾಯಲು ಮುಂದೊಂದೇ ಹೆಜ್ಜೆ.

109. ಕಾಸು-ಮನಸ್ಸು

ಕಿಸೆಯಲ್ಲಿ ಕಾಸಿದ್ದರೆ ಮನಸ್ಸಿಗೆಷ್ಟೋ ನೆಮ್ಮದಿಯಲ್ಲವೆ?

ಆದರೆ ಮನಸ್ಸಿನಲ್ಲೇ ಕಾಸಿದ್ದರೆ ಆಯಿತಲ್ಲವೆ ಎನ್ನಬೇಡಿ. ಕಾಸು ಇರಬೇಕಾದುದು ಕಿಸೆಯಲ್ಲೇ. ಅದೇ ಅದರ ಜಾಗ. ಅದು ಬೇರೆಲ್ಲಿದ್ದರೂ ಅದು ಕಸವೇ. ಕಸವಿಸಿಗೆ ಕಾರಣವೇ.

ಮನಸ್ಸಿನಲ್ಲಿರುವ ಕಾಸು ನಮ್ಮನ್ನು ಸುಮ್ಮನಿರಲು ಬಿಡುವುದಿಲ್ಲ. ಆಸೆಯನ್ನು ಮುಗಿಲೆತ್ತರಕ್ಕೆ ಎಬ್ಬಿಸುತ್ತದೆ; ಕಡಲಿನಾಚೆ ನೂಕುತ್ತದೆ; ದಯೆದಾಕ್ಷಿಣ್ಯಗಳನ್ನು ಕರಗಿಸಿ ಬಿಡುತ್ತದೆ; ಇತಿಮಿತಿಗಳನ್ನು ಚಿವುಟಿ ಬಿಸಾಡುತ್ತದೆ.

ಕಾಸೊಂದು ಮನಸ್ಸಿನಲ್ಲಿ ಮನೆಮಾಡಿತೆಂದರೆ ಅಲ್ಲಿ ಬೇರೆ ಏನೂ ಬೆಳೆಯಲು ಬಿಡುವುದಿಲ್ಲ. ತಾನೇ ಎಲ್ಲೆಡೆ ಹರಡಿಕೊಳ್ಳುತ್ತದೆ. ಉಳಿದೆಲ್ಲವನ್ನೂ ಕಬಳಿಸಿಬಿಡುತ್ತದೆ. ತಾನಾಯಿತು, ತನ್ನ ಸಂತಾನವಾಯಿತು. ಕಾಸಿಗೆ ಕಾಸು ಕೂಡುವುದಲ್ಲದೆ ಬೇರೇನೂ ಕೂಡುವುದಿಲ್ಲ. ಕಾಸಿದ್ದರೆ ಕಾಸೇ ಬೆಳೆಯುವುದು.

ಕಿಸೆಯಲ್ಲಿದ್ದ ಕಾಸು ಹಾಗಲ್ಲ. ವೆಚ್ಚವಾಗುವುದು ಅದರ ಸ್ವಭಾವ, ವೆಚ್ಚವಾದಂತೆಲ್ಲ ಕಿಸೆ ಬರಿದಾಗುತ್ತದೆ. ಬರಿದಾದ ಮೇಲೆ ಮತ್ತೆ ಕಾಸು ಅದರೊಳಗೆ ಸೇರಲು ಎಡೆಮಾಡಿಕೊಡುತ್ತದೆ. ಕಾಸು ಕಿಸೆಯಲ್ಲೇ ನಿಂತುಬಿಡುವುದಿಲ್ಲ. ಹೊರಗೆ ಹರಿಯುತ್ತದೆ. ಒಳಗೆ ಸೇರುತ್ತದೆ. ಬಯಸಿದ್ದನ್ನು ಕೈಲಾದಷ್ಟು ತಂದುಕೊಡುತ್ತದೆ. ಜನರ ನಡುವೆ ಲವಲವಿಕೆಯಿಂದ ಅಡ್ಡಾಡುತ್ತದೆ; ಕುಣಿದಾಡುತ್ತದೆ.

ಆದರೆ ಕಿಸೆಯನ್ನು ತುಂಬುವಷ್ಟು ಕಾಸಿದ್ದರೆ ಆಯಿತು; ಇನ್ನೂ ಹೆಚ್ಚು ಕಿಸೆಯಲ್ಲಿ ಹೋಗಲಾರದು. ಒಳಗಿದ್ದದ್ದು ಹೊರಗೆ ಬಾರದೆ ಹೊರಗಿದ್ದದ್ದು ಒಳಗೆ ಹೋಗಲರಿಯದು. ಕಿಸೆಯಲ್ಲಿ ಜಾಗವಿರಬೇಕಲ್ಲ? ಕಿಸೆ ಕಿರಿದು; ನಮ್ಮ ಯೋಗ್ಯತೆಗೆ ಸರಿಯಾಗಿರುತ್ತದೆ ಅಷ್ಟೆ. ಮನಸ್ಸಿನಂತೆ ವಿಶಾಲವಲ್ಲ; ಬಯಕೆಗಳಿಂದಲೇ ತುಂಬುವಂಥದಲ್ಲ.

ಮನಸ್ಸಿನಂತೆ ಕಿಸೆಯನ್ನು ಹಿಗ್ಗಿಸಿಕೊಳ್ಳುವ ಹವಣಿಕೆಯಿದ್ದರೆ ಮನಸ್ಸು ಕಿಸೆಯಂತೆ ಕಿರಿದಾಗುವ ಸಂಭವವಿದೆ. ಕಿಸೆಯಿಲ್ಲದೆ ಬದುಕು ನಡೆಯುವಂತಿಲ್ಲ, ದಿಟ; ಆದರೆ ಮನಸ್ಸೆಲ್ಲ ಕಿಸೆಯ ಕಡೆಯೆ ನಿಂತುಬಿಟ್ಟರೆ ಬದುಕು ಬರಡಾದೀತು.

ಹಲವರಿಗೆ ಕಿಸೆಯ ಕಡೆಯೆ ಕಣ್ಣು. ಅದನ್ನು ತುಂಬುವುದರತ್ತ ಅವರ ನೋಟ. ಅದನ್ನು ತುಂಬಿಕೊಂಡರೆ ಬದುಕು ತುಂಬಿ ಬಂದೀತು ಎಂದು ಅವರ ಎಣಿಕೆ. ಕಿಸೆಗೂ ಬದುಕಿಗೂ ಒಂದಂತರ ಉಂಟು ಎಂಬುದನ್ನು ಅವರು ಅರಿಯರು. ಬದುಕಿಗೆ ಬೇಕಾದುದು ಒಳ್ಳೆಯ ಮನಸ್ಸು, ವಿಶಾಲವಾದ ಮನಸ್ಸು, ಸಮರ್ಥವಾದ ಮನಸ್ಸು. ಮನಸ್ಸಿನ ನೆಮ್ಮದಿಗೆ ಕಿಸೆಯೊಂದೆ ಕಾರಣವಾಗಲಾರದು. ಅದರ ನೆಮ್ಮದಿಯು ಉಲ್ಲಾಸದೊಂದಿಗೆ ಕೂಡಿರಬೇಕಾದರೆ ಸಂಗೀತ, ಸಾಹಿತ್ಯ, ಧರ್ಮ, ಕಲೆ, ಕ್ರೀಡೆ ಮೊದಲಾದ ಹತ್ತು ಹಲವು ವಿವರಗಳು ಸೇರಿಕೊಳ್ಳಬೇಕು.

ಇವೆಲ್ಲ ಕಿಸೆಯಲ್ಲಿ ಕಾಸಿನಿಂದ ಪೂರೈಸಲಾಗದು. ಹೊಟ್ಟೆಬಟ್ಟೆಗೆ, ಮನೆ ಮಾರುಕಟ್ಟೆಗಳಿಗೆ ಕಾಸು ಬೇಕು. ಇಷ್ಟೇ ಬದುಕು ಎಂದವರಿಗೆ ಕಿಸೆಯೊಂದು ದೊಡ್ಡದಾಗಿದ್ದರೆ ಸಾಕು. ಆದರೆ ಇಷ್ಟನ್ನೆ ಬದುಕು ಎಂದು ಬಗೆಯದವರು ಬಹುಮಂದಿ ಇದ್ದಾರಲ್ಲವೆ? ಅವರಿಗೆ ಮನಸ್ಸು ಮುಖ್ಯವಾಗುತ್ತದೆ; ಕಾಸಿನಿಂದ ಕೊಳ್ಳಲಾಗದ ಪ್ರೀತಿ, ಉತ್ಸಾಹ, ವಿಶ್ವಾಸ, ಉಲ್ಲಾಸಗಳು ಮುಖ್ಯವಾಗುತ್ತವೆ. ಯಾವುದಕ್ಕೆ ಎಷ್ಟು ಬೆಲೆಯೋ, ಎಷ್ಟು ಅಗತ್ಯವೋ ಅಷ್ಟಿದ್ದರೆ ಒಳಿತು.

110. ಹಣ-ಸುಖ

ಎಷ್ಟು ಹಣವಿದ್ದರೆ ಅಷ್ಟು ಸುಖ ಎನ್ನುವುದು ಸುಳ್ಳು.

ಹಣಕ್ಕೆ ಸುಖವನ್ನು ತಂದುಕೊಡುವ ಸಾಮರ್ಥ್ಯವಿದೆಯೆಂಬುದು ದಿಟವಾದರೂ, ಹಣ ಹೆಚ್ಚಿದಂತೆಲ್ಲ ಅದರ ಸಾಮರ್ಥ್ಯವೂ ಹೆಚ್ಚುವುದಿಲ್ಲ. ಹಾಗೆ ನೋಡಿದರೆ, ಹಣದ ಸಾಮರ್ಥ್ಯ ಬರುಬರುತ್ತ ಕಡಮೆಯಾಗುತ್ತದೆ.

ಬಡವನಿಗೆ ಒಪ್ಪೊತ್ತು ಊಟಕ್ಕಿರದಿದ್ದಾಗ ಹತ್ತು ರೂಪಾಯಿಗಳನ್ನು ಕೊಟ್ಟರೆ ಅದರಿಂದ ಅವನಿಗೆ ಸುಖವೇ. ತನ್ನ ಹಸಿವನ್ನು ತಕ್ಕಮಟ್ಟಿಗೆ ತೀರಿಸಿಕೊಳ್ಳಬಹುದು. ಅದೇ, ಸಿರಿವಂತನಾದವನಿಗೆ ಅದು ಏತರ ಲೆಕ್ಕ? ಸಾವಿರವಾದರೆ ಏನೋ ಅಷ್ಟಿಷ್ಟು ಸಮಾಧಾನವೆನ್ನಬಹುದು.

ಬಡವನಿಗೆ ನೂರೋ ಸಾವಿರವೋ ಕೊಟ್ಟಿರೆನ್ನಿ. ಅವನ ಸುಖ ಹೆಚ್ಚುತ್ತದೆ. ಹಸಿವೆಯ ಜೊತೆಗೆ ಇನ್ನೂ ಕೆಲವು ಕೊರತೆಗಳನ್ನು ಅವನು ನೀಗಿಕೊಳ್ಳಬಹುದು. ಆದರೆ ಹಸಿವೆ ಇಂಗಲು ಹತ್ತು ಸಾಕು, ನೂರಾಗಲಿ ಸಾವಿರವಾಗಲಿ ಅದಕ್ಕೆ ಬೇಕಾಗಿಲ್ಲ. ಬೇರೆ ಬಯಕೆಗಳ ಮಾತು ಬೇರೆ.

ಹಣ ಇದೆಯೆಂದು ಹೆಚ್ಚು ಉಂಡರೆ ಅದರಿಂದ ತೊಂದರೆಯಲ್ಲವೆ? ಉಡುವ ಬಟ್ಟೆಯೂ ಹಾಗೆಯೆ. ಅಂಗಿಯ ಮೇಲೆ ಅಂಗಿ, ಟೋಪಿಯ ಮೇಲೆ ಟೋಪಿ, ಒಂದು ಚಪ್ಪಲಿಯ ಜೊತೆಗಿನ್ನೊಂದು ಚಪ್ಪಲಿ ಧರಿಸಬಹುದು? ಕೋಣೆ ತುಂಬ ಹಣವಿದ್ದರೂ ಹೊಟ್ಟೆಗೆ, ಬಟ್ಟೆಗೆ ಎಷ್ಟು ಬೇಕೋ ಅಷ್ಟೆ ಅಲ್ಲವೆ? ಹೆಚ್ಚಿನ್ನೇನು ಮಾಡುವರು? ಕೂಡಿಟ್ಟರೆ ಅದು ಇದ್ದೀತೆ?

ಕಳ್ಳರಿಗೆ ಕದಿಯುವ ಹವ್ಯಾಸವಿರುತ್ತದೆ, ಮೋಸಗಾರರಂತೂ ಕಾದಿರುತ್ತಾರೆ, ಬಗೆಬಗೆಯ ಬಲೆಗಳನ್ನು ಬೀಸುತ್ತಾರೆ. ಬೇಡದ ಹಣವನ್ನು ಸುಲಿದುಕೊಳ್ಳಲು ಸಿದ್ಧರಾಗಿರುವವರ ಸಂಖ್ಯೆಯೇನು ಸಣ್ಣದೆ?

ತಾನೂ ಅನುಭವಿಸಲಾರ, ಕೈಯೆತ್ತಿ ಇತರರಿಗೆ ನೀಡಲಾರ. ಉಳಿದಿರುವ ದಾರಿ ಯಾವುದು? ಹಾಳಾಗುವುದು. ದುಡಿದು ದುಡ್ಡು ಮಾಡಿಟ್ಟು ಸತ್ತರೆ ಅದು ಯಾರ ಪಾಲಾಗುವುದೋ! ಎಲ್ಲರ ಕಣ್ಣೂ ಅದರ ಮೇಲೇ ಇರುತ್ತದೆ, ಹಿಸ್ಸೆಗಾಗಿ ಹತ್ತೂ ಜನ ಹತ್ತಿರ ಬರುತ್ತಾರೆ.

ಹಣವಿದ್ದ ಮಾತ್ರಕ್ಕೆ ಸುಖಪಡುವ ಹದ ತಿಳಿಯುತ್ತದೆ ಎನ್ನುವಂತಿಲ್ಲ. ಹಣ ಪಡೆದುಕೊಳ್ಳುವ ಹವಣಿಕೆಯೇ ಬೇರೆ, ಸುಖವನ್ನು ಅನುಭವಿಸುವ ಪರಿಯೇ ಬೇರೆ. ಹಣ ಗಳಿಸಲು ನ್ಯಾಯಾನ್ಯಾಯದ ಎಣಿಕೆ ಇದ್ದರೆ ಕಷ್ಟ. ಪ್ರಣಯದಲ್ಲಿ, ಕದನದಲ್ಲಿ ಏನು ಮಾಡಿದರೂ ಸರಿಯೇ ಎಂಬ ನ್ಯಾಯ ಹಣದ ಗಳಿಕೆಗೂ ಅನ್ವಯಿಸುತ್ತದೆ. ದಾರಿ ಯಾವುದಾದರಾಗಲಿ ಗುರಿಯನ್ನು ತಲುಪಿದರೆ ಸರಿ ಎಂಬ ನಿರ್ಧಾರವಿದ್ದರೆ ಆಯಿತು. ಆದರೆ ಇದು ಸುಖವನ್ನನುಭವಿಸುವ ಪರಿಯಲ್ಲ.

ಸುಖವು ಕಷ್ಟದಲ್ಲಿ ಮುಗಿಯಬಾರದೆಂಬ ಬಯಕೆಯಿದ್ದರೆ ನ್ಯಾಯವಾದ ಹಣದಿಂದಲೇ ಸುಖವೆಂಬ ಅರಿವಿರಬೇಕು. ಹಾಲು ಕುಡಿದ ಮಕ್ಕಳೇ ಬದುಕುವುದು ಕಷ್ಟವೆನ್ನುವಾಗ ವಿಷ ಕುಡಿದ ಮಕ್ಕಳು ಬದುಕುವುದುಂಟೆ? ಹಣ ಮುಖ್ಯವೋ ಸುಖ ಮುಖ್ಯವೋ ಎಂಬ ವಿವೇಕವಿರಬೇಕು. ಹಣ ಬಂದ ದಾರಿ ಒಳ್ಳೆಯದಾದರೆ ಸುಖದ ಅನುಭವವೂ ಗಟ್ಟಿಯಾದೀತು.

111. ಹಣವಿದ್ದರೇನು?

ಹಣವನ್ನು ಬಯಸುವವರೆಲ್ಲ ಹಣವನ್ನೇ ನೇರವಾಗಿ ಬಯಸುವುದಿಲ್ಲ. ಅದರಿಂದ ಬಂದೊದಗುವ ಇತರ ಅನುಕೂಲಗಳನ್ನು ಮನಸ್ಸಿನಲ್ಲಿರಿಸಿಕೊಂಡಿರುತ್ತಾರೆ. ಹಣ ಇವಕ್ಕೆ ಸಾಧನವೆಂಬ ಕಾರಣದಿಂದಲೇ ಹಣದ ಬಯಕೆ.

ಬಯಕೆಗೆ ಹತ್ತಾರು ಮುಖಗಳು. ಸುಖ ಸಂತೋಷಗಳನ್ನು ಎಲ್ಲರೂ ಬಯಸುತ್ತಾರೆ. ಆದರೆ ಯಾರಿಗೆ ಯಾವುದರಲ್ಲಿ ಸುಖ, ಸಂತೋಷ ಎಂಬುದು

ಅವರವರಿಗೆ ಬಿಟ್ಟಿದ್ದು. ಕೆಲವರಿಗೆ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುವುದರಲ್ಲಿ ಸುಖ. ಕೆಲವರಿಗೆ ಕೀರ್ತಿಯನ್ನು ಪಡೆದುಕೊಂಡು ನಾಲ್ಕೂ ಜನರ ನಡುವೆ ಹಿಗ್ಗಿನಿಂದ ನಡೆಯುವ ಆಸೆ. ಇನ್ನು ಕೆಲವರಿಗೆ ಅಧಿಕಾರವನ್ನು ಚಲಾಯಿಸುವ ಉದ್ಯೋಗವನ್ನೊ ಉದ್ದಿಮೆಗಳನ್ನೊ ಹಿಡಿದುಕೊಳ್ಳುವುದರಲ್ಲಿ ಸುಖ. ಮತ್ತೆ ಕೆಲವರಿಗೆ ಶಕ್ತಿಯನ್ನು ಕೈಲಿಟ್ಟುಕೊಂಡು ದೊಡ್ಡ ಕುಳವಾಗುವ ಬಯಕೆ.

ಹೀಗೆ ಧನಕಾಮನೆಗೆ ಕಾರಣವಾಗಿ ಸಂಚಯಕಾಮ, ಕೀರ್ತಿಕಾಮ, ಅಧಿಕಾರಕಾಮ, ಶಕ್ತಿಕಾಮ ಎಂಬುವಿರಬಹುದು. ಆರ್ಥಿಕವಾಗಿ ತಾನು ಸಂಪನ್ನನಾಗಬೇಕು ಎಂಬುದು ಎಲ್ಲರಿಗೂ ಸಮಾನವಾಗಿಯೆ ಇರುವ ಕಾಮನೆ; ಆದರೆ ಅದು ಅಷ್ಟಕ್ಕೇ ಸೀಮಿತವಾಗುವುದಿಲ್ಲ. ಅದರಾಚೆ ಇನ್ನೂ ಕೆಲವು ಕಾಮನೆಗಳಿರುತ್ತವೆ. ಆದರೆ ಆರ್ಥಿಕ ಸಂಪನ್ನತೆಯೆ ಇರದಿದ್ದರೆ ಉಳಿದವು ಕಾಮನೆಗಳಾಗಿಯೆ ಉಳಿಯಬೇಕು.

ಸಮಸ್ಯೆಯೇನೆಂದರೆ ಹಣದ ಬಯಕೆ ಉಳಿದ ಕಾಮನೆಗಳಿಗೆ ಕಾರಣ ವಾಗುವುದೋ, ಅಥವಾ ಉಳಿದ ಕಾಮನೆಗಳೇ ಹಣದ ಬಯಕೆಯನ್ನು ಹುಟ್ಟುಹಾಕುವುವೋ ಎಂಬುದು. ಹಣವೊಂದಿದ್ದರೆ ಸಾಲದು; ಅದಕ್ಕೆ ಸಂಬಂಧಿಸಿದಂತೆ ಇತರ ಅನುಕೂಲಗಳೂ ಬಯಕೆಗಳೂ (ಕೀರ್ತಿ, ಅಧಿಕಾರ ಇತ್ಯಾದಿ) ತೀರಬೇಕು. ದುಡ್ಡಿದ್ದವನು ದೊಡ್ಡಪ್ಪ; ದೊಡ್ಡಪ್ಪನಾಗುವುದು ಸುತ್ತಮುತ್ತಲವರ ಎಣಿಕೆಯಲ್ಲೇ ತಾನೆ? ಸಣ್ಣಪ್ಪಗಳು ಇದ್ದರೇ ದೊಡ್ಡಪ್ಪ! ಸಣ್ಣಪ್ಪಗಳಿಗೆ ಇಲ್ಲದ್ದು ದೊಡ್ಡಪ್ಪರಿಗೆ ಇದೆ.

ದುಡ್ಡಿದ್ದವನು ಅಷ್ಟರಿಂದಲೇ ದೊಡ್ಡಪ್ಪನಾಗಲಾರ. ದುಡ್ಡನ್ನು ಬಳಸಿಕೊಂಡು ದೊಡ್ಡತನವನ್ನು ಪಡೆದುಕೊಂಡಾಗ (ಎಂದರೆ ಕೊಂಡುಕೊಂಡಾಗ) ದುಡ್ಡಿಗೂ ಬೆಲೆ, ದುಡ್ಡಿರುವ (ಅಥವಾ ದುಡ್ಡಿದ್ದ) ವ್ಯಕ್ತಿಗೂ ಬೆಲೆ. ದೊಡ್ಡತನವನ್ನು ಗಳಿಸಿಕೊಳ್ಳುವ ಶಕ್ತಿ ದುಡ್ಡಿಗಿದೆ ಎಂಬ ಕಾರಣದಿಂದಲೇ ಅದಕ್ಕಷ್ಟು ಬೆಲೆ; ಅದರ ಬಯಕೆ.

ಹಣವನ್ನು ಅನುಭವಿಸದೆ, ಅನುಕೂಲಗಳಿಗೆ ವೆಚ್ಚ ಮಾಡದೆ, ಇತರರಿಗೆ ಅದರ ಪ್ರಯೋಜನವನ್ನು ಕಾಣಿಸದೆ, ಅದನ್ನು ನೆಲದೊಳಗೆ ಹುಗಿದಿಟ್ಟರೆ, ಅದನ್ನು ಪಡೆದುಕೊಂಡದ್ದು ಬರಿಯ ಶ್ರಮವಾಯಿತು; ತಿಳಿಗೇಡಿತನವಾಯಿತು. ಅದನ್ನು ಹಾಗೆಯೇ ಮುಂದಿಟ್ಟುಕೊಂಡು ನೋಡುತ್ತಿದ್ದರೂ ಏನಾದಹಾಗಾಯಿತು? ಹಣವನ್ನು ಕೊಟ್ಟು ಅನುಕೂಲವನ್ನು ಪಡೆದುಕೊಳ್ಳಬೇಕು. ಅನುಕೂಲವೇ ನಮ್ಮ ನೇರವಾದ ಬಯಕೆ, ದಿಟವಾದ ಬಯಕೆ. ಅದಕ್ಕೆ ಸಾಧನವಾಗಿ ಹಣ ಬೇಕಷ್ಟೆ? ಅದಕ್ಕಾಗಿ ಹಣದ ಬಯಕೆ.

ಉಳಿದ ಯಾವ ಕಾಮನೆಯೂ ಇಲ್ಲದಿದ್ದರೆ ಹಣದ ಕಾಮನೆಯೂ ಇರುವುದೇ ಇಲ್ಲ. ಹಣವನ್ನು ಬಯಸುವವರಿಗೆ ಹಣದಾಚೆ ಇರುವ, ಹಣದಿಂದ

ಮುಟ್ಟಬಹುದಾದ ಏನಾದರೊಂದು ಬಯಕೆ ಇರುತ್ತದೆ. ಹೀಗಿರುವುದು ಸಹಜವೂ ಹೌದು; ಚೆನ್ನೂ ಹೌದು. ಹಣಕ್ಕಾಗಿ ಹಣ ಎಂದರೆ ಅರ್ಥವಿಲ್ಲದ ಮಾತು.

112. ದಾನದಲ್ಲಿ ವಿವೇಕ

ವೇಮನನ ಪದಗಳಲ್ಲೊಂದು ಕಿವಿ ಮಾತು ಬರುತ್ತದೆ— ದಾನ ಮಾಡುವುದೇನೋ ಒಳ್ಳೆಯದು. ಆದರೆ ಅರಿತು ದಾನವನ್ನು ಮಾಡಬೇಕು.

ಹೊಟ್ಟೆ ಹಸಿದವನಿಗೆ ಅನ್ನವನ್ನು ನೀಡಿದರೆ ಅವನು ಸಂತೋಷ ಪಡುತ್ತಾನೆ; ಆಸೆಯಿಂದ ತಿನ್ನುತ್ತಾನೆ. ತಿಂದು ನಿನ್ನನ್ನು ಹರಸುತ್ತಾನೆ. ನೀನು ದಾನ ಮಾಡಿದ್ದು ಸಾರ್ಥಕವಾಯಿತು. ಬೇರೆಯವರ ನೆಮ್ಮದಿಗೆ ಕಾರಣವಾದದ್ದು ಹಿತವಲ್ಲವೆ?

ಅದೇ, ಬಿರಿಯುಂಡವನಿಗೆ ಅನ್ನವನ್ನು ನೀಡಲು ಹೋದರೆ ಅವನು ಅದನ್ನು ಬಿಸಾಡುತ್ತಾನೆ; ಬೇರೆ ಯಾರಿಗಾದರೂ ಕೊಟ್ಟುಬಿಡುತ್ತಾನೆ. ಅವನಿಗೆ ಬೇಡದುದನ್ನು ನೀಡುವಲ್ಲಿ ಜಾಣತನವಿದೆಯೆ? ಫಲವಿದೆಯೆ?

ದಾನ ಮಾಡುವಾಗ ಪಾತ್ರಾಪಾತ್ರಗಳನ್ನರಿತುಕೊಂಡರೆ ಒಳಿತಲ್ಲವೆ? ದಾನ ಮಾಡಬೇಕಾದುದು ಅದರ ಅಗತ್ಯವಿದ್ದವನಿಗೆ; ಆದರೆ ಅಗತ್ಯವೇ ಪಾತ್ರತೆಯಾಗುವುದಿಲ್ಲ. ಕೆಟ್ಟಚಾಳಿಯಿರುವ ಮನುಷ್ಯನಿಗೆ ಹಣದ ಅಗತ್ಯವಿರುತ್ತದೆ; ಅವನಿಗೆ ಹಣವನ್ನು ನೀಡಿದರೆ ಕೆಟ್ಟ ಚಾಳಿಗೇ ಇನ್ನಷ್ಟು ಚಾಲನೆ ಕೊಟ್ಟಂತೆ ಅಲ್ಲವೆ? ಹಣವೂ ಹೋಯಿತು. ಅವನೂ ಇನ್ನಷ್ಟು ಆಳಕ್ಕೆ ಇಳಿದ.

ಕುಡುಕನಿಗೆ ಎಷ್ಟು ಹಣವಿದ್ದರೆ ತಾನೆ ಸಾಕು? ಅವನು ದುಡಿದದ್ದೆಲ್ಲ ಇದಕ್ಕೇ ಹೋಗುತ್ತದೆ. ಮನೆಯವರು ಉಪವಾಸವಿದ್ದರೂ ಇವನ ಕುಡಿತದ ಗೀಳೇನು ತಪ್ಪುವುದಿಲ್ಲ. ಅಂಥವನಿಗೆ ನೀವು ಹಣವನ್ನು ನೀಡಿದರೆ ಅದೇನು ಊರ್ಜಿತವಾಗಲಾರದು; ಅವನ ಕಷ್ಟ ತಪ್ಪಲಾರದು; ಅವನ ಮನೆಯವರು ನಿಮ್ಮನ್ನೇನು ಹರಸಲಾರರು. ಇದು ಪಾತ್ರತೆಯ ವಿವೇಕವಿರಬೇಕಾದ ಪ್ರಸಂಗ.

ಅಗತ್ಯವಿದ್ದರೆ ಮಾತ್ರ ಸಾಲದು; ನೀಡಿದ ಹಣವನ್ನು ಸದ್ವಿನಿಯೋಗ ಮಾಡಿಕೊಳ್ಳುವ ಯೋಗ್ಯತೆಯೂ ಇರಬೇಕು. ಸರಕಾರದ ಹಣವೂ ಸಮಾಜದ ಏಳ್ಗೆಗೆಂದೇ ಮೀಸಲಾದದ್ದು ಹೀಗೆಯೇ ಅಪವ್ಯಯವಾಗುವುದಿದೆ. ಪಾತ್ರಾಪಾತ್ರವನ್ನರಿಯದೆ, ತನ್ನ ಹೊಣೆಯನ್ನಷ್ಟೆ ತೀರಿಸಿಕೊಂಡರಾಯಿತು ಎಂಬ ಅಭಿಪ್ರಾಯದಿಂದ ಕೊಡುವ ಕೊಡುಗೆ ಯಾರಿಗೆ ಹಿತಕಾರಿಯಾದೀತು?

ದಾನ ಮಾಡುವುದು ನನ್ನ ಕೆಲಸ; ನನಗೆ ಅದರಿಂದ ಪುಣ್ಯ ಬಂದೀತು ಎಂಬ ಭಾವನೆಯಿಂದಲೇ ದಾನ ಮಾಡುವವರಿರುತ್ತಾರೆ. ದಾನ ತೆಗೆದುಕೊಂಡವರಿಗೆ ಅದರ

ಅಗತ್ಯವಿದೆಯೆ, ಅದನ್ನು ಪಡೆದುಕೊಳ್ಳುವ ಯೋಗ್ಯತೆಯಿದೆಯೆ, ಅದರಿಂದ ಯಾರಿಗಾದರೂ ಅನುಕೂಲವಾದೀತೆ ಎಂಬ ಎಣಿಕೆಯಿರುವುದಿಲ್ಲ. ಸರಕಾರವೂ ಹೀಗೆಯೇ. ಅನುದಾನಗಳನ್ನು ಕೊಡುವಾಗ, ಬಡಬಗ್ಗರ ಉದ್ಧಾರಕ್ಕೆಂದು ಸಹಾಯವನ್ನು ಮಾಡುವಾಗ, ಸಾರ್ಥಕತೆಯ ಕಡೆ ಕಣ್ಣಿರುವುದಿಲ್ಲ. ವರ್ಷಕ್ಕಿಷ್ಟು ವೆಚ್ಚವಾಗುವುದು ಮುಖ್ಯವೆನಿಸುತ್ತದೆ.

ಇರುವುದನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು ದಾನದ ಅರ್ಥ. ದಾನಕ್ಕೆ ಸಂವಿಭಾಗವೆಂದೇ ಪರ್ಯಾಯಪದ. ಇದು ಒಳ್ಳೆಯ ಭಾವನೆಯೇ. ತಾನೊಬ್ಬನೆ ತಿನ್ನಬೇಕೆನ್ನದೆ ಬೇರೆಯವರಿಗೂ ನೀಡಬೇಕೆನ್ನುವುದು ಒಳ್ಳೆಯದಲ್ಲವೆ? ಆದರೆ ತಾನು ಸಂಪಾದಿಸಿದ್ದು ನ್ಯಾಯವಾಗಿಯೇ ಎಂದಾದರೆ, ಅದನ್ನು ಸಂವಿಭಾಗ ಮಾಡಿಕೊಳ್ಳುವಾಗಲೂ ನ್ಯಾಯಪರರು ಇದ್ದರೆ ಅದಕ್ಕೆ ಬೆಲೆ. ಅನ್ಯಾಯದ ಗಳಿಕೆಯಾದರೆ ಅಸಡ್ಡಾಳದಲ್ಲಿ ವೆಚ್ಚವಾಗಲಿ, ಚಿಂತೆಯಿಲ್ಲ. ನ್ಯಾಯದ ಹಣ ಅನ್ಯಾಯವಾಗಬಾರದಲ್ಲ?

ಆಗ ಪಾತ್ರಾಪಾತ್ರದ ತಿಳಿವಳಿಕೆಯಿರಬೇಕು; ಸಾರ್ಥಕತೆಯ ಕಲ್ಪನೆಯಿರಬೇಕು. ಮಾಡಿದ ದಾನ ಫಲಕಾರಿಯಾಗಬೇಡವೆ?

113. ಶೋಷಣೆಯ ಮೂಲ

ಯಾವುದೇ ಆರ್ಥಿಕ ಯೋಜನೆಯಾಗಲಿ, ಆರ್ಥಿಕ ನೀತಿಯಾಗಲಿ ಹೆಚ್ಚು ಹಣ ಗಳಿಸುವುದೇ ಉದ್ದೇಶ. ಒಂದಲ್ಲ ಒಂದು ರೀತಿಯಲ್ಲಿ ಲಾಭ ಒದಗಿಬರಬೇಕು. ಹಣದಿಂದ ಉಪಯೋಗವೇನು? ಬದುಕುವ ಬಗೆಯಲ್ಲಿ ಮೇಲಿನ ಮಟ್ಟವನ್ನು ಮುಟ್ಟುವುದು, ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳುವುದು, ಸೌಕರ್ಯಗಳನ್ನು ಬಳಸಿಕೊಳ್ಳುವುದು.

ಇದರಲ್ಲಿ ತಾಂತ್ರಿಕತೆಯದೊಂದು ಪಾತ್ರವಿದೆ. ತಾಂತ್ರಿಕತೆಯೆನ್ನುವುದು ವಿಜ್ಞಾನದ ಅನ್ವಯ. ಸಂಶೋಧನೆಗಳ ಫಲವಾಗಿ ಪ್ರಯೋಗ ಮೈಗೂಡಿದಾಗ, ಬದುಕಿನ ಹಲವು ಬಗೆಗಳಲ್ಲಿ ಅದನ್ನು ಬಳಸಿಕೊಳ್ಳುತ್ತಾರೆ. ವಿಜ್ಞಾನಕ್ಕೆ ಲಾಭದ ಉದ್ದೇಶವಿಲ್ಲ, ತಾಂತ್ರಿಕತೆಯಾದರೆ ಲಾಭವೇ ಮುಖ್ಯವಾದುದು. ಹೀಗಾಗಿ ಆರ್ಥಿಕ ಯೋಜನೆಗಳಲ್ಲಿ ವಿಜ್ಞಾನವೇನು ಪ್ರಸ್ತುತವಾಗುವುದಿಲ್ಲ. ತಾಂತ್ರಿಕತೆಯ ಆಕರ್ಷಣೆಯೇ ಹೆಚ್ಚಿನದು.

ವಿಜ್ಞಾನದ ಹೆಸರನ್ನು ಬಳಸಿಕೊಂಡು, ಇರುವ ಸವಲತ್ತುಗಳನ್ನು ಬಳಸಿಕೊಂಡು ಉದ್ಯಮವನ್ನು ಹೂಡುತ್ತಾರೆ. ನಾಡಿನ ಹಿತಕ್ಕೆಂದು ಬೊಬ್ಬೆಯಿಡುತ್ತಾರೆ. ಒಳಗಿನ

ಉದ್ದೇಶ ಮಾತ್ರ ಸ್ವಂತ ಲಾಭವೇ. ತಾಂತ್ರಿಕತೆಯು ಇದಕ್ಕೆ ನೆರವಾಗುತ್ತದೆ. ಉದ್ಯಮದ ನಿರ್ವಹಣೆಯಲ್ಲಿ ಈ ಬಗೆಯ ಇಮ್ಮುಖ ಇರುತ್ತದೆ. ಮೇಲೆ ಕಾಣಿಸುವುದು ಪರಾರ್ಥ, ಒಳಗಿರುವುದು ಸ್ವಾರ್ಥವೇ.

ವಿಜ್ಞಾನವು ತಾಂತ್ರಿಕತೆಯಲ್ಲಿ ಅನ್ವಯಗೊಂಡಾಗ, ಆರ್ಥಿಕ ನೀತಿಯ ಆಸರೆಯಿರುವುದು ಪ್ರಕೃತಿಯ ಶೋಷಣೆಯಲ್ಲಿ. ಪ್ರಕೃತಿಯಲ್ಲಿನ ಕೊಡುಗೆಗಳನ್ನು ಕೆಲವು ಸಾಹಸಿಗಳು ದೋಚಿಕೊಳ್ಳುತ್ತಿರುವುದನ್ನು ಯಾರರಿಯರು? ಪ್ರಕೃತಿಯಲ್ಲಿ ದೊರೆಯುವ ಸಾಮಗ್ರಿಗಳು ಎಲ್ಲ ಪ್ರಾಣಿಗಳಿಗೂ, ಎಲ್ಲ ಮನುಷ್ಯರಿಗೂ ಸಮನಾಗಿಯೇ ದೊರೆಯುವಂತಿರಬೇಕು. ಆದರೆ ಹೀಗಾಗುವುದಿಲ್ಲ. ಎಲ್ಲರ ಸಮಾನತೆಯು ಸಿದ್ಧಾಂತದಲ್ಲಿ ಮಾತ್ರ. ವ್ಯವಹಾರದಲ್ಲಿಯಾದರೋ ಉಳ್ಳವರು, ಇಲ್ಲದವರು ಎಂಬ ವಿಭಾಗವಿದ್ದೇ ಇದೆ.

ವಿಜ್ಞಾನದ ಅನ್ವಯವಾಗಬೇಕಾದುದು ಭೂಮಿಯ ಮೇಲೆ ಮನುಷ್ಯ ಇನ್ನಷ್ಟು ಚೆನ್ನಾಗಿ ಬಾಳಲು ನೆರವಾಗಲು. ಆದರೆ ಅದು ಆಗುತ್ತಿರುವುದು ಕೆಲವರ ಉದ್ಧಾರಕ್ಕೆಂದು ಮಾತ್ರ. ಉಳಿದವರ ಶೋಷಣೆಗೂ ಇದು ನೆರವಾಗುತ್ತಿದೆಯೆನ್ನಿ. ವಿಜ್ಞಾನ ಹಿಂದುಳಿದು, ತಾಂತ್ರಿಕತೆ ಮುನ್ನುಗ್ಗುವಾಗ ವಿಜ್ಞಾನದ ಮೂಲೋದ್ದೇಶವನ್ನೇ ಮರೆಯುತ್ತದೆ. ಭೌತಿಕ ಪ್ರಪಂಚದ ಇರವನ್ನು ಮಾತ್ರ ನಂಬಿ, ಏನನ್ನು ಮಾಡಿದರೆ ಎಷ್ಟು ಲಾಭವೊದಗಬಹುದು ಎಂಬ ಚಿಂತನೆಯು ಹರಡಿಕೊಳ್ಳುತ್ತದೆ.

ಈ ಆಧಾರದ ಮೇಲೆ ರೂಪಿತವಾದ ಆರ್ಥಿಕ ನೀತಿಯೇ ಎಲ್ಲ ದೇಶಗಳಲ್ಲೂ ಪ್ರಚಲಿತವಾಗಿರುವುದು. ಮಾನವಿಕತೆ, ಮೌಲ್ಯಚಿಂತನೆ ಇವುಗಳಿಗೆ ಇಲ್ಲಿ ಯಾವ ನೆಲೆಯೂ ಇರದು. ಬೆಲೆಯೂ ಇರದು. ಅಸಮಾನತೆಯೆಂಬುದೆ ಪ್ರಣಾಳಿಕೆಯೆಂದಾದಾಗ ಮೊದಲ ಪೆಟ್ಟು ಬೀಳುವುದು ಪ್ರಾಮಾಣಿಕತೆಗೆ. ಇದರೊಟ್ಟಿಗೆ ದಬ್ಬಾಳಿಕೆ, ಹಿಂಸೆ, ದರೋಡೆ, ವಂಚನೆಗಳಿಗೆ ಉತ್ತೇಜನ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇದ್ದೇ ಇರುತ್ತದೆ. ಲಾಭದ ಚೌಕಟ್ಟಿನಲ್ಲಿ ನೇರವಾದ ದಾರಿಯೆಂಬುದಿದೆಯೆ ಎಂಬ ಸಂಶಯ ಯಾರಿಗಾದರೂ ಒದಗೀತು.

ಅಷ್ಟು ಮಾತ್ರವಲ್ಲ, ಭ್ರಷ್ಟಾಚಾರಕ್ಕೂ ಒಂದು ವಿಶಿಷ್ಟ ಸ್ಥಾನವೊದಗಿಬಿಡುತ್ತದೆ. ವ್ಯವಸ್ಥೆಯಲ್ಲಿ ಅದಕ್ಕೊಂದು ಸ್ಥಿರವಾದ ಪಾತ್ರವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಹೀಗಾಗದೆ ಇರಬೇಕೆಂದರೆ, ಆರ್ಥಿಕ ವ್ಯವಸ್ಥೆಯ ನೆಲೆಯನ್ನೇ ನಾವು ಬದಲಿಸಿಕೊಳ್ಳಬೇಕು. ತಾಂತ್ರಿಕತೆಗೆ ಈಗಿರುವ ಪಟ್ಟವನ್ನು ಕಿತ್ತೊಗೆಯಬೇಕು. ಪ್ರಕೃತಿಯ ಅಥವಾ ಜನರ ಶೋಷಣೆ ನಿಂತಲ್ಲದೆ ಇದು ಸಾಧ್ಯವಿಲ್ಲ. ಆದರೆ ಇದು ನಿಂತೀತೆ?

114. ಪ್ರಭಾವಶಾಲಿ ಉದ್ಯಮ

ಹಣವಿದ್ದವರು ಭಾಗ್ಯವಂತರು; ತುಂಬ ಹಣವಿದ್ದವರು ಅತಿಭಾಗ್ಯವಂತರು. ಈಗಿನ ಪರೀಕ್ಷೆಯಲ್ಲಿ 'ಸೂಪರ್ ರಿಚ್' ಭಾಗ್ಯವಂತರಿಗಿರುವ ಸಾಮರ್ಥ್ಯದಿಂದಾಗಿ ಅವರಿಗೆ ಸಮಾಜದಲ್ಲಿ ವಿಶೇಷವಾದ ಸ್ಥಾನಮಾನ. ಭಾಗ್ಯವಂತರೆಂದರೆ ಪ್ರಭುಗಳೇ, ಪ್ರಭಾವಶಾಲಿಗಳೇ. ಜನಸಾಮಾನ್ಯರಲ್ಲಿ ಇವರಿಗೊಂದು ಆಕರ್ಷಣೆಯಿರುತ್ತದೆ.

ಬ್ರಿಟನ್ ದೇಶದಲ್ಲಿ ರಿಚರ್ಡ್ ಬ್ರಾನ್‌ಸನ್, ವಿಕರ್ಸ್, ಲಿವರ್ ಮುಂತಾದವರು ಅಮೇರಿಕ ದೇಶದಲ್ಲಿ ಕಾರ್ನೆಗಿ, ರಾಕ್‌ಫೆಲರ್ ಮುಂತಾದವರು, ಜರ್ಮನಿಯಲ್ಲಿ ಕ್ರುಪ್ ಮತ್ತು ತೈಸ್ಸೆನ್ ಮುಂತಾದವರು, ಫ್ರಾನ್ಸ್‌ನಲ್ಲಿ ಕ್ರೈದೆರ್ ಮತ್ತು ದಿ ವೆಂದೆಲ್ ಮುಂತಾದವರು, ಸ್ವಿಟ್ಸರ್‌ಲ್ಯಾಂಡ್‌ನಲ್ಲಿ ಇವರ್ ಕ್ರ್ಯುಗೆರ್ ಮುಂತಾದವರು ಇವರೆಲ್ಲ ದಿಟವಾಗಿ ದೊರೆಗಳೇ; ಸಿಂಹಾಸನವಿಲ್ಲದಿದ್ದರೂ ಅಧಿಕಾರವಿದ್ದಿತು; ಒಬ್ಬೊಬ್ಬರೂ ಒಂದೊಂದು ಉದ್ಯಮ ಸಾಮ್ರಾಜ್ಯವನ್ನೆ ಕಟ್ಟಿಕೊಂಡರು. ದೇಶವಿದೇಶಗಳಲ್ಲಿ ತಮ್ಮ ಪ್ರಭಾವಗಳನ್ನು ಬೀರಿ ಮೆರೆದರು.

ಉದ್ಯಮವೆಂದರೆ ತಯಾರಿಕೆಯೆಂಬರ್ಥವೇ ಮೊದಲಿಗಿದ್ದಿತು. ಸುಮಾರು ಎಂಬತ್ತು ವರ್ಷಗಳ ಹಿಂದೆ ಹೆನ್ರಿ ಫೋರ್ಡ್ ಇಂಥ ಅತಿಭಾಗ್ಯವಂತನಾದದ್ದು ತಯಾರಿಕೆಗೆ ಒದಗಿಸಿಕೊಟ್ಟ ಹೊಸದೊಂದು ಆಯಾಮದಿಂದ. ಅಂದಿನಿಂದ 'ಬೆಳೆದ' ದೇಶಗಳಲ್ಲೂ, 'ಬೆಳೆಯುತ್ತಿರುವ' ದೇಶಗಳಲ್ಲೂ ಉದ್ಯಮಕ್ಕೆ ಎಂದಿಲ್ಲದ ಉತ್ತೇಜನ ದೊರಕಿತು. ನಮ್ಮ ದೇಶ 'ಬೆಳೆಯುತ್ತಿರುವ' ದೇಶವಾಗಿದ್ದು ಇಲ್ಲಿ ಹಲವಾರು ಉದ್ಯಮಿಗಳು ಅತಿಭಾಗ್ಯವಂತರಾದರು. ಉದ್ಯಮದ ಮನೆತನಗಳೇ ಮೈದಳೆದವು.

ಈಗ ಹೆನ್ರಿ ಫೋರ್ಡನನ್ನು ನೆನಪಿಗೆ ತಂದುಕೊಳ್ಳುವವರೇ ಇಲ್ಲ. ಈ ಪಟ್ಟ ಈಗ ದೊರೆತಿರುವುದು ಬಿಲ್ ಗೇಟ್ಸ್‌ಗೆ. ಅವನೊಬ್ಬ ಮಲ್ಟಿ-ಬಿಲಿಯನೇರ್; ಜಗತ್ತಿನಲ್ಲೇ ಅತಿಭಾಗ್ಯವಂತನೆಂದು ಪ್ರಖ್ಯಾತನಾಗಿದ್ದಾನೆ. ಆದರೆ ಅವನ ಉದ್ಯಮವೇನು ತಯಾರಿಕೆಯಲ್ಲ, ಸುದ್ದಿ (ಇನ್‌ಫರ್ಮೇಶನ್). ಈ ಸುದ್ದಿಯ ಉದ್ಯಮ ಈಗ ಎಲ್ಲೆಲ್ಲೂ ಬೆಳೆಯುತ್ತಿದೆ, ಹರಡಿಕೊಳ್ಳುತ್ತಿದೆ; ಜಗತ್ತನ್ನೆಲ್ಲ ಒಂದಾಗಿಸುತ್ತಿದೆ. ಬಿಲ್ ಗೇಟ್ಸ್‌ನ ಆದಾಯವೂ ಹೆಚ್ಚುತ್ತಿದೆ. ಅದರ ಪರಿಮಾಣವನ್ನು ಎಣಿಸಿದರೆ ಗುಂಡಿಗೆಯೊಡೆಯುತ್ತದೆ.

ಆದರೆ ಬಿಲ್ ಗೇಟ್ಸ್ ಪ್ರಪಂಚದಲ್ಲಿ ಅನಭಿಷಿಕ್ತ ಚಕ್ರವರ್ತಿಯೆಂದಾಗಿರುವುದು ಅವನಲ್ಲಿರುವ ಹಣದಿಂದಲ್ಲ, ಅವನು ಅತಿಭಾಗ್ಯವಂತನೆಂಬ ಕಾರಣದಿಂದಲ್ಲ. ಅವನಲ್ಲಿರುವ ಹಣ ಮೂವತ್ತಾರು ಬಿಲಿಯನ್ ಡಾಲರ್‌ಗಳಷ್ಟೆಂದು ಅಂದಾಜು ಮಾಡಿದ್ದಾರೆ. ಅಮೇರಿಕದಲ್ಲಿ ಇಂದು ಅರವತ್ತು ಮಂದಿ ಬಿಲಿಯನರುಗಳಿದ್ದಾರಂತೆ; ಅವರ ಹಣವೆಲ್ಲವನ್ನೂ ಕೂಡಿಸಿದರೆ ಮುನ್ನೂರು ಬಿಲಿಯನ್ ಡಾಲರುಗಳಂತೆ!

ಅವರಿಗೆಲ್ಲ ಬಿಲ್ ಗೇಟ್ಸಿಗಿರುವ ಪ್ರಭಾವವಿಲ್ಲ. ಬಿಲ್ ಗೇಟ್ಸನ ವೈಶಿಷ್ಟ್ಯವಿರುವುದು ಅವನ ಉದ್ಯಮವು ಇಂದಿನ ಯುಗದಲ್ಲಿ ಪ್ರಮುಖವಾಗಿಬಿಟ್ಟಿರುವುದು; ಜನಪ್ರಿಯವಾಗಿರುವುದು.

ಮನುಷ್ಯನ ಇಂದಿನೆಲ್ಲ ವ್ಯವಹಾರಗಳಲ್ಲೂ ಸುದ್ದಿ ಸಂಪರ್ಕ ಪ್ರಸಾರಗಳ ಆದ್ಯತೆಯಿದೆ. ದೇಶ-ವಿದೇಶಗಳ ಆರ್ಥಿಕ ನೆಲೆಗಟ್ಟು ಇದನ್ನೆ ಅವಲಂಬಿಸಿದೆ. ಇದನ್ನು ಯಾರೂ ಎಂದೂ ಕೈಬಿಡುವ ಹಾಗಿಲ್ಲ. ಈ ಉದ್ಯಮದಲ್ಲಿ ತಾಂತ್ರಿಕತೆಯ ಮಟ್ಟ ಮೇಲ್ತೆರನಾದುದು. ಇದರಲ್ಲೂ ಹೊಸ ಹೊಸ ಆವಿಷ್ಕಾರಗಳು ಕಾಣಿಸಿಕೊಳ್ಳುತ್ತಲೇ ಇವೆ. ಹೀಗಾಗಿ ಈ ಉದ್ಯಮದ ಅಧಿಪತಿ ಬಿಲ್ ಗೇಟ್ಸ್ ವಿಶ್ವವಿಖ್ಯಾತನಾಗಿದ್ದಾನೆ.

ಅತಿಭಾಗ್ಯವಂತನಾಗುವುದು ಒಂದು ನಿಟ್ಟು; ಅಗತ್ಯವೆನಿಸಿಕೊಳ್ಳುವ ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಇನ್ನೊಂದು ನಿಟ್ಟು. ಒದೊಂದು ನಿಟ್ಟಿನಲ್ಲೂ ಪ್ರಖ್ಯಾತಿಯಿದೆ; ಆದರೆ ಎರಡನೆಯದರಲ್ಲಿರುವ ಪ್ರಭಾವ ಮೊದಲನೆಯದರಲ್ಲಿರದು.

115. ಸಂಬಳ ಏರಿತು!

ಮಧ್ಯಮವರ್ಗದ ಜನ ಸಂಬಳವನ್ನು ಪಡೆದುಕೊಂಡು ಜೀವಿಸುವವರು. ತಿಂಗಳು ಪೂರ್ತಿ ದುಡಿದು ನಿಗದಿಯಾಗಿ ಬರುವ ವರಮಾನ ಸಂಬಳ. ಸಂಬಳದ ಮೊತ್ತವನ್ನು ಪರಿಗಣಿಸಿ ಬದುಕಿನ ಅಗತ್ಯಗಳನ್ನು ಪೂರೈಸಿಕೊಳ್ಳುವ ಹವಣಿಕೆಯಿರುವುದು ವಾಡಿಕೆ. ಹಾಸಿಗೆಯಿದ್ದಷ್ಟು ಕಾಲು ಚಾಚುತ್ತಾರೆ.

ಈಚೆಗೆ ಮೇಲುಮಟ್ಟದ ಮತ್ತು ಮಧ್ಯಮವರ್ಗದ ಕೆಲಸಗಾರರಿಗೆ ಸಂಬಳ ಅವರು ನಿರೀಕ್ಷಿಸಿದ್ದಕ್ಕಿಂತ ಎಷ್ಟೋ ಪಟ್ಟು ಹೆಚ್ಚಾಗಿಬಿಟ್ಟಿತು. ಅದೂ ಇದ್ದಕ್ಕಿದ್ದಂತೆ, ಒಂದೇ ಮೊತ್ತದಲ್ಲಿ! ಹೆಚ್ಚಿನ ಸಂಬಳವೆಂದರೆ ಹೆಚ್ಚಿನ ಸೌಲಭ್ಯ, ಸೌಕರ್ಯಗಳನ್ನು ಪಡೆದುಕೊಳ್ಳುವ ಸಾಧ್ಯತೆ; ಬದುಕಿನ ಹಲವು ಬಗೆಗಳಲ್ಲಿ ಅನುಕೂಲಗಳು ಕಣ್ಣ ಮುಂದೆ ಸುಳಿದವು. ಅನಗತ್ಯವೆನಿಸಿದ್ದವೆಲ್ಲ ಈಗ ಅಗತ್ಯವೆನಿಸಿದುವು. ಜೀವನಮಟ್ಟ ಏರುವ ಸಂಭವವೊದಗಿತು.

ಕೆಲಸಗಾರರ ಬದುಕಿನ ರೀತಿ-ನೀತಿಗಳೂ, ಗೊತ್ತುಗುರಿಗಳೂ ಇದ್ದಕ್ಕಿದ್ದಂತೆ ಮಾರ್ಪಟ್ಟವು. ಹೊಸ ಹೊಸ ಪರಿಕರಗಳನ್ನು ಸಂಗ್ರಹಿಸಿಕೊಳ್ಳುವುದೂ, ಹೊಸ ಹೊಸ ಮೋಜುಗಳನ್ನು ಕಲ್ಪಿಸಿಕೊಳ್ಳುವುದೂ, ಹೊಸ ಹೊಸ ಗತ್ತು ಧೋರಣೆಗಳನ್ನಳವಡಿಸಿಕೊಳ್ಳುವುದೂ ಕಾಣತೊಡಗಿದುವು. ಇದರಲ್ಲೂ ಅವ್ಯವಸ್ಥೆ, ಹಗರಣ, ಗೊಂದಲಗಳು ಕೂಡ ಸೇರಿಕೊಂಡವು. ಸಾಮಾಜಿಕವಾಗಿ ಇದೊಂದು ಅನಪೇಕ್ಷಿತ ವ್ಯಾಪಾರವೇ ಆಗಿಬಿಟ್ಟಿತು. ಜನ ಅದಕ್ಕೆ ಸಿದ್ಧರಾಗಿರಲಿಲ್ಲವೆಂದು ತೋರುತ್ತದೆ.

ಎಂದಿಗಿಂತ ಅತಿ ಮಿಗಿಲಾಗಿ ಮತ್ತು ಅಂದುಕೊಂಡದ್ದಕ್ಕಿಂತ ಎಷ್ಟೋ ಪಟ್ಟು ಹೆಚ್ಚಾಗಿ ಹಣ ಬಂದಿತೆಂದಾಗ, ಆ ಹಣವನ್ನು ವಿನಿಯೋಗಿಸಿಕೊಳ್ಳುವುದು ಹೇಗೆ? ಹಣದ ವಿಚಾರದಲ್ಲಿ ಜನರಿಗೊಂದು ಆತುರ ಇರುತ್ತದೆ. ಮುಂದೆ ಉಪಯೋಗಕ್ಕೆ ಬಂದೀತು, ಕಷ್ಟಕಾಲದಲ್ಲಿ ನೆರವಿಗೆ ಬಂದೀತು, ಮುಪ್ಪಿನಲ್ಲಿ ಕೈಹಿಡಿದು ನಡೆಸೀತು ಎಂದು ಹಣವನ್ನು ಜೋಪಾನವಾಗಿ (ಎಂದರೆ ತಟ್ಟನೆ ಕೈಗೆಟುಕದಂತೆ) ದೂರ ಇರಿಸಿಕೊಳ್ಳುವ ಜಾಣರ ಸಂಖ್ಯೆ ಸಣ್ಣದು. ಇಂದಿನ ಅಗತ್ಯವನ್ನು ತೀರಿಸಿಕೊಳ್ಳುವುದು, ಇದ್ದ ಚಪಲವನ್ನು ಈಗಲೇ ಪೂರೈಸಿಕೊಳ್ಳುವುದು, ಪಕ್ಕದ ಮನೆಯವರ ಅಸೂಯೆಯನ್ನು ಕೆರಳಿಸುವಂತೆ ಉಪಕರಣಗಳನ್ನು ಸಂಗ್ರಹಿಸಿಕೊಳ್ಳುವುದು, ತತ್ಕಾಲದ ಸುಖ ಸಂಭ್ರಮಗಳ ಮೋಜಿಗೆ ಎಡೆಮಾಡಿಕೊಡುವುದು ಇಂಥವೇ ಹೆಚ್ಚಾಗಿ ಜನರಲ್ಲಿ ಹೆಚ್ಚಿನ ಹಣದ ವಿನಿಯೋಗ.

ಸಂಬಳವನ್ನು ಮಿತಿ ಮೀರಿ ಹೆಚ್ಚಿಸಿದ್ದರಿಂದ ಕುಟುಂಬಕ್ಕೆ ದೀರ್ಘಕಾಲಾವಧಿಯ ಪ್ರಯೋಜನ ಹೆಚ್ಚುವುದು ಕಡಮೆ; ಸದ್ಯದ ಸಂಭ್ರಮಕ್ಕೆ ಒತ್ತಾಸೆಯಷ್ಟೆ. ಅಚ್ಚುಕಟ್ಟು ಒದಗಿ ಬರುತ್ತದೆ. ಅನಿರೀಕ್ಷಿತವಾಗಿ, ದಿಢೀರನೆ, ಇಳಿದು ಬಂದದ್ದು ಅಪೇಕ್ಷಿತವಾಗಿರಬಹುದು; ಬಂದರೆ ಅದನ್ನು ಅರಗಿಸಿಕೊಳ್ಳುವುದು ದುಸ್ತರವಾಗಬಹುದು. ಆಗ ತೊಂದರೆಯೇ ಹೆಚ್ಚು, ಅನುಕೂಲ ಕಡಮೆ.

ನೌಕರರಿಗೆ ಹೀಗೆ ಸಂಬಳ ಹೆಚ್ಚಿದಾಗ, ಅದು ಉದ್ಯಮಿಗಳಿಗೆ ಮತ್ತು ಯಜಮಾನರಿಗೆ ಹಿಡಿಸುವ ಸಂಭವವಿದ್ದೀತೆ? ಸಂಬಳ ಹೆಚ್ಚಿದ ಮೇಲೆ ದುಡಿಮೆಯೂ ಹೆಚ್ಚಬೇಕು ಎಂದು ಅವರು ಕಣ್ಣು ಕೆಂಪಗೆ ಮಾಡಿಕೊಳ್ಳುತ್ತಾರೆ, ನಿರ್ದಾಕ್ಷಿಣ್ಯವಾಗಿ ದುಡಿಸಿಕೊಳ್ಳುವ ಮನಸ್ಸು ಮಾಡುತ್ತಾರೆ. ಸಣ್ಣ ಸಂಬಳದವರಿಗೆಂದು ಇದ್ದ ಸೌಲಭ್ಯ, ಅನುಕೂಲಗಳೆಲ್ಲ ಒಮ್ಮೆಲೆ ಮರೆಯಾಗಿಬಿಡುತ್ತವೆ. 'ನಿಮ್ಮ ಪಾಡು ನೀವು ನೋಡಿಕೊಳ್ಳಬೇಕು' ಎಂದು ಉದ್ಯೋಗಾಧಿಪತಿಗಳು ಕೈತೊಳೆದುಕೊಂಡು ಬಿಡುತ್ತಾರೆ.

ಹಾಗೂ ಕೆಟ್ಟ, ಹೀಗೂ ಕೆಟ್ಟ ಎಂಬ ಮಾತಿಗೊಂದು ಪ್ರಸ್ತುತತೆ ಒದಗಿಬರುವ ಸಾಧ್ಯತೆಯಿರದೆ?

116. ಅನ್ಯಾಯಕ್ಕೆ ಅಸಹಕಾರ

ಯಾವುದೇ ಕೆಲಸಕ್ಕೆ, ಒಳ್ಳೆಯದಾಗಲಿ ಕೆಟ್ಟದಾಗಲಿ, ನಾಲ್ವರು ಪಾಲುದಾರರಂತೆ. ಕೆಲಸ ಮಾಡುವವನು (ಕರ್ತಾ), ಕೆಲಸವನ್ನು ಮಾಡಿಸುವವನು (ಕಾರಯಿತ), ಕೆಲಸಕ್ಕೆ ಒತ್ತಾಸೆ ನೀಡುವವನು (ಪ್ರೇರಕ) ಮತ್ತು ಮಾಡಿದ ಕೆಲಸವನ್ನು ಮನಸಾರೆ ಒಪ್ಪಿಕೊಳ್ಳುವವನು (ಅನುಮೋದಕ).

ಯಾವುದೇ ಕೆಲಸವೆಂದರೂ ಹೆಚ್ಚಿನ ಒತ್ತು ಕೆಟ್ಟ ಕೆಲಸಗಳಿಗೆ. ಮೋಸ, ಲಂಚ, ಭ್ರಷ್ಟಾಚಾರ ಮುಂತಾದವುಗಳಲ್ಲಿ ಹೊಣೆಗಾರಿಕೆಯನ್ನೆಲ್ಲ ಮಾಡುವವನ ಮೇಲೇ ಹಾಕಬಾರದು; ಉಳಿದ ಮೂವರದ್ದೂ ಪಾಲು ಅದರಲ್ಲಿ ಇರುತ್ತದೆ.

ಕೆಟ್ಟ ಕೆಲಸವೇನೋ ವ್ಯಕ್ತಿಯದೇ. ಆದರೆ ವ್ಯಕ್ತಿಯ ಬೆಳವಣಿಗೆ, ಪರಿಸರ, ಒತ್ತಡಗಳು, ಅಗತ್ಯಗಳು, ಸಂದರ್ಭ, ಸಾಮಾಜಿಕ ಮೌಲ್ಯಗಳು ಇವೆಲ್ಲ ಸೇರಿದಲ್ಲದೆ ಕೆಲಸದ ಚೌಕಟ್ಟನ್ನು ನಿರ್ಧರಿಸಲಾಗದು. ಈ ಚೌಕಟ್ಟಿನಲ್ಲಿ ಮೇಲೆ ಹೇಳಿದವರೆಲ್ಲ ಸಮಭಾಗಿಗಳೇ.

ಕಳ್ಳತನಕ್ಕೆ ಬಹುವೇಳೆ ಬಡತನ ಕಾರಣ. ಬಡವನಾದದ್ದು ತನ್ನ ತಪ್ಪಿನಿಂದಲೋ, ಅಲಸಿಕೆಯಿಂದಲೋ, ಆಕಸ್ಮಿಕವಾಗಿಯೋ ಎಂದು ನಿರ್ಧರಿಸಬೇಕಲ್ಲವೆ? ಇದರಲ್ಲಿ ಕಾರಯಿತೃವಾದದ್ದು ಸಂದರ್ಭ ಎನ್ನೋಣ. ಆದರೆ ಪ್ರೇರಣೆ ಕರ್ತೃವಿನದೇ ಪ್ರಮಾದ. ಇನ್ನು ಅದಕ್ಕೆ ಸಮ್ಮತಿ ನೀಡಿ ಉತ್ತೇಜಿಸುವ ಮಂದಿ ಇದ್ದೇ ಇರುತ್ತದೆ.

ಭ್ರಷ್ಟಾಚಾರದಲ್ಲಿ ಈ ಸಮಭಾಗಿತ್ವ ಎದ್ದು ಕಾಣುತ್ತದೆ. ಹಣಕ್ಕೆ ಬಾಯಿ ಬಿಟ್ಟು ನ್ಯಾಯವಲ್ಲದುದನ್ನು ಮಾಡುವವನು ನೌಕರನಾದರೆ, ಅದನ್ನು ಮಾಡಿಸುವವನು ಅವನ ಅಧಿಕಾರಿ. ಹಣದ ಬಯಕೆ ಇನ್ನಷ್ಟು ಕೊಡುವವನಿರುವಾಗಲೇ. ಭ್ರಷ್ಟಾಚಾರದಲ್ಲಿ ನೌಕರನದೊಂದು ಪಾಲಾದರೆ, ಅಧಿಕಾರಿಯದಿನ್ನೊಂದು; ಭ್ರಷ್ಟಾಚಾರಕ್ಕೆ ದಾರಿಮಾಡಿ ಕೊಡುವ ಸಾರ್ವಜನಿಕನದ್ದೂ ಒಂದು ಪಾಲು.

ಇನ್ನು ಭ್ರಷ್ಟಾಚಾರ ನಡೆಯುತ್ತಿರುವುದನ್ನು ಗಮನಿಸಿದಾಗಲೂ, ಅದರ ಬಗ್ಗೆ ಕಸಿವಿಸಿಗೊಳ್ಳದೆ, 'ಎಲ್ಲೆಲ್ಲೂ ನಡೆಯುತ್ತಿರುವುದೇ ಇದು; ಎಂದಿನಿಂದಲೂ ಇದ್ದದ್ದೇ, ಹಣವಿಲ್ಲದೆ ಯಾವ ಕೆಲಸವಾಗಲಿ ನಡೆಯುವುದುಂಟೆ?' ಎಂದು ಸಮಾಧಾನ ಹೇಳುವ ಮಹನೀಯರೂ ಸಾಕಷ್ಟು ಮಂದಿ ಇದ್ದಾರಲ್ಲವೆ? ಇವರೆಲ್ಲ ಅನುಮೋದಕರು. ನೇರವಾಗಿ ತಾವು ಭ್ರಷ್ಟಾಚಾರಕ್ಕೆ ಇಳಿಯದಿದ್ದರೂ, ಭ್ರಷ್ಟಾಚಾರಕ್ಕೂ ತಮ್ಮ ಸಮ್ಮತಿಯನ್ನು ನೀಡಿ ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುತ್ತಾರೆ. ಇವರ ಅಪರಾಧವೇನು ಕಡಮೆಯದಲ್ಲ.

ಹೀಗೆ ಸಾಮಾಜಿಕವಾದ ಅನ್ಯಾಯ, ಶೋಷಣೆ, ದುರಾಚಾರ ಇವುಗಳಲ್ಲೆಲ್ಲ ಹೊಣೆಗಾರಿಕೆ ಎಲ್ಲರದ್ದೂ ಇರುತ್ತದೆ. ಅನ್ಯಾಯಕ್ಕಾಗಲಿ, ಶೋಷಣೆಗಾಗಲಿ, ದುರಾಚಾರಕ್ಕಾಗಲಿ ಪ್ರತಿಭಟನೆ ತೋರಿಸದಿದ್ದರೆ ಸಮ್ಮತಿಸಿದಂತೆಯೇ. ಸ್ವಾರ್ಥಕ್ಕೆಂದು ಯಾರಾಗಲಿ ಅಷ್ಟಿಷ್ಟು ಕಾನೂನನ್ನು ಕಡೆಗಾಣಿಸಿದಾಗಲೂ, ಅದನ್ನು ನೋಡುತ್ತ ಸುಮ್ಮನಿದ್ದರೆ, ಅವರದ್ದೂ ಸ್ವಾರ್ಥವೇ ಇದೆಯೆಂದಲ್ಲವೆ ಅರ್ಥ?

ಅನ್ಯಾಯದೊಂದಿಗೆ ಅಸಹಕಾರ ಎಂಬೊಂದು ತತ್ತ್ವ ಗಾಂಧೀಜಿಯವರು ಸೂಚಿಸಿದ್ದು ಕೇವಲ ರಾಜಕಾರಣರಂಗಕ್ಕೆ ಮಾತ್ರ ಸೀಮಿತವಾದುದಲ್ಲ. ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಇದರ ಅನ್ವಯವಿದೆ. ಕರ್ತ, ಕಾರಯಿತ, ಪ್ರೇರಕ, ಅನುಮೋದಕ

ಈ ನಾಲ್ವರೂ ಒಂದೊಂದು ಕೆಲಸದಲ್ಲೂ ಸಮಭಾಗಿಗಳು ಎಂಬ ಹಳೆಯ ನ್ಯಾಯವನ್ನನುಸರಿಸಿಯೇ ಗಾಂಧೀಜಿಯವರು ತತ್ತ್ವ ಮಾಡಿಕೊಂಡು ಬಂದದ್ದು.

ಎಂದಿಗಿಂತ ಇಂದು ಇದರ ಪ್ರಸಕ್ತಿ ಹೆಚ್ಚಿದೆ.

117. ಸಾರ್ವಜನಿಕ ಸೊತ್ತು

'ಸಾರ್ವಜನಿಕ ಹಣ ದೇವರ ಪ್ರಸಾದವಿದ್ದ ಹಾಗೆ; ಅದು ಯಾರಿಗೆ ಬೇಡ? ಎಲ್ಲರೂ ಅದಕ್ಕೆ ಬಾಯಿ ಬಿಡುತ್ತಾರೆ'– ಹೀಗೊಂದು ಇಟಲಿ ದೇಶದಲ್ಲಿ ಮಾತಿದೆ.

ಹಣದಲ್ಲಿ ಸ್ವಂತದ್ದು, ಸರಕಾರದ್ದು ಎಂದು ಎರಡು ತೆರ. ನಾವು ದುಡಿದೋ ದುಡಿಯದೆಯೋ ಗಳಿಸಿಕೊಂಡು ನಮ್ಮ ಬೊಕ್ಕಸದಲ್ಲಿ ತುಂಬಿಕೊಂಡದ್ದು ಸ್ವಂತ ಹಣ, ನಮ್ಮದೇ. ಸರಕಾರಕ್ಕೆ ತೆರಿಗೆಯ ರೂಪದಲ್ಲೊ ಮತ್ತೊಂದು ರೂಪದಲ್ಲೋ ನಾವೇ ತೆತ್ತದ್ದು, ಹಲವು ಮೂಲಗಳಿಂದ ಸರಕಾರದ ಬೊಕ್ಕಸವನ್ನು ಸೇರಿದ್ದು ಸಾರ್ವಜನಿಕ ಹಣ.

ಸ್ವಂತದ್ದು ನಮ್ಮದು, ಸರಕಾರದ್ದೆಂದರೆ ಎಲ್ಲರದ್ದೂ. ನಮ್ಮದಂತೂ ನಮ್ಮದೇ ಆಯಿತಲ್ಲ. ಎಲ್ಲರದ್ದೂ ಆದುದರ ಮೇಲೆ ನಮಗೆ ಹಕ್ಕಿರದೆ? ಸರಕಾರದ ಹಣವನ್ನು ಸ್ವಂತಕ್ಕೆ ಮಾರ್ಪಡಿಸಿಕೊಳ್ಳುವ ಬಯಕೆಯೇ ಭ್ರಷ್ಟಾಚಾರದ ಮೂಲ.

ಸರಕಾರವೆಂದರೆ ನಾವೇ ತಾನೆ? ಸರಕಾರದ ಹಣ ನಾಲ್ಕೂ ಜನರದ್ದು, ಹಾಗೆಂದೇ ಅದು ಸಾರ್ವಜನಿಕವೆಂದಾಯಿತು. ಸಾರ್ವಜನಿಕರಲ್ಲಿ ನಾವು ಸೇರಿಲ್ಲವೆ? ಸಾರ್ವಜನಿಕ ಲಾಭದಲ್ಲಿ ನಮಗೆ ಪಾಲು ಬೇಡವೆ? ತಾತ್ತ್ವಿಕವಾಗಿ ನಮ್ಮದೇ ಆಗಿರುವುದನ್ನು ವಸ್ತುತಃ ನಮ್ಮದಾಗಿಯೇ ಮಾಡಿಕೊಂಡರೆ ತಪ್ಪೇನು? ಇದು ತರ್ಕ.

ಸಾರ್ವಜನಿಕ ಹಣಕ್ಕೆ ಎಲ್ಲರೂ ವಾರಸುದಾರರೆಂಬುದು ದಿಟ. ಅದರ ಲಾಭ ಎಲ್ಲರಿಗೂ ಸಮನಾಗಿಯೇ ಆದರೆ ಸರಿಯೆ. ಆದರೆ ಎಲ್ಲರ ಹಣವನ್ನು ಒಬ್ಬಿಬ್ಬರು ದೋಚಿಕೊಳ್ಳುವುದಾದರೆ ಅದು ಸರಿಯೆ?

ಇದಕ್ಕೊಂದು ಕತೆ—ಇಬ್ಬರು ಕೂಡಿ ಪ್ರಯಾಣ ಮಾಡುವಾಗ, ಇಬ್ಬರ ಹಣವನ್ನೂ ಕೂಡಿಸಿ ಯಾವುದೋ ಊರಿನ ದಣಿಯ ಬಳಿ ಇರಿಸಿ ಹೋದರಂತೆ. ಅವರಲ್ಲಿ ಒಬ್ಬ ಮೋಸಗಾರ. ತನ್ನ ಸ್ನೇಹಿತನಿಗೆ ತಿಳಿಯದಂತೆ ತಂದು ಇರಿಸಿದ್ದ ಹಣವನ್ನು ಕೇಳಿದ. ಅಮಾಯಕನಾದ ದಣಿ ಹೇಗೂ ಅವರದ್ದೇ ಹಣವೆಂದು ಕೊಟ್ಟುಬಿಟ್ಟ. ಇಬ್ಬರ ಹಣವನ್ನೂ ಅವನೊಬ್ಬನೇ ಹಾರಿಸಿಕೊಂಡು ಎಲ್ಲಿಗೋ

ಹೋಗಿಬಿಟ್ಟ. ಅನಂತರ ಇನ್ನೊಬ್ಬರು ಬಂದು ಹಣವನ್ನು ಕೇಳಿದಾಗ, ಇಬ್ಬರ ಹಣವನ್ನೂ ಒಬ್ಬನೇ ಕೊಂಡುಹೋದದ್ದು ತಿಳಿಯಿತು. ಈತ ತನ್ನ ಹಣ ತನಗೆ ಬೇಕೆಂದು ಹಟ ಮಾಡಿದಾಗ ದಣಿ ಮಾಡುವುದೇನಿದೆ?

ದಣಿ ಉಪಾಯಗಾರ. 'ನೀವಿಬ್ಬರೂ ಕೂಡಿಯಲ್ಲವೆ ನನ್ನ ಬಳಿ ಬಂದು ನಿಮ್ಮ ಹಣವನ್ನಿರಿಸಿದ್ದು? ಮತ್ತೆ ನೀವಿಬ್ಬರೂ ಕೂಡಿಕೊಂಡು ಬನ್ನಿ, ನಿಮ್ಮ ಹಣವನ್ನು ಹಿಂದಿರುಗಿಸುತ್ತೇನೆ. ನೀನೊಬ್ಬನೇ ಬಂದರೆ ಕೊಡಲಾಗುವುದಿಲ್ಲ' ಎಂದು ಹೇಳಿಬಿಟ್ಟ. ಮೋಸಗಾರ ಮಿತ್ರನು ಈಗ ಇವನೊಂದಿಗೆ ಬರುವುದು ಹೇಗೆ? ಪ್ರಾಮಾಣಿಕ ಮಿತ್ರ ಸಪ್ಪೆ ಮೋರೆಯಿಂದ ಹೋಗಬೇಕಾಯಿತು.

ಸಾರ್ವಜನಿಕ ಹಣದ ಮೇಲೆ ಕಣ್ಣಿರಿಸಿರುವ ಮೋಸಗಾರರು ಹೇಗೊ ಅದನ್ನು ಲಪಟಾಯಿಸುತ್ತಾರೆ. ಪ್ರಾಮಾಣಿಕ ಸಾರ್ವಜನಿಕರ ಪಾಲೂ ಅವರಿಗೇ ಸೇರಿಬಿಡುತ್ತದೆಯಲ್ಲವೆ?

ಸಮಾಜದಲ್ಲಿ ವಂಚಕರಿರುವವರೆಗೂ ಈ ಬಗೆಯ ಶೋಷಣೆ ತಪ್ಪಿದ್ದಲ್ಲ. ಪ್ರಾಮಾಣಿಕತನಕ್ಕೆ ಆಕರ್ಷಣೆ ತಪ್ಪಿರುವುದು ಹೀಗೆಯೇ.

118. ಕನಸಿನ ಹೊನ್ನು

ಕುಮಾರವ್ಯಾಸ ಕವಿಗೆ 'ಕನಸಿನ ಪೊನ್ನು ಕಾಣದೆ ದುಃಖ ಪಡುವವರನ್ನು ಕಂಡು ಅಚ್ಚರಿ.

ಕನಸು ಕಾಣುವಾಗ ಬಯಕೆಗಳೆಲ್ಲ ತೀರಿಕೊಳ್ಳುತ್ತವೆ. ಮನುಷ್ಯನಿಗೆ ಆಸೆಗಳಿರುವುದಿಲ್ಲವೆ? ಆಸೆಗಳೆಲ್ಲ ಪೂರೈಸಬೇಕೆಂದರೆ ಹೊರಗಣ ಸಂದರ್ಭ ನೆರವಾಗಬೇಕು; ಎಚ್ಚರದ ಪ್ರಪಂಚದಲ್ಲಿ ಸಾಧ್ಯವಾದೀತೋ ಇಲ್ಲವೋ! ಹತ್ತಾರು ಮಂದಿಯ ನಡುವೆ, ನೂರಾರು ಒತ್ತಡಗಳ ನಡುವೆ, ವಿಚಿತ್ರ ವ್ಯವಹಾರದ ಮಧ್ಯೆ ನಮ್ಮ ಬಯಕೆಗಳನ್ನು ತೀರಿಸಿಕೊಳ್ಳುವುದು ಕಷ್ಟ. ಎಚ್ಚರವಾಗಿರುವಾಗ ಅವನ್ನೆಲ್ಲ ತಡೆಹಿಡಿದಿಡಬೇಕು; ಅವು ಬಯಲಾಗದಂತೆ ನೋಡಿಕೊಳ್ಳಬೇಕು.

ಕನಸಿನಲ್ಲಿ ಯಾವ, ಯಾರ ನಿರ್ಬಂಧ? ಮನಸ್ಸಿನೊಳಗೇ ನಡೆಯುವ ವ್ಯಾಪಾರವಲ್ಲವೆ? ಇಂದ್ರಿಯಗಳ ಗೊಡವೆಯಿರದು, ಹೊರಗಣ ಮಂದಿಯ ಮುಲಾಜೇನು? ಬಯಕೆಗಳು ಸ್ವೇಚ್ಛೆಯಾಗಿ ತೋರಿಕೊಳ್ಳಬಹುದು, ತೋರಿಕೊಂಡೊಡನೆ ತೀರಿಕೊಳ್ಳುವುದೂ ಆಗಿ ಹೋಗುತ್ತದೆ. ಕನಸಿನ ಪ್ರಯೋಜನವೇ ಇದು, ಕನಸಿನ ಸ್ವಾರಸ್ಯವೂ ಅದೇ.

ಆದರೆ ಕನಸಿನಲ್ಲಿ ಕಂಡುದನ್ನು ಎಚ್ಚರದಲ್ಲೂ ಕಾಣಬೇಕೆಂದು ಹೊರಟರೆ ನಿರಾಸೆ ಕಟ್ಟಿಟ್ಟದ್ದೇ. ಕನಸಿನ ಸತ್ಯ ಕನಸಿಗೆ, ಎಚ್ಚರದ ಸತ್ಯ ಎಚ್ಚರದಲ್ಲಿ. ಎರಡೂ ಬೇರೆ ಬೇರೆ ಲೋಕಗಳು, ಬೇರೆ ಬೇರೆ ಅನುಭವಗಳು. ಕನಸಿನಲ್ಲಿ ಕಂಡುಕೊಂಡ ಹೊನ್ನು ಮನಸ್ಸಿನದು; ಅದೇನು ದ್ರವ್ಯವಲ್ಲ, ಅದನ್ನು ಹಿಡಿಯಲು ಬರುವುದಿಲ್ಲ; ಅದರಿಂದ ಪದಾರ್ಥಗಳನ್ನು ಕೊಳ್ಳಲಾಗುವುದಿಲ್ಲ, ಅದನ್ನು ಬ್ಯಾಂಕಿನಲ್ಲಿಡುವಂತಿಲ್ಲ. ಎಚ್ಚೆತ್ತ ಮೇಲೆ ಉಳಿಯುವುದು ಹೊನ್ನಲ್ಲ, ಹೊನ್ನಿನ ನೆನಪು ಅಷ್ಟೆ! ಅದಕ್ಕಾಗಿ ಮರುಗಿದರೆ ಹೇಗೆ?

ನಿದ್ರೆಯಲ್ಲೇ ಕನಸು ಎನ್ನಲಾಗದು. ಕೆಲವರು ಎಚ್ಚರದಲ್ಲೂ ಕನಸನ್ನು ಕಾಣುತ್ತಾರೆ. ಹೊನ್ನಿನ ಬಯಕೆ ಬಲವಾಗಿರುವಾಗ ಮನಸ್ಸಿನ ಮಂಡಿಗೆಗಳೆಲ್ಲ ಹೊನ್ನಿನ ತುಣುಕುಗಳೇ. ಕಣ್ಣ ಮುಂದೆ ಹಾದು ಹೋಗುವುವೆಲ್ಲ ಅವೇ. ಅವನ್ನು ದಕ್ಕಿಸಿಕೊಳ್ಳಲು ಅಷ್ಟಿಷ್ಟು ಪ್ರಯತ್ನವನ್ನೂ ಮಾಡುವರೆನ್ನಿ. ಎಚ್ಚರದ ಕನಸೇನು ಕನಸಲ್ಲವೆ? ಗಾಳಿಗೋಪುರಗಳಿಗೆ ತಳಪಾಯವುಂಟೆ? ಅಂದುಕೊಂಡಿದ್ದೆಲ್ಲ ಆಗುವುದು ಹೇಗೆ? ಮನಸ್ಸಿನ ಮಂಡಿಗೆಗಳು ನಾಲಗೆಗೆ ಸಿಗಲಿಲ್ಲವೆಂದು ದುಗುಡಪಟ್ಟರೆ ಸರಿಯೆ?

ಎಲ್ಲರಿಗೂ ಹೊನ್ನಿನ ಕನಸು ಇದ್ದೇ ಇರುತ್ತದೆ. ಎಚ್ಚರದ ಕನಸೂ ಬಯಕೆಗಳ ಬಲೆಯೇ. ಎಚ್ಚರದಲ್ಲೂ ಅದೇ ಬಯಕೆಗಳಿರಬಹುದು. ಆದರೆ ಕನಸಲ್ಲಿ ಕೈಗೂಡಿದಂತೆ ಅವು ಎಚ್ಚರದಲ್ಲಿ ಕೈಗೂಡುವುದುಂಟೆ? ಎಚ್ಚರಕ್ಕೂ ಕನಸಿಗೂ ಅಂತರವನ್ನು ಕಂಡುಕೊಳ್ಳದಿದ್ದರೆ ದುಃಖ ತಪ್ಪಿದ್ದಲ್ಲ. ಕನಸಿನಲ್ಲಿ ಬಿತ್ತಿದ ಬೆಳೆಯನ್ನು ಎಚ್ಚರದಲ್ಲಿ ಸಂಗ್ರಹಿಸುವುದಾದೀತೆ?

ಬಹುಜನರು ಈ ಅಂತರವನ್ನರಿಯದೆ ದುಃಖಪಡುತ್ತಾರೆ. ಬಯಸಿದ್ದೆಲ್ಲ ಕೈಗೂಡಬೇಕೆಂದು ಹಟ ಹಿಡಿದರೆ ಆದೀತೆ? ತನ್ನ ಇತಿ-ಮಿತಿ, ಮೇರೆ-ಕೊರೆಗಳೆಲ್ಲವನ್ನೂ ಅರಿತುಕೊಳ್ಳಬೇಡವೆ? ಕನಸಿನಲ್ಲಿ ಬಯಕೆಗಳಷ್ಟೇ ಮುಖ್ಯ. ಅದರಷ್ಟೇ ದ್ರವ್ಯವೂ ಕೂಡ. ಎಚ್ಚರದಲ್ಲಿ ಬಯಕೆಗಳು ಮುಖ್ಯವಲ್ಲ, ಅವನ್ನು ತೀರಿಸಿಕೊಳ್ಳುವ ಬಗೆ ಹೇಗೆ ಎಂಬುದು ಮುಖ್ಯ. ಎಚ್ಚರದಲ್ಲೇ ಬಯಕೆಗಳಿಗೂ, ಅವನ್ನು ಕೈಗೂಡಿಸಿಕೊಳ್ಳುವ ಬಗೆಗಳಿಗೂ ಅಂತರವನ್ನು ಅರಿತುಕೊಳ್ಳಬೇಕಲ್ಲವೆ? ಇದನ್ನರಿತುಕೊಳ್ಳದೆ ದುಃಖಪಡುವವರನ್ನು ಕವಿ ಇಲ್ಲಿ ಪ್ರಸ್ತಾಪಿಸಿದ್ದಾನೆ.

119. ದೇವರು ಕೊಡುವ ವರ

ನೈಷಧೀಯ ಚರಿತೆಯಲ್ಲೊಂದು ಮಾತು—'ದೇವಾ ಹಿ ನಾನ್ಯದ್ ವಿತರಂತಿ ಕಿಂತು ಪ್ರಸಹ್ಯ ತೇ ಸಾಧುಧಿಯಂ ದದಂತೇ'

ದೇವತೆಗಳು ಮನುಷ್ಯರಿಗೆ ವರವಾಗಿ ಬೇರೆ ಏನನ್ನೂ ಕೊಡುವುದಿಲ್ಲ; ಒಳ್ಳೆಯ ಬುದ್ಧಿಯನ್ನು ಕರುಣಿಸುತ್ತಾರೆ ಅಷ್ಟೆ, ಎಂದು ಈ ಮಾತಿನ ಅರ್ಥ.

ಮನುಷ್ಯರು ದೇವತೆಗಳಿಗೆ ಪೂಜೆ ಸಲ್ಲಿಸಿ ಹರಕೆ ಹೊತ್ತು ತಮಗೆ ಬೇಕೆನಿಸಿದ ಅದನ್ನೋ ಇದನ್ನೋ ದಯಪಾಲಿಸಿರೆಂದು ಬೇಡಿಕೊಳ್ಳುವುದನ್ನು ಎಲ್ಲರೂ ಬಲ್ಲರು. ಬೇಡಿದ ವರಗಳನ್ನೆಲ್ಲ ನೀಡುವ ದೇವತೆಗಳು ಯಾರು? ಹಾಗೆ ಅವರು ನೀಡುತ್ತ ಹೋದರೆ ಕೊನೆ ಮೊದಲೆಲ್ಲಿ?

ದೇವತೆಗಳು ಇರುವುದೇ ಆದರೆ ಅವರು ಮಾಡುವುದು, ಮಾಡಬೇಕಾದುದು ಇಷ್ಟೇ : ಎಲ್ಲರಿಗೂ ಒಳ್ಳೆಯ ಬುದ್ಧಿಯನ್ನು ಕೊಡುವುದು. ಬುದ್ಧಿಯು ಒಳ್ಳೆಯದಾದರೆ ಕೆಲಸವೂ ಒಳ್ಳೆಯದಿರುತ್ತದೆ. ಕೆಲಸ ಒಳ್ಳೆಯದು. ಕಡೆಗೆ ಎಲ್ಲರಿಗೂ ಬೇಕಾದುದು ಅಷ್ಟೇ ತಾನೆ?

ನಮಗೆ ಬೇಕಾದುದು ಏನೆಂಬುದನ್ನು ದೇವತೆಗಳು ಅರಿಯದಾದರೆ, ನಾವು ಅದನ್ನು ಅವರಿಗೆ ತಿಳಿಸಬೇಕಾದ ಅಗತ್ಯವಿದ್ದರೆ, ಅದೆಂಥ ದೇವತೆಗಳು ಅವರು? ನಮಗೆ ಹೆಚ್ಚು ಹಣವೇ ಬೇಕೆಂಬ ಬಯಕೆಯಿದೆಯೆನ್ನೋಣ. ಈ ಬಯಕೆಯನ್ನು ಈಡೇರಿಸಬೇಕೆಂದು ದೇವತೆಗಳು ನಿಶ್ಚಯಿಸಿ ನೀವು ಬಯಸಿದಷ್ಟು ಹಣವನ್ನು ಕೊಡಮಾಡಿದರೆನ್ನೋಣ. ಹಣದಿಂದ ತಲೆ ತಿರುಗಿ ಕೆಟ್ಟ ದಾರಿಗೆ ಬಿದ್ದು ಹಾಳಾದೆವೆಂದರೆ ಅದರ ಹೊಣೆ ದೇವತೆಗಳ ಮೇಲಿರದೆ? ವಿವೇಕವಿಲ್ಲದೆ ಕೇಳಿದವರಿಗೆ ಕೇಳಿದ್ದನ್ನೆಲ್ಲ ಕೊಡುವುದೆ ಅವರು?

ಕವಿಯ ಪ್ರಕಾರ, ದೇವತೆಗಳು ಹೀಗೆ ಮನುಷ್ಯರು ಮಾಡುವ ಪ್ರಾರ್ಥನೆಗೆ, ಪೂಜೆಗೆ ಮರುಳಾಗಿ ಬೇಡಿದ ವರಗಳನ್ನೆಲ್ಲ ತೀರಿಸುವುದಿಲ್ಲವಂತೆ. ಬೇಡುವವರ ಭಕ್ತಿ ದಿಟವಾದುದಾದರೆ ಜನರಿಗೆ ಸದ್ಬುದ್ಧಿಯನ್ನು ಕರುಣಿಸುತ್ತಾನೆ, ಅಷ್ಟೆ. ಈ ಬಂಡವಾಳದಿಂದ ಅವರು ಬೇಕಾದುದನ್ನು ಮಾಡಿಕೊಳ್ಳಲಿ; ತಮಗೆ ಒಳಿತಾಗುವುದನ್ನೇ ಅವರು ಮಾಡಿಯಾರು.

ಮನುಷ್ಯರಿಗೆ ದೇವತೆಗಳು ಒಲಿದ ಮೇಲೂ ಮನುಷ್ಯರು ಕೆಡುವುದುಂಟೆ? ಒಳ್ಳೆಯ ಬುದ್ಧಿಯಿದ್ದವರು ಯಾರೂ ಎಂದಿಗೂ ಕೆಡುವುದಿಲ್ಲ. ಒಳ್ಳೆಯ ಬುದ್ಧಿ ಬಂದ ಮೇಲೆ ಹಣ ಬಂದರೆ ಹಣದಿಂದ ಕೆಡುಕಿಲ್ಲ. ಬುದ್ಧಿ ಒಳ್ಳೆಯದಲ್ಲದಿದ್ದಾಗ ಹಣ ಬಂದರೆ ಅದರಿಂದ ಕೇಡು ತಪ್ಪಿದ್ದಲ್ಲ. ಹಣ ಹೇಳಿ ಕೇಳಿ ಜಡ, ಅದಕ್ಕೆ

ತನ್ನದೇ ಆದ ವಿವೇಕವಿದೆಯೇ? ಗಳಿಕೆಯಾಗಲಿ ವೆಚ್ಚವಾಗಲಿ ಹೇಗಾಗಬೇಕೆಂಬ ತಿಳಿವಳಿಕೆಯುಂಟೆ? ಅದೇನು ಸಂದರ್ಭವನ್ನು ಗಮನಿಸಿ ಎಚ್ಚರವಾಗಿರುತ್ತದೆಯೆ?

ಹಣದ ಒಳಿತು ಕೆಡುಕು ಇರುವುದು ಅದರ ವಿನಿಯೋಗದ ಹಿಂದಿರುವ ಬುದ್ಧಿಯಲ್ಲಿ. ಬುದ್ಧಿ ಒಳ್ಳೆಯದಾದರೆ ಹಣವೂ ಒಳಿತು; ಬುದ್ಧಿ ಕೆಟ್ಟದಾದರೆ ಹಣವೂ ಕೆಟ್ಟದು. ದೇವತೆಗಳಿಗೆ ಈ ಗುಟ್ಟು ತಿಳಿದಿರಬೇಕು. ಮನುಷ್ಯರಿಗೆ ತಿಳಿಯದಿರಬಹುದೆನ್ನಿ. ದೇವತೆಗಳು ಕೊಡುವುದು ಅಪಾರ ಹಣವಲ್ಲ, ಸದ್ಬುದ್ಧಿ ಅಷ್ಟೆ. ಅದರಿಂದ ಬಂದ ಹಣ ಕೈಹತ್ತುತ್ತದೆ; ಊರ್ಜಿತವಾಗುತ್ತದೆ; ಇತರರಿಗೂ ನೆರವಾಗುತ್ತದೆ. ದೇವತೆಗಳಾದವರು ಎಲ್ಲರ ಹಿತವನ್ನೂ ನೋಡಿಕೊಳ್ಳಬೇಕಲ್ಲವೆ? ಹಾಗೆಂದೇ ಗಾಂಧೀಜಿ 'ಸಬ್‌ಕೋ ಸನ್ಮತಿ ದೇ ಭಗವಾನ್' ಎಂದು ಬೇಡಿಕೊಂಡದ್ದು.

120. ಹಣದ ಆಳ್ವಿಕೆ

ಜಗವೆಲ್ಲ ಮಾನವನ ಅಧೀನ ಎನ್ನುವವರಿದ್ದಾರೆ. ನೆಲದ ಮೇಲೆಲ್ಲ ಅವನದ್ದೆ ಅಧಿಕಾರ; ಜಲದೊಳಗಿರುವುದೆಲ್ಲ ಅವನ ಪಾಲೇ; ಮುಗಿಲನ್ನೂ ಅವನೇನು ಬಿಟ್ಟಿಲ್ಲ. ಪಶು ಪ್ರಾಣಿಗಳು, ಗಿಡಮರಗಳು, ಹೊಳೆ ಕಡಲುಗಳು, ಬೆಟ್ಟ ಗುಡ್ಡಗಳು ಎಲ್ಲವೂ ಅವನಿಚ್ಛೆಯಂತೆ ಉಳಿದುಕೊಂಡಿವೆ.

ಇದು ಎಷ್ಟರಮಟ್ಟಿಗೆ ದಿಟವೋ ಹಾಗಿರಲಿ. ಅವನು ಯಾರಿಗಾದರೂ ಅಧೀನನಾಗಿದ್ದಾನೆಯೆ? ಅವನದ್ದೆ ಪರಮಾಧಿಕಾರವೆ? ಎಂದರೆ ಕೆಲವರು ಹಲವರನ್ನು ತಮ್ಮ ಅಧೀನದಲ್ಲಿರಿಸಿಕೊಂಡಿದಾರೆ ಎನ್ನಬಹುದು. ಕೆಲವರು ಆಳರಸರು, ಉಳಿದವರು ಊಳಿಗದವರು. ಅಂತೂ ಮಾನವನು ಮಾನವನಿಗೇ ಅಧೀನನೆಂದರೆ ಹೇಗೆ?

ಅದೂ ಅಷ್ಟಾಗಿ ಸರಿಯಾಗದು. ಮಾನವನು ಮಾನವನಿಗೆ ಅಧೀನನಾಗಿರುವುದಾದರೂ ಏತಕ್ಕೆ? ಬಲಶಾಲಿಯಾದ ಮಾನವನು ದುರ್ಬಲನಾದ ಮಾನವನನ್ನು ತನ್ನ ಅಧೀನದಲ್ಲಿರಿಸಿಕೊಳ್ಳುತ್ತಾನೆ; ಇದೇನೋ ಸಹಜವೆ ಎನ್ನೋಣ. ಆದರೆ ಕೆಲವು ಮಾನವರಿಗೆ ಇತರ ಮಾನವರಿಗಿಂತ ಹೆಚ್ಚು ಬಲ ಬರುವುದು ಹೇಗೆ? ಶರೀರದ ರಚನೆ, ಬುದ್ಧಿಶಕ್ತಿ, ಇಂದ್ರಿಯ ಪಾಟವ, ಎತ್ತರ-ತೂಕ ಇವೆಲ್ಲವೂ ಹೆಚ್ಚು ಕಡಮೆ ಒಂದೇ ಆಗಿರುವಾಗ ಕೆಲವರು ಮಾತ್ರ ಬಲಶಾಲಿಗಳಾದಾರು ಹೇಗೆ?

ಇತಿಹಾಸದಲ್ಲಿ ಇಣುಕಿನೋಡಿದರೆ, ಮಾನವನ ಬಲವಿರುವುದು ಒಂದಲ್ಲ ಒಂದು ಬಗೆಯ ಹಣದಿಂದ ಎಂಬುದು ಸ್ಪಷ್ಟವಾಗುತ್ತದೆ. ಉಳ್ಳವರು ಬಲಶಾಲಿಗಳು. ಅವರ ಬಲ ವೆಚ್ಚವಾಗುವುದು ತಮ್ಮಲ್ಲಿರುವ ಹಣವನ್ನು ಉಳಿಸಿಕೊಳ್ಳಲು,

ಹೆಚ್ಚಿಸಿಕೊಳ್ಳಲು. ಹಣವಿಲ್ಲದೆ ಅದನ್ನು ಗಳಿಸ ಹೊರಡುವವರು ಹಣವುಳ್ಳವರಿಗೆ ಅಧೀನರು.

ಹಣವಂತರನ್ನು ಕಾಡದೆ, ಬೇಡದೆ, ಓಲೈಸದೆ, ವಿರೋಧಿಸದೆ ಬಡವರು ಬದುಕುವುದು ದುಸ್ತರವೆನ್ನಿಸೀತು. ಹಣವಂತರನ್ನು ಈ ಜನ ಆಶ್ರಯಿಸುವುದಾಗಲಿ, ಗಾಸಿಪಡಿಸುವುದಾಗಲಿ ಹಣಕ್ಕೇನೇ ಅಲ್ಲವೇ? ಆದ್ದರಿಂದ ಇವರು ಅಧೀನ ರಾಗಿರುವುದು ಹಣಕ್ಕೆ, ಹಣವಂತರಿಗಲ್ಲ. ಹಣವಂತರನ್ನು ಕಟ್ಟಿಕೊಂಡು ಇವರಿಗೇನಾಗಬೇಕಾಗಿದೆ? ಅವರಲ್ಲಿರುವ ಹಣ ಇತ್ತ ಸರಿದರೆ ಸಾಕು.

ಹಣವಂತರಾದರೂ ಸ್ವತಂತ್ರರು, ಯಾರಿಗೂ ಅಧೀನರಲ್ಲ ಎನ್ನಲಾದೀತೆ? ಎಂದರೆ ಅದೂ ಸರಿಯಲ್ಲ. ದಿಟವಾಗಿ ಅವರೂ ಹಣಕ್ಕೆ ಅಧೀನರೇ. ಅವರ ಬಲವಿರುವುದು ಹಣದಿಂದ ಎಂದ ಮೇಲೆ, ಹಣವೇ ಪ್ರಧಾನವಾಯಿತು. ಹಣವೇ ಬಲ; ಅದಕ್ಕೆ ಅಧೀನರಾದವರೇ ಬಲಶಾಲಿಗಳು. ಅವರೂ ಹಣವನ್ನೆ ಆಶ್ರಯಿಸಬೇಕು, ಹಣವನ್ನೆ ಓಲೈಸಬೇಕು.

ಹೀಗೆ ಮಾನವರೆಲ್ಲರೂ ಹಣದ ಗುಲಾಮರೇ; ಎಲ್ಲರನ್ನೂ ಆಳುವುದು ಹಣವೇ. ಎಲ್ಲರೂ ತಿರುಗುವುದು ಹಣದ ತಿರುಗಣೆಯಲ್ಲೇ; ಎಲ್ಲರಿಗೆ ಬೇಕಾದುದೂ ಹಣವೇ. ಹಣವಾದರೆ ಯಾರಿಗೂ ಅಧೀನವಲ್ಲ. ಯಾರಲ್ಲಾದರೂ ಇದ್ದಾಗ ಕೂಡ ಅವರಲ್ಲೇ ಇರುವುದಿಲ್ಲ; ತಿರುಗಾಡುತ್ತಲೆ ಇರುತ್ತದೆ. ಅದರ ತಿರುಗಾಟವಾದರೂ ಯಾರಪ್ಪನಿಚ್ಛೆಗೂ ಮಣಿಯುವುದಿಲ್ಲ. ನಿಂತಲ್ಲಿ ನಿಲ್ಲುವುದಿಲ್ಲ. ಹಿಡಿದುಕೊಂಡವರನ್ನು ಬಡಿಯದೆ ಬಿಡುವುದಿಲ್ಲ.

121. ಹಣ–ಶೋಷಣೆ

ಹಣವಿದ್ದಲ್ಲಿ ಶೋಷಣೆ ಸಾಧ್ಯತೆಯಿರುವುದೊಂದು ಸ್ವಾರಸ್ಯ. ಶೋಷಣೆ ಯಿರುವಾಗ ಮಾನವರು ಮಾನವರನ್ನೆ ಕಾಡುವರು; ಮಾನವೀಯತೆಯನ್ನೆ ಮರೆತು ಬಿಡುವರು.

ಹಣಕ್ಕೆ ಇಷ್ಟೊಂದು ಪ್ರಾಶಸ್ತ್ಯವಿಲ್ಲದಿರುವ ಕಾಲವೊಂದಿದ್ದಿತೆ? ದೇಹದ ಬಲವೇ ಮುಖ್ಯವೆನಿಸಿದ್ದಾಗಲೂ ಶೋಷಣೆಯಿದ್ದಿತು; ಬುದ್ಧಿಯ ಬಲವಿದ್ದಾಗಲಂತೂ ಶೋಷಣೆಯು ಯಥೇಚ್ಛವಾಗಿಯೇ ನಡೆಯಿತು. ಇನ್ನು ವರ್ಣ, ವೃತ್ತಿ, ವಂಶ, ವರ್ಗ, ಉದ್ಯಮ, ಇವುಗಳದ್ದೇ ಮೇಲುಗೈ ಎನ್ನುವಾಗಲೂ ಶೋಷಣೆ ಧಾರಾಳವಾಗಿ ಸಾಗಿ ಬಂದಿತು. ಒಂದಲ್ಲ ಒಂದು ಬಗೆಯ ಶೋಷಣೆ ಇದ್ದೇ ಇದ್ದಿತು.

ಆದರೆ ಹಣದಿಂದ ಶೋಷಣೆ ನಡೆಯತೊಡಗಿದ್ದಾಗಿನಿಂದ ಉಳಿದೆಲ್ಲ ಶೋಷಣೆಗಳೂ ಹಿಂದೆ ಬಿದ್ದುವು. ಇದೊಂದು ಸೋಜಿಗ. ಹಣಕ್ಕೇನು ವರ್ಣವಿಲ್ಲ, ವರ್ಗವಿಲ್ಲ, ವೃತ್ತಿಯಿಲ್ಲ; ಎಲ್ಲರಿಗೂ ಎಲ್ಲ ಸಂದರ್ಭಗಳಲ್ಲೂ ಎಲ್ಲ ವ್ಯವಹಾರಗಳಲ್ಲೂ ಒಂದೇ ಹಣ. ಸ್ವಾಮಿಗಳಿಗೆ ಪಾದಪೂಜೆ ಮಾಡಿ ಕೊಡುವ ಹಣವೇ ಅಂಗಡಿಯಲ್ಲಿ ವ್ಯಾಪಾರಕ್ಕೆ ಬರುವ ಹಣ. ಶ್ರೀಮಂತರಿಗಾಗುವ ಹಣವೇ ಬಡವರಿಗೂ ಆಗುವುದು. ಬುದ್ಧಿವಂತರು ಬಳಸುವ ಹಣವನ್ನೇ ಬೆಪ್ಪರೂ ಬಳಸುವುದು. ಪುಸ್ತಕ ಬರೆದು ಬರುವ ಹಣವೇನು ಕಟುಕ ಕುರಿಯನ್ನು ಕಡಿದು ಮಾರಿ ಗಳಿಸುವ ಹಣಕ್ಕಿಂತ ಬೇರೆಯಾದುದೇ? ಹಣ ಹಣವೇ, ಹೇಗೆ ಬಂದರೂ ಹಣವೇ ತಾನೆ?

ಹಾಗೆ ನೋಡಿದರೆ, ಹಣದ ಬಲ ಹೆಚ್ಚಿದಂತೆ ಮಾನವರಲ್ಲಿ ಸಮಾನತೆ ಮೂಡಬೇಕಾಗಿದ್ದಿತು. ಹಣವುಳ್ಳವರ ನಡುವೆಯೇ ಅಂತರವೇರ್ಪಟ್ಟುದು, ಉಳ್ಳವರ ಇಲ್ಲದವರ ನಡುವೆ ಹಗರಣವೇರ್ಪಟ್ಟುದು ಸಹಜವೆನ್ನಬಹುದಾದರೂ ವಿಚಿತ್ರವಾದ ಬೆಳವಣಿಗೆ. ಹಾಗೆ ನಡೆದು ಶೋಷಣೆಗೆ ದೊಡ್ಡದೊಂದು ದಾರಿಯಾಯಿತು.

ಈಗೀಗ ಉಳಿದೆಲ್ಲ ಅಂತರಗಳು ಮರೆಯಾಗುತ್ತಿವೆ. ವಂಶ, ವೃತ್ತಿ, ವರ್ಗ ಮುಂತಾದ ಭೇದಗಳು ಶೋಷಣೆಯ ಸಾಧನಗಳಾಗುತ್ತಿಲ್ಲ. ಆದರೆ ಹಣದ ಕಾರಣದಿಂದ ನಡೆಯುತ್ತಿರುವ ಶೋಷಣೆಗೆ ಇತಿಮಿತಿ ಇಲ್ಲವಾಗಿದೆ. ಶೋಷಣೆಯ ಇನ್ನೊಂದು ಮೊಗವೇ ಭ್ರಷ್ಟಾಚಾರ. ಇದಂತೂ ಸರ್ವವ್ಯಾಪಿಯಷ್ಟೆ?

ಧರ್ಮದ ಹೆಸರಿನಲ್ಲಿ, ವಿಜ್ಞಾನದ ಹೆಸರಿನಲ್ಲಿ, ತಾಂತ್ರಿಕತೆಯ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಗಳೆಲ್ಲ ಮೂಲಭೂತವಾಗಿ ಹಣದ ಕಾರಣವಾಗಿಯೇ. ರಾಜಕಾರಣದ ವಿಚಾರವನ್ನಂತೂ ಹೇಳುವಂತೆಯೇ ಇಲ್ಲ. ಹಣ ಎಲ್ಲಿದ್ದರೆ ಅಲ್ಲಿ ಶೋಷಣೆ ಎಂಬಂತಾಗಿದೆ. ಕಡೆಗೆ ಅದು ಮಕ್ಕಳ ವಿದ್ಯಾಭ್ಯಾಸ ಕ್ಷೇತ್ರವನ್ನೂ ಬಿಟ್ಟಿಲ್ಲ.

ಉಳ್ಳವರು ಕೊಡಲಿ, ಉಳಿದವರು ಬೇಡ ಎನ್ನುವಂತೆಯೂ ಇಲ್ಲ. ಶೋಷಣೆಯ ಮುಂದೆ ಈ ಭೇದವೇನು ಇರದು; ಇದರಲ್ಲಿ ಸಮಾನತೆಯೇ ಇದೆಯೆನ್ನಿ! ಶೋಷಣೆಯು ಸೊಲ್ಲೆತ್ತಿದಾಗ ಮೊದಲು ಬಲಿಯಾಗುವುದು ಮಾನವೀಯತೆ. ಹಣದ ಗೀಳು ಹೆಚ್ಚಿದಾಗ ಹೃದಯವಂತಿಕೆ ಸೊರಗುತ್ತದೆ. ಸ್ವಾರ್ಥದೆದುರು ಸಾಮಾಜಿಕ ಕಾಳಜಿ ನಿಲ್ಲಲಾರದು. ಕಿಸೆಯಲ್ಲಿ ಕೂಡಿಡುವ ದುಡ್ಡು ಕರುಳನ್ನೂ ಕುಯ್ಯುವಷ್ಟು ಗಟ್ಟಿಯಾದುದು.

ಹಣದ ಅಬ್ಬರ, ಉಬ್ಬರ ನಿಂತರೆ ಮಾತ್ರ ಶೋಷಣೆಯ ಕಾವು ಕಡಮೆಯಾದೀತು; ಆದರೆ ನಿಲ್ಲುವ ನಿರೀಕ್ಷೆ ಯಾರಿಗಿದೆ?

122. ಬಡತನಕ್ಕೆ ಮದ್ದು

ಸೆಕೆ ಹೆಚ್ಚಾಯಿತು ಎಂದು ಕಂಬಳಿ ಹೊದೆಯುವುದುಂಟೆ?

ಉಂಟು. ನಮ್ಮ ಆಡಳಿತದ ಆರ್ಥಿಕ ನೀತಿಯನ್ನು ನೋಡಿದರೆ ಹೀಗೆಯೇ ಅನಿಸುತ್ತದೆ. ಬಡತನ ಹೆಚ್ಚಾಯಿತು ಎಂದು ಅದ್ದೂರಿಯ ಪರಿಹಾರವನ್ನು ಹವಣಿಸಿಕೊಳ್ಳುವುದು ಕಾಣುತ್ತಿಲ್ಲವೆ?

ನೇಗಿಲನ್ನು ಹಿಡಿದು ನೆಲವನ್ನು ಉಳಲಾರದವನಿಗೆ ಟ್ರ್ಯಾಕ್ಟರ್‌ಗಳನ್ನು ಒದಗಿಸುವುದು; ಹೊಟ್ಟೆಗಿಷ್ಟು ಹಿಟ್ಟನ್ನು ಕಾಣದವನಿಗೆ ಉಡುಪಿನ ಮೋಜನ್ನು ತೋರಿಸುವುದು; ಬೆಳೆಯಿಂದ ಹೊಟ್ಟೆ ಹೊರೆದುಕೊಳ್ಳಲಾಗದವನಿಗೆ ಕಾರಖಾನೆಯ ಕೆಲಸದ ರುಚಿ ತೋರಿಸುವುದು; ಫಲವತ್ತಾದ ನೆಲವನ್ನು ಕಸಿದುಕೊಂಡು ನೀರಸವಾದ ಕಟ್ಟಡಗಳನ್ನೆಬ್ಬಿಸುವುದು; ಹಳ್ಳಿಗಳ ಬಡತನವನ್ನು ನೀಗಲು ನಗರಗಳನ್ನು ನಿರ್ಮಿಸುವುದು; ಕೈಯಲ್ಲಿರುವ ತಾಂಬೂಲವನ್ನು ಕೊಟ್ಟು ಅದನ್ನು ಕೊಂಡವರ ಬಾಯೆಂಜಲಿಗೆ ಕಾಯುವುದು.

ಇವೆಲ್ಲ ಸೆಕೆ ಹೆಚ್ಚಾಯಿತೆಂದು ಕಂಬಳಿಯನ್ನು ಹೊದ್ದುಕೊಳ್ಳುವ ಹವಣಿಕೆಯಂತೆಯೇ. ನಮ್ಮ ಆರ್ಥಿಕ ಪರಿಸ್ಥಿತಿಯೇನೋ ನೆಟ್ಟಗಿಲ್ಲ ದಿಟ. ಆದರೆ ಅದನ್ನು ಸರಿಪಡಿಸಲು ಈಗ ಮಾಡುತ್ತಿರುವ ಪ್ರಯತ್ನಗಳು, ಆ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವುದಿಲ್ಲವೆ? ಕೊಟ್ಟ ಮದ್ದು ಇರುವ ಬೇನೆಯನ್ನು ಇನ್ನಷ್ಟು ಹೆಚ್ಚಿಸಿದರೆ ಹೇಗೆ?

ಜೀವನದ ಮಟ್ಟವನ್ನು ಏರಿಸುವ ಪ್ರಯತ್ನ ಎಲ್ಲೆಲ್ಲಿಯೂ ನಡೆಯುತ್ತಿದೆಯಲ್ಲವೆ? ಬಡವರು ಮಧ್ಯಮ ವರ್ಗಕ್ಕೇರಬೇಕು, ಮಧ್ಯಮ ವರ್ಗದವರು ಶ್ರೀಮಂತರಾಗಬೇಕು; ಶ್ರೀಮಂತರಾದವರು ಕುಬೇರರಾಗಬೇಕು. ಉದ್ದೇಶವೇನೋ ಸರಿಯೆ. ಬಡವರಿಗೆ ಬೆಳಕು ಹರಿಯಲೇಬಾರದೆ? ಮಧ್ಯಮ ವರ್ಗದವರು ಸಿರಿವಂತರಾಗುವ ಕನಸನ್ನು ಕಾಣಲೇಬಾರದೆ? ಶ್ರೀಮಂತರಾದವರೂ ಅಲ್ಲಿಯೇ ನಿಂತುಬಿಡಬೇಕೆ?

ಮೇಲಮೇಲಕ್ಕೇರುವ ಪ್ರವೃತ್ತಿ ಸಹಜವೇ. ಆದರೆ ದಿಟವಾಗಿ ಹೀಗಾಗುತ್ತಿದೆಯೆ ಎಂಬುದು ಪ್ರಶ್ನೆ. ಬಡವರು ಟಿ.ವಿ. ತೆಗೆದುಕೊಳ್ಳುವುದಾದರೆ, ಮಧ್ಯಮ ವರ್ಗದವರು ಕಾರಿನಲ್ಲಿಯೇ ಓಡಾಡುವುದಾದರೆ, ಶ್ರೀಮಂತರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸಿಕೊಳ್ಳುವುದಾದರೆ, ಅಷ್ಟರಿಂದ ಜೀವನದ ಮಟ್ಟ ಏರಿತು ಎನ್ನಬಹುದೆ?

ನೂರು ಜನರಲ್ಲಿ ಇಪ್ಪತ್ತು ಮಂದಿ ಆರ್ಥಿಕವಾಗಿ ಸಂಪನ್ನತೆಯನ್ನು ಪಡೆದುಕೊಂಡು ಮೆರೆದರೆ ಇನ್ನು ಎಂಬತ್ತು ಮಂದಿಯ ಬಡತನವನ್ನು

ತೊಲಗಿಸಿದಂತಾಯಿತೆ? ದಿಟವಾಗಿ, ಅವರ ಬಡತನವನ್ನು ಇನ್ನಷ್ಟು ಹೆಚ್ಚಿಸಿದಂತಾಯಿತು. ಬಡವರ, ಭಾಗ್ಯವಂತರ ನಡುವೆ ಇರುವ ಅಂತರವನ್ನು ಹಿಗ್ಗಿಸುವುದೇ ಈಗ ನಡೆಯುತ್ತಿರುವುದು.

ಔದ್ಯಮಿಕ ಪ್ರಗತಿಯ ಜಾಡಿನಲ್ಲಿ ನಾಡಿನ ಬಡತನ ಹೆಚ್ಚುತ್ತಿರುವುದನ್ನು ತಜ್ಞರು ಗಮನಿಸಿದ್ದಾರೆ. ಎಂದಿಗಿಂತ ಇಂದು ನಮ್ಮಲ್ಲಿ ಬಡವರ ಸಂಖ್ಯೆ ಏರಿದೆ, ಏರುತ್ತಿದೆ. ಇದರ ಜೊತೆಗೆ ಆಧುನಿಕತೆಯ ಪಿಡುಗು ಬೇರೆ!

123. ಅರ್ಥದ ಸಾರ್ಥಕತೆ

ಹಣಕ್ಕೆ ಸಂಸ್ಕೃತ ಮಾತು 'ಅರ್ಥ'. ಈ ಮಾತಿಗೆ ಮೂಲಾರ್ಥ ಬೇಡುವುದು (ಉಪಯಾಂಚಾಯಾಂ ಅರ್ಥ್ಯತೇ). ಬೇಡುವಿಕೆಯ ಹಿನ್ನೆಲೆಯಲ್ಲಿರುವುದು ಬಯಕೆ.

ಬಯಕೆಯುಳ್ಳವನು ಬೇಡುತ್ತಾನೆ; ಬೇಡಿದವನು ಪಡೆದುಕೊಳ್ಳುತ್ತಾನೆ. ಬಯುಸಿದುದು ಕೈಸೇರಿದರೆ, ಬಯುಕೆ ಪೂರೈಸಿದರೆ, ಬಯುಸಿದವನಿಗೆ ಸಂತೋಷವಲ್ಲವೆ?

ಆದರೆ ಬಯಸಿ ಬೇಡಿದಾಗಲೂ ಅದು ಹತ್ತಿರ ಬಾರದಿರಬಹುದು; ಬೇಡಿದುದು ಬರಿದೆಯೆಂದಾಗಬಹುದು; ಬಯುಕೆ ಬಯುಕೆಯಾಗಿಯೆ ಉಳಿದುಕೊಳ್ಳಬಹುದು. ಹಾಗಾದರೆ, ಅದು ನಿರರ್ಥಕ; ಅರ್ಥ ಇಲ್ಲದಿರುವುದು.

ನಿರರ್ಥಕವೆಂಬುದು ಬೇರೆ, ಅನರ್ಥವೆಂಬುದು ಬೇರೆ. ಬಯುಸಿದ್ದು ಬೇಡಿದಾಗಲೂ ಬಾರದಿದ್ದರೆ ನಿರರ್ಥಕ; ಬೇಡಿದ್ದು, ದುಡಿದದ್ದು ವ್ಯರ್ಥವಾಯಿತು. ಬೇಡವಾದದ್ದು, ಬಯಕೆಗೆ ತೀರ ವಿರುದ್ಧವಾದದ್ದು ಬಂದೊದಗಿದರೆ ಅದು ಅನರ್ಥ.

ಅದನ್ನೆ ಅನಿಷ್ಟ (ಎಂದರೆ ಬೇಡವಾದುದು), ಕೆಡುಕು, ವಿಪತ್ತು (ತೊಂದರೆ) ಎಂದೆಲ್ಲ ಕರೆಯುತ್ತಾರೆ. ಅನರ್ಥವೆಂದರೆ ಯಾರಿಗಾದರೂ ಅಂಜಿಕೆಯೆ; ನಮ್ಮನ್ನೊ, ನಮ್ಮದಾಗಿರುವ ವಸ್ತುವನ್ನೊ ಗಾಸಿಗೀಡಾಗಿಸಿದರೆ ಅದು ಅನರ್ಥ. ಹಣ ಹೋದರೆ ಅನರ್ಥ, ಮನೆ ಹಾಳಾದರೆ ಅನರ್ಥ; ಮಕ್ಕಳು ಮರಿ ಮರೆಯಾದರೆ ಅನರ್ಥ.

ವೇದಾಂತಿಗಳು— 'ಅರ್ಥವನ್ನು ಅನರ್ಥವೆಂದು ತಿಳಿದುಕೊ' (ಅರ್ಥಮನರ್ಥಂ ಭಾವಯ ನಿತ್ಯಂ) ಎನ್ನುವರಲ್ಲ, ಅದರ ಅರ್ಥವೇನು? ಅರ್ಥ ಅನರ್ಥವಾಗುವುದು ಹೇಗೆ? ಬಯಸಿದುದು ಬಂದಮೇಲೆ ಅನರ್ಥವೆಲ್ಲಿಯದು? ಬೇಡವಾದುದು, ಬೇಡವೆನಿಸಿದ್ದು, ಬಂದರೆ ತಾನೆ ಅನರ್ಥ?

ವೇದಾಂತಿಗಳದ್ದು ಲೋಕವ್ಯವಹಾರದ ದೃಷ್ಟಿಯಲ್ಲ, ವ್ಯವಹಾರದೊಳಗೆ ಅಡಗಿರುವ ಪರಮಾರ್ಥದ ದೃಷ್ಟಿ. ಬಯಸುವುದೇನೋ ಸರಿಯೆ. ಬಯಸಿದಾಗ

ಬೇಡುವುದೂ ಸಹಜವೇ. ಆದರೆ ಏನನ್ನು ಬಯಸಬೇಕು ಎಂಬ ವಿವೇಕವಿರದಿದ್ದರೆ ಬಯಸಿ ಬಂದದ್ದು ಅನರ್ಥವೇ ಆದೀತು. ಅರ್ಥವೆಂಬುದು ಬೇಡುವುದಷ್ಟರಲ್ಲೆ ಮುಗಿದು ಹೋಯಿತು; ಮುಂದೆ ಬಂದದ್ದೆಲ್ಲವೂ ಅನರ್ಥವೇ.

ಹಣ ಬೇಕೆಂದು ಬಯಸುತ್ತೇವೆಯಲ್ಲವೆ? ಹಣವು ಬದುಕಿಗೆ ಬೇಕೇ ಬೇಕು ತಾನೆ? ಆದರೆ ಹಣದಾಸೆಗೆ ಕಡಿವಾಣವಿಲ್ಲದೆ, ಅದು ಹೆಮ್ಮರವಾಗಿ ಬೆಳೆದು ಬಿಟ್ಟರೆ ಅದರಿಂದ ಬದುಕಿಗೆ ನೆಮ್ಮದಿಯೇನು ಇರದು. ಆಗ ಕೈಸೇರಿದ ಅರ್ಥಕ್ಕೆ ಸಾರ್ಥಕತೆಯಿರದು. ಕೂಡಿ ಹಾಕಿಕೊಂಡ ಅರ್ಥವನ್ನು ನಿರರ್ಥಕ ಎನ್ನುವಂತೆಯೂ ಇಲ್ಲ. ಅದರಿಂದ ಅನರ್ಥವೇ ಕಾದಿರುವುದು.

ಹೀಗೆ, ಅರ್ಥದ ಔಚಿತ್ಯ, ಅಗತ್ಯ, ವ್ಯಾಪ್ತಿ, ಸಾಧ್ಯತೆ, ಸಂಭವ ಎಲ್ಲವನ್ನೂ ಗಮನಿಸಿ, ಅರ್ಥದ ಆರ್ಥಿಕತ್ವಕ್ಕೆ (ಎಂದರೆ ಬಯಕೆಗೆ) ಒಂದು ಮಿತಿಯನ್ನು ಕಲ್ಪಿಸಿಕೊಂಡಾಗಲೆ ಅರ್ಥದ ಪ್ರಯೋಜನ ಕೈಸೇರುವುದು; ಅರ್ಥ ಸಾರ್ಥಕವಾಗುವುದು. ಈ ಬಗೆಯ ವಿವೇಕವನ್ನು ಬೆಳೆಸಿಕೊಂಡಲ್ಲದೆ ಅರ್ಥದಿಂದ ಅನರ್ಥ ತಪ್ಪುವುದಿಲ್ಲ.

124. ಮೋಜಿನ ತೊಡರು

ಅಕ್ಕಮಹಾದೇವಿಯದೊಂದು ಮಾತು—

'ರತ್ನಸಂಕೋಲೆಯಾದಡೆ ತೊಡರಲ್ಲವೆ?
ಮುತ್ತಿನ ಬಲೆಯಾದಡೆ ಬಂಧನವಲ್ಲವೆ?
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ?'

ಸಂಕೋಲೆ ಕಬ್ಬಿಣದ್ದಾದರೇನು, ರತ್ನಗಳನ್ನು ಮೆಟ್ಟಿ ಮಾಡಿದ್ದಾದರೇನು? ಕಾಲಿಗೆ ಸರಪಣಿಯಾಗಿ ಕಟ್ಟಿದಾಗ ಓಡಾಟಕ್ಕೆ ಅಡ್ಡಿಮಾಡುವುದಿಲ್ಲವೆ? ನಿರಾಳವಾಗಿ ಅಡ್ಡಾಡಲಾದೀತೆ? ಮುತ್ತಿನದೇ ಬಲೆಯಾಗಲಿ, ಬಲೆ ಬಲೆಯೇ; ಬಂಧನವೇ. ಮುತ್ತು ಅದಕ್ಕೇನು ಮೆರುಗು ಕೊಡಲಾರದು. ತಲೆಯನ್ನು ಕಡಿಯಲು ಕತ್ತಿಯನ್ನು ಬಳಸುವಾಗ, ಅದು ಉಕ್ಕಿನದಾದರೂ ತಲೆ ಕಡಿದು ಉರುಳುತ್ತದೆ; ಬಂಗಾರದ ಕತ್ತಿಯಾದರೂ ಕಡಿದುರುಳುತ್ತದೆ. ಬಂಗಾರದ್ದೆಂದು ಕತ್ತಿಗೇನು ಕರುಣೆ ಬಾರದು. ಬಂಗಾರದ ಕತ್ತಿ ಮೇಲೆರಗುವಾಗ ತಲೆಗೇನಾದರೂ ಹಿತವೆನಿಸೀತೆ?

ಬಡತನವೊಂದು ತೊಡರು ಎಂದುಕೊಂಡರೆ, ಮಿತಿಮೀರಿದ ಸಿರಿತನವಿದ್ದರೂ ಅದೊಂದು ತೊಡರೇ. ಬಲೆ ನಮ್ಮನ್ನು ಕಟ್ಟಿ ಹಾಕುವುದು ಎಂದರೆ ನಮ್ಮ ಮನೆ, ಮಕ್ಕಳು, ಮರಿ ಎಂಬ ಅಭಿಮಾನವಿರುವುದರ ಸಂಕೇತ. ಅಭಿಮಾನವಿರುವುದು

ಮುತ್ತಿನಂಥ ಸಂಗತಿಯೇ. ಆಕರ್ಷಕವಾದುದೇ. ಆದರೆ ಅದೊಂದು ಬಂಧನವಲ್ಲವೆ? ಕಟ್ಟುಪಾಡಲ್ಲವೆ? ಮನೆಯಿಂದ, ಮಕ್ಕಳು ಮರಿಯಿಂದ, ತೊಂದರೆಗಳು ಒದಗುವುದಿಲ್ಲವೆ? ಬೇಕೆಂದು ಬಯಸಿ ನಮ್ಮನ್ನು ನಾವೆ ಸಿಲುಕಿಸಿಕೊಳ್ಳುವ ಬಲೆ ಅದು. ವಿವೇಕವಿಲ್ಲದೆ ಬಲೆಯೊಳಗೆ ಬೀಳುತ್ತೇವೆ.

ಇನ್ನು, ನಮ್ಮ ತಲೆಯನ್ನು ತರಿಯಲು ಕಬ್ಬಿಣದ ಕತ್ತಿಯೇ ಬೇಕೆಂದಿಲ್ಲ. ನಮ್ಮ ಐಶ್ವರ್ಯ, ಸ್ವಾರ್ಥ, ಮಿತಿಮೀರಿದ ಬಯಕೆಗಳು, ಆಡಂಬರ, ಓಲಾಟ ಇವೆಲ್ಲ ಕತ್ತಿಯಂತೆಯೇ ನಮ್ಮ ತಲೆಯನ್ನು ತರಿದಾವು. ನಮ್ಮ ಕತ್ತಿನ ಸುತ್ತ ಆಡುತ್ತಿರುವ ಕತ್ತಿಗಳು ಅನೇಕ ಇವೆ. ಯಾವಾಗ ಅವು ಕುತ್ತಿಗೆಯನ್ನು ಬಡಿದಾವೋ ತಿಳಿಯದು.

ಮೇಲಿನ ವಚನದ ಇಂಗಿತ, ನಾವು ಎಚ್ಚರದಲ್ಲಿರಬೇಕೆಂಬುದು. ಕಣ್ಣಿಗೆ ಚೆಲುವೆಂದು, ಮನಸ್ಸಿಗೆ ಮೋಜೆಂದು ಹಿಡಿಯಲು ಕೈಚಾಚಿದರೆ, ಅದರತ್ತ ನಡೆಯಲು ಅಡಿಯಿಟ್ಟರೆ, ಚೆಲುವಿನ ಹಿಂದಿರುವ ಅಪಾಯ, ಮೋಜಿನ ಅಡಿಯಲ್ಲಿರುವ ವಿಪತ್ತು ನಮ್ಮನ್ನು ಹಿಡಿದಾವು, ನಮ್ಮತ್ತ ನುಗ್ಗಿಬಂದಾವು.

ಹಣದ ಬಯಕೆ ಯಾರಿಗಿಲ್ಲ? ಹಣದಿಂದ ಸುಖವೇ ಸಿದ್ಧವಾಗಿದೆಯೆಂಬ ಭ್ರಾಂತಿಯಿದ್ದರಂತೂ ಬಯಕೆಯೊಂದು ಗೀಳಾಗಿ ಪರಿಣಮಿಸುತ್ತದೆ. ಗೀಳಿಗೆ ಪಕ್ಕಾದಾಗ ವಿಷವೂ ಅಮೃತದಂತೆಯೇ ತೋರಿಕೊಳ್ಳುತ್ತದೆ; ಮಿರಿಮಿರಿ ಮಿಂಚುವ ಹಾವು ಬಂಗಾರದ ಸರದಂತೆ ಕಾಣಿಸಿಕೊಳ್ಳುತ್ತದೆ; ಹೊರಗಿನ ಚೆಲುವಿಗೆ ಮೋಸ ಹೋಗುತ್ತೇವೆ. ಇನ್ನೇನು ಸ್ವರ್ಗಕ್ಕೆ ಒಂದೇ ಗೇಣು ಎಂದುಕೊಳ್ಳುತ್ತ ಮೈ ಮರೆತಾಗ, ವಿಪತ್ತು ಮೇಲೆರಗುತ್ತದೆ, ಸಾಯಬಡಿಯುತ್ತದೆ. ಇದನ್ನು ನಾವು ಕಾಣುವುದಿಲ್ಲ.

ಕತ್ತಿಯು ಚಿನ್ನದ್ದಾಗಿರಲಿ, ಕಬ್ಬಿಣದ್ದಾಗಿರಲಿ, ಹರಿತವಾಗಿದ್ದರೆ ಗಾಸಿಯಾಗುವುದು ಸಮನಾಗಿಯೆ ಅಲ್ಲವೆ? ನೋಡಲು ಚಿನ್ನದ ಕತ್ತಿ ಥಳಥಳ ಹೊಳೆಯುತ್ತದೆ, ದಿಟ. ಆದರೆ ಬಿರುಸಿನಿಂದ ಕುತ್ತಿಗೆಯ ಮೇಲೆ ಬಡಿದಾಗ, ತಲೆಯೇನು ನೆಟ್ಟಗೆ ನಿಲ್ಲುತ್ತದೆಯೆ? ಕತ್ತಿ ಕತ್ತಿಯೇ; ಅದರ ದ್ರವ್ಯ ಏನಾಗಿರಲಿ, ಅದು ಮಾಡುವ ಕೆಲಸ ಒಂದೇ. ಬಲೆ ಬಲೆಯೆ? ನೂಲಿನದಾಗಿರಲಿ, ಮುತ್ತಿನದಾಗಿರಲಿ; ಕಟ್ಟಿ ಹಾಕುವ ಪ್ರಯೋಜನವೇ ಅದಕ್ಕೆ.

125. ಹಣದಾಸೆ-ಪರಿಸರ

'ಬಡತನವು ಅತ್ಯಂತ ಮಲಿನಕಾರಕ ಶಕ್ತಿ' ಎಂದು ಸ್ವೀಡನ್ ರಾಜ್ಯದ ಕೇಂದ್ರವಾದ ಸ್ಟಾಕ್ಹೋಂನಲ್ಲಿ ೧೯೭೨ ರಂದು ನಡೆದ ಪರಿಸರ ಪ್ರಜ್ಞೆಯ ಅಧಿವೇಶನವು ಘೋಷಿಸಿತು. ತೃತೀಯ ವರ್ಗದಲ್ಲಿರುವ ರಾಷ್ಟ್ರಗಳು ತಂತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲೆಂದು ಪರಿಸರವನ್ನು ಹಾಳು ಮಾಡುತ್ತಿದ್ದಾರೆಂಬ ಆರೋಪವನ್ನೂ ಮಾಡಿತು.

ಅಧಿವೇಶನದಲ್ಲಿ ತೋರಿಕೊಂಡ ಕಾಳಜಿಯೇನೋ ಸರಿಯೆ; ಪರಿಸರದಲ್ಲಿ ಮಾಲಿನ್ಯ ದಿನದಿನಕ್ಕೆ ಹೆಚ್ಚುತ್ತಿರುವುದೂ ದಿಟವೆ? ಆದರೆ ಇದು ಬಡ ರಾಷ್ಟ್ರಗಳಲ್ಲಿ ಮಾತ್ರವೇ ನಡೆಯುತ್ತಿದೆಯೆ? ಮುಂದರಿದ ರಾಷ್ಟ್ರಗಳಲ್ಲಿ, ಅದೂ ಅಮೇರಿಕ ಮತ್ತು ಬ್ರಿಟನ್‌ಗಳಲ್ಲಿ, ಪರಿಸರ ಶೋಷಣೆಯ ಪ್ರಮಾಣವಾದರೂ ಅಧಿವೇಶನದ ಗಮನಕ್ಕೆ ಬಂದಿತೆ?

ಬಡಜನರೇನೋ ಅಡುಗೆಗೆ ಕಟ್ಟಿಗೆ ಬೇಕೆಂದು ಅಲ್ಲಲ್ಲಿ ಒಂದೆರಡು ಮರದ ರೆಂಬೆಗಳನ್ನು ತರಿದು ಕೊಂಡೊಯ್ದಾರು. ನೆಲದಿಂದ ಮಣ್ಣನ್ನು ತೋಡಿ ತೆಗೆದು ಗುಡಿಸಲನ್ನು ಕಟ್ಟಿಕೊಳ್ಳಲು ಬಳಸಿಕೊಂಡಾರು. ತಮ್ಮ ದನ ಕುರಿಗಳ ಆಹಾರಕ್ಕೆಂದು ಹುಲ್ಲು, ಗಿಡ-ಗಂಟೆ, ಸೊಪ್ಪು-ಸೆದೆಗಳನ್ನು ಕಿತ್ತುಕೊಂಡಾರು. ಇಷ್ಟರಿಂದ ಪರಿಸರಕ್ಕೆ ದೊಡ್ಡ ಗಾಸಿಯಾದೀತೆ?

ಬಡಜನರೇನು ಗಣಿಗಳನ್ನು ತೋಡಿ, ಪ್ರಕೃತಿಯ ಸಂಪನ್ಮೂಲಗಳನ್ನು ದೋಚಿಕೊಳ್ಳುತ್ತಾರೆಯೆ? ಉದ್ಯಮಗಳನ್ನು ನಡೆಸಿ, ಕೊಳಚೆ ನೀರನ್ನು ನದಿಗೆ ಬಿಟ್ಟು ಅದರ ನೀರನ್ನು ಹಾಳುಮಾಡುತ್ತಾರೆಯೆ? ನಗರಗಳನ್ನು ಕಟ್ಟಿ ವಾಹನಗಳನ್ನು ನಡೆಸಿ ವಾತಾವರಣದಲ್ಲಿ ಹೊಗೆ, ಕೊಳಕು, ಗಾಳಿ, ವಿಷಗಳನ್ನು ತುಂಬುತ್ತಾರೆಯೆ? ಇವೆಲ್ಲ ಶ್ರೀಮಂತರಿಂದಲೇ ಜರುಗುತ್ತಿರುವ ಧಾಳಿಗಳು; ಅವರಿಗಿರುವ ಹಣದಾಸೆಗೆ ನಿಸರ್ಗ ಬಲಿ. ಪ್ರಕೃತಿಯನ್ನು ಶೋಷಿಸಿ, ಪ್ರತಿಫಲವಾಗಿ ಪ್ರಕೃತಿಯನ್ನು ಕುಲಗೆಡಿಸುವ ಪ್ರವೃತ್ತಿ ಬಹುವಾಗಿ ಕಾಣುತ್ತಿರುವುದು ಮುಂದರಿದ ರಾಷ್ಟ್ರಗಳಲ್ಲೇ, ಶ್ರೀಮಂತಿಕೆಯ ಸೊಕ್ಕಿನಿಂದಲೇ.

ಅಭಿವೃದ್ಧಿಶೀಲವಾದ ಅಮೇರಿಕದ ಗ್ರೇಟ್ ಲೇಕ್ ಎಂಬ ಸರೋವರ ತನ್ನ ಚೆಲುವನ್ನೂ ಶುಚಿಯನ್ನೂ ಕಳೆದುಕೊಂಡು, ಪರಿಸರ ಮಾಲಿನ್ಯಕ್ಕೆ ದೊಡ್ಡ ನಿದರ್ಶನವಾದುದು ಯಾವ ಬಡ ರಾಷ್ಟ್ರದಿಂದ? ಭೋಗಕ್ಕೆ ಪರಿಸರವನ್ನು ಅಡಿಯಾಳಾಗಿಸಿಕೊಂಡ ರಾಷ್ಟ್ರಗಳಲ್ಲಿ ಅಮೇರಿಕದ್ದೇ ಸಿಂಹಪಾಲು; ಬ್ರಿಟನ್ನಿನದು ಎರಡನೆಯ ಪಾಲು. ಲೋಕಕ್ಕೆ ಪರಿಸರ ರಕ್ಷಣೆಯ ಪಾಠಗಳನ್ನು ಕಲಿಸಲೆಂದು ಹೊರಟ ಈ ರಾಷ್ಟ್ರಗಳು, ತಮ್ಮ ಅಪರಾಧದತ್ತ ಕಣ್ಣು ಹಾಯಿಸದೆ, ಬಡ ರಾಷ್ಟ್ರಗಳಿಗೆ ಎಚ್ಚರಿಕೆ ನೀಡಹೊರಟದ್ದು ಹಾಸ್ಯಾಸ್ಪದ.

ಬಡ ರಾಷ್ಟ್ರಗಳು ಪರಿಸರ ಪ್ರವಣವೆಂಬಂಥ ಸಂಸ್ಕೃತಿಯನ್ನು ಇನ್ನೂ ಅಷ್ಟಿಷ್ಟು ಉಳಿಸಿಕೊಂಡಿವೆ; ಪರಿಸರವನ್ನು ಶೋಷಣೆ ಮಾಡುವಂಥ ವೈಜ್ಞಾನಿಕ, ತಾಂತ್ರಿಕ, ಆಧುನಿಕ ಸಂವಿಧಾನಗಳನ್ನೇನು ಬಹುಮಟ್ಟಿಗೆ ಬಳಸಲಾರವು. ಈ ಸಂವಿಧಾನಗಳನ್ನು ಬಳಸುವಂತೆ ಕರೆ ನೀಡುತ್ತಿರುವುದೂ ಅಮೇರಿಕೆಯಂಥ ರಾಷ್ಟ್ರಗಳೆ. ಇದೇ ಸಂವಿಧಾನಗಳನ್ನು ಬಳಸಿ ತಾವು ಪರಿಸರಕ್ಕೆ ಎಷ್ಟು ಗಾಸಿಯನ್ನೊದಗಿಸಿದ್ದಾರೆಂಬುದನ್ನು ಮಾತ್ರ ಅವರು ಹೇಳುವುದಿಲ್ಲ. ಆದರೆ ಅದು ಯಾರಿಗಾದರೂ ತಿಳಿಯದೆ ಇರುತ್ತದೆಯೆ?

126. ತಾನು, ತನ್ನದು

'ಹುಟ್ಟುತೇನು ತರಲಿಲ್ಲ, ಸಾಯುತೇನು ಒಯ್ಯಲಿಲ್ಲ'

ಇದೊಂದು ದಾಸರ ಪದ; ಕನಕದಾಸರದ್ದು. ಇದನ್ನು ಬಹುಮಂದಿ ಬಲ್ಲರು; ಆಗಾಗ ನುಡಿಯುತ್ತಲೂ ಇರುತ್ತಾರೆ. ಆದರೆ ಅದರ ತಾತ್ಪರ್ಯವನ್ನಾಗಲಿ ಅನ್ವಯವನ್ನಾಗಲಿ ಅರಿತುಕೊಳ್ಳುವುದಿಲ್ಲ. ವಿಚಾರವನ್ನೂ ಮಾಡುವುದಿಲ್ಲ.

ಹುಟ್ಟುವಾಗ ಬೆತ್ತಲೆಯೆ; ಸತ್ತ ಮೇಲೆ ಬೂದಿಯಾಗುವುದು ಬೆತ್ತಲೆಯಲ್ಲೆ. ಹಾಗೆಂದು ಬದುಕಿನುದ್ದಕ್ಕೂ ಬೆತ್ತಲೆಯಾಗಿಯೇ ಇರಬೇಕೆ? ಹುಟ್ಟುವಾಗ ಹಣವನ್ನೇನು ತರಲಿಲ್ಲ; ಸಾಯುವಾಗ ಹಣವನ್ನು ಒಯ್ಯುವುದೂ ಇಲ್ಲ. ಸರಿಯೇ, ಆದರೆ ಹಾಗೆಂದು ಬದುಕಿನಲ್ಲಿ ಹಣವೇ ಬೇಡವೆ? ಹುಟ್ಟುವಾಗ ಇಲ್ಲದ ಎಷ್ಟೋ ಗುಣಗಳು ಬೆಳೆಯುತ್ತ ಬಂದಂತೆ ತೋರಿಕೊಳ್ಳುವುದಿಲ್ಲವೆ? ಸಾಯುವುದು ಖಂಡಿತವೆಂದು ಯಾರಾದರೂ ಊಟ, ನಿದ್ರೆ, ಕೆಲಸಗಳನ್ನು ಕೈಬಿಡುತ್ತಾರೆಯೆ?

ಮತ್ತೆ, ದಾಸರ ಮಾತಿನ ಸ್ವಾರಸ್ಯವೇನು? ಗಳಿಸುವ ಹಣವನ್ನು ತನ್ನದೆಂದು ಕಾಪಿಟ್ಟುಕೊಳ್ಳುವ ಕಾತರವಿರಬಾರದೆಂಬುದು. ನಾನು, ನನ್ನದು ಎಂಬ ಭಾವನೆಗಳೇ ಹುಟ್ಟುವಾಗ ಇರುವುದಿಲ್ಲ; ಬೆಳೆಯುತ್ತ ಅವೂ ಕಾಣಿಸಿಕೊಳ್ಳುತ್ತವೆ. ದೇಹವೇ ನಾನೆಂಬ ಅಭಿಮಾನವಾಗಲಿ, ಮನೆ-ಮಠ ಮಡದಿ-ಹಣ ಎಲ್ಲವೂ ನನ್ನದೆಂಬ ಮಮಕಾರವಾಗಲಿ ಬೆಳವಣಿಗೆಯ ಒಂದು ಹಂತದಲ್ಲಿ ಹುಟ್ಟಿಕೊಳ್ಳುವುವು. ಆದರೆ ಅವು ಸಾಯುವವರೆಗೂ ಕದಲುವುದೇ ಇಲ್ಲವಲ್ಲ.

ಹುಟ್ಟುವಾಗ ಇಲ್ಲದ್ದು, ಬೆಳೆಯುತ್ತ ಬಂದದ್ದು, ಮುಂದೆ ಎಂದಾದರೂ ಅಡಗುತ್ತ ಬಂದು, ಸಾಯುವ ವೇಳೆ ಬಂದಾಗ ಇಲ್ಲವಾಗಬೇಕಲ್ಲವೆ? ಆದರೆ ಹಾಗಾಗುವುದಿಲ್ಲ. ಹುಟ್ಟುವಾಗ ನಮ್ಮ ಬಯಕೆಯಿಂದೇನು ಹುಟ್ಟಲಿಲ್ಲ ತಾನೆ? ಸಾಯುವಾಗ ಮಾತ್ರ, ಇರಲೇಬೇಕೆಂಬ ಬಯಕೆ ಬೇರೂರಿಕೊಂಡಿದ್ದು ಸಾವು ಬೇಡೆನಿಸುತ್ತದೆಯಲ್ಲವೆ?

ಬದುಕೆನ್ನುವುದು ಹುಟ್ಟು-ಸಾವುಗಳ ನಡುವಣ ಒಂದು ಸ್ಥಿತಿ; ಉಸಿರಾಡುತ್ತಲಿದ್ದಾಗ ಮೈ, ಮನಸ್ಸುಗಳ ಬಯಕೆಗಳನ್ನು ತೀರಿಸಿಕೊಳ್ಳಲು ಹವಣಿಸುತ್ತೇವೆ, ಹೆಣಗಾಡುತ್ತೇವೆ. ಆಗ ಸಂಪತ್ತು, ಅನುಕೂಲ, ವೈಭವ, ಆಡಂಬರ, ಮೋಜು ಎಲ್ಲವೂ ಪ್ರಸಕ್ತವಾಗುತ್ತವೆ. ಮನುಷ್ಯ ಹಣದ ಹಿಂದೆ ಓಡುತ್ತಾನೆ. ಗಳಿಸಿದ್ದನ್ನು ತನ್ನದೇ ಎಂದು ತಬ್ಬಿಕೊಳ್ಳುತ್ತಾನೆ; ಅದು ಹೋದರೆ ತನ್ನ ಪ್ರಾಣವೇ ಹೋಯಿತೆಂಬಂತೆ ಗೋಳಾಡುತ್ತಾನೆ.

ತನ್ನದೆಂಬ ಕ್ಷೇತ್ರವನ್ನು ಹೆಂಡತಿ, ಮಕ್ಕಳು, ಮನೆ, ಭೂಮಿ, ಕೋಶ, ದೇಶ ಎಂದೆಲ್ಲ ಹರಡಿಕೊಳ್ಳುತ್ತಾನೆ. ಹುಟ್ಟುವಾಗಲೇನೋ ತಾನೆಂಬ ಅರಿವೂ ಇಲ್ಲ, ತನ್ನದೆಂಬ ಅಭಿಮಾನವೂ ಇಲ್ಲ; ಸತ್ತ ಮೇಲೂ ಇರುವುದಿಲ್ಲ. ನಡುವೆ ಮಾತ್ರ ತಾನು-ತನ್ನದು ಎಂಬ ಕಲ್ಪನೆ ಹೆಮ್ಮರವಾಗಿ ಬೆಳೆದುಕೊಳ್ಳುತ್ತದೆ.

ದಾಸರ ದೃಷ್ಟಿಯಲ್ಲಿ ಈ ಹೆಮ್ಮರವೇ ಬದುಕಿನ ದುಗುಡ-ದುಮ್ಮಾನಗಳಿಗೆ ಕಾರಣ. ತಾನು-ತನ್ನದು ಎಂಬುದನ್ನು ಮಿತಿಯಲ್ಲಿರಿಸಿಕೊಂಡರೆ ಒಳಿತು ಎಂಬುದು ಮೇಲಿನ ಮಾತಿನ ಇಂಗಿತ.

127. ಸಿರಿಯ ಸುರೆ

ಹಾಲುಗಡಲನ್ನು ಸುರರೂ ಅಸುರರೂ ಕಡೆದಾಗ ಸಿರಿಯೂ ಹೊರಬಂದಿತಂತೆ; ಸುರೆಯೂ ಹೊರಬಂದಿತಂತೆ.

ಇದೊಂದು ಪುರಾಣದ ಪ್ರತಿಮೆ.

ಇದರ ಸಂಕೇತವೇನೇ ಇರಲಿ; ವ್ಯವಹಾರದಲ್ಲೇನೋ ಇದರ ಅನ್ವಯ ಇದೆ.

ಪಂಪಭಾರತದಲ್ಲಿ ಇದರ ಪ್ರಸ್ತಾಪ ಬರುತ್ತದೆ. 'ಸಿರಿ ಕಳ್ಳೊಡವುಟ್ಟಿತೆಂಬುದು' ದಿಟವೆಂದು ಕವಿ ಕಾಣಿಸುತ್ತಾನೆ.

ಕಳ್ಳುಕುಡಿದವರ ಮಾತು ತೊದಲುವಂತೆಯೇ ಹಣವಂತನ ಮಾತೂ ಬಿಂಕದಿಂದ ತಡೆಯುವುದಂತೆ. ಇಬ್ಬರ ಮುಖದಲ್ಲೂ ಹೆಮ್ಮೆಯ ಗತ್ತು; ಬೇರೆಯವರನ್ನು ಕಡೆಗಣ್ಣಿಂದ ಕಾಣುವ ಠೀವಿ.

ಹಣವಂತನಿಗಾಗಲಿ, ಹೆಂಡಕುಡಿದವನಿಗಾಗಲಿ, ತಗ್ಗಿ, ಬಗ್ಗಿ, ನಡೆಯುವ ಅಗತ್ಯವೇನೂ ಕಾಣದು, ನಾಚಿಕೆಯೆಂಬುದು ಅವನ ಬಳಿ ಸುಳಿಯಲಾರದು.

'ನಾಣ್ಗೆಡೆಗುಡದಿರ್ಪುದೊಂದು.'

ಹೀಗೆ ಹೆಂಡವೂ ಹಣವೂ ಒಡಹುಟ್ಟಿದವರಂತೆ; ಒಡನಾಡಿಗಳಂತೆ.

ಹೆಂಡ ಕುಡಿದವರೆಂಬುದು ತಟ್ಟನೆ ಕಾಣಿಸಿಕೊಳ್ಳುವುದಿಲ್ಲವೆ? 'ಕಳ್ ಕುಡಿದವರಂದಮಿಂತು' ಎಂದು ಯಾರಾದರು ಕಂಡುಕೊಳ್ಳಬಹುದು.

ಇದೇ ರೀತಿ 'ಸಿರಿ ಸಾರ್ತರೆ' ಅದೇ ಅರಿವು ಬೇರೆಯವರಿಗೆ ತಿಳಿಯುತ್ತದೆ.

ಕವಿಯು ಕಳ್ಳು ಕುಡಿದವರನ್ನೂ ಕಂಡಿರಬಹುದು. ಸಿರಿವಂತರನ್ನೂ ಕಂಡೇ ಇರುತ್ತಾನೆ.

ಅವರ ಧೋರಣೆ, ಬೆಡಗು, ಬಿನ್ನಾಣಗಳಿಗೆ ಬೇಸತ್ತು ಈ ಮಾತುಗಳನ್ನಾಡಿರ ಬೇಕು. ಯಾರಾದರೂ ಬೇಸರಪಡುವವರೇ.

ಕವಿಯು ಚೇತನಕ್ಕೆ ಗಾಸಿ ಮಾಡುವಂತೆ ಯಾರೋ ಸಿರಿವಂತ ನಡೆದುಕೊಂಡಿರಲೂಬಹುದು. ಈಗ 'ಸಂದೆಯಂಬಡದೆ' ಅರಿತುಕೊಂಡೆನೆಂದು ಕವಿಯ ಒಕ್ಕಣೆಯೇ ಇದೆ. ಆದರೆ 'ಸಾಮಾನ್ಯೀಕರಣ'ಕ್ಕೂ ಸಲ್ಲುವ ಪ್ರಸಂಗ ಇಂಥದು.

ಧನವಿದ್ದಲ್ಲಿ ನಯ ಇರುವುದು ಕಷ್ಟ; ಇನ್ನು ವಿನಯವನ್ನಂತೂ ಕೇಳಲೇಬೇಡಿ.

ನಯವಿನಯಗಳು ಅವರವರ ಸ್ವಭಾವದಲ್ಲಿ ಬಂದುವೆಂಬುದು ದಿಟ. ಆದರೆ ಐಶ್ವರ್ಯ ಬಂದೊದಗಿದಾಗ ಆಗುವ ಮಾರ್ಪಾಟೂ ದಿಟವೇ, ಸ್ವಭಾವವೇ ಬದಲಾಗುತ್ತದೆ.

ಸಾಧಾರಣವಾಗಿ ಸ್ವಭಾವವೆಂಬುದು ಹುಟ್ಟುಗುಣ. ಬೇಗನೆ ಬದಲಾಗದು. ಅದು ಬದಲಾಯಿತೆಂದರೆ ಐಶ್ವರ್ಯದ ಬಲ ಎಷ್ಟಿದ್ದೀತು? ಹೊರಗಿನದಾದರೂ ಒಳಗಿನದನ್ನು ಕದಲಿಸುವುದಿಲ್ಲವೆ?

ಐಶ್ವರ್ಯ ಬರಬಾರದೆಂದಲ್ಲ; ಯಾರು ಬೇಡವೆಂದಾರು? ಆದರೆ ಅದು ಬಂದಾಗ ತಲೆ ತಿರುಗಬಾರದು ಅಷ್ಟೆ. ಅಷ್ಟು ಎಚ್ಚರ ಇದ್ದರೆ ಸಾಕು.

ಇದಕ್ಕೆ ಕೊರತೆಯೆನ್ನುವುದು ಬಹುಮಂದಿ ಸಿರಿವಂತರಿಗೆ ತಿಳಿಯುವುದಿಲ್ಲ.

128. 'ಸಿಕ್ಕಿದರೆ ಸೀರುಂಡೆ'

ನಮ್ಮದು ಹಳ್ಳಿಗಳ ದೇಶ, ಹಳ್ಳಿಯ ಬದುಕು ಬೇಸಾಯವನ್ನವಲಂಬಿಸಿದ್ದು. ಸಾವಿರಾರು ವರ್ಷಗಳಿಂದ ಬೇಸಾಯವನ್ನೇ ಪ್ರಮುಖವಾಗಿ ಹಿಡಿದು ನಮ್ಮ ಜನ ಬದುಕಿದ್ದರು, ನೆಮ್ಮದಿಯಿಂದಲೂ ಇದ್ದರು.

ಆದರೆ ನಲವತ್ತು ವರ್ಷಗಳಿಂದ ನಮ್ಮ ಆಡಳಿತದ ಧೋರಣೆ, ತಜ್ಞರ ಸಲಹೆಗಳಂತೆ ಬೇಸಾಯವನ್ನು ಕಡೆಗಣಿಸಿ, ಭಾರೀ ಕೈಗಾರಿಕೆಗಳತ್ತ ಗಮನ ಹರಿಸಿತು. ವಿದೇಶೀ ತಾಂತ್ರಿಕ ವಿಜ್ಞಾನವನ್ನು ಇಲ್ಲಿ ಬೇರೂರಿಸುವ ಸಾಹಸ ತೋರಿಕೊಂಡಿತು.

ಇದರಿಂದಾಗಿ ಪಟ್ಟಣಗಳು ಬೆಳೆದವು, ಹಳ್ಳಿಗಳು ಹಾಳಾದುವು.

ಬೇಸಾಯದಿಂದ ಕೈಗಾರಿಕೆಯ ಕಡೆ ಜನ ಹೊರಳತೊಡಗಿದಾಗ ಹಣದ ಪಾತ್ರ ಹೆಚ್ಚಿತು. ಹೆಚ್ಚು ಹಣವನ್ನು ಗಳಿಸುವ ಗೀಳು ವ್ಯಾಪಕವಾಯಿತು.

ಹಳ್ಳಿಯಲ್ಲಿ ಎಂಟು ಜನರಿಗೆ ಕೆಲಸ ಇರುವಲ್ಲಿ, ಕೈಗಾರಿಕೆಗೆ ಒಬ್ಬ ಸಾಕು.

ಆರು ಜನ ಹಳ್ಳಿಯನ್ನು ಬಿಟ್ಟು ಹಣದ ಆಸೆಗಾಗಿ, ಕೈಗಾರಿಕೆಯಲ್ಲಿ ಕೆಲಸಕ್ಕಾಗಿ ಪಟ್ಟಣಕ್ಕೆ ಬಂದು ಸೇರಿದರೆನ್ನಿ.

ಆರು ಜನರಲ್ಲಿ ಒಬ್ಬನಿಗೆ ಕೈಗಾರಿಕೆಯಲ್ಲಿ ಉದ್ಯೋಗ ದೊರೆಯಿತೆನ್ನಿ; ಉಳಿದ ಐವರು ಪಟ್ಟಣದಲ್ಲಿ ನಿರುದ್ಯೋಗಿಗಳಾಗಿ ಅಲೆದಾಡುವರು. ಹಳ್ಳಿಯಲ್ಲಿ ಇಬ್ಬರೇ ಉಳಿದುಕೊಂಡರೆ ಬೇಸಾಯದ ಗತಿಯೇನು? ಇನ್ನು ಆರು ಜನರನ್ನು ಎಲ್ಲಿಂದ ತರುವುದು?

ಪಟ್ಟಣ ಬೆಳೆದಂತೆ, ಕೈಗಾರಿಕೆಗಳು ಹೆಚ್ಚಿದಂತೆ ನಿರುದ್ಯೋಗವೂ ಹೆಚ್ಚುವುದು ತಪ್ಪಿದ್ದಲ್ಲ. ಭಾರೀ ಕೈಗಾರಿಕೆಗಳು ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಂಡ ಕಾರಣವೇ ಇದು. ಉದ್ಯೋಗಿಗಳ ಅಗತ್ಯವನ್ನು ಕಡಮೆ ಮಾಡುವುದು.

ನಮ್ಮ ದೇಶದಲ್ಲಿ ಜನಸಂಖ್ಯೆಯನ್ನು ಕುರಿತು ಎಲ್ಲರೂ ದೂರುವರಷ್ಟೆ? ಜನಸಂಖ್ಯೆ ಏರದಂತೆ ತಡೆಗಟ್ಟುವ ಹವಣಿಕೆಯೂ ಇದ್ದದ್ದೇ.

ಇದು ದಿಟವೇ; ಜನಸಂಖ್ಯೆಯೇನೋ ಇತಿಮಿತಿಯಿಲ್ಲದೆ ಹದ್ದುಮೀರಿ ಬೆಳೆಯುತ್ತಿದೆ. ಆದರೆ ನಿರುದ್ಯೋಗದ ಸಮಸ್ಯೆಯೂ ಇದರಂತೆಯೇ ಆತಂಕಕಾರಿಯಾದುದಲ್ಲವೆ?

ನಿರುದ್ಯೋಗದ ಪರಿಹಾರ ಜನಸಂಖ್ಯೆಯನ್ನು ಮಿತಗೊಳಿಸಿದ ಮಾತ್ರಕ್ಕೆ ಆಗುವಂಥದಲ್ಲ. ಇಂದಿನ ಆರ್ಥಿಕ ವ್ಯವಸ್ಥೆಯೇ ನಿರುದ್ಯೋಗಕ್ಕೆ ಕಾರಣವೆಂದಮೇಲೆ ಈ ಆರ್ಥಿಕ ವ್ಯವಸ್ಥೆಯನ್ನು ಮಾರ್ಪಡಿಸಿದರೆ ಮಾತ್ರ ಸಮಸ್ಯೆ ಬಗೆಹರಿದೀತು ಅಲ್ಲವೆ?

ಆ ಆರ್ಥಿಕ ವ್ಯವಸ್ಥೆ ನಲವತ್ತು ವರ್ಷಗಳಿಂದಲೂ ಆಡಳಿತದ ಉದಾರಾಶ್ರಯದಿಂದ, ರಾಜಕಾರಣಿಗಳ ಒತ್ತಾಸೆಯಿಂದ, ವಾಣಿಜ್ಯಪಟ್ಟಭದ್ರರ ಲೋಭದಿಂದ ಜನಸಾಮಾನ್ಯರ ಹಿತವನ್ನು ಅಲಕ್ಷಿಸಿಯೇ ಬೆಳೆದುಬಂದಿದೆ. ಕೆಲವು ಪ್ರಬಲ 'ಲಾಬಿ'ಗಳ ಹಿತರಕ್ಷಣೆಯಾದರೆ ಸಾಕು ಎನ್ನುವ ಮನೋಭಾವ ಮೇಲೆದ್ದುಕೊಂಡಂತೆ ತೋರುತ್ತದೆ.

'ಸಿಕ್ಕಿದವರಿಗೆ ಸೀರುಂಡೆ!' ಸಿಗದವನ ಪಾಡು ನಮಗೇಕೆ? ಆರ್ಥಿಕ ವ್ಯವಸ್ಥೆಯ ಮುತ್ಸದ್ದಿಗಳಲ್ಲಿ ಬಹುಮಂದಿ ಸೀರುಂಡೆಯಲ್ಲಿ ಪಾಲುದಾರರೇ. ಸೀರುಂಡೆಯನ್ನು ಪಡೆದುಕೊಂಡವರು, ಸೀರುಂಡೆಗಾಗಿ ಕೈಚಾಚುವವರು, ಸೀರುಂಡೆಯನ್ನು ಬಯಸುವವರು ಎಲ್ಲರೂ ಸೇರಿಕೊಂಡು ಮೈದಳೆದ ಆರ್ಥಿಕ ವ್ಯವಸ್ಥೆ ಇಂದಿನದು.

ಸೀರುಂಡೆಯ ಕಲ್ಪನೆಯೇ ಇಲ್ಲದವರು, ಅದನ್ನು ಕನಸಿನಲ್ಲೂ ಕಾಣದವರು, ಸೀರುಂಡೆಯನ್ನು ಎಂತಾದರೂ ಲಪಟಾಯಿಸುವ ಬುದ್ಧಿಯಿಲ್ಲದವರು ಇವರೇ ಬಹುಸಂಖ್ಯಾತರು. ಶ್ರೀಸಾಮಾನ್ಯರು ಈ ಆರ್ಥಿಕ ವ್ಯವಸ್ಥೆಯ ಯಜ್ಞಪಶುಗಳು.

129. ಯಾರ ಅವಲಂಬನೆ?

ವಾಣಿಜ್ಯದಲ್ಲಿ ಈಗ ಮುಖ್ಯವಾಗಿರುವ ಪ್ರಶ್ನೆ, ನಮ್ಮ ದೇಶವು ಹೊರದೇಶಗಳನ್ನವಲಂಬಿಸದೆ ಮುಂದುವರಿಯುವುದು ಸಾಧ್ಯವೆ, ಎಂಬುದು.

ನಮ್ಮ ದೇಶದ ಆರ್ಥಿಕ ಪ್ರಗತಿಯ ಹೆಸರಿನಲ್ಲಿ ನಮ್ಮ ಜನ ಹೊತ್ತಿರುವ ವಿದೇಶೀ ಸಾಲ ಒಂದು ಲಕ್ಷ ಎಂಬತ್ತು ಸಾವಿರ ಕೋಟಿಗಿಂತ ಹೆಚ್ಚು!

ಈ ಸಾಲಕ್ಕೆ ಸರಿಯಾಗಿ ನಮಗೆ ತೀರಿಸುವ ಆರ್ಥಿಕ ಶಕ್ತಿಯಾದರೂ ಈ ಸಾಲದಿಂದ ಒದಗಿದೆಯೆ ಎಂದರೆ, ಅದಿಲ್ಲ. ದೇಶದ ಸಂಪತ್ತು ಹೆಚ್ಚಿದೆಯೇ? ಸ್ವಾವಲಂಬನೆ ಸಾಧ್ಯವಾಗಿದೆಯೇ? ವಿದೇಶೀ ಮಾರುಕಟ್ಟೆಯಲ್ಲಿ ಯಶಸ್ವಿಯಾಗಿ ಸ್ಪರ್ಧಿಸಲು ನಮಗಾದೀತೇ? ಇವಕ್ಕೆಲ್ಲ ಇಲ್ಲವೆಂದೇ ಉತ್ತರ.

ಇಷ್ಟು ಕಾಲ ಹೊರದೇಶಗಳ ನೆರವನ್ನಾಶ್ರಯಿಸಿಯೇ ಇದ್ದುಕೊಂಡು ಎಷ್ಟು ಪ್ರಗತಿ ಸಾಧಿಸಿದ್ದೇವೆ? ಇನ್ನಾದರೂ ನಮ್ಮ ಕಾಲ ಮೇಲೆ ನಾವು ನಿಲ್ಲುವ ಹವಣಿಕೆ ಮಾಡಬಾರದೆ?

ಆರ್ಥಿಕ ತಜ್ಞರೆನಿಸಿಕೊಂಡ ನಮ್ಮ ಜನ ವಿದೇಶಿ ಗರಡಿಯಲ್ಲಿ ಮಣ್ಣು ಹಾಕಿದವರು, ಅವರ ಕಣ್ಣೆದುರು ನಿಲ್ಲುವುದು ವಿದೇಶಿ ಹೆಗ್ಗಳಿಕೆಯೇ. ನಮ್ಮವರ ಮೇಲೆ ಅವರಿಗೆ ವಿಶ್ವಾಸ ಕಡಮೆ.

ನಮ್ಮ ಬೇಸಾಯಕ್ಕೆ ವಿದೇಶದ ತಂತ್ರವಿಜ್ಞಾನವನ್ನೇ ಅನ್ವಯಿಸಬೇಕೆಂಬ ನಿಲುವು ಅವರದ್ದು. ಬಹುರಾಷ್ಟ್ರೀಯ ಸಂಸ್ಥೆಗಳ ಮೋಡಿಗೆ ಮರುಳಾಗಿ ನಮ್ಮ ದೇಶವನ್ನು ಆ ಸಂಸ್ಥೆಗಳಿಗೆ ಹುಲುಸಾದ ಮಾರುಕಟ್ಟೆಯಾಗಿ ಮಾರ್ಪಡಿಸಬೇಕೆನ್ನುತ್ತಿದ್ದಾರೆ.

ನಮ್ಮ ಉತ್ಪಾದನಾಶಕ್ತಿಯೂ ಮೊಟಕಾಗುತ್ತಿದೆ. ಉತ್ಸಾಹವೂ ಇಳಿಯುತ್ತಿದೆ. ನಮ್ಮ ದೇಶದ ಸಂಪನ್ಮೂಲವನ್ನು ಲೂಟಿ ಮಾಡಲು ಒಂದು ಸಾವಿರಕ್ಕಿಂತ ಹೆಚ್ಚು ಬಹುರಾಷ್ಟ್ರೀಯ ಕಂಪೆನಿಗಳು ಕಾದಿವೆ. ನಮ್ಮ ಆರ್ಥಿಕ ಸ್ವಾತಂತ್ರ್ಯವಿರುವುದು ಹೆಸರಿಗೆ ಮಾತ್ರ; ದಿಟವಾಗಿ ನಮಗಿರುವುದು ದಾಸ್ಯವೇ.

ಈ ಬಹುರಾಷ್ಟ್ರೀಯ ಕಂಪೆನಿಗಳ ಧೋರಣೆಯನ್ನು ನೋಡಿದರೆ ಅವಕ್ಕೆ ನಮ್ಮ ದೇಶ ಕೀಳುದರ್ಜೆಯ ಜನರದ್ದು ಎಂಬ ಭಾವನೆ ರೂಢಮೂಲವಾಗಿರುವಂತೆ ತೋರುತ್ತದೆ.

ನಿದರ್ಶನಕ್ಕೆ, ನಮ್ಮ ದೇಶದಲ್ಲಿ ಇಂಥ ಕಂಪೆನಿಗಳು ತಯಾರು ಮಾಡಿದ ಐನೂರ ಇಪ್ಪತ್ತು ಔಷಧಿಗಳು ಅಂಗಡಿಗಳಲ್ಲಿ ಮಾರಾಟಕ್ಕಿವೆ; ಮೂರು ಸಾವಿರ ಬೇರೆ ಬೇರೆ ಹೆಸರುಗಳಲ್ಲಿ ಈ ಔಷಧಿಗಳು ನಮ್ಮ ಜನರ ಶರೀರದೊಳಕ್ಕೆ ಸೇರುತ್ತಿವೆ.

ಇವುಗಳಲ್ಲಿ ಬಹುಸಂಖ್ಯೆಯು ಔಷಧಿಗಳು ಹೊರದೇಶಗಳಲ್ಲಿ ನಿಷೇಧಿಸಲ್ಪಟ್ಟಿವೆ. ಅವುಗಳ ತಯಾರಿಕೆಯನ್ನೂ ಮಾರಾಟವನ್ನೂ ಹೊರದೇಶಗಳಲ್ಲಿ ತಡೆಗಟ್ಟಿದ್ದಾರೆ. ಅವುಗಳಿಂದ ಕ್ಯಾನ್ಸರ್, ಪರಲಿಸಿಸ್, ಅಂಧತ್ವ, ವಿಕಲಾಂಗತ್ವ ಮೊದಲಾದ ತೊಂದರೆಗಳು ಉಂಟಾಗುವುದನ್ನು ವಿಜ್ಞಾನಿಗಳೇ ಕಂಡು ಹಿಡಿದಿದ್ದಾರೆ. ಆ ದೇಶಗಳ ಪತ್ರಿಕೆಗಳಲ್ಲಿ ಇದನ್ನು ಪ್ರಕಟಿಸಿಯೂ ಇದ್ದಾರೆ.

ಆದರೆ ಯಾವೊಂದು ಆತಂಕವಾಗಲಿ ಭೀತಿಯಾಗಲಿ ಇಲ್ಲದೆ ನಮ್ಮ ಜನರ ಪಾಲಿಗೆ ಇವನ್ನು ಧಾರಾಳವಾಗಿ ಸಲ್ಲಿಸುತ್ತಿದ್ದಾರೆ. ಅಲ್ಲಿ ಸಲ್ಲದುದು ಇಲ್ಲಿ ಸಲ್ಲುವುದು ಎಂದರೇನರ್ಥ? ನಮ್ಮ ಜನ ದಡ್ಡರು, ಅವರ ಜೀವ ಅಷ್ಟೇನೂ ಬೆಲೆಬಾಳುವುದಲ್ಲ, ಅವರ ಆರೋಗ್ಯವಾಗಲಿ ಅನಾರೋಗ್ಯವಾಗಲಿ ಯಾವ ಲೆಕ್ಕಕ್ಕೂ ಇಲ್ಲ, ಬಹುರಾಷ್ಟ್ರೀಯ ಕಂಪೆನಿಯವರಿಗೆ ನಷ್ಟವಾಗಬಾರದು; ಅವರ ಆರ್ಥಿಕ ವ್ಯವಸ್ಥೆಯಲ್ಲಿ ಏರುಪೇರಾಗ ಬಾರದು–ಅದು ಮುಖ್ಯ.

ಇಂಥ ಮನೋಧರ್ಮವುಳ್ಳ ಹೊರದೇಶದ ಉದ್ಯಮಗಳನ್ನೂ ತಂತ್ರಜ್ಞಾನ ವನ್ನೂ ಅವಲಂಬಿಸಿ ನಾವು ಮುಂದುವರಿಯುವ ಸಾಧ್ಯತೆಯಿದೆಯೆ?

130. ದಾನದಿಂದ ಲಾಭ

ಉಳ್ಳವರು ದಾನ ಮಾಡುವುದು ವಾಡಿಕೆ.

ತಮ್ಮಲ್ಲಿ ತಮ್ಮ ಅಗತ್ಯಕ್ಕಿಂತ ಹೆಚ್ಚು ಧನವಿದ್ದರೆ, ಅದನ್ನು ಬೇಡುವವರಿಗೆ, ಬಯಸುವವರಿಗೆ ನೀಡುವ ಮನಸ್ಸು ಬರುವುದು ಸಹಜ.

ಎಲ್ಲರಿಗೂ ಬರುವುದೆಂದಲ್ಲ. ಕೆಲವರಿಗೆ ಬಂದರೆ ಸೋಜಿಗವಲ್ಲ. ತಾನೂ ಬದುಕಬೇಕು, ಇತರರೂ ಬದುಕಬೇಕು ಎನ್ನುವ ಬುದ್ಧಿಯಿದ್ದರೆ ಆಶ್ಚರ್ಯ ಪಡಬೇಕೆ? ಆತಂಕ ಪಡಬೇಕೆ?

ಆದರೆ ದಾನ ಮಾಡುವವರೆಲ್ಲ ತಮ್ಮ ಹಣವನ್ನೇ ಪರೋಪಕಾರಕ್ಕಾಗಿ ವಿನಿಯೋಗಿಸುವುದಿಲ್ಲ! ತಮ್ಮ ಗಂಟು ಕರಗದೆ ಇಡಿಯಾಗಿ ಇದ್ದೇ ಇರುತ್ತದೆ; ಬೇರೆಯವರ ಹಣವನ್ನು ದಾನಮಾಡಿ ಇವರು ಹೆಸರು ಮಾಡಿಕೊಳ್ಳುತ್ತಾರೆ. ಇಂಥ ದಾನಿಗಳೂ ಇರುವರಲ್ಲವೆ?

ದಾನಕ್ಕೊಂದು ಬೆಲೆ ಸಮಾಜದಲ್ಲಿ ಇದೆಯಾಗಿ, ದಾನದ ಬುದ್ಧಿ ಇಲ್ಲದಿದ್ದವರೂ ದಾನ ಮಾಡಲು ಹೊರಡುತ್ತಾರೆ. ಇದ್ದುದನ್ನು ದಾನ ಮಾಡಿ ಬಡವರಾಗಲು ಒಪ್ಪುವ ಹೆಡ್ಡರಲ್ಲ ಇವರು.

ತಮ್ಮಲ್ಲಿದ್ದುದು ಕೈಬಿಡಬಾರದು; ದಾನ ಮಾಡಿದಂತೆ ಕಾಣಿಸಿಕೊಳ್ಳಲೂಬೇಕು. ಇವೆರಡರ ಸಮನ್ವಯ ಸಾಧನೆಯಲ್ಲಿ ತಮ್ಮ ಬುದ್ಧಿಯನ್ನು, ಹಣವನ್ನಲ್ಲ, ವೆಚ್ಚ ಮಾಡುತ್ತಾರೆ.

ಕೆಲವೊಮ್ಮೆ ದಾನದಿಂದ ಬರಿಯ ಹೆಸರಲ್ಲದೆ ದಿಟವಾದ ಪ್ರಯೋಜನವೂ ಇರುತ್ತದೆಯೆನ್ನಿ. ಹಾಗೆಂದೇ ಲಾಭದ ದೃಷ್ಟಿಯಿಂದ ಉದ್ಯಮಗಳು ದಾನ ಮಾಡುವುದುಂಟು. ಅದು ಪ್ರತ್ಯಕ್ಷವಾದ ಲಾಭವಲ್ಲ, ಪರೋಕ್ಷವಾದುದು.

'ಕೊಟ್ಟದ್ದು ತನಗೆ' ಎಂದು ಸರ್ವಜ್ಞ ಹೇಳಲಿಲ್ಲವೆ?

ಕೊಟ್ಟದ್ದು ಎರಡುಪಟ್ಟಾಗಿ ಮರಳಿಬಂದರೆ ಯಾರನ್ನು ಕೆಡಿಸಿತು?

ಶಾಸ್ತ್ರವಾದರೂ ಹೇಳುವುದೇನು? ದಾನದಿಂದ ಪುಣ್ಯ ಬರುತ್ತದೆ, ಪುಣ್ಯದಿಂದ ಸದ್ಗತಿ ಬರುತ್ತದೆ ಎಂದಲ್ಲವೆ?

ಅಲ್ಲಿಯೂ ಲಾಭದ ಆಸೆಯೇ ಇರುವುದು. ಇಲ್ಲಿ ಒಂದು ರೂಪಾಯಿ ದಕ್ಷಿಣೆಯಿತ್ತರೆ, ಅದರಿಂದ ಮುಂದೆ ಇಲ್ಲಿಯೋ ಮತ್ತೆಲ್ಲಿಯೋ ಅಕ್ಷಯನಿಧಿ ದೊರಕುವ ನಿರೀಕ್ಷೆ. ಅಂಥ ನಿರೀಕ್ಷೆಯಿಲ್ಲದಿದ್ದರೆ ದಾನಧರ್ಮಕ್ಕೆ ಬಾಯಿಬಿಡುವವರು ಯಾರು? ಹಣ ಬಿಚ್ಚುವವರು ಯಾರು?

ಉದ್ಯಮಗಳಲ್ಲಿ ಪುಣ್ಯದ ಹಂಬಲವೇನಿರದು. ಎಷ್ಟಾದರೂ ಅದೊಂದು ಕಲ್ಪನೆಯಷ್ಟೇ ಅಲ್ಲವೆ? ಅದನ್ನು ಕಂಡಿರುವವರು ಯಾರು? ಹಿಡಿದುಕೊಂಡವರು ಯಾರು?

ದಾನದಿಂದ ನೇರವಾಗಿ ಅಕ್ಷಯನಿಧಿ ದೊರಕಬೇಕೆಂಬ ಎಣಿಕೆ ಉದ್ಯಮಗಳದ್ದು.

ದಾನದಿಂದ ಪುಣ್ಯ, ಪುಣ್ಯದಿಂದ ಲಾಭ ಎನ್ನುವುದಕ್ಕೆ ಬದಲಾಗಿ ದಾನದಿಂದ ಹೆಸರು, ಹೆಸರಿನಿಂದ ಲಾಭ ಎಂದಾದರೆ ನಷ್ಟವೇನು?

ಹೆಸರು ಮಾಡಿಕೊಂಡ ಉದ್ಯಮಗಳು ಲಾಭ ಗಳಿಸುವುದೇನೋ ಎಲ್ಲರಿಗೂ ತಿಳಿದದ್ದು; ಹೆಸರಿಗೆ ಮಾರುಹೋಗುವ ಮಂದಿಯಿಲ್ಲವೆ?

ಆದರೆ ಇಂಥ ಉದ್ಯಮಗಳು ದಾನವನ್ನೂ ಮಾಡಿ ಹೆಸರು ಪಡೆಯುವುದು ಕಡಮೆಯೇ. ಹೆಸರಿನಿಂದ ಲಾಭ ಎನ್ನುವುದು ದಿಟವಾದರೂ, ದಾನದಿಂದ ಹೆಸರು ಎನ್ನುವುದು ಅಷ್ಟೇ ದಿಟವಲ್ಲ.

ಆದರೂ ಅದೊಂದು ಪ್ರಯತ್ನವೆನ್ನಿ!

131. ಆಡಳಿತದ ಆತಂಕಗಳು

ರಾಮಾಯಣದಲ್ಲಿ ಆಡಳಿತಗಾರರನ್ನು ಕುರಿತಂತೆ ಕೆಲವು ಕಿವಿಮಾತುಗಳಿವೆ. ಅವು ವಾಣಿಜ್ಯಕ್ಷೇತ್ರ, ಉದ್ಯಮ ಪ್ರಪಂಚಗಳಲ್ಲೂ ಅನ್ವಯವಾಗುತ್ತವೆ.

ಈ ಮಾತುಗಳಲ್ಲಿ ಮಂತ್ರಾಲೋಚನೆಯನ್ನು ಕುರಿತದ್ದೊಂದು ಆಡಳಿತವನ್ನು ನಿರ್ವಹಿಸುವವನು ಆಲೋಚನೆ ಮಾಡಬೇಕು.

ಆಡಳಿತದ ಪ್ರಕಾರಗಳು ಯಾವುವು, ಪ್ರಯೋಜನಗಳು ಎಂಥವು, ಅಡಚಣೆಗಳು ಏನೇನು, ಸಮಸ್ಯೆಗಳು ಯಾವ ರೀತಿಯವು, ಪರಿಹಾರದ ಕ್ರಮವೇನು ಇವೇ ಮೊದಲಾದ ವಿವರಗಳನ್ನು ಕುರಿತಂತೆ ಚಿಂತೆ ಮಾಡಬೇಡವೆ?

ಆಡಳಿತದಿಂದ ಸ್ವಾರ್ಥ, ಪರಾರ್ಥ ಎರಡೂ ಕೈಗೂಡಬೇಕು. ಅದರಲ್ಲಿ ಸೇರುವ ಜನರನ್ನೂ ನಿರ್ವಹಿಸಬೇಕು, ಅದರಿಂದ ಪ್ರಯೋಜನವನ್ನು ಪಡೆದುಕೊಳ್ಳುವವರಿಗೂ ನೆರವಾಗಬೇಕು.

ಆಡಳಿತಗಾರರಲ್ಲಿ ಕಾಣುವ ಒಂದು ದೋಷವೆಂದರೆ 'ಏಕಚಿಂತನಮರ್ಥಾನಾಂ' ಎಂದು ರಾಮಾಯಣ ಹೇಳುತ್ತದೆ.

ತಾನೊಬ್ಬನೇ ಎಲ್ಲವನ್ನೂ ಆಲೋಚನೆ ಮಾಡುವುದು, ಮತ್ತೊಬ್ಬರ ನೆರವನ್ನು ಪಡೆದುಕೊಳ್ಳದಿರುವುದು ಆಡಳಿತದಲ್ಲಿ ತಪ್ಪಾಗುತ್ತದೆ. ಎಂಥ ಬುದ್ಧಿವಂತನಾದರೂ ಅವನಿಗೆ ಎಲ್ಲವೂ ತಿಳಿದಿರುವುದಿಲ್ಲ, ತನ್ನ ಮನಸ್ಸಿಗೆ ಬಂದುದನ್ನೇ ಮಾಡುವುದು ತನಗಾಗಲಿ ಇತರರಿಗಾಗಲಿ ಹಿತವಲ್ಲ.

ಆಡಳಿತಗಾರರು ಸಾಮಾನ್ಯವಾಗಿ ತಪ್ಪು ಮಾಡುವ ಎಡೆಯನ್ನೂ ರಾಮಾಯಣ ಕಾಣಿಸುತ್ತದೆ. 'ಅನರ್ಥಜ್ಞೈಶ್ಚ ಮಂತ್ರಣಂ'.

ತಾನೇ ಆಲೋಚನೆ ಮಾಡದಿರುವುದರ ಜೊತೆಗೆ, ತಿಳಿಯದೆ, ಆಲೋಚನೆ ಮಾಡದೆ ಸಲಹೆಗಳನ್ನು ಕೊಡುವಂಥವರನ್ನು ತನ್ನ ಸುತ್ತ ಕೂಡಿಸಿಕೊಂಡು ಅವರ ಮಾತನ್ನು ಕೇಳುವುದು, ಅವರ ಸ್ವಾರ್ಥಕ್ಕೆ ಆಡಳಿತವನ್ನು ಬಲಿಗೊಡುವುದು.

ಆಡಳಿತಗಾರನಿಗೆ ಒಳ್ಳೆಯ ಆಲೋಚನೆಯೇ ಬರಬಹುದು, ತಜ್ಞರ ಸಲಹೆಗಳನ್ನೇ ಕೇಳಿರಬಹುದು, ಉದ್ದೇಶವೂ ಒಳ್ಳೆಯದಾಗಿರಬಹುದು, ಆ ಕೆಲಸವನ್ನು ಕೈಗೂಡಿಸುವ ಶಕ್ತಿಯೂ ಇರಬಹುದು. ಆದರೆ 'ನಿಶ್ಚಿತಾನಾಂ ಅನಾರಂಭಂ'.

ಮಾಡಬೇಕೆಂದುಕೊಂಡುದನ್ನು ಒಡನೆಯೇ ಮಾಡಬೇಕು. ಕೆಲಸಕ್ಕೆ ತೊಡಗುವುದೇ ಇಷ್ಟು ಕಷ್ಟವಾದರೆ ಅದನ್ನು ಮುಗಿಸುವುದಾದರೂ ಹೇಗೆ? ಯಾವಾಗ?

ಅಡಿಯಿಡಲು ಹಿಂದೆ-ಮುಂದೆ ನೋಡಿ, ಮೀನ-ಮೇಷ ಮಾಟಿ, ಅಳುಕಿ, ಆಳಕ್ಕಿಳಿದರೆ ಅವರು ಓಡುವ ಸಂಭವವಿದೆಯೆ?ಯಾವ ಒಳ್ಳೆಯ ಕೆಲಸವನ್ನಾದರೂ

ಮೊದಲು ಮಾಡಬೇಕು ತಾನೆ? ಸಂಕ್ರಮಣದ ಪುಣ್ಯಸ್ನಾನವು ಸಂಕಲ್ಪದಲ್ಲೇ ಮುಗಿದುಹೋದರೆ ಹೇಗೆ?

ಸಂಕ್ರಮಣದ ಗಳಿಗೆ ಕಳೆದು ಹೋದರೆ ಮಾಡಿದ ಸ್ನಾನ ಪುಣ್ಯಸ್ನಾನ ವಾಗುವುದಿಲ್ಲ. ಬರಿಯ ಸಂಕಲ್ಪವನ್ನು ಮಾಡಿದ್ದರಿಂದ ಸ್ನಾನದ ಫಲ ಸಿಗುವುದಿಲ್ಲ.

ಯಾವ ಉದ್ಯಮದಲ್ಲಾದರೂ ಸಮಯಪ್ರಜ್ಞೆ ತುಂಬ ಮುಖ್ಯ. ಆಗ ಮಾಡಬೇಕಾದುದನ್ನು ಆಗಲೇ ಮಾಡಬೇಕು. ಯಾವಾಗಲೋ ಮಾಡೋಣವೆಂದು ಮುಂದೂಡಿದರೆ, ಮುಂದೆ ಅದನ್ನು ಮಾಡಬೇಕಾದ ಅಗತ್ಯವೇ ಇಲ್ಲವಾಗಬಹುದು.

ಅಗತ್ಯವಿಲ್ಲದಿದ್ದಾಗ ಮಾಡಿದರೆ, ಅದರಿಂದ ತೊಂದರೆಯೇ ಹೆಚ್ಚು! ಆಡಳಿತಗಾರರು ರಾಜಕಾರಣದಲ್ಲೇ ಇರಲಿ, ಉದ್ಯಮದಲ್ಲೇ ಇರಲಿ, ಆರ್ಥಿಕ ವ್ಯವಸ್ಥೆಯಲ್ಲೇ ಇರಲಿ, ರಾಮಾಯಣದ ಈ ಮೂರು ಕಿವಿಮಾತುಗಳನ್ನು ಕೇಳಿಸಿಕೊಂಡರೆ ನಮಗೆಲ್ಲ ಒಳಿತು.

ಬಿಡಬೇಕಾದವು ಇವು ಮೂರು—'ಏಕಚಿಂತನಮರ್ಥಾನಾಂ', 'ಅನರ್ಥಜ್ಞೈಶ್ಚ ಮಂತ್ರಣಂ' ಮತ್ತು 'ನಿಶ್ಚಿತಾನಾಮನಾರಂಭಂ'.

132. ಹಣದ ಹಂಬಲ

ಹಣವನ್ನು ಮಾತ್ರ ಬಯಸುವವರ ಸ್ವಭಾವವೇ ಬೇರೆಯಾಗಿರುತ್ತದೆ.

ಗರ್ವ, ಠೇಂಕಾರಗಳು ಅವರಿಗಿರಲಾರದು; ಬಿಗುಮಾನವಿದ್ದರೆ ವರಮಾನವೂ ಕಡಮೆ.

ಇತರರನ್ನು ಅನುಸರಿಸಿ, ಅವರ ಮರ್ಜಿ ಹಿಡಿದು, ಅವರು ಒದಗಿಸ ಬಹುದಾದ ಅಪಮಾನಗಳನ್ನೆಲ್ಲ ಸಹಿಸಿಕೊಂಡು ಹಣವನ್ನು ಸಂಪಾದಿಸುವರು.

ನೀರು ಬೇಕೆನ್ನುವವನು ಬಾವಿಗೆ ಇಳಿಯುವುದಿಲ್ಲವೆ? ನೀರೇ ಮೇಲೆ ಬರಲಿ ಎಂದರಾದೀತೆ?

ಹಾಗೆಯೇ ಹಣದ ಮೇಲೇ ಕಣ್ಣುಳ್ಳವನು ಇತರರ ಮುಂದೆ ಬಗ್ಗಿ, ತಗ್ಗಿ ನಡೆಯುವನು. ಎಲ್ಲರೂ ಮೆಚ್ಚಿಕೊಳ್ಳಲೆಂದು ಹೆಣಗಾಡುವನು.

ಅವನಲ್ಲಿ ದಿಟವಾಗಿ ವಿನಯವಿದೆಯೆಂದಲ್ಲ; ವಿನಯದಿಂದ ಅನುಕೂಲ ವಾಗುವುದೆಂಬ ನಿರೀಕ್ಷೆ ಅವನದ್ದು ಅಷ್ಟೇ.

ಕಾರ್ಯಸಾಧನೆಗಾಗಿ ಕತ್ತೆಯ ಕಾಲನ್ನೂ ಹಿಡಿಯಬೇಕೆಂಬುದು ಅವನ ನಿಲುವು. ಕಾರ್ಯಸಾಧನೆಯಾದ ಮೇಲೆ ಕತ್ತೆಯನ್ನು ಬಡಿದೋಡಿಸುವುದು ಇದ್ದೇ ಇದೆ!

ಹಣ ಕೈಸೇರುವವರೆಗೆ ನಮ್ರತೆ. ಅದರಿಂದೇನು ಕಷ್ಟವೇ? ವೆಚ್ಚವೇ? ಹಣ ಕೈ ಸೇರಿದ ಮೇಲೂ ಅದು ಮುಂದುವರಿಯಬೇಕೆಂಬ ನಿಯಮವಾದರೂ ಇದೆಯೆ?

ಹೀಗೆ ಹಣದ ಗೀಳು ಮಾಡಿಕೊಂಡ ಮೇಲೆ ಸ್ವಭಾವ ಮೊದಲಿನಂತೆ ಇರಲಾರದು. ಮೋರೆಯ ಮೇಲೆ ನಗೆ, ನುಡಿಯಲ್ಲಿ ನಯ, ನಡಿಗೆಯಲ್ಲಿ ಬೆಡಗು, ಇತರರನ್ನು ಕಂಡರೆ ಆದರ, ಅವರಿಗೆ ನೆರವಾಗುವ ಕಾತರ ಇವೆಲ್ಲವೂ ಮೇಲೆದ್ದು ಬರುತ್ತವೆ.

ಆದರೆ ಇದು ಬರಿಯ ನಟನೆ. ಮೋಸಹೋಗುವ ಮಂದಿ ಇರುವರೆಂಬ ಭರವಸೆ ಇಲ್ಲಿ ಕೆಲಸ ಮಾಡುತ್ತದೆ.

ನಟನೆಯೂ ಕಲೆಯಲ್ಲವೆ? ಅಮಾಯಕರಾದ ಮಂದಿಯ ಸಂಖ್ಯೆಯೂ ಸಣ್ಣದೇನಲ್ಲವಲ್ಲ? ಇವರಿಗೆ ನಟನೆಯೆಂದು ತಿಳಿಯುವುದೇ ಇಲ್ಲ; ತಿಳಿದರೂ ಆ ವೇಳೆಗಾಗಲೇ ನಟನೆಯ ಪ್ರಯೋಜನ ತೀರಿರುತ್ತದೆ!

ಒಮ್ಮೆ ಮೋಸ ಹೋದವರು ಎಚ್ಚೆತ್ತುಕೊಳ್ಳಬಹುದು. ಆದರೆ ಮತ್ತೆ ಮೋಸ ಹೋಗುವುದಿಲ್ಲವೆಂದು ಹೇಳಲಾದೀತೆ?

ಅವರ ಸ್ವಭಾವದಲ್ಲೇ ಇರುವ ಗುಣ ಬೇಗನೆ ನಂಬುವುದು, ಮೋಸ ಹೋಗುವುದು. ಅದು ಬದಲಾಗುವುದು ಕಷ್ಟ.

ಹಾಗೆಯೇ ಅರ್ಥಾರ್ಥಿಗಳ ಸ್ವಭಾವದಲ್ಲೂ ನಟನೆ, ಕಪಟಗಳಿರುತ್ತವೆ. ಹಣ ಬರಬೇಕಾದಾಗ ಒಂದು ನೆಲೆ, ಬಂದ ಮೇಲೆ ಇನ್ನೊಂದು ನೆಲೆ.

ನಮ್ಮ ಸುದೈವದಿಂದ, ಎಲ್ಲರೂ ಹಣವನ್ನೇ ಬಯಸುವುದಿಲ್ಲ. ಹಣ ಯಾರಿಗೆ ಬೇಡ? ಆದರೆ ಹಣದಿಂದಲೇ ಎಲ್ಲವೂ ಎಂಬ ನಂಬಿಕೆ ಎಲ್ಲರಿಗೂ ಇರುವುದಿಲ್ಲ.

ಏನಾದರೂ ಆಗಲಿ, ಹಣವೊಂದು ಬರಲಿ ಎಂಬ ಹಟಗಾರರ ಸಂಖ್ಯೆ ದೊಡ್ಡದಲ್ಲವೆಂಬುದು ನೆಮ್ಮದಿಯನ್ನುಂಟು ಮಾಡುವ ಮಾತು.

ಹೀಗೆಯೇ, ಮೋಸ ಹೋಗುವವರ ಸಂಖ್ಯೆಯೂ ಸಣ್ಣದೇ ಎನ್ನಬೇಕು. ಮೋಸ ಮಾಡುವವರು, ಮೋಸ ಹೋಗುವವರು ಸಮಸಂಖ್ಯೆಯಲ್ಲೇ ಇರುತ್ತಾರೆ.

ಹಲವು ವೇಳೆ, ಮೋಸ ಮಾಡುವವರೇ ಮೋಸ ಹೋಗುವುದೂ ಉಂಟು! ಅದು ವೃತ್ತಿಯ ಧರ್ಮ, ಕರ್ಮ!

133. ಉದ್ಯಮ-ಉದ್ಯೋಗ

ಉದ್ಯಮ ಹೆಚ್ಚಿದರೆ ಉದ್ಯೋಗಕ್ಕೆ ಅವಕಾಶವೂ ಹೆಚ್ಚುತ್ತದೆ. ಇದೊಂದು ಮೂಢನಂಬಿಕೆ.

ಉತ್ಪಾದನೆಗೊಂದು ಕಾರ್ಖಾನೆಯನ್ನೇರ್ಪಡಿಸುತ್ತಾರೆ. ಕಾರ್ಖಾನೆಯೆಂದರೆ ಯಂತ್ರಗಳು. ಅವುಗಳ ಸುತ್ತ ದುಡಿಮೆ. ದುಡಿಯುವ ಜನ ಬೇಡವೆ? ಉದ್ಯೋಗಕ್ಕೆ ಇದು ಅವಕಾಶವಲ್ಲವೆ?

ಕಾರ್ಖಾನೆ ದೊಡ್ಡದಾದಂತೆ ಯಾಂತ್ರಿಕ ಜ್ಞಾನವೂ ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತದೆ. ದೊಡ್ಡ ಕಾರ್ಖಾನೆಯೆಂದರೆ ಹೆಚ್ಚು ಜನರಿಗೆ ಉದ್ಯೋಗಾವಕಾಶವಲ್ಲವೆ?

ಈ ತರ್ಕ ಸರಿಯಾದುದೂ ಅಲ್ಲ. ದಿಟವಾಗಿ ಹಾಗಾಗುವುದೂ ಇಲ್ಲ.

ಆಧುನಿಕ ತಾಂತ್ರಿಕ ಜ್ಞಾನವನ್ನು ಬಳಸಿಕೊಳ್ಳದೆ ಯಾವ ಉದ್ಯಮವಿದ್ದೀತು? ಈ ಜ್ಞಾನವನ್ನು ಬಳಸಿಕೊಳ್ಳದೆ ಉದ್ಯಮ ಬೆಳೆಯಲಾರದು.

ಈ ತಾಂತ್ರಿಕ ಜ್ಞಾನದ ದಾರಿಯೆಂದರೆ ಸಾಧ್ಯವಾದಷ್ಟೂ ಎಲ್ಲ ಕೆಲಸಗಳನ್ನೂ ಯಂತ್ರಗಳಿಂದಲೇ ಮಾಡಿಸಿಕೊಳ್ಳುವುದು. ಆದಷ್ಟೂ ಕಡಮೆ ಜನರನ್ನು ಸೇರಿಸಿಕೊಳ್ಳುವುದು.

ಹೀಗಾಗಿ ಆಧುನಿಕ ಉದ್ಯಮಗಳಲ್ಲಿ ಉದ್ಯೋಗಾವಕಾಶ ಹೆಚ್ಚಲಾರದು. ಇಳಿಮುಖವಾಗುತ್ತದೆ.

ವಿದೇಶೀ ಬಂಡವಾಳವನ್ನು ಹೂಡಿದ ಬಹುರಾಷ್ಟ್ರೀಯ ಉದ್ಯಮಗಳಿಗೆ ನಾವು ಈಗ ಅನುಮತಿ ನೀಡಿದ್ದೇವೆ. ಮೊದಲು ವಿದೇಶೀ ಬಂಡವಾಳಕ್ಕೊಂದು ಮಿತಿಯಿದ್ದಿತು. ಬಹುರಾಷ್ಟ್ರೀಯ ಉದ್ಯಮಗಳಾದರೂ ನಮ್ಮವರಿಗೇ ಹೆಚ್ಚು ಉದ್ಯೋಗಾವಕಾಶ ನೀಡಬೇಕೆಂಬ ಒಪ್ಪಂದವಿದ್ದಿತು.

ಇದು ವ್ಯವಹಾರಕ್ಕೂ ಸರಿಯೇ. ವಿದೇಶೀಯರಾದರೂ ಇಲ್ಲಿ ಕಾರ್ಖಾನೆ ಏರ್ಪಡಿಸಿದರೆ, ದುಡಿಯಲು ವಿದೇಶದಿಂದ ಯಾರು ಇಲ್ಲಿಗೆ ಬರುತ್ತಾರೆ? ಇಲ್ಲಿನವರೇ ದುಡಿಯಬೇಕು, ಇಲ್ಲಿನ ಜನರಿಗೇ ಉದ್ಯೋಗ ದೊರಕಬೇಕು.

ಆದರೆ ಈಗ ಎರಡೂ ವಿಧಿಗಳಿಗೆ ವಿನಾಯಿತಿಯಿದೆ. ವಿದೇಶೀ ಬಂಡವಾಳಕ್ಕೆ ವಾಸ್ತವವಾದ ಮಿತಿಯೂ ಇರದು. ಬಹುರಾಷ್ಟ್ರೀಯ ಉದ್ಯಮಗಳಿಂದ ನಮ್ಮವರಿಗೆ ಉದ್ಯೋಗಾವಕಾಶವೂ ದೊರೆತಿಲ್ಲ.

ಅಂತಾರಾಷ್ಟ್ರೀಯ ಶ್ರಮಿಕ ಸಂಘಟನೆಯೆಂಬ ಒಂದು ಸಂಸ್ಥೆಯಿದೆ. ಇದನ್ನು ಐ.ಎಲ್.ಓ. (ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಸೇಷನ್) ಎನ್ನುತ್ತಾರೆ. ಇದರ ಪ್ರಕಾರ ಬಹುರಾಷ್ಟ್ರೀಯ ಉದ್ಯಮಗಳಿಂದಾಗಿ ನಮ್ಮ ದೇಶದಲ್ಲಿ ಒಂದೂವರೆ ಕೋಟಿ

ಮಂದಿ ಈಗಾಗಲೇ ಉದ್ಯೋಗಗಳಲ್ಲಿರುವವರು ತಂತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳುತ್ತಾರೆ!

ಪ್ರತಿವರ್ಷವೂ ಸುಮಾರು ಐವತ್ತು ಲಕ್ಷ ಉದ್ಯೋಗಿಗಳು ನಿರುದ್ಯೋಗಿಗಳಾಗುತ್ತಾರೆ. ಉದ್ಯಮಗಳ ತಾಂತ್ರಿಕಮಟ್ಟ ಏರುತ್ತಿರುವುದರ ನೇರವಾದ ಫಲ ಇದು.

ಇಂಥ ಉದ್ಯಮಗಳ ಲಾಭವೇನೋ ಎಣಿಕೆ ಮೀರಿ ಹೆಚ್ಚುತ್ತಲಿದೆ. ಈ ಉದ್ಯಮಿಗಳೇನು ವಿದೇಶೀ ಸರಕಾರವನ್ನಾಗಲಿ ಅವರ ತಾಂತ್ರಿಕ ನೆರವನ್ನಾಗಲಿ ಕಡೆಗಣ್ಣಲ್ಲಿ ಕಾಣಲಾರರು. ಅದರ ಪ್ರಭಾವವಿರುವ ಆಡಳಿತವೂ ಅವರಿಗೆ ಓಗೊಡುತ್ತದೆ.

ಆದರೆ ಜನರ ಉದ್ಯೋಗಾವಕಾಶ, ಅವರ ಸಂಪಾದನೆಯ ದಾರಿ ಎರಡೂ ಕಿರಿದಾಗುತ್ತಲೇ ಬರುತ್ತವೆ!

134. ಧನರೇಖೆ

ಸ್ಪೇನಿನ ಯೆಹೂದೀ ಪಂಡಿತನೊಬ್ಬ ನಾರ್ಬೋನಿನ ಯೋಸೆಫ್ ಕಿಂಚಿ (೧೨ನೆ ಶತಮಾನ) ಎಂಬಾತ 'ಶೆಕೆಲ್ ಹಕೋದೇಶ್' ಎಂಬ ಗ್ರಂಥವೊಂದನ್ನು ಶ್ರಮವಹಿಸಿ ಸಂಪಾದಿಸಿದ್ದಾನೆ.

ಇದೊಂದು ಪವಿತ್ರ ಗ್ರಂಥವೆಂದು ಎಣಿಕೆಯಿದೆ ಆ ಜನರಲ್ಲಿ.

ನೆಸ್ಟೋರಿಯನ್ ಕ್ರಿಶ್ಚಿಯನ್ ಹೊನೆನ್ (ಸತ್ತದ್ದು ೮೭೩ರಲ್ಲಿ) ಸಂಕಲನ ಮಾಡಿ ಸಿದ್ಧಪಡಿಸಿದ ಅರಾಬಿಕ್ ಸುಭಾಷಿತಗಳನ್ನು ಅವಲಂಬಿಸಿ ಶೆಕೆಲ್‌ನ ರಚನೆಯಾಯಿತು.

ಬದುಕಿನಲ್ಲಿ ದಾರಿದೀಪವಾಗಬಲ್ಲ ನೂರಾರು ಮಾತುಗಳಿವೆ ಮೇಲಿನ 'ಶೆಕೆಲ್'ನಲ್ಲಿ. ಅವುಗಳನ್ನು ಗಮನಿಸಬೇಕಾದ ಅಗತ್ಯ ಈಗ ಎಂದಿಗಿಂತ ಹೆಚ್ಚಾಗಿದೆ. ಅವುಗಳಲ್ಲೊಂದು : 'ಅಪಾರ ಧನವನ್ನು ಗಳಿಸಿರುವ ಶ್ರೀಮಂತನನ್ನು ಕೇಳು, ಅಯ್ಯಾ, ಅವೆಲ್ಲವನ್ನೂ ಅನುಭವಿಸಲು ದೀರ್ಘಾಯುಸ್ಸನ್ನೂ ಪಡೆದುಕೊಂಡಿರುವೆಯಷ್ಟೆ?'

ಹಣ ಸಂಪಾದನೆ ಮಾಡುವುದು ಕಷ್ಟವಲ್ಲ; ಬಹು ಮಂದಿ ಮಾಡಿಯೂ ಮಾಡುತ್ತಾರೆನ್ನಿ. ಮಾಡುವ ತವಕವೇನೂ ಕಳೆಗುಂದಿಲ್ಲವಷ್ಟೆ?

ಆದರೆ ಮಾಡಿದ ಸಂಪಾದನೆಯನ್ನು ಅನುಭವಿಸಬೇಕಲ್ಲವೆ?

ಅನುಭವಿಸಲು ಆರೋಗ್ಯ ಬೇಕು, ವಿರಾಮ ಬೇಕು, ನೆಮ್ಮದಿ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಆಯುಸ್ಸು ಗಟ್ಟಿಯಾಗಿರಬೇಕು.

ಹಣ ಸಂಪಾದಿಸುವಾಗಲೇ ತೀರಿಕೊಳ್ಳುವವರು ಎಷ್ಟೋ ಮಂದಿ. ದುಡಿದು ದುಡಿದು ಆರೋಗ್ಯವನ್ನು ಕೆಡಿಸಿಕೊಳ್ಳುವವರು ಎಷ್ಟು ಮಂದಿಯೋ!

ದುಡಿಮೆಯ ಘಟ್ಟ ಮುಗಿಯಿತು, ಇನ್ನು ಹಾಯಾಗಿ ಅನುಭವಿಸಬಹುದು ಎನ್ನುವಷ್ಟರಲ್ಲೇ ಕಣ್ಣು ಮುಚ್ಚುವವರಿಲ್ಲವೆ?

ಇವರು ದುಡಿದದ್ದು ಬೇರೆಯವರ ಅನುಭವಕ್ಕಾಗಿ ಅಷ್ಟೆ.

ಬದುಕಿನಲ್ಲಿ ದುಡಿಯುವುದು ಮುಗಿಯುವುದೇ ಇಲ್ಲ, ಇನ್ನು ಅನುಭವಿಸುವುದೆಲ್ಲಿ ಬಂತು–ಎಂದು ಗೊಣಗುವವರಿರುತ್ತಾರಲ್ಲವೆ?

ದುಡಿಯುವುದೇ ಗೀಳಾಗಿರುವವರನ್ನೂ ನೋಡುತ್ತೇವೆ. ದುಡಿಯುವುದರಲ್ಲೇ ಅವರ ಸಂತೋಷ. ದುಡಿದು ಬಂದದ್ದರಿಂದಲ್ಲ. ದುಡಿಯುವುದು ನಿಂತರೆ ಅವರಿಗೆ ದುಗುಡವೇ!

ಹಣವನ್ನು ಪಡೆದುಕೊಂಡು ದೊಡ್ಡ ಕುಳವಾದವರು ಬಹುಮಂದಿ. ಅವರು ಹಣವನ್ನು ಅನುಭವಿಸುತ್ತಾರೆ, ಸಂತೋಷವಾಗಿರುತ್ತಾರೆ ಎಂದೇನು ನಿಯಮವಿರದು.

'ಧನರೇಖೆಯಿದ್ದು ಫಲವೇನೋ ಆಯುಷ್ಯವಿಲ್ಲದನ್ನಕ್ಕ' ಎಂದೊಬ್ಬ ಕವಿ ಕೇಳಿದ್ದಾನೆ. ಕೈಯಲ್ಲಿ ಧನರೇಖೆಯಿರಬಹುದು; ಆಯುಷ್ಯರೇಖೆಯೂ ಇರಬೇಕಲ್ಲ?

ಇವೆರಡೂ ಬೇರೆ ಬೇರೆ, ದೂರ ದೂರ ಇರುವ ರೇಖೆಗಳು.

135. ಆಹಾರ ನಗದು

ನಮ್ಮದು ಪ್ರಮುಖವಾಗಿ ಕೃಷಿಯ ಉದ್ಯಮ.

ಇಡೀ ರಾಷ್ಟ್ರವೇ ವ್ಯವಸಾಯವನ್ನು ಅವಲಂಬಿಸಿದೆ.

ಎಂದ ಮೇಲೆ, ರೈತಾಪಿ ಜನರಿಗೇ ಸಮಾಜದಲ್ಲಿ ಆದ್ಯ ಗಮನವಿರಬೇಕು. ಅವರೂ ಕೂಡ ಆಹಾರ ಸಾಮಗ್ರಿಗಳ ಕಡೆಗೆ ಒತ್ತುಕೊಡಬೇಕಲ್ಲದೆ, ವಾಣಿಜ್ಯಕ್ಕೆ ನೆರವಾಗುವ 'ನಗದು ಬೆಳೆ'ಗಳಿಗೆ ಮನಸೋಲಬಾರದು.

ನಮ್ಮ ದೇಶದಲ್ಲಿ ಇವೆರಡೂ ನಡೆದಿಲ್ಲ. ದೇಶ ಇನ್ನೂ ಉಳಿದಿದೆಯೆಂಬುದೇ ಸೋಜಿಗ.

ನಮ್ಮ ಭೂಮಿ ವಿಶಾಲವಾಗಿದ್ದರೂ ಕೃಷಿಗೆ ಮೀಸಲಾದ ಭಾಗ ಸೀಮಿತವಾದುದು; ಬೆಳೆಯುವವರ ಸಂಖ್ಯೆಯೂ ಸೀಮಿತವಾದುದು.

ಆದರೆ ಇವರನ್ನವಲಂಬಿಸಿರುವ ಜನರ ಸಂಖ್ಯೆ ಹೆಚ್ಚುತ್ತಲೇ ಹೋಗಿದೆ. ವ್ಯವಸಾಯದ ಇತಿಹಾಸದಲ್ಲಿ ಆಹಾರದ ಅಗತ್ಯವಿರುವ ಜನರ ಸಂಖ್ಯೆ ಎರಡು ಪಟ್ಟು, ಮೂರು ಪಟ್ಟು ಏರಿದೆ.

ಆದರೂ ನಮ್ಮ ರೈತರು ಇಷ್ಟೂ ಜನರ ಹೊಟ್ಟೆ ತುಂಬಿಸುತ್ತಿದ್ದಾರೆ. ದವಸ ಧಾನ್ಯಗಳನ್ನು ಹೊರದೇಶಗಳಿಗೂ ಕಳುಹಿಸುತ್ತಿದ್ದಾರೆ.

ರೈತರ ಸಾಹಸಕ್ಕೂ ಒಂದು ಮಿತಿಯಿದ್ದೀತೆನ್ನುವುದು ದಿಟ. ಅವರ ಕೈ ಮೀರಿ ಹೋಗುವ ಕಾಲವೂ ಬಂದೀತು.

ಈ ನಡುವೆ ನಮ್ಮ ಆಡಳಿತದವರು ವ್ಯವಸಾಯಕ್ಕೆ ನೀಡುತ್ತಿರುವ ಆದ್ಯತೆ ಎಷ್ಟರಮಟ್ಟಿನದು?

ದೇಶ ಸ್ವತಂತ್ರವಾದಾಗ ಬೇಸಾಯಕ್ಕೆ ಅನುಕೂಲವಾದ ಭೂಮಿಯಲ್ಲಿ ನೂರಕ್ಕೆ ಹದಿನೇಳರಷ್ಟು ಭಾಗದಲ್ಲಿ ನೀರಾವರಿಯ ಸೌಲಭ್ಯವಿದ್ದಿತು. ಆಗ ರೈತಾಪಿ ಜನರು ಆರು ಕೋಟಿ ಟನ್‌ಗಳಷ್ಟು ದವಸಧಾನ್ಯಗಳನ್ನು ಬೆಳೆಯುತ್ತಿದ್ದರು. ಆಗಿನ ಜನಸಂಖ್ಯೆಗೆ ಇದು ಹೆಚ್ಚೂ ಕಡಮೆ ಸಾಕಾಗುತ್ತಿದ್ದಿತೆನ್ನಿ.

ಈಗ ಬೆಳೆಯುತ್ತಿರುವ ದವಸಧಾನ್ಯಗಳ ಮೊತ್ತ ಹದಿನೆಂಟು ಕೋಟಿ ಟನ್‌ಗಳಷ್ಟು. ಆದರೆ ನೀರಾವರಿ ಸೌಲಭ್ಯ ನಮ್ಮ ಭೂಮಿಯ ಎಷ್ಟು ಭಾಗಕ್ಕೆ ಏರಿದೆ? ನೂರಕ್ಕೆ ಮೂವತ್ತು ಭಾಗ ಮಾತ್ರ!

ಕೃಷಿತಜ್ಞರು ಹೇಳುವಂತೆ, ನೂರಕ್ಕೆ ಐವತ್ತು ಭಾಗದಂತೆ ನೀರಾವರಿ ಸೌಲಭ್ಯವನ್ನು ಹೆಚ್ಚಿಸಿದರೇ, ನಮ್ಮ ಬೇಸಾಯಗಾರರು ೩೦ ಕೋಟಿ ಟನ್‌ಗಳಷ್ಟು ದವಸಧಾನ್ಯಗಳನ್ನು ಬೆಳೆಸಿಯಾರು.

ಇನ್ನೊಂದು ಸಮಸ್ಯೆಯೂ ಇಣುಕಿ ನೋಡುತ್ತಿದೆ : ರೈತರಿಗೆ ನಗದು ಬೆಳೆಗಳ ಮೇಲೆ ಮೋಹ ಹೆಚ್ಚುತ್ತಿರುವುದು.

ಇದಕ್ಕೆ ಕಾರಣವೇನು? ಲಾಭದ ಆಸೆ. ಹೊರರಾಷ್ಟ್ರದ ಉದ್ಯಮಿಗಳು ಈ ಆಸೆಯನ್ನು ಅವರ ಮುಂದಿಟ್ಟಿದ್ದಾರೆ. ನಮ್ಮ ರಾಜಕಾರಣಿಗಳೂ ಇದಕ್ಕೆ ನೆರವಾಗುತ್ತಿದ್ದಾರೆ.

ಇನ್ನು ಜನರಿಗೆ ಆಹಾರ ಪೂರೈಕೆ ನಡೆಯುವುದು ಹೇಗೆ? ಬೇರೆ ದೇಶಗಳಿಂದ ಆಮದಾಗಬೇಕು! ನಮ್ಮ ಆರ್ಥಿಕ ಸ್ವಾತಂತ್ರ್ಯಕ್ಕೆ ಸಂಚಕಾರವಾಗದೆ ಉಳಿದೀತೆ?

136. ಮನಸ್ಸಿನ ಗೆಲುವು

ಅನ್ಸಾರಿಯೆಂಬೊಬ್ಬ ಷೂಫಿ ಕವಿಯ ಮಾತು–

'ನೀರಿನ ಮೇಲೆ ನಡೆಯಬಲ್ಲೆಯಾ?
ಹುಲ್ಲುಕಡ್ಡಿಯೂ ನಡೆದೀತು!
ಮುಗಿಲಲ್ಲಿ ಹಾರಬಲ್ಲೆಯಾ?
ಚಿಟ್ಟೆಯೂ ಹಾರೀತು!
ನಿನ್ನ ಮನಸ್ಸನ್ನು ಗೆದ್ದುಕೊಂಡೆಯೋ,
ಆಗ ನೀನೊಬ್ಬ ಮನುಷ್ಯ!'

ಆಧುನಿಕ ವಿಜ್ಞಾನ-ತಂತ್ರಗಳ ಹಾರುಗುದುರೆಯ ಬೆನ್ನೇರಿ ದೂರಸಾಗಿ ಬಂದಿದ್ದೇವೆ. ಮನಸ್ಸನ್ನು ಗೆದ್ದುಕೊಳ್ಳುವುದೊಂದನ್ನು ಬಿಟ್ಟು ಉಳಿದೆಲ್ಲ ಪವಾಡಗಳನ್ನು ಸಾಧಿಸಿದ್ದೇವೆ!

ನೆಲ, ನೀರು, ಮುಗಿಲು ಯಾವುದೂ ನಮಗೆ ಅದ್ಭುತವೆನಿಸುವುದಿಲ್ಲ. ಇವು ಮೂರನ್ನೂ ನಮ್ಮ ಬಯಕೆಗಳಿಗೆ ಅಡಿಯಾಳುಗಳಾಗಿ ಮಾಡಿಕೊಂಡಿದ್ದೇವೆ.

ಆದರೆ ಇಷ್ಟರಿಂದ ಮನುಷ್ಯನ ಮೇಲ್ಮೆ ಸಿದ್ಧವಾಯಿತೆ?

ಮನುಷ್ಯರು ತಮ್ಮೊಳಗೆ ಕಾದಾಡುತ್ತ, ತಮ್ಮ ಬಯಕೆಗಳಿಗೆ ಕೊನೆ ಕಾಣದೆ ತೊಳಲಾಡುತ್ತಿರುವುದು ಈಗೀಗ ಸ್ಪಷ್ಟವಾಗುತ್ತಿದೆ.

ಅವರ ಉದ್ಯಮಗಳು ಕೊರತೆಯನ್ನು ನೀಗಿಸುವುದರಲ್ಲಿ ಮಾತ್ರ ತೊಡಗಿಲ್ಲ; ಬಯಕೆಗಳನ್ನು ಹೆಚ್ಚಿಸುತ್ತ ಮರುಮರೀಚಿಕೆಯ ಅನ್ವೇಷಣೆಯತ್ತ ನಮ್ಮನ್ನು ಒಯ್ಯುತ್ತಿವೆ.

ಹೊರಗಣ ವಿವರಗಳ ಮೇಲೆ ನಮ್ಮ ಒಡೆತನದ ಮುದ್ರೆ ಬಲವಾಗಿ ಬಿದ್ದಿದೆ; ವಿವರಗಳಿಗೇ ಉಳಿಗಾಲವಿಲ್ಲವೆಂಬಂತೆ ಬಲವಾದ ಮುದ್ರೆ.

ಇಂದ್ರಿಯಗಳ ಭೋಗ ಸಾಮಗ್ರಿಗಳು ಎಣೆಯಿಲ್ಲದಂತೆ ಹೆಚ್ಚುತ್ತಿವೆ; ಜಾಹಿರಾತುಗಳ ಪ್ರಪಂಚ ನಮ್ಮನ್ನಡರಿ ಅಪ್ಪಳಿಸಿ ಕುಳಿತಿದೆ.

ಆದರೆ ಅನ್ಸಾರಿ ಮೂದಲಿಸಿದ ಹುಲ್ಲುಕಡ್ಡಿಗಿರುವ ಗಾಂಭೀರ್ಯವಾಗಲಿ, ಚಿಟ್ಟೆಗಿರುವ ಸ್ವಾತಂತ್ರ್ಯವಾಗಲಿ ಮನುಷ್ಯನಿಗೆ ಇಲ್ಲವಾಗಿದೆ!

ತನ್ನ ಮನಸ್ಸನ್ನು ಗೆದ್ದುಕೊಳ್ಳಬೇಕಾದ ಅಗತ್ಯವನ್ನೂ, ಅದಕ್ಕೆ ದಾರಿಯನ್ನೂ ಎಲ್ಲ ಮತಧರ್ಮಗಳೂ ತಿಳಿಯಹೇಳಿವೆಯೆಂಬುದು ದಿಟ.

ಆದರೆ ಆಚರಣೆಯಲ್ಲಿ ಒದಗಿಬಂದಿಲ್ಲವಲ್ಲ? ಅದರ ಅಗತ್ಯವನ್ನು ನಾವಿನ್ನೂ ಕಂಡುಕೊಂಡಿಲ್ಲವಲ್ಲ?

ಮೂರೂ ಲೋಕಗಳನ್ನು ಗೆದ್ದುಕೊಂಡವನು ತನ್ನನ್ನೇ ತಾನು ಕಳೆದುಕೊಂಡರೆ ಏನು ಸಾಧಿಸಿದ ಹಾಗಾಯಿತು?

ತನ್ನನ್ನು ತಾನು ಗೆದ್ದುಕೊಳ್ಳುವವನಿಗೆ ಮೂರು ಲೋಕಗಳ ಗೊಡವೆಯೇಕೆ?

137. ನವಿಲು–ಕೆಂಬೂತ

ದೇಶದ ಆರ್ಥಿಕ ಪ್ರಗತಿಯನ್ನು ಕುರಿತು ಗಾಂಧೀಜಿ ಆಲೋಚಿಸದೆ ಇರಲಿಲ್ಲ. ಅವರು ಹೇಳಿ ಕೇಳಿ ಬನಿಯ ಅಲ್ಲವೆ?

ಹಣಪ್ರಪಂಚದ ಪೂರ್ಣ ಪರಿಚಯ ಅವರಿಗಿದ್ದಿತು.

ಉದ್ಯಮಗಳು ಹೇಗಿರಬೇಕೆಂದು ಮನವರಿಕೆ ಮಾಡಿಕೊಂಡರು.

ಹೊರ ದೇಶಗಳಲ್ಲಿರುವಂತೆ ಬೃಹತ್ಪ್ರಮಾಣದ ಉದ್ಯಮಗಳು ನಮ್ಮ ದೇಶಕ್ಕೆ ಅಗತ್ಯವಿಲ್ಲ. ಮಾತ್ರವಲ್ಲ, ಅವುಗಳಿಂದ ಹಾನಿಯೂ ಆಗುತ್ತದೆ ಎಂಬುದು ಅವರ ತರ್ಕ.

ಹಳ್ಳಿಗಳಲ್ಲಿ ನಮ್ಮ ರೈತಾಪಿ ಜನ ತಮ್ಮ ಪ್ರಮುಖ ಕರ್ತವ್ಯವಾದ ಬೇಸಾಯಕ್ಕೆ ಹೊಂದಿಕೊಳ್ಳುವಂಥ ಸಣ್ಣ ಸಣ್ಣ ಉದ್ಯಮಗಳನ್ನು ಕೈಗೊಳ್ಳಬೇಕೆಂದು ಅವರ ಕರೆಯಾಗಿದ್ದಿತು.

ಉದ್ಯೋಗವು ಗ್ರಾಮಜೀವನದ ಚೌಕಟ್ಟಿನಲ್ಲೇ ಉಳಿದು, ಬೆಳೆದರೆ ನಾಡಿನ ಹಿತಸಾಧನೆಯಾದೀತು, ಇದು ಸಹಜವೂ ಹೌದು, ಸಾಧ್ಯವೂ ಹೌದು.

ಬೃಹತ್ ಪ್ರಮಾಣದ ಕಾರ್ಖಾನೆಗಳೂ, ದೊಡ್ಡ ದೊಡ್ಡ ತಯಾರಿಕೆ ಸಂಸ್ಥೆಗಳೂ ನಮ್ಮ ಜನರ ಸ್ವಭಾವಕ್ಕೆ ಒಗ್ಗಿ ಬಂದುದಲ್ಲ. ಇವುಗಳು ಪ್ರಧಾನವಾಗಿಬಿಟ್ಟರೆ, ನಮ್ಮ ಜನರ ಸ್ವಭಾವವೇ ಮಾರ್ಪಾಡಾದೀತು!

ನಮ್ಮ ಸಂಸ್ಕೃತಿ ಉಳಿಯುವುದೇ ಕಷ್ಟವಾದೀತು.

ಇನ್ನು ಈ ಬೃಹದುದ್ಯಮದ ಅಗತ್ಯವಾದರೂ ಇದೆಯೆ?

ನವಿಲನ್ನು ನೋಡಿ ಕೆಂಬೂತ ಪುಕ್ಕ ತೆರೆದುಕೊಂಡ ಕತೆ ನೆನಪಿಗೆ ಬರುತ್ತದೆ. ನವಿಲ ಗರಿ ನವಿಲಿಗೆ ಸರಿ; ಕೆಂಬೂತದ ಪುಕ್ಕ ಕೆಂಬೂತಕ್ಕೆ ಸರಿ.

ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ಬದುಕುವ ಬಗೆಯನ್ನು ಕಂಡು ನಮ್ಮ ನಾಯಕರು ಮರುಳಾಗಿ ಇಂದಲ್ಲ ನಾಳೆ ನಾವೂ ಅವರಂತೆಯೇ ಆಗಬೇಕು ಎಂಬ ಹಟ ಹಿಡಿದು ಈ ಉದ್ಯಮಗಳಿಗೆ ದಾರಿ ಮಾಡಿಕೊಟ್ಟರು.

ನೆಹರೂ ಮುಂತಾದ ನೇತಾರರು ತೋರಿಸಿದ ದಾರಿ ನಮ್ಮ ಜನರಿಗೆ ಆಗ ಆಪ್ಯಾಯಮಾನವಾಗಿ ಕಂಡಿತು. ಗಾಂಧೀಜಿಯ ಹಿತನುಡಿ ಕಿವಿಗೆ ಬೀಳಲಿಲ್ಲ; ಮನಸ್ಸಿಗೆ ಬರಲಿಲ್ಲ.

ಈಗ ಆಗಿರುವುದೂ ಏನು?

ಕನಸಿನಲ್ಲಿ ಕಂಡ ಆರ್ಥಿಕ ಸಮೃದ್ಧಿ ಎಚ್ಚರದಲ್ಲಿ ನಗೆಪಾಟಲಾಗಿದೆ. ಆಡಳಿತಕ್ಕಂತೂ ಇದು ನುಂಗಲಾರದ ತುತ್ತು.

ಮದನಿಕೆಯನ್ನು ಮಾಡಲು ಹೊರಟು ಮಂಗನನ್ನು ಮಾಡಿದ ಹುಡುಗನಂತೆ ಪರಿಸ್ಥಿತಿಯಾಗಿದೆ.

ಉದ್ಯಮಿಗಳ ಹಿಡಿತಕ್ಕೆ ಸಿಕ್ಕು ದೇಶದ ಸ್ವಭಾವಸಿದ್ಧವಾದ ಆರ್ಥಿಕ ವ್ಯವಸ್ಥೆಗೆ ದಿಕ್ಕು ಕಾಣದಂತಾಗಿದೆ. ಮೌಲ್ಯಗಳೇ ತಲೆಕೆಳಗಾದರೆ ಮಾಡುವುದೇನು?

138. ಮದ್ದಳೆಯ ಸಾಮತಿ

ದುಡ್ಡಿನ ಪ್ರಭಾವ ಎಷ್ಟೆಂದು ಯಾರರಿಯರು?

ಏನೊಂದು ಕೆಲಸವಾಗಬೇಕಾದರೂ ದುಡ್ಡನ್ನು ತೆರಬೇಕು; ಕಿಸೆಯನ್ನು ಬಿಗಿಹಿಡಿದರೆ ಕೆಲಸ ಕೈಗೂಡದು.

ಕೊಡಬೇಕಾದ ಹಣವನ್ನು ಕೊಡುವುದು ಸರಿಯೆ; ಅದು ಲೆಕ್ಕಕ್ಕೆ ಸೇರುತ್ತದೆ. ಆದರೆ ಅಷ್ಟರಿಂದ ಕೆಲಸವಾಗದು. ಮೇಲಷ್ಟು ತೆರಬೇಕು. ಇದನ್ನು ಲಂಚವೆನ್ನಿ, ಗಿಂಬಳವೆನ್ನಿ; ಸಂಭಾವನೆಯೆನ್ನಿ, ರುಷವತ್ತೆನ್ನಿ.

ಇದು ಹಲವರ ಅನುಭವಸಿದ್ಧವಾದ ತಿಳಿವಳಿಕೆ. ನೀತಿಯಲ್ಲವೆಂದು, ಎಲ್ಲರಿಗೂ ಗೊತ್ತು. ಕೆಲಸವಾಗುತ್ತದೆ ಎಂದು ನೀತಿ ತಪ್ಪಿದರೆ ನೆಮ್ಮದಿಯಿಂದಿರಬಹುದು ಎನ್ನುವಂತೆಯೂ ಇಲ್ಲ. ವಿಶೇಷವಾಗಿ ಬಳಕೆಗೆ ಬಂದದ್ದು ಸರಿಯೇ ಇರಬೇಕೆಂದು ಬಹುಜನರ ತರ್ಕ. ಗಾಳಿಯನ್ನು ಗುದ್ದಿ ಮೈ ನೋಯಿಸಿಕೊಳ್ಳಬೇಕೆ?

ಒಬ್ಬ ಕವಿ ಮೃದಂಗದ ಸಾಮತಿಯನ್ನು ಕೊಟ್ಟಿದ್ದಾನೆ.

ಮೃದಂಗವನ್ನು ನುಡಿಸುವಾಗ, ಹಿಟ್ಟನ್ನು ಕಲಸಿ ಮದ್ದಳೆಯ ಬಾಯಿಗೆ ಮೆತ್ತುವುದನ್ನು ನೋಡಿಲ್ಲವೆ?

ಹಾಗೆ ಮೆತ್ತಿದಾಗಲೇ ವಾದ್ಯದಿಂದ ಸುನಾದ ಹೊರಡುವುದು; ಸಂಗೀತಕ್ಕೆ ನೆರವಾಗುವ ಧ್ವನಿ ಸಿದ್ಧವಾಗುವುದು.

ಆದರೆ ಒಮ್ಮೆ ಮಾಡಿದರೆ ಮುಗಿಯಿತೆನ್ನಲಾರದು. ಮತ್ತೆ ಮತ್ತೆ ಇದನ್ನು ಮಾಡುತ್ತಲೇ ಇರಬೇಕು. ಹಿಟ್ಟನ್ನು ಕಲಸಿ ಮದ್ದಳೆಯ ಬಾಯಿಗೆ ಮೆತ್ತದಿದ್ದರೆ ವಾದ್ಯದ ನಾದ ಕರ್ಕಶವಾಗುತ್ತದೆ; ಕೇಳಲಾಗುವುದಿಲ್ಲ.

ದುಡ್ಡಿನ ಆಸೆಗೊಳಗಾದ ಅಧಿಕಾರಿಯೋ ಪ್ರಭಾವವುಳ್ಳ ರಾಜಕಾರಣಿಯೋ ಮೃದಂಗದ "ಪೂರ್ವಜನೋ ಮೇಣ್ ಅನುಜಾತನೋ" (ಎಂದರೆ ಅಜ್ಜನೋ ಒಡಹುಟ್ಟಿದವನೋ) ತಿಳಿಯೆ ಎಂದು ಕವಿ ಹೇಳುತ್ತಾನೆ.

'ನಿಜವಕ್ತ್ರಾಗ್ರದೆ ಪಿಂಡಮೀವವರೆಗುಂ ನೀಡುಂ ಮೃದುಸ್ವಾನಮಂ', ಪಿಂಡವೆಂಬ ಮಾತು ಕಾಕುವೊಂದನ್ನು ಪಡೆದುಕೊಂಡಿದೆ.

ಲಂಚ ಕೊಟ್ಟಾಗ ಮೆದುವಾದ ಮಾತು; ಭರವಸೆಯಾಸೆ.

ಕೊಂಚ ಕಾಲ ಕಳೆದ ಮೇಲೆ ಆ ವೇಳೆಗೆ ಮೊದಲು ಕೊಟ್ಟ ಲಂಚದ ಪ್ರಭಾವ ಮುಗಿದಿರುತ್ತದೆ. ಮಾತು ಬಿರುಸಾಗುತ್ತದೆ; ಬೆದರಿಕೆಯಾಗಿ ಬದಲಾಗುತ್ತದೆ.

ಹಿಂದೆ ತೆತ್ತ ದುಡ್ಡು ವ್ಯರ್ಥವಾಗದಿರಲು ಮತ್ತೆ ದುಡ್ಡನ್ನು ತೆರಬೇಕು ತಾನೆ? ತೆರದಿದ್ದರೆ ಬೇರೆ ದಾರಿಯೆಲ್ಲಿ?

ಕವಿಯ ಒಕ್ಕಣೆ ಬಂದಿರುವುದು 'ಚೆಲುವನಾರಾಯಣ ಶತಕ' ಎಂಬ ಕೃತಿಯಲ್ಲಿ. ಇದನ್ನು ರಚಿಸಿದವರು ದೇವಶಿಖಾಮಣಿ ಅಳಸಿಂಗರಾಚಾರ್ಯ ರೆಂಬುವರು. ಕೃತಿಯ ರಚನೆಯಾದದ್ದು ಒಂದು ನೂರು ವರ್ಷಗಳ ಹಿಂದೆ.

ಕಾಲ ಬಹಳ ಬದಲಾಗಿಲ್ಲವಲ್ಲ?

139. ಸಾಮಾಜಿಕ ವ್ಯಾಪಾರ

ಸಾಮಾಜಿಕ ಕಾರ್ಯ, ಸಮಾಜ ಸೇವೆ ಎಂಬ ಕಲ್ಪನೆಯೇನೋ ಒಳ್ಳೆಯದೇ. ಬೇರೆಯವರ ಹಿತದ ಕಡೆ ಗಮನವನ್ನೇ ಕೊಡದೆ ಸ್ವಾರ್ಥಕ್ಕೇ ಅಂಟಿಕೊಂಡಿದ್ದರೆ ಹೇಗೆ?

ಆದರೆ ಈ ಕೆಲಸದಲ್ಲಿ ತೊಡಗಿರುವ ಬಹುಮಂದಿಯನ್ನು ಕಂಡಾಗ ಇದರಲ್ಲೂ ಸ್ವಾರ್ಥವಿದೆಯೋ ಎಂಬ ಸಂಶಯವೊದಗುತ್ತದೆ. ಕೆಲವರ ಧೋರಣೆಯನ್ನು ನೋಡಿದಾಗಲಂತೂ ಇದೊಂದು ವ್ಯಾಪಾರ, ಉದ್ದಿಮೆ ಎಂಬುದು ಸ್ಪಷ್ಟವಾಗುತ್ತದೆ.

ಹೊಟ್ಟೆ ಹೊರೆದುಕೊಳ್ಳುವುದಕ್ಕೆ ಸಮಾಜ ಸಿದ್ಧಪಡಿಸಿರುವ ಹಲವು ದಾರಿಗಳಲ್ಲಿ ಇತರರನ್ನು ಶೋಷಿಸುವುದು ಅಷ್ಟಿಷ್ಟು ತಪ್ಪಿದ್ದಲ್ಲ.

ಲಾಭದ ದೃಷ್ಟಿಯಿರದೆ ವ್ಯಾಪಾರವಿದೆಯೇ? ಆದರೆ ಸರಿಯಾದ ಬೆಲೆಗೇ ಮಾರಿದರೆ ಲಾಭ ಹೇಗೆ ಬಂದೀತು?

ಒಬ್ಬನ ಲಾಭ ಇನ್ನೊಬ್ಬನಿಗೆ ನಷ್ಟವೇ. ಅವನಿಗೆ ನಷ್ಟವಾಗದೆ ಇವನಿಗೆ ಲಾಭವಿರದು. ಕೊಳ್ಳುವವರ ಶೋಷಣೆ ನಡೆದರೇ ಮಾರುವವರ ಲಾಭ.

ಆದರೆ ಲಾಭಕ್ಕೂ ಒಂದು ಮಿತಿಯನ್ನು ಇರಿಸಿಕೊಳ್ಳುವುದು ವ್ಯಾಪಾರದಲ್ಲಿ ಧರ್ಮವೆನಿಸಿಕೊಳ್ಳುತ್ತದೆ. ಮಾರುವ ಪದಾರ್ಥಗಳಲ್ಲಿ ಕಲಬೆರಕೆ ಮಾಡದೆ, ಅಳತೆಯಲ್ಲಿ ಮೋಸಮಾಡದೆ ಗ್ರಾಹಕರಿಗೆ ಒದಗಿಸಿದಾಗ ಅದೂ ಧರ್ಮವೇ. ಲಾಭವೇ ತಪ್ಪೆಂದು ಯಾರೂ ಹೇಳಲಾರರು.

ತನ್ನಿಂದ ಹೋಗುವುದು ಕಡಮೆ, ತನಗೆ ಬರುವುದು ಹೆಚ್ಚು ಎಂಬುದು ಸ್ವಾಭಾವಿಕವಾದ ತತ್ವವೇ ತಾನೆ? ಲೋಕದಲ್ಲಿ ಇದನ್ನು ಎಲ್ಲರೂ ಬಲ್ಲರು.

ವ್ಯಾಪಾರ-ಉದ್ದಿಮೆಗಳಲ್ಲಿ ಈ ತತ್ವವೇ ಇನ್ನಷ್ಟು ಮುಂದುವರಿಯುತ್ತದೆ ಅಷ್ಟೆ. ತನ್ನಿಂದ ಹೋಗುವುದು ಏನೂ ಇರದು, ತನಗೆ ಬರುವುದೆಲ್ಲವೂ ಬರಲಿ ಎಂದರೆ, ಅದರಲ್ಲೇ ಅತಿರೇಕವಾಯಿತು. ಇಂಥ ವ್ಯಾಪಾರವನ್ನಾಗಲಿ ಉದ್ದಿಮೆಯನ್ನಾಗಲಿ ಯಾರೂ ಮೆಚ್ಚಿಕೊಳ್ಳುವುದಿಲ್ಲ.

ತೆರಬೇಕಾದ ಕರವನ್ನು ತಪ್ಪಿಸಿಕೊಳ್ಳಲು ವ್ಯಾಪಾರದವರೂ ದಾನ ಧರ್ಮಗಳ ದಾರಿ ಹಿಡಿಯುವುದುಂಟು, ಇದಕ್ಕೆ ವಿಧ್ಯುಕ್ತವಾದ ವಿನಾಯಿತಿ ಇರುವುದರಿಂದ.

ಇದೇನು ಸಮಾಜ ಸೇವೆ ಎನಿಸಿಕೊಳ್ಳುವುದಿಲ್ಲ. ತನಗೆ ಎಷ್ಟು ಮಾತ್ರವೂ ಲಾಭದ ಆಸೆಯಿರದೆ, ತನ್ನ ಕೊಡುಗೆಯೇ ಮುಖ್ಯವಾದರೆ ಅದು ಸೇವಾ ಮನೋಭಾವ. ಇವೆಲ್ಲ ಇರಬೇಕು. ಸ್ವಾರ್ಥತ್ಯಾಗವಿಲ್ಲದೆ ಸೇವೆಯಾಗುವುದು ಹೇಗೆ?

ವ್ಯಕ್ತಿತ್ವದಲ್ಲೊಂದು ಪರಿಪಾಕವಿದ್ದರೆ, ದೃಢವಾದ ನಂಬಿಕೆಯಿದ್ದರೆ ಈ ಬಗೆಯ ಸೇವಾಕಾರ್ಯ ಸಾಧ್ಯವಾಗುತ್ತದೆ.

ಇಹ-ಪರಗಳೆರಡನ್ನೂ ಒಟ್ಟಿಗೆ ಸಾಧಿಸಿಕೊಳ್ಳುವ ಹಂಬಲವಿದ್ದವರು ಮುಖ್ಯವಾಗಿ ಗಮನ ಕೊಡುವುದು ಇಹಕ್ಕೇ. ಪರವೂ ಬಂದರೆ ಬರಲಿ, ಬೇಡವೆನ್ನುವುದಿಲ್ಲ!

ಇಂಥವರು ಸಮಾಜ ಸೇವೆಗೆ ತೊಡಗಿದಾಗ ಅದೊಂದು ವ್ಯಾಪಾರ ಸಾಧನವೇ ಇದ್ದೀತೆಂಬ ಸಂಶಯ ಬರುವುದು ಸಹಜ. ಹೀಗಿರುವುದು ಎಲ್ಲರ ಅನುಭವದಲ್ಲೂ ಬಂದಿರುವುದು ಸಾಧ್ಯ.

140. ದುಡ್ಡಿಗೆ ಬಾಯೊಡ್ಡುವುದು

ಮೈಸೂರು ಸಂಸ್ಥಾನದ ದೊರೆಯಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಓಲಗದಲ್ಲಿ ಹಲವಾರು ಕವಿಗಳಿದ್ದರು.

ಅವರಲ್ಲೊಬ್ಬರು ಅವರ ಅಳಿಯ ಲಿಂಗರಾಜ ಅರಸರು. ಅವರ ಕವಿತೆಗಳಲ್ಲಿ ಒಳ್ಳೆಯ ಭಾವನೆಗಳು ಹೇರಳವಾಗಿ ದೊರೆಯುತ್ತವೆ.

ಮಹಲಿಂಗರಂಗ ಶತಕವೆಂಬುದು ಅವರ ಕೃತಿಗಳಲ್ಲೊಂದು.

ಅದರಲ್ಲಿ ಯಾವುದೋ ಮಂತ್ರಿಯ ವಿಚಾರ ಎತ್ತಿಕೊಂಡಂತಿದೆ. ದಿಟವಾಗಿ ಒಬ್ಬ ವ್ಯಕ್ತಿಯನ್ನು ಕುರಿತದ್ದೋ, ಸಾಮಾನ್ಯವಾಗಿ ಮಂತ್ರಿಗಳ ಧೋರಣೆಯನ್ನು ಕುರಿತು ಬರೆದದ್ದೋ ತಿಳಿಯುವಂತಿಲ್ಲ.

ಆದರೆ ಅದರಲ್ಲಿರುವ ಕಟುಟೀಕೆ ನಮ್ಮ ಕಾಲದ ಅನೇಕ ಮಂತ್ರಿಗಳ ಚಿತ್ರಣಕ್ಕೆ ಹೊಂದಿಕೊಳ್ಳುತ್ತದೆ.

'ದುಡ್ಡಿಗೊಡ್ಡುತ ಬಾಯಂ'– ಈ ವರ್ಣನೆ ಸ್ಪಷ್ಟವಾಗಿಯೇ ಇದೆಯಷ್ಟೆ? ದುಡ್ಡೆಂದರೆ ಬಾಯಿ ಬಿಡುವುದು ಮಾತ್ರವಲ್ಲ; ದುಡ್ಡಿನ ಕಡೆಗೇ ಮುಂಚಾಚಿ ಬರುತ್ತದೆಯಂತೆ ಮಂತ್ರಿಯ ಬಾಯಿ.

ಮಾನ ಮರ್ಯಾದೆಗಳನ್ನು ಗಾಳಿಗೆ ತೂರಿಬಿಟ್ಟು, ಅದಕ್ಕೆ ಬಾಯೊಡ್ಡುವ ಹೀನಸ್ಥಿತಿ ಇದು. ಆದರೆ ಬಹುಜನ ಇದನ್ನು ಮಾಡಿದಾಗ 'ಹೀನ'ವೆನಿಸಿಕೊಳ್ಳುವುದಿಲ್ಲ!

'ದೊಡ್ಡವರಂ ಜರಿದು' ದೊಡ್ಡವರನ್ನು ಜರಿಯದೆ, ಅವರನ್ನು ಕೆಳಗಿಳಿಸದೆ ಸಣ್ಣವರು ಮೇಲೆ ಬರುವುದಾದರೂ ಹೇಗೆ?

ಮಂತ್ರಿಯಾದ ಮೇಲೆ ತನಗಿಂತ ದೊಡ್ಡವರು ಇರುವುದು ಸಾಧ್ಯವೆ? ಗುಣದಲ್ಲಿ, ವಿದ್ಯೆಯಲ್ಲಿ, ಶೀಲದಲ್ಲಿ ದೊಡ್ಡವರಿರಬಹುದು; ಆದರೆ ಅದು ಯಾವ ಲೆಕ್ಕಕ್ಕೆ? ಅಧಿಕಾರವಿದ್ದರಲ್ಲವೆ ದೊಡ್ಡತನ?

ಇನ್ನು 'ದೊರೆಯ ಕಾರ್ಯವ ಮುರಿವಾ ಹೆಡ್ಡನು'.

ದೊರೆಯ ಕೆಲಸವನ್ನು ನಿರ್ವಹಿಸುವುದಕ್ಕೇ ಮಂತ್ರಿಯಿರುವುದು. ದೊರೆಯ ಕೆಲಸವೆಂದರೆ ಹಿತವನ್ನು ಸಾಧಿಸುವುದು.

ಈಗ ದೊರೆಯಿಲ್ಲ; ದೊರೆಯ ಬದಲು ಸರಕಾರವಿದೆ. ದೊರೆಯಿಲ್ಲದಿದ್ದರೂ ದೊರೆಯ ಕೆಲಸವಂತೂ ಇದೆಯಲ್ಲವೆ? ಜನರ ಹಿತಸಾಧನೆ.

ಆದರೆ ಈ 'ಕಾರ್ಯವ ಮುರಿವ' ಮಂತ್ರಿಗಳಿದ್ದರೆ ಮಾಡುವುದೇನು? ಈಗ ಮಂತ್ರಿಗಳೇ ದೊರೆಗಳು; ದೊರೆಯು ಕೆಲಸವನ್ನು ಕೆಡಿಸುವುದೇ ಅವರ ಉದ್ದೇಶವಾಗಿಬಿಟ್ಟರೆ ಹೇಗೆ?

ಕವಿ ಅಂಥವರನ್ನು ಹೆಡ್ಡರೆಂದು ಕರೆದಿದ್ದಾರೆ. ತಮ್ಮ ಕರ್ತವ್ಯವನ್ನು ಅರಿಯದವರು, ಸ್ವಾರ್ಥಕ್ಕೆಂದು ಲೋಕಹಿತವನ್ನು ಕೈಬಿಡುವವರು.

ದೊರೆ ಇಂಥ ಮಂತ್ರಿಗಳನ್ನು ಇರಿಸಿಕೊಂಡರೆ ಆಗುವುದೇನು? 'ಕಡ್ಡಿಯ ಕಡೆಯಹುಳು ಅವನ ರಮೆಯು'.

ನಾಡಿನ ಸೌಭಾಗ್ಯ ಕಡ್ಡಿಗಿಂತ ಕಡೆಯಾಗುತ್ತದೆ. ದುಡ್ಡಿಗೆ ಬಾಯೊಡ್ಡುವುದರಿಂದ ಈ ಅವನತಿಯ ಆರಂಭ.

141. ಪರದೇಶಿಗಳು

ಕನ್ನಡದಲ್ಲೊಂದು ಗಾದೆ– 'ದುಡ್ಡಿನ ಆಸೆಗೆ ಬೆಲ್ಲವನ್ನು ಮಾರಿ, ಗೋಣಿಯ ಚೀಲವನ್ನು ನೆಕ್ಕಿದಂತೆ'.

ಇದು ವಿದೇಶೀ ವಿನಿಮಯ ದ್ರವ್ಯದ ವಿಚಾರವಾಗಿ ಅಕ್ಷರಶಃ ನಿಜ.

ಹಣದಾಸೆಯಿಂದ ಹೊರಗೆ ಹೋಗುತ್ತಿರುವ ಸರಕುಗಳು ಉತ್ತಮವಾದ ಗುಣಮಟ್ಟದವು; ನಮ್ಮ ಉಪಯೋಗಕ್ಕೆಂದು ಇಲ್ಲೇ ಉಳಿದಿರುವುವು ಕೀಳುದರ್ಜೆಯವು.

ಆರ್ಥಿಕ ಪರಿಣತರನ್ನು ಕೇಳಿದರೆ ಅವರ ಪ್ರತಿಕ್ರಿಯೆ—ವಿದೇಶೀಯರ ಹಣ ನಮಗೆ ಬಂದಲ್ಲದೆ ನಮಗೆ ಆರ್ಥಿಕ ನೆಮ್ಮದಿಯೆಲ್ಲಿದೆ? ಆಡಳಿತವು ಹೊತ್ತುಕೊಂಡಿರುವ ವಿದೇಶೀ ಸಾಲದ ಹೊರೆಯನ್ನು ಇಳಿಸುವುದಾದರೂ ಹೇಗೆ?

ಆದರೆ ಇಷ್ಟು ವರ್ಷಗಳಿಂದ ಬೆಲ್ಲವನ್ನು ಮಾರಿ ಗೋಣಿಯನ್ನು ನೆಕ್ಕಿದ್ದಕ್ಕೆ ಬಂದಿರುವ ಸಂಪತ್ತಾದರೂ ಏನು? ಬೆಲ್ಲವೂ ಹೋಯಿತು, ಸಾಲವೂ ಹೆಚ್ಚಿತು! ಗೋಣಿಯನ್ನು ನೆಕ್ಕಿದ್ದಷ್ಟೆ ಲಾಭ, ಸಮಾಧಾನ.

ಬೆಳೆದದ್ದನ್ನು ಮಾರುವ ಹುಮ್ಮಸವಿದೆ; ಬೆಳೆಯನ್ನು ಹೆಚ್ಚಿಸಿಕೊಳ್ಳುವ ಹದನವನ್ನರಿಯೆವು.

ಬೆಳೆಯುವುದನ್ನು ನಾವು ಹೊರದೇಶದವರಿಂದಲೇ ಕಲಿಯಬೇಕಂತೆ! ಅನಾದಿಕಾಲದಿಂದ ಬೇಸಾಯವೇ ಮುಖ್ಯವಾದ ನಮ್ಮ ನಾಡು ಈಗ ವಿದೇಶೀ ತಜ್ಞರ ಸೇವೆ ಮಾಡಿ ಬೇಸಾಯದ ಮರ್ಮವನ್ನು ತಿಳಿಯಬೇಕು!

ತಿಳಿಸಿಕೊಡುವ ತಜ್ಞರಿಗೆ ನಾವು ಕಪ್ಪ-ಕಾಣಿಕೆ ಸಲ್ಲಿಸದಿದ್ದರೆ ಹೇಗೆ? ಅದಕ್ಕೂ ನಮ್ಮ ಹಣವೇ ವೆಚ್ಚವಾಗಬೇಕು! ಹೊತ್ತುಕೊಂಡಿರುವ ಸಾಲದ ಹೊರೆ ಇಳಿಯುವುದು ಹೇಗೆ?

ಭೂಮಿಯನ್ನು ಮಾರಿ ಬೆಳೆಯುವ ಬಗೆಯನ್ನು ಅರಿತುಕೊಳ್ಳುವ ಜಾಣತನವನ್ನು ನಮ್ಮ ಆರ್ಥಿಕತಜ್ಞರು ಉಪದೇಶ ಮಾಡುತ್ತಿರುವುದು. ಇದು ಹಲವಾರು ವರ್ಷಗಳಿಂದ ಎಡಬಿಡದೆ ನಡೆಯುತ್ತಿರುವ ಕೃಷಿ ತಾಂತ್ರಿಕ ಜ್ಞಾನದ ವಿನಿಮಯದ ವೈಖರಿ.

ಭೂಮಿ ನಮ್ಮದು, ಬೆಳೆ ಅವರದ್ದು. ಇಲ್ಲವೇ ಬೆಳೆ ನಮ್ಮದು, ಅದರ ಲಾಭ ಅವರದ್ದು. ಈ ಆರ್ಥಿಕ ವ್ಯವಸ್ಥೆಯನ್ನು ದಯಪಾಲಿಸಿದ ಆರ್ಥಿಕ ತಜ್ಞರಿಗೂ ಇದೇ ಮಾತು ಇನ್ನೊಂದು ರೀತಿಯಲ್ಲಿ ಅನ್ವಯಿಸೀತು. ಅವರ ತಲೆಬುರುಡೆ ಸ್ವದೇಶೀ, ಅದರೊಳಗಿರುವ ಬುದ್ಧಿ ವಿದೇಶಿ!

ಹೀಗಿರುವಾಗ ನಮ್ಮ ಬೇಸಾಯಗಾರರ ವಿಚಾರವಾಗಿ ಅವರ ಆದರವಾಗಲಿ ಅನುಕಂಪವಾಗಲಿ ಹೇಗೆ ಇದ್ದೀತು? ಅವರ ಒಲುಮೆ ಇರುವುದು ವಿದೇಶೀ ಮಾರುಕಟ್ಟೆಯ ಮೇಲೆ, ಅವರ ವಿಶ್ವಾಸವಿರುವುದು ಅಲ್ಲಿನ ತಾಂತ್ರಿಕ ಜ್ಞಾನದಲ್ಲಿ.

ಪರದೇಶದ ಸಂಸ್ಕೃತಿಯ ಆಕರ್ಷಣೆ ಸಡಿಲವಾಗುವವರೆಗೆ ನಮ್ಮ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವ ಸಂಭವ ಕಡಮೆಯೇ. ಅದು ಉತ್ತಮಗೊಳ್ಳುವವರೆಗೆ ನಾವು 'ಪರದೇಶಿ'ಗಳೇ!

142. ದುಡಿಮೆ–ದುಡ್ಡು

ದುಡ್ಡಿಗೂ ದುಡಿಮೆಗೂ ಇರುವ ನಂಟು ಮಾತಿನದಷ್ಟೇ ಅಲ್ಲ, ಅವುಗಳಲ್ಲಿ ಕಾರ್ಯಕಾರಣ ಸಂಬಂಧವಿರುತ್ತದೆ.

ದುಡ್ಡು ದುಡಿದು ಬಂದದ್ದು; ದುಡಿಮೆ ಕಾರಣವೆಂದಾದರೆ, ದುಡ್ಡು ಕಾರ್ಯ.

ದುಡ್ಡೆಂಬ ದ್ರವ್ಯವಾಗಲಿ ತಾನೇ ತಾನಾಗಿ ತೋರಿಕೊಳ್ಳುವುದಲ್ಲ. ಅದು ನಾವು ಮಾಡಿಟ್ಟುಕೊಂಡದ್ದೇ ತಾನೆ?

ನಾಣ್ಯವೇನು ನಿಸರ್ಗಸಿದ್ಧವಾದುದೆ? ಮನುಷ್ಯ ನಿರ್ಮಿತವಲ್ಲವೆ? ಪ್ರಕೃತಿಯಲ್ಲಿ ದೊರೆಯುವ ಕವಡೆಯನ್ನೇ ದುಡ್ಡೆಂದು ಬಗೆದಿದ್ದ ಕಾಲವೊಂದಿದ್ದಿತು, ದಿಟ. ಆದರೆ ನಾವು ಅದಕ್ಕೆ ಬೆಲೆ ಕಟ್ಟಿದರೆ ತಾನೆ ಅದು ದುಡ್ಡಾಗುವುದು.

ಬೆಲೆ ಕಟ್ಟುವುದೆಂದರೆ ಎಷ್ಟು ದುಡಿಮೆಗೆ ಅದು ಸಮನೆಂದು ಭಾವಿಸಬೇಕು, ಮತ್ತು ಅದರಿಂದ ದೊರೆಯುವ ಪದಾರ್ಥಗಳು ಯಾವುವು ಎಂಬ ನಿಶ್ಚಯ.

ದುಡಿಯುವ ಅವಧಿ, ದುಡಿಮೆಯ ಶ್ರಮ ಮತ್ತು ಸ್ವಭಾವ, ದುಡಿಸಿಕೊಳ್ಳುವವನ ಉದ್ದೇಶ ಮತ್ತು ಸಾಮರ್ಥ್ಯ, ಅವನಿಗೆ ಬರುವ ಲಾಭ, ದುಡಿಯುವವರ ಕೊರತೆ, ಅವರ ಅಗತ್ಯ– ಹೀಗೆ ಹಲವು ಮುಖಗಳು ದುಡ್ಡಿಗೆ.

ಅವೆಲ್ಲವೂ ದುಡಿಮೆಯ ಸುತ್ತ ಸೇರಿಕೊಂಡವೇ. ದುಡಿದದ್ದರಿಂದ ಬಂದ ದುಡ್ಡು ಎನ್ನುವಾಗ ಅವೆಲ್ಲ ಮುಖ್ಯವಾಗುತ್ತವೆ. ಕಾರಣವರ್ಗದಲ್ಲಿ ಸೇರಿಕೊಳ್ಳುತ್ತವೆ.

ಕಾರಣವಿಲ್ಲದೆ ಕಾರ್ಯವಾಯಿತೆಂದರೆ ಕಾರ್ಯಕ್ಕೆ ಸತ್ತ್ವವೆಲ್ಲಿಯದು? ದುಡಿಮೆಯಿಲ್ಲದ ದುಡ್ಡು ದಿಟವಾದುದಲ್ಲ; ಭ್ರಾಮಕವಾದುದು. ಅದರಿಂದ ಮನುಷ್ಯನಿಗೆ ಹಿತವಾಗಲಿ ಸುಖವಾಗಲಿ ಇರದು.

'ಅರ್ಥಕ್ರಿಯಾಕಾರಿತ್ವ' ಎಂಬುದೊಂದು ಕಲ್ಪನೆಯಿದೆ. ವಸ್ತುವೊಂದು ಇದೆ ಎಂಬುದು ಸಿದ್ಧವಾಗಬೇಕಾದರೆ ಅದರಿಂದ ಏನಾದರೂ ಕೆಲಸ ನಡೆಯಬೇಕು.

ಬಾಗಿಲು ಎಂದರೆ ಅದರ ಮೂಲಕ ನಾವು ಒಳಗೆ ಹೋಗಬೇಕು, ಇಲ್ಲವೇ ಹೊರಗೆ ಬರಬೇಕು; ಅದು ಸಾಧ್ಯವಿರದಿದ್ದರೆ ಬಾಗಿಲೇ ಅಲ್ಲ. ಬೆಂಕಿಯೆಂದರೆ ಅದರಿಂದ ಬೆಳಕು ಬರಬೇಕು, ಇಲ್ಲವೇ ಬಿಸಿ ತಟ್ಟಬೇಕು; ಎರಡೂ ಆಗದಿದ್ದರೆ ಅದು ಬೆಂಕಿಯೇ ಅಲ್ಲ.

ಹಾಗೆಯೇ ದುಡ್ಡು ಎಂದರೆ ಅದರಿಂದ ದುಡ್ಡಿದ್ದವನಿಗೆ ಬಯಸಿದಂತೆ ಹಿತವಾಗಬೇಕು, ಅನುಕೂಲವಾಗಬೇಕು. ತೊಂದರೆ ತಪ್ಪಬೇಕು, ನೆಮ್ಮದಿಯಿರಬೇಕು.

ದುಡಿದು ಬಂದ ದುಡ್ಡು 'ಅರ್ಥಕ್ರಿಯಾಕಾರಿ'; ಅದಕ್ಕೆ ಆ ಬೆಲೆಯಿದೆ. ಎಂದರೆ ದಿಟವಾದ ದುಡ್ಡು.

ದುಡಿಮೆಯ ಹಿನ್ನೆಲೆಯಲ್ಲಿರದೆ ದುಡ್ಡು ಬಂದಿತೆಂದರೆ ಅದಕ್ಕೆ 'ಅರ್ಥಕ್ರಿಯಾಕಾರಿತ್ವ'ವೆಂಬ ಗುಣ ಇರದು. ಅದರಿಂದ ಅನರ್ಥವೇ ಆದೀತು.

ಅದು ಪೊಳ್ಳು, ನೀರ ಮೇಲಣ ಗುಳ್ಳೆಯಂತೆ ತೋರಿಯಡಗುವುದು. ಅದನ್ನು ನಂಬಿದವನಿಗೆ ನಿರಾಸೆ ಕಟ್ಟಿಟ್ಟದ್ದೇ.

ಯಾರದ್ದೋ ದುಡಿಮೆ, ಮತ್ತೆ ಯಾರಿಗೋ ದುಡ್ಡು ಎಂದಾಗಲೂ ಇದೇ ನ್ಯಾಯವೇ ಅನ್ವಯಿಸುವುದು.

143. ಸರ್ಕಾರದ ಹಣ

ಸರ್ಕಾರದ ಹಣವೆಂದರೆ ಸಾರ್ವಜನಿಕರ ಸ್ವತ್ತು. ಅದರ ಮೇಲೆ ಎಲ್ಲರಿಗೂ ಅಧಿಕಾರವಿದೆಯಲ್ಲವೆ? ಆದ್ದರಿಂದ ಅದನ್ನು ಬಯಸದಿರುವವರು ಯಾರು?

ಸಾರ್ವಜನಿಕ ಸ್ವತ್ತಾದರೂ ಸಾರ್ವಜನಿಕರೇ ಅದನ್ನು ಬೇಕಾದಂತೆ ಬಳಸಿಕೊಳ್ಳಲಾರರು. ಅದನ್ನು ಪೋಲು ಮಾಡುವ ಹಕ್ಕಿರುವುದು ಅಧಿಕಾರಿಗಳಿಗೇ!

ಸ್ವಂತದ ಕೆಲಸವಾಗಲಿ, ಸರ್ಕಾರದ ಕೆಲಸವಾಗಲಿ, ಅಗತ್ಯವಿರಲಿ, ಇಲ್ಲದಿರಲಿ, ಸಾರ್ಥಕವಾಗಲಿ, ನಿರರ್ಥಕವಾಗಲಿ, ಸರ್ಕಾರದ ವೆಚ್ಚದಲ್ಲಿ ಪ್ರಯಾಣ, ಸಮಿತಿ, ಸಭೆ, ಸಮಾರಂಭ, ಸಮಾರಾಧನೆಗಳು ನಡೆಯುತ್ತಲೇ ಇರುತ್ತವೆ.

ದೇಶ ವಿದೇಶ ಯಾತ್ರೆಗಳಂತೂ ಆಡಳಿತ ಮಾಡುವವರಿಗೆ ಅಗತ್ಯವಾದದ್ದೇ! ವಿದೇಶ ಯಾತ್ರೆ ಮಾಡದೆ ಸ್ವದೇಶದ ಉದ್ಧಾರವಾದೀತೆ? ಮೋಜಿಗಾಗಿ ಹೋಗುವೆವೆಂದು ಯಾರಾದರೂ ಹೇಳಿಯಾರೆ? ನಮ್ಮ ಬೇಸಾಯ ಪದ್ಧತಿಯನ್ನು ಉತ್ತಮಗೊಳಿಸಲು ಅಮೇರಿಕೆಗಲ್ಲವೆ ಹೋಗಬೇಕು? ಅಲ್ಲಿ ನ್ಯೂಯಾರ್ಕ್-ವಾಷಿಂಗ್ಟನ್ ನಗರಗಳಲ್ಲಿ ಸುತ್ತಾಡಿದರಲ್ಲವೆ ನಮ್ಮ ಕೃಷಿಯ ಅಭ್ಯುದಯದ ಯೋಜನೆ ಹಾಕಬಹುದು?

ಸರ್ಕಾರದ ಸಿಬ್ಬಂದಿಯ ಗಾತ್ರವನ್ನು ನೋಡಿದರೆ, ಅದರ ಕಚೇರಿಗಳ ವಿತರಣೆಯನ್ನು ನೋಡಿದರೆ, ಅಲ್ಲಿ ನಡೆಯುವ ವಹಿವಾಟನ್ನು ನೋಡಿದರೆ ನಮ್ಮ ದೇಶ ಬಡದೇಶವೆಂದು ಯಾರು ಹೇಳಿಯಾರು? ಸಾರ್ವಜನಿಕ ಸಂಪತ್ತು ಅಲ್ಪವೆನಿಸುತ್ತದೆಯೇ?

ಇಲಾಖೆಗಳಿಗೆ ವೆಚ್ಚಕ್ಕೆಂದು ಮಂಜೂರಾದ ಹಣ ನಿಗದಿಯಾದ ದಿನದೊಳಗೆ ಮುಗಿಯಬೇಕು. ಆ ದಿನ ಹತ್ತಿರ ಹತ್ತಿರ ಬರುತ್ತ ವೆಚ್ಚದ ಆಲೋಚನೆಯೂ ಹೆಚ್ಚುತ್ತದೆ. ಔಚಿತ್ಯ, ಅಗತ್ಯ, ಪ್ರಸ್ತುತತೆಗಳ ಪ್ರಶ್ನೆಯೇ ಏಳುವುದಿಲ್ಲ. ಮಂಜೂರಾದ ಹಣ ಹೇಗಾದರೂ ಮಾಯವಾಗಬೇಕು!

ಉಳಿತಾಯವೆಂದರೆ ಕೆಲಸ ಮಾಡದಿರುವುದೆಂದೇ ಅರ್ಥ. ಕೆಲಸ ನಡೆದರೆ ವೆಚ್ಚವಾಗದೆ ಇರುತ್ತದೆಯೆ? ಮಾಡಬೇಕಾದ ಕೆಲಸ ಸಾರ್ವಜನಿಕರ ಹಿತಕ್ಕೆಂದೇ ತಾನೆ? ಅದಕ್ಕೆ ವೆಚ್ಚವಾಗಬೇಕಾದುದು ಸಾರ್ವಜನಿಕರ ಹಣವೇ ಅಲ್ಲವೆ?

ಇನ್ನು, ಸರ್ಕಾರದ ಹಣ ಸಾರ್ವಜನಿಕವಾದುದೇ ಎಂದಾದರೂ ಅದನ್ನು ಮೀರಿ ಮತ್ತೊಂದು ಬಗೆಯ ಸಾರ್ವಜನಿಕ ಹಣ ವ್ಯವಹಾರದಲ್ಲಿ ಬಂದಿದೆ. ಅದೇನೆಂಬುದನ್ನು ಎಲ್ಲರೂ ಬಲ್ಲರು.

ಅಧಿಕಾರಿಗಳು, ಆಡಳಿತಕ್ಕೆ ಸೇರಿದವರು, ತಾವಾಗಿ ಮಾಡಬೇಕಾದುದನ್ನು ಮಾಡದೆ ತಡೆಹಿಡಿದಾಗ, ತಡೆಯನ್ನು ತೊಡೆದು ಹಾಕಲು ಕೈಬೆಚ್ಚಗೆ ಮಾಡುವುದುಂಟು.

ಸಾರ್ವಜನಿಕರ ಸ್ವತ್ತೇ ಆದರೂ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಎಂಬ ಇಬ್ಭಾಗವಿದೆ. ಒಂದು ಬಿಳಿ, ಇನ್ನೊಂದು ಕಪ್ಪು. ಬಿಳಿ ಒಂದೇ ಬಗೆಯಾದುದು; ಕಪ್ಪಿನಲ್ಲಿ ಅನೇಕ ಬಗೆಗಳಿವೆ. ಬಿಳಿಗಿಂತ ಕಪ್ಪೇ ಜೋರಾದುದಲ್ಲವೆ?

144. ಕಾಂಚನದಾಸೆ

ಪುರಂದರದಾಸರದ್ದೊಂದು ಮಾತು– 'ಆಳುವ ನೃಪರಿಗೆಲ್ಲ ಕಾಂಚನದಾಸೆ'. ಆಡಳಿತ ಮಾಡುವವರಿಗೆ ಹಣದಾಸೆ ಇರುವುದು ಸಹಜವೇ.

ಆಡಳಿತವಾದರೂ ಹಣವಿಲ್ಲದೆ ಆದೀತೆ? ಯಾವುದಕ್ಕಾದರೂ ಹಣವಿರಬೇಕಲ್ಲ? ಸಾರ್ವಜನಿಕ ಕಾರ್ಯಕ್ಕೆ ಸಾರ್ವಜನಿಕ ಹಣ.

ಆದರೆ ಆಡಳಿತದ ಅಗತ್ಯಕ್ಕೆ ತಕ್ಕಂತೆ ಹಣವನ್ನು ಸುಂಕ, ತೆರಿಗೆ ಮುಂತಾದ ಏರ್ಪಾಟಿನಿಂದ ಪಡೆದುಕೊಳ್ಳುತ್ತಾರೆ. ಇಲ್ಲವಾದರೆ ಹಣ ಎಲ್ಲಿಂದ ಬರುತ್ತದೆ?

ದಾಸರು ಹೇಳಿದ್ದು ಆಡಳಿತವನ್ನು ಹೀಗೆ ಸರಿದೂಗಿಸುವ ಕಾಂಚನದಾಸೆಯಲ್ಲ; ಆಳುವವರು ಸಾಧ್ಯವಾದಷ್ಟು ಕಾಂಚನವನ್ನು ದೋಚಿಕೊಳ್ಳುವ ಹವಣಿಕೆಯನ್ನು ಮಾಡುತ್ತಾರೆಂದು, ಅದಕ್ಕೆ ಮೂಲ ದುರಾಸೆಯೆಂದು.

ಲೋಕಹಿತಕ್ಕೆಂದು ಆಡಳಿತ ನಡೆಸಲು ಮುಂದೆ ಬರುವವರು ಎಷ್ಟು ಮಂದಿ? ನಿಃಸ್ಪೃಹರಾಗಿ ಅಧಿಕಾರವನ್ನು ನಿರ್ವಹಿಸುವವರ ಸಂಖ್ಯೆ ಎಷ್ಟು?

ಸ್ವಾರ್ಥಕ್ಕೆಂದೇ ಲೋಕಹಿತದ ಸೋಗು ಹಾಕಿಕೊಂಡು ಮೆರೆಯುವ ರಾಜಕಾರಣಿಗಳನ್ನು ಕಂಡಿಲ್ಲವೆ? ಆಡಳಿತದಲ್ಲಿ ಹೇಗಾದರೂ ನುಸುಳಿಕೊಂಡರೆ ಸಾಕು, ತಳವೂರಬಹುದು, ದೊಡ್ಡ ಕುಳವಾಗಬಹುದು!

ಇದು ಎಲ್ಲ ಕಾಲದಲ್ಲಿಯೂ ಇದ್ದದ್ದೇ. ಹಳೆಯ ಸುಭಾಷಿತವೇ ಒಂದಿದೆ; 'ವಿತ್ತೇ ನೃಪಾಲಾದ್ ಭಯಂ', ದುಡ್ಡಿದ್ದರೆ ಅರಸರು ಅದನ್ನು ಹೇಗಾದರೂ ಲಪಟಾಯಿಸುವರೆಂಬ ಅಂಜಿಕೆ. ಅರಸರಿಗೆ ಆಪ್ತರಾಗಿ ಮಂತ್ರಿಗಳಿರುವುದೇತಕ್ಕೆ?

ಸಾಮಾನ್ಯವಾಗಿ ಅರಸರಿಗಿರದ ಬುದ್ಧಿವಂತಿಕೆ ಸಚಿವರಿಗಿರಬೇಕು; ಹಣವನ್ನು ಮಾಡಿಕೊಳ್ಳುವ ಹದವನ್ನರಿತವರಿರಬೇಕು. ಜನರ ಒಳಿತೆಂದು ಹೊರಗೆ ಕೂಗು; ತಮ್ಮ ಸಂಪಾದನೆ ಒಳಗಿನ ವಿದ್ಯಮಾನ.

ಆಡಳಿತದಲ್ಲಿ ಹಣದ ರುಚಿಯೇ ಉಳಿದೆಲ್ಲ ವಿವರಗಳನ್ನೂ ಮೀರಿ ಮೇಲೆದ್ದು ನಿಲ್ಲುವುದು. ಅಧಿಕಾರವಾಗಲಿ ಪ್ರಭಾವವಾಗಲಿ ಊರ್ಜಿತವಾಗಬೇಕಾದರೆ ಹಣವೇ ಮೂಲಾಧಾರ. ಈ ರುಚಿಯನ್ನು ಕಂಡವರು ಅಲ್ಪಸಂತೋಷಿಗಳಲ್ಲ. ಸ್ವಲ್ಪಕ್ಕೆ ತೃಪ್ತಿಪಟ್ಟು ಕೊಳ್ಳುವವರಲ್ಲ. 'ಅಧಿಕಸ್ಯ ಅಧಿಕಂ ಫಲಂ'.

ಹಣದ ಸಾಮರ್ಥ್ಯ ಎಷ್ಟೆಂದು ಅವರು ಬಲ್ಲರು. ಹಣವೊಂದಿದ್ದರೆ ಏತರ ಅಂಜಿಕೆ? ಅದರ ಮುಂದೆ ನ್ಯಾಯಾನ್ಯಾಯಗಳೆಂಬ ಎಣಿಕೆಯಿದೆಯೆ? ಜನಾಪವಾದದ ಲೆಕ್ಕವಿದೆಯೆ? ಭಯವಿದೆಯೆ?

ಅದೊಂದು 'ಹಾರಗುದುರಿ'; ಅದರ ಬೆನ್ನನೇರಿ ದೂರ ದೂರ ಹೋಗುವ ಹುಮ್ಮಸ್ಸು 'ಆಳುವ ನೃಪರಿಗೆ' ಬರುವುದು ಸಹಜವೇ. ಕುದುರೆಯ ಕಾಲು ಸೋತೀತಾದರೂ ಇವರಿಗೇನು ದಣಿವಿಲ್ಲ!

ಸಮಾಜವೆಂದಾದ ಮೇಲೆ ಆಳುವವರಿರಬೇಕು, ಆಳಿಸಿಕೊಳ್ಳುವವರಿರಬೇಕು. ಆಳುವವರ ಕೈ ಮೇಲೆ; ಆಳಿಸಿಕೊಳ್ಳುವವರದ್ದು ಕೆಳಗೆ. ಮೇಲಿದ್ದವರು ಜಾಣರು, ಕೆಳಗಿನವರು ಮೂರ್ಖರು. ಮೂರ್ಖರ ನೆರವಿಗೆ ಜಾಣರು ಎಂದೂ ಬರುವುದಿಲ್ಲ; ಜಾಣರಿಗೆ ನೆರವಾಗುವುದೇ ಮುರ್ಖತನದ ಲಕ್ಷಣವಲ್ಲವೆ?

145. ಹೆಂಡದ ಮಡಕೆ

ಹಣದಾಸೆಯ ಗುಂಗಿನಲ್ಲಿ ಶೀಲಗೆಟ್ಟು ನಡೆಯುವವರಿದ್ದಾರೆ, ಹುಚ್ಚೆದ್ದು ಕುಣಿಯುವವರಿದ್ದಾರೆ, ಮಿತಿಮೀರಿ ಮುಗ್ಗರಿಸುವವರಿದ್ದಾರೆ.

ಎಡವಿದಾಗ ಎಚ್ಚರಿಸಲು ಜನರೂ ಇರುತ್ತಾರೆ; ತಪ್ಪಿದಾಗ ಬಡಗೆಯಿಂದ ಹೊಡೆಯುವವರೂ ಇರುತ್ತಾರೆ; ಆಡಿಕೊಂಡು ನಗುವವರೂ ಇರುತ್ತಾರೆ.

ಜನಾಭಿಪ್ರಾಯವೂ ಕೆಲಸ ಮಾಡುತ್ತದೆ; ಕಾನೂನು ಕಟ್ಟಳೆಗಳೂ ಕೆಲಸ ಮಾಡುತ್ತವೆ. ನ್ಯಾಯಾಲಯದ ಹಿಡಿತವಂತೂ ಇದ್ದದ್ದೇ. ಅದೇನು ತಪ್ಪುವುದಿಲ್ಲ.

ಅನ್ಯಾಯಕ್ಕೆ ಅನೀತಿಗೆ ಎಂದಿಗೂ ಗೆಲುವಿಲ್ಲ. ಆ ಹೊತ್ತಿಗೆ ಗೆಲುವಿನಂತೆ ಕಂಡರೂ, ಕಡೆಗೆ ಅದು ಬೀಳುವುದೇ ಎಂಬುದು ದಾರ್ಶನಿಕರ, ಚಿಂತಕರ ಎಣಿಕೆ; ಲೋಕೋತ್ತರವಾದಿಗಳ ಅನಿಸಿಕೆ. ಆದರೆ ಸಾಮಾನ್ಯರಲ್ಲಿ ಈ ಭರವಸೆಯಿರದು.

ದುರಾಸೆಯಿಂದ ಉದ್ಧಾರವಾದವರ ಸಂಖ್ಯೆ ಸಣ್ಣದೇನಲ್ಲ; ಅನೀತಿಯಿಂದಲೇ ಮುಂದೆ ಸಾಗಿ ದೊಡ್ಡವರೆನಿಸಿದ ಮಂದಿ ವಿರಳರೇ? ಅನ್ಯಾಯಕ್ಕಿರುವ ಮನ್ನಣೆ ಲೋಕದಲ್ಲಿ ನ್ಯಾಯಕ್ಕಿದ್ದೀತೆ? ನೀತಿಯನ್ನೇ ಹಿಡಿದು ನಾಶವಾದವರನ್ನು ಕಾಣೆವೆ?

ನಡೆದಷ್ಟು ದಿನ ನಾಣ್ಯ! ನ್ಯಾಯವೋ ಅನ್ಯಾಯವೋ ನಡೆಯುವುದು ಮುಖ್ಯ. ನಡೆಯಲಾರದೆ ಕೂಡುವವರು ನ್ಯಾಯಾಲಯ ವಿಚಾರ ಮಂಡಲಿ. ನಡೆಯುವಾಗ ವಿಚಾರ ಬೇಡ! ವಿಚಾರ ಮಾಡಿದರೆ ನಡೆಯುವುದೇ ಆಗದು.

ಹೀಗೆ ಆಲೋಚನೆ ಮಾಡುವವರೇ ಬಹುಮಂದಿ. ಬದುಕಿನಲ್ಲಿ ಮುಂದುವರಿಯಬೇಕೆಂಬ ಬಯಕೆ ಯಾರಿಗಿರದು? ಮುಂದುವರಿಯಲು ನೆರವಾಗುವುದು ಏನೇ ಇರಲಿ, ಅದನ್ನು ಹಿಡಿಯಬೇಕಾದುದು ವ್ಯವಹಾರ ಧರ್ಮ ಎಂದವರ ಎಣಿಕೆ.

ಇಂಥ ಗುಂಗಿನಲ್ಲಿ ಹದ್ದು ಮೀರಿ ಹರಿದಾಡುವವರು ಆಗಾಗ ಶಿಕ್ಷೆಗೆ ಗುರಿಯಾಗುವರು, ನಿಂದೆಗೆ ಒಳಗಾಗುವರು, ಪತ್ರಿಕೆಯ ಪ್ರಚಾರಕ್ಕೆ ಸಲ್ಲುವರು. ಆಗ ಅವರಿಗೆ ತೊಂದರೆಯೇ, ಕಳವಳವೇ, ಕಸವಿಸಿಯೇ.

ಆದರೆ ಇದರಿಂದ ಅವರು ತಮ್ಮನ್ನು ತಿದ್ದಿಕೊಳ್ಳುವರೆ? ದಾರಿ ತಪ್ಪಿದೆವೆಂಬ ಅರಿವು ಅವರಲ್ಲಿ ಮೂಡುವುದೆ? ಅಡ್ಡದಾರಿ ಬಿಟ್ಟು ಸರಿಯಾದ ದಾರಿಗೆ ಅವರೇನಾದರೂ ತಿರುಗುವರೆ?

ಕಳ್ಳನಿಗೆ ಸೆರೆಮನೆಯಾಗಿ ಅವನು ಹೊರಗೆ ಬಂದರೆ, ಮತ್ತೆ ಅವನು ಮಾಡುವುದು ಕಳ್ಳತನವನ್ನೇ. ಲಂಚಕೋರನಿಗೆ ಶಿಕ್ಷೆಯಾಗಿ, ಅನಂತರ ಅವನು ಲಂಚಕ್ಕೆ ಕೈವೊಡ್ಡದಿರುವನೆ? ಸುಟ್ಟರೂ ಕೆಟ್ಟಸುಳಿ ನೆಟ್ಟಗಾಗದು.

ಜೇನುಗೂಡಿಗೆ ಕೈಯಿಕ್ಕಿ ಜೇನನ್ನು ಸವಿಯಲು ಹೊರಟವನಿಗೆ ಜೇನು ನೊಣ ಕಚ್ಚುವುದಿಲ್ಲವೆ? ಆದರೆ ಹಾಗೆಂದು ಜೇನಿನ ಬಯಕೆ ಮರೆಯುವುದೆ? ಜೇನು ನೊಣ ಬೇಡವೆಂದರೆ ಇವನು ಬಿಟ್ಟಾನೆ?

ಸಮಾಜದ ಕಟ್ಟುಪಾಡುಗಳು ಅನೇಕ ಇವೆ. ದಾರಿ ತಪ್ಪಿದರೆ ದೊರೆಯ ಮುನಿಸು, ಅಡ್ಡದಾರಿ ಹಿಡಿದರೆ ಹಿಗ್ಗಾಮುಗ್ಗ, ಅಪರಾಧಕ್ಕೆ ಅನುರೂಪವಾದ ದಂಡನೆ ಇವೆಲ್ಲ ಇರುವುದು ದಿಟ.

ಆದರೆ ಇವೆಲ್ಲವೂ ಬಸವಣ್ಣನವರು ಹೇಳಿದಂತೆ, 'ಹೆಂಡದ ಮಡಕೆಯನ್ನು ಹೊರಗೆ ತೊಳೆದಂತೆ'. ಸಂಸ್ಕಾರದಿಂದ ಒದಗಿ ಬರುವ ಶುದ್ಧಿಯೇ ಬೇರೆ; ಕಾನೂನಿನ ಕಟ್ಟುಪಾಡಿನಿಂದ ಆಗುವ ಶುದ್ಧಿಯೇ ಬೇರೆ.

146. ಪ್ರವಾಸಿಗಳ ಪಾಡು

ಪ್ರವಾಸೋದ್ಯಮ ಹೇಳಿ ಕೇಳಿ ಒಂದು ಉದ್ಯಮ; ಉದ್ಯಮವೆಂದ ಮೇಲೆ ಆದಾಯದ ಮೇಲೇ ಕಣ್ಣು. ಆದಾಯವಿಲ್ಲದೆ ಉದ್ಯಮವಿದೆಯೇ?

ಪ್ರವಾಸಿಗಳಿಗೆ ಆಕರ್ಷಣೆಯನ್ನೊದಗಿಸಿ, ಬರಮಾಡಿಕೊಂಡು, ಅವರು ಬಯಸುವ ಸೌಲಭ್ಯಗಳನ್ನೆಲ್ಲ ನೀಡಿ, ಅವರನ್ನು ಸಂತೋಷಗೊಳಿಸಿ ಕಳುಹಿಸುವುದು ಈ ಉದ್ಯಮದ ಧರ್ಮ. ನಮ್ಮ ನಾಡಿನ ಕಲೆ, ನಿಸರ್ಗದ ಚೆಲುವು, ಸಂಸ್ಕೃತಿಯ ಹಿರಿಮೆ ಇವನ್ನು ಹೊರ ದೇಶದವರಿಗೆ ಮನವರಿಕೆ ಮಾಡಿ ಕೊಡುವುದು ಮೂಲೋದ್ದೇಶ.

ಆಡಳಿತಕ್ಕೆ ಈ ಮೂಲೋದ್ದೇಶದ ಮೇಲಿರುವ ಮಮತೆಗಿಂತ ಇದರಿಂದ ಅರ್ಥಿಕವಾದ ಉತ್ಪನ್ನವೇನು ಎಂಬುದರ ಕಡೆ ಗಮನ ಹೆಚ್ಚು. ಪ್ರವಾಸೋದ್ಯಮ ವೊಂದು ಕೈಗಾರಿಕೆಯೆಂದು ಕೇಂದ್ರ ಸರ್ಕಾರವೇ ಘೋಷಿಸಿದೆ.

ಪ್ರವಾಸಿ ಕೇಂದ್ರಗಳನ್ನು ಗುರುತಿಸುವುದು, ಪ್ರವಾಸಿಗಳಿಗೆ (ಎಂದರೆ ವಿದೇಶೀ ಪ್ರವಾಸಿಗಳಿಗೆ) ಅನುಕೂಲವಾಗಿ ಆ ಕೇಂದ್ರಗಳನ್ನು 'ಅಭಿವೃದ್ಧಿ'ಗೊಳಿಸುವುದು– ಇವು ಕೈಗಾರಿಕೆಯ ಮೊದಲ ಹೆಜ್ಜೆ.

ಪ್ರವಾಸಿಗಳು ಬರುವುದು ವಾಸ್ತುಶಿಲ್ಪ ಕಲೆಯನ್ನು ಕಾಣಲು, ನಿಸರ್ಗದ ಚೆಲುವನ್ನು ಅನುಭವಿಸಲು. ಉತ್ತಮ ಮಟ್ಟದವರಾದರೆ ಪ್ರವಾಸಿ ಕೇಂದ್ರದ ಇತಿಹಾಸ, ಪೂರ್ವೋತ್ತರ, ಸ್ವಾರಸ್ಯ ಇಷ್ಟಾದರೆ ಸಾಕು.

ಮೋಜು ಮಾಡಲೆಂದೇ ಬರುವ ಪ್ರವಾಸಿಗಳೂ ಸುಮಾರು ಸಂಖ್ಯೆಯಲ್ಲಿರುತ್ತಾರೆ. ಇವರಿಂದಲೇ ಆದಾಯ ಹೆಚ್ಚುವುದೂ ದಿಟ.

ಪ್ರವಾಸೋದ್ಯಮ ಇವರಿಗೆ ಮರ್ಯಾದೆಯ ಮಣೆಯನ್ನು ಹಾಕುವುದೂ ಸಹಜವೇ. ಇಂಥ ಪ್ರವಾಸಿಗಳಿಗೆ ಬೇಕಾಗುವ ಸೌಕರ್ಯ, ಸೌಲಭ್ಯಗಳನ್ನೊದಗಿಸಲು ಹೊರಡುವಾಗ, ಪ್ರವಾಸಿ ಕೇಂದ್ರ ಎಷ್ಟರಮಟ್ಟಿಗೆ ಕೆಡುತ್ತದೆ, ಸುತ್ತಮುತ್ತ ಇರುವ ಜನ ಹೇಗೆ ಕಷ್ಟಕ್ಕೀಡಾಗುತ್ತಾರೆ, ನಾಡಿನ ಸಂಸ್ಕೃತಿಗೆ ಯಾವ ಪೆಟ್ಟು ಒದಗುತ್ತದೆ ಎಂಬುದನ್ನು ಕಾಣಬೇಕೆಂದರೆ ಮರವಂತೆಯೇ ಮೊದಲಾದ ಪ್ರವಾಸಿ ಕೇಂದ್ರಗಳನ್ನು ನೋಡಬೇಕು.

ನಮ್ಮ ನಾಡಿನಲ್ಲೇ ಇನ್ನೂರೈವತ್ತು ಪ್ರವಾಸಿ ಕೇಂದ್ರಗಳಿವೆಯಂತೆ. ಒಂದೊಂದರಲ್ಲೂ ಪ್ರವಾಸಿಗಳು ತಂಗಲು ಎಡೆ, ವಿಹರಿಸಲು ತಾಣ, ಸುಖಪಡಲು ಭೋಗಸಾಮಗ್ರಿ ಇವುಗಳಿರಬೇಕಲ್ಲವೆ? ಇವುಗಳ ವ್ಯವಸ್ಥೆ ಅಂತಾರಾಷ್ಟ್ರೀಯ ಮಟ್ಟದಲ್ಲೇ ಇರಬೇಕೆಂಬುದು ಬಯಕೆ!

ಪ್ರವಾಸಿ ಕೇಂದ್ರದ ಪ್ರಧಾನ ಆಕರ್ಷಣೆಯತ್ತ ಈ ಉದ್ಯಮದ ಗಮನ ಹರಿಯುವುದಿಲ್ಲ. ಅಲ್ಲಿ ಬೇಕಾಗುವ ಹೋಟೆಲ್, ಬಾರ್ ಮುಂತಾದ್ದರ ವ್ಯವಸ್ಥೆಯಲ್ಲಿಯೇ ಉದ್ಯಮದ ಆಯುಸ್ಸು ಕಳೆಯುತ್ತದೆ.

ಈ ವ್ಯವಸ್ಥೆಯನ್ನು ಮಾಡುವವರು ಅಲ್ಲಿನ ಜನರ ನೆಮ್ಮದಿಯನ್ನು ಸಾಕಷ್ಟು ಕದಡುತ್ತಾರೆ, ಪ್ರಕೃತಿಯನ್ನು ಹಾಳುಮಾಡುವುದರೊಂದಿಗೆ ಜನರನ್ನೂ ಕೆಡಿಸುತ್ತಾರೆ.

ಇದಕ್ಕೇನು ಮದ್ದೋ ಪುರಂದರ ವಿಠಲ!

147. ಕಳ್ಳ-ಠಕ್ಕ

ಸರ್ವಜ್ಞನದೊಂದು ವಚನ–

'ಒಳ್ಳೆಯವರೊಡನಾಡಿ ಕಳ್ಳನೊಳ್ಳಿದನಕ್ಕು
ಒಳ್ಳೆಯವನು ಕಳ್ಳರೊಡನಾಡೆ ಅವ ಶುದ್ಧ
ಕಳ್ಳ ತಾನಕ್ಕು ಸರ್ವಜ್ಞ

ಕಳ್ಳನು ಒಳ್ಳೆಯವರ ಜೊತೆ ಸೇರಿದರೆ ಅವನೂ ಒಳ್ಳೆಯವನಾಗುವ ಸಾಧ್ಯತೆಯುಂಟು. ಒಳ್ಳೆಯವನು ಕಳ್ಳರ ಜೊತೆ ಸೇರಿದರೆ ಅವನೂ ಕಳ್ಳನೇ ಆಗುತ್ತಾನೆ. ಕಳ್ಳರಲ್ಲಿ ಕದೀಮನಾಗುತ್ತಾನೆ. ಇದರಲ್ಲಿ ಸಂಶಯವಿರದು— ಇದು ಈ ವಚನದ ತಾತ್ಪರ್ಯ. ಕಳ್ಳನಾದವನು ಸಂದರ್ಭದಿಂದಲೋ, ಅಗತ್ಯದಿಂದಲೋ, ಅನಿವಾರ್ಯವಾಗಿಯೋ, ಅಜ್ಞಾನದಿಂದಲೋ, ಒತ್ತಡದಿಂದಲೋ ಕಳ್ಳನಾಗುತ್ತಾನೆ.

ಕಳ್ಳನಾಗಿಯೇ ಉಳಿಯಬೇಕೆಂಬ ಬಯಕೆ ಅವನಿಗೇನಿರದು.

ಅಂಥವನು ಒಳ್ಳೆಯವರ ಸಹವಾಸಕ್ಕೆ ಬಂದಾಗ ತನ್ನ ತಪ್ಪನ್ನು ತಿದ್ದಿಕೊಂಡು ಒಳ್ಳೆಯವನಾದಾನು. ಪಶ್ಚಾತ್ತಾಪದಿಂದ ಉತ್ತಮನಾದಾನು.

ಒಳ್ಳೆಯವನು ಎಂದರೆ ಸರಿಯಾದ ದಾರಿಯಲ್ಲಿ ನಡೆಯುವವನು, ಸರಿಯಾದ ಆಲೋಚನೆ ಮಾಡುವವನು, ಬೇರೆಯವರಿಗೆ ತೊಂದರೆ ಕೊಡದವನು, ಹಿತಮಿತವಾಗಿ ನಡೆದುಕೊಳ್ಳುವವನು, ಯಾರಿಗೂ ದ್ರೋಹಮಾಡದವನು.

ಇವನಿಗೆ ಬುದ್ಧಿಶಕ್ತಿಯೂ ಇರಬೇಕು, ವಿವೇಚನಾಶಕ್ತಿಯೂ ಇರಬೇಕು. ಧೈರ್ಯವೂ ಇರಬೇಕು. ಜನರ ಒತ್ತಾಸೆಯೂ ಅಂಥವನಿಗೆ ಇದ್ದೇ ಇರುತ್ತದೆ.

ಒಳ್ಳೆಯವನು ಕಳ್ಳರ ಜೊತೆ ಸೇರಬೇಕಾದ ಅಗತ್ಯವೇನು?

ಇಂಥವನು ತನ್ನ ದಾರಿ ಬಿಟ್ಟು ಕಳ್ಳರ ದಾರಿಯನ್ನು ಹಿಡಿದರೆ ಅವನು ಶುದ್ಧಕಳ್ಳನೇ ಆಗುತ್ತಾನೆ. ಅವನು ಮತ್ತೆ ಒಳ್ಳೆಯವನಾಗುವ ಸಂಭವ ಕಡಮೆ. ಒಳ್ಳೆಯತನದಲ್ಲಿ ಆದರ ತಪ್ಪಿಯೇ ಅವನು ಕಳ್ಳರ ಗುಂಪಿಗೆ ಸೇರಿದ್ದು! ಮತ್ತೇಕೆ ಹಿಂದಿರುಗಿಯಾನು?

ಸಂಸಾರಿಯಾದವನು ವಿರಕ್ತರ ಜೊತೆಗಿದ್ದರೆ ಅವನ ವೈರಾಗ್ಯ ದಿಟವಾಗಿ ಬೆಳೆದೀತು. ಸಾಧನೆ ಫಲಿಸೀತು. ವಿರಕ್ತನಾಗಿ ಸನ್ಯಾಸಿಯಾಗಿದ್ದವನು ಸಂಸಾರಿಗಳೊಂದಿಗೆ ಒಡನಾಡತೊಡಗಿದರೆ ಅವನ ವಿರಕ್ತಿ ಉಳಿಯುವುದೆ? ಸಂಸಾರಿಗಿಂತ ಅವನ ಸುಖದಾಸೆ ಹೆಚ್ಚು ಬೆಳೆಯುತ್ತದೆ. ಸಂಸಾರದಲ್ಲಿ ಅವನ ಆಸಕ್ತಿ ಬೇರೂರಿ ಹೋಗುತ್ತದೆ. ವೈರಾಗ್ಯದ ಗಾಳಿಗಂಧವೂ ಅವನ ಬಳಿ ಸುಳಿದಾಡದು.

ಸರ್ವಜ್ಞನು ಇಂಥ ಸಂಸಾರಿ-ಸನ್ಯಾಸಿಗಳನ್ನು ಕಂಡಿದ್ದುದು ಅವನ ವಚನಗಳಿಂದ ತಿಳಿಯುತ್ತದೆ. ಸನ್ಯಾಸಿಯ ಸೇವೆ ಮಾಡಿ ಉದ್ಧಾರವಾದ ಸಂಸಾರಿಗಳನ್ನೂ ಸಂಸಾರಿಗಳ ಸಂಸರ್ಗದಿಂದ ಕೆಟ್ಟ ಸನ್ಯಾಸಿಗಳನ್ನೂ ನಾವು ನೋಡಿದ್ದೇವಲ್ಲವೆ?

ಕಳ್ಳನು ಒಳ್ಳೆಯವನಾದರೆ ಒಳ್ಳೆಯವನೇ ಅವನನ್ನು ನಂಬಬಹುದು. ಒಳ್ಳೆಯವನು ಕಳ್ಳನಾದರೆ ಅವನು ಠಕ್ಕ, ಅವನನ್ನು ಹಿಡಿಯುವುದು ಕಷ್ಟ. ನಂಬುವುದು ಇನ್ನೂ ಕಷ್ಟ.

148. ಧನ-ದಯೆ

'ಧನವಿದ್ದು ಫಲವೇನು, ದಯವಿಲ್ಲದನಕ?'

ಧನಕ್ಕೂ ದಯೆಗೂ ಇರುವ ನಂಟನ್ನು ಕುರಿತದ್ದು ಮೇಲಿನ ಮಾತು. ಧನವಿದ್ದಲ್ಲಿ ದಯೆಯಿರಲೇಬೇಕೆಂದು ಮಾತಿನ ಸೂಚನೆ.

ಧನವೆಂದರೇನೋ ಎಲ್ಲರೂ ಬಲ್ಲರು. ದಯೆಯೆನ್ನುವ ಮಾತು ಅಷ್ಟು ಖಚಿತವಾದ ಅರ್ಥವನ್ನು ಪಡೆದುಕೊಂಡಿಲ್ಲವಾದರೂ ತಾತ್ಪರ್ಯವೇನೋ ತಿಳಿಯಾಗಿದೆ.

ಬೇರೆಯವರ ಕಷ್ಟದಲ್ಲಿ ನೆರವಾಗುವ ಮನಸ್ಸು ಇರುವುದೇ ದಯೆ ಯೆನ್ನಬಹುದು. ಬೇರೆಯವರನ್ನು ತೊಂದರೆಗೆ ಸಿಕ್ಕಿಸದಿರುವುದೂ ದಯೆಯ ಪ್ರಕಾರವೇ. ತನ್ನಂತೆಯೇ ಇತರರು ಎಂದು ಬಗೆದು, ತನಗೆ ಬೇಡೆನಿಸಿದುದನ್ನು ಅವರಿಗೆ ಮಾಡದಿರುವ ಔದಾರ್ಯವೇ ದಯೆ.

ಧನ ಬಂದಿತೆಂದರೆ ತನ್ನ ಅನುಕೂಲಗಳು ಹೆಚ್ಚಿದವು; ತನ್ನ ಸಾಮರ್ಥ್ಯ ಹೆಚ್ಚಿತು; ನೆಮ್ಮದಿಗೆ ದಾರಿಯಾಯಿತು; ಧನದಿಂದ ತನ್ನ ಬದುಕು ನಿರಾಳವಾಗುವ ಸಾಧ್ಯತೆಯಿದೆ ಎಂದು ಯಾರಾದರೂ ಭರವಸೆ ತಾಳಿಯಾರು.

ಹೀಗೆಂದು ಧನವನ್ನಾಗಲಿ ಅದರ ಫಲವನ್ನಾಗಲಿ ತಾನೊಬ್ಬನೆ (ಅಥವಾ ತನ್ನ ಕುಟುಂಬವೊಂದೆ) ಅನುಭವಿಸಲೆಂದು ಮೀಸಲು ಮಾಡಿಕೊಂಡರೆ ಅದು ಸ್ವಾರ್ಥವೆನಿಸಿಕೊಳ್ಳುತ್ತದೆ. ಅವರವರ ಪಾಡು ಅವರವರದ್ದು ಎಂದು ಸ್ವಾರ್ಥಿಯ ಎಣಿಕೆ—ಬೇರೆಯವರ ಕಷ್ಟಕ್ಕೆ ತಾನು ಹೊಣೆಯೆ?

ಪ್ರತಿಯೊಬ್ಬನ ನಿಲುವು ಇಷ್ಟೇ ಆಗಿಬಿಟ್ಟರೆ ಸಮುದಾಯ ಜೀವನ ಸಾಧ್ಯವಿಲ್ಲ. ಅದರಲ್ಲಿ ಸ್ವಾರಸ್ಯವೂ ಇರುವುದಿಲ್ಲ. ಸಮುದಾಯದ ಅಗತ್ಯವಿರುವುದೇ ಪರಸ್ಪರ ನೆರವಿನಲ್ಲಿ. ತನ್ನ ಪಾಡಿಗೆ ತಾನು ಎಂದಾದರೆ ಸಮಾಜವೇಕೆ? ಕುಟುಂಬವೇಕೆ?

ದಯೆಯ ಪಾತ್ರವಿರುವುದು ಸಮುದಾಯದ ಚೌಕಟ್ಟಿನಲ್ಲಿ. ಬೇರೆಯವರ ಹಿತವನ್ನೋ ಸುಖವನ್ನೋ ನಾವು ಗಮನಿಸದಿದ್ದರೆ, ಬಯಸದಿದ್ದರೆ ನಮ್ಮ ಬದುಕೇ ಸಮಗ್ರವಲ್ಲ, ಸಫಲವಲ್ಲ. ಸ್ವಾರ್ಥಿಗಳಾದರೂ ತಮಗೆ ಬೇರೆಯವರು ನೆರವಾಗಲೆಂದು ಆಶಿಸುವರಷ್ಟೆ? ಅದಕ್ಕಾದರೂ ಅವರು ಬೇರೆಯವರಿಗೆ ನೆರವಾಗಬೇಕು. ಇದೇನು ಔದಾರ್ಯವಲ್ಲ, ಸ್ವಾರ್ಥ. ಆದರೆ ಸಮಾಜದ ಕಟ್ಟುಪಾಡಿನಲ್ಲಿ ಇದಕ್ಕೂ ಬೆಲೆಯುಂಟು.

ನೆರವಾಗುವುದು ಅನೇಕ ಬಗೆಗಳಲ್ಲಿ. ಮಾತಿನಿಂದ, ಕೆಲಸದಿಂದ, ಒತ್ತಾಸೆಯಿಂದ, ಧೈರ್ಯ ಹೇಳುವುದರಿಂದ, ಒಳಿತನ್ನು ಕೋರುವುದರಿಂದ, ಧನಸಹಾಯ ಮಾಡುವುದರಿಂದ. ಯಾವ ಬಗೆಯ ನೆರವು ಸಾಧ್ಯವೆಂಬುದು ಮುಖ್ಯ.

ಧನದಿಂದ ನೆರವಾಗುವುದಿದ್ದಾಗ ಧನಸಹಾಯ ಮಾಡಬೇಕಾದುದು ಪ್ರಸ್ತುತವಾಗುತ್ತದೆ. ಹೀಗೆ ಧನಸಹಾಯ ಮಾಡುವಾಗ ಮನಸ್ಸಿನಲ್ಲಿ ಕಿರಿಕಿರಿಯಿದ್ದರೆ ಸಹಾಯವು ಸಂಪನ್ನವಾಗುವುದಿಲ್ಲ. ಔದಾರ್ಯದ, ಸಹಾನುಭೂತಿಯ ಮನಸ್ಸು ಇರಬೇಕು. ಇದೇ ದಯೆಯೆನಿಸಿಕೊಳ್ಳುವುದು.

ಧನವು ದ್ರವ್ಯ, ಹೊರಗಣ ವಿವರ, ಅದರಿಂದಾಗುವ ಪ್ರಯೋಜನವಿದ್ದೇ ಇದೆ. ಆದರೆ ದಯೆಯು ಸತ್ತ್ವ, ಒಳಗಿನ ವಿಚಾರ, ಅದರಿಂದಲೂ ಫಲವಿದ್ದೇ ಇದೆ.

149. ಉಪ್ಪು-ಹಣ

ಹಣವೆಂದರೆ ಉಪ್ಪಿನಂತೆ. ಹೀಗೆ ಶಿವರಾಮ ಕಾರಂತರೊಮ್ಮೆ ಹೇಳಿದರು. ಸ್ವಲ್ಪ ನಾಲಗೆಯ ಮೇಲಿರಿಸಿಕೊಂಡರೆ ರುಚಿ. ಅದನ್ನೇ ಹೆಚ್ಚು ತಿಂದರೆ ದಾಹ!

ಈ ಸಾಮತಿ ಹಲವು ವಿಧಗಳಲ್ಲಿ ಸರಿಯಾದುದು.

ಉಪ್ಪಿಲ್ಲದೆ ಊಟವುಂಟೆ? ಹಣವಿಲ್ಲದೆ ಬದುಕು ನಡೆಯುವುದಾದೀತೆ? ಇಂಗ್ಲೀಷಿನಲ್ಲಿ ಹಣವನ್ನು 'ಸಾಲ್ಟ್ ಆಫ್ ಲೈಫ್' ಎಂದು ಬಣ್ಣಿಸಿರುವುದು ದಿಟ.

ಆದರೆ ಬರಿಯ ಉಪ್ಪಿನಿಂದಲೇ ಊಟವೆಂದರೆ ಹೇಗೆ? ಹಣವಿದ್ದರಾಯಿತು, ಬದುಕುವೆವು ಎಂದು ಯಾರು ಹೇಳಿಯಾರು?

ಬೇರೆಯ ಅಡುಗೆಯಿದ್ದರೆ ಉಪ್ಪು ತುಸು ಅದಕ್ಕೆ ಸೇರಿದರೆ ರುಚಿ. ಯಾರಿಲ್ಲವೆನ್ನುತ್ತಾರೆ? ಉಪ್ಪು ಕಡಮೆಯಾದರೆ ಸಾರಾಗಲಿ ಪಲ್ಯವಾಗಲಿ ರುಚಿಸುವುದಿಲ್ಲ. ಬದುಕಿನ ಹಲವು ಪರಿಕರಗಳಿಗೆ ಹಣದ ಅಗತ್ಯವಿದೆ. ಹಣವಿದ್ದರೆ ಹೆಚ್ಚು ಹುಮ್ಮಸ್ಸು.

ಆದರೆ ಎಲ್ಲ ತಿನಿಸುಗಳಿಗೂ ಉಪ್ಪು ಬೇಕೇಬೇಕೆಂದಿಲ್ಲವಲ್ಲ? ಪಾಯಸಕ್ಕೆ ಉಪ್ಪು ಬೆರೆಸುವುದುಂಟೆ? ಉಪ್ಪಿಲ್ಲದೆ ಅಡುಗೆಯೇ ಆಗದು ಎಂದು ಯಾರು

ಹೇಳಿಯಾರು? ಹಾಗೆಯೇ ಹಣದಿಂದಲೇ ಎಲ್ಲ ಅನುಕೂಲಗಳೂ ಎನ್ನುವಂತಿಲ್ಲ. ಬದುಕಿನಲ್ಲಿ ಒಲವು, ವಿಶ್ವಾಸ ಅನುರಾಗ, ಕಲಾಪ್ರೀತಿ ಇವೆಲ್ಲವೂ ಹಣವನ್ನು ಅವಲಂಬಿಸುವುದಿಲ್ಲ.

ಮತ್ತೆ, ಉಪ್ಪಿನಿಂದ ರುಚಿ ಬರುವುದಾದರೂ, ಹದ ಮೀರಿದರೆ ರುಚಿ ಕೆಡುತ್ತದೆ. ಉಪ್ಪು ಹೆಚ್ಚಾದರೆ ಏನನ್ನು ತಾನೆ ತಿನ್ನಬಹುದು? ಬೇರೆಲ್ಲ ಪದಾರ್ಥಗಳ ಅಳತೆ ಸರಿಯಾಗಿಯೇ ಇದ್ದರೂ ಉಪ್ಪು ತೂಕ ಮೀರಿದ್ದರೆ ಅಡುಗೆ ಕೆಟ್ಟಂತೆಯೇ. ಉಪ್ಪು ಕಡಮೆಯಾದರೆ ಸೇರಿಸಿಕೊಂಡು ಸರಿಮಾಡಿಕೊಳ್ಳಬಹುದು. ಹೆಚ್ಚಾದರೆ ಮಾಡುವುದೇನು?

ಹಣಕ್ಕೂ ಇದೇ ಮಾತು ಅನ್ವಯಿಸುತ್ತದೆ. ಹಣ ಹೆಚ್ಚಾದರೆ ಅನುಕೂಲವೂ ಹೆಚ್ಚುತ್ತದೆ ಎಂದು ಹೇಳಬಹುದು. ಅನುಕೂಲ ಹೆಚ್ಚಾದರೆ ಸಂತೋಷವೂ ಹೆಚ್ಚುತ್ತದೆ. ಅಗತ್ಯವಿರುವಷ್ಟು ಹಣವಿದ್ದರೆ ಒಳಿತು. ಮಿತಿ ಮೀರಿ ಹಣ ಬಂದರೆ ಅದರಿಂದ ತೊಂದರೆ ಕಟ್ಟಿಟ್ಟದ್ದೇ.

ಉಪ್ಪು ತಿಂದರೆ ನೀರು ಕುಡಿಯುವ ಕಾತರವಿರುವುದನ್ನು ಎಲ್ಲರೂ ಬಲ್ಲರು. ಹಣವಿದ್ದರೆ ಆಸೆ ಹೆಚ್ಚುವುದನ್ನೂ ಎಲ್ಲರೂ ಬಲ್ಲರು. ಏನೂ ಇರದಾಗ ದುರಾಸೆಯಿರುವುದಿಲ್ಲ. ಸ್ವಲ್ಪ ಬಂದರೆ ಇನ್ನಷ್ಟು ಬರಲಿ ಎನ್ನುವ ಆಸೆ ದುರಾಸೆಯೆನಿಸಿಕೊಳ್ಳುತ್ತದೆ.

ಉಪ್ಪು ತಿನ್ನದೆಯಿದ್ದಾಗ ಬಾಯಾರಿಕೆಯಿರುವುದಿಲ್ಲ; ಉಪ್ಪನ್ನು ಸ್ವಲ್ಪ ತಿಂದರೂ ನೀರು ಬೇಕೆನಿಸುತ್ತದೆ. ಇದು ಸಹಜವಾದ ದಾಹವಲ್ಲ; ಉಪ್ಪಿನ ಮಹಿಮೆ ಇದು.

ಹಣಕ್ಕೂ ಉಪ್ಪಿಗೂ ಹೋಲಿಕೆಗಳು ಎಷ್ಟಿವೆ?

150. ಸುಖವೆಂದರೆ ಏನು?

ಈಗ ವಿದ್ಯೆಗೂ ಉದ್ಯೋಗಕ್ಕೂ ತೀರದ ನಂಟು.

ಉದ್ಯೋಗಕ್ಕಾಗಿಯೇ ವಿದ್ಯೆ ಎನ್ನುವವರೇ ಬಹುಸಂಖ್ಯಾತರು.

ಉದ್ಯೋಗಕ್ಕೆ ಇರುವ ಹಲವು ಬಾಗಿಲುಗಳಲ್ಲಿ ವಿದ್ಯಾರ್ಹತೆಯೊಂದು ಪ್ರಮುಖವಾದುದು. ಹೀಗಾದುದರಿಂದ ಉದ್ಯೋಗಕ್ಕೆ ಬಾರದ ವಿದ್ಯೆಯನ್ನು ಮೂಸುವವರು ಯಾರು?

ಉದ್ಯೋಗವಾದರೂ ಏತಕ್ಕೆಂಬುವವರು ಬಹುಜನರಿರರು. ಉದ್ಯೋಗವೆಂದರೆ ಶ್ರಮವಾದರೂ ಹಣ ಸಂಪಾದನೆಗೆ ಉದ್ಯೋಗವೇ ಹೆಬ್ಬಾಗಿಲು. ಸಂಪತ್ತನ್ನು ಒದಗಿಸಲಾರದ ಉದ್ಯೋಗವನ್ನಾದರೂ ಯಾರು ಹಿಡಿಯುತ್ತಾರೆ?

ಇನ್ನು ಮುಂದಿನ ಪ್ರಶ್ನೆ, ಹಣ ಸಂಪಾದನೆಯಾದರೂ ಯಾತಕ್ಕೆ ಬೇಕು? ಈ ಪ್ರಶ್ನೆ ಎದ್ದುಕೊಳ್ಳುವುದು ತೀರ ಹೆಡ್ಡರಿಗೆ ಮಾತ್ರ. ಬುದ್ಧಿವಂತರೆನಿಸಿಕೊಳ್ಳುವ ಯಾರೂ ಇದನ್ನು ಕೇಳುವುದಿಲ್ಲ.

ಏಕೆಂದರೆ ಉತ್ತರ ಎಲ್ಲರಿಗೂ ತಿಳಿದದ್ದೇ. ಹಣವೇ ಸುಖಕ್ಕೆ ದಾರಿಯಲ್ಲವೆ? ಹಣವಿಲ್ಲದೆ ಏನನ್ನು ತಾನೆ ಮಾಡಲಾದೀತು? ಸುಖ ಯಾರಿಗೆ ಬೇಡ? ಹಣವಿಲ್ಲದೆ ಸುಖವಿಲ್ಲ.

ಇಲ್ಲಿಗೆ ಸಂವಾದ ಮುಗಿದಂತೆಯೇ. ಆದರೆ ಸಂಶಯಗಳೆಲ್ಲವೂ ಮರೆಯಾದವು ಎನ್ನುವಂತಿಲ್ಲ. ಸುಖವೆಂದರೆ ಏನು? ಹಣದಿಂದ ಅದು ಒದಗಿ ಬರುತ್ತದೆಯೆ?– ಎಂಬ ಸಮಸ್ಯೆಗಳು ಉಳಿದುಕೊಳ್ಳುತ್ತವೆ.

ವಿದ್ಯೆಯಿಂದ ಉದ್ಯೋಗ ದೊರೆಯುವುದು ದಿಟ; ಉದ್ಯೋಗದಿಂದ ಹಣ ದೊರೆಯುವುದೂ ದಿಟವೇ. ಆದರೆ ಹಣದಿಂದ ಸುಖ ದೊರೆಯುತ್ತದೆ ಎಂದು ಧೈರ್ಯವಾಗಿ, ನಿರ್ಧಾರವಾಗಿ ಹೇಳುವುದಾದೀತೆ? ಹಣವಿದ್ದೂ ಸುಖವಿಲ್ಲದ ಮಂದಿಯನ್ನು ಯಾರು ಕಂಡರಿಯರು?

ಹಣದಿಂದ ಸುಖ ಬರುವುದಿಲ್ಲವೆಂದ ಮೇಲೆ ಹಣದಿಂದ ಏನು ಬರುವುದೋ ಅದನ್ನೇ ಸುಖವೆಂದರಾಯಿತು, ಅಲ್ಲವೆ? ಈ ತರ್ಕವೇ ಈಗ ವ್ಯಾಪಕವಾಗಿರುವುದು. ಸುಖ ಕಾಲ್ಪನಿಕವಾದದ್ದು; ಹಣ ವಾಸ್ತವವಾದದ್ದು. ಸುಖ ಬಾರದಿದ್ದರೂ ಹಣ ಬರಲಿ.

ಹಣವಿದ್ದರೆ ತಾನೆ ಮನೆ, ವಾಹನ, ಪರಿಕರಗಳು, ಸೇವಕರು, ಡೌಲು, ಆಡಳಿತ, ಅಧಿಕಾರ ಎಲ್ಲವೂ? ಇವೆಲ್ಲ ಸುಖಸಾಧನೆಗಳಲ್ಲವೆ? ಹಣವಿಲ್ಲದವನಿಗೆ ಕೈಗೆಟುಕುವ ಸೌಕರ್ಯಗಳೇ ಇವು?

ಹಣವಿದ್ದರೆ ಸುಖ ಬಾರದಿರಬಹುದು; ಆದರೆ ಹಣವಿಲ್ಲದವನಿಗೆ ಸುಖ ಬರುವ ಸಾಧ್ಯತೆಯೇ ಇಲ್ಲವೆಂದು ಜನರ ಅನಿಸಿಕೆ. ಅದಕ್ಕೇ ಹಣದ ಬಯಕೆ.

ಮೇಲ್ನೋಟಕ್ಕೆ ಇದು ಸರಿಯೆಂದೇ ತೋರುತ್ತದೆ. ಆದರೆ ಸ್ವಲ್ಪ ವಿಚಾರ ಮಾಡಿದರೆ ಸಂಶಯ ಮೂಡುತ್ತದೆ. ಸುಖವೆಂದರೆ ಏನು ಎಂಬ ಮೂಲಭೂತ ಪ್ರಶ್ನೆ ಬಗೆಹರಿಯುವುದಿಲ್ಲ.

ಮನಸ್ಸಿನ ನೆಮ್ಮದಿ, ಶರೀರದ ಆರೋಗ್ಯ, ಇಂದ್ರಿಯಗಳ ಪಾಟವ, ಪರಾವಲಂಬನೆಯಿಲ್ಲದಿರುವುದು ಇವು ಸುಖದ ಪ್ರಕಾರಗಳೆಂದು ಎಲ್ಲರೂ ಒಪ್ಪುತ್ತಾರೆ.

ಇವಕ್ಕೂ ಹಣಕ್ಕೂ ಕಾರ್ಯಕಾರಣ ಸಂಬಂಧವಿದ್ದಂತೆ ಕಾಣುವುದಿಲ್ಲ. ಹಣವಿದ್ದರೆ ಮನಸ್ಸಿನ ನೆಮ್ಮದಿಯೂ ಇರುವುದಾಗಲಿ, ಆರೋಗ್ಯವೂ ಸಿದ್ಧವಾಗಿರುವುದಾಗಲಿ, ಇಂದ್ರಿಯಗಳೂ ಚೆನ್ನಾಗಿರುವುದಾಗಲಿ ಎಲ್ಲರ ಅನುಭವದಲ್ಲೂ ಇದೆಯೆ?

151. ಪರಾವಲಂಬನೆ

ಸುಖವನ್ನು ಬಯಸುವವರು ಹಣಕ್ಕೆ ಹಂಬಲಿಸುತ್ತಾರೆ. ಸುಖವನ್ನು ಕೊಡಲಾರದು ಎಂದಾದರೆ ಹಣದ ಅಗತ್ಯವೇನು? ಅದನ್ನು ಸಂಪಾದಿಸುವ ಶ್ರಮವೇತಕ್ಕೆ?

ಜನರ ಮನಸ್ಸಿನಲ್ಲಿ ಹಣಕ್ಕೂ ಸುಖಕ್ಕೂ ನೇರವಾದ ನಂಟಿದೆ. ಅದು ಎಷ್ಟು ಬೇರೂರಿದೆಯೆಂದರೆ ಅದು ಸರಿಯೋ ಅಲ್ಲವೋ ಎಂಬ ಸಂದೇಹವೇ ಏಳುವುದಿಲ್ಲ.

ಹಣವಿದ್ದರೆ ಸುಖ; ಹಣವಿಲ್ಲದಿದ್ದರೆ ಸುಖವೂ ಇಲ್ಲವೆಂಬ ಭಾವನೆ ಹರಡಿಕೊಂಡಿದೆ. ಹಣವಿದ್ದೂ ಸುಖವಿಲ್ಲದವರನ್ನು ನಾವು ನೋಡಿಲ್ಲವೆಂದಲ್ಲ; ಹಣವಿಲ್ಲದೆ ಸುಖವಾಗಿರುವವರು ಬಹುಮಂದಿಯಿಲ್ಲ.

ಹಣದಿಂದ ಸುಖದ ಸಾಧನಗಳು ಸಿಗುತ್ತವೆಯೆಂಬಷ್ಟು ದಿಟ. ಆದರೆ ಸಾಧನಗಳಿದ್ದ ಮಾತ್ರಕ್ಕೆ ಸಿದ್ಧಿಯೂ ತಾನಾಗಿ ಒದಗಿಬರುವುದೆಂಬ ನಿಯಮವಿದೆಯೆ?

ಹಣಕ್ಕೂ ಸುಖಕ್ಕೂ ನಡುವೆ ಇನ್ನೊಂದು ವಿವರ ಯಾವುದೋ ಇರಬೇಕು. ಅದು ಸುಖದಂತೆ ಕಾಲ್ಪನಿಕವೂ ಅಲ್ಲ, ಹಣದಂತೆ ವಾಸ್ತವಿಕವೂ ಅಲ್ಲ. ಎರಡೂ ಅಲ್ಲದ್ದು, ಆದರೆ ಎರಡರ ಗುಣಗಳನ್ನೂ ಒಳಗೊಂಡದ್ದು ಆಗಿರಬೇಕು.

ಹಣದಿಂದ ಇದನ್ನು ಮೊದಲು ಸಾಧಿಸಿಕೊಂಡರೆ, ಇದರಿಂದ ಅನಂತರ ಸುಖವನ್ನು ಸಾಧಿಸಿಕೊಳ್ಳುವುದು ಸುಲಭವಾದೀತು. ಈ ಮಧ್ಯಮತತ್ತ್ವ ಯಾವುದು?

ಸಂಸ್ಕೃತದಲ್ಲಿ ಇದನ್ನು 'ವಿನಾ ದೈನ್ಯೇನ ಜೀವನಂ' ಎಂದು ನಿರ್ದೇಶಿಸಿದ್ದಾರೆ. ದೈನ್ಯವಿಲ್ಲದಂತೆ ಬದುಕುವುದು ಎಂದರ್ಥ.

ದೈನ್ಯವೆಂದರೆ ಅವರಿವರ ಮುಂದೆ ಟೊಂಕ ಬಗ್ಗಿಸಿ, ಕೈಯೊಡ್ಡಿ ಬೇಡಿಕೊಳ್ಳುವ ಸ್ಥಿತಿ; ಪರಾವಲಂಬನೆ.

ಹಣವಿದ್ದರೆ ಹೊಟ್ಟೆಗೆ ಬಟ್ಟೆಗೆ ತೊಂದರೆಯಿಲ್ಲವೆಂಬ ಧೈರ್ಯ ಒದಗಿಬರುತ್ತದೆ; ತನ್ನ ಪಾಡಿಗೆ ತಾನು ಬದುಕಬಲ್ಲೆನೆಂಬ ವಿಶ್ವಾಸವಿರುತ್ತದೆ. ಇದು ಸ್ವಾವಲಂಬನೆ, ಸ್ವಾತಂತ್ರ್ಯ, ಯಾರ ಹಂಗೂ ತನಗಿಲ್ಲವೆಂಬ ನಿಲುವು. ಯಾರನ್ನೂ ಕಾಡಬೇಕಾದುದಿಲ್ಲ, ಬೇಡಬೇಕಾದುದಿಲ್ಲವೆಂಬ ನೆಮ್ಮದಿ.

ಹಣದ ಪ್ರಯೋಜನ ಪ್ರಧಾನವಾಗಿ ಇದು. ಈ ಬಗೆಯ ಸ್ವಾವಲಂಬನೆಯಿದ್ದಾಗ ಸುಖ ಕಟ್ಟಿಟ್ಟದ್ದು. ನೆಮ್ಮದಿಯಿರುವಾಗ ಸುಖವಿರದೆ?

ಈ ನಡುವಣ ವಿವರವನ್ನು ಅನೇಕರು ಗುರುತಿಸುವುದಿಲ್ಲ. ಹಣದಿಂದ ನೇರವಾಗಿ ಸುಖ ಬರುವುದೆಂದು ಭಾವಿಸಿ, ಹಣ ಗಳಿಸಿಕೊಂಡರೂ ಸುಖದಿಂದ

ವಂಚಿತರಾಗಿ ಪರದಾಡುತ್ತಾರೆ. ದೊಡ್ಡ ಮನೆ, ಮನೆ ತುಂಬ ಸೌಕರ್ಯ ಪರಿಕರಗಳು, ಕೈಗೊಬ್ಬ ಕಾಲಿಗೊಬ್ಬ ಆಳು, ವಾಹನಯೋಗ ಇವೆಲ್ಲ ಹಣದಿಂದ ಬರುತ್ತವೆ; ಆದರೆ ಇಷ್ಟಿದ್ದರೆ ಸುಖ ನೆಲೆಸಿತು ಎನ್ನುವಂತಿಲ್ಲ.

ಕಾರಣ, ಹಣವನ್ನೇ ನಂಬಿಕೊಂಡಿರುವವರು ಪರಾವಲಂಬಿಗಳು; ಅವರಿವರನ್ನು ಆಶ್ರಯಿಸದೆ, ಚತುರೋಪಾಯಗಳನ್ನು ಬಳಸದೆ, ಸಮಯ ಸಾಧಿಸದೆ, ಹೊಂಚು ಹಾಕದೆ, ಗಾಳಿ ಬಂದಾಗ ತೂರಿಕೊಳ್ಳದೆ ಹಣ ಬರುತ್ತದೆಯೆ? ಹೆಚ್ಚಿನ ಹಣ ಇನ್ನೂ ಹೆಚ್ಚುವುದು ಹೇಗೆಂಬ ತವಕವಿಲ್ಲದೆ ದೊಡ್ಡ ಕುಳವಾಗುವುದು ಹೇಗೆ?

ಈ ದಾರಿಯುನ್ನು ಹಿಡಿಯುವವರು ಸ್ವಾವಲಂಬಿಗಳಂತೆ ಸ್ವತಂತ್ರ ವಾಗಿರಲಾರರು. ನೆಮ್ಮದಿಯಿಂದ ಇರಲಾರರು. ಹಣವನ್ನಷ್ಟೆ ಅವಲಂಬಿಸಿದರೆ ಆದೀತೆ? ಹಣವುಳ್ಳವರನ್ನೂ ಅವಲಂಬಿಸಬೇಕಾಗುತ್ತದೆ; ಹಣ ಬರುವ ದಾರಿಯನ್ನೂ ಅವಲಂಬಿಸದೆ ಬೇರೆ ದಾರಿಯಿರದು. ಹೀಗಿರುವಾಗ ಸುಖವೆಲ್ಲಿಯದು?

152. ಕಿವುಡು-ಮರುಳು

ರೂಪಾಯಿಯ ಸದ್ದು ಕಿವಿಗೆ ಹಿತ, ಮನಸ್ಸಿಗೆ ಮೋಹಕ.

ಈ ಸದ್ದು ಕಿವಿಯಲ್ಲಿ ಬಿದ್ದರೆ ಇನ್ನಾವ ಸದ್ದೂ ಕೇಳಿಸದು, ಯಾರ ಮಾತೂ ತಿಳಿಯದು. ಮನಸ್ಸನ್ನು ಈ ಸದ್ದು ಮರುಳು ಮಾಡಿತೆಂದರೆ ಮನಸ್ಸು ವಿಚಾರ ಮಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತದೆ, ಮತ್ತೆ ಏನನ್ನೂ ಅದು ಗಮನಿಸದು.

ದುಡ್ಡಿಗಿರುವ ಈ ದೊಡ್ಡತನವನ್ನು ಎಲ್ಲರೂ ಅರಿತುಕೊಂಡಿದ್ದಾರೆ. ಈ ದೊಡ್ಡತನದ ಇಂಗಿತವೇನೆಂಬುದನ್ನು ಕೆಲವರಷ್ಟೆ ಬಲ್ಲರು. ದುಡ್ಡಿನ ಇನ್ನೊಂದು ಮುಖ ಅದು.

ಸಭ್ಯತೆಯೊಂದಿದೆಯಲ್ಲವೆ? ಬೇರೆಯವರ ಗೋಜಿಗೆ ಹೋಗದಿರುವುದು, ಅವರ ವ್ಯವಹಾರಗಳಲ್ಲಿ ಕೈ ಹಾಕದಿರುವುದು, ತಮ್ಮ ಹೆಗ್ಗಳಿಕೆಯನ್ನು ಹಾಡಿ ಹೊಗಳಿಕೊಳ್ಳದಿರುವುದು, ಬೇರೆಯವರಿಗೆ ಕಷ್ಟವನ್ನು ತಂದೊಡ್ಡದಿರುವುದು– ಇವೆಲ್ಲ ಸಭ್ಯತೆಯ ಲಕ್ಷಣಗಳು.

ಎಲ್ಲರೂ ಹೀಗಿರಬೇಕೆಂದು ಎಲ್ಲರೂ ಬಯಸುತ್ತಾರೆ. ಸಾಮಾನ್ಯ ಜನರು ಬಹುಮಟ್ಟಿಗೆ ಹೀಗೆಯೆ ಇರುತ್ತಾರೆನ್ನಿ. ಆಡಳಿತ, ಅಧಿಕಾರ, ಶ್ರೀಮಂತಿಕೆಗಳನ್ನು ಪಡೆದುಕೊಂಡವರು ಸಭ್ಯರಾಗಿರುವುದು ಸುಲಭವಲ್ಲ. ಇಲ್ಲಿ ದುಡ್ಡಿನ ದೊಡ್ಡತನ ಕಾಣುವುದಿಲ್ಲ, ಅದರ ಸಣ್ಣತನವೇ ಎದ್ದು ಕಾಣುತ್ತದೆ.

ದುಡ್ಡಿನಿಂದ ಬಂದೊದಗುವ ಜೋರು, ಜಂಭ, ಠೇಂಕಾರ, ಗತ್ತು ಇವುಗಳನ್ನು ಎಣಿಸದೆ ಬಿಟ್ಟರೂ, ಅದರಿಂದ ಬಂದ ಅವಿವೇಕ, ದುರಾಸೆ, ಲಂಪಟತನ, ದುರಾಚಾರಗಳನ್ನು ಮರೆಯುವಂತಿಲ್ಲ. ಧನಮದ ಇದ್ದಾಗ ಹಿತವಚನ ಕಿವಿಗೆ ಬೀಳುವುದಿಲ್ಲ, ಧರ್ಮದ ಮಾತು ಮನಸ್ಸಿಗೆ ಹಿತವೆನಿಸುವುದಿಲ್ಲ.

ದುಡ್ಡಿನ ಬೆನ್ನಟ್ಟಿ ಓಡುವಾಗ ನಯ, ವಿನಯ, ಅನುನಯ, ಧರ್ಮ, ಶ್ರದ್ಧೆ ಎಲ್ಲವೂ ಇರುತ್ತವೆ. ದುಡ್ಡು ಕೈಸೇರಿತೆಂದರೆ ಇವೆಲ್ಲ ಮರೆಯಾಗಿ ಬಿಡುತ್ತವೆ. ದುಡ್ಡನ್ನು ಬಿಟ್ಟರೆ ಬೇರೇನೂ ಬೇಡವಾಗುತ್ತದೆ.

ದುಡ್ಡಿದ್ದವನಿಗೆ ದುಡ್ಡಿದ್ದವನು ಮಾತ್ರ ಎದುರಾಗಿ ಕಾಣಿಸಿಕೊಳ್ಳುತ್ತಾನೆ. ಅವನ ವಿಚಾರವಾಗಿ ದುಡ್ಡು ಮಾಡಿಕೊಂಡವನೆಂಬ ಗೌರವ ಬುದ್ಧಿಯೂ ಇರುವುದುಂಟು. ಅವನನ್ನು ಮೀರಿಸಿ, ತಾನು ಮೆರೆಯಬೇಕೆಂಬ ಹಟವೂ ಅದರೊಂದಿಗೆ ಮೂಡಿಕೊಳ್ಳುತ್ತದೆ. ದುಡ್ಡಿಲ್ಲದವರು ಅವನ ದೃಷ್ಟಿಯಲ್ಲಿ ಕಸಕ್ಕಿಂತ ಕಡೆ.

ದಾನಧರ್ಮದ ಮನಸ್ಸಿದ್ದರೂ, ಸಿರಿವಂತನಿಗೆ ಇತರರನ್ನು ಕಂಡರೆ ಅನುಕಂಪಕ್ಕಿಂತ ಹೆಚ್ಚಾಗಿ ಹೀನಾಯ. ಬಡವನು ಬಡವನಾಗಿಯೇ ಉಳಿಯಬೇಕೆಂದು ಇವನ ಅಂತರಂಗದ ಅಭಿಲಾಷೆ. ಬೇರೆಯವರು ಕೈಯೊಡ್ಡಿದರೆ ತಾನೇ ಇವನ ಕೊಡುಗೈ ಎಲ್ಲರಿಗೂ ಕಾಣುವುದು?

ದುಡ್ಡಿದ್ದರೆ ಎಲ್ಲರಿಗೂ ಅದು ತಿಳಿಯಬೇಕೆಂಬುದೇ ಅದರ ಮುಖ್ಯ ಪ್ರಯೋಜನ. ದುಡ್ಡನ್ನು ಹಲವು ರೀತಿಗಳಲ್ಲಿ ಮೆರೆಸುವುದನ್ನು ಕಂಡಿಲ್ಲವೆ? ಮೋಜಿನ ಮನೆ, ಅದ್ದೂರಿಯ ಉತ್ಸವ, ವಿಲಾಯತಿಯ ವಾಹನ, ಅಲ್ಲಲ್ಲಿ ಚೆಲ್ಲುವ ಗೋಗ್ರಾಸ, ಹೊಗಳುಭಟ್ಟರ ಓಲಗ ಹೀಗೆ ಹತ್ತು ಹಲವು ದಾರಿಗಳು.

ಯಾರಿಗೂ ಕಾಣದ ಹಣದಿಂದ ಯಾರಿಗೆ ಏನಾಗಬೇಕಾಗಿದೆ? ಹಣವೋ ಕುರುಡು, ಯಾರ ಬಳಿ ಹೋಗಬೇಕೆಂದು ಅದಕ್ಕೆ ತಿಳಿಯದು. ಹಣವುಳ್ಳವನು ಕಿವುಡ, ಯಾರ ಕಿವಿಮಾತೂ ಕೇಳಿಸದು.

ನೆಟ್ಟಗೆ ನಡೆಯಬೇಕೆಂಬ ಮನಸ್ಸಾದರೂ ಇದ್ದೀತೆ ಎಂದರೆ ಅದು ಹೇಗೆ ಸಾಧ್ಯ? ಕುರುಡು-ಕಿವುಡುಗಳ ನಡುವೆ ಇದ್ದಾಗ ಮರುಳೇ.

153. ನಿಂತ ನೀರು

ತೆಲುಗಿನ ಸುಮತಿ ಶತಕದಲ್ಲೊಂದು ಮಾತಿದೆ–

'ನೀರು ನಿಲ್ಲುವ ಜಾಗದಲ್ಲಿ ಉತ್ತು ಬೆಳೆಯುವರುಂಟೆ?'

ಬೆಳೆಗೆ ನೀರು ಬೇಕು ದಿಟ; ನೀರಿಲ್ಲದೆ ಬೆಳೆ ಬರುವುದು ಕಷ್ಟ. ಆದರೆ ನೀರು ಪಾತಿಯಲ್ಲೇ ನಿಂತುಬಿಟ್ಟರೆ ಬೇರು ಕೊಳೆತು ಗಿಡ ಹಾಳಾಗುತ್ತದೆ.

ಈ ಮಾತು ಹಣದಿಂದ ಸುಖ ಪಡೆದುಕೊಳ್ಳಬೇಕೆಂದು ಬಯಸುವವರಿಗೂ ಅನ್ವಯಿಸುತ್ತದೆ. ಹಣಕ್ಕೂ ಸುಖಕ್ಕೂ ಇರುವ ನಂಟನ್ನು ಅರಿತುಕೊಳ್ಳಬೇಕು.

ಸುಖ ಪಡೆದುಕೊಳ್ಳಲು ಹಣ ಬೇಕು. ಹಣವಿಲ್ಲದೆ ಸುಖ ಬರುವುದು ಕಷ್ಟ. ಸುಖಕ್ಕೆ ಹಣ ಕಾರಣವಾಗಬಲ್ಲುದು.

ಆದರೆ ಹಣ ನೆಲೆಯಾಗಿ ನಿಂತುಬಿಟ್ಟರೆ, ಹರಿಯುವ ಶಕ್ತಿ ಅದಕ್ಕೆ ಹೋಗಿಬಿಟ್ಟರೆ, ಸುಖ ಒದಗಿಬರಲಾರದು. ಹಣದಿಂದ ಸುಖ ಎನ್ನುವ ಕಾರ್ಯಕಾರಣ ಸಂಬಂಧ ಇಲ್ಲವಾಗುತ್ತದೆ.

ಹಣ ಕಡಮೆಯಾದರೆ ಹೆಚ್ಚು ಹಣ ಬೇಕೆಂಬ ಬಯಕೆ ಸಹಜವಾಗಿಯೇ ಇರುತ್ತದೆ; ಆದರೆ ಹಣ ಹೆಚ್ಚಾದರೆ ಅದು ಕಡಮೆಯಾಗಬೇಕೆಂಬ ಬಯಕೆ ಯಾರಿಗೂ ಇರುವುದಿಲ್ಲ.

ಹಣ ಎಷ್ಟು ಬೇಕೆಂಬ, ಎಷ್ಟಿದ್ದರೆ ಸಾಕೆಂಬ ವಿವೇಕ ಬಹುಜನರಿಗೆ ಇರುವುದಿಲ್ಲ. ಹಣ ಇದ್ದಷ್ಟೂ ಸುಖ ಹೆಚ್ಚುವುದೆಂದು ಭ್ರಾಂತಿ ಬೇರೆ ಹಲವರಿಗೆ ಇರುವುದುಂಟು.

ಗಿಡಕ್ಕೆ ನೀರು ಸುರಿದಷ್ಟೂ ಚೆನ್ನಾಗಿ ಬೆಳೆಯುವುದೆಂಬ ಕಲ್ಪನೆ ಕೆಲವರಿಗಿರುತ್ತದೆ. ಗಿಡ ಬೆಳೆಯಲು ನೀರೊಂದೇ ಸಾಲದು; ಬೆಳಕು ಬೇಕು, ಗಾಳಿ ಬೇಕು, ನೆಲ ಬೇಕು, ಗೊಬ್ಬರ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಬೀಜ ಬಲಶಾಲಿಯಾಗಿರಬೇಕು, ಗಿಡದಲ್ಲಿ ಸತ್ವವಿರಬೇಕು.

ಸುಖ ಒದಗಿ ಬರುವುದೂ ಹಲವಾರು ವಿವರಗಳ ಸೇರ್ಪಡೆಯಿಂದಲೇ. ಹಣವೊಂದರಿಂದಲೇ ಸುಖ ಬರುವುದೆಂದು ಯಾರು ಹೇಳಿಯಾರು?

ಹಣವು ಸುಖಕ್ಕೆ ಕಾರಣವಾಗಬಲ್ಲುದೆಂದು ಹೇಳಿದಾಗ ಹಣಕ್ಕೇ ನೇರವಾಗಿ ಸುಖವನ್ನು ನೀಡುವ ಶಕ್ತಿಯಿದೆಯೆಂದರ್ಥವಲ್ಲ.

ನೆಲದಲ್ಲಿ ಸಾರವಿಲ್ಲದಿದ್ದರೆ ಎಷ್ಟು ನೀರೆರೆದರೆ ಫಲವೇನು– ತಿಳಿಯಬೇಕು; ಬಂದ ಹಣ ಸರಿಯಾಗಿ ವೆಚ್ಚವಾಗುತ್ತಿದ್ದರೆ ಅದು ನಿಂತನೀರಾಗುವುದಿಲ್ಲ; ನೆಲ ಕೆಸರಾಗುವುದಿಲ್ಲ; ಬೇರು ಕೊಳೆಯುವುದಿಲ್ಲ; ನೀರು ನಾರುವುದಿಲ್ಲ.

ಹಣದ ಆದಾಯ ಸಾರ್ಥಕವಾಗುವುದು ವಿವೇಕದ ವಿನಿಯೋಗದಿಂದ. ಹಣವೊಂದರ ಮೇಲೆ ಕಣ್ಣಿದ್ದರೆ ವಿವೇಕದ ವಿನಿಯೋಗವಿಲ್ಲ. ಹೆಚ್ಚಾದ ಹಣವಿದ್ದಲ್ಲಿ ವಿವೇಕವಿರುವುದಿಲ್ಲವೆಂಬುದು ಯಾರಿಗೆ ತಿಳಿಯದು?

ಕೆಸರಿನಲ್ಲಿ ಉತ್ತು ಬಿತ್ತು ಬೆಳೆಯುವುದು ಆಗುತ್ತದೆಯೆ? ಹಣವೊಂದೆ ಮುಖ್ಯವಾದಲ್ಲಿ ಬೇರೇನೂ ಬೆಳೆಯದು.

154. ಉದ್ಯಮ-ಲಾಭ

ಸಣ್ಣ ಪ್ರಮಾಣದ ಉದ್ಯಮ ಎಂದು ಹೇಳುವುದುಂಟಲ್ಲ?

ಹೂಡುವ ಬಂಡವಾಳದ ಪ್ರಮಾಣ ಸಣ್ಣದು, ನಿರೀಕ್ಷಿಸುವ ಲಾಭವೂ ಅಷ್ಟೇ ಸಣ್ಣದು, ಇದಕ್ಕಾಗಿ ಗೊತ್ತು ಮಾಡಿಕೊಳ್ಳುವ ಕೆಲಸಗಾರರ ಸಂಖ್ಯೆಯೂ ಸಣ್ಣದು, ತೊಡಗಿಸುವ ಯಂತ್ರಗಳೂ ಸಣ್ಣವು; ಜಾಗವೂ ಸಣ್ಣದು.

ಇವುಗಳಲ್ಲಿ ಅಧಿಕಾರವಿದ್ದರೆ ಬೃಹತ್ಪ್ರಮಾಣದ ಉದ್ಯಮಗಳೆನಿಸಿಕೊಳ್ಳುತ್ತವೆ. ಬೃಹತ್ಪ್ರಮಾಣದ ಉದ್ಯಮಗಳ ಜವಾಬ್ದಾರಿಯೂ ದೊಡ್ಡದು, ಅವುಗಳಿಂದೊದಗುವ ತಲೆನೋವು ಹೆಚ್ಚಿನದು.

ಆದರೆ ಸಣ್ಣ ಪ್ರಮಾಣದ ಉದ್ಯಮ ಹೂಡುವವನ ಬಯಕೆಯನ್ನು ಸಣ್ಣದೆಂದು ಹೇಳಲಾಗದು. ಅಥವಾ ಅದಕ್ಕಾಗಿ ಅವನು ಪಡುವ ಶ್ರಮವೂ ಸಣ್ಣದಲ್ಲ.

ಉದ್ಯಮ ಸಣ್ಣದಾಗಲಿ ದೊಡ್ಡದಾಗಲಿ, ಅದರ ಸ್ವಭಾವವೇನು ಮಾರ್ಪಡುವುದಿಲ್ಲ. ಉದ್ಯಮಿಯ ಮನೋವೃತ್ತಿಯಲ್ಲೇನೂ ವೈಪರೀತ್ಯವಿಲ್ಲ.

ಯಾವುದೇ ಉದ್ಯಮವಾಗಲಿ ಲಾಭದ ಕಡೆ ಕಣ್ಣಿರುವುದು ಸಹಜ. ಹೆಚ್ಚು ಲಾಭ ಬೇಕೆಂದರೆ ಬಂಡವಾಳವೂ ಹೆಚ್ಚಿರಬೇಕು, ಉದ್ಯಮವೂ ದೊಡ್ಡದಿರಬೇಕು, ವ್ಯವಸ್ಥೆಯೂ ನಿಶ್ಚಿತವಾಗಿರಬೇಕು. ಆದರೆ ಒಮ್ಮೆಲೆ ಹೆಚ್ಚು ಲಾಭವನ್ನು ಬಯಸಬಾರದೆಂಬ ಜಾಣತನ ಹಲವರಿಗಿರುತ್ತದೆ; ಇದ್ದುದನ್ನೇ ಆಧರಿಸಿ ಇನ್ನಷ್ಟು ಪಡೆದುಕೊಳ್ಳುವುದು ಉದ್ಯಮವಲ್ಲವೆ? ಇದ್ದುದು ಹೋಗಬಾರದು; ಇಲ್ಲದಿರುವುದು ಬರುವಂತಾಗಬೇಕು. ಅದಕ್ಕೆ ಕ್ರಮವರಿತು ಉದ್ಯಮದ ವಿಕಾಸ.

ಇದು ವಿವೇಕದ ವಿಚಾರವೇ. ಜಾಣರು ಅನುಸರಿಸುವ ಕ್ರಮವೇ ಹೀಗೆ. ಆದರೆ ಲಾಭದ ಬಯಕೆಯಿದೆಯಲ್ಲ, ಇದಕ್ಕೇನು ಬಡತನವಿಲ್ಲ. ಬಂಡವಾಳದ ಇತಿಮಿತಿ ದುಡಿಮೆಯ ಸಂಕೋಚ ಇದಕ್ಕನ್ವಯಿಸುವುದಿಲ್ಲ.

ತನ್ನ ಬಂಡವಾಳಕ್ಕೆ ಅನುರೂಪವಾಗಿ ಲಾಭ ಬಂದರೆ ಸಾಕು, ಹೆಚ್ಚು ಲಾಭ ಬೇಡ ಎಂದು ಯಾರಾದರೂ ಹೇಳಿಯಾರೆ? ತನ್ನ ದುಡಿಮೆಯೆಷ್ಟೋ ಅಷ್ಟು ಆದಾಯವಾದರೆ ಆಯಿತು ಎಂಬ ಗಡುವನ್ನು ಯಾರು ಇರಿಸಿಕೊಳ್ಳುತ್ತಾರೆ?

ಲಾಭದ ಬಯಕೆಯಲ್ಲಿ ಮುಖ್ಯವಾಗಿರುವುದು ಸುಖಕ್ಕೆ ನೆರವಾಗುವ ಸೌಲಭ್ಯ. ಮನುಷ್ಯನಿಗೆ ಬೇಕಾಗುವ ಸುಖಕ್ಕೆ ಮಿತಿಯಿದೆಯೆ? ಇಷ್ಟಿದ್ದರೆ ಇನ್ನಷ್ಟರ ಆಸೆ, ಅಷ್ಟೂ ದೊರೆತರೆ ಮತ್ತಷ್ಟರ ಆಸೆ ಎಂದು ಪುರಂದರದಾಸರೇ ಅಂದು ಹೇಳಲಿಲ್ಲವೆ?

ಉದ್ಯಮದ ಪ್ರಯೋಜನ ಲಾಭವನ್ನು ಗಳಿಸುವುದು, ಲಾಭದ ಉದ್ದೇಶ ಸುಖಪಡುವುದು. ಲಾಭಕ್ಕೆ ಉದ್ಯಮವೇ ಕಾರಣವೆನ್ನಬಹುದಾದರೂ, ಲಾಭದ ಹರವು ಉದ್ಯಮಕ್ಕೆ ಸೀಮಿತವಾದುದಲ್ಲ. ಮಡಕೆಗೆ ಮಣ್ಣು ಕಾರಣ; ಆದರೆ ಮಡಕೆಯಲ್ಲಿರುವ ಗುಣಗಳು ಬರಿಯ ಮಣ್ಣಿನಲ್ಲೇ ಇರುವುದಿಲ್ಲ.

ಉದ್ಯಮವು ದುಡಿಮೆಯ ಫಲವಾಗಿ ಯಾವುದೋ ಉತ್ಪನ್ನವೊಂದರಲ್ಲಿ ಮುಗಿಯುತ್ತದೆ. ತಯಾರಾದುದು ಮಾರುಕಟ್ಟೆಯ ಪುಣ್ಯವನ್ನು ಪಡೆದುಕೊಂಡಾಗ ಲಾಭವನ್ನು ತಂದುಕೊಡುತ್ತದೆ. ಹಾಗೆ ಬಂದ ಲಾಭಕ್ಕೆ ಕಾಲುಗಳು ಮಾತ್ರವಲ್ಲ, ರೆಕ್ಕೆಗಳು ಮೂಡಿಕೊಳ್ಳುತ್ತವೆ. ಬಯಕೆ ಗರಿಗೆದರಿ ಹಾರತೊಡಗುತ್ತದೆ.

ಯಾವ ಉದ್ಯಮವಾದರೂ ಬಯಕೆಯ ಹಾರಾಟವಿದ್ದದ್ದೇ. ಸಣ್ಣದಾಗಲಿ ದೊಡ್ಡದಾಗಲಿ, ಉದ್ಯಮದಿಂದೆದ್ದ ಬಯಕೆ ಹಾರುವುದು ಮುಗಿಲಿಗೇ.

155. ವಿದ್ಯೆಯೋ ವಾಣಿಜ್ಯವೋ?

ಜನಜೀವನದಲ್ಲಿ ದಿನದಿನಕ್ಕೆ ವಾಣಿಜ್ಯದ ಪಾತ್ರ ಹೆಚ್ಚುತ್ತಿದೆ, ವಾಣಿಜ್ಯ ಮನೋಧರ್ಮವಂತೂ ಎಲ್ಲೆಲ್ಲಿಯೂ ಹರಡಿಕೊಳ್ಳುತ್ತಿದೆ.

ವಿದ್ಯೆ, ಕಲೆ, ಸಂಸ್ಕೃತಿ, ಧರ್ಮ ಏನಾಗಲಿ ವಾಣಿಜ್ಯದ ಕಲ್ಪನೆಗಳೇ ಅವುಗಳಿಗೆ ಆಧಾರವಾಗಿ, ಪ್ರಯೋಜನವಾಗಿ ಕಾಣಿಸಿಕೊಳ್ಳುತ್ತಿವೆ.

ವಿದ್ಯಾವಿತರಣೆಯ ಸಂಭ್ರಮವನ್ನೇ ನೋಡಿ. ಪ್ರಜೆಗಳಿಗೆ ವಿದ್ಯೆಯನ್ನು ಒದಗಿಸುವುದು ಸರ್ಕಾರದ ಕರ್ತವ್ಯವೆಂಬ ಕಲ್ಪನೆ ಮುಂದುವರಿದ ರಾಷ್ಟ್ರಗಳಲ್ಲಿದೆ. ನಮ್ಮದೇನು ಮುಂದುವರಿದ ರಾಷ್ಟ್ರವೆಂದು ಬೇರೆಯವರಿರಲಿ ನಾವೇ ಒಪ್ಪಿಕೊಳ್ಳುತ್ತಿಲ್ಲ. ಮುಂದುವರಿಯಬೇಕೆಂದಿರುವ ರಾಷ್ಟ್ರವೆನ್ನಿ, ಮುಂದುವರಿಯುತ್ತಿರುವ ರಾಷ್ಟ್ರವೆನ್ನಿ, ಇನ್ನೂ ಮುಂದುವರಿಯದೆ ಇರುವ ರಾಷ್ಟ್ರವೆನ್ನಿ.

ಇದು ಹೇಗಾದರೂ ಇರಲಿ. ವಿದ್ಯೆಯನ್ನು ಜನರಿಗೆ ಒದಗಿಸಲು ಸರಕಾರವೇನೋ ಮುಂದೆ ಬಂದಿದೆ, ಖಾಸಗಿ ಜನರೂ ಮುಂದೆ ಬರುತ್ತಿದ್ದಾರೆ.

ವಿದ್ಯಾಸಂಸ್ಥೆಗಳೂ ಮಿತಿ ಮೀರಿ ಬೆಳೆಯುತ್ತಿವೆ. ಜನರಿಗೆ ಒಳ್ಳೆಯದೇ ಆಯಿತಲ್ಲವೇ ಎಂದರೆ ಅಗಿಲ್ಲ.

ಖಾಸಗಿ ಜನರು ವಿದ್ಯಾಸಂಸ್ಥೆಗಳನ್ನು ಎಳೆಯ ಮಕ್ಕಳಿಂದ ಹಿಡಿದು ಬೆಳೆಯುವ, ಬೆಳೆದ, ಇನ್ನು ಬೆಳೆಯಲಾರದ ಮಕ್ಕಳವರೆಗೆ ಹಂತ ಹಂತಗಳಲ್ಲಿ ವ್ಯವಸ್ಥೆ ಮಾಡುತ್ತಿದ್ದಾರೆ. ಇವೆಲ್ಲ ಸಂಸ್ಥೆಯವರ ಲೋಕೋಪಕಾರ ಬುದ್ಧಿಯಿಂದಲ್ಲ, ಔದಾರ್ಯದಿಂದಲ್ಲ, ವಾಣಿಜ್ಯ ವ್ಯವಧಾನಗಳಷ್ಟೆ.

ವಿದ್ಯೆಯಿಂದ ಹಣ ಮಾಡಿಕೊಳ್ಳುವುದು ಸುಲಭವೆಂಬ ಗುಟ್ಟು ಈಗ ದುಡ್ಡಿದ್ದವರಿಗೂ ದುಡ್ಡನ್ನು ಬಯಸುವವರಿಗೂ ತಿಳಿದುಬಿಟ್ಟಿದೆ. ಬೇರೆಯ ವಾಣಿಜ್ಯ ಪ್ರಯೋಗಗಳಲ್ಲಿ ಬಂಡವಾಳ ಹೆಚ್ಚು ಬೇಕು, ಶ್ರಮವಹಿಸಬೇಕು, ತಾಳ್ಮೆಯಿರಬೇಕು. ಇಲ್ಲಿಯಾದರೋ ಅದೆಲ್ಲ ಬೇಕಾದುದಿಲ್ಲ. ಸಾಹಸವೊಂದಿದ್ದರೆ ಸಾಕು.

ಮತ್ತೆ ವಿದ್ಯಾಸಂಸ್ಥೆಯೆಂದರೆ ಅದಕ್ಕೊಂದು ಮನ್ನಣೆಯೂ ಉಂಟು. ಅದನ್ನು ಏರ್ಪಡಿಸುವವರಿಗೂ ಸುಸಂಸ್ಕೃತರೆಂಬ ಸತ್ಕಾರ ದೊರೆಯುತ್ತದೆ. ಹೆಸರೂ ಬಂತು, ಹಣವೂ ಬಂತು. ಇದಕ್ಕಿಂತ ಬೇರೆ ಸುಲಭ, ಸನ್ಮಾನ್ಯ ಮಾರ್ಗ ಯಾವುದಿದೆ? ಧರ್ಮಸಂಸ್ಥೆಗಳೂ ಮಠಗಳೂ ಕೂಡ ಯಾವ ಅಂಜಿಕೆಯೂ ಇಲ್ಲದೆ ಈ ದಾರಿಯನ್ನು ಹಿಡಿಯಬಹುದು, ಹಿಡಿಯುತ್ತಿವೆಯೆನ್ನಿ.

ಈ ಸಂಸ್ಥೆಗಳ ದೃಷ್ಟಿಯಿರುವುದು ವಿದ್ಯಾರ್ಥಿಗಳು ತೆರುವ ತಲೆದಂಡ, ವಾರ್ಷಿಕಪಿಂಡ ಮೊದಲಾದ ಹಲವು ಬಗೆಯ ಶುಲ್ಕಗಳ ಮೇಲೆಂಬುದೇನೋ ಎಲ್ಲರಿಗೂ ತಿಳಿದದ್ದೇ. ಉದ್ಯೋಗದ ವ್ಯಾಪ್ತಿಯನ್ನು ಗಮನಿಸಿಯೇ ವಿದ್ಯಾ ವಿಭಾಗಗಳು ಸಿದ್ಧವಾಗುತ್ತವೆ. ಎಂಜಿನಿಯರಿಂಗ್, ಮೆಡಿಸಿನ್, ಮ್ಯಾನೇಜ್‌ಮೆಂಟ್ ಮುಂತಾಗಿ.

ಉದ್ಯೋಗಾವಕಾಶವಿಲ್ಲದ ವಿದ್ಯೆಯನ್ನು ಕಲಿಸುವ ಯತ್ನವನ್ನು ಯಾರು ಮಾಡುತ್ತಾರೆ? ಮಾಡಿದರೆ ಅದರಿಂದ ಲಾಭವಾದರೂ ಇದೆಯೇ? ವೇದ ಪಾಠಶಾಲೆಯನ್ನು ಮಠಗಳು ನಡೆಸುತ್ತವೆಯೆ? ಧಾರ್ಮಿಕ ಶಿಕ್ಷಣವನ್ನು ಯಾವ ಧರ್ಮಸಂಸ್ಥೆ ಒದಗಿಸಲು ಹೊರಡುತ್ತದೆ?

ವಿದ್ಯೆಯ ದುರವಸ್ಥೆಯೆಂದರೆ ಸಂಸ್ಥೆಗಳು ಶ್ರೀಮಂತವಾಗುತ್ತವೆ, ವಿದ್ಯಾರ್ಥಿಗಳು ಬಡವಾಗುತ್ತಾರೆ. ವಿದ್ಯಾಭ್ಯಾಸವೆಂಬುದು ಕುಟುಂಬಕ್ಕೆ ತೀರ ಹೆಚ್ಚಿನ ಹೊರೆಯಾಗತೊಡಗಿದೆ. ವಾಣಿಜ್ಯ ಪ್ರಪಂಚದಲ್ಲಿದ್ದಂತೆಯೇ ಹಲವರ ನಷ್ಟ ಕೆಲವರಿಗೆ ಲಾಭ.

156. ಅರ್ಥದ ಅನರ್ಥ

ಅರ್ಥವೆನ್ನುವ ಮಾತಿಗೆ ಅನೇಕಾರ್ಥಗಳುಂಟು. ಹಣವೆಂಬುದು ಒಂದು ಅರ್ಥ. ಅರ್ಥಶಾಸ್ತ್ರವೆಂದರೆ ಹಣವನ್ನು ಕುರಿತು ಅಧ್ಯಯನವೇ.

ಮಾತು ಮತ್ತು ಅದರ ಅರ್ಥ, ವಾಗರ್ಥ, ಪದಾರ್ಥ, ಇಂದ್ರಿಯಗೋಚರವಾಗುವ ವಸ್ತುವೂ ಅರ್ಥವೇ; ಇಂದ್ರಿಯಾರ್ಥಗಳ ಸಂಬಂಧವೇ ಅನುಭವವಲ್ಲವೆ? ಇನ್ನು ಅರ್ಥವೆಂದರೆ ಮಾತಿನ ತಾತ್ಪರ್ಯ, ಇಂಗಿತವೂ ಆಗುತ್ತದೆ. ಮನುಷ್ಯನ ಬಯಕೆಯೇ ಪುರುಷಾರ್ಥವೆನಿಸಿಕೊಳ್ಳುತ್ತದೆ. ಗುರಿಯೂ ಅರ್ಥವೇ.

ಹೀಗೆ ಅರ್ಥಕ್ಕೆ ಅನೇಕಾರ್ಥಗಳಿದ್ದರೂ ಅನರ್ಥವಾಗುವುದು ಹಣವೆಂಬ ಒಂದು ಅರ್ಥದಲ್ಲಿಯೆ! ಉಳಿದ ಯಾವ ಅರ್ಥದಲ್ಲಿಯೂ ಅನರ್ಥವೆಂಬುದಿಲ್ಲ. ಆದರೆ ಹಣದಿಂದ ಅಪಾರ್ಥವೆಂಬುದಿಲ್ಲ; ಮಾತಿನ ಅರ್ಥ ಸರಿಯಾಗಿರದಿದ್ದರೆ ಅದು ಅಪಾರ್ಥವಲ್ಲವೆ? ಅರ್ಥಕ್ಕೆ ಸರಿಯಾಗಿದ್ದರೆ ಅದು ಅನ್ವರ್ಥ.

ಅರ್ಥವು ಹಣವೆಂದೇ ಆದರೂ ಉಳಿದ ಅರ್ಥಗಳ ಅಂಶಗಳು ಕೂಡಿಕೊಳ್ಳುತ್ತವೆ. ಪಡೆದುಕೊಂಡ ಅರ್ಥಕ್ಕೆ ಸಾರ್ಥಕತೆ ಬರಬೇಕಾದರೆ ಹಣದ ತಾತ್ಪರ್ಯವು ಮನದಟ್ಟಾದರೇ ಅಲ್ಲವೆ? ಸಂಪಾದಿಸಿದ ಹಣಕ್ಕೆ ಬೆಲೆ ಬರುವುದು ಅದರ ಉದ್ದೇಶ ತಿಳಿದಿದ್ದರೆ ತಾನೆ? ಹಣವು ಪ್ರಯೋಜನಕ್ಕೆ ಬರಬೇಕೆಂದರೆ ಅದು ಕೈಗೆಟುಕಬೇಕು; ಇಂದ್ರಿಯ ಗೋಚರವಾಗಬೇಕು. ಹಣವನ್ನು ಗುರಿಯಾಗಿರಿಸಿಕೊಂಡು, ಎಂದರೆ ಪ್ರಯುತ್ನಪೂರ್ವಕವಾಗಿ, ಸಂಪಾದಿಸಿಕೊಳ್ಳದಿದ್ದರೆ ಅರ್ಥ ಸಾರ್ಥಕವಾಗುವುದಿಲ್ಲ.

ಈ ಅಂಶಗಳು ಸರಿಯಾಗಿ ಸೇರಿಕೊಳ್ಳದಿದ್ದರೆ ಅರ್ಥದಿಂದ ಅನರ್ಥವೇ. ಅನರ್ಥವೆಂದರೆ ಅರ್ಥವಲ್ಲದ್ದು ಎಂದು ಮಾತ್ರ ಅರ್ಥವಲ್ಲ. ಸ್ವರೂಪದಲ್ಲಿ ನಿಷೇಧಾರ್ಥವಾದರೂ ಸ್ವಭಾವದಲ್ಲಿ ಕೆಡುಕನ್ನುಂಟು ಮಾಡುವುದು, ತೊಂದರೆಗೀಡು ಮಾಡುವುದು, ಹಾಳುಮಾಡುವುದು ಎಂಬರ್ಥಗಳಿವೆ.

ಹಣದಿಂದ ಅನರ್ಥವೊದಗುವುದು ಎಲ್ಲರಿಗೂ ತಿಳಿದದ್ದೇ. ಹಣದಲ್ಲೇ ಸಹಜವಾಗಿ ಈ ಗುಣವಿದೆಯೆಂದಲ್ಲ; ಹಣದ ದುರುಪಯೋಗದಿಂದ ಅನರ್ಥ ಒದಗುವ ಸಾಧ್ಯತೆಯುಂಟು. ದುರುಪಯೋಗದ ಅವಕಾಶವಿರುವುದು ಹಣದಲ್ಲಲ್ಲ, ಹಣವನ್ನು ಬಳಸುವವರಲ್ಲಿ. ದುರಾಸೆಯಿರುವುದು ದುರುಪಯೋಗದ ಹೆದ್ದಾರಿ; ಜವಾಬ್ದಾರಿಯಿಲ್ಲದಿರುವುದು ಇನ್ನೊಂದು ದಾರಿ; ಹಣದ ಬೆಲೆಯನ್ನು ಅರಿಯದಿರುವುದು ಮತ್ತೂ ಒಂದು.

ಹೀಗೆ ಮನುಷ್ಯನ ಸ್ವಭಾವದಲ್ಲಿರುವ ದೋಷಗಳಿಗೆ ಹಣ ಸೇರಿಕೊಂಡು ಬಂದಾಗ ಹಣದ ಅನರ್ಥಾವಕಾಶ ಹೆಚ್ಚುತ್ತದೆ. ಲೋಭಿಯ ಬಳಿ ಹಣ ಇದ್ದರೆ

ಅದರಿಂದ ಅನರ್ಥವೇನಿಲ್ಲ; ಅದರಿಂದ ಉಪಯೋಗವೂ ಇಲ್ಲವೆಂಬುದಷ್ಟೆ ಕೊರತೆ. ಹಣದಿಂದ ತಲೆ ತಿರುಗಿದರೆ, ಮೌಲ್ಯ ಚಿಂತನೆ ಮರೆಯಾದರೆ, ಬೇರೆಯವರ ಮೇಲೆ ಅಧಿಕಾರ ಸಿದ್ಧವಾಗಿಬಿಟ್ಟರೆ ಅನರ್ಥಗಳು ತಪ್ಪಿದ್ದಲ್ಲ.

'ಅರ್ಥಂ ಅನರ್ಥಂ ಭಾವಯ ನಿತ್ಯಂ'

ಇದೊಂದು ಹಿತನುಡಿ. ಅರ್ಥದಲ್ಲಿ, ಎಂದರೆ ಹಣದಲ್ಲಿ, ಅನರ್ಥದ, ಎಂದರೆ ತೊಂದರೆಗಳ, ಸಾಧ್ಯತೆಯಿದೆ ಎಂಬುದನ್ನು ಇದು ತಿಳಿಯಹೇಳಿ ಎಚ್ಚರಿಕೆ ವಹಿಸಬೇಕಾದ ಅಗತ್ಯವಿದೆಯೆಂದು ಸೂಚಿಸುತ್ತದೆ.

157. ಹಣವಿಲ್ಲದೆ ಅರ್ಧರೋಗ

ಇಟಲಿ ದೇಶದ ಗಾದೆಯೊಂದಿದೆ–ಹಣವಿಲ್ಲದವನ ಆರೋಗ್ಯ ಅರ್ಧರೋಗದ ಪರಿಸ್ಥಿತಿಯೇ. ಹಣವಿದ್ದರೆ ಆರೋಗ್ಯ ಇರುತ್ತದೆ ಎಂಬ ನಿಯಮವೂ ಏನಿರದು.

ಹಣ ಹೆಚ್ಚಾಗಿದ್ದರೆ ಆರೋಗ್ಯ ಕೆಡುವ ಸಾಧ್ಯತೆಯೇ ಇದೆಯೆಂದರೂ ತಡೆದೀತು. ಹಣವಿದ್ದವನು ಮೈಮುರಿದು ಕೆಲಸ ಮಾಡಬೇಕಾದುದಿಲ್ಲ; ಮೈಮುರಿದು ಕೆಲಸ ಮಾಡದಿದ್ದರೆ ಆರೋಗ್ಯ ಚೆನ್ನಾಗಿರುವುದು ಹೇಗೆ? ತಿನ್ನುವಾಗ ಹಸಿವೆಯ ಕಡೆಗಾಗಲಿ ಶರೀರದ ಅಗತ್ಯದ ಕಡೆಗಾಗಲಿ ಗಮನವಿರದೆ ಹಣವುಳ್ಳವರ ಧೋರಣೆಯನ್ನೇ ಎತ್ತಿ ಕಾಣಿಸುವಾಗ ಉಂಡದ್ದು ಮೈಗೆ ಹತ್ತಲಾರದು.

ಬಡವನಾದರೋ ಹಸಿದಾಗ ತಿನ್ನುತ್ತಾನೆ. ಹಸಿವೆ ಇಂಗುವಷ್ಟು ಮಾತ್ರ ತಿನ್ನುತ್ತಾನೆ. ಸರಳವಾದ ಊಟವೇ ಅವನ ಪಾಲಿಗೆ ಬಂದದ್ದು. ಇದ್ದದ್ದನ್ನೆ ಹಿತವೆಂದುಕೊಂಡು ಮಿತವಾಗಿ ಉಣ್ಣುತ್ತಾನೆ. ಹೀಗಾಗಿ ಅವನ ಆರೋಗ್ಯ ಕೆಡಲಾರದು. ಅವನು ಶ್ರಮಜೀವಿಯೂ ಆಗಿರಬೇಕಾದುದರಿಂದ, ಅವನು ಉಂಡದ್ದು ಕಷ್ಟವಿಲ್ಲದೆ ಅರಗುತ್ತದೆ.

ಮತ್ತೆ, ಮೇಲೆ ಕಾಣಿಸಿದ ಇಟಾಲಿಯನ್ ನಾಣ್ನುಡಿಯ ಸ್ವಾರಸ್ಯವೇನು?

ಹಣವಿಲ್ಲದವನ ಆರೋಗ್ಯ ಎನ್ನುವಾಗ ಹಣವಿಲ್ಲದಿದ್ದರೂ ನೆಮ್ಮದಿಯಿಂದ ಇರುವವನು ಎಂಬ ಸೂಚನೆಯೇನಿರದು. ಹಣವನ್ನು ಬಯಸುವವನು, ಆದರೆ ಕಾರಣಾಂತರಗಳಿಂದ ಹಣವನ್ನು ಪಡೆದುಕೊಳ್ಳಲಾರದವನು ಎಂಬುದೇ ಧ್ವನಿ. ಹಣದ ಕೊರತೆ ಮನಸ್ಸಿನದು. ಶರೀರದ್ದು ಆರೋಗ್ಯ. ಆರೋಗ್ಯ ಎಷ್ಟಿದ್ದರೂ ಮನಸ್ಸಿನ ಕೊರತೆಯಿದ್ದರೆ ಆರೋಗ್ಯದ ಅಂಶ ಕಡಮೆಯೇ.

ಇದ್ದುದರಲ್ಲಿ ತೃಪ್ತಿಯಿಂದ, ಪಾಲಿಗೆ ಬಂದದ್ದು ಪರಮಾನ್ನ ಎಂಬ ವಿಶ್ವಾಸದಿಂದ, ತಾನು ಕಷ್ಟಪಟ್ಟು ಗಳಿಸಿದಷ್ಟರಲ್ಲೇ ಸಮಾಧಾನಪಟ್ಟುಕೊಳ್ಳುತ್ತೇನೆ

ಎಂಬ ಧೈರ್ಯದಿಂದ ಬದುಕುವವನ ದೇಹವೂ ಮನಸ್ಸೂ ಒಮ್ಮತದಿಂದ ಆರೋಗ್ಯವಾಗಿರುತ್ತದೆ. ಅದು ಅರ್ಧಮರ್ಧ ಆರೋಗ್ಯವಲ್ಲ; ಪೂರ್ಣಾರೋಗ್ಯ.

ಮತ್ತೊಂದು ವಿಚಾರವೂ ಗಾದೆಯಲ್ಲಡಗಿದೆ. ಆರೋಗ್ಯವೆಂದರೆ ಎಂದಿಗೂ ಒಂದೇ ತೆರನಾಗಿ ನಿಂತಿರುವುದಿಲ್ಲ. ಅದರಲ್ಲಿ ಸಂದರ್ಭ, ವಯಸ್ಸು, ಆಹಾರ, ದುಡಿಮೆ, ಋತುವೈಪರೀತ್ಯ ಮೊದಲಾದ ಕಾರಣಗಳಿಂದಾಗಿ ಆಗಾಗ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಯಿರುತ್ತದೆ.

ಏರುಪೇರಾದಾಗ ತಾನೇ ನೇರ್ಪಡಿಸಿಕೊಳ್ಳುವ ಸೌಲಭ್ಯವೂ ದೇಹಕ್ಕಿದೆಯೆನ್ನಿ. ಆದರೆ ಬಹುವೇಳೆ ಹೊರಗಿನ ನೆರವು ಬೇಕಾಗುತ್ತದೆ. ಆಗ ವಿಶ್ರಾಂತಿ, ಸರಿಯಾದ ಪಥ್ಯ, ಔಷಧ ಇವೆಲ್ಲವೂ ಆರೋಗ್ಯ ಸುಧಾರಿಸಿಕೊಳ್ಳಲು ಅಗತ್ಯವಾಗುತ್ತದೆ. ಇದಕ್ಕೆಲ್ಲ ಹಣ ಬೇಕಾಗುತ್ತದೆ. ಕೆಟ್ಟ ಆರೋಗ್ಯವನ್ನು ಸರಿಪಡಿಸಿಕೊಂಡಾಗಲೇ ಪೂರ್ಣ ಆರೋಗ್ಯ.

ರೋಗವೆಂದರೆ ಸುಸ್ಥಿತಿ ಕೆಡುವುದು ತಾನೆ? ಹಾಗೆಯೇ ಹಣವಿಲ್ಲದಿದ್ದರೂ ಸುಸ್ಥಿತಿಯು ಕೆಟ್ಟಂತೆಯೇ. ಹಣವಿಲ್ಲದ ಆರೋಗ್ಯ ಅರ್ಧರೋಗದಂತೆಯೇ ಆದೀತಲ್ಲವೆ?

158. ಅಪಮೌಲ್ಯ

ನಮ್ಮ ರೂಪಾಯಿಯ ಮೌಲ್ಯ ಕುಸಿದಿರುವುದನ್ನು ಯಾರರಿಯರು?

ಅರ್ಥಶಾಸ್ತ್ರಜ್ಞರು ಇದರ ಅಂಕಿ ಅಂಶಗಳನ್ನೊದಗಿಸುತ್ತಾರೆ; ವ್ಯಾಪಾರಗಾರರು ಹೆಚ್ಚು ಗಳಿಸುವುದೊಂದೇ ಇದರ ಪರಿಹಾರದ ದಾರಿ ಎಂದು ನಿರ್ಧರಿಸುತ್ತಾರೆ; ರಾಜಕಾರಣಿಗಳಿಗೆ ತಮ್ಮ ಮೌಲ್ಯವೇ ಕುಸಿಯುತ್ತಿರುವಾಗ ರೂಪಾಯಿಯ ಅಪಮೌಲ್ಯದ ಚಿಂತೆಯೇಕೆ?

ಸಾಮಾನ್ಯ ಜನರಿಗೆ ಬದುಕಿನ ವೆಚ್ಚ ಹೆಚ್ಚುತ್ತಿರುವುದು ಗೊತ್ತು. ಕಿಸೆಯ ತುಂಬ ಹಣವಿರಿಸಿಕೊಂಡು ಪೇಟೆಗೆ ಹೋಗಿ ಚೀಲದ ತುಂಬ ಪದಾರ್ಥಗಳನ್ನು ತರುವ ಕಾಲ ಹೋಯಿತು; ಚೀಲದ ತುಂಬ ಹಣವಿರಿಸಿಕೊಂಡು ಹೋದರೂ ಕಿಸೆಯನ್ನೂ ತುಂಬಲಾರದಷ್ಟು ವಸ್ತುಗಳನ್ನು ತರಬಹುದಾದ ಕಾಲ ಬಂದಿತು ಎಂಬುದು ತಿಳಿದಿದೆ.

ಆದರೆ ಅವರು ಏನು ತಾನೆ ಮಾಡಿಯಾರು?

ಆಡಳಿತ ಅನುಸರಿಸುವ ಆರ್ಥಿಕ ನೀತಿ, ವ್ಯಾಪಾರಗಾರರ ಅನೀತಿ, ಹೊರದೇಶಗಳ ಉದ್ಯಮಗಳು ನಮ್ಮ ಮೇಲೆ ಮಾಡುತ್ತಿರುವ ದಾಳಿ, ಎಲ್ಲೆಲ್ಲೂ

ಹರಡಿಕೊಳ್ಳುತ್ತಿರುವ ಭ್ರಷ್ಟಾಚಾರ, ಸಂಯಮದ ಸೊಲ್ಲೇ ಇಲ್ಲದಿರುವ ಸಾಮಾಜಿಕ ವ್ಯವಹಾರಗಳು ಈ ಪಂಚಾಗ್ನಿಗಳ ನಡುವೆ ತಪಸ್ಸು ಮಾಡುವುದಷ್ಟೇ ಅವರ ಪಾಡು.

ಅಪಮೌಲ್ಯದ ಕಾರಣವೇನೆಂಬುದರ ಬಗ್ಗೆ ವಿಪುಲವಾಗಿ ಚರ್ಚೆ ನಡೆದಿದೆ. ಆಡಳಿತದ ನಿಲುವನ್ನು ಕುರಿತು ಟೀಕೆಯೂ ಬಂದಿದೆ; ನಮ್ಮ ಉದ್ಯಮಗಳ ಒಡೆಯರಿಗೆ ದೇಶದ ಹಿತದ ಕಡೆ ಗಮನವಿದೆಯೇ ಎಂಬ ಸಂದೇಹವೂ ಪ್ರಕಟವಾಗಿದೆ. ಇದೇ ಕಾರಣವೆಂದು ಬೊಟ್ಟು ಮಾಡಿ ತೋರಿಸುವುದು ಕಷ್ಟ. ಹಲವಾರು ಕಾರಣಗಳು ಸಮವಾಯದಲ್ಲಿ ಸೇರಿರುವುದು ಸಾಧ್ಯ.

ಆದರೆ ಅಪಮೌಲ್ಯದ ಫಲವನ್ನು ಎಲ್ಲರೂ ಕಾಣಬಹುದು. ಸಮಾಜದಲ್ಲಿ ಉಳ್ಳವರಲ್ಲಿ ಸೆಣಸಾಟ; ಬಡವರಲ್ಲಿ ತಾರತಮ್ಯ; ಅರ್ಥಾರ್ಥಿಗಳಲ್ಲಿ ನೀತಿಯನ್ನು ಬದಿಗೊತ್ತಿ ನಡೆಯುವ ಹೋರಾಟ! ಸಿರಿವಂತರು ಇನ್ನೂ ಸಿರಿವಂತರಾಗುತ್ತಿರುವುದು, ಬಡವರು ಇನ್ನಷ್ಟು ಬಡವರಾಗುತ್ತಿರುವುದು ಮಧ್ಯಮವರ್ಗದ ತೊಳಲಾಟ. ಇದು ಅಪಮೌಲ್ಯದ ಪ್ರಭಾವ.

ಇಷ್ಟಲ್ಲದೆ ಇಲ್ಲಿನ ದಿನನಿತ್ಯದ ಬದುಕಿಗೆ ಹೊರಗಡೆಯಿಂದ ವಸ್ತುಗಳು ಬರುವಾಗ ಅವುಗಳ ಬೆಲೆ ತೀರ ಹೆಚ್ಚುತ್ತಿರುವುದೂ ಅಪಮೌಲ್ಯದ ಪ್ರಭಾವವೇ. ಮೊದಲು ಅನಗತ್ಯವೆಂದು ಭಾವಿಸಿದ್ದ ಎಷ್ಟೋ ವಸ್ತುಗಳು ಈಗ ಅಗತ್ಯವೆನಿಸಿವೆ. ಹೊರಗಡೆಯಿಂದ ಬರುವ ವಸ್ತುಗಳಿಗಿರುವ ಮರ್ಯಾದೆಯ ಜೊತೆಗೆ ಮೌಲ್ಯವೂ ಹೆಚ್ಚಿದೆ. ರೂಪಾಯಿಯ ಅಪಮೌಲ್ಯದ ಜೊತೆಗೆ ಅಪವ್ಯಯ.

ಅಪಮೌಲ್ಯದ ದಾರಿ ಹಿಡಿದ ಮೇಲೆ ಹಿಂದಿರುಗುವುದು ಸುಲಭವಲ್ಲ.

159. ಹಣದ ಶಕ್ತಿ

ಹಣಕ್ಕಾಗಿಯೇ ಹಣವನ್ನು ಬಯಸುವವರಿದ್ದಾರೆ. ಅವರಿಗೆ ಹಣದ ಮೇಲೇನೋ ಮೋಹ; ಹಣವಿದ್ದರೆ ಸಮಾಧಾನ; ಹಣವಿರದಿದ್ದರೆ ಆತಂಕ.

ಎಲ್ಲರೂ ಹೀಗಿರುವುದಿಲ್ಲ. ಬಹುಮಂದಿ ಹಣವನ್ನು ಬಯಸುವುದು ಹಣದಿಂದ ಒದಗಿ ಬರುವ ಶಕ್ತಿಯನ್ನು ಅಪೇಕ್ಷಿಸಿ. ಇಂಗ್ಲಿಷಿನಲ್ಲಿ 'ಮನಿ-ಪವರ್' ಎಂದು ಇದನ್ನು ಕರೆಯುತ್ತಾರೆ. ದುಡ್ಡಿದ್ದರೆ ಅದೊಂದು ಬಣ, ಒಂದು ಶಕ್ತಿ, ಒಂದು ಸಾಮರ್ಥ್ಯ. ದುಡ್ಡಿದ್ದವನು ಏನನ್ನಾದರೂ ಮಾಡಬಲ್ಲನೆಂಬ ನಂಬಿಕೆ ಹರಡಿಕೊಂಡಿದೆಯಲ್ಲವೆ?

ಹಣದಿಂದ ಮಾತ್ರವಲ್ಲ, ವಿದ್ಯೆಯಿಂದಲೋ ಸ್ಥಾನಮಾನದಿಂದಲೋ ಪತ್ರಿಕಾ ಪ್ರಚಾರದಿಂದಲೋ ಮೇಲೆ ಹೇಳಿದ ಶಕ್ತಿ ಬರಬಹುದು. ಕಲಾವಂತರಿಗೆ ಕೂಡ

ಶಕ್ತಿಯೊಂದು ಒದಗಿ ಬರುತ್ತದೆ. ಕೆಲವೊಮ್ಮೆ ದರೋಡೆಗಾರರಿಗೂ ಕೊಲೆಗಾರರಿಗೂ ಸಮಾಜ ಘಾತಕರಿಗೂ ಶಕ್ತಿ ಬರುವುದುಂಟು; ಆದರೆ ಇದು ಆಸುರೀಶಕ್ತಿ.

ಹಣಕ್ಕಿರುವ ಶಕ್ತಿ ಈ ತೆರನಾದುದಲ್ಲ. ಹಣವಂತರಿಗೇನೋ ಸಮಾಜದಲ್ಲಿ ಸಹಜವಾಗಿಯೇ ಗೌರವವಿದೆ. ಅವರ ಆಸರೆಯನ್ನು ಪಡೆದುಕೊಳ್ಳಬೇಕೆಂದು ಹಾತೊರೆಯುವವರಿರುತ್ತಾರೆ. ವ್ಯಕ್ತಿಯ ಗುಣ, ಶೀಲ, ವಿದ್ಯೆ ಏನಿದ್ದರೂ ಇರದಿದ್ದರೂ ಹಣವಿದೆಯೆಂದರೆ ಮನ್ನಣೆ ದೊರೆಯುತ್ತದೆ.

ಸಮುದಾಯ ಜೀವನದಲ್ಲಿ ಹಣದ ಅಗತ್ಯವನ್ನು ಗಮನಿಸಿ. ಅದು ಹೆಚ್ಚಿನ ಪ್ರಮಾಣದಲ್ಲಿರುವಾಗ ಆ ವ್ಯಕ್ತಿಯು ಸಮುದಾಯದ ನಾಯಕನೆಂಬ ಹೆಸರು ಪಡೆಯುವುದುಂಟು. ಆದರೆ ಆ ವ್ಯಕ್ತಿ ಜಿಪುಣನಾದಾಗ, ಕೆಟ್ಟವನೆನಿಸಿಕೊಂಡಾಗ ಜನರ ಮನ್ನಣೆ ದೊರೆಯಲಾರದು. ಆದರೆ ಇಷ್ಟರಿಂದ ಅವನ ಶಕ್ತಿ ಮರೆಯಾಯಿತೆನ್ನುವಂತಿಲ್ಲ. ಇತರರಿಗೆ ಕಷ್ಟವೆನಿಸಿದ, ಅಸಾಧ್ಯವೆನಿಸಿದ ಯಾವ ಕೆಲಸವನ್ನಾದರೂ ಅವನ ಹಣ ನಿರ್ವಹಿಸೀತು.

ಹಣದ ಗುಣವೆಂದರೆ ಒಳ್ಳೆಯವನ ಬಳಿಯಿದ್ದಾಗ ಅದು ಒಳ್ಳೆಯದು, ಕೆಟ್ಟವನ ಬಳಿಯಿರುವಾಗ ಕೆಟ್ಟದು. ತನ್ನದೇ ಆದ ಗುಣವೆಂಬುದು ಅದಕ್ಕಿಲ್ಲ; ಎಲ್ಲಿದ್ದರೆ ಅಲ್ಲಿನ ಗುಣವನ್ನು ಪಡೆದುಕೊಳ್ಳುತ್ತದೆ. ದೈವೀಶಕ್ತಿಯಾಗಬಹುದು; ಆಸುರೀಶಕ್ತಿಯಾಗಬಹುದು. ಜಿಪುಣನ ಬಳಿ ಇದ್ದಾಗ ನಿರರ್ಥಕವೂ ಆಗಬಲ್ಲುದು.

ಹಣದಿಂದ ವ್ಯಕ್ತಿಯ ಗುಣ ಹೇಗೆ ಮಾರ್ಪಡುವುದೋ, ವ್ಯಕ್ತಿಯೂ ಹಣದ ಗುಣವನ್ನು ಹಾಗೆಯೇ ಮಾರ್ಪಡಿಸುತ್ತಾನೆ. ಅವೆರಡು ವಿವರಗಳ ನಡುವಣ ನಂಟು ಅಂತೆಗೆ ತಕ್ಕ ಬೊಂತೆ ಎಂಬಂತೆ. ಕೈಯಲ್ಲಿ ಕತ್ತಿ ಇರುವಾಗ ಕಟ್ಟನ್ನು ಕತ್ತರಿಸಲೂಬಹುದು, ಕೊಲೆ ಮಾಡಲೂಬಹುದು. ಯಾರು ಏನನ್ನು ಮಾಡುತ್ತಾರೆ ಎನ್ನುವುದು ಎರಡನ್ನೂ ಅವಲಂಬಿಸುತ್ತದೆ.

ಆದರೆ ಕೈಯಲ್ಲಿ ಕತ್ತಿ ಹಿರಿದು ನುಗ್ಗುವವನಿಗೆ ಕೊಲೆ ಮಾಡುವುದು ಸುಲಭ, ಒಮ್ಮೊಮ್ಮೆ ಸಹಜವೂ ಆಗುತ್ತದೆ. ಹಣದ ಬೆಂಬಲವಿದ್ದವನು ಕೆಟ್ಟ ಕೆಲಸ ಮಾಡಲು ಅಂಜುವುದಿಲ್ಲ, ಅಳುಕುವುದಿಲ್ಲ. ಹಣದ ಬಲವಿರುವುದು ಇಲ್ಲಿಯೇ. ಏನೇ ತಪ್ಪು ಮಾಡಿರಲಿ, ಹಣ ಅದನ್ನು ಸರಿಪಡಿಸುತ್ತದೆ. ಏನೇ ಕೊರತೆಯಿರಲಿ, ಹಣ ಅದನ್ನು ತುಂಬುತ್ತದೆ. ಇದು ಲೋಕಸ್ವಭಾವ.

ಹಣವಿದ್ದವರೆಲ್ಲ ಹೀಗೆಯೇ ಎಂದು ಹೇಳಬರುವುದಿಲ್ಲ. ವ್ಯಕ್ತಿಯ ಶೀಲವಿದ್ದಂತೆ ಹಣದ ವಿನಿಯೋಗ. ಅದು ಲೋಕಹಿತವೂ ಆಗಬಹುದು. ಲೋಕಕಂಟಕವೂ ಆಗಬಹುದು.

160. ವಿತ್ತಕ್ಲೇಶ

ಹನ್ನೊಂದು ವರ್ಷಗಳ ಹಿಂದೆ ಗ್ರಾಮೀಣ ಬ್ಯಾಂಕುಗಳ ಯೋಜನೆಯನ್ನು ನಮ್ಮ ಆಡಳಿತ ಮುಂದಿಟ್ಟುಕೊಂಡಿತು. ಈಗ ದೇಶದ ಸುಮಾರು ನಾನ್ನೂರು ಜಿಲ್ಲೆಗಳಲ್ಲಿ ೧೯೬ ಆರ್‌ಆರ್‌ಬಿಗಳು ಮೈದಳೆದಿವೆ; ಇದಕ್ಕೆ ೧೪,೫೨೮ ಶಾಖೆಗಳಿವೆ. ಇದರಿಂದ ಮೂರು ಕೋಟಿ ಜನರಿಗೆ ಆರ್ಥಿಕ ನೆರವನ್ನು ನೀಡುತ್ತಿದೆಯಂತೆ.

ಹಳ್ಳಿಗಾಡಿನಲ್ಲಿ ಲೇವಾದೇವಿ, ಗಿರವಿ, ಅಡವು, ಕೈಸಾಲ ಮೊದಲಾದ ಹೆಸರುಗಳಿಂದ ಅಮಾಯಕ ಜನರ ಶೋಷಣೆ ನಡೆಯುತ್ತಿದ್ದುದನ್ನು ತಪ್ಪಿಸಲು ಆಡಳಿತವು ಗ್ರಾಮೀಣ ಬ್ಯಾಂಕುಗಳ ಕಲ್ಪನೆಯನ್ನು ಕೈಗೂಡಿಸಿತು. ಬ್ಯಾಂಕುಗಳ ಉದ್ದೇಶವೂ ರೈತಾಪಿ ಜನರಿಗೆ, ಗ್ರಾಮೋದ್ಯೋಗಗಳಲ್ಲಿ ತೊಡಗಿದವರಿಗೆ ಸಾಲವನ್ನು ಒದಗಿಸುವುದೇ. ಬ್ಯಾಂಕಿನಿಂದ ಸಾಲವನ್ನು ಪಡೆಯಲು ಜನರೇನು ಹಿಂಜರಿಯಲಿಲ್ಲ. ೧೯೯೫ರ ಕಡೆಯಲ್ಲಿ ಬ್ಯಾಂಕಿನ ಮೂಲಕವಾಗಿ ಹಳ್ಳಿಗಾಡಿನ ಜನರಿಗೆ ಸಂದ ಸಾಲದ ಒಟ್ಟು ಮೊತ್ತ ೬,೬೦೦ ಕೋಟಿ ರೂಪಾಯಿಗಳು! ಕೊಟ್ಟ ಸಾಲವನ್ನು ಹಿಂದಕ್ಕೆ ಪಡೆಯಬೇಕು ತಾನೆ? ಇಲ್ಲವಾದರೆ ಬ್ಯಾಂಕು ಧರ್ಮಸಂಸ್ಥೆಯಾಗಬೇಕು.

ದೇಶದ ನಾನಾ ಭಾಗಗಳಲ್ಲಿ ಮೂವತ್ತೆರಡು ಬ್ಯಾಂಕುಗಳು ಭಾರಿ ನಷ್ಟವನ್ನನುಭವಿಸಿದುವು. ಕೊಟ್ಟ ಸಾಲ ವಸೂಲಾಗಲೇ ಇಲ್ಲ. ಬ್ಯಾಂಕಿನ ವ್ಯವಸ್ಥೆಗೆ ವೆಚ್ಚ ಮಾಡಿದ ಹಣವೂ ತುಂಬಿಬರಲಿಲ್ಲ. ಮತ್ತೆ ಹಲವು ಬ್ಯಾಂಕುಗಳು ಸ್ವಲ್ಪಮಟ್ಟಿಗೆ ಹಣವನ್ನು ಹಿಂದಕ್ಕೆ ಪಡೆದುವಾದರೂ ನಷ್ಟ ಸುಮಾರಾಗಿಯೇ ಇದ್ದಿತು. ಲಾಭವನ್ನು ಗಳಿಸಿ ಸುಸೂತ್ರವಾಗಿ ವ್ಯವಹಾರವನ್ನು ನಡೆಸಿಕೊಂಡು ಹೋದ ಬ್ಯಾಂಕುಗಳ ಸಂಖ್ಯೆ ತೀರಾ ಕಡಮೆ.

ಗ್ರಾಮೀಣ ಬ್ಯಾಂಕುಗಳ ಕಲ್ಪನೆಯೇನೋ ಒಳ್ಳೆಯದೇ. ಅದರಿಂದ ಹಳ್ಳಿಗಾಡಿನ ಜನರಿಗಾಗಿರುವ ಪ್ರಯೋಜನವೂ ಸಾಕಷ್ಟು ಪ್ರಮಾಣದ್ದು. ಆದರೆ ಬ್ಯಾಂಕಿನ ವ್ಯವಸ್ಥೆ ಆಡಳಿತಕ್ಕೇನು ಸಮಾಧಾನ ತರಲಿಲ್ಲ. ಬ್ಯಾಂಕಿನ ಕಟ್ಟಡ, ಸಿಬ್ಬಂದಿ, ವ್ಯವಹಾರ ಇದಕ್ಕೆಲ್ಲ ತಗುಲುವ ಖರ್ಚು ವಿಪರೀತವೆನಿಸಿತು; ಹೂಡಿದ ಬಂಡವಾಳ ಸಾಕಾಗಲಿಲ್ಲ; ಹಿಂದಿರುಗದ ಸಾಲ ಬೆಟ್ಟದಂತೆ ಬೆಳೆಯುತ್ತ ಹೋಯಿತು. ಗ್ರಾಮೀಣ ಬ್ಯಾಂಕೆಂಬ ವ್ಯವಹಾರದಲ್ಲಿ ಆಡಳಿತವು ಅನುಭವಿಸಿದ್ದು ನಷ್ಟವನ್ನೇ.

ಸಾಲ ನೀಡುವುದು ಮಾತ್ರವಲ್ಲದೆ, ಹಳ್ಳಿಯ ಜನರಲ್ಲಿ ಉಳಿತಾಯ ಮನೋಧರ್ಮವನ್ನು ಬೆಳೆಸಬೇಕೆಂದು ಗ್ರಾಮೀಣ ಬ್ಯಾಂಕುಗಳು ಡೆಪಾಸಿಟ್ ಯೋಜನೆಯನ್ನೂ ಜನರ ಮುಂದಿಟ್ಟಿದ್ದಿತು. ಇದಕ್ಕೆ ಜನರು ನೀಡಿದ ಉತ್ತೇಜನ ಮಾತ್ರ ಅಷ್ಟಕ್ಕಷ್ಟೇ!

ಇದರಿಂದ ಸೂಚನೆಗೆ ಸಿಗುವ ಪಾಠವೇನು? ಜನರಲ್ಲಿ ಮೂಲಭೂತವಾದ ಮನೋವೃತ್ತಿಗಳ ಮಾರ್ಪಾಡಾಗದೆ ಎಷ್ಟು ಒಳ್ಳೆಯ ಯೋಜನೆಯಾಗಲಿ ಯಶಸ್ವಿಯಾಗದು ಎಂಬುದು. ಸಾಲವನ್ನು ನೀಡುವವರು ಇದ್ದರೂ ಸಾಲವೆಂಬುದು ಹಿತವಲ್ಲವೆಂಬ, ಸಾಲವನ್ನು ತೆಗೆದುಕೊಳ್ಳಲೇಬೇಕಾದರೂ ಸಾಧ್ಯವಾದಷ್ಟು ಬೇಗನೆ ಹಿಂದಿರುಗಿಸಬೇಕೆಂಬ ತಿಳಿವಳಿಕೆಯಿಲ್ಲದಿದ್ದರೆ ಹೇಗೆ?

ಇಷ್ಟಾಗಿ, ಸಾಲದ ಸೌಕರ್ಯವನ್ನು ಆಡಳಿತವು ಒದಗಿಸುವುದೂ ನೈತಿಕವಾದ ದಾರಿಯೇನಲ್ಲ. ವ್ಯಕ್ತಿಯ ಆರ್ಥಿಕ ವ್ಯವಸ್ಥೆಗೆ ಹಿತವಾದದ್ದೇನಲ್ಲ.

161. ದುಡ್ಡು-ದುಡಿಮೆ

ದುಡ್ಡಿಗೂ ದುಡಿಮೆಗೂ ತೀರದ ಒಂದು ನಂಟಿದೆ. ದುಡಿಯದೆ ದುಡ್ಡು ಬಾರದು. ಆದರೆ ದುಡಿದವರ ಬಳಿಯೇ ದುಡ್ಡಿರುತ್ತದೆ ಎಂಬ ನೆಚ್ಚಿಕೆಯಿಲ್ಲ. ದುಡಿದದ್ದೇನೋ ದುಡ್ಡಿಗಾಗಿಯೇ; ಆದರೆ ದುಡಿಮೆಯಿಂದ ಬಂದ ದುಡ್ಡು ದುಡಿಸಿಕೊಂಡವರ ಪಾಲಾಗಿ ದುಡಿದವರಿಂದ ದೂರವಾಗುವುದೂ ಇದೆಯಲ್ಲವೇ?

ಎಂದ ಮೇಲೆ, ತಮ್ಮ ದುಡಿಮೆ ಅಷ್ಟಾಗಿ ಇರದಿದ್ದರೂ ದುಡ್ಡು ತಮ್ಮನ್ನು ಸೇರುತ್ತದೆ. ದುಡಿದವರು ಯಾರೋ, ದುಡ್ಡು ಸೇರುವುದು ಯಾರನ್ನೋ! ಹೀಗೆ ದುಡಿಯದೆ ಬಂದ ದುಡ್ಡು ಅವರ ಒಳ್ಳೆಯದಕ್ಕಲ್ಲ. ಅವರಲ್ಲಿ ಅದು ಉಳಿಯುವುದೂ ಇಲ್ಲ. ಅದು ಹಾರಿ ಹೋಗಲು ಹತ್ತು ದಾರಿ ಹುಡುಕುತ್ತದೆ.

ಇನ್ನು ದುಡಿಮೆಯಿಂದ ದುಡ್ಡು ದುಡಿದವನಿಗೇ ಬಂದಿತೆನ್ನಿ. ಅವನು ಅದನ್ನು ಅನುಭವಿಸದೆ, ಹೊರಗೆ ತೋರಗೊಡದೆ, ಕಪಿಮುಷ್ಟಿಯಿಂದ ಹಿಡಿದುಕೊಂಡಿದ್ದರೆ ಅವನು ಜಿಪುಣ. ದುಡ್ಡಿನ ಸ್ವಭಾವವೇ ಹರಿದಾಡುವುದು. ಅದನ್ನು ತಡೆಹಿಡಿದು ಒಂದೆಡೆ ಕೂಡಿಹಾಕಿದಾಗ ಅದರ ಪ್ರಯೋಜನವೂ ಮರೆಯಾಗುತ್ತದೆ.

ಹರಿಯುವಾಗ ನದಿಯ ನೀರನ್ನು ಜನ ಕುಡಿಯುತ್ತಾರೆ, ಸ್ನಾನಕ್ಕೆ ಬಳಸಿಕೊಳ್ಳುತ್ತಾರೆ, ಬೇಸಾಯಕ್ಕೆ ಹರಿಸಿಕೊಳ್ಳುತ್ತಾರೆ. ಒಂದೆಡೆ ನಿಂತ ಕೊಚ್ಚೆ ನೀರು ಯಾವ ಕೆಲಸಕ್ಕೆ ಬರುತ್ತದೆ? ಯಾರು ಅದರ ಹತ್ತಿರ ಸೀಯುತ್ತಾರೆ?

ದುಡ್ಡು ಬಂದ ಮೇಲೆ ದುಡಿಮೆಯೂ ನಿಲ್ಲಬೇಕಲ್ಲವೇ? ದುಡಿಮೆ ದಾರಿ, ದುಡ್ಡು ಗುರಿ. ಗುರಿಯನ್ನು ಮುಟ್ಟಿದ ಮೇಲೆ ದಾರಿಯಲ್ಲಿ ನಡೆಯುತ್ತಲೇ ಇರಬೇಕೇ? ಹಲವರಿಗೆ ಈ ವಿವೇಕವಿರುವುದಿಲ್ಲ. ದುಡ್ಡಿಗಾಗಿ ದುಡಿಮೆಯೆಂದಿರುವುದು ದುಡಿಮೆಗಾಗಿ ದುಡ್ಡು ಎಂದಾಗಿ ಬಿಡುತ್ತದೆ. ಅವರ ಪಾಲಿಗೆ ಉಳಿದುಕೊಳ್ಳುವುದು ದುಡಿಮೆಯೇ. ದುಡ್ಡಿನ ಲಾಭ ಅವರಿಗಾಗದು.

ದುಡಿಮೆ ಬೇಡ, ದುಡ್ಡಿರಲಿ ಎನ್ನುವವರು ಸೋಮಾರಿಗಳು. ಕೆಲಸ ಮಾಡಲು ಆಲಸಿಕೆ. ಸುಖಪಡಲು ಉತ್ಸಾಹ. ಹೀಗೆಯೇ ದುಡ್ಡು ಬೇಡ, ದುಡಿಮೆಯಿರಲಿ ಎನ್ನುವವರೂ ಕೆಲಮಂದಿಯಿರುತ್ತಾರೆ, ಕಾರ್ಯ ಪಿಶಾಚಿಗಳು. ಕುಡಿಯುವ ಚಟವಿದ್ದಂತೆ ಕೆಲಸ ಮಾಡುತ್ತಲೇ ಇರುವ ಜನರನ್ನು ನೋಡಿಲ್ಲವೇ? 'ವರ್ಕೋಹಾಲಿಕ್ಸ್' ಎಂಬ ಗುಂಪಿನವರು.

ದುಡ್ಡು ಬೇಕು, ದುಡಿಮೆಯೂ ಇರಲಿ ಎನ್ನುವವರೇ ಬಹುಸಂಖ್ಯಾತರು. ಆದರೆ ದುಡಿಮೆಗೆ ಸಮನಾಗಿ ದುಡ್ಡು ಎಂಬುದು ತತ್ವವಾದರೆ ದುಡ್ಡಿಗೆ ಸಮನಾಗಿ ದುಡಿಮೆ ಎಂಬುದಿನ್ನೊಂದು ಪ್ರಯೋಗ. ಸಾಮಾನ್ಯವಾಗಿ ದುಡಿಮೆ-ದುಡ್ಡುಗಳನ್ನು ಸಮೀಕರಿಸಿದ ವ್ಯವಸ್ಥೆಯಿರುತ್ತದೆ. ದುಡ್ಡನ್ನು ನಿಗದಿ ಮಾಡುವುದು ಸುಲಭ; ದುಡಿಮೆಯೆಷ್ಟಿರಬೇಕೆಂದು ನಿರ್ಧರಿಸುವುದು ಕಷ್ಟ. ದುಡ್ಡು ಗಟ್ಟಿ, ದುಡಿಮೆ ರಾಡಿ. ದುಡಿಮೆ ಎಷ್ಟಾದರೂ ಆಯಿತು, ಹೇಗಾದರೂ ಆಯಿತು; ದುಡ್ಡೇನೋ ನಿಗದಿಯಾದಂತೆ ಬರುತ್ತದೆ. ಹೀಗೆನ್ನುವಾಗ ದುಡಿಮೆಯ ಕಷ್ಟ ಯಾರಿಗೆ ಬೇಕು? ಹೇಗೂ ಬರುವ ದುಡ್ಡು ಬಂದೇ ಬರುತ್ತದೆಯಲ್ಲವೇ?

ದುಡಿಮೆಗಿಂತ ದುಡ್ಡು ಹೆಚ್ಚು ಮುಖ್ಯವಾಗುವುದು ಹೀಗೆ. ಈ ಧೋರಣೆ ಬೇರೂರಿಕೊಂಡಾಗ ದುಡಿಮೆಗೂ ದುಡ್ಡಿಗೂ ಇರುವ ಸಹಜ ಸಂಬಂಧ ಮರೆಯಾಗುತ್ತದೆ, ದುಡಿಮೆಯಿಲ್ಲದೆ ದುಡ್ಡನ್ನು ಬರಮಾಡಿಕೊಳ್ಳುವ ಬಯಕೆ ತೋರಿಕೊಳ್ಳುತ್ತದೆ.

ದುಡ್ಡಿನ ರುಚಿಯನ್ನು ಕಂಡವರು ಅದಕ್ಕೆ ಬಾಯಿ ಬಿಡುವುದು ಸಹಜ.

162. ಹಣದ ಅಂಟು

ಹಲಸಿನ ಕಾಯಿ ಹೊರಗೆ ಮುಳ್ಳು ಮುಳ್ಳು, ಒರಟು. ಕಷ್ಟಪಟ್ಟು, ಕಾಯನ್ನು ಕತ್ತರಿಸಿ, ಒಳಗೆ ಕೈಹಾಕಿ ತೊಳೆಗಳನ್ನು ಬಿಡಿಸಿದರೆ ತಿನ್ನಲು ರುಚಿ. ಹಣ್ಣಾಗಿರದಿದ್ದರೆ ಕಾಯಿಪಲ್ಲೆಯಾಗುತ್ತದೆ; ಕೇರಳದವರಾದರೆ ಹತ್ತಾರು ಬಗೆ ಬಗೆಯ ಖಾದ್ಯಗಳನ್ನು ತಯಾರಿಸುತ್ತಾರೆ.

ಆದರೆ ಹಲಸಿನ ಕಾಯೊಳಗೆ ಕೈಹಾಕಿದರೆ ಅಂಟು; ಬಗೆಯುವುದು ಸುಲಭವಲ್ಲ. ಅಂಟು ಕೈಯನ್ನು ಮೆತ್ತಿಕೊಂಡು ಅಡ್ಡಿಯಾಗದಿರಲು ಬಲ್ಲವರು ಏನು ಮಾಡುತ್ತಾರೆ, ಗೊತ್ತೆ?

ಕೈಗಷ್ಟು ಎಣ್ಣೆಯನ್ನು ಸವರಿಕೊಳ್ಳುತ್ತಾರೆ. ಎಣ್ಣೆಯಿದ್ದರೆ ಅಂಟು ಮೆತ್ತಿಕೊಳ್ಳಲಾರದು; ಕೆಲಸ ಸುಲಭವಾಗುತ್ತದೆ, ಓರಣವಾಗಿರುತ್ತದೆ.

ಒಬ್ಬ ಕವಿ ಹಲಸಿನ ಕಾಯನ್ನು ಪ್ರಪಂಚಕ್ಕೆ ಹೋಲಿಸಿದ್ದಾರೆ. ಅದರೊಳಗೇ ರುಚಿಯನ್ನನುಭವಿಸಲಾಗುವುದು; ಹೊರಗೆ ನೋಟಕ್ಕೆ ಅದು ಒರಟೇ, ಗಡುಸೇ. ಅದನ್ನು ಬಗೆದು ತೊಳೆಗಳನ್ನು ಬಿಡಿಸಿ ತಿಂದವನು ಜಾಣ. ಮನುಷ್ಯನ ಸುಖಸಾಮಗ್ರಿಗಳೆಲ್ಲ ಪ್ರಪಂಚದ ಒಳಗೇ ಇರುವಂಥವು. ಅವನ್ನು ನಾವು ಅನುಭವಿಸಬೇಕೆಂದರೆ ಬಗೆಯುವ, ಬಿಡಿಸಿಕೊಳ್ಳುವ ಹದನ ತಿಳಿದಿರಬೇಕು.

ಹಲಸಿನ ಕಾಯೊಳಗೆ ಕೈ ಹಾಕುವಾಗ, ಕೈಗೆ ಬಳಿದುಕೊಳ್ಳುವ ಎಣ್ಣೆಯನ್ನು ಕವಿ ಹಣಕ್ಕೆ ಹೋಲಿಸಿದ್ದಾನೆ. ಹಣವಿದ್ದರೆ ಪ್ರಪಂಚದ ಕಷ್ಟ ಸೋಕಲಾರದು, ಸುಖ ಸಾಮಗ್ರಿಗಳನ್ನು ಹೆಕ್ಕಿಕೊಳ್ಳುವುದು ಸುಲಭವಾಗುತ್ತದೆ.

ಇದಕ್ಕಾಗಿಯೇ ಜನ ಹಣವನ್ನು ಬಯಸುವುದು, ಹಣಕ್ಕಾಗಿ ಹೆಣಗಾಡುವುದು, ಹಣವೆಂದರೆ ಬಾಯಿ ಬಾಯಿ ಬಿಡುವುದು.

ಆದರೆ ಹಣದ ಪಾತ್ರ ಮೇಲೆ ಕಾಣಿಸಿದ ಎಣ್ಣೆಯ ಪಾತ್ರದಷ್ಟೆ ಎಂಬುದನ್ನು ಹಲವರು ಅರಿತುಕೊಳ್ಳುವುದಿಲ್ಲ. ಎಣ್ಣೆಯ ಕೆಲಸ ಕಾಯಿಯ ಅಂಟು ಕೈಗೆ ಸೋಕದಂತೆ ಮಾಡುವುದು, ತೊಳೆಯನ್ನು ಬಿಡಿಸಿ ತೆಗೆಯಲು ನೆರವಾಗುವುದು, ಅಷ್ಟೆ. ಅದನ್ನು ಮೀರಿ ಎಣ್ಣೆಯ ಅಗತ್ಯವಿಲ್ಲ.

ಎಣ್ಣೆಯ ಕೆಲಸವೇ ಮುಖ್ಯವೆಂಬಂತೆ ಭಾವಿಸಿ ಅದಕ್ಕೇ ಗಮನವಿತ್ತು ಅದನ್ನೇ ಹಿಡಿದರೆ ಅದೇ ಅಂಟಾಗಿಬಿಡುತ್ತದೆ. ಕಾಯಿಯ ಅಂಟು ಹೋದರೂ ಎಣ್ಣೆಯ ಅಂಟು ಬಿಡುವುದಿಲ್ಲ. ಸುಖಸಾಮಗ್ರಿಗಳನ್ನು ಪಡೆದುಕೊಳ್ಳುವಾಗ ಅದಕ್ಕೆ ಸೇರಿಕೊಂಡು ಬಂದ ದುಃಖವನ್ನು ನೀಗಿಸಿಕೊಳ್ಳಲು ಹಣ ಬೇಕು; ಅಂಟನ್ನು ದೂರವಿರಿಸಲು ಎಣ್ಣೆಯಿದ್ದಂತೆ. ಹಣವನ್ನೇ ಗಟ್ಟಿಯಾಗಿ ಹಿಡಿದು, ಸುಖವೆಲ್ಲ ಅದರಲ್ಲಿಯೇ ಇದೆ ಎಂದುಕೊಂಡರೆ ಅದು ಅಂಟೇ.

ಒಂದು ಅಂಟನ್ನು ತೆಗೆಯಲು ಹೋಗಿ ಇನ್ನೊಂದು ಅಂಟನ್ನು ಪಡೆದುಕೊಳ್ಳುವುದೇ ಇಲ್ಲಿ ಆಗುವ ಲಾಭ. ಒಳಗಿನ ತೊಳೆಗಳನ್ನು ತೆಗೆಯುವುದು ಕಷ್ಟವೇ ಆಗುತ್ತದೆ; ಬಿಡಿಸಿ ತೆಗೆದರೂ ಕೈಯ ಎಣ್ಣೆ ತೊಳೆಗೂ ಅಂಟಿಕೊಳ್ಳುತ್ತದೆ. ಹಾಗೆಯೇ ತಿಂದರೆ ರುಚಿಯೂ ಕೆಡುತ್ತದೆ. ಕೈಗೆ ಎಣ್ಣೆಯನ್ನು ಹಗುರವಾಗಿ ಸವರಿಕೊಂಡರೆ ಸಾಕು; ಕೈಯನ್ನು ಎಣ್ಣೆಯಲ್ಲೇ ಅದ್ದಬೇಕಾಗಿಲ್ಲ. ಹಣದ ವಿಚಾರದಲ್ಲೂ ಇಷ್ಟು ಎಚ್ಚರವಿರಬೇಕು.

163. ಹಣದ ಗುಣ

ಹಣವನ್ನು ಕುರಿತಂತೆ ನಮ್ಮ ಹಳೆಯ ಕವಿಗಳು ಜಾಣತನದ ಮಾತನ್ನೆ ಆಡಿದ್ದಾರೆ.

ನಯಸೇನನೆಂಬ ಕವಿ ೧೧೧೬ರ ಸುಮಾರಿಗಿದ್ದವನು ಧರ್ಮಾಮೃತವೆಂಬ ಕಾವ್ಯಗ್ರಂಥವನ್ನೂ ಬರೆದಿದ್ದಾನೆ. ಹೆಸರೇ ಹೇಳುವಂತೆ ಧರ್ಮವನ್ನು ತಿಳಿಸುವ ಗ್ರಂಥ.

ಧರ್ಮವೆಂದರೆ ಅವರ ದೃಷ್ಟಿಯಲ್ಲಿ ಪರಮಾರ್ಥವೇ, ಮುಂದಿನ ನೆಮ್ಮದಿಗಾಗಿ ಇಂದು ಮಾಡಬೇಕಾದುದು. ಈ ಸಂದರ್ಭದಲ್ಲಿ ಹಣಕ್ಕೆ ಯಾವ ಬೆಲೆ?

'ಪುರುಷಂ ಧನಮೆನಗುಂಟೆಂದು ಇರಲಾಗದು' ತನಗೆ ಹಣವಿದೆಯೆಂದು ಸುಮ್ಮನೆ ಕೂಡಬಾರದು, ಎಂದರೆ ಇದ್ದಷ್ಟು ಸಾಕೆಂದು ತೆಪ್ಪಗಿದ್ದರೆ ಹೇಗೆ?

'ದ್ರವ್ಯಮುಳ್ಳೊಡಂ ದ್ರವ್ಯಮನಾರ್ಜಿಪುದು', ಹಣವಿದ್ದರೂ ಮತ್ತಷ್ಟು ಹಣವನ್ನು ಸಂಪಾದಿಸಬೇಕು; ಹಣವಿದೆಯೆಂಬುದು ಅಲಸಿಕೆಗೆ ಕಾರಣವಾಗಬಾರದು.

'ಏಕೆನೆ ವಿತ್ತಂ ತಾಂ ದೊರೆಕೊಳೆ ಕೇಳ್ ಇಹಪರಂಗಳೆರಡುಂ ಸಾಧ್ಯಂ'

ಏಕೆಂದರೆ ಹಣವು ದೊರೆತುದಾದರೆ ಇಲ್ಲಿಯ ನೆಮ್ಮದಿಯೂ ಪರಮಾರ್ಥವೂ ಸಾಧ್ಯವಾಗುತ್ತದೆ; ಎಂದರೆ ಎರಡನ್ನೂ ಪಡೆದುಕೊಳ್ಳಬಹುದು.

ಹಣದಿಂದ ಪ್ರಾಪಂಚಿಕ ಪ್ರಯೋಜನಗಳಿಲ್ಲದೆ ಇಲ್ಲ; ಅದನ್ನು ಎಲ್ಲರೂ ಬಲ್ಲರು. ಹಣವಿದ್ದು ದಾನ, ಪರೋಪಕಾರ, ಲೋಕದ ಆರೈಕೆಗಳನ್ನು ಮಾಡುವುದರಿಂದ ಕೈವಲ್ಯಕ್ಕೆ ಕಾರಣವಾಗುವ ಪುಣ್ಯ ದೊರಕುತ್ತದೆ. ಎಂದರೆ, ಇದ್ದ ಹಣವನ್ನೆಲ್ಲ ತನ್ನ ಸುಖಕ್ಕೆ ಬಳಸಬಾರದು; ಅದರಲ್ಲೊಂದು ಪಾಲನ್ನು ಪರಮಾರ್ಥಕ್ಕೂ ವಿನಿಯೋಗಿಸಬೇಕು.

ಈ ಕವಿಗೆ ಲೋಕಾನುಭವವಿಲ್ಲವೆಂದು ಹೇಳುವಂತಿಲ್ಲ. 'ಸಿರಿಯುಳ್ಳವರು ಮೈಯ್ಯರಿಯರು' ಎಂಬುದು ಅವನಿಗೆ ತಿಳಿದಿದೆ. ಹಣವುಳ್ಳವರು ಪಿತ್ತವೇರಿದವರಂತೆ, ದತ್ತೂರಿಯನ್ನು ತಿಂದವರಂತೆ, ಹಾವಿನ ವಿಷವೇರಿದವರಂತೆ ಮೈಮರೆತು ಹಾರಾಡುವರು ಎಂದು ಹೇಳಿದ್ದಾನೆ.

ಹಣ ಬಹುಕಾಲ ಉಳಿದೀತೆಂದು ಬಗೆಯುವವನು ಹೆಡ್ಡನೇ ಸರಿ. 'ಸಿರಿ ಶಾಶ್ವತಮೆಂದು ನಂಬಿದವನೆ ಗಾಂಪಂ'. ಅದನ್ನು ಹಣ್ಣು ಬಿಟ್ಟ ಮರಕ್ಕೆ, ಕಾಮನ ಬಿಲ್ಲಿಗೆ, ಅರಿಸಿನದಲ್ಲಿ ತೊಯ್ದ ಬಟ್ಟೆಗೆ ಹೋಲಿಸುತ್ತಾನೆ. ಹಣ್ಣು ಬಿಟ್ಟ ಮರ ಮುದಿಯೆಂದರ್ಥ; ಕಾಮನ ಬಿಲ್ಲು ತೋರಿಕೊಂಡು ಮರೆಯಾಗುವುದು; ಅರಿಸಿನ ಬಣ್ಣದಲ್ಲಿ ಅದ್ದಿದ ಬಟ್ಟೆ ಬೇಗ ಹರಿಯುತ್ತದೆ.

ಕವಿಯ ಕಲ್ಪನೆಯಲ್ಲಿ ಕೂಡಿಟ್ಟ ಹಣ 'ತಿರಿದುಂಬ ತಿರಕದೊಳ್ ಕೂಟಂ' ಎನ್ನುವಂತೆ. ತಾವೇ ಅಲ್ಲಲ್ಲಿ ಬೇಡಿ ಹೊಟ್ಟೆ ಹೊರೆದುಕೊಳ್ಳುವವರೊಂದಿಗೆ ನಾವು ಕೂಡಿಕೊಂಡರೆ ನಮಗೇನು ನೆಮ್ಮದಿ? ಅವರಿಗೇ ಇಲ್ಲ, ನಮಗೇನು ಕೊಟ್ಟಾರು! ಅವರೊಂದಿಗೆ ಕೆಳೆತನ ಎಷ್ಟು ಕಾಲ ಉಳಿದೀತು?

ಹಣಕ್ಕೆ ಹರಿದು ಹಾರಿ ಹೋಗುವುದೇ ಸ್ವಭಾವ, ಒಂದೆಡೆ ಇರುವುದಲ್ಲ. ಹಾಗೆಂದೇ ಹಣವಿದೆಯೆಂದು ಸುಮ್ಮನಿರಬಾರದು. ಮತ್ತಷ್ಟು ಸಂಪಾದನೆ ಮಾಡಬೇಕು, ಮಾಡುತ್ತಲೆ ಇರಬೇಕು.

ಹಣ ಕತ್ತಿಯಂತೆ; ಅದರಿಂದ ಉಪಯೋಗವೂ ಉಂಟು. ಗಾಸಿಯೂ ಆಗಬಹುದು. ಹೇಗೆ ಬಳಸಬೇಕೆಂಬ ತಿಳಿವಳಿಕೆಯಿರಬೇಕು.

164. ಸಾಲದ ಸಮೃದ್ಧಿ

ದೇಶದ ಎಲ್ಲ ನೀತಿಗಳೂ ಆಶ್ರಯಿಸುವುದು ಆರ್ಥಿಕ ನೀತಿಯನ್ನೇ. 'ಸರ್ವೇಗುಣಾಃ ಕಾಂಚನಮಾಶ್ರಯಂತಿ' ಎಂಬ ಮಾತೇ ಇದೆಯಲ್ಲ.

ಹಣವೊಂದು ಗಟ್ಟಿಯಾಗಿದ್ದರೆ ಏನನ್ನಾದರೂ ಮಾಡಬಹುದು.

ಹಣ ಗಟ್ಟಿಯಾಗಿರುವುದೆಂದರೇನು? ಅದರಲ್ಲಿ ತನ್ನತನ ಇರುವುದು, ತನ್ನದೇ ಆಗಿರುವುದು; ಹಾಗಿಲ್ಲವಾದರೆ ಹಣ ಹಾರಿ ಹೋಗುತ್ತದೆ, ಕರಗಿ ನೀರಾಗುತ್ತದೆ.

ದೇಶದಲ್ಲಿ ಜನ ತಾವೇ ದುಡಿದು, ಉದ್ದಿಮೆಯಿಂದಲೋ ಬೇಸಾಯದಿಂದಲೋ ಹಣ ಮಾಡಿಕೊಂಡು ಜಾಣತನದಿಂದ ಕೂಡಿಟ್ಟುಕೊಂಡರೆ ಗಟ್ಟಿ ಹಣ.

ನಮ್ಮ ದೇಶವನ್ನು ಆಂಗ್ಲರು ಆಳುತ್ತಿದ್ದಾಗ ನಮ್ಮ ಗಟ್ಟಿ ಹಣವನ್ನು ಅವರು ದೋಚಿಕೊಂಡು ಹೋದರು. ನಮ್ಮ ದೇಶ ಬಡದೇಶವಾಯಿತು.

ಆದರೆ ಬಡವರಾಗಿ ಮಡಗಿದಂತೆ ಇದ್ದೆವು. ಸಾಲಕ್ಕಾಗಿ ಯಾವ ದೇಶವನ್ನೂ ಬೇಡಲಿಲ್ಲ; ದೇಶ ಯಾರಿಗೂ ಋಣಿಯಾಗಿರಲಿಲ್ಲ, ನಮಗೆ ಯಾರ ಹಂಗೂ ಇರಲಿಲ್ಲ. ಆಂಗ್ಲರು ನಮ್ಮ ದೇಶವನ್ನು ನಮ್ಮ ಕೈಯಲ್ಲೆ ಬಿಟ್ಟು ಹೋಗುವಾಗ ನಮ್ಮ ವಿದೇಶೀ ವಿನಿಮಯ ಮೂರೂವರೆ ಸಾವಿರ ಕೋಟಿ ರೂಪಾಯಿಗಳಾಗಿದ್ದವು!

ನಮ್ಮವರೇ ನಮ್ಮನ್ನು ಆಳತೊಡಗಿದ ಮೇಲೆ ನಮ್ಮ ಹಿರಿಯ ರಾಜಕಾರಣಿಗಳ ಅವಿವೇಕದ ಆರ್ಥಿಕ ನೀತಿಯಿಂದಾಗಿ ಸಾಲಗಾರರಾದೆವು.

ದೇಶವನ್ನು ಆಧುನಿಕವನ್ನಾಗಿ ಮಾಡುವ ಕನಸು ಅವರದ್ದು. ಆಧುನಿಕವೆಂದರೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವ ಉದ್ಯೋಗ, ಉದ್ಯಮ, ಯಂತ್ರ, ತಂತ್ರ, ವಿದ್ಯಾಭ್ಯಾಸ, ಭೋಗ, ವ್ಯಾಪಾರ, ಜೀವನ ಸಾಮಗ್ರಿ ಇತ್ಯಾದಿಗಳ ಅನುಕರಣೆ.

ನಮ್ಮ ದೇಶಕ್ಕೆ ನಮ್ಮ ಜನಕ್ಕೆ ನಮ್ಮ ಸಂಸ್ಕೃತಿಗೆ ಅಗತ್ಯವಾದುದು ಯಾವುದು, ಸಾಧ್ಯವಾದುದು ಯಾವುದು, ಹಿತವಾದುಧು ಯಾವುದು ಎಂಬ ಆಲೋಚನೆಯಿಲ್ಲದೆ ಆರ್ಥಿಕ ಯೋಜನೆಗಳನ್ನು ಹಾಕಿದ್ದೇ ಹಾಕಿದ್ದು.

ಈ ದುಂದುಗಾರಿಕೆಗೆ ಹಣ ನಮ್ಮಲ್ಲೆಲ್ಲಿದೆ? ಸರಿ, ಸಾಲವೆತ್ತಿದರೆ ಆಯಿತು. ಸಾಲ ನೀಡುವ ಸಂಸ್ಥೆಗಳಿವೆ (ವರ್ಲ್ಡ್ ಬ್ಯಾಂಕ್, ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್ ಇತ್ಯಾದಿ), ದೇಶಗಳಿವೆ, ಇನ್ನೇನು ಬೇಕು?

ಹದಿನೈದು ವರ್ಷಗಳ ಹಿಂದೆಯೇ ನಮ್ಮ ದೇಶದ ವಿದೇಶೀ ಸಾಲದ ಹೊರೆ ಹನ್ನೆರಡು ಸಾವಿರ ಕೋಟಿ ರೂಪಾಯಿಗಳಷ್ಟಿದ್ದವು. ವಿದೇಶಿ ವಿನಿಮಯದ ಸಂಗ್ರಹದ ಮಾತೆಲ್ಲಿ ಬಂತು? ಅದೆಲ್ಲಾ ಕರಗಿ ಹೋಯಿತು.

ಮುಂದೆ ಹತ್ತು ವರ್ಷಗಳ ಅವಧಿಯಲ್ಲಿ ವಿದೇಶಿಸಾಲದ ಮೊತ್ತ ತೊಂಭತ್ತೆರಡು ಸಾವಿರ ಕೋಟಿಗಳಾದುವು. ಹೀಗೆ ಏರುತ್ತಲೇ ಇದೆ.

ಸಾಲ ನೀಡುವವರು ಕನಿಕರದಿಂದ ನೀಡುತ್ತಾರೆಯೆ? ಅದೇನು ದಾನಧರ್ಮವೆ? ಬಡ್ಡಿ ತೆರಬೇಡವೆ? ನಮ್ಮ ಬಂಗಾರವನ್ನು ಒತ್ತೆ ಇಡಬೇಡವೆ?

ಇರುವ ಸಾಲವನ್ನು ತೀರಿಸದಿದ್ದರೆ ಆ ಭಾರದ ಜೊತೆಗೆ ಬಡ್ಡಿಯ ಹೊರೆಯೂ ಸೇರುತ್ತದೆ. ಇದನ್ನು ತೀರಿಸಲು ಹೊಸ ಸಾಲ ಎತ್ತಬೇಕು!

ನಮ್ಮ ವಿಕಾಸ ಯೋಜನೆಗಳೆಲ್ಲ ವಿದೇಶೀ ಸಾಲದ ಬಲದ ಮೇಲೆ ನಿಂತಿರುವುದು, ನಡೆಯುತ್ತಿರುವುದು. ಸಾಲ ತೀರಿಸುವ ಚಿಂತೆ ನಮ್ಮ ನಾಯಕರಿಗೆ ಇದ್ದಂತೆ ತೋರುವುದಿಲ್ಲ. ಇನ್ನು ದೇಶದ ಸಮೃದ್ಧಿಯ ಚಿಂತೆಯಾದರೂ ಹೇಗೆ ಬಂದೀತು?

165. ಹಾಳಾಗುವ ಹಣ

ಪುರಂದರದಾಸರು 'ಜೋಕೆ ಮಾಡದಾ ಹಣವ ತಾ ಗಳಿಸಲೇಕೆ?' ಎಂದರು.

ಜೋಕೆ ಮಾಡುವುದೆಂದರೆ ಕಾಪಾಡಿಕೊಳ್ಳುವುದು, ಕೆಡದಂತೆ ನೋಡಿಕೊಳ್ಳುವುದು. ಹಣವನ್ನು ಸಂಪಾದಿಸುವುದು ಹಣದ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕೇ ಅಲ್ಲವೆ? ಬದುಕಿನ ಅಗತ್ಯಗಳನ್ನು ಪೂರೈಸಲು ಹಣ ಬೇಕು. ಹಣವಿರದೆ ಹಸಿವೆ ತೀರುವುದಿಲ್ಲ, ಮೈಮುಚ್ಚಲಾಗುವುದಿಲ್ಲ; ತಲೆಯ ಮೇಲೆ ಸೂರು

ಕಾಣುವುದಿಲ್ಲ. ಇವಕ್ಕೆಲ್ಲ ಹಣ ಬೇಕು. ಈ ಪ್ರಯೋಜನಗಳನ್ನು ಪೂರೈಸಿಕೊಳ್ಳುವುದೇ ಬದುಕಿನ ಮುಖ್ಯ ಉದ್ದೇಶ. ಅದಕ್ಕೆ ನೆರವಾಗಲು ಹಣದ ಗಳಿಕೆ ಬೇಕೇಬೇಕು.

ಒಮ್ಮೆ ಹಣವನ್ನು ಗಳಿಸಿಕೊಂಡ ಮೇಲೆ, ಈ ಪ್ರಯೋಜನಗಳನ್ನು ಪೂರೈಸದೆ ಅದು ಪೋಲಾಗಿಬಿಟ್ಟರೆ ಅದನ್ನು ಗಳಿಸಲೆಂದು ಪಟ್ಟ ಶ್ರಮವೆಲ್ಲ ವ್ಯರ್ಥವಲ್ಲವೆ? ಪೋಲು ಮಾಡದೆ, ಹಾಳಾಗಲು ಬಿಡದೆ, ಗಳಿಸಿದ ಹಣವನ್ನು ಉಳಿಸಿಕೊಳ್ಳುವುದೇ ಜೋಕೆ ಮಾಡುವುದು.

ಆದರೆ ಗಳಿಸಿದ ಹಣವನ್ನು ವೆಚ್ಚ ಮಾಡದೆ ಉಂಡೆಯಾಗಿ ಹಾಗೆಯೇ ಇರಿಸಿಕೊಳ್ಳುವುದು ದಾಸರ ಆಶಯವಲ್ಲ. ಲೋಭಿಯಾಗಬಾರದು, ಜಿಪುಣನಾಗಬಾರದು ಎಂದು ದಾಸರೇ ಹೇಳಿದ್ದಾರೆ. ಮತ್ತೆ ಜೋಕೆ ಮಾಡುವುದು ಹೇಗೆ?

ಹಣವಿರುವುದು ವೆಚ್ಚ ಮಾಡುವುದಕ್ಕೇ. ಹಣದಿಂದಲೇ ನೇರವಾಗಿ ಹಸಿವೆ ತೀರುವುದಿಲ್ಲ; ಮೈ ಮುಚ್ಚುವುದಿಲ್ಲ. ಹಣವನ್ನು ತಿನ್ನಲಾರೆವು; ಹೊದೆದುಕೊಳ್ಳಲಾರೆವು. ನಮ್ಮ ಬದುಕಿಗೆ ಅಗತ್ಯವಾದ ಸಾಮಗ್ರಿಗಳನ್ನೂ ಸಾಧನಗಳನ್ನು ಬರಮಾಡಿಕೊಳ್ಳಲು ಹಣ ನೆರವಾಗುತ್ತದೆ. ಹಣದ ಪ್ರಯೋಜನ ಇಷ್ಟೇ. ಅನಗತ್ಯ ವೆಚ್ಚ ದುಂದುಗಾರಿಕೆ. ಅಗತ್ಯವಾದ ಸೌಕರ್ಯ, ಸೌಲಭ್ಯಗಳನ್ನು ನಾವು ಹಣದಿಂದ ಪಡೆದುಕೊಂಡು ನಮಗೆ ಹಿತ, ಸುಖ ಎಂದಾದರೆ ಹಣದ ವೆಚ್ಚ ಸಾರ್ಥಕ. ಹಿತ, ಸುಖ ಎಂಬ ಉದ್ದೇಶವೇ ಇರದೆ ಸೌಕರ್ಯ, ಸೌಲಭ್ಯಗಳಿಗೇ ಮಾರುಹೋಗಿ ಮಾಡುವ ವೆಚ್ಚವನ್ನು ದಾಸರು 'ಜೋಕೆ ಮಾಡದ ಹಣ'ವೆಂದಿದ್ದಾರೆ.

ಇದರಿಂದ ಹಣ ಹಾಳಾದಂತೆಯೇ. ಅದರ ಪ್ರಯೋಜನವನ್ನೇನು ಅದು ಪೂರೈಸಲಿಲ್ಲ. ಅದನ್ನು ಕಷ್ಟಪಟ್ಟು ಗಳಿಸಿಕೊಂಡದ್ದು ಸಾರ್ಥಕವಾಗಲಿಲ್ಲ. 'ಕಾಸೂ ಹಾಳು, ತಲೆಯೂ ಬೋಳು' ಎಂಬಂತಾಯಿತು.

ಹಣಕ್ಕೆ ಮೂರು ದಾರಿಗಳೆಂದು ತಿಳಿದವರು ಹೇಳುತ್ತಾರೆ— ಭೋಗ, ದಾನ, ನಾಶ ಎಂದು. ನಾಲ್ಕನೆಯ ದಾರಿ ಇರದಂತೆ.

ಬದುಕಿನ ಸುಖಸಂತೊಷಗಳಿಗಾಗಿ ಹಣವನ್ನು ಬಳಸಿಕೊಂಡರೆ ಅದು ಭೋಗ. ಭೋಗವು ಹಿತ-ಮಿತವಾಗಿರಬೇಕು, ಇಲ್ಲವಾದರೂ ಹಣವು ಹಾಳಾದಂತೆಯೇ. ಬೇರೆಯವರಿಗೆ ನೆರವಾಗುವ ಉದ್ದೇಶದಿಂದ ಕೈಯೆತ್ತಿ ಹಣವನ್ನು ಕೊಟ್ಟರೆ ಅದು ದಾನ. ದಾನವೆಂದರೆ ಸಂವಿಭಾಗ, ನಮ್ಮ ಹಣವನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು. ಭೋಗವೆಂದರೆ ಸ್ವಾರ್ಥ; ದಾನವೆನ್ನುವುದು ಪರಾರ್ಥ.

ಹಣವು ಇವೆರಡೂ ದಾರಿಗಳನ್ನು ಹಿಡಿಯದಿದ್ದರೆ, ಅದಕ್ಕಿರುವುದು ಒಂದೇ ದಾರಿ, ಮೂರನೆಯದು, ನಾಶದ್ದು, ದುಂದುಗಾರಿಕೆಯದು. ಇದನ್ನು ತಪ್ಪಿಸುವ ಎಣಿಕೆಯಿಂದಲೇ ಹಣವನ್ನು ಜೋಕೆ ಮಾಡಬೇಕು.

166. ಧನ-ಸರ್ವಸಮಾನ

ಜನರಲ್ಲಿ ಸಹಜವಾಗಿ ಎಷ್ಟೋ ಭೇದವಿರುತ್ತದೆ.

ರೂಪ, ಗುಣ, ವಿದ್ಯೆ, ಮನೆತನ, ಆಸಕ್ತಿ, ಅಭಿರುಚಿ, ದುಡಿಮೆ, ಆರೋಗ್ಯ ಎಲ್ಲವೂ ಎಲ್ಲರಿಗೆ ಸಮನಾಗಿರುವುದಿಲ್ಲ. ಅವರವರ ಸಾಮರ್ಥ್ಯವೂ, ಅನುಕೂಲಗಳೂ, ಅವಕಾಶಗಳೂ ಬೇರೆಬೇರೆಯಾಗಿಯೇ ಇರುತ್ತವೆಯಲ್ಲವೆ?

ಈ ವಿವರಗಳಿಂದ ಅವರು ಪಡೆದುಕೊಳ್ಳುವ ಪ್ರಯೋಜನಗಳೂ ಒಂದೇ ಆಗಿರುವುದಿಲ್ಲ. ಮತ್ತೆ ಇವೆಲ್ಲವೂ ಅಷ್ಟಿಷ್ಟು ಆಗಾಗ ಕೂಡಿಕೊಂಡು ಕೆಲಸ ಮಾಡುವುದೂ ಉಂಟು. ಯಾವುದು ಯಾವುದರ ಜೊತೆ ಸೇರಿಕೊಳ್ಳುತ್ತದೆ, ಸೇರ್ಪಡೆ ಎಷ್ಟು ಸಾರ್ಥಕವಾಗುತ್ತದೆ ಎಂದು ನಿರ್ಧರಿಸಲಾಗುವುದು.

ಆದರೆ ಒಂದು ವಿವರ ಮಾತ್ರ ಎಲ್ಲರಿಗೂ ಎಲ್ಲ ಕಾಲಕ್ಕೂ, ಯಾವುದೇ ಸಂದರ್ಭವಾಗಲಿ, ಬೇಕೇ ಬೇಕು; ಅದಕ್ಕಂತೂ ಎಲ್ಲೆಡೆಯೂ ಸಮಾನಗುಣವೇ. ಅದು ಯಾವುದೆಂದರೆ ಹಣ. ರೂಪದಂತೆ, ವಿದ್ಯೆಯಂತೆ ಅದೇನು ಬೇರೆಬೇರೆಯಾಗಿ ತೋರಿಕೊಳ್ಳುವುದಿಲ್ಲ. ಉಳಿದ ವಿವರಗಳಂತೆ, ಇಲ್ಲಿ ಸಲ್ಲುತ್ತದೆ, ಅಲ್ಲಿ ಸಲ್ಲದು ಎನ್ನುವಂತಿಲ್ಲ.

ಓದುವ ಹುಡುಗನಿಗೂ ಬೇಕು, ಸಾಯುವ ಮುದುಕನಿಗೂ ಬೇಕು, ಆಳುವ ಅರಸನಿಗೂ ಬೇಕು, ಊಳಿಗ ಮಾಡುವವನಿಗೂ ಬೇಕು. ಮನೆವಾರ್ತೆಯಲ್ಲಿ ಮುಳುಗಿರುವ ಸಂಸಾರಿಗೂ ಬೇಕು, ಎಲ್ಲವನ್ನೂ ಬಿಟ್ಟೆನೆನ್ನುವ ಸನ್ಯಾಸಿಗೂ ಬೇಕು.

ಇತರ ವಿವರಗಳು ಇಲ್ಲದಿದ್ದರೂ, ಅವುಗಳಲ್ಲಿ ಕೊರತೆಯಾದರೂ ಹೇಗೋ ನಡೆಯುತ್ತದೆ. ರೂಪವಿಲ್ಲದವರಿಗೆ ಮದುವೆಯಾಗುವುದಿಲ್ಲವೆ? ವಿದ್ಯೆಯಿಲ್ಲದಿದ್ದವರಿಗೆ ಉದ್ಯೋಗ ದೊರೆಯುವುದಿಲ್ಲವೆ? ಗುಣವಿಲ್ಲದವರು ಆಡಳಿತ ನಡೆಸುವುದಿಲ್ಲವೆ? ಬರಿಯ ಮನೆತನವನ್ನೇ ಮೆಚ್ಚಿಕೊಳ್ಳುವವರು ಯಾರು? ಪಂಡಿತನ ಮಗ ಶುಂಠನೇ; ಯೋಗ್ಯನ ಮಗ ಅಯೋಗ್ಯನಾಗಲಾರನೆ? ಅಯೋಗ್ಯರ ಮಕ್ಕಳು ಯೋಗ್ಯರೂ ಆದಾರು. ಆದರೆ ಹಣವಿಲ್ಲದೆ ಯಾವುದೂ ನಡೆಯದು; ಅದರಲ್ಲಿ ಕೊರತೆಯಾದರೆ ಕಷ್ಟವೇ. ಅದನ್ನು ಪಡೆದುಕೊಳ್ಳಲು, ಇರುವ ಕೊರೆಯನ್ನು ಪೂರೈಸಿಕೊಳ್ಳಲು ಎಲ್ಲರೂ ಹೊರಡುವವರೇ. ರೂಪ, ಗುಣ ಮುಂತಾದವು ಇವೆ, ಹಣದ ಅಗತ್ಯವೇನು ಎಂದು ಯಾರು ತಾನೇ ಕೇಳಿಯಾರು?

ರೂಪ, ವಿದ್ಯೆ, ಉದ್ಯೋಗ, ಆಸಕ್ತಿ ಮೊದಲಾದ ವಿವರಗಳಲ್ಲಿ ಹೆಚ್ಚು ಕಡಮೆ ಇರುವುದುಂಟು. ಅವುಗಳಲ್ಲಿ ತಾರತಮ್ಯ ಸಹಜವಾದುದೇ. ಆದರೆ ಈ ತಾರತಮ್ಯ ಅಷ್ಟಾಗಿ ಎಣಿಕೆಗೆ ಬರುವುದಿಲ್ಲ. ಆದರೆ ಹಣದಲ್ಲಿರುವ ತಾರತಮ್ಯ ತಟ್ಟನೆ

ತಿಳಿದುಬಿಡುತ್ತದೆ. ಆದ್ದರಿಂದ ಹೆಮ್ಮೆಯೋ, ದುಗುಡವೋ, ಮತ್ಸರವೋ ಕಟ್ಟಿಟ್ಟದ್ದೇ! ಹೀಗೆ ಎಲ್ಲರಿಗೂ ಅಗತ್ಯವಾಗಿಯೇ ಒಲುಮೆಗೆ ವಸ್ತುವಾಗುವ ವಿವರವೆಂದರೆ ಹಣವೇ. ಕವಿಯೊಬ್ಬ ಸಾವನ್ನು ಸರ್ವಸಮಾನವೆಂದು ಕರೆದಿದ್ದಾನೆ. ಸಾವು ಯಾರಿಗೆ ಬಾರದೆ ಇರುತ್ತದೆ? ಸಾಯುವಾಗ ಎಲ್ಲರೂ ಒಂದೇ ರೂಪ, ಗುಣ, ವಿದ್ಯೆ, ಅಧಿಕಾರ ಯಾವುದನ್ನೂ ಅದು ಲೆಕ್ಕಿಸುವುದಿಲ್ಲ. ಅದು ಸರ್ವಸಮಾನವೆಂಬುದು 'ಲೆವಲರ್' ಎಂಬ ಕಾರಣದಿಂದ.

ಧನವೂ ಇನ್ನೊಂದು ರೀತಿಯಲ್ಲಿ 'ಲೆವಲರ್'. ವಿದ್ಯೆ, ಗುಣ, ರೂಪ, ಮೊದಲಾದ ಯಾವ ವಿವರವೂ ಧನವಿದ್ದಲ್ಲಿ ಮುಖ್ಯವಾಗುವುದಿಲ್ಲ. ಅವೆಲ್ಲವನ್ನೂ ಮಟ್ಟ ಮಾಡುವ ಗುಣ ಅದಕ್ಕಿದೆ.

167. ಹಣದ ಹಣೆಯಬರಹ

ಹಣವೆಂಬುದೇನೋ ಜಡ ಪದಾರ್ಥ. ಅದಕ್ಕೆ ತನ್ನದೇ ಆದ ಬೆಲೆಯಿಲ್ಲ. ನಾವು ಕೊಟ್ಟರೇ ಅದಕ್ಕೆ ಬೆಲೆ. ನಾವು ಕೊಟ್ಟದ್ದೇ ಬೆಲೆ, ಕೊಟ್ಟಷ್ಟೇ ಬೆಲೆ.

ಆದರೆ ಹಣ ಒದಗಿ ಬಂದರೆ ಆ ಮನುಷ್ಯನನ್ನು ನೋಡಿ. ಅವನಲ್ಲಾಗುವ ಮಾರ್ಪಾಟನ್ನು ನೋಡಿ. ಮೊದಲಿನಂತಿರುವುದಿಲ್ಲ ಅವನು. ನಡೆಯುವುದೂ ಬದಲಾಗುತ್ತದೆ. ನುಡಿಯೂ ಬೇರೆಯಾಗುತ್ತದೆ. ನೀತಿಯನ್ನು ಕೇಳಲೇ ಬೇಡಿ.

ಕವಿಯೊಬ್ಬ ಹೇಳುವುದು ಇದನ್ನೇ. ಸಿರಿಯನ್ನು ಗರವೆಂದು ಕರೆದಿದ್ದಾನೆ. ಸಿಡಿಲು ಬಡಿದರೆ ಮರ ಬಗ್ಗುವಂತೆ, ಸಿರಿವಂತನಾದರೆ ತ್ರಿಭಂಗಿಯ ವಯ್ಯಾರ ಒದಗುತ್ತದೆ. ಬಡವರ ಕೂಗು ಅವರಿಗೆ ಕೇಳಿಸುವುದಿಲ್ಲ ; ಹಿತವರು ಕಣ್ಣಿಗೆ ಬೀಳುವುದಿಲ್ಲ. ಅದೇ ಬಂದ ಸಿರಿಯು ಬಂದಂತೆ ಮರೆಯಾದರೆ ಮೊದಲಿನ ನೆಲೆಯೇ ಮರಳುತ್ತದೆ.

ಹಣವಂತರ ಹಮ್ಮು, ಬಿಮ್ಮು, ಬಿಂಕ, ಬಡಿವಾರಗಳು ಎಲ್ಲರಿಗೂ ಪರಿಚಿತವಾದುವೇ. ತಮ್ಮಲ್ಲಿ ಹಣವಿದೆಯೆಂದು ಎಲ್ಲರಿಗೂ ತಿಳಿಯಬೇಕು, ಹಣದಿಂದ ತಾವು ದೊಡ್ಡ ಕುಳವಾಗಿರುವ ಅರಿವು ಎಲ್ಲೆಡೆ ಮೂಡಬೇಕು, ಹಾಗಾಗದಿದ್ದರೆ ಹಣವಿದ್ದುದಕ್ಕೆ ಬೆಲೆ ಬಂದಂತಾಯಿತೆ?

ಹಣವು ಅಚೇತನವಾದರೂ ಚೇತನವುಳ್ಳ ಜನರನ್ನು ಮಾರ್ಪಡಿಸುತ್ತದೆ. ಹಣವಿದೆಯೆಂದರೆ ಯಾವುದೋ ಅಸಾಧಾರಣ ಸಾಮರ್ಥ್ಯ, ಹಿರಿಮೆ ತನ್ನಲ್ಲಿದೆಯೆಂಬ ಭಾವನೆಯು ಸಹಜವಾಗಿಯೇ ಮೂಡಿ ಬರುತ್ತದೆ. ಹಣ ಹೋದರೆ ಕೈ ಮುರಿದಂತೆ, ಕಾಲು ಕಟ್ಟಿದಂತೆ, ಉಸಿರು ನಿಂತಂತೆ.

ಹಣವೆನ್ನುವುದು ನಡೆಯುವ ಮಷ್ಯನಿಗೆ ಹಾರುವ ರೆಕ್ಕೆಗಳನ್ನು ಕಟ್ಟಿದಂತೆ. ಹಣವಿದ್ದಾಗ ನಡೆಯುವುದೋ? ಹಾರಬೇಕು! ಬದುಕಿಗೊಂದು ವೇಗ ಬರುತ್ತದೆ; ಮನಸ್ಸಿಗೊಂದು ಹುಮ್ಮಸ್ಸೊದಗುತ್ತದೆ.

ಇದರಿಂದ ಶ್ರಮವೂ ಹೆಚ್ಚು, ಆಯುಸ್ಸೂ ಕಡಮೆ. ನಡೆಯುವಾಗ ಇರುವ ಹಿತ ಓಡುವಾಗ ಆಯಾಸವಾಗಿ ಮಾರ್ಪಡುತ್ತದಲ್ಲವೇ?

ಹಣದ ಹಣೆಯ ಬರಹ ಇದು. ಅದನ್ನು ಬಯಸಿ ಬವಣೆ ಪಡುವುದು, ಬಂದಾಗ ಉಳಿಸಿಕೊಳ್ಳಲು ಹೆಣಗಾಡುವುದು, ಹೋಗುವಾಗ ದುಗುಡ, ಹೋದಮೇಲೆ ಮತ್ತೆ ಬವಣೆಯೇ. ಇದ್ದಾಗ ಸುಖವೇ ಎಂದರೆ ಅದೂ ಇಲ್ಲ. ಕವಿಯು ಹೇಳಿರುವುದೂ ಇದನ್ನೆ. ಅದು ಒದಗಿಸುವ ಮಾರ್ಪಾಟು ಯಾರಿಗೂ ಹಿತವಲ್ಲ.

ಹಣವಿದ್ದವರಿಗೆ ಹೆಮ್ಮೆ, ಹಣವಿಲ್ಲದವರಿಗೆ ಅಸೂಯೆ; ಹಣವು ಬೇಕೆಂಬಾಸೆ; ಹಣವು ಬಾರದಿದ್ದರೆ ಮುನಿಸು, ಬಂದರೆ ತಲೆಯೇ ತಿರುಗುತ್ತದೆ. ಹಣಕ್ಕಿರುವ ಬೆಲೆ ಹಣವಂತನಿಗಿರದು. ಇದೊಂದು ಸೋಜಿಗ. ಅವನಿಗಿರಬಹುದಾದ ಬೆಲೆ ಅವನಲ್ಲಿರುವ ಹಣದಿಂದಲೇ. ಹಣದಿಂದ ಅವನು ಬೇರ್ಪಟ್ಟರೆ ಹೆಣವೇ! ಹಣವೇನೂ ಜಡವಾಗುವುದಿಲ್ಲ. ಮತ್ತೊಬ್ಬನ ಬಳಿ ಹೋಗುತ್ತದೆ. ಅವನನ್ನೂ ಕಾಡುತ್ತದೆ.

ಹಣವಿದ್ದು ಅದು ಹೋದಮೇಲೆ ಮನುಷ್ಯ ಮೊದಲಿನಂತೆಯೇ ಆಗುತ್ತಾನೆಂದು ಕವಿಯ ಊಹೆ. ಕೆಲವೊಮ್ಮೆ ಹಣ ಹೋಯಿತೆಂಬ ಬೇನೆ ಅವನನ್ನು ಕಾಡತೊಡಗಿ ಮೊದಲಿಗಿಂತ ಹಾಳಾಗಿ ಹೋಗುವುದೂ ಉಂಟು. ಬಂದು ಹೋಗುವುದಕ್ಕಿಂತ ಅದು ಬಾರದೆ ಇರುವುದೇ ಮೇಲು ಎನಿಸುತ್ತದೆ.

168. ಧನಸಂಹಿತೆ

ಯಾಜ್ಞವಲ್ಕ್ಯ ಸಂಹಿತೆಯಲ್ಲೊಂದು ಕಿವಿಮಾತು ಬರುತ್ತದೆ. ಅದು ಹಣವನ್ನು ಸಂಪಾದಿಸುವ ವಿವರವನ್ನು ಕುರಿತಂತೆ.

ಇಲ್ಲದಿರುವ ಹಣವನ್ನು ನೇರವಾದ, ನೀತಿಯುಕ್ತವಾದ ದಾರಿಯಿಂದಲೇ ಪಡೆದುಕೊಳ್ಳಬೇಕು. ಅಧರ್ಮದಿಂದ ಬಂದ ಧನ ಬಹುಕಾಲ ಉಳಿಯದು; ಒಳಿತೂ ಆಗದು.

ಹಾಗೆ ಸಂಪಾದಿಸಿದ್ದನ್ನು, ವಿವೇಕದಿಂದ ಉಳಿಸಿಕೊಳ್ಳಬೇಕು. ದಡ್ಡತನದಿಂದ ವೆಚ್ಚ ಮಾಡಿದರೆ, ಇತಿಮಿತಿ ಅರಿಯದಿದ್ದರೆ, ಆಲಸಿಗನಾಗಿ ಇದ್ದುದನ್ನೆಲ್ಲ ಉಂಡರೆ ಎಷ್ಟು ಹಣವಾದರೂ ತೀರಿಕೊಳ್ಳುತ್ತದೆ; ಎಂಥ ಸಿರಿವಂತನೂ ಬಡವನಾಗುತ್ತಾನೆ.

ಉಳಿಸಿಕೊಳ್ಳುವುದಕ್ಕೂ ಪ್ರಯತ್ನವಿರಬೇಕಂತೆ (ಯತ್ನೇನ ಪಾಲಯೇತ್). ಹಣವನ್ನು ಗಳಿಸಲು ಶ್ರಮದ ಅಗತ್ಯವಿರುವುದು ಎಲ್ಲರಿಗೂ ತಿಳಿದಿದೆ. ಉಳಿಸಿಕೊಳ್ಳಲೂ ಶ್ರಮ ಬೇಕೆಂಬುದನ್ನು ಬಹುಮಂದಿ ಅರಿಯರು.

ಉಳಿಸಿಕೊಂಡ ಹಣವನ್ನು ಗಡಿಗೆಯಲ್ಲಿ ಕೂಡಿಡುವುದು ಹೆಡ್ಡತನವಲ್ಲವೆ? ಉಳಿಸಿಕೊಂಡದ್ದು ಬೆಳೆಯಬೇಕು (ಪಾಲಿತಂ ವರ್ಧಯೇನ್ನಿತ್ಯಂ), ಬೆಳೆಯುತ್ತಲೆ ಇರಬೇಕು. ಇದಕ್ಕೆ ಪ್ರಯತ್ನವೂ ಬೇಕು, ವಿವೇಕವೂ ಬೇಕು. ಮತ್ತೆ ಇಲ್ಲಿಯೂ ನ್ಯಾಯದ ದಾರಿಯನ್ನೇ ಹಿಡಿಯಬೇಕೆಂಬುದು ಧ್ವನಿ.

ಹಾಗೆ ಹೆಚ್ಚಿಸಿಕೊಂಡ ಹಣವನ್ನು ಮಾಡುವುದಾದರೂ ಏನು? ಮತ್ತೆ ಹೆಚ್ಚಿಸಿಕೊಳ್ಳುವುದೆ? ಎಷ್ಟು ಹೆಚ್ಚಬೇಕೆಂಬುದಕ್ಕೊಂದು ಮಿತಿಯಿಲ್ಲವೆ? ಹೆಚ್ಚಿಸುತ್ತಲೇ ಹೋದರೆ ಶ್ರಮವೂ ಹೆಚ್ಚು; ತೊದರೆಯೂ ತಪ್ಪಿದ್ದಲ್ಲ.

ಅದಕ್ಕಾಗಿ ಸಂಹಿತೆಯು ನೀಡುವ ಸಲಹೆ–ನ್ಯಾಯದಿಂದ ಪಡೆದುಕೊಂಡ ಹಣವನ್ನು ವಿವೇಕದಿಂದ ಹೆಚ್ಚಿಸಿಕೊಂಡಾಗ, ಹೆಚ್ಚೆನ್ನುವ ಹಣವನ್ನು ಯೋಗ್ಯವಾದ ರೀತಿಯಲ್ಲಿ, ಹಣದ ಅಗತ್ಯವಿರುವವರಲ್ಲಿ ಅದನ್ನು ವೆಚ್ಚ ಮಾಡಬೇಕಂತೆ. ಹಾಗೆ ವೆಚ್ಚ ಮಾಡಿದಾಗ ಅದೂ ಉಳಿತಾಯವೇ ಎಂದುಕೊಳ್ಳಬೇಕು (ವೃದ್ಧಂ ಪಾತ್ರೇಷು ನಿಕ್ಷಿಪೇತ್).

ಸಂಸ್ಕೃತದಲ್ಲಿ ನಿಕ್ಷೇಪವೆಂದರೆ ಇಂಗ್ಲಿಷಿನ ಡಿಪಾಸಿಟ್. ನಮ್ಮ ಹಣವನ್ನು ಸುರಕ್ಷಿತವಾಗಿ ಕಾಪಾಡಬಲ್ಲವರ ಕೈಯಲ್ಲಿ ಇರಿಸುವುದು. ಅದನ್ನು ಕಾಪಾಡುವ ಕಷ್ಟ ನಮಗಿರದು, ನಾವು ನಿರಾಳವಾಗಿರಬಹುದು.

ಹಾಗೆಯೇ, ಯೋಗ್ಯರಾದವರ ಅನುಕೂಲಕ್ಕೆಂದು ನಾವು ನಮಗೆ ಹೆಚ್ಚಿನದಾದ ಹಣವನ್ನು ವಿನಿಯೋಗ ಮಾಡಿದಾಗ, ಅದು ತಾನು ಉಳಿಯುವುದಲ್ಲದೆ ನಮ್ಮನ್ನೂ ಕಾಯುತ್ತದೆ. ನಮಗೆ ಅದರ ನೇರವಾದ ಅಗತ್ಯವಿಲ್ಲ; ಹಾಗೆಂದು ಬಿಸಾಡುವ ಮನಸ್ಸೂ ಬರುವುದಿಲ್ಲ. ಆದರೆ ಅದನ್ನು ಬೇರೆಯವರಿಗೆಂದು ಕೊಡುವಾಗ ಪಾತ್ರಾಪಾತ್ರವಿವೇಕ ಹಲವರಿಗಿರುವುದಿಲ್ಲ.

ದಾನವೆಂದರೆ ನಮಗೆ ಬೇಕಾದವರಿಗೆ, ಉಳ್ಳವರಿಗೆ, ಅದು ಬೇಡದವರಿಗೆ, ಅದನ್ನು ಹಾಳು ಮಾಡುವವರಿಗೆ ಕೊಡುವುದಲ್ಲ. ಸತ್ಪಾತ್ರದಾನವೆಂದರೆ ನಮ್ಮ ಕೊಡುಗೆಯನ್ನು ಮೆಚ್ಚಿಕೊಂಡು ಅದರ ಸದ್ವಿನಿಯೋಗ ಮಾಡುವವರಿಗೆ ನೀಡುವುದು; ಅದರ ಅಗತ್ಯವೂ ಅವರಿಗಿರಬೇಕು. ನೀರಿರುವ ಹೊಂಡಕ್ಕೇ ನೀರು ಹೊಯ್ದರೆ ಏನಾದಹಾಗಾಯಿತು?

ನಾವು ಮಾಡುವ ದಾನ ಬಹುಮಟ್ಟಿಗೆ ಊರ್ಜಿತವಾಗದಿರುವುದು ಈ ಕಾರಣದಿಂದಲೇ. ವಿವೇಕವಿಲ್ಲದೆ, ವಿವೇಚನೆಯಿಲ್ಲದೆ ನೀಡುವುದರಿಂದ.

ಇತರರಿಗೆ ದಾನ ನೀಡದೆ ಇದ್ದುದನ್ನೆಲ್ಲ, ಹೆಚ್ಚಾದುದನ್ನೆಲ್ಲ ನಮ್ಮಲ್ಲೇ ಇರಿಸಿಕೊಂಡಿದ್ದರೆ ಅದರಿಂದ ನಮಗೂ ಪ್ರಯೋಜನವಿಲ್ಲ. ಇತರರಿಗೂ ಇರದು. ಅದು ನ್ಯಾಯವೂ ಅಲ್ಲ. ಅದರಲ್ಲಿ ವಿವೇಕವೂ ಇರದು.

169. ಹಣದಾಸೆಯ ನಾಯಕರು

ದೇಶದಲ್ಲಿ ನಾಯಕರಿರುತ್ತಾರೆ. ಅನುಯಾಯಿಗಳಿರುತ್ತಾರೆ. ಸಾಮಾನ್ಯ ಜನರಂತೂ ಸರಿಯೇ ಸರಿ.

ನಾಯಕರ ಕೆಲಸ ಸಾಮಾನ್ಯ ಜನರಿಗೆ ಸರಿಯಾದ ದಾರಿ ತೋರುವುದು, ಅವರನ್ನು ನಡೆಸುವುದು, ಅವರ ಹಿತವನ್ನು ಸಾಧಿಸುವುದು. ಅವರು ಎಂದೂ ಅಗ್ರಗಾಮಿಗಳೇ ತಾನೆ?

ಇನ್ನು ಅನುಯಾಯಿಗಳ ಕೆಲಸವೇನು? ಸಾಮಾನ್ಯ ಜನರಿಗೂ ನಾಯಕರಿಗೂ ನಡುವೆ ಇದ್ದುಕೊಂಡು ನಾಯಕರ ರೀತಿ ನೀತಿಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದು.

ಇದು ಪ್ರಜಾಪ್ರಭುತ್ವದಲ್ಲಿ ಸಹಜವಾಗಿ, ಅಗತ್ಯವಾಗಿ ನಡೆಯಬೇಕಾದುದು.

ಆದರೆ ಇದು ಆದರ್ಶ. ನಮ್ಮ ದೇಶದಲ್ಲಂತೂ ನಾಯಕರು ಹಣದಾಸೆಯಿಂದ ಮುಂದೆ ಬಂದವರೆಂಬುದು ಲೋಕಕ್ಕೆಲ್ಲ ಪ್ರಕಟವಾಗಿದೆ. ನಾಯಕರೆಂದರೆ ಹಣವನ್ನು ತಮ್ಮೆಡೆಗೆ ಬರಮಾಡಿಕೊಳ್ಳುವವರು ಎಂದು ಹೊಸ ಅರ್ಥ ಮಾಡಬೇಕಾಗಿದೆ. ನಾಯಕ ಎನ್ನುವ ಮಾತಿಗೆ ನೀಪ್ ಎಂಬ ಧಾತುವಿದ್ದು ನಡೆಸುವುದು, ಒಯ್ಯುವುದು ಎಂದರ್ಥ; ಜನರನ್ನು ನಡೆಸುವವನು, ಹಿತದ ಕಡೆ ಒಯ್ಯುವವನು ಎಂಬುದು ಮೂಲಾರ್ಥ.

ಈಗಲಾದರೋ ನಾಯಕನ ಪುರುಷಾರ್ಥ ಆರ್ಥಿಕವಾದುದೇ. ಜನರ ಹಿತಕ್ಕೆ ಇವನೇನೂ ಹೊಣೆಯಲ್ಲ. ತನ್ನ ಕಿಸೆಯನ್ನು ತುಂಬಿಸಿಕೊಳ್ಳುವುದರಲ್ಲಿ ಅವನ ಉತ್ಸಾಹ. ಅಪವಾದಗಳು ಬಂದಾಗ ನೋಡಿಕೊಂಡರಾಯಿತು.

ಇನ್ನು ಅನುಯಾಯಿಗಳು ಅವನಿಗೆ ನೆರವಾಗುವವರು, ನೆರವಾಗುವಾಗ ತಮ್ಮ ಕಿಸೆಯೂ ಒಂದಿಷ್ಟು ತುಂಬಿದರೆ ತಪ್ಪೇನು? ನಾಯಕನಿಗೇ ಜನರ ಒಳಿತಿನ ಬಗ್ಗೆ ಗೀಳು ಇರದಿರುವಾಗ ಅನುಯಾಯಿಗೇಕೆ ಅದರ ಚಿಂತೆ?

ಅಲ್ಲಮ ಪ್ರಭುಗಳು ಹಿಂದೆಯೇ ಹೇಳಲಿಲ್ಲವೆ–

'ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನು'

ನಾಯಕನೇ ಅನಾಚಾರಿಯಾದರೆ ಅವನ ಅನುಯಾಯಿ ಇನ್ನಷ್ಟು ಅನಾಚಾರಿಯಾದರಾಯಿತು. ಮುಂದೆ ಈ ಅನುಯಾಯಿಯೇ ನಾಯಕನಾಗುವನಲ್ಲವೆ? ಅದಕ್ಕೆ ಪೂರ್ವಭಾವಿ ಸಿದ್ಧತೆಯಿರಬೇಡವೆ? ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

ನಮ್ಮ ದೇಶದ ಆರ್ಥಿಕ ಸ್ಥಿತಿ ಇಂಥ ನಾಯಕ– ಅನುಯಾಯಿಗಳ ವಶದಲ್ಲಿ. ರಾಜಕಾರಣದಲ್ಲಿ ಮಾತ್ರವಲ್ಲ. ಉದ್ಯೋಗ ಕ್ಷೇತ್ರದಲ್ಲಿ, ಉದ್ಯಮಗಳಲ್ಲಿ, ಉತ್ಪಾದನೆಯ ರಂಗಗಳಲ್ಲಿ, ವಿತರಣೆಯ ಹರವಿನಲ್ಲಿ ಮುಂಚೂಣಿಯಲ್ಲಿರುವವರು ಇಂಥ ನಾಯಕರೇ; ಅವರ ಸುತ್ತ ನೆರೆದಿರುವವರು ಅವರಿಗೆ ಅನುರೂಪರೇ.

ಆಧ್ಯಾತ್ಮ ಪ್ರಪಂಚದಲ್ಲೂ ಇದಕ್ಕೇನೂ ಕೊರತೆಯಿರದು. ಆಧ್ಯಾತ್ಮವೆಂಬ ಸೋಗನ್ನು ಮೇಲೆ ಹಾಕಿಕೊಂಡರೆ ಎಲ್ಲೆಲ್ಲೂ ನಾಯಕತ್ವ ವಹಿಸಬಹುದು. ನಾಯಕನಿಗೆ ನಾಯಕರಾಗಬಹುದು. ಇಲ್ಲಿನ ಅನುಯಾಯಿಗಳೇ ಉಳಿದೆಡೆ ನಾಯಕರು!

ಅಮಾಯಕರಾದ ಜನರು ಇಂಥ ನಾಯಕರನ್ನು ನಂಬುತ್ತಾರೆ. ಇಂಥ ಅನುಯಾಯಿಗಳನ್ನೇ ಆಶ್ರಯಿಸುತ್ತಾರೆ. ನಯಸೇನ ಹೇಳಿದಂತೆ 'ಬಡಿದು, ಕೊಲಂಗೆ ಸಾಲಗೊಟ್ಟರ್'. ಸಾಲವೆಂದು ಕೊಡದಿದ್ದರೆ ಕಸಿದುಕೊಂಡು ಹೋಗುವರಲ್ಲ?

ನಾಯಕ ಅನುಯಾಯಿಗಳ ಸಂತೆಯಲ್ಲಿ ಉಂಡವನೆ ಜಾಣ ಎಂಬ ನಂಬಿಕೆಯ ಮೇಲೆ ಸಾಮಾನ್ಯ ಜನರೂ ಅನುಕೂಲವನ್ನು ಅರಸುವುದು ಅಲ್ಲಿಯೇ.

170. ಹಣದ ಸ್ವಭಾವ

ಹಣವನ್ನು ಕೂಡಿಡುವ ಗೀಳು ಮನುಷ್ಯನಿಗೆ, ಹಾಳಾಗುವ ಗೀಳು ಹಣಕ್ಕೆ. ಇವೆರಡರ ಸೆಣಸಾಟದಲ್ಲಿ, ಹಣ ತಾನು ಹಾಳಾಗುವುದಲ್ಲದೆ ಮನುಷ್ಯನನ್ನೂ ಹಾಳು ಮಾಡಿ ಹೋಗುತ್ತದೆ. ಇದು ಅದರ ವಿಶೇಷ ಗುಣ.

ನಾಣ್ಯಕ್ಕೆ ನಾಣ್ಯವನ್ನು ಕೂಡಿಸಿಟ್ಟರೆ ನಾಣ್ಯಗಳೇನು ಬೆರೆತುಕೊಳ್ಳುವುದಿಲ್ಲ, ಉಬ್ಬುವುದಿಲ್ಲ, ಸೊಕ್ಕುವುದಿಲ್ಲ. ಒಂದರ ಸಂಪರ್ಕದಿಂದ ಇನ್ನೊಂದು ಹಿಗ್ಗುವುದೂ ಇಲ್ಲ, ಕುಗ್ಗುವುದೂ ಇಲ್ಲ.

ಆದರೆ ಅವುಗಳನ್ನು ಪಡೆದುಕೊಳ್ಳುವ ಮನುಷ್ಯ ಹಿಗ್ಗುತ್ತಾನೆ. ನಾಣ್ಯಗಳ ಸಂಪರ್ಕ ಅವನಿಗೆ ಅನುಕೂಲವಾಗುತ್ತದೆ, ಹಿತವೆನಿಸುತ್ತದೆ. ಅದಕ್ಕಾಗಿಯೇ ಇನ್ನಷ್ಟು ಮತ್ತಷ್ಟು ಎಂದು ಹಾತೊರೆಯುತ್ತಾನೆ, ಕೂಡಿಟ್ಟುಕೊಳ್ಳಲು ಹಂಬಲಿಸುತ್ತಾನೆ.

ಹಣ ಬರುವುದೇ ಮುಖ್ಯವೆನಿಸಿದಾಗ, ಅದು ಹೇಗೆ ಬಂದೀತೆಂಬುದರ ಬಗ್ಗೆ ಅವನ ಗಮನ ಹರಿಯುವುದಿಲ್ಲ. ಕದ್ದದ್ದೂ ಹಣವೇ, ದೋಚಿಕೊಂಡದ್ದೂ

ಹಣ, ಒಳ್ಳೆಯವನ ಹಣ, ಉದಾರಿಯ ಹಣ, ದರೋಡೆಕಾರನ ಹಣ ಎಲ್ಲವೂ ಒಂದೇ ತಾನೆ? ಹಣದಲ್ಲೇನಾದರೂ ಅಂತರವಿದ್ದೀತೋ?

ಹಣ ಹೇಗೂ ಜಡಪದಾರ್ಥ, ಅದಕ್ಕೆ ಚೇತನವೆಂಬುದಿಲ್ಲ. ಅದಕ್ಕಿರುವ ಗುಣ ನಾವು ಕೊಟ್ಟದ್ದೇ, ಕೊಟ್ಟಷ್ಟೇ, ಅದರ ಬೆಲೆ ನಾವು ಕಟ್ಟಿದ್ದೇ. ನಾವು ಒಳ್ಳೆಯ ರೀತಿಯಿಂದ ಪಡೆದುಕೊಂಡರೆ ಒಳ್ಳೆಯ ಹಣ, ಕೆಟ್ಟದಾರಿಯನ್ನು ಹಿಡಿದು ಹೆಕ್ಕಿಕೊಂಡರೆ ಕೆಟ್ಟದ್ದು.

ಎಂಥ ಹಣ ಎಂಬುದು ಮುಖ್ಯವಲ್ಲ, ಹೇಗೆ ಬಂದ ಹಣ ಎಂಬುದು ಮುಖ್ಯವಾಗುತ್ತದೆ. ನಾವು ತಿಳಿದಿರುವಷ್ಟು ಜಡಪದಾರ್ಥ ಅಲ್ಲ ಅದು, ಅದಕ್ಕೆ ಅವ್ಯಕ್ತವಾದ ಒಂದು ಪ್ರವೃತ್ತಿಯಿರುತ್ತದೆ. ಪೆಟ್ಟಿಗೆಗೆ ಸೇರಿದ ಮೇಲೆ ಎಲ್ಲರ ಹಣವೂ ಒಂದೇ ಎನ್ನುವಂತಿಲ್ಲ. ಹೂವು ಕಟ್ಟಿದ ನಾರಿಗೆ ಒಂದು ಕಂಪಿರುವುದಿಲ್ಲವೆ? ನಾರಿಗೇನೋ ತನ್ನದೇ ಆದ ಕಂಪಿಲ್ಲ ನಿಜ. ಆದರೆ ಹೂವಿನ ಸಂಪರ್ಕ ಹೊಂದಿದ ಮೇಲೆ ಅದು ತೋರಿಕೊಳ್ಳುವುದು. ಹೂವಿನ ಕಂಪೇ ನಾರಿಗೆ ಬರುವುದು. ಹೂವು ಸುಗಂಧವಾದರೆ ನಾರೂ ಸುಗಂಧ, ಹೂವು ದುರ್ಗಂಧವಾದರೆ ನಾರೂ ದುರ್ಗಂಧ.

ಒಳ್ಳೆಯ ದಾರಿಯಿಂದ ಬಂದ ಹಣದ ಸ್ವಭಾವವೇ ಬೇರೆ, ಕೆಟ್ಟದಾರಿಯಿಂದ ಬಂದದ್ದರ ಸ್ವಭಾವವೇ ಬೇರೆ. ಮನುಷ್ಯರಿಗೆ ಅದು ತಿಳಿಯದಿದ್ದರೂ ಹಣಕ್ಕೆ ತಿಳಿಯುತ್ತದೆ! ತನ್ನ ಮುಂದಿನ ದಾರಿ ಏನೆಂಬುದನ್ನು ಅದು ಬೇಗ ಕಂಡುಕೊಳ್ಳುತ್ತದೆ. ಅದು ಆ ದಾರಿಯಲ್ಲಿ ನುಗ್ಗತೊಡಗಿದರೆ ಮನುಷ್ಯ ಅದನ್ನು ತಡೆಹಿಡಿಯಲಾರ. ಅವನನ್ನೂ ತಳ್ಳಿಕೊಂಡು ಆ ದಾರಿಯಲ್ಲಿ ಸಾಗುತ್ತದೆ.

ಹಣಕ್ಕೆ ಗಾಳಿ–ಬೆಳಕು ಬೇಕು, ಓಡಿಯಾಟ ಬೇಕು. ಬಚ್ಚಿಟ್ಟರೆ ಅದು ಹೇಗೋ ಹೊರಗೆ ಬರುತ್ತದೆ, ಕೂಡಿಟ್ಟರೆ ಹೇಗೋ ಹರಿದು ಹೋಗುತ್ತದೆ. ಒಂದೆಡೆ ಬಹುಕಾಲ ನಿಲ್ಲಲಾರದು ಅದು. ಒಬ್ಬನೇ ಒಡೆಯನನ್ನೂ ಬಹುಕಾಲ ಸಹಿಸುವುದಿಲ್ಲವೆನ್ನಿ. ಕೈಯಿಂದ ಕೈಗೆ, ಕಿಸೆಯಿಂದ ಕಿಸೆಗೆ, ಬೊಕ್ಕಸದಿಂದ ಬೊಕ್ಕಸಕ್ಕೆ ಹೋಗುತ್ತಲೇ ಇರಬೇಕು.

ಕೂಡಿಕೊಳ್ಳುವುದು ಅದರ ಗುಣವಲ್ಲ, ಹಂಚಿಕೊಂಡು ಚೆಲ್ಲಾಡುವುದು ತಾನೆ ಅದರ ಗುಣ? ಇದನ್ನು ಅರಿಯದ ಮಡೆಯರು ಹಣವನ್ನು ಕೂಡಿಸಿಕೊಳ್ಳಲು ಹೆಣಗಾಡುವರು, ಕಡೆಗೆ ಸೋತು ಕೈಯೆತ್ತುವರು. 'ಕೂಡಿಟ್ಟದ್ದು ಪರರಿಗೆ' ಎಂಬುದನ್ನು ತಡವಾಗಿ ಅರಿತುಕೊಳ್ಳುವರು. ಹಣ ಕೈಬಿಟ್ಟು ಹೋದಮೇಲೇ ಈ ಜ್ಞಾನೋದಯ!

171. ಚರ-ಸ್ಥಿರ

ತನ್ನ ಸ್ವಂತದ್ದು ಎಂದರೆ ಸ್ವತ್ತು.

ಅದರ ಮೇಲೆ ತನ್ನ ಒಡೆತನವಿದೆಯೆಂದರ್ಥ; ಸ್ವಾಮ್ಯವೆನ್ನುತ್ತಾರೆ. ಸ್ವತ್ತು ತನ್ನ ಸ್ವಾಧೀನವಾದುದು; ತನ್ನ ಅಧೀನದಲ್ಲಿರುವುದು.

ಭೂಮಿಕಾಣಿ, ಮನೆ, ತೋಟ, ಬಾವಿ, ಗದ್ದೆ ಇವೆಲ್ಲ ಸ್ವತ್ತುಗಳು; ಅವು ಜಡವೂ ಹೌದು, ಸ್ಥಿರವೂ ಹೌದು. ಬೇಕೆಂದಾಗ ಬೇಕೆಂದಲ್ಲಿಗೆ ಒಯ್ಯಲಾರದಂಥವು. ಅವುಗಳನ್ನು ಅಲ್ಲಿ ಅನುಭವಿಸುತ್ತಿರುವಾಗಲೇ ಸ್ವಾಮ್ಯ. ಇನ್ನು ಜಡವಾದರೂ ಚರವಾದ ಸ್ವತ್ತು ಇರುತ್ತದೆ; ನಾವು ಬಳಸುವ ಪರಿಕರಗಳು, ಸಲಕರಣೆಗಳು, ಸಾಮಗ್ರಿಗಳು ಮೊದಲಾದವು.

ಭೂಮಿ ಸ್ಥಾವರವಾದರೆ ಮಂಚ ಮುಂತಾದವು ಜಂಗಮ; ನಾವು ಹೋದೆಡೆಯಲ್ಲೆಲ್ಲ ಅವನ್ನು ಒಯ್ಯಬಹುದು; ಅವುಗಳ ಅನುಭವ ನಾವಿದ್ದ ಕಡೆಯೇ. ಹಣವೂ ಇದರಲ್ಲೇ ಸೇರುತ್ತದೆ. ನಮ್ಮೊಂದಿಗೆ ನಮ್ಮ ಬಟ್ಟೆಬರೆ, ಉಪಕರಣಗಳು ಮುಂತಾದವನ್ನು ಇರಿಸಿಕೊಳ್ಳುವಂತೆಯೇ ಹಣವನ್ನು ಇರಿಸಿಕೊಳ್ಳುತ್ತೇವೆ. ಅದು ಚರಸ್ವತ್ತು.

ಆದರೆ ಅದು ಸ್ಥಿರವೆಂಬಂತೆಯೇ ನಮ್ಮ ಎಣಿಕೆಯಿದ್ದರೆ ಮೋಸ ಹೋಗುತ್ತೇವೆ. 'ನಡೆದಷ್ಟು ಕಾಲ ನಾಣ್ಯ' ಎನ್ನುವಾಗ, ನಡೆಯುವುದೇ ಅದರ ಪ್ರಕೃತಿಯೆಂದಾಯಿತು. ನಡೆಯದೆ ನಿಂತರೆ ಅದು ನಾಣ್ಯವೇ ಅಲ್ಲವಾದೀತು. ಎಷ್ಟು ಹಣವಿದ್ದರೂ, ಎಷ್ಟು ಕಾಲ ಕೂಡಿಟ್ಟಿದ್ದರೂ ಅದು ಚರಸ್ವತ್ತೇ; ಯಾವ ಕಾರಣದಿಂದಲೂ ಸ್ಥಿರವಾಗಿ ಮಾರ್ಪಡುವುದಿಲ್ಲ.

ಮತ್ತೆ, ನಮ್ಮ ಅನುಭವದಲ್ಲಿಲ್ಲದಾಗ ಅದರ ಮೇಲಿನ ನಮ್ಮ ಸ್ವಾಮ್ಯವೂ ಸಂಕುಚಿತವಾದದ್ದೇ. ಎಲ್ಲಿಯೋ ಬ್ಯಾಂಕಿನಲ್ಲೋ ಮತ್ತೆಲ್ಲೋ ನಮ್ಮದೆಂಬ ಹಣವೇ ಇದೆಯೆನ್ನಿ. ನಾವು ಅದನ್ನು ಬೇಕೆಂದಾಗ ಪಡೆದುಕೊಳ್ಳಬಹುದು. ಆದರೆ ಯಾವಾಗೆಂದರೆ ಆಗ, ಹೇಗೆಂದರೆ ಹಾಗೆ, ಇದ್ದಕ್ಕಿದ್ದಂತೆ ಪಡೆದುಕೊಳ್ಳಬಹುದೆ? ಪಡೆದುಕೊಳ್ಳಲೂ ನಿರ್ಬಂಧವಿರುತ್ತದೆ. ಬ್ಯಾಂಕಿನವರಿಗಾಗಲಿ ನಮ್ಮ ಹಣದ ಮೇಲೆ ಸ್ವಾಮ್ಯವಿದೆಯೆಂದಲ್ಲ; ಅಲ್ಲಿ ಅದನ್ನು ನಾವಿಟ್ಟ ಮಾತ್ರಕ್ಕೆ ಅವರದ್ದಾಗುವುದಿಲ್ಲ.

ಮನೆಯಲ್ಲಿರಿಸಿಕೊಂಡಿದ್ದೇ ನೇರವಾಗಿ, ಸಂಪೂರ್ಣವಾಗಿ ನಮ್ಮ ಅಧೀನದಲ್ಲಿರುವುದು. ಅದನ್ನು ಕಳ್ಳ ಕದ್ದುಕೊಂಡು ಹೋದರೆ ನಮ್ಮ ಸ್ವತ್ತು ಹೋಯಿತು; ತಮ್ಮದನ್ನು ನಮಗೆ ಹಿಂದಿರುಗಿಸಿರೆಂದು ಯಾರನ್ನಾದರೂ ನಿರ್ಬಂಧಮಾಡಲಾಗುವುದೆ? ಬ್ಯಾಂಕಿನಿಂದ ಕಳುವಾದರೆ ನಮಗೆ ನಮ್ಮ ಹಣವನ್ನು

ಹಿಂದಕ್ಕೆ ಪಡೆಯುವ ಹಕ್ಕಿದೆ; ಬ್ಯಾಂಕಿನವರು ಜವಾಬುದಾರರು—ಸ್ವಾಮ್ಯದಲ್ಲಿರುವ ಈ ಅಂತರವನ್ನು ಗಮನಿಸಬೇಕು.

ಹೀಗೆಂದ ಮಾತ್ರಕ್ಕೆ ಬ್ಯಾಂಕಿನಲ್ಲಿಟ್ಟಿದ್ದು ಸ್ಥಿರ, ಮನೆಯಲ್ಲಿದ್ದದ್ದು ಚರ ಎನ್ನಲಾಗದು. ಬ್ಯಾಂಕಿನಲ್ಲಿರುವುದೂ ಚರವೇ; ನಮ್ಮ ಹಣವನ್ನು ಬೇರೆ ಎಲ್ಲಿಯೋ ಬಳಸುತ್ತಾರೆ. ಕಣಜದಲ್ಲಿ ಬತ್ತದ ಕಾಳನ್ನು ಕೂಡಿಸಿಡುವಂತೆ ಬ್ಯಾಂಕಿನ ಖಜಾನೆಯಲ್ಲಿ ನಾಣ್ಯಗಳನ್ನೆಲ್ಲ ತುಂಬಿಟ್ಟುಕೊಳ್ಳುವುದಿಲ್ಲ. ಹತ್ತೂ ಜನರ ಹಣವನ್ನು ಸಂಗ್ರಹಿಸಿದ ಮೇಲೆ ಮತ್ತೆ ಅದು ದುಡಿಯುವಂತೆ ವಿನಿಯೋಗಿಸುತ್ತಾರೆ. ಬ್ಯಾಂಕಿನ ಹಣವೂ ಚರವೇ. ಅವರವರ ಖಾತೆಯಲ್ಲಿರುವ ಅಂಕಿ-ಅಂಶಗಳು ಸ್ಥಿರ ಅಷ್ಟೆ. ನಮ್ಮ ಹಣ ಪುಸ್ತಕದಲ್ಲಿ ಸ್ಥಿರ; ವ್ಯವಹಾರದಲ್ಲಿ ಚರ.

ಇದನ್ನು ಕುರಿತು ಆಲೋಚನೆ ಮಾಡಿದಾಗ, ಹಣದ ಸಾರ್ಥಕ್ಯವೂ ಸ್ವಾರಸ್ಯವೂ ಮನದಟ್ಟಾಗುತ್ತದೆ. ಹಣ ಓಡಾಡುತ್ತಿರುವಾಗಲೇ ಅದರ ಬೆಲೆ. ಒಂದೆಡೆ ನಿಂತಿತೆಂದರೆ ಬೆಲೆಯನ್ನು ಕಳೆದುಕೊಳ್ಳುತ್ತದೆ. ಸರ್ವಜ್ಞ ಕವಿ ಹೇಳಿದ ಮಾತನ್ನು ನೆನಪಿಗೆ ತಂದುಕೊಳ್ಳಬೇಕು— 'ಕೊಟ್ಟದ್ದು ತನಗೆ, ಬೈತಿಟ್ಟದ್ದು ಪರರಿಗೆ'.

ನಮ್ಮ ಹಣವನ್ನು ಹಂಚಿಕೊಂಡಾಗ ಅದರ ಬೆಲೆ ಹೆಚ್ಚುತ್ತದೆಯೆಂದರ್ಥ; ದಾನವೆಂದರೆ ಸಂವಿಭಾಗವೆಂದೇ ತಾತ್ಪರ್ಯ. ಕೂಡಿಟ್ಟರೆ ಅದಕ್ಕೆ ಯಾವ ಬೆಲೆಯೂ ಇರದು.

172. ಸಂಪತ್ತು–ವಿಪತ್ತು

ಸಂಪತ್ತಿಗೂ ವಿಪತ್ತಿಗೂ ಅದೇನೋ ನಂಟು.

ಧನವಿದ್ದ ಕಡೆ ನೆಮ್ಮದಿಯಂತೂ ಇರುವುದು ಕಡಮೆಯೇ ಎನ್ನಿ. ಆದರೆ ಧನ ಹೆಚ್ಚಿದಂತೆ ಅದು ಸೋರಿಹೋಗುವ ದಾರಿಗಳೂ ಹೆಚ್ಚಾಗುತ್ತವೆ.

ಕೆಲವರು ಸಿರಿವಂತರು ತಮ್ಮ ದಡ್ಡತನದಿಂದಲೇ ಎಲ್ಲವನ್ನೂ ಕಳೆದುಕೊಂಡು ಕಂಗಾಲಾಗುತ್ತಾರೆ. ವಿವೇಕವಿರುವುದಿಲ್ಲ. ಯಾವುದಕ್ಕೆ ಎಷ್ಟು ವೆಚ್ಚ ಮಾಡಬೇಕೆಂಬ ವಿತರಣೆಯ ವಿವೇಕವಿರುವುದಿಲ್ಲ. ಆಡಂಬರವೆಂಬುದು ಧನವಿರುವುದಕ್ಕೆ ಶೋಭೆಯೆಂದು ಬಗೆದಿರುತ್ತಾರೆ.

ಕೈಸುಟ್ಟುಕೊಂಡ ಮೇಲೆ ಬುದ್ಧಿ ಬರುತ್ತದೆ. ಅಷ್ಟು ಹೊತ್ತಿಗಾಗಲೇ ಸಾಕಷ್ಟು ಗಾಸಿಯಾಗಿರುತ್ತದೆ. ಅಜ್ಞಾನದಿಂದ ಹಾಳಾಗುವವರು ಇವರು.

ಮತ್ತೆ ಕೆಲವರು ಬುದ್ಧಿವಂತರಾದರೂ ಹಾಳಾಗುತ್ತಾರೆ; ದುಡ್ಡಿದೆಯೆಂದು ಕೆಟ್ಟ ಚಾಳಿಗಳನ್ನು ಗಂಟು ಹಾಕಿಕೊಳ್ಳುತ್ತಾರೆ. ಅಲ್ಲಸಲ್ಲದ ವ್ಯವಹಾರಗಳಿಗೆ ಕೈಹಾಕುತ್ತಾರೆ;

ಇರುವ ದುಡ್ಡು ಇನ್ನೂ ಹೆಚ್ಚಲೆಂದೇ ಹವಣಿಕೆ ಬೇರೆ. ಆಯ ತಪ್ಪಿದರೆ ಕೆಳಗೆ ಬೀಳುತ್ತಾರೆ.

ಇವರೆಲ್ಲ ಎಚ್ಚರಿಕೆಯಿಲ್ಲದೆ ಇರುವ ಕಾರಣದಿಂದ ಹಾಳಾಗುವವರು. ಎಚ್ಚರಿಕೆಯಿಲ್ಲದಿರುವುದನ್ನು ಪ್ರಮಾದ ಎನ್ನುತ್ತಾರೆ. ಮುಂದೆ ಏನಾದೀತೆಂಬ ಆಲೋಚನೆಯಿಲ್ಲದೆ, ಈಗ ಮಾಡಬೇಕಾಗಿರುವ ಕೆಲಸದ ಕಡೆ ಅವಧಾನವಿಲ್ಲದೆ, ಯಾವುದೋ ಅನುಚಿತ ಉತ್ಸಾಹದಿಂದ ತಟ್ಟನೆ ಏನನ್ನಾದರೂ ಮಾಡಿಬಿಡುವುದು.

ಮುಂದೆ ಎಂದೋ ಪರಿತಾಪ ಉಂಟಾಗುತ್ತದೆ, ಹೀಗೆ ಮಾಡಬಾರದಾಗಿತ್ತು ಎಂದು ಕೈ ಕೈ ಹಿಸುಕಿಕೊಳ್ಳುತ್ತಾರೆ. ಆದರೆ ಹೋದದ್ದು ಮರಳುವುದಿಲ್ಲ.

ಇನ್ನೂ ಕೆಲವರು ಆಗಲೇ ಹಾಳಾದವರ ಜೊತೆ ಸೇರಿ ತಾವೂ ಹಾಳಾಗುತ್ತಾರೆ. ಹಣವಿದ್ದುದನ್ನೆಲ್ಲ ಕಳೆದುಕೊಂಡು ಬುದ್ಧಿಬಾರದಿದ್ದವರು, ಹಣವಿರುವವರ ಸ್ನೇಹ ಬಯಸಿ ಬರುತ್ತಾರೆ. ಸ್ನೇಹಕ್ಕೆ ಪ್ರೇರಣೆಯೇನು? ಹಣದ ಗಳಿಕೆಯೇ. ಸ್ನೇಹಿತರಾದ ಮೇಲೆ ವಿಶ್ವಾಸವಿರುತ್ತದೆಯಲ್ಲವೆ? ಹಣವಿದ್ದವರು ಇವರ ಮಾತನ್ನು ಕೇಳಿ, ಇವರ ಉಪದೇಶಕ್ಕೆ ಮಾರು ಹೋಗಿ, ಇವರು ಹೇಳಿದಂತೆ ಕುಣಿಯುತ್ತಾರೆ.

ತಮ್ಮ ಹಣವನ್ನೆಲ್ಲ ಕಳೆದುಕೊಂಡವರು ಸ್ನೇಹಿತರ ಹಣ ಉಳಿಯಬೇಕೆಂದು ತವಕಪಡುವುದುಂಟೆ? ಅವರನ್ನೂ ತಮ್ಮಂತೆಯೇ ಮಾಡುವ ಹುಮ್ಮಸವಿರುವುದು ಸಹಜ. ಇವರ ಜೊತೆ ಸೇರಿ ಅವರೂ ಹಾಳಾದರೆ ಅವರನ್ನು ಬಿಟ್ಟು ಬೇರೆ ಯಾರನ್ನಾದರೂ ಹುಡುಕುತ್ತಾರೆ.

ಹೀಗೆ ಸಂಪತ್ತಿನ ಕಡೆ ವಿಪತ್ತುಗಳು ಕಾದಿರುತ್ತವೆ.

ವಿಪತ್ತುಗಳು ಏರಿಬರುವ ವಾಹನಗಳಲ್ಲಿ ಮೇಲೆ ಹೇಳಿದ ಅಜ್ಞಾನ, ಪ್ರಮಾದ, ಅಯುಕ್ತ ವಿಶ್ವಾಸಗಳು ಮುಖ್ಯವಾದುವು. ಸಂಪತ್ತು ಕರಗಲು ಅಥವಾ ಮರೆಯಾಗಲು ಇಷ್ಟೇ ಕಾರಣ ಎನ್ನುವಂತಿಲ್ಲ. ಬೇರೆ ಬೇರೆ ರೀತಿಯಾಗಿ ಬರಬಹುದು. ಆಕಸ್ಮಿಕವೆಂಬಂತೆಯೂ ಇರಬಹುದು.

ಆದರೆ ಈ ಮೂರೂ ನಮ್ಮ ಕೈಯಲ್ಲಿವೆ. ಎಚ್ಚರವಹಿಸಿದರೆ ಇವನ್ನು ತಡೆಗಟ್ಟಬಹುದು. ತಿಳಿದವರ ಮಾತನ್ನು ಕೇಳಿಯೂ ಲಾಭ ಪಡೆದುಕೊಳ್ಳಬಹುದು. ಲೋಕಾನುಭವದಿಂದಲೂ ವಿವೇಕವನ್ನು ಪಡೆದುಕೊಳ್ಳಬಹುದು.

ಹಣವಿದ್ದವನಿಗೆ ಎಲ್ಲವೂ ತನಗೆ ತಿಳಿದಿದೆ ಎಂಬ ಠೇಂಕಾರ ಬಂದರೆ ಮಾತ್ರ ಅವನ ಕಾಲು ಜಾರಿದ ಮೇಲೇ ಎಚ್ಚರವಾಗುವುದು.

173. ಸ್ವಾರ್ಥಚಕ್ರ

ಉದ್ಯಮವೆಂದ ಮೇಲೆ ಬಂಡವಾಳ ಹೂಡುವ ಹಣವಂತರೂ ಇರಬೇಕು, ಉತ್ಪಾದನೆಗಾಗಿ ದುಡಿಯುವ ಕೆಲಸಗಾರರೂ ಇರಬೇಕು. ಇವರ ನಡುವೆ ಹೊಂದಾಣಿಕೆಯಿದ್ದರೆ ಉದ್ಯಮ ಯಶಸ್ವಿಯಾಗುತ್ತದೆ.

ಎಂದರೆ ಬಂಡವಾಳ ಹೂಡಿದ ಹಣವಂತನಿಗೆ ಲಾಭವಾಗುತ್ತದೆ. ಆಗ ಕೆಲಸಗಾರರಿಗೂ ಈ ಲಾಭದಲ್ಲೊಂದು ಪಾಲು ಬಂದರೆ, ಅವರಿಗೂ ಉದ್ಯಮದಲ್ಲಿ ಆಸಕ್ತಿ ಬೆಳೆಯುತ್ತದೆ. ಆಡಳಿತ ಮತ್ತು ಕಾರ್ಮಿಕರ ನಡುವಣ ನಂಟು ಸರಸವಾಗಿರುತ್ತದೆ.

ಎರಡೂ ವರ್ಗದ ಜನರಿಗೆ ಹಣದ ಮೇಲೆ ಕಣ್ಣು. ಹಣವಿದ್ದವರಿಗೆ ಇನ್ನೂ ಹೆಚ್ಚು ಹಣವನ್ನು ಗಳಿಸುವ ಆಸೆ. ಹಣಕ್ಕೆಂದೇ ಕೆಲಸಕ್ಕೆ ಸೇರಿದವರಿಗಂತೂ ಸರಿಯೇ ಸರಿ. ಅವರಿಗೆ ಹಣವಂತರಾಗುವ ಬಯಕೆ.

ಆದರೆ ವ್ಯವಹಾರದಲ್ಲಿ ತಾರತಮ್ಯವೇರ್ಪಡದೆ ಇರುವುದು ಸಾಧ್ಯವಿಲ್ಲ. ಆಡಳಿತದಲ್ಲಿಯೇ ಹಲವು ಹಂತಗಳು, ಕಾರ್ಮಿಕರಲ್ಲೂ ಹಂತಗಳು. ಹಂತಗಳಲ್ಲಿ ಅಧಿಕಾರದ, ಸ್ವಾತಂತ್ರ್ಯದ, ಕೌಶಲ್ಯದ, ಜವಾಬ್ದಾರಿಯ ವೇತನದ ವೈವಿಧ್ಯ. ಆಡಳಿತದ ಹಂತಗಳೆಲ್ಲವೂ ಉದ್ಯಮ ಹೂಡಿದವರ ಅನುಕೂಲವನ್ನೇ ಸಾಧಿಸುವುವೆಂದು ಕಾರ್ಮಿಕರ ತಿಳಿವಳಿಕೆ. ಕಾರ್ಮಿಕರೆಲ್ಲರೂ ಸ್ವಾರ್ಥಿಗಳೆಂದೂ ತಮ್ಮ ಏಳಿಗೆಯನ್ನಷ್ಟೆ ಎಣಿಸುವರೆಂದೂ ಆಡಳಿತದವರ ಅನಿಸಿಕೆ.

ಹೀಗಾಗಿ ಇವರ ನಡುವೆ ಸೌಹಾರ್ದ ಮನೋಭಾವ ಏರ್ಪಡುವುದು ಕಷ್ಟವೇ. ಸ್ಪಷ್ಟವಾದ, ಪ್ರಕಟವಾದ ತಿಕ್ಕಾಟವಿಲ್ಲದಿದ್ದಾಗಲೂ ಸಾಮರಸ್ಯವೆಂಬುದೇನಿಲ್ಲ. ಒಳಗೊಳಗೇ ವಿರಸ ಹೊಗೆಯಾಡುತ್ತಿರುತ್ತದೆ. ಸಮಯ ಸಿಕ್ಕರೆ ಸಮರ ಮೊದಲಾಗುತ್ತದೆ.

ಕಾರ್ಮಿಕರನ್ನು ಬಳಸಿಕೊಂಡು ತಮ್ಮ ಲಾಭವನ್ನು ಮಾಡಿಕೊಳ್ಳುವ ಯತ್ನ ಉದ್ಯಮದ ಒಡೆಯರದ್ದು. ಕಾರ್ಮಿಕರೆಲ್ಲರ ಕೌಶಲವನ್ನು ಮಾರುಕಟ್ಟೆಯ ಅಧಿಕ ಬೆಲೆಗೆ ಉಪಯೋಗಿಸಿಕೊಳ್ಳುವ ಹವಣಿಕೆ 'ಹ್ಯೂಮನ್ ರಿಸೋರ್ಸಸ್ ಡೆವಲಪ್‌ಮೆಂಟ್', ಕಾರ್ಮಿಕರ ಉತ್ಸಾಹವನ್ನು ಹೆಚ್ಚಿಸಲು 'ಇನ್‌ಸೆಂಟಿವ್ ಬೋನಸ್', ಅವರ ಭೌತಿಕ ನೆಮ್ಮದಿಯೆಂಬ ಸೋಗಿನಲ್ಲಿ ಅವರನ್ನು ಉದ್ಯಮದ ಬಲೆಯಲ್ಲೇ ಇರಿಸಿಕೊಳ್ಳುವ ಯತ್ನ 'ವರ್ಕರ್ಸ್ ವೆಲ್‌ಫೇರ್' ಇತ್ಯಾದಿ.

ಹೀಗೆ ಆಡಳಿತವೆಂಬ ಕ್ಷೇತ್ರದಲ್ಲಿ ನಡೆಯುತ್ತಿರುವ ವಿಶೇಷ ಅಧ್ಯಯನಗಳು, ಸಮೀಕ್ಷೆಗಳು, ಸಂಶೋಧನೆಗಳು, ಪ್ರಯೋಗಗಳು, ಉದ್ಯಮಾಧಿಪತಿಗಳ ಬೆಂಬಲ ಒತ್ತಾಸೆಗಳಿಂದಲೇ ನಡೆಯುತ್ತಿವೆ, ಅವರ ಪ್ರಯೋಜನಕ್ಕಾಗಿಯೇ ಇವೆಲ್ಲ ಎಂಬುದಂತೂ ಸ್ಪಷ್ಟವೇ.

ಉತ್ಪಾದನೆ ಹೆಚ್ಚು ಮಾಡುವುದು, ಇದಕ್ಕೆ ನೆರವಾಗುವವರ ಸಾಮರ್ಥ್ಯವನ್ನು ಹೆಚ್ಚಿಸುವುದು, ಅವರ ಒಲವನ್ನು ಕುದುರಿಸುವುದು ಇವು ಉದ್ಯಮವನ್ನು ಹಮ್ಮಿಕೊಂಡವರನ್ನು ಕಾಡುವ ಸಮಸ್ಯೆಗಳು. ಇದಕ್ಕಾಗಿ ಆಡಳಿತವನ್ನೆಲ್ಲ ಅವರು ಕಾರ್ಮಿಕರ ಮೇಲೆ ಪ್ರಯೋಗ ಮಾಡುತ್ತಾರೆ.

ಆದರೆ ಆಡಳಿತ ವರ್ಗದಲ್ಲೂ ಮೇಲೆ ಕೆಳಗೆ ಎಂಬ ಎಣಿಕೆ ಇರುವುದರಿಂದ ಒಡಕು ತಪ್ಪಿದ್ದಲ್ಲ. ಹೀಗೆ ಬೀಸುವ ಗದೆಯೇ ಬಿರುಕು ಬಿಟ್ಟರೆ ಉದ್ಯಮಾಧಿಪತಿಗಳಿಗೆ ತಲೆಬೇನೆಯಲ್ಲವೇ? ಉದ್ಯಮದ ಒಂದೊಂದು ಹಂತದಲ್ಲೂ ಸ್ವಾರ್ಥವೇ ಕೆಲಸ ಮಾಡುವುದು. ಉತ್ಪನ್ನವಾಗುವ ವಸ್ತು ಜನರಿಗೆ ಎಷ್ಟು ಹಿತವೆಂಬುದು ಯಾರಿಗೂ ಬೇಡವಾದ ವಿಚಾರ.

174. ಮಿತಿಯ ಅಗತ್ಯ

ಸುಖಪಡುವಾಗ ದೇಹಕ್ಕೊಂದು ಮಿತಿಯುಂಟು; ಮನಸ್ಸಿಗಾದರೆ ಅದೇನೂ ಇರದು.

ಒಂದು ಲೋಟ ಕಾಫಿ ಕುಡಿದಾಗ, ಅದು ಚೆನ್ನಾಗಿದ್ದರೆ, ಸುಖವೇನು ಎರಡು ಪಟ್ಟಾಗುವುದಿಲ್ಲ, ಆದರೂ ಕುಡಿಯಬಹುದು. ನಾಲಗೆಯೇನು ಬೇಡವೆನ್ನುವುದಿಲ್ಲ; ಮೈಯೂ ಅಡ್ಡಬರುವುದಿಲ್ಲ.

ಆದರೆ ಇನ್ನೊಂದು ಲೋಟ ಕುಡಿದಾಗ, ಸುಖ ಮೂರು ಪಟ್ಟಾಗುವುದರ ಬದಲು ಮೊದಲ ಲೋಟ ಕುಡಿದಾಗ ಬಂದ ಸುಖದಲ್ಲಿ ಅರ್ಧವಿದ್ದೀತು ಅಷ್ಟೆ. ಇನ್ನೂ ಹೆಚ್ಚು ಕುಡಿದರೆ ವಾಕರಿಕೆ ಬಂದೀತು; ಕುಡಿದದ್ದೆಲ್ಲ ವಾಂತಿಯಾದೀತು! ಮಿತಿಮೀರಿದರೆ ಯಾವುದೂ ದಕ್ಕುವುದಿಲ್ಲ.

ನಾಲಗೆಯ ರುಚಿಯಲ್ಲಿ ಬರುಬರುತ್ತ ಇಳುವರಿಯೆ; ಹೊಟ್ಟೆಯೂ ಇನ್ನು ಸಾಕೆಂದು ಸಾಕಷ್ಟು ಸೂಚನೆ ಕೊಡುತ್ತದೆ. ಮನಸ್ಸು ಮಾತ್ರ ಮುನ್ನುಗ್ಗುತ್ತದೆ.

ಇದು ಎಲ್ಲ ಬಗೆಯ ಭೋಗಗಳಿಗೂ ಅನ್ವಯಿಸುವ ಮಾತು. ದೇಹಧರ್ಮ ಮಿತಿಯನ್ನು ಮೀರುವುದಿಲ್ಲ; ಮಿತಿಮೀರಿದಾಗ ಪ್ರತಿಭಟನೆಯಿದ್ದೇ ಇರುತ್ತದೆ; ಅಂಗಗಳು ರಚನೆ, ಕ್ರಿಯೆಗಳನ್ನನುಸರಿಸಿ ಇಷ್ಟು ಒಳಿತು, ಇಷ್ಟನ್ನು ತಾಳಿಕೊಳ್ಳಬಹುದು, ಇನ್ನಷ್ಟಾದರೆ ಕಷ್ಟ ಎಂಬ ಮಿತಿಯಿರುತ್ತದೆ. ಮಿತಿಯನ್ನರಿಯದಿದ್ದರೆ ನಮಗೆ ರೋಗ ಕಾದಿಟ್ಟದ್ದೇ. ಆಗಲೂ ಎಚ್ಚರವಿರದಿದ್ದರೆ ಪ್ರಾಣಕ್ಕೇ ಕುತ್ತು.

ಇದು ಅಂಗಗಳಿಗಾದರೆ, ಅವಯವವಾಗಿದ್ದರೆ ಸರಿ. ಮನಸ್ಸಿಗೆ ಇಂಥ ಅಂಗವೇನು ಇರದು; ಅದು ಬರಿಯ ವೃತ್ತಿ, ವ್ಯಾಪಾರ. ಎಂದ ಮೇಲೆ ಅದಕ್ಕೆ

ಕಡಿವಾಣ ಹಾಕುವುದು ದೇಹಕ್ಕಂತೂ ಸಾಧ್ಯವಿಲ್ಲ. ಗಾಳಿಯಂತೆ ಎಲ್ಲೆಡೆಯೂ ಹಾರುವುದು ಅದರ ಧರ್ಮವೇ. ಅದಕ್ಕೊಂದು ಹಿಡಿತವಿರಬೇಕೆಂದರೆ ಬುದ್ಧಿಯಿರಬೇಕು. ಮನಸ್ಸಿಗೆ ಮೀರಿದ್ದು ಬುದ್ಧಿಯೊಂದೇ; ತಿಳಿವಳಿಕೆ, ವಿವೇಕ.

ಎಷ್ಟು ಹಣವಿದ್ದರೆ ಸಾಕು ಎಂಬುದು ಮನಸ್ಸಿನ ಕೆಲಸವಲ್ಲ; ಬುದ್ಧಿ ಅದನ್ನು ನಿಶ್ಚಯಿಸಬೇಕು. ಹಣದಿಂದ ಪಡೆದುಕೊಳ್ಳಬಹುದಾದ ಸುಖವಾದರೂ ಯಾವುದು, ಎಷ್ಟು ಎಂಬುದು ಬರಿಯ ಮನಸ್ಸಿನಿಂದಲೇ ತೀರ್ಮಾನವಾಗುವುದಲ್ಲ.

ಬಹುಮಂದಿಗೆ ಮನಸ್ಸು ಮಾತ್ರ ಇರುತ್ತದೆ; ಬುದ್ಧಿಯನ್ನು ಅವರು ಬೆಳೆಸಿಕೊಂಡಿರುವುದಿಲ್ಲ. ಅಂಥವರಿಗೆ ಯಾವುದರಲ್ಲೂ ಮಿತಿ ಕಾಣುವುದಿಲ್ಲ. ಬರಿಯ ಕೆಲಸ ಮಾಡುತ್ತದೆ, ದುಡಿಯುತ್ತದೆ, ದಣಿಯುತ್ತದೆ. ಕಾಯಿಲೆ-ಕಸಾಲೆಗಳನ್ನು ಬರಮಾಡಿಕೊಳ್ಳುತ್ತದೆ.

ಸುಖವೆಂಬ ಭ್ರಾಂತಿಗೆ ಪಕ್ಕಾಗಿ ಭೋಗ ಸಾಮಗ್ರಿಗಳ ಸಂಗ್ರಹವೇ ಸುಖವೆಂದು ಬಗೆಯುವವರಿದ್ದಾರಲ್ಲವೆ? ಭೂಮಿ, ಬಂಗಾರ, ಮನೆ, ಹಣ, ಉಡುಗೆ ತೊಡುಗೆ, ಆಳುಕಾಳು ಎಂದೆಲ್ಲ ಮೋಜು ಮಾಡುವವರಿಗೆ ದಿಟವಾಗಿ ಸುಖ ಯಾವುದು ಎಂಬ ಅರಿವೇ ಇರುವುದಿಲ್ಲ. ಕೂಡಿಸಿಕೊಳ್ಳುವುದೇ ಸುಖ ಅವರಿಗೆ. ಅವೆಲ್ಲವೂ ಸುಖಕ್ಕೆ ಸಾಧನಗಳಷ್ಟೆ, ಸಾಮಗ್ರಿಗಳಷ್ಟೆ ಎಂಬ ತಿಳಿವಳಿಕೆಯಿದ್ದರೆ ಅವರು ಮಿತಿಯನ್ನು ಕಂಡುಕೊಂಡಾರು.

ಭೋಗದಲ್ಲಿ ಮಿತಿಯಿರದಿದ್ದರೆ ರೋಗ ಎಂಬ ಮಾತೊಂದಿದೆ (ಭೋಗೇ ರೋಗ ಭಯಂ); ಸುಖದಲ್ಲಿ ಯಾವುದು, ಎಷ್ಟು ಎಂಬ ಎಣಿಕೆಯಿರದಿದ್ದರೆ ದುಃಖವೇ ಬಂದೊದಗುವುದು. ಮನಸ್ಸಿಗೊಂದು ಕಡಿವಾಣ ಹಾಕಿಕೊಳ್ಳದಿದ್ದರೆ ಸುಡುಗಾಡಿಗೆ ಎಳೆದೊಯ್ದೀತು, ಅಲ್ಲಿಗೇ ಅದರ ಮಿತಿ!

175. ಜೀವವಿರುವ ಹಣ

ಹಣವೊಂದಿದ್ದರೆ ಯಾವ ಕೊರತೆಯನ್ನಾದರೂ ಮುಚ್ಚೀತು.

ವಿದ್ಯೆಯಿರದೆ ಇರಲಿ, ಬುದ್ಧಿಯಿರದೆ ಇರಲಿ, ಗುಣ ಇರದೆ ಇರಲಿ, ರೂಪ ಇರದೆ ಇರಲಿ, ದುಡ್ಡಿದ್ದರೆ ಅವನು ದೊಡ್ಡವನೇ. ಎಲ್ಲರೂ ಅವನನ್ನು ಹಾಡಿ ಹೊಗಳುವರು.

ಹೀಗಿರುವುದರಿಂದಲೇ ಎಲ್ಲರೂ ಹಣವನ್ನು ಗಳಿಸತೊಡಗುವುದು. ಇದರಿಂದಲೇ ಹಣಕ್ಕೊಂದು ವಿಶೇಷವಾದ ಸ್ಥಾನಮಾನ ಒದಗಿಬಂದಿರುವುದು. ಇದಕ್ಕೆ

ದೇಶಕಾಲಗಳ ಎಣಿಕೆಯೇನಿರದು. ಎಲ್ಲರಿಗೂ ಎಲ್ಲ ಕಾಲಕ್ಕೂ ಹಣ ಹೆಚ್ಚಿನದೇ. ಯಾವ ದೇಶದ ಸಂಸ್ಕೃತಿಯಾಗಲಿ ಹಣವನ್ನು ನಿಕೃಷ್ಟವಾಗಿ ಕಾಣುವುದಿಲ್ಲ.

ಆದರೆ ಹಣವಿದ್ದರೆ ಯಾವ ಕೊರತೆಯೂ ಕಾಣುವುದಿಲ್ಲವೆಂಬ ಮಾತು ಸರಿಯಲ್ಲ. ಹಣದಿಂದ ಯಾವ ಅನುಕೂಲವನ್ನಾದರೂ ಪಡೆದುಕೊಳ್ಳಬಹುದೆಂದೂ ಹೇಳಲಾಗದು. ಹಣವೇ ಸರ್ವಾರ್ಥಸಾಧಕ ಎಂದರೂ ಒಪ್ಪುವ ಮಾತಲ್ಲ.

ಆರೋಗ್ಯವೇ ಆಯಿತು. ಹಣದಿಂದ ಕೈಗೂಡಿಸಿಕೊಳ್ಳಬಹುದೆ? ರೋಗ ಬಂದಾಗ ಹಣವಿದ್ದರೆ ಮದ್ದುಮಾಡಿಕೊಳ್ಳುವುದು ಸುಲಭವೆಂಬುದೇನೋ ದಿಟ. ಆದರೆ ಸಹಜ–ಸಿದ್ಧವಾದ ಆರೋಗ್ಯ ಹಣವನ್ನವಲಂಬಿಸುವುದಿಲ್ಲ. ಆರೋಗ್ಯವಿಲ್ಲದೆ ಹಣದ ಎಲ್ಲ ಅನುಕೂಲಗಳನ್ನು ಅನುಭವಿಸುವುದೂ ಸಾಧ್ಯವಿಲ್ಲ.

ಬಗೆಬಗೆಯ ಆಹಾರವನ್ನು ಕೊಳ್ಳುವುದು ಹಣದಿಂದ ಸಾಧ್ಯ. ಆದರೆ ಅವನ್ನುಂಡು ಅರಗಿಸಿಕೊಳ್ಳುವುದು ಹಣದಿಂದಾಗುವ ಕೆಲಸವಲ್ಲ. ಹಾಗೆ ನೋಡಿದರೆ ಹೆಚ್ಚು ಹಣವಿರುವುದು ತೊಂದರೆಗೆ ದಾರಿಯೇ! ಹಾಳುಮೂಳು ಎಲ್ಲವನ್ನೂ ಕೊಂಡು ಹೊಟ್ಟೆಗೆ ಹಾಕಿಕೊಂಡರೆ ಪಾಪ, ಹೊಟ್ಟೆ ಅವನ್ನೆಲ್ಲ ತಾಳಿಕೊಳ್ಳುವುದು ಹೇಗೆ?

ಅದು ಹೋಗಲಿ, ನೆಮ್ಮದಿಯನ್ನಾದರೂ ಹಣದಿಂದ ಪಡೆದುಕೊಳ್ಳಬಹುದೆ? ಹಣವೇ ಇಲ್ಲದಿದ್ದಾಗ ಬಡತನದ ಬೇಗೆಯನ್ನು ಕಳೆದುಕೊಳ್ಳಲು ಹಣ ಬಂದರೆ ಅದು ನೆಮ್ಮದಿಯೇ ಎನ್ನಿ. ಅದರಿಂದ ಎಷ್ಟೋ ಮನಸ್ಸಿಗೆ ಸಮಾಧಾನವಾದೀತು. ಆದರೆ ಹಣ ಬಂತೆಂಬಷ್ಟೆ ಕಾರಣದಿಂದ ನೆಮ್ಮದಿಯಲ್ಲ. ಬಡತನದ ಬವಣೆ ದೂರವಾದರೆ ಅದು ನೆಮ್ಮದಿ.

ನೆಮ್ಮದಿಯೆಂಬುದು ಮನಸ್ಸಿನ ಒಂದು ಸ್ಥಿತಿ. ಬಡತನವೇ ಇದ್ದಾಗಲೂ ಅನುಕೂಲೆಯಾದ ಹೆಂಡತಿಯಿದ್ದರೆ, ಸುಶೀಲರಾದ ಮಕ್ಕಳು ಇದ್ದರೆ ನೆಮ್ಮದಿಯೇ. ಇದನ್ನು ಹಣದಿಂದ ಕೊಳ್ಳುವುದು ಸಾಧ್ಯವಿಲ್ಲ. ದುಡ್ಡುಕೊಟ್ಟು ದಕ್ಕಿಸಿಕೊಳ್ಳುವುದು ಆಗದು, ಹಣವಿದ್ದೂ ಜಗಳಗಂಟ ಹೆಂಡತಿಯಿದ್ದರೆ, ದಾರಿತಪ್ಪಿದ ಮಕ್ಕಳಿದ್ದರೆ ನೆಮ್ಮದಿಯೆಲ್ಲಿರುತ್ತದೆ? ಕಿರುಕುಳವೇ ಕಟ್ಟಿಟ್ಟ ಗಂಟು.

ಹಣದಿಂದ ಕೊರತೆ ತಪ್ಪುವುದಿರಲಿ, ಹಣವೇ ಮುಖ್ಯವೆಂದಾಗ ಎಷ್ಟಿದ್ದರೂ ಅದರದ್ದೇ ಕೊರತೆ. ಅದನ್ನು ಪೂರೈಸುವುದು ಯಾರಿಗಾದರೂ ಕಷ್ಟವೇ. ಹಸಿವಾದರೆ ಇಂಗಲು ಅಷ್ಟಿಷ್ಟು ಆಹಾರ ಸಾಕು; ಚಳಿಯಾದರೆ ಅಷ್ಟಿಷ್ಟು ಹೊದಿಕೆ ಹಚ್ಚಡ ಸಾಕು; ಆಯಾಸವಾದರೆ ಸ್ವಲ್ಪ ವಿಶ್ರಾಂತಿ ಸಾಕು. ಆದರೆ ಹಣದ ಕೊರತೆಯೆಂಬುದಕ್ಕೆ ಮಿತಿಯನ್ನು ಕಲ್ಪಿಸಿಕೊಳ್ಳುವುದು ಕಷ್ಟ.

ಕಲ್ಪಿಸಿಕೊಳ್ಳುವುದಾದರೇನೋ ಹಣದ ಹೆಚ್ಚುಗಾರಿಕೆಯೇ. ಆಗ ಹಣಕ್ಕೊಂದು ಅರ್ಥವಿದೆ, ಬೆಲೆಯಿದೆ, ಪ್ರಯೋಜನವೂ ಇದೆ. ಜೀವಂತವಾಗಿರುವ ಹಣವೆಂದರೆ ಇದೇ; ಉಳಿದದ್ದು ಜಡ, ಅದೊಂದು ಹೊರೆ; ಅದನ್ನು ಹೊತ್ತವರಿಗೆ ನೆಮ್ಮದಿಯೆಂಬುದಿರದು.

176. ಹಣದ ಹಸಿವೆ

ಕಾಡು ಪ್ರಾಣಿಗಳಲ್ಲಿ ಹಿಂಸೆ ಮಾಡುವುದು ಸಹಜ ಪ್ರವೃತ್ತಿಯೆಂಬಂತೆ ತೋರಿಕೊಳ್ಳುತ್ತದೆ. ಹುಲಿ, ಸಿಂಹ, ಚಿರತೆ ಮೊದಲಾದ ಪ್ರಾಣಿಗಳಲ್ಲಂತೂ ಕ್ರೌರ್ಯ ಎದ್ದು ಕಾಣುತ್ತದೆ.

ಆದರೆ ಈ ಹಿಂಸೆ ಹಸಿವಿನಿಂದ ಎದ್ದು ಬರುವುದು ವಾಡಿಕೆ. ಅವು ಬೇಟೆಯಾಡುವುದು ಹೊಟ್ಟೆ ಹಸಿದಾಗ ಮಾತ್ರ. ಹೊಟ್ಟೆ ತುಂಬಿತೆಂದರೆ ಸಿಂಹದ ಬಳಿಯೆ ಜಿಂಕೆ ಸುಳಿದರೂ ಸಿಂಹ ಅದನ್ನು ಕತ್ತೆತ್ತಿಯೂ ನೋಡುವುದಿಲ್ಲ. ಜಿಂಕೆಗಾಗಲಿ ಭಯವಿರುವುದಿಲ್ಲ.

ಎಂದರೆ, ಹಿಂಸೆಯ ಹಿಂದೆ ದ್ವೇಷಬುದ್ಧಿಯಿರದು. ಕೆಲವು ಪ್ರಾಣಿಗಳನ್ನು ತಿಂದು ಮತ್ತೆ ಕೆಲವು ಪ್ರಾಣಿಗಳು ಬದುಕುವುದು ಪ್ರಕೃತಿ ನಿಯಮ. ಇದು ಸಹಜವಾಗಿಯೆ ನಡೆದು ಹೋಗುತ್ತದೆ. ಕ್ರೌರ್ಯವೆನ್ನುವುದು ನಮ್ಮ ಎಣಿಕೆ ಅಷ್ಟೆ. ಪ್ರಾಣಿಗಳು ಕಾದಾಡುವಾಗ ವೈರವೇನು ಇರಲಾರದು.

ಆದರೆ ಕೂಡುವ ಕಾಲ ಬಂದಿತೆಂದರೆ ಗಂಡುಗಳಲ್ಲಿ ಸೆಣಸಾಟ ತಪ್ಪಿದ್ದಲ್ಲ. ಆಗ ನಡೆಯುವ ಹಿಂಸೆ ಹಸಿವಿನಿಂದಲ್ಲ; ಕಾಮದ ಕಾವಿನಿಂದ. ಅಂಥ ಕಾದಾಟದಲ್ಲಿ ಬೇಕಾದಂತೆ ಹಿಂಸೆ ನಡೆಯುತ್ತದೆ. ಆದರೆ ಒಮ್ಮೆ ಕಾಮದ ಅಮಲು ಇಳಿಯಿತೆಂದರೆ ತೆಪ್ಪಗಾಗಿಬಿಡುತ್ತವೆ.

ಮನುಷ್ಯನ ಹಿನ್ನೆಲೆ ಕಾಡು ಪ್ರಾಣಿಗಳದ್ದೇ ಆದುದರಿಂದ ಅವನೂ ಬೇಟೆಗಾರನಾದುದು ಸಹಜವೇ. ಸಂಸ್ಕೃತಿಯ ಮೊದಲ ಹಂತಗಳಲ್ಲಿ ಅವನ ಬೇಟೆಯೂ ಹೊಟ್ಟೆ ಹೊರೆದುಕೊಳ್ಳಲೆಂದೇ. ಹಸಿವನ್ನು ತೀರಿಸಿಕೊಳ್ಳುವ ಸಲುವಾಗಿಯೇ ಬೇಟೆಯಾಡುತ್ತಿದ್ದುದು. ಪ್ರಾಣಿಗಳಲ್ಲದೆ ಅವನಿಗೆ ಬೇರೆಯ ಆಹಾರ ಎಲ್ಲಿಯದು?

ಆದರೆ ಸಂಸ್ಕೃತಿ ಬೆಳೆದಂತೆ, ಹಸಿವನ್ನು ತೀರಿಸಿಕೊಳ್ಳಲು ಬೇರೆ ಅನುಕೂಲಗಳನ್ನು ಮಾಡಿಕೊಂಡ ಮೇಲೂ ಬೇಟೆಯಾಡುವುದನ್ನು ಅವನು ನಿಲ್ಲಿಸಲಿಲ್ಲ. ಈಗ ಬೇಟೆಯೊಂದು ಆಟ; ಮೋಜು. ತನ್ನ ಸಂತೋಷಕ್ಕೆಂದು ಪ್ರಾಣಿಗಳನ್ನು ಹಿಂಸಿಸಲು ಮನುಷ್ಯನೇನು ಹಿಂದೆ ಮುಂದೆ ನೋಡಲಿಲ್ಲ.

ಪ್ರಾಣಿಗಳಿರಲಿ, ತನಗಿಂತ ದುರ್ಬಲರಾದ ಇತರ ಮನುಷ್ಯರನ್ನೂ ಬೇಟೆಯಾಡಲು ಹೊರಟನಲ್ಲವೆ? ಇಲ್ಲಿ ಕ್ರೌರ್ಯ ಕಾಣಿಸಿಕೊಳ್ಳುತ್ತದೆ. ವೈರಬುದ್ಧಿ ಇರುತ್ತದೆ. ಇಲ್ಲಿ ಹಸಿವೆಯೂ ಅಲ್ಲ, ಕಾಮವೂ ಅಲ್ಲ ಕೆಲಸಮಾಡುವುದು; ಮನುಷ್ಯನಲ್ಲಿರುವ ಸಹಜವಾದ ಹಿಂಸಾಪ್ರವೃತ್ತಿ.

ಇದು ಹೊರಹೊಮ್ಮುವುದು ಹಣದ ಹಸಿವೆಯಲ್ಲಿ. ಹಣವೆಂದರೆ ಮನುಷ್ಯನಿಗೊಂದು ಬಲ; ಈಟಿ, ಭರ್ಜಿ, ಬಿಲ್ಲು, ಬಾಣಗಳಿಗಿಂತ ಹೆಚ್ಚು ಅಪಾಯಕಾರಿಯಾದ ಆಯುಧ ಹಣ. ಇದರಿಂದ ಯಾರನ್ನಾದರೂ ಹಿಂಸಿಸಲು ಬರುತ್ತದೆ; ಏನನ್ನಾದರೂ ಸಾಧಿಸುವುದಾಗುತ್ತದೆ.

ಹಣವನ್ನು ಹೆಚ್ಚು ಹೆಚ್ಚು ಪಡೆದುಕೊಂಡರೆ ಮನುಷ್ಯನ ಶಕ್ತಿಯೂ ಅಷ್ಟಷ್ಟು ಹೆಚ್ಚುತ್ತದೆಯೆಂಬ ಎಣಿಕೆಯಿರುವುದರಿಂದ, ಬಯಕೆಗಳೂ ಹೆಚ್ಚುತ್ತವೆ. ಕ್ರೌರ್ಯವೂ ಹೆಚ್ಚುತ್ತದೆ. ಮನುಷ್ಯನ ನೆಲೆಯಲ್ಲಿ ಕಾಣುವ ಹಿಂಸಾ ಪ್ರವೃತ್ತಿ ಇತರ ಪ್ರಾಣಿಗಳಲ್ಲಿ ಕಾಣದಿರುವುದಕ್ಕೆ ಹಣವೇ ಕಾರಣವೆನ್ನಬಹುದು. ಇತರ ಪ್ರಾಣಿಗಳಿಗೆ ಹಣದ ಅರಿವಿಲ್ಲ. ಅವಕ್ಕೆ ಸಹಜ ಪ್ರವೃತ್ತಿಗಳೇ ಪ್ರೇರಕ. ಮನುಷ್ಯನಿಗಾದರೆ ಹಣದಿಂದ ಒದಗುವ ಪ್ರವೃತ್ತಿಗಳೇ ಮುಖ್ಯವಾಗುತ್ತವೆ.

177. ಕುಬೇರನಿಗೆ ವಿವೇಕವಿದೆಯೆ?

ತಿರುಗುಮುರುಗಾಗಿ ಓದಿದರೂ ನೇರವಾಗಿ ಓದಿದರೂ ಒಂದೇ ಆಗಿರುವಂತೆ ಮಕ್ಕಳು ಕೆಲವು ವಾಕ್ಯಗಳನ್ನು ಹೊಸೆಯುತ್ತಾರಲ್ಲವೆ? ಅವುಗಳಲ್ಲಿ ಒಂದು 'ಕುಬೇರನಿಗೇನಿರಬೇಕು?' ಎಂಬುದು. ವಾಕ್ಯದ ಸ್ವಾರಸ್ಯ ಅಕ್ಷರಗಳ ಜೋಡಣೆಯಷ್ಟರಲ್ಲಿಯೇ ಮುಗಿಯುವುದಿಲ್ಲ. ಮನನ ಮಾಡಬೇಕಾದ ಅಂಶ ಈ ಪ್ರಶ್ನೆಯಲ್ಲಿದೆ.

ಕುಬೇರನಿಗೇನಿರಬೇಕು? ಹಣ ಎನ್ನುವಂತಿಲ್ಲ. ಹಣವಿರದೆ ಅವನು ಕುಬೇರನಾದದ್ದು ಹೇಗೆ? ನವನಿಧಿಗಳ ಒಡೆಯನಲ್ಲವೆ ಅವನು? ಹೆಣ್ಣು ಎಂಬಿರಾ? ಭದ್ರೆಯೆಂಬ ಸುರಸುಂದರಿಯೇ ಹೆಂಡತಿ; ಒಂದು ಸಾವಿರ ಮಂದಿ ಅಪ್ಸರೆಯರು ಅವನನ್ನು ಓಲೈಸುವರು. ಮನೆಯೆ? ಅಲಕಾವತಿಯೆಂಬ ನಗರವೇ ಅವನದು; ಅಲ್ಲಿ ವಜ್ರಗಳಿಂದಲೇ ಅಲಂಕಾರ ಮಾಡಿದ ಸಭೆ, ಮುತ್ತುರತ್ನಗಳಿಂದಲೇ ಕಟ್ಟಿದ ಅರಮನೆ. ಇನ್ನೇನು ಬೇಕು? ಶಿವನೇ ಗೆಳೆಯನೆಂದ ಮೇಲೆ ಕೇಳುವುದೇನು?

ಇಷ್ಟೆಲ್ಲ ವೈಭವದಿಂದ ಮೆರೆಯುವ ಕುಬೇರನಿಗೇನಿರಬೇಕು? ಬಲವು ಇಲ್ಲದಿಲ್ಲ. ಒಮ್ಮೆಯೇನೋ ಸೋದರ ರಾವಣ ಅವನನ್ನು ಸೋಲಿಸಿ ಲಂಕೆಯಿಂದ ಹೊಡೆದಟ್ಟಿದನೆನ್ನಿ. ಆದರೆ ಕೈಲಾಸದಲ್ಲಿ ವಸತಿ ಸಿಕ್ಕಿತಲ್ಲ? ಅವನು ಧನಾಢ್ಯ ಮಾತ್ರವಲ್ಲ, ಬಲಾಢ್ಯನೂ ಹೌದು. ಹಣವಿದ್ದಲ್ಲಿ ಬಲವಿಲ್ಲದೆ ಇರುವುದೆ? ಹಣ ಬೇಕೆಂದವರು ಕುಬೇರನ ಬಳಿಯೇ ಬೇಡಬೇಕು. ಬೇರೆಲ್ಲಿ ಬೇಡಿದರೂ ಸಾಲುವುದಿಲ್ಲ.

ಹಣವನ್ನು ಗಳಿಸುವವರಿಗೆ ಕುಬೇರನ ಅನುಗ್ರಹವಿರಬೇಕು; ಅವರು ಕುಬೇರನ ಮಕ್ಕಳೆಂದೇ ಎಣಿಕೆಯಲ್ಲವೆ? ಕುಬೇರನನ್ನು ಯಾರೂ ಮರೆಯುವಂತಿಲ್ಲ; ಅಸಡ್ಡೆಯಿಂದ ಕಾಣುವಂತಿಲ್ಲ. ಹೀಗಿರುವಾಗ ಕುಬೇರನಿಗೆ ಇನ್ನೇನಿರಬೇಕೆಂದು ಏನನ್ನು ತಾನೆ ಹೇಳಲಾದೀತು?

ಕುಬೇರನಿಗೂ ಕೊರತೆಯೊಂದಿದೆ. ಅದೇನೆಂಬುವಿರಾ? ವಿವೇಕ! ಯಾರಿಗೆ ಹಣವನ್ನು ನೀಡಿದರೆ ಅವರಿಗೂ ಇತರರಿಗೂ ಒಳಿತಾದೀತು ಎಂಬ ತಿಳಿವಳಿಕೆ ಅವನಿಗಿರದು. ಹಣವನ್ನು ಹಾಳು ಮಾಡುವವರ ಮೇಲೇ ಅವನ ಅನುಕಂಪ. ಹಣವಿದೆಯೆಂದು ಇತರರನ್ನು ಕಾಲುಕಸವಾಗಿ ಕಾಣುವ ಮಂದಿಗೇ ಅವನು ಬೇಗನೆ ಒಲಿಯುವುದು. ಹಣವನ್ನು ತಮ್ಮ ಮೋಜಿಗೆಂದೇ ಪೋಲು ಮಾಡುವವರು, ಹಣದ ಬಲದಿಂದ ಬೇರೆಯವರನ್ನು ಹಿಂಸಿಸುವವರು, ದುಡಿಮೆಯ ಹಿನ್ನೆಲೆಯಿಲ್ಲದೆ ದುಡ್ಡು ಮಾಡಿಕೊಳ್ಳುವವರು, ಹಣದಿಂದಾಗಿ ತಲೆತಿರುಗಿ ಬೀಗುವವರು ಇಂಥವರೇ ಅವನ ಅಭಿಮಾನಕ್ಕೆ ಪಾತ್ರರಾಗುವವರು.

ಹಣವಂತರ ಮೆರೆತವನ್ನೂ ಮೇಲಾಟವನ್ನೂ ನೋಡಿದಾಗ 'ಜನರ ಸ್ವಭಾವವನ್ನೂ ಯೋಗ್ಯತೆಯನ್ನೂ ಗಮನಿಸಿಯಲ್ಲವೆ ಹಣವನ್ನು ಕುಬೇರ ಕೊಡಬೇಕಾದುದು? ಅಯೋಗ್ಯರಿಗೇ ಹಣವನ್ನು ಸುರಿಯುತ್ತಾನಲ್ಲ?' ಎಂದು ಅನಿಸುತ್ತದೆ. ಆದರೆ ಯಾರಿಗೆ ಹಣವನ್ನು ಕೊಟ್ಟರೂ ಕಡೆಗೆ ಆಗುವುದು ಹೀಗೆಯೇ ಎಂಬುದು ಕುಬೇರನ ಎಣಿಕೆಯೋ ಏನೋ!

178. ಸ್ವದೇಶಿ

ಹಿಂದೆ, ಗಾಂಧೀಜಿಯವರು ಬದುಕಿದ್ದಾಗ ಸ್ವದೇಶಿ ಎಂಬ ಕಲ್ಪನೆ ಗರಿಕೆದರಿಕೊಂಡಿದ್ದಿತು; ರಾಜಕಾರಣಕ್ಕಾಗಲಿ, ಆರ್ಥಿಕ ವ್ಯವಸ್ಥೆಗಾಗಲಿ ಸ್ವದೇಶಿಯೆಂಬುದು ಮೂಲಮಂತ್ರವೆನ್ನುವ ತಿಳಿವಳಿಕೆಯಿದ್ದಿತು.

ನಮ್ಮ ದೇಶದಲ್ಲಿ ತಯಾರಾದುದು, ನಮ್ಮ ಜನರಿಂದಲೇ ತಯಾರಿಸಲ್ಪಟ್ಟುದು ನಮಗೆ 'ಸ್ವದೇಶಿ'; ಅದರಿಂದ ನಮ್ಮ ಹಣ ನಮ್ಮವರಿಗೇ ಸಂದು, ನಮ್ಮ ದೇಶ ಆರ್ಥಿಕವಾಗಿ ನಮ್ಮದೇ ಆಗಿರುವುದು ಸ್ವದೇಶಿಯ ಉದ್ದೇಶ.

ಗಾಂಧೀಯುಗ ಮುಗಿದು ದೇಶದ ಆರ್ಥಿಕ ಚಿಂತನೆ ಹೊಸದಾರಿಯನ್ನು ಹಿಡಿದಾಗ, ಹಲವಾರು ಹೊರದೇಶಗಳ ಉದ್ಯಮಿಗಳು ತಮ್ಮ ಬಂಡವಾಳವನ್ನು ಇಲ್ಲಿ ಹೂಡಿ, ಇಲ್ಲಿನ ಫಲವತ್ತಾದ ಭೂಮಿಯನ್ನು ಉತ್ತು, ಬಿತ್ತಿ, ಬೆಳೆ ತೆಗೆದುಕೊಳ್ಳಲು ಮುಂದಾಗಿ ಬಂದರು.

ಇಂಥ 'ಬಹುರಾಷ್ಟ್ರೀಯ' ಉದ್ಯಮಗಳು (ಮಲ್ಟಿನ್ಯಾಷನಲ್ ಕಂಪೆನಿಗಳು) ನಮ್ಮ ದೇಶದೊಳಗೆ ನಡೆಯುವಾಗ, ನಮ್ಮ ಜನರನ್ನೇ ಉದ್ಯೋಗಕ್ಕೆ ಇರಿಸಿಕೊಂಡು ನಡೆಸುವಾಗ, ನಮಗೆ ಬೇಕಾಗುವ ಪದಾರ್ಥಗಳನ್ನೇ ತಯಾರಿಸುವಾಗ, ಅವನ್ನೂ 'ಸ್ವದೇಶಿ'ಯೆನ್ನಬಹುದಲ್ಲವೆ?

ಎನ್ನಲಾಗದು. ಏಕೆಂದರೆ ಈ ಉದ್ಯಮಗಳು ಹೊರಗಿನವರ ಲಾಭದ ಉದ್ದೇಶದಿಂದಲೇ ಸಿದ್ಧವಾದವು. ನಮ್ಮ ದೇಶದ ಹಿತ ಅವುಗಳಿಗೆ ಎಷ್ಟು ಮಾತ್ರಕ್ಕೂ ಇಲ್ಲ.

ಈ ಉದ್ಯಮಗಳಲ್ಲಿ ನಮ್ಮವರಿಗೆ ಒಂದಿಷ್ಟು ಪಿಂಡದ ಬಲಿದಾನ ನಡೆದರೂ ಹೆಚ್ಚಿನ ಲಾಭದ ಅಂಶವೆಲ್ಲ ಹೊರಗೆ ಸಾಗುವುದು ಖಚಿತ. ನಮ್ಮ ದೇಶದ ಆರ್ಥಿಕ ಶೋಷಣೆ ಆಗಿಯೇ ಬಿಡುತ್ತದೆ.

ಸ್ವದೇಶಿಯೆಂಬ ಕಲ್ಪನೆಯಲ್ಲಿ ನಮ್ಮದೇ ಚಿಂತನೆ, ನಮ್ಮದೇ ಉದ್ಯಮ, ನಮ್ಮದೇ ಬಂಡವಾಳ, ನಮ್ಮವರೇ ದುಡಿಯುವವರು. ಉತ್ಪನ್ನವಾದದ್ದು ನಮ್ಮವರಿಗೇನೆ. ಬಂದ ಲಾಭವೆಲ್ಲ ದೇಶದೊಳಗೇ ಇರುವುದು.

ಬ್ರಿಟಿಷರ ಆಳ್ವಿಕೆಯಲ್ಲಿ ನಮ್ಮ ದೇಶವಿದ್ದಾಗ, ದೇಶದ ಸಂಪತ್ತನ್ನೆಲ್ಲ ಅವರು ದೋಚಿಕೊಂಡು ಹೋಗಲು ಹವಣಿಸಿದ್ದರಷ್ಟೆ? ದೇಶ ರಾಜಕಾರಣ ದೃಷ್ಟಿಯಿಂದ ಸ್ವತಂತ್ರವಾದಂದು ಈ 'ವಿದೇಶಿ' ವ್ಯವಸ್ಥೆ ತಪ್ಪಿತು, ದಿಟ.

ಆದರೆ ಬಾಗಿಲಿಂದ ಹೊರಹೋದ ಪಿಶಾಚಿ ಗವಾಕ್ಷಿಯಿಂದ ಮತ್ತೆ ಒಳಗೆ ನುಗ್ಗಿತು. ಒಂದು 'ವಿದೇಶಿ' ಪ್ರಭಾವಕ್ಕೆ ಬದಲು 'ಹಲವಾರು ವಿದೇಶೀ' ಪ್ರಭಾವಕ್ಕೆ ಪಕ್ಕಾದುದು ನಮ್ಮ ದೇಶದ ವಿಪತ್ತು.

ಸ್ವದೇಶಿಯೆಂಬ ಸೂತ್ರವನ್ನು ಗಾಂಧೀಜಿ ನಮ್ಮ ದೇಶದೆದುರು ಇಟ್ಟಾಗ ನಮ್ಮ ಜನರಿಗೆ ಅಗತ್ಯವಾದ ವಸ್ತುಗಳ ಉತ್ಪಾದನೆ ಒಂದೆಡೆ ಕೇಂದ್ರೀಕೃತವಾಗದೆ, ಒಬ್ಬ ಲಾಭಕೋರನ ಸ್ವತ್ತಾಗದೆ, ದೇಶದ ಹಳ್ಳಿಗಳಲ್ಲಿ ಊರುಗಳಲ್ಲಿ ಹರಡಿಕೊಳ್ಳಬೇಕು, ಸಾಮಾನ್ಯ ಜನರೆಲ್ಲರೂ ಇದರಲ್ಲಿ ಪಾಲ್ಗೊಳ್ಳುವಂತಿರಬೇಕು ಎಂಬ ಉದ್ದೇಶವಿದ್ದಿತು.

ಮತ್ತೆ ಉತ್ಪಾದನೆಯೂ ಜನರ ಸ್ಥಳೀಯ ಅಗತ್ಯಗಳಿಗನುಗುಣವಾಗಿ ಸಣ್ಣ ಪ್ರಮಾಣದ್ದೇ ಇರಬೇಕು, ಜನರ ಕೈಕೆಲಸದಿಂದ ಆಗುವಂತಿರಬೇಕು, ದೈತ್ಯಾಕಾರದ ಯಂತ್ರಗಳನ್ನು ಬಳಸಬಾರದು ಎಂಬುದು ಅವರ ಆಶಯವಾಗಿದ್ದಿತು.

ನಮ್ಮ ದೇಶ ಹಿಡಿದಿರುವ ಹಾದಿಗೆ ಏನಾದರೂ ಹೆಸರಿಡಿ. ಸ್ವದೇಶಿಯಂತೂ ಅಲ್ಲವೆಂಬುದು ಖಂಡಿತ.

179. ಉದ್ಯಮದ ಆದ್ಯತೆ

ಯಾವುದಾದರೂ ದೇಶದ ಉದ್ಯಮಗಳು ಆ ದೇಶದ ಸ್ವಭಾವ, ಆ ಜನರ ಸ್ಥಿತಿ, ಅಗತ್ಯಗಳನ್ನನುಸರಿಸಿ ಇರಬೇಕಾದುದು ಬುದ್ಧಿವಂತಿಕೆಯಲ್ಲವೆ?

ದೇಶದ ಅಗತ್ಯವನ್ನು ಗಣನೆಗೇ ತಂದುಕೊಳ್ಳದೆ ಆಧುನಿಕತೆಯ ಗುಂಗಿನಲ್ಲಿ ಪರದೇಶದ ಉದ್ಯಮಗಳನ್ನೇ ಅನುಸರಿಸಿಬಿಟ್ಟರೆ ಅದರಿಂದ ದೇಶಕ್ಕೆ ಹಿತವಾದೀತೆಂದು ಬಗೆಯಬಾರದು.

ನಿದರ್ಶನಕ್ಕೆ ಸಂಚಾರೋದ್ಯಮಗಳನ್ನು ನೋಡಿ. ಕಾರುಗಳನ್ನು ತಯಾರಿಸುವ ಸಂಸ್ಥೆಗಳಿಗೆ ಎಷ್ಟೊಂದು ಆದ್ಯತೆ ದೊರೆಯುತ್ತಿದೆ! ಆದರೆ ನಮ್ಮ ದೇಶದಲ್ಲಿ ಕಾರುಗಳನ್ನು ಕೊಳ್ಳಬಲ್ಲವರ ಸಂಖ್ಯೆ ಎಷ್ಟು? ಇಡೀ ಜನಸಂಖ್ಯೆಯಲ್ಲಿ ಅದರ ಪಾಲು ಎಷ್ಟು? ತೀರ ಅಲ್ಪವಾದುದು.

ಜನರಲ್ಲಿ ಬಹುಮಂದಿ ಸಾರ್ವಜನಿಕ ವಾಹನಗಳನ್ನೇ ಅವಲಂಬಿಸುವರು. ದೇಶದ ಎಲ್ಲ ಭಾಗಗಳಲ್ಲಿಯೂ ಈ ಮಾತು ನಿಜ ಎಂದ ಮೇಲೆ ಸಾರ್ವಜನಿಕ ವಾಹನಗಳ ತಯಾರಿಕೆ, ವಿತರಣೆ, ವ್ಯವಸ್ಥೆಗೆ ಆದ್ಯತೆ ಕೊಡಬೇಡವೆ? ಜನರಿಗೆ ಸರಕಾರವಾಗಲೀ ಉದ್ಯಮಗಳಾಗಲಿ ನೆರವಾಗಬೇಕೆಂದರೆ ಅವರ ಅಗತ್ಯಗಳನ್ನು ಗಮನಿಸಬೇಕು.

ಶ್ರೀಮಂತರು, ಅಧಿಕಾರಿಗಳು, ಉದ್ಯಮಿಗಳು ಇವರು ಬದುಕುವ ಬಗೆಯನ್ನೇ ನೋಡಿ. ಅವರಿಗೆ ಅನುಕೂಲವಾಗುವಂಥ ವಸ್ತುಗಳನ್ನೇ ಒದಗಿಸುವ ಹೆಡ್ಡತನ ಈಗೀಗ ಬಲಗೊಳ್ಳುತ್ತಿದೆ.

ಹಿಂದೆ ರಷ್ಯಾದೇಶದಲ್ಲಿ ರಾಣಿಯೊಬ್ಬಳಿದ್ದಳಂತೆ. ಜನರು ಬರಗಾಲದಿಂದ ಕಂಗಾಲಾಗಿದ್ದ ಕಾಲ ಅದು. ತಿನ್ನಲು ಏನೂ ದೊರಕುತ್ತಿರಲಿಲ್ಲ. ರಾಣಿಯ ಸಚಿವನೊಬ್ಬನು 'ಜನರಿಗೆ ತಿನ್ನಲು ಬ್ರೆಡ್ ಕೂಡ ಸಿಗುತ್ತಿಲ್ಲ' ಎಂದು ಅರಿಕೆ ಮಾಡಿಕೊಂಡನಂತೆ. ಅದಕ್ಕೆ ರಾಣಿ 'ಬ್ರೆಡ್ ಸಿಗದಿದ್ದರೆ, ಕೇಕನ್ನೇ ತಿನ್ನಲಿ!' ಎಂದು ಪರಿಹಾರವನ್ನು ಸೂಚಿಸಿದಳಂತೆ!

ಜನಸಾಮಾನ್ಯರ ಕಷ್ಟದ ಅರಿವು ಅವಳಿಗಿದ್ದುದು ಇಷ್ಟು. ಬ್ರೆಡ್ಡನ್ನೇ ಪಡೆದುಕೊಳ್ಳಲಾರದವರು ಕೇಕನ್ನು ಕೊಳ್ಳುವುದು ಹೇಗೆಂಬ ಸಮಸ್ಯೆ ಅವಳನ್ನು ಕಾಡಲಿಲ್ಲ. ಅದೇನು ಅವಳ ಸಮಸ್ಯೆಯಲ್ಲವಲ್ಲ!

ನಮ್ಮ ಆಡಳಿತದ ಧೋರಣೆಯೂ ಹೆಚ್ಚು ಕಡಮೆ ಇದೇ. ಬಹುರಾಷ್ಟ್ರೀಯ ಕಂಪೆನಿಗಳು ನಮಗೆ ವರಪ್ರಸಾದವಾಗಿ ನೀಡುತ್ತಿರುವ ಶಾಂಪೂಗಳು, ಟೂತ್‌ಪೇಸ್ಟ್‌ಗಳು, ಸೌಂದರ್ಯ ಪ್ರಸಾಧನಗಳು, ತಂಪು ಪಾನೀಯಗಳು, ಸಿದ್ಧ

ಉಡುಪುಗಳು, ಐಸ್‌ಕ್ರೀಂಗಳು, ವಿದ್ಯುದುಪಕರಣಗಳು ಇವೆಲ್ಲ ಸರಕಾರದ ಒತ್ತಾಸೆಯ ಮೇಲೆ ಇಲ್ಲಿಗೆ ಬರುತ್ತಿವೆ.

ಇಂಥ ಉತ್ಪಾದನೆಗಳಾಗಲಿ ಸೌಕರ್ಯಗಳಾಗಲಿ ನಮ್ಮ ಜನರ ಬಡತನವನ್ನು ನೀಗಿಸಿದ ಮೇಲೆ ಬಂದರೆ ಒಳಿತು. ನೂರರಲ್ಲಿ ಎಂಬತ್ತು ಮಂದಿ ಕಡುಬಡವರಾಗಿರುವಾಗ ಮೋಜಿನ ಪದಾರ್ಥಗಳಿಗೆ ಆದ್ಯತೆ ಕೊಟ್ಟರೆ ಹೇಗೆ?

ಕಾರನ್ನು ಕೊಳ್ಳುವವರು ಕೊಳ್ಳಿ, ಆದರೆ ಕೊಳ್ಳಲಾರದವರಿಗೆ ಸಾರ್ವಜನಿಕ ಸಂಚಾರದ ಅನುಕೂಲವಿರಬೇಡವೇ? ಅದಕ್ಕೆ ಆದ್ಯತೆ ಕೊಡಬೇಡವೆ?

180. ರೊಕ್ಕದ ಮಹಿಮೆ

'ಇಲ್ಲದ ಗುಣಗಳ ತರಿಸೋದು ರೊಕ್ಕ,

ಸಲ್ಲದ ನಾಣ್ಯ ನಡಿಸೋದು ರೊಕ್ಕ' — ಹೀಗೆ ಹೇಳಿದವರು ಪುರಂದರದಾಸರು. ಹಣದ ಹಿರಿಮೆಯನ್ನು ಮನಸಾರೆ ಒಪ್ಪಿಕೊಂಡಿದ್ದ ಸಮಾಜದಲ್ಲಿದ್ದವರು ಅವರು. ಅರಸನ ಓಲಗವನ್ನೇ ಬಲ್ಲವರು.

ದುಡ್ಡಿದ್ದವರು ಮಾಡುತ್ತಿದ್ದ ಅನ್ಯಾಯಗಳನ್ನು ಗಮನಿಸಿದವರು ಅವರು. ದುಡ್ಡು ಮಾಡಿಕೊಂಡದ್ದು ಹೇಗೆಂಬುದನ್ನು ಅರಿತಿದ್ದವರು. ಅಧಿಕಾರಿಗಳು, ಓಲಗದವರು (ಎಂದರೆ ಆಸ್ಥಾನದವರು), ಇವರೆಲ್ಲರ ಆಪ್ತರು, ವ್ಯಾಪಾರಿಗಳು, ಸಿರಿವಂತರು, ರಸಿಕರು ಮುಂತಾದವರ ಜಾತಕಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿದವರು, ಪುರಂದರದಾಸರು. ಅವರು ಕಂಡ ಲೋಕಚರ್ಯೆ ಇದು.

ಬಡವರಾಗಿರುವಾಗ ದೇವರು ಮಡಗಿದಂತೆ ಇರುವವರು ದುಡ್ಡು ಸೇರತೊಡಗಿದಾಗ ಮೇಲೆದ್ದು ಕೂಡುವರು, ದೇವರನ್ನತ್ತ ಸರಿಸುವರು. ಇರದಿದ್ದ ಅವಗುಣಗಳನ್ನೆಲ್ಲ ಕಲಿಯುವರು. ಇದ್ದ ಗುಣಗಳನ್ನು ಕೈಬಿಡುವರು.

ಹಣವಿದ್ದ ಮೇಲೆ ಸುಖಪಡದೆ ಇರಲು ಸಾಧ್ಯವೆ? ಸುಖಪಡುವುದೆಂದರೆ ನೂರು ದಾರಿಗಳು. ದಾರಿ ತೋರಿಸುವವರಂತೂ ಇದ್ದೇ ಇರುತ್ತಾರೆ. ದಾರಿಯಲ್ಲಿ ಜೊತೆಗಾರರಾಗಿ ಸೇರಿಕೊಳ್ಳುವವರೂ ಇರುತ್ತಾರೆ. ಇದರಿಂದಲೂ ಸುಖವೆಂಬುದು ಬರುತ್ತದೆ.

ನಡೆದಷ್ಟು ದಿನ ನಾಣ್ಯ. ಹಣವಿದ್ದಷ್ಟು ಕಾಲ ಸುಖಕ್ಕೇನು ಕೊರತೆಯಿರದು. ಆದರೆ ಅದು ಎಷ್ಟು ದಿನ ಇರುತ್ತದೆ? ವೆಚ್ಚವಾಗುತ್ತಾ ಬರುವಾಗ ಅದು ಉಳಿಯುವುದಾದರೂ ಹೇಗೆ?

ಅದನ್ನು ಉಳಿಸಿಕೊಳ್ಳಲು, ಬೆಳಸಿಕೊಳ್ಳಲು ಬೇರೆ ಬೇರೆ ದಾರಿಗಳನ್ನು ಹುಡುಕಬೇಕು. ಅನ್ಯಾಯದಿಂದ ಗಳಿಸಿಕೊಂಡದ್ದನ್ನು ನ್ಯಾಯವಾಗಿ ಉಳಿಸಿಕೊಳ್ಳುವುದಂತೂ ಆಗದು. ಅನ್ಯಾಯದಿಂದಲೇ ಉಳಿಸಿಕೊಳ್ಳಬೇಕು ತಾನೆ?

ಒಂದು ಸುಳ್ಳನ್ನು ಮುಚ್ಚಲು ನೂರು ಸುಳ್ಳು ಹೇಳುವಂತೆ! ಸುಳ್ಳಿನ ಸರಮಾಲೆ ಇರದಿದ್ದರೆ ಮೊದಲ ಸುಳ್ಳು ಬಯಲಾಗಿಬಿಡುತ್ತದೆ.

ಹಣ ಹೇಗೆ ಬಂದಿತೆನ್ನುವುದು ಎಲ್ಲರಿಗೂ ತಿಳಿಯಬಾರದೆನ್ನುವಾಗ, ಬಂದ ಹಣವನ್ನೇ ಬಂಡವಾಳವಾಗಿಸಿಕೊಂಡು ಮತ್ತಷ್ಟು ಹಣವನ್ನು ಬರಮಾಡಿಕೊಳ್ಳಬೇಕು. ಅನ್ಯಾಯದ ಹಣವನ್ನು ನ್ಯಾಯವಾದ ಹಣದಂತೆ ಕಾಣಿಸಲು ಮತ್ತಷ್ಟು ಹಣ ಚೆಲ್ಲಬೇಕು.

ಕಳ್ಳರಲ್ಲಿ ಕಳ್ಳನಾಗಿ ಸೇರಿಕೊಳ್ಳದಿದ್ದರೆ ಕಳ್ಳರು ಅವನನ್ನು ಉಳಿಸಿಯಾರೆ? ನೆರೆದವರೆಲ್ಲ ಅಷ್ಟಿಷ್ಟು ಕಳ್ಳರಾಗಿಯೇ ಮಾರ್ಪಟ್ಟರೆ ಅವರಿಗೆ ಲಾಭ; ಒಬ್ಬನಾದರೂ ಕಳ್ಳನಲ್ಲದವರು ಸೇರಿಕೊಂಡರೆ ಅವರಿಗೂ ತೊಂದರೆ, ಇವನಿಗೂ ತೊಂದರೆ!

ಸಲ್ಲದ ನಾಣ್ಯ ನಡೆಯುವುದು ಹೀಗೆ. ಅನ್ಯಾಯದ ಹಣದ ಗಳಿಕೆಯೇ ಗಳಿಸಿದ ಹಣದ ಬಲದಿಂದ ನ್ಯಾಯವಾದ ಹಣದಂತೆ ಬೆಳಗುತ್ತದೆ; ಇತರರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಇಂಥ ಪರಿಸ್ಥಿತಿಯಲ್ಲಿ ನ್ಯಾಯವೇನು, ಅನ್ಯಾಯವೇನು, ರೊಕ್ಕವಿದ್ದರೆ ಸಾಕು! ಯಾವುದಕ್ಕೆ ಆದ್ಯತೆ?

181. ದುಡ್ಡಿನ ಜಾತಿ

ದುಡ್ಡಿಗೆ ಜಾತಿ, ನೀತಿಗಳ ಹಂಗಿದೆಯೆ? ದುಡ್ಡಿದ್ದವನದ್ದೇ ಒಂದು ಜಾತಿ, ಅವನದ್ದೇ ಒಂದು ನೀತಿ. ಎಲ್ಲರಿಗೂ ಅನ್ವಯಿಸುವ ಜಾತಿಯಾಗಲಿ, ನೀತಿಯಾಗಲಿ ದುಡ್ಡಿದ್ದವನಿಗೆ ಅನ್ವಯಿಸಲಾರದು. ದುಡ್ಡು ಏನನ್ನಾದರೂ ಮಾರ್ಪಡಿಸಬಲ್ಲದು.

ಜಾತಿಗೊಂದು ಕಟ್ಟು-ಕಟ್ಟಳೆ, ಗೊತ್ತು-ಗುರಿ ಇರುತ್ತದೆ; ಸಾಮಾಜಿಕ ವ್ಯವಸ್ಥೆಯಲ್ಲಿ ಅದರದ್ದೊಂದು ಪಾತ್ರ. ಜಾತಿಗಳಲ್ಲಿ ಮೇಲು-ಕೀಳು ಎನ್ನುವುದೇನೋ ಕೃತಕವಾದುದು, ಲಾಭ-ಲೋಭಗಳ ಮಡಿಲಿಂದ ಎದ್ದುದು. ಈ ಎಣಿಕೆಯಿಂದ ಆಗಿರುವ ಅನಾಹುತವನ್ನು ಎಲ್ಲರೂ ಬಲ್ಲರು. ಆದರೆ ಜಾತಿಯೆನ್ನುವ ವ್ಯವಸ್ಥೆ ವ್ಯಕ್ತಿಯನ್ನು, ಕುಟುಂಬವನ್ನು ಸಾಂಸ್ಕೃತಿಕ ಪರಿಸರದೊಳಗೆ ಸೇರಿಸುವ ಪ್ರಯತ್ನಗಳಲ್ಲೊಂದು. ಸಫಲವೋ ವಿಫಲವೋ ಅಂತೂ ಒಂದು ಪ್ರಯತ್ನ.

ಆದರೆ ಒಂದೊಂದು ಜಾತಿಯಲ್ಲೂ ಬಡವರಿರುತ್ತಾರೆ, ಭಾಗ್ಯವಂತರಿರುತ್ತಾರೆ. ಬಡವರದ್ದೊಂದು ಜಾತಿ, ಭಾಗ್ಯವಂತರದಿನ್ನೊಂದು. ಇವೆರಡರ ನಡುವೆ

ಸಾಮರಸ್ಯವಿರುವುದು ಕಷ್ಟವೇ ಎನಿಸುತ್ತದೆ. ಮೇಲಾಗಿ, ಎಲ್ಲ ಜಾತಿಗಳ ಬಡವರದ್ದೊಂದು ಜಾತಿ, ಎಲ್ಲ ಜಾತಿಗಳ ಭಾಗ್ಯವಂತರದ್ದು ಇನ್ನೊಂದು ಜಾತಿ! ಸಾಮಾಜಿಕ ಜಾತಿಗಳ ಗೊಂದಲದಿಂದ ದೂರವಾದದ್ದು ಇದು.

ಬಡವರಾಗಿದ್ದವರು ಭಾಗ್ಯವಂತರಾದರೆ ಆಗ ಅವರ ಜಾತಿಯೂ ಬೇರೆಯಾಗುತ್ತದೆ, ಬದಲಾಗುತ್ತದೆ. ದುಡ್ಡಿದ್ದವರ ಜಾತಿಗೆ ಸೇರಿದಾಗ, ಆ ಜಾತಿಗೆ ತಕ್ಕ ರೀತಿಯೂ ಇರಬೇಕು ತಾನೇ? ದುಡ್ಡಿನ ಗಳಿಕೆಗೆ, ದುಡ್ಡಿನ ವೆಚ್ಚಕ್ಕೆ, ದುಡ್ಡಿನ ಆಡಂಬರಕ್ಕೆ ಅನ್ವಯಿಸುವ ಈ ನೀತಿ ಸಾಮಾನ್ಯ ನೀತಿಯಲ್ಲ. ಅದರದ್ದೇ ಒಂದು ಗತ್ತು, ಅದರದ್ದೇ ಒಂದು ಗುರಿ. 'ಕಾಸು ಕಾಸಿಗೆ ಪರಂಗಿಲಾಗ ಹಾಕುವವರ' ನೀತಿ ಅದು. ಕಾಸಿಲ್ಲದವರಿಗೆ ಅದು ಸಾಧ್ಯವಿಲ್ಲವೆನ್ನಿ.

ಬಡವರಾದರೆ ಮಡಗಿದಂತೆ ಇರುತ್ತಾರೆ, ಇರಬೇಕು. ಭಾಗ್ಯವಂತರು ಹಾಗಿರಬೇಕಾದ ಅಗತ್ಯವೇನು? ಕುದುರೆಯಿದೆ, ಮೈದಾನವಿದೆ, ಏರಿ ಹೊರಟರಾಯಿತು. ಬಡವರಿಗೆ ಕುದುರೆಯೂ ಇಲ್ಲ, ಮೈದಾನವೂ ಇಲ್ಲ. ಇದ್ದಲ್ಲೇ ಇರಬೇಕು, ಇದ್ದಂತೆ ಇರಬೇಕು.

ಇರುವಾಗ ಒಂದು ಜಾತಿ, ಅದಕ್ಕೊಂದು ನೀತಿ. ನೀತಿಗೆಟ್ಟವನಿಗೆ ಜಾತಿಯ ಬಲವೆಲ್ಲಿಂದ ಬಂದೀತು? ನೀತಿಗೆಡುವುದು ದುಡ್ಡಿಂದ, ನೀತಿಗೆಟ್ಟ ಮೇಲೆ ದುಡ್ಡೇ ದೇವರು. ಹಿಂದಿನ ಜಾತಿ-ನೀತಿಗಳೆಲ್ಲ ಹಿಂದೆಯೇ ಉಳಿಯುವುವು. ಕನ್ನಡದಲ್ಲಿ ಗಾದೆಯಿಲ್ಲವೆ? 'ಹಣ ಹಂತೀಲಿ, ಕುಲ ಹಿತ್ತಲಲ್ಲಿ'. ಹಂತಿಯೆಂದರೆ ಪಂಕ್ತಿ, ಸಾಲು, ಮುಂದಾಗಿ ಕಾಣುವುದು. ಕಣ್ಣೆದುರು ಬಂದು ನಿಲ್ಲುವುದು ಹಣವೇ, ಉಳಿದದ್ದೆಲ್ಲ ಹಿಂದೆ ಹೋಗುವುದು.

ದುಡ್ಡೆಂಬುದು ಎದ್ದು ಕಾಣಿಸುತ್ತದೆ. ಅದಿದ್ದ ಮೇಲೆ ಸುಮ್ಮನೆ ಕೂಡಲಾಗದು. ತೆಪ್ಪಗೆ ಇರಲಾರ ಮನುಷ್ಯ. ದುಡ್ಡಿನ ಮುಂದೆ ಮಾನವೆ, ಮರ್ಯಾದೆಯೆ? ದುಡ್ಡಿರುವುದೇ ಒಂದು ಮಾನ, ಒಂದು ಮರ್ಯಾದೆ. ಈ ಹೊಸ ಮಾನದ ಮುಂದೆ, ಈ ಹೊಸ ಮರ್ಯಾದೆಯ ಮುಂದೆ ಬೇರೆ ಮಾನ-ಮರ್ಯಾದೆಗಳು ನಿಲ್ಲಲಾರವು. ಕಟ್ಟು-ಕಟ್ಟಳೆಗಳೂ ನೀತಿ-ನಿಯಮಗಳೂ ಕಳೆಗೆಟ್ಟು ಹಿಂದೆ ಸರಿಯುತ್ತವೆ.

ದುಡ್ಡಿದ್ದವರು ಇರುವ ರೀತಿ, ಆಡುವ ಆಟ ಇವೆಲ್ಲ ದುಡ್ಡಿಲ್ಲದಿದ್ದವರನ್ನು ಬೆರಗು ಮಾಡುವುದಷ್ಟೇ ಅಲ್ಲ, ಅವರನ್ನೂ ದುಡ್ಡು ಮಾಡಿಕೊಳ್ಳುವ ಗೀಳಿಗೆ ಗುರಿ ಮಾಡುತ್ತವೆ. ಈ ಜಾತಿಗೆ ಸೇರಿಕೊಳ್ಳುವ ತವಕವನ್ನುಂಟು ಮಾಡುತ್ತವೆ. ಹಿರಿಯ ಚಾಳಿಯಲ್ಲವೆ ಸಿರಿಯದು?

182. ಗಳಿಕೆಯ ಗೀಳು

ಚಾಣಕ್ಯನ ನೀತಿಸೂತ್ರದಲ್ಲಿ ಒಂದು ಮಾತು ಬರುತ್ತದೆ– 'ಅರ್ಥೈಷಣಾ ನ ವ್ಯಸನೇಷು ಗಣ್ಯತೇ' ಎಂದು.

ಹಣವನ್ನು ಸಂಪಾದಿಸುವ ಬಯಕೆ ದುಶ್ಚಟಗಳಲ್ಲಿ ಒಂದು ಎಂದು ಎಣಿಸಲಾಗದು. ಇದು ಈ ಮಾತಿನ ಅರ್ಥ.

ಸಂಸ್ಕೃತದ ವ್ಯಸನ ಎನ್ನುವ ಮಾತಿಗೆ ಕನ್ನಡದಲ್ಲಿ ಗೀಳು ಎಂದಾಗಬಹುದು. ಚಟ, ಅದರದ್ದೇ ಚಿಂತೆ ಯಾವಾಗಲೂ. ಹಣವಿಲ್ಲದೆ ಬದುಕುವುದಾದರೂ ಹೇಗೆ? ಯಾವುದಕ್ಕೂ ಅಗತ್ಯವಾದದ್ದು ಹಣವೇ ಅಲ್ಲವೆ?

ಅದು ಸಂಪಾದಿಸದೆ ಹೇಗೆ ಬಂದೀತು?

ಕಷ್ಟಪಟ್ಟು ದುಡಿಯುವುದೊಂದು ಬಗೆ. ತಾನು ಕಷ್ಟಪಡದೆ, ದುಡಿಯದೆ ಮೋಸದಿಂದಲೋ ಸುಳ್ಳಿನಿಂದಲೋ ಕಳ್ಳತನದಿಂದಲೋ ಹಣವನ್ನು ಪಡೆದುಕೊಳ್ಳುವುದು ಇನ್ನೊಂದು ಬಗೆ.

ಮೊದಲನೆಯದಕ್ಕೆ ಮನಸ್ಸಿಲ್ಲದಿದ್ದರೆ, ಅವಕಾಶವಿಲ್ಲದಿದ್ದರೆ ಎರಡನೆಯ ದಾರಿ ಇದ್ದದ್ದೇ? ಅಂತೂ ಹಣ ಕೈಗೆ ಹತ್ತಬೇಕು. ಇದೊಂದು ಬಯಕೆ.

ಆದರೆ ಹಣ ಗಳಿಕೆ ಸುಖವೆಂಬ, ನೆಮ್ಮದಿಯೆಂಬ ಗುರಿಯನ್ನು ಮುಟ್ಟಲು ಏರ್ಪಟ್ಟ ಹವಣಿಕೆ. ಗುರಿಯ ಕಡೆಗೆ ಗಮನವಿದ್ದಲ್ಲಿ ಗಳಿಕೆಯ ಬಯಕೆ ಗೀಳಾಗಲಾರದು.

ಹಣದ ಹಲವು ಗುಣಗಳಲ್ಲಿ ಒಂದು, ದಾರಿಯನ್ನೇ ಗುರಿಯೆಂದು ಕಂಡುಕೊಳ್ಳುವುದು. ಹಣವಿರುವುದು ಅನುಕೂಲವೆಂಬುದು ಹೋಗಿ ಹಣವೇ ಸರ್ವಸ್ವವೆಂಬ ಕಲ್ಪನೆ ಬೇರೂರಿಕೊಂಡರೆ ಅದೊಂದು ವ್ಯಸನವಾಗಿಬಿಡುತ್ತದೆ.

ಹಣವನ್ನು ಸಂಪಾದಿಸುವುದೇನು ವ್ಯಸನವಾಗಲಾರದು; ಅದು ಅಗತ್ಯವೇ, ಅನುಕೂಲವೇ, ಯೋಗ್ಯವೇ. ಎಲ್ಲರೂ ಮಾಡುವುದು ಇದನ್ನೇ.

ಆದರೆ ಹಣದ ಪ್ರಯೋಜನವನ್ನು ಅರಿತುಕೊಳ್ಳದೆ, ಅದರ ಮಿತಿಯನ್ನು ಕಂಡುಕೊಳ್ಳದೆ, ಹಣವೇ ಬದುಕು ಎಂದು ಭಾವಿಸಿದರೆ ಹಣವನ್ನು ಗಳಿಸಿಕೊಳ್ಳುವುದೇ ಬದುಕಿನ ಪ್ರಯೋಜನ ಎಂದಾಗಿಬಿಡುತ್ತದೆ. ಹೀಗಾದರೆ ಅದು ವ್ಯಸನವೇ.

ಹಣವನ್ನು ಗಳಿಸಿದಲ್ಲದೆ ನೆಮ್ಮದಿಯಿರದು. ಗಳಿಸಿದ್ದು ಸಾಕು ಎಂಬ ವಿವೇಕ ಬರುವುದೇ ಇಲ್ಲ. ಗಳಿಸುವುದರಲ್ಲೇ ಸುಖ, ಸಂತೋಷ, ನೆಮ್ಮದಿ.

ಗಳಿಸಿದ ಹಣದಿಂದ ಸುಖಪಡುವುದಕ್ಕಿಂತ ಹೆಚ್ಚಾಗಿ ಹಣವನ್ನು ಗಳಿಸುವುದರಲ್ಲೇ ಆಯುಸ್ಸನ್ನೆಲ್ಲ ಕಳೆಯುವರಲ್ಲವೆ? ವ್ಯಸನ ಎಂದರೆ ಮನಸ್ಸಿನ ಮೇಲೊಂದು ಒತ್ತಡ. ಚಟವೆಂದರೆ ಮಾಡದೆ ಇದ್ದರೆ ಮುಜುಗರ; ಮಾಡಲೇಬೇಕೆಂಬ ತವಕ.

ಇಲ್ಲಿ ಆಲೋಚನೆಯ ಪಾತ್ರ ಕಡಮೆ; ವಿವೇಕ ಕೆಲಸ ಮಾಡುವುದಿಲ್ಲ. ಬೇರೆ ಆಸಕ್ತಿಯಿರುವುದಿಲ್ಲ. ಚಟವೊಂದೇ ಮನಸ್ಸನ್ನು ಮುತ್ತಿರುತ್ತದೆ. ಮತ್ತೆ ಮತ್ತೆ ಅದನ್ನೇ ಮಾಡುತ್ತ, ಅದರ ಗೀಳು ಮತ್ತಷ್ಟು ಬಲಿಯುತ್ತದೆ. ಬಿಡುವುದು ಬರುಬರುತ್ತ ಕಷ್ಟವಾಗುತ್ತದೆ.

ಕುಡಿತ, ಕುಣಿತ, ಜೂಜು, ತಂಬಾಕು, ಹರಟೆ ಏನೂ ವ್ಯಸನವಾಗಬಲ್ಲುದು.

ಇದರಂತೆಯೇ ಹಣವನ್ನು ಸಂಪಾದಿಸುವುದೂ ಒಂದು ಚಟವಾಗಿ ಮಾರ್ಪಡಬಲ್ಲುದು.

183. ದಾತ-ಅನುಮಂತ

ದಾನ ಮಾಡುವವನು 'ದಾತ'; ಅದನ್ನು ಮೆಚ್ಚಿಕೊಳ್ಳುವವನು 'ಅನುಮಂತ'.

ದಾತನಿಗೆ ಅನುಮಂತನ ಬೆಂಬಲವಿರಬೇಕು. ಅವನ ಪ್ರೇರಣೆಯೇ ಇರದಿದ್ದರೂ ಅವನ ಸಮ್ಮತಿಯೊ ಪ್ರೋತ್ಸಾಹವೊ ಪ್ರಶಂಸೆಯೋ ದಾತನಿಗೆ ಧೈರ್ಯವನ್ನು ತಂದುಕೊಡುತ್ತದೆ.

ಅನುಮಂತನಿಗೆ ತನಗೇ ದಾನ ಮಾಡುವ ಸಾಮರ್ಥ್ಯವಿಲ್ಲದಿರಬಹುದು. ದಾನ ಮಾಡುವುದು ಒಳ್ಳೆಯದೆಂಬ ನಂಬಿಕೆಯಂತೂ ಇರುತ್ತದೆ.

ದಾತನೂ ಅನುಮಂತನೂ ಮೇಲೆ ಸ್ವರ್ಗದಲ್ಲಿರುತ್ತಾರೆಂದು ನಂಬಿಕೆ.

ಮಾಡಿದ ದಾನವನ್ನು ಕಸಿದುಕೊಳ್ಳುವುದು 'ಹರ್ತ'; ಅವನಿಗೆ ಇದರಲ್ಲಿ ನೆರವಾಗುವವನು 'ಹಾರಯಿತ'. ಇವರಿಬ್ಬರೂ ಕೆಳಗೆ ನರಕದಲ್ಲಿರುತ್ತಾರಂತೆ.

ಹೀಗೆಂದು ಹಳೆಯ ದಾನಶಾಸನಗಳಲ್ಲಿ ಒಕ್ಕಣೆ ಕಾಣುತ್ತದೆ.

ದಾತನಿಗೆ ಅನುಕೂಲವೂ ಒಳ್ಳೆಯ ಮನಸ್ಸೂ ಇರಬೇಕು. ಅನುಮಂತನಿಗೆ ಅನುಕೂಲವಿರದಿದ್ದರೂ ಒಳ್ಳೆಯ ಮನಸ್ಸಂತೂ ಇರಲೇಬೇಕು.

ದಾತನು ಧನಿಕನೇ ಆಗಿರಬೇಕೆಂಬುದೂ ಇಲ್ಲ. ಸಾಮಾನ್ಯ ಸ್ಥಿತಿಯಲ್ಲಿರುವವರೂ ದಾನ ಮಾಡುವುದನ್ನು ನೋಡಿಲ್ಲವೆ? ತಮ್ಮಲ್ಲಿರುವ ಅನುಕೂಲವನ್ನೇ ಬೇರೆಯವರೊಂದಿಗೆ ಹಂಚಿಕೊಂಡರೆ ಅದು ದಾನವಾಯಿತು. ದಾನವೆಂಬ ಮಾತಿಗೆ ಅರ್ಥ ಸಂವಿಭಾಗವೆಂದು.

ಒಳ್ಳೆಯ ಮನಸ್ಸಿದ್ದರೇ ದಾನಕ್ಕೆ ಬೆಲೆ. ಆಡಂಬರಕ್ಕೋ ಆಟಾಟೋಪಕ್ಕೋ ವಿಧಿಯಿಲ್ಲದೆಯೋ ಒತ್ತಾಯಕ್ಕೋ ಮಾಡಿದ ದಾನ ಊರ್ಜಿತವಾಗುವುದಿಲ್ಲ.

ಕೊಡುವುದು ಸ್ವಲ್ಪವೇ ಆದರೂ ಒಳ್ಳೆಯ ಮನಸ್ಸಿನಿಂದ ಕೊಟ್ಟರೆ ಅದರ ಫಲ ಅಧಿಕವಂತೆ.

ಕಷ್ಟದಲ್ಲಿರುವವರನ್ನು ಕಂಡು ಮರುಗುವುದು ದಾನಿಗೂ ಅನುಮಂತನಿಗೂ ಸಮಾನವಾದ ಧರ್ಮವೇ. ಅವರನ್ನು ಕಷ್ಟದಿಂದ ಪಾರು ಮಾಡಲು ಸಾಧ್ಯವಾದಷ್ಟು ಅವರು ಪ್ರಯತ್ನವನ್ನೂ ಮಾಡುತ್ತಾರೆ.

ಇದರಲ್ಲಿ ಲೋಕವನ್ನು ಉದ್ಧಾರ ಮಾಡುತ್ತೇನೆಂಬ ಹಮ್ಮು ಅಥವಾ ಎಣಿಕೆ ದಾನಿಗೂ ಇರುವುದಿಲ್ಲ, ಅನುಮಂತನಿಗೂ ಇರುವುದಿಲ್ಲ. ತಾನು ಮಾಡಬೇಕಾದುದನ್ನು ಮಾಡುತ್ತಿದ್ದೇನೆಂಬ ನಂಬಿಕೆಯಷ್ಟೆ ಇಲ್ಲಿ ಕೆಲಸ ಮಾಡುವುದು. ಇನ್ನು ತಮ್ಮ ಹಂಗು ಬೇರೆಯವರ ಮೇಲಿರಲೆಂಬ ತವಕವಾಗಲಿ ಇಬ್ಬರಿಗೂ ಇರುವುದಿಲ್ಲ.

ಇನ್ನು 'ಹರ್ತ, ಹಾರಯಿತ' ಇವರ ವಿಚಾರ ಯಾರಿಗೆ ತಿಳಿಯದು? ಲೋಕದಲ್ಲಿ ಇವರ ಸಂಖ್ಯೆಯೇ ಹೆಚ್ಚೆನ್ನಿ. ಪ್ರತಿಯೊಬ್ಬ ದಾನಿಗೂ ಹತ್ತು ಮಂದಿ ಹರ್ತರಿರುತ್ತಾರೆ! ಒಬ್ಬೊಬ್ಬ ಹರ್ತನಿಗೂ ಹತ್ತು ಮಂದಿ ಹಾರಯಿತರೂ ಇರುತ್ತಾರೆ.

ಹಿಂದೆ ಮಾಡಿದ ದಾನವೆಲ್ಲವೂ ಇಂದು ಉಳಿದಿರುತ್ತಿದ್ದರೆ ಆಡಳಿತದ ಮೇಲೆ ಇರುವ ಹೊರೆ ಎಷ್ಟೋ ಹಗುರವಾಗುತ್ತಿತ್ತು. ಆ ದಾನ ಉಳಿದಿರಲು ಬಿಡಬೇಕಲ್ಲ?

ದಾನವೆಂಬುದೊಂದು ಸಾಮಾಜಿಕ ವ್ಯವಸ್ಥೆ. 'ಉಳ್ಳವರು ಶಿವಾಲಯವ ಮಾಡುವರ'ಲ್ಲವೇ? ಅನುಕೂಲವಿದ್ದವರು ಅನುಕೂಲವಿಲ್ಲದವರ ನೆರವಿಗೆ ಬಾರದಿದ್ದರೆ ಹೇಗೆ? ಜನರಲ್ಲೇ ಅನ್ಯೋನ್ಯ ಆಶ್ರಯವಿದ್ದರೆ ಸುಮುಖವಾದೀತು. 'ಪರಸ್ಪರಂ ಭಾವಯಂತಃ'

ಸಮಾಜ ಕಂಟಕರಾಗಿ ಸ್ವಾರ್ಥಿಗಳು ಇದ್ದೇ ಇರುತ್ತಾರೆ. ಅವರ ದೃಷ್ಟಿ ತಾನು ಸುಖವಾಗಿರಬೇಕೆನ್ನುವತ್ತ ಮಾತ್ರ ಹರಿಯುತ್ತದೆ. ಸಮಾಜದ ಸುಸ್ಥಿತಿಯ ಗೊಡವೆ ಅವರಿಗೇಕೆ?

184. ಆಕ್ರಮಣ ಮನೋಭಾವ

ಹೆನ್ರಿ ಜಾರ್ಜ್ ಎಂಬ ಜಾಣನೊಬ್ಬ ಅರ್ಥಶಾಸ್ತ್ರದ ಸಿದ್ಧಾಂತವೊಂದರ ಕಡೆ ತನ್ನ ಗಮನ ಹರಿಸಿದ.

ಹಳೆಯ ಕಾಲದ ನ್ಯಾಯ, ಯಾರು ಏನನ್ನು ಪಡೆದುಕೊಂಡರೆ ಅದು ಅವರದ್ದೇ ಎಂಬುದು. ಯಾರೂ ಒಡೆಯರಿರದಿದ್ದಾಗ, ಎಲ್ಲಿ ಮೊದಲು ಯಾರು ಮನೆ ಕಟ್ಟಿಕೊಂಡರೆ ಮನೆಯೂ, ನೆಲವೂ ಅಲ್ಲಿರುವ ಗಿಡಮರಗಳೂ ಅವರವೇ.

ಒಡೆಯರೆಂಬುವರು ಹೆಸರಿಗೆ ಇದ್ದಾಗಲೂ ಇದೇ ಸಿದ್ಧಾಂತವನ್ನನುಸರಿಸಿದರೆ, ಯಾರು ಆಕ್ರಮಿಸಿಕೊಂಡರೆ ಅವರದ್ದೇ. ಆಕ್ರಮಣವೆಂದರೆ ಬಲವಂತವಾಗಿ ಹಿಡಿದುಕೊಳ್ಳುವುದು; ಮೊದಲಿದ್ದವರ ಒಡೆತನವನ್ನು ಕಡೆಗಾಣಿಸುವುದು. ಯಾವುದಾದರೂ ಬಗೆಯ ಬಲ ಇಲ್ಲಿ ಕೆಲಸ ಮಾಡುತ್ತದೆ. ಆಕ್ರಮಣವೇ ಆಸ್ತಿಯ ಮೂಲ ಎಂಬುದು ಹಳೆಯ ಸಿದ್ಧಾಂತ.

ಎಲ್ಲರೂ ಆಸ್ತಿಯನ್ನು ಮಾಡಿಕೊಳ್ಳುವುದು ಹೀಗೆಯೇ ಎಂದು ಇದರ ತಾತ್ಪರ್ಯ; ಇದು ಸರಿಯೇ ಎಂಬುದು ಧ್ವನಿ. ಹೆನ್ರಿ ಜಾರ್ಜ್ ಇದನ್ನು ವಿರೋಧಿಸಿದ. ಇದು ನ್ಯಾಯವಲ್ಲವೆಂದು ವಾದಿಸಿದ. ಇವನ ಮಾತು ಅಂದಿನವರಿಗೂ ಮುಂದಿನವರಿಗೂ ಸರಿಯೆಂದು ಕಂಡಿತು.

ಆಕ್ರಮಣವು ಆಸ್ತಿಯನ್ನು ಸಮರ್ಥಿಸಲಾರದು. ತನಗೆ ಬಲವಿದೆಯೆಂದು ಬೇರೆಯವರ ಸ್ವತ್ತನ್ನಾಗಲಿ ಹಕ್ಕನ್ನಾಗಲಿ ಕಸಿದುಕೊಳ್ಳುವ ಅಧಿಕಾರ ನನಗಿರದು. ಹಾಗೆ ನಾನು ಮಾಡಿದರೆ ನ್ಯಾಯಾಂಗವಾಗಲಿ ಸಂವಿಧಾನವಾಗಲಿ ನಾನು ಮಾಡಿದ್ದನ್ನು ಊರ್ಜಿತಗೊಳಿಸುವುದಿಲ್ಲ. ಆಕ್ರಮಣದಲ್ಲಿ ಬಲಪ್ರಯೋಗ ಮಾಡುವುದಿದೆ. ಬಲವೆಂದರೆ ದೈಹಿಕವಾದುದಷ್ಟೇ ಅಲ್ಲ; ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕಾರಣ ಪ್ರಭಾವವಾಗಿರಬಹುದು. ಇವೆಲ್ಲ ಆಕ್ರಮಣಗಳೇ.

ಹೆನ್ರಿ ಜಾರ್ಜ್ ಒಂದೆರಡು ಉದಾಹರಣೆಗಳನ್ನು ನೀಡುತ್ತಾನೆ. ರಂಗಮಂದಿರವೊಂದರಲ್ಲಿ ನಾಟಕ ನಡೆಯುತ್ತಿದೆಯೆನ್ನಿ; ಟಿಕೆಟ್ ಮೂಲಕ ಪ್ರವೇಶ. ಅದನ್ನು ನೋಡಲು ನೂರಾರು ಮಂದಿ ಕಾದಿದ್ದಾರೆ. ಯಾರೋ ಒಬ್ಬ ಶ್ರೀಮಂತ ಮೊದಲೇ ಬಂದು ಟಿಕೆಟ್‌ಗಳೆಲ್ಲವನ್ನೂ ಕೊಂಡು, ಬೇರೆ ಯಾರನ್ನೂ ನಾಟಕ ನೋಡಲು ಬಿಡಬಾರದು ಎಂದು ನಿರ್ಬಂಧಿಸಿದರೆ ಅದು ಸಾಧುವೆ? ನ್ಯಾಯಾಂಗ ಅವನ ಹಕ್ಕನ್ನು ಎತ್ತಿ ಹಿಡಿಯುವುದೆ?

ಒಂದೂರಿನಿಂದ ಇನ್ನೊಂದೂರಿಗೆ ಹೋಗುವ ರೈಲಿನಲ್ಲಿ ಎಷ್ಟು ಸ್ಥಳಾವಕಾಶವಿದೆಯೋ ಅಷ್ಟೂ ಟಿಕೆಟ್‌ಗಳನ್ನು ಒಬ್ಬ ಕೊಂಡು, ರೈಲಿನ ಎಲ್ಲ ಗಾಡಿಗಳೂ ತನಗೊಬ್ಬನಿಗೆ ಮಾತ್ರವೇ ಮೀಸಲಾಗಿರಬೇಕು; ಬೇರೆ ಯಾರನ್ನೂ ರೈಲು ಒಯ್ಯಬಾರದು ಎಂದು ಅವನು ನಿರ್ಬಂಧಿಸಿದರೆ ಅದು ಸರಿಯಾದೀತೋ?

ಈ ಬಗೆಯ ಆರ್ಥಿಕ ಬಲದಿಂದ ಇತರರ ಹಕ್ಕನ್ನು ಕಸಿದುಕೊಳ್ಳುವುದು ಮೇಲೆ ಕಾಣಿಸಿದ ಸಿದ್ಧಾಂತಕ್ಕೆ ಅನುಗುಣವಾಗಿರುತ್ತದೆ. ಇದು ಆಕ್ರಮಣವೇ ತಾನೆ? ಸ್ವಾರ್ಥದ ರಾಜಕಾರಣಿಗಳು, ಪ್ರಬಲರಾದ ಅಧಿಕಾರಿಗಳು ತಮ್ಮ ಬಲವನ್ನೂ, ಸ್ಥಾನವನ್ನೂ, ಪ್ರಭಾವವನ್ನೂ ದುರುಪಯೋಗಪಡಿಸಿಕೊಳ್ಳುವುದನ್ನು ಯಾರರಿಯರು? ಅವರ ಆಕ್ರಮಣ ಮನೋಭಾವದಿಂದ ಎಷ್ಟು ಜನರ ಸಹಜವಾದ ಹಕ್ಕುಗಳು ಕಡೆಗಣಿಸಲ್ಪಟ್ಟಿವೆ ಎಂಬುದೂ ತಿಳಿದುಬರುತ್ತಿದೆ.

ಬಲವಿದ್ದವರಿಗೇ ಆಸ್ತಿ; ಪ್ರಭಾವವಿದ್ದವರದ್ದೇ ಸ್ವತ್ತು ಎಂಬುದು ಸಮಾಜದಲ್ಲಿ ಅನರ್ಥಕಾರಿಯಾದ ಧೋರಣೆ. ಇದು ಹರಡಿಕೊಳ್ಳುತ್ತಿರುವ ರಾಷ್ಟ್ರಕ್ಕೆ ಆತಂಕ ತಪ್ಪಿದ್ದಲ್ಲ. ಆಕ್ರಮಣವೇ ಸಾಮಾಜಿಕವಾಗಿ ಸರಿಯಾದುದೆಂದು ಜನ ನಂಬತೊಡಗಿದರೆ ನೀತಿ-ನ್ಯಾಯ ಎಲ್ಲವನ್ನೂ ಗಾಳಿಗೆ ತೂರಿಬಿಟ್ಟಂತೆಯೇ ಅಲ್ಲವೆ? ಸಂವಿಧಾನದ ಪ್ರಯೋಜನವೇನು? ನ್ಯಾಯಾಂಗದ ಸಾರ್ಥಕ್ಯವೇನು?

ಆಕ್ರಮಣವು ಹಲವಾರು ಬಗೆಗಳಲ್ಲಿ ನಡೆಯುವುದು; ಇದನ್ನು ವಿರೋಧಿಸುವ ಚಿಂತನೆ ಇಂದು ಅಗತ್ಯವಾಗಿದೆ.

185. ಆರ್ಥಿಕ ದುರಾಚಾರ

ಆಸ್ತಿ ಮಾಡಿಕೊಳ್ಳುವ ಹಂಬಲ ಮನುಷ್ಯನಿಗಿದ್ದದ್ದೇ.

ತನ್ನದೆಂಬ ಸ್ವತ್ತು ಇರದೆ ಸ್ವತಂತ್ರವಾಗಿ ಬದುಕುವುದಾದೀತೆ? ಬದುಕಿನ ಎಲ್ಲ ಅನುಕೂಲಗಳನ್ನೂ ಅನುಭವಿಸುವುದಾದೀತೆ?

ವ್ಯಕ್ತಿಯ ಸರ್ವತೋಮುಖವಾದ ವಿಕಾಸಕ್ಕೆ, ಸ್ವತಂತ್ರ ಜೀವನಕ್ಕೆ ಆಸ್ತಿಯ ಅಗತ್ಯವಿದೆಯೆಂದು ಹೆಗೆಲ್ ಎಂಬ ದಾರ್ಶನಿಕ ವಾದಿಸಿದ. ವ್ಯಕ್ತಿಯು ಸ್ವತಂತ್ರವಾಗಿರ ಬೇಕೆಂಬ ಬಯಕೆಯೇ ಆಸ್ತಿಯನ್ನು ಮಾಡಿಕೊಳ್ಳಲು ಕಾರಣವೆಂದು ಅವನ ನಿಲುವು.

ಕಮ್ಯುನಿಸ್ಟ್ ಚಿಂತನೆಯಲ್ಲಿ ಹೆಗೆಲ್ ಪ್ರಭಾವಶಾಲಿಯಾದವನು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಎಂಬಂಥ ಆಸ್ತಿಯನ್ನು ಬಯಸುವುದು ಸ್ವಾಭಾವಿಕವಾದ ಪ್ರವೃತ್ತಿಯೇ. ವೈಯಕ್ತಿಕವಾದ ಆಸ್ತಿಗೆ ಪ್ರತಿಯೊಬ್ಬನಿಗೂ ಹಕ್ಕು ಇರಬೇಕಾದುದೂ ಸಹಜವೇ. ಆದರೆ ಈ ಹಕ್ಕನ್ನು ಇತಿಮಿತಿಯಿಲ್ಲದೆ, ಅಡೆತಡೆಯಿಲ್ಲದೆ, ಎಲ್ಲರೂ ಚಲಾಯಿಸತೊಡಗಿದರೆ ಸಮಾಜದ ಗತಿಯೇನು? ವ್ಯಕ್ತಿ ವ್ಯಕ್ತಿಗಳಲ್ಲಿ ಸೆಣಸಾಟ ತಪ್ಪುವುದೇ ಇಲ್ಲ; ಎಲ್ಲರೂ ಕೂಡಿಕೊಂಡು ನೆಮ್ಮದಿಯ ಬಾಳನ್ನು ಬಾಳುವುದೇ ಅಸಾಧ್ಯವಾಗಿಬಿಡುತ್ತದೆ. ಇದನ್ನೂ ಹೆಗೆಲ್ ಕಾಣಿಸಿದ.

ಆಸ್ತಿಯನ್ನು ಮಾಡಿಕೊಳ್ಳುವ ಬಯಕೆ ಸಹಜವೇ ಆದರೂ, ನ್ಯಾಯವೇ ಆದರೂ ಅದಕ್ಕೊಂದು ಕಟ್ಟುಪಾಡು ಇರಲೇಬೇಕು. ಸಮುದಾಯದಲ್ಲಿದ್ದ ಮೇಲೆ, ವ್ಯಕ್ತಿಯ ಹಕ್ಕು ನಿರ್ಬಂಧದಲ್ಲೇ ಇರಬೇಕು, ಬೇರೆಯವರಿಗೆ ತೊಂದರೆಯಾಗದಂತೆ ನಾವು ಅನುಕೂಲಗಳನ್ನು ಅನುಭವಿಸುವ ಸ್ವಾತಂತ್ರ್ಯವಿರಬೇಕು. ಎಂದ ಮೇಲೆ ವ್ಯಕ್ತಿಯ ಬಯಕೆಗೆ ಕಡಿವಾಣ ಹಾಕುವ ಕೆಲಸವನ್ನು ಆಡಳಿತ ಕೈಗೊಳ್ಳಬೇಕಾದುದೂ ಸಹಜವೇ.

ಆಸ್ತಿಯನ್ನು ಮಾಡಿಕೊಳ್ಳುವಾಗ ವ್ಯಕ್ತಿಯು ಬಳಸುವ ರೀತಿ ನ್ಯಾಯವಾದುದೋ, ಅವನು ಹಿಡಿಯುವ ದಾರಿ ಸರ್ವಸಮ್ಮತವಾದುದೋ,

ಅದರಿಂದ ಇತರರಿಗೆ ಅನ್ಯಾಯವಾಗುವುದಿಲ್ಲವೋ ಎಂಬುದನ್ನು ಅಗತ್ಯವಾಗಿ ಪರಿಗಣಿಸಲೇಬೇಕಾಗುತ್ತದೆ.

ವ್ಯಕ್ತಿಯು ತಾನಾಗಿ ಇದನ್ನು ಮಾಡದಿದ್ದರೆ, ಆಡಳಿತವು ಕಡ್ಡಾಯವಾಗಿ ಅವನಿಂದ ಮಾಡಿಸಬೇಕಾಗುತ್ತದೆ. ಆಡಳಿತಕ್ಕೆ ಇದು ಹೊಣೆಗಾರಿಕೆ ಮಾತ್ರವಲ್ಲ, ಅದು ಉಳಿಯಲು ಅನಿವಾರ್ಯವಾದ ಉಪಾಯ. ವ್ಯಕ್ತಿಯ ಮೇಲೆ ನಿಯಂತ್ರಣಕ್ಕೆ ಅವಕಾಶವಿಲ್ಲದಿದ್ದರೆ ಆಡಳಿತವಾದರೂ ಉಳಿಯುವುದು ಹೇಗೆ? ನ್ಯಾಯಾಂಗವಾಗಲಿ, ಸಂವಿಧಾನವಾಗಲಿ ಕಾರ್ಯಪ್ರವೃತ್ತವಾಗದೆ ವಿಧಿಯಿಲ್ಲ.

ಆಸ್ತಿಯನ್ನು ಬಯಸುವ, ಮಾಡಿಕೊಳ್ಳುವ ಹಕ್ಕು ಎಲ್ಲರಿಗೂ ಇದೆ; ಅದಕ್ಕೆ ಎಲ್ಲರಿಗೂ ಸಮಾನವಾಗಿಯೇ ಅವಕಾಶವಿರಬೇಕು. ಮತ್ತು ವ್ಯಕ್ತಿಯು ಅನುಸರಿಸುವ ಮಾರ್ಗವು ನಿರ್ದಿಷ್ಟವಾಗಿರಬೇಕು. ನ್ಯಾಯಾಂಗವನ್ನೂ ಸಂವಿಧಾನವನ್ನೂ ಕಡೆಗಣಿಸಿ, ಹಲವರ ಅವಕಾಶವನ್ನು ತಪ್ಪಿಸಿ, ಹಲವರಿಗೆ ತೊಂದರೆಯನ್ನು ಮಾಡಿ ತಾನು ಮಾತ್ರ ದೊಡ್ಡ ಕುಳ ಆಗಬೇಕೆನ್ನುವ ಹಂಬಲವಿದ್ದರೆ, ಅದನ್ನು ತಡೆಹಿಡಿದು ಅದರಿಂದಾಗುವ ಕೆಡುಕನ್ನು ತಪ್ಪಿಸಬೇಕಾದುದೂ ಆಡಳಿತದ ಕರ್ತವ್ಯ.

ಸಮುದಾಯದ ಒಳಿತನ್ನು ನಿರ್ಲಕ್ಷಿಸಿ ಸ್ವಾರ್ಥದಿಂದ ಪ್ರವೃತ್ತರಾಗುವ ಮಂದಿ ಎಂದೂ ಇರುತ್ತಾರೆ, ಎಲ್ಲೆಲ್ಲಿಯೂ ಇರುತ್ತಾರೆ. ಸಣ್ಣ ಪ್ರಮಾಣದಲ್ಲಿ ನಡೆಯುವುದನ್ನು ಎಲ್ಲರೂ ಬಲ್ಲರು. ಆದರೆ ಅದು ಹದ್ದುಮೀರಿ, ಹೆದರಿಕೆಯಿಲ್ಲದೆ, ಭೂತಾಕಾರವಾಗಿ ತೋರಿಕೊಂಡಾಗ ಸಮಾಜದ ಒಂದು ರೋಗವೇ ಆಗಿ ಪರಿಣಮಿಸುತ್ತದೆ.

ಈ ಬಗೆಯ ಆರ್ಥಿಕ ದುರಾಚಾರವನ್ನು ಕುರಿತಂತೆ ಸಮಾಜದ ಬುದ್ಧಿವಂತರು ಚಿಂತನೆ ಮಾಡಬೇಕು.

ಹಣ ಪ್ರಪಂಚ

ಹಣ ಯಾರಿಗೆ ಬೇಡ? 'ಹಣವೆಂದರೆ ಹೆಣವೂ ಬಾಯಿ ತೆರೆದೀತು'. ದುಡ್ಡಿದ್ದವನೇ ದೊಡ್ಡಪ್ಪ ಎಂದೇ ಗಾದೆ. ಬದುಕಿನಲ್ಲಿ ಹಣ ಬಹುಮುಖ್ಯವಾದ್ದು. ನೆಮ್ಮದಿಯಾಗಿ ಬದುಕು ನಡೆಸಲು, ಸಭ್ಯನಾಗಿ ಬಾಳಲು ಹಣ ಬೇಕು. ಪುರುಷಾರ್ಥಗಳಲ್ಲಿ ಹಣವೂ ಒಂದು. ಹಣವಿಲ್ಲದೆ ಸಂಸ್ಕೃತಿ ಬೆಳೆಯದು. ಬದುಕಿನಲ್ಲಿ ಹಣ ದಾರಿ; ಗುರಿಯಲ್ಲ. ಹಣದಿಂದ ಸುಖ, ಸಂತೋಷ, ನೆಮ್ಮದಿ ದೊರೆಯುತ್ತದೆ ಎನ್ನುವುದು ಭ್ರಮೆ. ಹಣವಿದ್ದಲ್ಲಿಯೇ ಹಣ ಸೇರುವುದು ವಾಡಿಕೆ. ಹಣದ ಸಾರ್ಥಕತೆ ಅದರ ಸಂವಿಭಾಗದಲ್ಲಿ, ವಿವೇಕದ ವಿನಿಯೋಗದಲ್ಲಿ.....

ಮಾನವರೆಲ್ಲ ಹಣದ ಗುಲಾಮರೇ; ಎಲ್ಲರನ್ನೂ ಆಳುವುದು ಹಣವೇ. ಎಲ್ಲರೂ ತಿರುಗುವುದು ಹಣದ ತಿರುಗಣೆಯಲ್ಲೇ; ಎಲ್ಲರಿಗೂ ಬೇಕಾದ್ದು ಹಣವೇ. ಆದರೆ ಹಣ ಯಾರಿಗೂ ಅಧೀನವಲ್ಲ; ಯಾರಲ್ಲಾದರೂ ಇದ್ದಾಗ ಕೂಡ ಅವರಲ್ಲೇ ಇರುವುದಿಲ್ಲ; ತಿರುಗಾಡುತ್ತಲೇ ಇರುತ್ತದೆ....

-ಹೀಗೆ ಹಣದ ಸ್ವರೂಪ, ಗುಣಾವಗುಣ, ಮೌಲ್ಯ, ಮಹತ್ವಗಳನ್ನು ಓದುಗರ ಮುಂದೆ ಸಾಕ್ಷಾತ್ಕರಿಸಿ ಅದರ ವಿಶ್ವರೂಪದರ್ಶನವನ್ನೇ ಮಾಡಿಸುವಂಥ ವಿಶಿಷ್ಟ ಕೃತಿ 'ಹಣಪ್ರಪಂಚ'. ಮನುಷ್ಯನ ಜೀವನದ ಮೌಲ್ಯಗಳನ್ನು ರೂಪಿಸುವಲ್ಲಿ ಹಣದ ಪಾತ್ರವೇನು ಎಂಬುದರ ಜೊತೆ ಜೊತೆಗೇ ಪ್ರಚಲಿತ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆ ಕೆಲವನ್ನು ಕುರಿತಂತೆಯೂ ತಮ್ಮ ತಲಸ್ಪರ್ಶಿ ಚಿಂತನೆಯ ಕ್ಷಕಿರಣವನ್ನು ಲೇಖಕರು ಹಾಯಿಸಿದ್ದಾರಾಗಿ, ಇದೊಂದು ಮತ್ತೆ ಮತ್ತೆ ಓದಿ ಮನನ ಮಾಡಬೇಕಾದ ಸಂಗ್ರಾಹ್ಯ ಕೃತಿ.